ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ-೨

ಎರಡನೆಯ ಅಧ್ಯಾಯ (ಅವಿರೋಧಾಧ್ಯಾಯ)



ಪ್ರೊ॥ ಎಸ್. ವೆಂಕಟೇಶಮೂರ್ತಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ - 2

ಎರಡನೆಯ ಅಧ್ಯಾಯ (ಅವಿರೋಧಾಧ್ಯಾಯ)

ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾನುಸಾರಿ

ಕನ್ನಡದಲ್ಲಿ ಅರ್ಥ ಮತ್ತು ವಿವರಣೆ ಸಹಿತ

ಲೇಖಕರು

ಪ್ರೊ|| ಎಸ್. ವೆಂಕಟೇಶ ಮೂರ್ತಿ, ಎಂ. ಎಸ್‌ಸಿ

ಪ್ರಕಾಶಕರು

ಪವನಜ ಪ್ರಕಾಶನ

ನಂ. 1625, 5 ನೇ ಬಿ ಕ್ರಾಸ್, ಎರಡನೆಯ ಬ್ಲಾಕ್,

ಬನಶಂಕರಿ ಮೊದಲನೆಯ ಸ್ಟೇಜ್, ಬೆಂಗಳೂರು 560050

Sri Madhvacharya's

Śrīmadanuvyākhyānam

Part - 2

Rendered in Kannada by:
Prof. S. Venkatesha Murthy, M. Sc.
Published by:
Pavanaja Prakashana,
#1625, 5th 'B' Cross, Second Block, Banashankari
First Stage, Bangalore 560050; Phone: 6600932

First Edition: 2002
Pages: 256

ಶ್ರೀಮನ್ಮಧ್ವಾಚಾರ್ಯ ವಿರಚಿತ
ಶ್ರೀಮದನುವ್ಯಾಖ್ಯಾನಮ್: ಸಂಪುಟ - 2

ಮೊದಲನೆಯ ಮುದ್ರಣ : 2002

ಪುಟಗಳು : 256

ಮುದ್ರಕರು :
ಪರಿಮಳ ಮುದ್ರಣಾಲಯ,
ಹನುಮಂತನಗರ, ಬೆಂಗಳೂರು 560019

ಉಪೋದ್ಘಾತ

ಸಮಸ್ತ ವೇದಗಳ ಎಲ್ಲ ವಾಕ್ಯಗಳೂ, ಎಲ್ಲ ಪದಗಳೂ, ಎಲ್ಲ ವರ್ಣಗಳೂ ಸರ್ವಜ್ಞತ್ವ, ಸರ್ವಶಕ್ತಿಮತ್ವ, ಸರ್ವೈಶ್ವರ್ಯ ಮುಂತಾದ ಅನಂತ ಗುಣಗಳಿಂದ ಯುಕ್ತನೂ, ಅಜ್ಞಾನ ಪಾರತಂತ್ರ್ಯಾದಿ ಸಮಸ್ತ ದೋಷಗಳಿಂದ ದೂರನೂ ಆದ ಪರಮಾತ್ಮನನ್ನು ಪರಮ ಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆ ಎಂಬುದನ್ನು ಶ್ರೀಮದಾಚಾರ್ಯರು ಶ್ರೀಮದನುವ್ಯಾಖ್ಯಾನದ ಪ್ರಥಮಾಧ್ಯಾಯದಲ್ಲಿ ಶ್ರುತಿ, ಸ್ಮೃತಿ ಹಾಗೂ ಯುಕ್ತಿಗಳ ಸಹಾಯದಿಂದ ಬಹಳ ಸಮರ್ಥವಾಗಿ ನಿರೂಪಿಸಿದ್ದಾರೆ.

ಪರಮಾತ್ಮನಲ್ಲಿ ಸರ್ವಶಬ್ದಗಳ ಸಮನ್ವಯವನ್ನು ಪ್ರತಿಪಾದಿಸುವ ಮೊದಲನೆಯ ಅಧ್ಯಾಯದ ಈ ಪ್ರಮೇಯದಲ್ಲಿ ಬರಬಹುದಾದ ವಿರೋಧವನ್ನು ಪರಿಹರಿಸುವುದೇ ಎರಡನೆಯ ಅಧ್ಯಾಯದ ಉದ್ದೇಶ. ವಿರೋಧವನ್ನು ನಿವಾರಿಸದಿದ್ದರೆ, ಸರ್ವಶಬ್ದ ಸಮನ್ವಯದಲ್ಲಿ ಸಂದೇಹಗಳು ತಲೆದೋರುವುದರಿಂದ ಪರಮಾತ್ಮನ ಸರ್ವಗುಣ ಪೂರ್ಣತ್ವದ ಬಗ್ಗೆ ನಿಶ್ಚಿತ ಜ್ಞಾನವುಂಟಾಗದು. ವಿರೋಧವು ಯುಕ್ತಿಗಳಿಂದ, ವಿವಿಧ ದರ್ಶನಗಳಿಂದ, ಸ್ಮೃತಿಗಳಿಂದ ಹಾಗೂ ಶ್ರುತಿಗಳಿಂದಲೂ ಬರಬಹುದು. ಹೀಗೆ ಬಹುವಿಧವಾದ ವಿರೋಧಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಿ, ಕ್ರಮವಾಗಿ ಎರಡನೆಯ ಅಧ್ಯಾಯದ ನಾಲ್ಕು ಪಾದಗಳಲ್ಲಿ ನಾಲ್ಕು ರೀತಿಯ ವಿರೋಧಗಳನ್ನು ಪರಿಹರಿಸಲಾಗಿದೆ.

ಎರಡನೆಯ ಅಧ್ಯಾಯದ ಮೊದಲನೆಯ ಪಾದವು ಯುಕ್ತಿಗಳ ವಿರೋಧಗಳನ್ನು ಪರಿಹಾರ ಮಾಡುವುದಾದರೆ, ಎರಡನೆಯ ಪಾದವು ವಿವಿಧ ಮತಗಳಿಂದ ಬರುವ ವಿರೋಧ ಹಾಗೂ ಆಕ್ಷೇಪಗಳನ್ನು ನಿವಾರಣೆ ಮಾಡುತ್ತದೆ. ಮೂರನೆಯ ಮತ್ತು ನಾಲ್ಕನೆಯ ಪಾದಗಳು ಶ್ರುತಿಗಳಿಂದಲೇ ಆಪಾತವಾಗಿ ತೋರುವ ವಿರೋಧವನ್ನು ಪರಿಹರಿಸುತ್ತವೆ. ಮೂರನೆಯ ಪಾದವು ಸಾಮಾನ್ಯವಾದ ವೇದ ವಾಕ್ಯಗಳ ವಿರೋಧವನ್ನು ನಿರಾಕರಿಸಿದರೆ, ನ್ಯಾಯೋಪೇತವಾದ ಅಂದರೆ ಯುಕ್ತಿಯುಕ್ತವಾಗಿ ಪ್ರಬಲವಾದ ವೇದವಾಕ್ಯಗಳ ವಿರೋಧವನ್ನು ಪರಿಹರಿಸುವುದು ನಾಲ್ಕನೆಯ ಪಾದದ ಉದ್ದೇಶ. ಎರಡನೆಯ ಅಧ್ಯಾಯದ ನಾಲ್ಕು ಪಾದಗಳ ಎಲ್ಲ ಅಧಿಕರಣಗಳಲ್ಲಿ ಪ್ರತಿಪಾದಿತವಾಗಿರುವ ಪ್ರಮೇಯಗಳನ್ನು ಸಂಗ್ರಹವಾಗಿ ಈ ಕೆಳಗೆ ನೀಡಲಾಗಿದೆ –

ಮೊದಲನೆಯ ಪಾದ (ಯುಕ್ತಿ ವಿರೋಧ ಪರಿಹಾರ):

೧. ಸ್ಮೃತ್ಯಧಿಕರಣ – ಪಾಶುಪತಾದಿ ಸ್ಮೃತಿಗಳ ವಿರೋಧದ ಪರಿಹಾರ

೨. ನ ವಿಲಕ್ಷಣತ್ವಾಧಿಕರಣ – ಶ್ರುತ್ಯಾದಿ ಪ್ರಾಮಾಣ್ಯ ವಿಷಯದಲ್ಲಿ ಯುಕ್ತಿ ವಿರೋಧದ ಪರಿಹಾರ

೩. ಅಭಿಮಾನ್ಯಧಿಕರಣ – ಮೃದಬ್ರವೀತ್ ಇತ್ಯಾದಿ ವೇದವಾಕ್ಯಗಳಿಗೆ ಅಭಿಮಾನಿ ಪರತ್ವ ನಿರೂಪಣೆಯ ಮೂಲಕ ಯುಕ್ತಿವಿರೋಧದ ಪರಿಹಾರ

೪. ಅಸದಧಿಕರಣ – ಪ್ರಾಗಭಾವಕ್ಕೆ ಕರ್ತತ್ವವನ್ನು ಸಾಧಿಸುವ ಯುಕ್ತಿಯಿಂದ

ಪರಮಾತ್ಮನ ಜಗತ್ಕರ್ತೃತ್ವಕ್ಕೆ ಬಡುವ ವಿರೋಧದ ಪರಿಹಾರ

೫. ಭೋಕ್ತ್ರಧಿಕರಣ – ಜೀವಬ್ರಹ್ಮರಿಗೆ ಐಕ್ಯ ನಿರಾಸೆ

೬. ತದನನ್ಯತ್ವಾಧಿಕರಣ – ಸರ್ವಕರ್ತೃವಾದ ವಿಷ್ಣುವಿಗೆ ಅನ್ಯ ಸ್ವತಂತ್ರ ಸಾಧನದ ಅವಶ್ಯಕತೆಯಿಲ್ಲ ಹಾಗೂ ಈಶಾದನ್ಯ ಪ್ರಕತ್ಯಾದಿಗಳಿಗೆ ಈಶ್ವರಾಧೀನತ್ವವೆಂಬ ಪ್ರಮೇಯಗಳ ಪ್ರತಿಪಾದನೆ

೭. ಇತರವ್ಯಪದೇಶಾಧಿಕರಣ – ಜೀವನು ಸ್ವತಂತ್ರ ಕರ್ತ ಎಂಬ ವಿಷಯದಲ್ಲಿ ಶ್ರುತಿ ಹಾಗೂ ಯುಕ್ತಿಗಳ ನಿರಾಕರಣೆ

೮. ಶ್ರುತ್ಯಧಿಕರಣ – ಪರಮಾತ್ಮನ ಸ್ವತಂತ್ರಕರ್ತೃತ್ವದ ವಿಷಯದಲ್ಲಿ ಪರಕೀಯರ ಯುಕ್ತಿಗಳಿಂದ ಬರುವ ವಿರೋಧದ ನಿರಾಸೆ ಹಾಗೂ ಅಚಿಂತ್ಯಾದ್ಭುತ ಶಕ್ತಿಮತ್ವ ಸಮರ್ಥನೆ

೯. ನ ಪ್ರಯೋಜನವತ್ವಾಧಿಕರಣ – ಫಲನಿರಪೇಕ್ಷವಾದ ಈಶ್ವರನ ಸೃಷ್ಟ್ಯಾದಿ ವ್ಯಾಪಾರವು ಕೇವಲ ಕ್ರೀಡಾರೂಪವಾದುದು ಎಂಬ ಪ್ರಮೇಯದ ಸಮರ್ಥನೆ

೧೦.ವೈಷಮ್ಯಾಧಿಕರಣ – ಪರಮಾತ್ಮನಲ್ಲಿ ವೈಷಮ್ಯಾದಿ ದೋಷಗಳ ನಿರಾಕರಣೆ

೧೧.ಸರ್ವಧರ್ಮೋಪಪತ್ತ್ಯಧಿಕರಣ – ಪರಮಾತ್ಮನ ಸರ್ವಗುಣಪೂರ್ಣತ್ವ ಹಾಗೂ ದೋಷದೂರತ್ವ ಸಮರ್ಥನೆ

ಎರಡನೆಯ ಪಾದ (ಸಮಯಗಳ ವಿರೋಧ ಪರಿಹಾರ):

೧. ರಚನಾನುಪಪತ್ತ್ಯಧಿಕರಣ – ನಿರೀಶ್ವರ ಸಾಂಖ್ಯರ ಮತ ನಿರಾಕರಣೆ

೨. ಅನ್ಯತ್ರಾಭಾವಾಧಿಕರಣ – ಸೇಶ್ವರ ಸಾಂಖ್ಯರ ಮತ ನಿರಾಕರಣೆ

೩. ಅಭ್ಯುಪಗಮಾಧಿಕರಣ – ಚಾರ್ವಾಕರ ಮತ ನಿರಾಕರಣೆ

೪. ಪುರುಷಾಶ್ಮಾಧಿಕರಣ – ನಿರೀಶ್ವರ ಸಾಂಖ್ಯರ ಏಕದೇಶಿಗಳಾದ ಜೀವೋಪಸರ್ಜನ ಪ್ರಕೃತಿ ಕರ್ತೃತ್ವವಾದಿಗಳ ಮತ ನಿರಾಕರಣೆ

೫. ಅನ್ಯಥಾನುಮಿತ್ಯಧಿಕರಣ – ನಿರೀಶ್ವರ ಸಾಂಖ್ಯರ ಏಕದೇಶಿಗಳಾದ ಪ್ರಕೃತಿ ಉಪಸರ್ಜನ ಪುರುಷಕರ್ತೃತ್ವವಾದಿಗಳ ಮತ ನಿರಾಕರಣೆ

೬. ವೈಶೇಷಿಕಾಧಿಕರಣ – ಪರಮಾಣ್ವಾರಂಭವಾದಿಗಳಾದ ವೈಶೇಷಿಕರ ಮತ ನಿರಾಕರಣೆ

೭. ಸಮುದಾಯಾಧಿಕರಣ – ಅವೈದಿಕ ಪಾಷಂಡಿ ಬೌದ್ಧರ ಏಕದೇಶಿಗಳಾದ ಪರಮಾಣುಪುಂಜವಾದಿಗಳಾದ ವೈಭಾಷಿಕ ಹಾಗೂ ಸೌತ್ರಾಂತಿಕರ ಮತ ನಿರಾಕರಣೆ

೮. ಶೂನ್ಯಾಧಿಕರಣ – ಶೂನ್ಯವಾದಿಗಳಾದ ಮಾಧ್ಯಮಿಕರ ಮತ ನಿರಾಕರಣೆ

೯. ಅನುಪಲಬ್ಧ್ಯಧಿಕರಣ – ವಿಜ್ಞಾನವಾದಿಗಳಾದ ಯೋಗಾಚಾರ ಮತ ನಿರಾಕರಣೆ

೧೦.ನೈಕಸ್ಮಿನ್ನಧಿಕರಣ – ಜೈನರ ಮತ ನಿರಾಕರಣೆ

೧೧.ಪತ್ಯುಧಿಕರಣ – ಪಾಶುಪತಾದಿ ವೈದಿಕ ಪಾಷಂಡಿ ಮತಗಳ ನಿರಾಕರಣೆ

೧೨.ಉತ್ಪತ್ತ್ಯಧಿಕರಣ – ಶಕ್ತಿಯೇ ಜಗತ್ಕಾರಣವೆಂದು ಪ್ರತಿಪಾದಿಸುವ ಮಹಾವಾಮ, ಮಧ್ಯವಾಮ ಹಾಗೂ ಅಣುವಾಮವೆಂಬ ಮೂರು ವಿಧವಾದ ಶಾಕ್ತ ಮತಗಳ ನಿರಾಕರಣೆ

ಮೂರನೆಯ ಪಾದ (ಸಾಮಾನ್ಯ ಶ್ರುತಿ ವಿರೋಧ ಪರಿಹಾರ):

೧. ವಿಯದಧಿಕರಣ – ಆಕಾಶಾದಿಗಳಿಗೆ ಪರಮಾತ್ಮನಿಂದಲೇ ಪರಾಧೀನ ವಿಶೇಷಾವಾಪ್ತಿರೂಪವಾದ ಉತ್ಪತ್ತಿಯ ಸಮರ್ಥನೆ

೨. ಮಾತರಿಶ್ವಾಧಿಕರಣ – ವಾಯ್ವಾದಿಗಳಿಗೆ ಪರಮಾತ್ಮನಿಂದಲೇ ಪರಾಧೀನ ವಿಶೇಷಾವಾಪ್ತಿರೂಪವಾದ ಉತ್ಪತ್ತಿಯ ಸಮರ್ಥನೆ

೩. ಅಸಂಭವಾಧಿಕರಣ – ಸ್ವತಂತ್ರನಾದ ವಿಷ್ಣುವಿಗೆ ಅನುತ್ಪತ್ತಿ ಸಮರ್ಥನೆ

೪. ತೇಜೋಧಿಕರಣ – ಅಗ್ನಿಗೆ ವಾಯುವಿನಿಂದ ಉತ್ಪತ್ತಿಯನ್ನು ಹೇಳುವ ಶ್ರುತಿಗೆ, ವಾಯುವಿಗೆ ದ್ವಾರತ್ವವನ್ನು ಸಮರ್ಥಿಸುವ ಮೂಲಕ, ವಿರೋಧ ಪರಿಹಾರ

೫. ಅಬಧಿಕರಣ – ನೀರಿಗೆ ಅಗ್ನಿಯಿಂದ ಉತ್ಪತ್ತಿಯನ್ನು ಹೇಳುವ ಶ್ರುತಿಗೆ ದ್ವಾರತ್ವದ ಮೂಲಕ ವಿರೋಧ ಪರಿಹಾರ

೬. ಪೃಥಿವ್ಯಧಿಕರಣ – ನೀರಿಗೆ ಅನ್ನಕಾರಣತ್ವ ಹಾಗೂ ಪೃಥಿವೀಕಾರಣತ್ವ ಹೇಳುವ ಶ್ರುತಿಗೆ, ಅನ್ನ ಶಬ್ದಕ್ಕೆ ಪೃಥಿವೀ ಪ್ರತಿಪಾದಕತ್ವವನ್ನು ಸಮರ್ಥಿಸುವ ಮೂಲಕ ವಿರೋಧ ಪರಿಹಾರ

೭. ತದಭಿಧ್ಯಾನಾಧಿಕರಣ – ರುದ್ರನಿಗೆ ಸಂಹಾರಕರ್ತೃತ್ವವನ್ನು ಹೇಳುವ ಶ್ರುತಿಗೆ, ದ್ವಾರತ್ವವನ್ನು ಪ್ರತಿಪಾದಿಸುವ ಮೂಲಕ ವಿರೋಧ ಪರಿಹಾರ

೮. ವಿಪರ್ಯಯಾಧಿಕರಣ – ಆದಿಸೃಷ್ಟಿ ಕ್ರಮದಿಂದ ಲಯಬೋಧಕ ಶ್ರುತಿ ವಿರೋಧ ಪರಿಹಾರ

೯. ಅಂತರಾಧಿಕರಣ – ವಿಜ್ಞಾನ ಹಾಗೂ ಮನಸ್ತತ್ವಗಳಿಗೆ ವ್ಯುತ್ಕ್ರಮದಿಂದ ಲಯಾಭಾವವನ್ನು ಹೇಳುವ ಶ್ರುತಿಗೆ ವಿರೋಧ ಪರೀಹಾರ

೧೦.ನಾತ್ಮಾಧಿಕರಣ – ಪರಮಾತ್ಮನಿಗೆ ಲಯವಿಲ್ಲವೆಂದು ಸಮರ್ಥನೆ

೧೦.ಜ್ಞಾಧಿಕರಣ – ಜೀವರಿಗೆ ದೇಹ ಸಂಬಂಧ ರೂಪ ಉತ್ಪತ್ತಿಯ ಸಮರ್ಥನೆ

೧೨.ಉತ್ಕ್ರಾಂತ್ಯಧಿಕರಣ – ಜೀವರು ಅಣುವಾಗಿದ್ದರೂ ಪ್ರಕಾಶರೂಪ ವ್ಯಾಪ್ತತ್ವ ಹೊಂದಿದ್ದಾರೆ ಎಂಬುದರ ಸಮರ್ಥನೆ

೧೩.ವ್ಯತಿರೇಕಾಧಿಕರಣ – ಜೀವಿಗೆ ಏಕರೂಪತ್ವ ಅನೇಕರೂಪತ್ವ ಹೇಳುವ ಶ್ರುತಿಗಳಿಗೆ ವಿರೋಧ ಪರೀಹಾರ

೧೪.ಪೃಥಗಧಿಕಣ – ಜೀವರು ಬ್ರಹ್ಮನಿಂದ ಭಿನ್ನರು ಎಂದು ಪ್ರತಿಪಾದನೆ

೧೫.ಯಾವದಧಿಕರಣ – ಜೀವರು ಸ್ವರೂಪತಃ ನಿತ್ಯರು ಎಂದು ಪ್ರತಿಪಾದನೆ

೧೬.ಪುಂಸ್ತ್ವಾಧಿಕರಣ – ಜೀವನಿಗೆ ಸುಖಾದಿರೂಪತ್ವ ಹಾಗೂ ತದಭಾವ ಹೇಳುವ ಶ್ರುತಿಗಳಿಗೆ ವಿರೋಧ ಪರಿಹಾರ

೧೭.ಕರ್ತೃತ್ವಾಧಿಕರಣ – ಜೀವರಿಗೆ ಈಶ್ವರಾಧೀನಕರ್ತೃತ್ವದ ಸಮರ್ಥನೆ

೧೮.ಅಂಶಾಧಿಕರಣ – ಜೀವರು ಪರಮಾತ್ಮನ ಭಿನ್ನಾಂಶರೆಂಬ ಪ್ರಮೇಯದ ನಿರೂಪಣೆ

೧೯.ಅದೃಷ್ಟಾಧಿಕರಣ – ಜೀವರಿಗೆ ಪರಮಾತ್ಮನ ಪ್ರತಿಬಿಂಬತ್ವ ಸಮರ್ಥನೆ

ನಾಲ್ಕನೆಯ ಪಾದ (ನ್ಯಾಯೋಪೇತ ಶ್ರುತಿವಿರೋಧ ಪರಿಹಾರ):

೧. ಪ್ರಾಣೋತ್ಪತ್ತ್ಯಧಿಕರಣ – ಇಂದ್ರಿಯಗಳಿಗೆ ಉತ್ಪತ್ತಿಯುಂಟು. ಸೂಕ್ಷ್ಮರೂಪದಿಂದ ಅನಾದಿತ್ವವಿರುವುದರಿಂದ ಅನಾದಿತ್ವ ಹೇಳುವ ಶ್ರುತಿಗೆ ವಿರೋಧವಿಲ್ಲ

೨. ತತ್ಪ್ರಾಗಧಿಕರಣ – ಮನಸ್ಸಿಗೂ ಉತ್ಪತ್ತಿಯುಂಟು. ಇತರ ಇಂದ್ರಿಯಗಳಿಗೆ ಹೋಲಿಸಿದರೆ ಅಲ್ಪವಾದ ಉಪಚಯ ಹೊಂದುವುದರಿಂದ ನಿತ್ಯತ್ವವನ್ನು ಹೇಳುವ ಶ್ರುತಿಗೆ ವಿರೋಧವಿಲ್ಲ

೩. ತತ್ಪೂರ್ವಾಧಿಕರಣ – ವಾಗಿಂದ್ರಿಯಕ್ಕೆ ಉತ್ಪತ್ತಿಯಿದ್ದರೂ, ಅದಕ್ಕೆ ನಿತ್ಯತ್ವವನ್ನು ಹೇಳುವ ಶ್ರುತಿಗೆ ವಿರೋಧವಿಲ್ಲವೆಂಬುದರ ಸಮರ್ಥನೆ

೪. ಸಪ್ತಗತ್ಯಧಿಕರಣ – ಇಂದ್ರಿಯ ಸಂಖ್ಯಾ ವಿಷಯ ಶ್ರುತಿ ವಿರೋಧ ಪರಿಹಾರ

೫. ಅಣ್ವಧಿಕರಣ – ಇಂದ್ರಿಯಗಳ ಪರಿಮಾಣದ ವಿಷಯದಲ್ಲಿ ಶ್ರುತಿವಿರೋಧ ಪರಿಹಾರ

೬. ಶ್ರೇಷ್ಠಾಧಿಕರಣ – ಮುಖ್ಯಪ್ರಾಣನಿಗೆ ಅನುತ್ಪತ್ತಿ ಹೇಳುವ ಶ್ರುತಿ ವಿರೋಧ ಪರಿಹಾರ

೭. ಚಕ್ಷುರಾದ್ಯಧಿಕರಣ – ಮುಖ್ಯಪ್ರಾಣನಿಗೆ ಸ್ವಾತಂತ್ರ್ಯ ಹೇಳುವ ಶ್ರುತಿ ವಿರೋಧ ಪರಿಹಾರ

೮. ಪಂಚವೃತ್ತ್ಯಧಿಕರಣ – ಪ್ರಾಣಾಪಾನಾದಿ ಪಂಚರೂಪಗಳಿಗೆ ದಾಸತ್ವ ಹಾಗೂ ತತ್ಸ್ವರೂಪತ್ವ ಪ್ರತಿಪಾದಕ ಶ್ರುತಿಗಳಿಗೆ ವಿರೋಧ ಪರಿಹಾರ

೯. ಅಣ್ವಧಿಕರಣ – ಮುಖ್ಯಪ್ರಾಣನಿಗೆ ವ್ಯಾಪ್ತತ್ವ ಹಾಗೂ ಅಣುತ್ವಗಳನ್ನು ಹೇಳುವ ಶ್ರುತಿಗಳಿಗೆ ವಿರೋಧ ಪರಿಹಾರ

೧೦.ಜ್ಯೋತಿರಧಿಕರಣ – ಚಕ್ಷುರಾದಿ ಇಂದ್ರಿಯಗಳಿಗೆ ಜೀವಕರಣತ್ವ ಶ್ರುತಿ ವಿರೋಧ ಪರಿಹಾರ

೧೧.ತಇಂದ್ರಿಯಾಧಿಕರಣ – ಮುಖ್ಯಪ್ರಾಣನಿಗೆ ಇಂದ್ರಿಯತ್ವ ಪ್ರತಿಪಾದಕ ಶ್ರುತಿ ವಿರೋಧ ಪರಿಹಾರ

೧೨.ಸಂಜ್ಞಾಧಿಕರಣ – ನಾಮರೂಪಾತ್ಮಕ ಪ್ರಪಂಚಕ್ಕೆ ಚತುರ್ಮುಖನಿಂದ ಸೃಷ್ಟಿಯೆಂದು ಹೇಳುವ ಶ್ರುತಿ ವಿರೋಧ ಪರಿಹಾರ

೧೩.ಮಾಂಸಾಧಿಕರಣ – ಶರೀರಕ್ಕೆ ಪೃಥಿವ್ಯಾದಿ ಮೂರು ಭೂತಗಳ ಮಧ್ಯದಲ್ಲಿ ಅನ್ಯತಮ ವಿಕಾರಿತ್ವ ಹೇಳುವ ಶ್ರುತಿ ವಿರೋಧ ಪರಿಹಾರ.

ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಎಲ್ಲ ಪಾದ ಹಾಗೂ ಅಧಿಕರಣಗಳ ವಿಷಯ ಸಂಗ್ರಹ ರೂಪವಾದ ಉಪೋದ್ಘಾತವು ಮುಕ್ತಾಯವಾಯಿತು.

।। ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ।।

ವಿಷಯಾನುಕ್ರಮಣಿಕೆ

* * *

ಸಮರ್ಪಣೆ

ಕಳೆದ ವರ್ಷ ಅಮೇರಿಕದಲ್ಲಿ ಉಗ್ರಗಾಮಿಗಳ ಬೆಂಕಿಯ ತಾಂಡವಕ್ಕೆ ಆಹುತಿಯಾದ ವಿಶ್ವ ವಾಣಿಜ್ಯ ಕೇಂದ್ರದ ದಾರುಣ ದುರಂತದಲ್ಲಿ, ತನ್ನ ಸಂಸ್ಥೆಗಾಗಿ ಅತಿನಿಷ್ಠೆಯಿಂದ ಕರ್ತವ್ಯ ನಿರತರಾಗಿದ್ದಾಗಲೇ ಕೆಲವೇ ಕ್ಷಣಗಳಲ್ಲಿ ಪಂಚಭೂತಗಳಲ್ಲಿ ಲೀನವಾಗಿ ಭಗವಂತನ ಪಾದಾರವಿಂದವನ್ನು ಸೇರಿದ, ಇನ್ನೂ ಚಿಕ್ಕ ವಯಸ್ಸಿನಲ್ಲಿಯೇ ಉನ್ನತ ಪ್ರತಿಭೆಯ ಉತ್ತುಂಗ ಶಿಖರವನ್ನು ಮುಟ್ಟಿದ್ದ, ದಿವಂಗತ ಶ್ರೇಯಸ್ ಶ್ರೀನಿವಾಸ್ ಹಾಗೂ ಮರಣದಲ್ಲಿಯೂ ಅವನ ಜೋತೆಯಲ್ಲಿಯೇ ತಾವೂ ಪಯಣಿಸಿದ ವಿಪ್ರೋ ಸಂಸ್ಥೆಯ ಅವನ ಸಹಚರ ಆತ್ಮಗಳಿಗೆ ಹಾಗೂ ಇತರ ಸಾವಿರಾರು ದಿವಂಗತ ಆತ್ಮಗಳಿಗೆ ಸದ್ಗತಿಯನ್ನು ಕೋರುತ್ತ, ಅವರೆಲ್ಲರ ಸ್ಮರಣೆಗಾಗಿ ಶ್ರೀಮದಾಚಾರ್ಯರ ಮೇರುಕೃತಿ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಕನ್ನಡಾನುವಾದವನ್ನು ಒಳಗೊಂಡ ಈ ಎರಡನೆಯ ಸಂಪುಟವು ಪ್ರಕಟವಾಗುತ್ತಿದೆ. ಅಗಲಿದ ಪ್ರತಿಭೆಗಳ ಸದ್ಗತಿಗಾಗಿ ಈ ಗ್ರಂಥವನ್ನು ಪ್ರಕಟಿಸಿ ಅರ್ಪಿಸಲು ಆರ್ಥಿಕ ಸಹಾಯ ನೀಡಿದ ಅವರ ಶ್ರೇಯೋಭಿಲಾಷಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಶ್ರೀಹರಿವಾಯುಗಳು ದಿವಂಗತರಿಗೆ ಸದ್ಗತಿಯನ್ನು ಕರುಣಿಸಲಿ ಹಾಗೂ ಅವರ ಸ್ಮರಣೆಗಾಗಿ ಆರ್ಥಿಕ ನೆರವು ನೀಡಿ ಈ ಗ್ರಂಥದ ಪ್ರಕಟಣೆಗೆ ಅನುವು ಮಾಡಿಕೊಟ್ಟವರಿಗೂ ವಿಶೇಷವಾಗಿ ಅನುಗ್ರಹ ಮಾಡಲಿ ಹಾಗೂ ಅವರ ಉತ್ತರೋತ್ತರ ಏಳಿಗೆಗೆ ಕಾರಣವಾಗಲಿ ಎಂಬುದಾಗಿ ಶ್ರೀಹರಿವಾಯುಗಳಲ್ಲಿ ನಮ್ಮ ಕಳಕಳಿಯ ಪ್ರಾರ್ಥನೆ

ಶ್ರೀಮದ್ಧನುಮಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಎರಡನೆಯ ಅಧ್ಯಾಯ – ಅವಿರೋಧಾಧ್ಯಾಯ

ಮೊದಲನೆಯ ಪಾದ

ಶ್ರೀಮನ್ನ್ಯಾಯಸುಧಾ ಮಂಗಲ ಶ್ಲೋಕಃ

ಯತ್ಪದಂ ವೇದಸಂವೇದ್ಯಂ ಕಟಾಕ್ಷೇಣಾಪಿ ವೀಕ್ಷಿತುಮ್ ।

ನ ಕ್ಷಮಂತೇ ವಿಮತಯಸ್ತಮುಪಾಸೇ ಶ್ರಿಯಃಪತಿಮ್॥

ಶ್ರೀಮದನುವ್ಯಾಖ್ಯಾನಮ್

ಉಕ್ತಃ ಸಮನ್ವಯಃ ಸಾಕ್ಷಾದವಿರೋಧೋಽತ್ರ ಸಾಧ್ಯತೇ ।

ಶ್ರೀಮನ್ನಾರಾಯಣನು ಸಕಲ ಜಗಜ್ಜನ್ಮಾದಿಗಳಿಗೆ ನಿಮಿತ್ತಕಾರಣನು. ಸರ್ವಜ್ಞತ್ವ ಸರ್ವೈಶ್ವರ್ಯತ್ವಾದಿ ಅನಂತ ಕಲ್ಯಾಣಗುಣಗಳಿಂದ ಪರಿಪೂರ್ಣನು. ಅವಿದ್ಯಾ ಅವದ್ಯತ್ವಾದಿ ಸಕಲ ದೋಷರಹಿತನು. ಆ ಪರಬ್ರಹ್ಮನಾದ ನಾರಾಯಣನಲ್ಲಿ, ಸ್ವರ–ವರ್ಣ–ಪದ–ವಾಕ್ಯ–ಮಹಾವಾಕ್ಯ ರೂಪವಾದ ಸಮಸ್ತವಾದ ಶಾಸ್ತ್ರಕ್ಕೂ ಪರಮಮುಖ್ಯ ವೃತ್ತಿಯಿಂದ ಸಮನ್ವಯವನ್ನು ಮೊದಲನೆಯ ಅಧ್ಯಾಯದಲ್ಲಿ ಸಮರ್ಥಿಸಲಾಯಿತು. ಪ್ರಸ್ತುತ ಎರಡನೆಯ ಅಧ್ಯಾಯದಲ್ಲಿ ಅವಿರೋಧವನ್ನು ಸಮರ್ಥಿಸುತ್ತಾರೆ. ಅವಿರೋಧವು ಸಮನ್ವಯಕ್ಕೆ ಹೇತುವಾಗಿರುವುದರಿಂದ ಪ್ರಥಮ ಮತ್ತು ದ್ವಿತೀಯ ಅಧ್ಯಾಯಗಳಿಗೆ ಕಾರ್ಯಕಾರಣಭಾವರೂಪವಾದ ಸಂಗತಿಯು ಸೂಚಿತವಾಗಿದೆ.

ಹಾಗಾದರೆ ಶ್ರೀಮನ್ನಾರಾಯಣನ ಜಗಜ್ಜನ್ಮಾದಿಕರ್ತೃತ್ವರೂಪವಾದ ಲಕ್ಷಣಕ್ಕೆ ಅವಿರೋಧವನ್ನು ಸಮರ್ಥಿಸುವ ಈ ಅಧ್ಯಾಯಕ್ಕೆ ಏಕಾರ್ಥತೆಯಿರುವುದರಿಂದ ಚತುರ್ವಿಧರೂಪವಾದ ಪಾದಭೇದವಾದರೂ ಯಾವ ಕಾರಣದಿಂದ ಕೂಡುವುದು? ಅದರಲ್ಲಿಯೂ ಯುಕ್ತಿವಿರೋಧವನ್ನೇ ಮೊದಲಿಗೆ ತೆಗೆದುಕೊಳ್ಳಲು ಕಾರಣವೇನು ಎಂದು ಕೇಳಿದರೆ –

ಚತುರ್ವಿಧಸ್ಯ ತಸ್ಯಾದೌ ಯೌಕ್ತಃ ತತ್ರಾಪಿ ಚ ಸ್ಮೃತೇಃ ॥೧॥

ನಾಲ್ಕುವಿಧವಾದ ವಿರೋಧವನ್ನು ಈ ಅಧ್ಯಾಯದ ನಾಲ್ಕು ಪಾದಗಳಲ್ಲಿ ಪರಿಹರಿಸುತ್ತಾರೆ. ಯುಕ್ತಿವಿರೋಧ, ಸಮಯವಿರೋಧ, ಶ್ರುತಿವಿರೋಧ ಮತ್ತು ನ್ಯಾಯೋಪೇತ ಶ್ರುತಿವಿರೋಧ – ಹೀಗೆ ನಾಲ್ಕು ಪ್ರಕಾರ ವಿರೋಧಗಳಿವೆ. ಅವುಗಳಲ್ಲಿ ಯುಕ್ತಿವಿರೋಧವು ಪ್ರಬಲವಾದ್ದರಿಂದ ಮೊದಲನೆಯ ಪಾದದಲ್ಲಿ ಯುಕ್ತಿ ಸಂಬಂಧಿಯಾದ ವಿರೋಧಾಭಾವವು ಸಾಧಿಸಲ್ಪಡುತ್ತದೆ. ಆದರಲ್ಲಿಯೂ ಪ್ರಥಮಾಧಿಕರಣದಲ್ಲಿ ಪಾಶುಪತಾದಿ ಸ್ಮೃತಿಗಳ ವಿರೋಧವು ಪರಿಹರಿಸಲ್ಪಡುತ್ತದೆ.

ಯುಕ್ತಿವಿರೋಧವನ್ನು ಪರಿಹರಿಸತಕ್ಕ ಈ ಪಾದದಲ್ಲಿ ಸ್ಮೃತಿವಿರೋಧ ಪರಿಹಾರವು ಅಸಂಗತವಾಗುವುದು ಎಂದು ಆಕ್ಷೇಪಿಸಿದರೆ –

ತಸ್ಯಾಶ್ಚತುಃಸ್ವರೂಪತ್ವಾತ್ ಪ್ರತ್ಯೇಕಂ ಚತುರಾತ್ಮಕಾಃ ।

ಪಾದಾಃ ಸರ್ವೇ ತದಂಶಾಶ್ಚ ಮೂರ್ತೀನಾಂ ವರ್ಣಮಾಗಮಾತ್ ॥೨॥

ಆ ಪಾಶುಪತಾದಿ ಸ್ಮೃತಿಗಳಿಗೆ ಯುಕ್ತಿಸಮಯಾದಿ ನಾಲ್ಕು ವಿರೋಧಗಳ ಸ್ವರೂಪತ್ವವಿರುವುದರಿಂದ ಮೊದಲಿಗೆ ಸ್ಮೃತಿ ವಿರೋಧವನ್ನು ಪರಿಹರಿಸುವುದು ಯುಕ್ತವೇ ಆಗುವುದು. ಒಂದೇ ಒಂದು ಅಧಿಕರಣವೇ ನಾಲ್ಕುಪಾದಗಳ ಅರ್ಥ ಸಂಬಂಧದಿಂದ ನಾಲ್ಕು ಸ್ವರೂಪವಾಗಿರುವುದು ಎಂದಷ್ಟೇ ತಿಳಿಯತಕ್ಕದ್ದಲ್ಲ. ಎಲ್ಲ ಅಧ್ಯಾಯಗಳ ಎಲ್ಲ ಪಾದಗಳೂ ಪ್ರತ್ಯೇಕವಾಗಿ ಆಯಾ ಅಧ್ಯಾಯಗಳ ಎಲ್ಲ ನಾಲ್ಕು ಪಾದಗಳ ಅರ್ಥವನ್ನು ಹೊಂದಿರುತ್ತವೆ. ಇದೇ ಪ್ರಕಾರವಾಗಿ ಪ್ರತಿಯೊಂದು ಅಧ್ಯಾಯವೂ ಎಲ್ಲ ನಾಲ್ಕು ಅಧ್ಯಾಯಗಳ ಅರ್ಥಸಂಬಂಧವನ್ನು ಹೊಂದಿರುತ್ತವೆ. ವಾಸುದೇವ–ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ ಎನ್ನುವ ನಾಲ್ಕು ಮೂರ್ತಿಗಳನ್ನು ಪ್ರತಿಪಾದಿಸುವುದರಿಂದಲೂ ಶಾಸ್ತ್ರಕ್ಕೆ ಚತುರಾತ್ಮಕತ್ವವನ್ನು ತಿಳಿಯತಕ್ಕದ್ದು. ಕೇವಲ ಪ್ರತ್ಯಕ್ಷರ, ಪ್ರತಿಪದ, ಪ್ರತಿಸೂತ್ರ, ಪ್ರತ್ಯಧಿಕರಣ ಮಾತ್ರವಲ್ಲ, ಮತ್ತೆ ಈ ಶಾಸ್ತ್ರದಲ್ಲಿನ ಒಂದು ವರ್ಣ ಮೊದಲ್ಗೊಂಡು ನಾಲ್ಕು ಅಧ್ಯಾಯಾತ್ಮಕವಾದ ಸಮಸ್ತ ಶಾಸ್ತ್ರಪರ್ಯಂತವೂ ನಾಲ್ಕು ಮೂರ್ತಿಗಳು ಪ್ರತಿಪಾದಿಸಲ್ಪಡುತ್ತವೆ ಎಂಬುದಾಗಿ ಬೃಹತ್ತಂತ್ರ ಮೊದಲಾದ ಆಗಮಗಳಿಂದ ತಿಳಿಯಲ್ಪಡುತ್ತದೆ.

ಮೊದಲಿಗೆ ಈ ಪಾದದಲ್ಲಿರುವ ಅಧಿಕರಣಗಳ ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಗಳನ್ನು ಸಂಕ್ಷೇಪದಿಂದ ಹೇಳುತ್ತಾರೆ –

ಆಪ್ತತಾ ಸಮತಾದೃಷ್ಟಿಶ್ರುತಿಸಾಮ್ಯಬಲೋದ್ಭವಾಃ ।

ಸರ್ವಾನುಸಾರೋ ಲಘುತಾ ವಿಶೇಷಾದರ್ಶನಾಫಲೇ ॥೩॥

ಇಷ್ಟಾಸಿದ್ಧಿಶ್ಚ ನಿಯಮಃ ಪೂರ್ವಪಕ್ಷೇಷು ಯುಕ್ತಯಃ ।

ಏತಾ ಏವ ತ್ವತಿಬಲಾಃ ಸಿದ್ಧಾಂತಸ್ಯ ನಿಯಾಮಿಕಾಃ ॥೪॥

ಆಪ್ತತ್ವ, ಸಮತ್ವ ಇತ್ಯಾದಿಗಳು ಪೂರ್ವಪಕ್ಷಯುಕ್ತಿಗಳು. ಇವುಗಳೇ ಅತಿಬಲವುಳ್ಳ ಪ್ರಯುಕ್ತ ಸಿದ್ಧಾಂತಕ್ಕೆ ನಿಯಾಮಕಗಳು. ಹೇಗೆಂದರೆ –

ಸ್ಮೃತ್ಯಧಿಕರಣದಲ್ಲಿ ಆಪ್ತತ್ವ, ನವಿಲಕ್ಷಣತ್ವಾಧಿಕರಣದಲ್ಲಿ ಸಮತ್ವ, ಅಭಿಮಾನ್ಯಧಿಕರಣದಲ್ಲಿ ಅದೃಷ್ಟಿ, ಅಸದಧಿಕರಣದಲ್ಲಿ ಶ್ರುತಿಸಾಮ್ಯ, ಭೋಕ್ತ್ರಧಿಕರಣದಲ್ಲಿ ಬಲೋದ್ಭವ, ಆರಂಭಣಾಧಿಕರಣದಲ್ಲಿ ಸರ್ವಾನುಸಾರತ್ವ, ಇತರವ್ಯಪದೇಶಾಧಿಕರಣದಲ್ಲಿ ಲಘುತ್ವ, ಶ್ರುತ್ಯಧಿಕರಣದಲ್ಲಿ ವಿಶೇಷದ ಅದರ್ಶನ, ನ ಪ್ರಯೋಜನಾಧಿಕರಣದಲ್ಲಿ ಪ್ರಯೋಜನಾಭಾವ, ವೈಷಮ್ಯಾಧಿಕರಣದಲ್ಲಿ ಇಷ್ಟಾಸಿದ್ಧಿ ಹಾಗೂ ಹನ್ನೊಂದನೆಯ ಸರ್ವಧರ್ಮಾಧಿಕರಣದಲ್ಲಿ ನಿಯಮ (ಅಂದರೆ ವ್ಯಾಪ್ತಿ). ಈ ಪ್ರಕಾರವಾಗಿ ಅಧಿಕರಣಗಳ ಯುಕ್ತಿಗಳನ್ನು ತಿಳಿಯತಕ್ಕದ್ದು.

ಶ್ರೀಮದಾಚಾರ್ಯರು ಸೂತ್ರರೂಪವಾಗಿ ಮೇಲೆ ಸೂಚಿಸಿರುವ ಈ ಪಾದದ ಎಲ್ಲ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ನ್ಯಾಯವಿವರಣ ಟೀಕೆಯನ್ನು ಅನುಸರಿಸಿ ಈ ಕೆಳಗೆ ವಿವರಣೆ ನೀಡಲಾಗಿದೆ –

೧. ಸ್ಮೃತ್ಯಧಿಕರಣ (ಆಪ್ತತ್ವವೆಂಬ ಯುಕ್ತಿ)

ಪೂರ್ವಪಕ್ಷ – ರುದ್ರಾದಿಗಳ ವಾಕ್ಯಗಳು ಆಪ್ತಿಮೂಲಕ ಹಾಗೂ ನಿರ್ದುಷ್ಟವಾದುದರಿಂದ, ಆಪ್ತಿಮೂಲತ್ವವಿಲ್ಲದ ವೇದಕ್ಕಿಂತ ಪ್ರಬಲ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವನ್ನು ಪ್ರತಿಪಾದಿಸುವ ವೇದವಾಕ್ಯಗಳು ಅಪ್ರಮಾಣ.

ಸಿದ್ಧಾಂತ – ವಿಷ್ಣು ಮುಂತಾದವರಿಂದ ರಚಿಸಲ್ಪಟ್ಟ ಪಂಚರಾತ್ರ ಮುಂತಾದ ಸ್ಮೃತಿಗಳೂ ಅನೇಕವಿವೆ. ಅವುಗಳೂ ಆಪ್ತಿಮೂಲಕ ಹಾಗೂ ನಿರ್ದುಷ್ಟವಾಗಿವೆ. ಜೊತೆಗೆ ವೇದಮೂಲತ್ವವೂ ಇದೆ. ಶ್ರುತ್ಯನುಸಾರವಾದ ವಿಷ್ಣುವಿನ ಆಪ್ತತ್ವವೇ ಮುಖ್ಯವಾದುದೆಂದು ತಿಳಿಯುತ್ತದೆ. ರುದ್ರನಲ್ಲಿ ಅಜ್ಞಾನಾದಿಗಳಿವೆಯೆಂದು ಶ್ರುತಿಸಿದ್ಧವಾಗಿರುವುದರಿಂದ ಇಂಥಹ ಆಪ್ತತ್ವವಿಲ್ಲ. ಆದ್ದರಿಂದ ವಿಷ್ಣುವಿನಲ್ಲಿ ಪ್ರಬಲವಾದ ಆಪ್ತತ್ವವಿರುವುದರಿಂದ ಅವನಿಗೇ ಜಗತ್ಕಾರಣತ್ವವು ಸಿದ್ಧವಾಗುತ್ತದೆ.

೨. ನ ವಿಲಕ್ಷಣತ್ವಾಧಿಕರಣ (ಸಮತ್ವವೆಂಬ ಯುಕ್ತಿ)

ಪೂರ್ವಪಕ್ಷ – ಪಾಶುಪತಾದಿ ಸ್ಮೃತಿಗಳಲ್ಲಿ ಹೇಳಿದ ಕಾರ್ಯಗಳಿಗೆ ಫಲಸಂವಾದವಿಲ್ಲವಾದ್ದರಿಂದ ಅವುಗಳು ಅಪ್ರಮಾಣವೆಂದು ಹಿಂದಿನ ಅಧಿಕರಣದಲ್ಲಿ ಹೇಳಿದೆ. ಅದರಂತೆಯೇ ವೇದದಲ್ಲಿ ಹೇಳಿರುವ ಕಾರೀರೀ ಯಾಗವನ್ನು ಮಾಡಿದಾಗ ಮಳೆ ಬರದಿರುವುದೂ ಕಂಡಿದೆ. ಹೀಗೆ ಪಾಶುಪತಾದಿ ಸ್ಮೃತಿಗಳಿಗೆ ಬರುವ ಅಪ್ರಮಾಣ್ಯ ಶಂಕೆಯು ವೇದವಾಕ್ಯಗಳಿಗೂ ಬರುವುದು. ಪಾಶುಪತಾದಿಗಳು ಅಪ್ರಮಾಣವಾದರೆ ಅದೇ ಯುಕ್ತಿಯಿಂದ ವೇದವಾಕ್ಯಗಳೂ ಅಪ್ರಮಾಣವಾಗುವವು.

ಸಿದ್ಧಾಂತ – ವೇದೋಕ್ತ ಕರ್ಮಾಚರಣೆ ಮಾಡಿದರೂ ಫಲ ಬರದಿರುವುದಕ್ಕೆ ಅನೇಕ ಕಾರಣಗಳು ಇರುತ್ತವೆ. ಕರ್ತೃವಿನಲ್ಲಿರುವ ಅಶ್ರದ್ಧಾದಿ ದೋಷಗಳ ಮೇಲೆ ಫಲವು ಅವಲಂಬಿಸಿರುತ್ತದೆ. ವೇದವಾಕ್ಯಗಳು ನಿರ್ದೋಷವೆಂದು ಅಪೌರುಷೇಯತ್ವ ಇತ್ಯಾದಿ ಯುಕ್ತಿಗಳಿಂದ ನಿರ್ಣೀತವಾಗಿವೆ. ವೇದವು ಸ್ವತಃ ಪ್ರಮಾಣ. ಆದರ ಪ್ರಾಮಾಣ್ಯ ನಿಶ್ಚಯಕ್ಕೆ ಬೇರೆ ಸ್ಮೃತಿಗಳ ಸಹಕಾರ ಬೇಕಿಲ್ಲ. ಫಲವಿಸಂವಾದ ಕಂಡರೂ ವೇದವು ಪ್ರಮಾಣವೇ.

೩. ಅಭಿಮಾನ್ಯಧಿಕರಣ (ಅದೃಷ್ಟಿಯೆಂಬ ಯುಕ್ತಿ)

ಪೂರ್ವಪಕ್ಷ – ಮೃದಬ್ರವೀತ್ (ಮಣ್ಣು ಮಾತಾನಾಡಿತು) ಇತ್ಯಾದಿ ವೇದವಾಕ್ಯಗಳು ಅಚೇತನವಾದ ಮಣ್ಣು ಇತ್ಯಾದಿಗಳಿಗೆ ಚೇತನ ಧರ್ಮಗಳಾದ ವಕ್ತೃತ್ವಾದಿಗಳನ್ನು ಪ್ರತಿಪಾದಿಸುತ್ತವೆ. ಇದು ಲೋಕದಲ್ಲಿ ಕಂಡುಬರುವುದಿಲ್ಲ (ಅದೃಷ್ಟಿ). ಆದ್ದರಿಂದ ಪ್ರಮಾಣಕ್ಕೆ ವಿರುದ್ಧ. ಇದೇ ರೀತಿ ಎಲ್ಲ ವೇದವಾಕ್ಯಗಳೂ ಅಪ್ರಮಾಣವಾಗುತ್ತವೆ. ಆದ್ದರಿಂದ ವೇದದಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತ – ಈ ವಾಕ್ಯಗಳಿಗೆ ಮೇಲ್ನೋಟಕ್ಕೆ ಯುಕ್ತಿಯ ವಿರೋಧವಿದೆ. ಆದರೆ ವೇದವು ನಿರ್ದೋಷವಾದ್ದರಿಂದ ಅಪ್ರಮಾಣ್ಯವು ದೃಷ್ಟವಲ್ಲ. ವೇದದ ಪ್ರಾಮಾಣ್ಯಕ್ಕೆ ವಿರೋಧವಾಗದಂತೆ ಈ ವಾಕ್ಯಗಳಿಗೆ ಅರ್ಥಮಾಡಬೇಕು. ಇಲ್ಲಿ ಮಣ್ಣು ಮುಂತಾದವುಗಳಿಂದ ಅವುಗಳ ಅಭಿಮಾನಿ ದೇವತೆಗಳನ್ನು ತೆಗೆದುಕೊಳ್ಳಬೇಕು. ಆಗ ಈ ವಾಕ್ಯಗಳು ಅಪ್ರಮಾಣವಾಗುವುದಿಲ್ಲ. ಆದ್ದರಿಂದ ವೇದಗಳಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುತ್ತದೆ.

೪. ಅಸದಧಿಕರಣ (ಶ್ರುತಿಸಾಮ್ಯವೆಂಬ ಯುಕ್ತಿ)

ಪೂರ್ವಪಕ್ಷ – ವಿಷ್ಣುವಿಗೆ ಜಗತ್ಕಾರಣವನ್ನು ಹೇಳುವ ವಾಕ್ಯಗಳಂತೆಯೇ ಅಸತ್ತಿಗೆ ಜಗತ್ಕಾರಣವನ್ನು ಹೇಳುವ ಅಸದೇವೇದಮಗ್ರ ಆಸೀತ್ ಇತ್ಯಾದಿ ವೇದವಾಕ್ಯಗಳಿವೆ. ಇವೆರಡೂ ಶ್ರುತಿಗಳೇ ಆದ್ದರಿಂದ ಪ್ರಾಮಾಣ್ಯವು ಸಮಾನವಾಗಿದೆ. ಆದ್ದರಿಂದ ವಿಷ್ಣುವೇ ಜಗತ್ಕಾರಣವೆಂಬುದು ನಿಶ್ಚಯವಾಗುವುದಿಲ್ಲ.

ಸಿದ್ಧಾಂತ – ವಿಷ್ಣುವಿಗೆ ಜಗತ್ಕಾರಣವನ್ನು ಹೇಳುವ ವಾಕ್ಯಗಳು ಅನೇಕ ವಾಕ್ಯಗಳಿವೆ. ಇಷ್ಟೇ ಅಲ್ಲದೆ ಅಸತ್ ಇತ್ಯಾದಿ ಎಲ್ಲ ಶಬ್ದಗಳೂ ವಿಷ್ಣುವನ್ನೇ ಹೇಳುತ್ತವೆ ಎಂಬುದಕ್ಕೂ ಪ್ರಮಾಣವಾಗಿ ಅನೇಕ ಶ್ರುತಿಗಳಿವೆ. ಅಸದಾದಿಗಳೂ ಮುಖ್ಯಾರ್ಥದಲ್ಲಿ ವಿಷ್ಣುವನ್ನೇ ಹೇಳುತ್ತವೆ. ಆದ್ದರಿಂದ ವಿಷ್ಣುವೇ ಜಗತ್ಕಾರಣನು.

೫. ಭೋಕ್ತ್ರಧಿಕರಣ (ಬಲೋದ್ಭವವೆಂಬ ಯುಕ್ತಿ)

ಪೂರ್ವಪಕ್ಷ – ಮುಕ್ತನಾದ ಜೀವನಿಗೂ ಈಶ್ವರನಿಗೂ ಐಕ್ಯವನ್ನು ಹೇಳುವ

ಶ್ರುತಿಯಿದೆ. ಈ ಶ್ರುತಿಯ ಬಲದಿಂದ, ಜೀವರಿಗಿಂತ ಅಭಿನ್ನನಾದ ಈಶ್ವರನಲ್ಲಿ ಜಗತ್ಕಾರಣತ್ವ ಕೂಡುವುದಿಲ್ಲ. ಹೀಗೆ ಪೂರ್ವಪಕ್ಷಯುಕ್ತಿಯು ಶ್ರುತಿಬಲೋದ್ಭವು.

ಸಿದ್ಧಾಂತ – ನಿರಂಜನಃ ಪರಮಂ ಸಾಮ್ಯಮುಪೈತಿ ಎಂಬ ಶ್ರುತಿಯಂತೆ ಮುಕ್ತ ಜೀವರಿಗೂ ಪರಮಾತ್ಮನಿಗೂ ಭೇದವೇ ಇದೆಯೆಂದು ಸಿದ್ಧವಾಗಿದೆ. ಪೂರ್ವಪಕ್ಷಿಗಳು ಉದಾಹರಿಸುವ ಪರೇಽವ್ಯಯೇ ಸರ್ವ ಏಕೀಭವಂತಿ ಎಂಬ ಶ್ರುತಿಯಲ್ಲಿ ಒಂದಾದರು ಎಂದರೆ ಒಂದೇ ಸ್ಥಾನವನ್ನು ಹೊಂದಿದರು ಅಥವಾ ಒಂದೇ ಅಭಿಪ್ರಾಯವುಳ್ಳವರಾದರು ಎಂದರ್ಥ. ಈ ಶ್ರುತಿಯಿಂದಲೂ ಜೀವೇಶ್ವರಿಗೆ ಐಕ್ಯವು ಸಿದ್ಧವಾಗುವುದಿಲ್ಲ. ಇಲ್ಲಿ ಸಿದ್ಧಾಂತಯುಕ್ತಿಯೂ ಶ್ರುತಿಬಲೋದ್ಭವವೇ. ಇದು ಪೂರ್ವಪಕ್ಷಯುಕ್ತಿಗಿಂತ ಪ್ರಬಲವು. ಆದ್ದರಿಂದ ವಿಷ್ಣುವೇ ಜಗತ್ಕಾರಣನು.

೬. ಆರಂಭಣಾಧಿಕರಣ (ಸರ್ವಾನುಸಾರವೆಂಬ ಯುಕ್ತಿ)

ಪೂರ್ವಪಕ್ಷ – ಲೋಕದಲ್ಲಿ ಕುಂಬಾರಾದಿಗಳು ಮಡಿಕೆ ಮುಂತಾದವುಗಳನ್ನು ಮಾಡಬೇಕಾದರೆ ಸ್ವತಂತ್ರವಾದ ಮಣ್ಣು ಮುಂತಾದ ಸಾಧನಗಳನ್ನು ಅವಲಂಬಿಸಿಯೇ ಮಾಡುವುದು ಕಂಡಿದೆ. ಹಾಗೆಯೇ ಪರಮಾತ್ಮನಿಂದ ಈ ಲೋಕವು ಸೃಷ್ಟಿಯಾಗಬೇಕಾದರೂ ಪ್ರಕೃತಿ ಇತ್ಯಾದಿ ಸ್ವತಂತ್ರವಾದ ಸಾಧನಗಳು ಅವಲಂಬಿಸಿಯೇ ಆಗಬೇಕು. ಹೀಗೆ ಸಾಧನಾಂತರ ಸಾಪೇಕ್ಷವಿರುವ ಕರ್ತೃವಿನಲ್ಲಿ ಸರ್ವಗುಣತ್ವವು ಅಸಂಭವ. ಆದ್ದರಿಂದ ಪರಮಾತ್ಮನಿಗೂ ಸರ್ವಗುಣತ್ವವಿಲ್ಲ.

ಸಿದ್ಧಾಂತ – ಪರಮಾತ್ಮನು ಸರ್ವೇಶ್ವರ ಸರ್ವಶಕ್ತ ಹಾಗೂ ಎಲ್ಲವೂ ಅವನ ಅಧೀನವೇ ಎಂದು ಶ್ರುತಿಗಳಿಂದ ತಿಳಿಯುತ್ತದೆ. ಪ್ರಕೃತ್ಯಾದಿ ಯಾವ ಸಾಧನವೂ ಸ್ವತಂತ್ರವಲ್ಲ. ವಿಷ್ಣುವೊಬ್ಬನೇ ಸ್ವತಂತ್ರನು. ಆದ್ದರಿಂದ ಅವನಿಗೆ ಸರ್ವಗುಣತ್ವವೂ ಸರ್ವಕರ್ತೃತ್ವವೂ ಕೂಡುವುದು.

೭. ಇತರವ್ಯಪದೇಶಾಧಿಕರಣ (ಲಘುತ್ವವೆಂಬ ಯುಕ್ತಿ)

ಪೂರ್ವಪಕ್ಷ – ನಮ್ಮ ಕಣ್ಣಿಗೆ ಕಾಣುವ ಜೀವನೇ ಕರ್ತೃವೆಂದು ಅಂಗೀಕರಿಸಿದರೆ ಲಾಘವವಿದೆ. ಅದನ್ನು ಬಿಟ್ಟು ಕಾಣದ ಈಶ್ವರನಿಗೆ ಕರ್ತೃತ್ವವನ್ನು ಅಂಗೀಕರಿಸುವುದು ಸರಿಯಲ್ಲ. ಕಲ್ಪನಾಗೌರವದ ಕಾರಣ ಈಶ್ವರನಿಗೆ ಜಗತ್ಕಾರಣತ್ವವು ಕೂಡುವುದಿಲ್ಲ.

ಸಿದ್ಧಾಂತ – ನಾನ್ಯತೋಸ್ತಿ ಕರ್ತಾ ಮುಂತಾದ ಶ್ರುತಿಗಳಿಂದ ಬ್ರಹ್ಮನಿಗೇ ಕರ್ತೃತ್ವವು ಸಿದ್ಧವಾಗಿದೆ. ಜೀವನಿಗೆ ಘಟಾದಿ ಕರ್ತತ್ವವು ಕಂಡಿದ್ದರೂ, ಮಹದಾದಿ ಕರ್ತೃತ್ವವು ಯಾವ ಪ್ರಮಾಣದಿಂದಲೂ ಸಿದ್ಧವಾಗಿಲ್ಲ. ಆದ್ದರಿಂದ ಜೀವನಿಗೆ ಕರ್ತತ್ವವನ್ನಂಗೀಕರಿಸಿದರೆ ಕಲ್ಪನಾಗೌರವ. ಈಶ್ವರನಿಗೆ ಕರ್ತತ್ವವನ್ನು ಒಪ್ಪುವುದು ಲಾಘವ. ಆದ್ದರಿಂದ ಈಶ್ವರನಿಗೆ ಜಗತ್ಕರ್ತೃತ್ವ ಸಿದ್ಧಿಸುವುದು.

೮. ಶಬ್ದಮೂಲತ್ವಾಧಿಕರಣ (ವಿಶೇಷಾದರ್ಶನವೆಂಬ ಯುಕ್ತಿ)

ಪೂರ್ವಪಕ್ಷ – ಜೀವನಿಗೆ ಸ್ವತಂತ್ರವಾದ ಕರ್ತೃತ್ವವಿದ್ದರೆ ಅವನು ತನಗೆ ಯಾವಾಗಲೂ ಹಿತವನ್ನೇ ಮಾಡಿಕೊಳ್ಳಬೇಕು ಮತ್ತು ಎಂದೂ ಅಹಿತವನ್ನು ಮಾಡಿಕೊಳ್ಳಬಾರದು. ಆದರೆ ಇದು ಲೋಕದಲ್ಲಿ ಕಂಡಿಲ್ಲ. ಇದೇ ವಿಶೇಷಾ–ದರ್ಶನವು. ಈ ರೀತಿಯ ದೋಷದಿಂದಾಗಿ ಜೀವನಿಗೆ ಸ್ವತಂತ್ರ ಕರ್ತೃತ್ವವಿಲ್ಲವೆಂದು ಹಿಂದಿನ ಅಧಿಕರಣದಲ್ಲಿ ಸಾಧಿಸಿಲಾಗಿದೆ. ಹೀಗೆ ಜೀವನಲ್ಲಿರುವ ದೋಷವು ಈಶ್ವರನಲ್ಲಿಯೂ ಇರಬಹುದಾದ್ದರಿಂದ ಅವನಿಗೆ ಜಗತ್ಕಾರಣತ್ವವು ಕೂಡುವುದಿಲ್ಲ.

ಸಿದ್ಧಾಂತ – ಪರಮಾತ್ಮನು ವಿಚಿತ್ರಶಕ್ತಿವಂತನು, ಸರ್ವಶಕ್ತನು ಇತ್ಯಾದಿ ಶ್ರುತಿಗಳಿಂದ ಸಿದ್ಧವಾಗಿರುವುದರಿಂದ ಅವನಲ್ಲಿ ಹಿತಾಕರಣಾದಿ ದೋಷಗಳ ಪ್ರಸಕ್ತಿ ಇಲ್ಲ. ಆದರೆ ಜೀವನು ಸರ್ವಶಕ್ತನೆಂದು ಹೇಳುವ ಯಾವ ಶ್ರುತಿಯೂ ಇಲ್ಲವಾದ್ದರಿಂದ, ಅವನಿಗೆ ದೋಷಗಳು ಬರುತ್ತವೆ. ಆದ್ದರಿಂದ ಈಶ್ವರನೇ ಜಗತ್ಕಾರಣನು.

೯. ನ ಪ್ರಯೋಜನಾಧಿಕರಣ (ಅಫಲವೆಂಬ ಯುಕ್ತಿ)

ಪೂರ್ವಪಕ್ಷ – ಈಶ್ವರನಿಗೆ ಸೃಷ್ಟ್ಯಾದಿಗಳಿಂದ ಪ್ರಯೋಜನವಿದ್ದರೆ ಅವನು ಅದಕ್ಕೆ ಮುಂಚೆ ಅಪೂರ್ಣನೆನಿಸುವನು. ಪ್ರಯೋಜನವಿಲ್ಲದಿದ್ದರೆ ಪ್ರವೃತ್ತಿಯೇ ಕೂಡುವುದಿಲ್ಲ. ಹೀಗೆ ಎರಡೂ ಪಕ್ಷಗಳಲ್ಲೂ ದೋಷವಿದೆ. ಆದ್ದರಿಂದ ಈಶ್ವರನು ಜಗತ್ಕಾರಣನಲ್ಲ.

ಸಿದ್ಧಾಂತ – ಅಥೈಷ ಏವ ಪರಮ ಆನಂದಃ (ಈ ವಿಷ್ಣುವು ಸಂಪೂರ್ಣವಾದ ಆನಂದವುಳ್ಳವನು) ಎಂಬ ಶ್ರುತಿಯಂತೆ ಪರಮಾತ್ಮನು ಗುಣಪರಿಪೂರ್ಣನು. ಅವನಿಗೆ ಸೃಷ್ಟಿಯಿಂದ ಯಾವುದೇ ಫಲಾಪೇಕ್ಷೆಯಿಲ್ಲ. ಫಲಾಪೇಕ್ಷೆಯುಳ್ಳವನಿಗೆ ಸರ್ವಕರ್ತತ್ವಾದಿ ಶಕ್ತಿಯು ಕಂಡಿಲ್ಲ. ಆದ್ದರಿಂದ ಫಲಾಪೇಕ್ಷೆಯಿಲ್ಲದ ಪರಮಾತ್ಮನು ಸರ್ವಕರ್ತನಾಗಿದ್ದಾನೆ. ಅವನ ಸೃಷ್ಟಿಯು ಕೇವಲ ಲೀಲಾರೂಪವಾದುದು. ಫಲವಿಲ್ಲ ಎಂಬ ಯುಕ್ತಿಯಿಂದಲೇ ಪರಮಾತ್ಮನು ಜಗತ್ಕಾರಣನೆಂದು ಸಿದ್ಧವಾಗುತ್ತದೆ.

೧೦. ವೈಷಮ್ಯ ನೈರ್ಘೃಣ್ಯಾಧಿಕರಣ (ಇಷ್ಟಾಸಿದ್ಧಿಯೆಂಬ ಯುಕ್ತಿ)

ಪೂರ್ವಪಕ್ಷ – ಈಶ್ವರನು ಸರ್ವಕರ್ತನೆಂದು ಹಿಂದೆ ನಿರ್ಣಯಿಸಲಾಗಿದೆ. ಹಾಗಾದರೆ ಅವನು ಜೀವಾದಿಗಳ ಕರ್ಮವನ್ನು ಅನುಸರಿಸಿ ಅವರಿಗೆ ಸುಖದುಃಖಾದಿಗಳನ್ನು ನೀಡುತ್ತಾನೋ ಅಥವಾ ತನಗೆ ತೋಚಿದಂತೆ ಫಲ ನೀಡುತ್ತಾನೋ ಎಂದು ಕೇಳಿದರೆ, ಮೊದಲನೆಯ ಪಕ್ಷದಲ್ಲಿ ಪರಮಾತ್ಮನ ಸ್ವಾತಂತ್ರ್ಯಕ್ಕೆ ಹಾನಿ. ಸರ್ವಕರ್ತೃತ್ವ ಹೇಳುವ ಶ್ರುತಿಗೆ ವಿರೋಧ. ಎರಡನೆಯ ಪಕ್ಷದಲ್ಲಿ ಜೀವನು ಕರ್ಮಗಳನ್ನು ಮಾಡುವುದೇ ಬೇಕಿಲ್ಲ. ಇದರಿಂದ ಜೀವನಿಗೆ

ಕರ್ಮಗಳನ್ನು ವಿಧಿಸುವ ಶ್ರುತಿಗೆ ವಿರೋಧ. ಹೀಗೆ ಇಷ್ಟವಾದ ಸ್ವಾತಂತ್ರ್ಯದಿಂದ ಸರ್ವಕರ್ತತ್ವದ ಅಸಿದ್ಧಿ.

ಸಿದ್ಧಾಂತ – ಪರಮಾತ್ಮನು ಯಾರನ್ನು ಊರ್ಧ್ವಲೋಕಗಳಿಗೆ ಒಯ್ಯಬೇಕೆಂದು ಬಯಸುತ್ತಾನೋ ಅವನಿಂದ ಸಾಧುಕರ್ಮಗಳನ್ನು ಮಾಡಿಸುತ್ತಾನೆ ಇತ್ಯಾದಿ ಶ್ರುತಿಯಂತೆ ಕರ್ಮಗಳು ಪರಮಾತ್ಮನ ಅಧೀನವಾಗಿವೆ. ಆದರೂ ಆ ಕರ್ಮಗಳ ಅನುಸಾರ ಫಲ ಕೊಡುತ್ತಾನೆ. ಹೀಗೆ ಅಂಗೀಕರಿಸದಿದ್ದರೆ ಇಷ್ಟವಾದ ವೇದಗಳ ಪ್ರಾಮಾಣ್ಯವೇ ಸಿದ್ಧಿಸದು. ಆದ್ದರಿಂದ ಪರಮಾತ್ಮನಿಗೆ ಸರ್ವಕರ್ತತ್ವವು ಸಿದ್ಧಿಸುತ್ತದೆ.

೧೧. ಸರ್ವಧರ್ಮೋಪಪತ್ತ್ಯಧಿಕರಣ (ನಿಯಮವೆಂಬ ಯುಕ್ತಿ)

ಪೂರ್ವಪಕ್ಷ – ಜೀವರಲ್ಲಿ ಯಾರಲ್ಲೂ ಸರ್ವಗುಣಪೂರ್ಣತ್ವವು ಕಂಡಿಲ್ಲ. ಈಶ್ವರನೂ ಜೀವನಂತೆ ಚೇತನ. ಆದ್ದರಿಂದ ಈಶ್ವರನೂ ಜೀವನಂತೆ ಅಪೂರ್ಣನೇ ಆಗಿರಬೇಕು. ಇಲ್ಲಿ ಚೇತನರೆಲ್ಲರೂ ಅಪೂರ್ಣರೆಂಬ ನಿಯಮವೇ ಯುಕ್ತಿ.

ಸಿದ್ಧಾಂತ – ಈಶ್ವರನು ಚೇತನನಾದರೂ, ಜೀವರುಗಳಂತೆ ಅಸ್ವತಂತ್ರನಲ್ಲ. ಪರಮಾತ್ಮನು ಸ್ವತಂತ್ರನೆಂದು ಶ್ರುತಿಗಳು ಹೇಳುತ್ತವೆ. ಸ್ವತಂತ್ರನಾದವನು ಪೂರ್ಣನಾಗಿರಬೇಕೆಂದು ನಿಯಮ. ಆದ್ದರಿಂದ ವಿಷ್ಣುವು ಸರ್ವಗುಣಪೂರ್ಣ.

ಹೀಗೆ ಯಾವುದೇ ಯುಕ್ತಿಗಳಿಂದ ಈಶ್ವರನ ಗುಣಪೂರ್ಣತ್ವಕ್ಕೆ ವಿರೋಧವಿಲ್ಲ ಎಂದು ಈ ಪಾದದಲ್ಲಿ ನಿರ್ಣಯಿಸಲಾಗಿದೆ ಎಂಬುದಾಗಿ ಶ್ರೀಮದಾಚಾರ್ಯರು ಮೇಲಿನ ಶ್ಲೋಕಗಳಿಂದ ಶಿಷ್ಯರ ಬುದ್ಧಿಶಾಣತ್ವಸಿದ್ಧಿಗಾಗಿ ಈ ಪಾದದ ಎಲ್ಲ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳನ್ನು ಸಂಗ್ರಹವಾಗಿ ನೀಡಿದ್ದಾರೆ.

ಸ್ಮೃತ್ಯಧಿಕರಣಮ್

ಹಿಂದಿನ ಅಧ್ಯಾಯದಲ್ಲಿ ಪರಬ್ರಹ್ಮನಾದ ವಿಷ್ಣುವಿಗೆ ಸಕಲ ಜಗಜ್ಜನ್ಮಾದಿಕಾರಣತ್ವ, ಸರ್ವಜ್ಞತ್ವಾದಿ ಸಕಲಗುಣಪೂರ್ಣತ್ವ, ಸಮಸ್ತ ದೋಷದೂರತ್ವ ಮೊದಲಾದವನ್ನು ಪ್ರತಿಪಾದಿಸಿರುವುದು ಪಾಶುಪತಾದಿ ಸ್ಮೃತಿಗಳಿಗೆ ವಿರುದ್ಧವಾದುದರಿಂದ ಕೂಡುವುದಿಲ್ಲ. ಆ ಸ್ಮೃತಿಗಳು ರುದ್ರಾದಿಗಳಿಗೆ ಜಗಜ್ಜನ್ಮಾದಿಕಾರಣತ್ವ ಮುಂತಾದವನ್ನು ಪ್ರತಿಪಾದಿಸುತ್ತವೆ. ಆ ಸ್ಮೃತಿಗಳಿಗೆ ಅನ್ಯಾರ್ಥಕಲ್ಪನೆಗೆ ಅವಕಾಶವಿರುವುದಿಲ್ಲ. ಆದಪ್ರಯುಕ್ತ ರುದ್ರಾದಿಗಳಿಗೆ ಜನ್ಮಾದಿಕಾರಣತ್ವವನ್ನು ಒಪ್ಪದಿದ್ದರೆ ಆ ಸ್ಮೃತಿಗಳಿಗೆ ಅಪ್ರಾಮಾಣ್ಯವು ಬರುವುದು ಎಂದು ಪೂರ್ವಪಕ್ಷ. ಇದು ಸರಿಯಲ್ಲ. ಏಕೆಂದರೆ ಪಂಚರಾತ್ರಾದಿ ಸ್ಮೃತಿಗಳು ವಿಷ್ಣುವಿಗೇ ಜಗಜ್ಜನ್ಮಾದಿಕಾರಣತ್ವವನ್ನು ಪ್ರತಿಪಾದಿಸುತ್ತವೆ. ಆ ಸ್ಮೃತಿಗಳಿಗೆ ಅರ್ಥಾಂತರವನ್ನು ಹೇಳಲು ಬರುವುದಿಲ್ಲವಾದ್ದರಿಂದ ಪಾಶುಪತಾದಿ ಸ್ಮೃತಿಗಳು

ಹೇಳುವಂತೆ ರುದ್ರಾದಿಗಳಿಗೆ ಜಗಜ್ಜನ್ಮಾದಿಕಾರಣತ್ವವನ್ನು ಒಪ್ಪಿದರೆ ಪಂಚರಾತ್ರಾದಿ ಸ್ಮೃತಿಗಳಿಗೆ ಅಪ್ರಾಮಾಣ್ಯರೂಪ ದೋಷವು ಬರುವುದು. ಆದಪ್ರಯುಕ್ತ ವಿಷ್ಣುವಿಗೇ ಜಗಜ್ಜನ್ಮಾದಿಕಾರಣತ್ವವನ್ನು ಒಪ್ಪಬೇಕು ಎಂಬುದು ಸಿದ್ಧಾಂತ.

ಸೂತ್ರ– ಓಂ ಸ್ಮೃತ್ಯನವಕಾಶದೋಷಪ್ರಸಂಗ

ಇತಿ ಚೇನ್ನಾನ್ಯಸ್ಮೃತ್ಯನವಕಾಶದೋಷಪ್ರಸಂಗಾತ್ ಓಂ

ಈ ಸೂತ್ರದ ವ್ಯಾಖ್ಯಾನದಲ್ಲಿ ಮೊದಲಿಗೆ 'ಆಪ್ತೈಃ' ಇತ್ಯಾದಿ ವಾಕ್ಯದಿಂದ ಪೂರ್ವಪಕ್ಷವನ್ನು ಸ್ಪಷ್ಟಪಡಿಸಿ, 'ಇತಿ ಚೇದ್' ಇತ್ಯಾದಿ ವಾಕ್ಯದಿಂದ ಸಿದ್ಧಾಂತವನ್ನು ಸಮರ್ಥಿಸುತ್ತಾರೆ

ಆಪ್ತೈಃ ಪ್ರತ್ಯಕ್ಷತೋ ದೃಷ್ಟ್ವಾ ಪ್ರೋಕ್ತಮರ್ಥಂ ಕಥಂ ಶ್ರುತಿಃ ।

ಪಿಪೀಲಿಕಾಲಿಪಿನಿಭಾ ವಾರಯೇತ್ಸರ್ವಗಾ ಹಿ ತೇ ॥೫॥

ರುದ್ರ, ಕಪಿಲ ಮೊದಲಾದವರಲ್ಲಿ ಆಪ್ತತ್ವವಿದೆ. ಅವರಿಂದ ಪ್ರತ್ಯಕ್ಷವಾಗಿ ಕಂಡು ಹೇಳಲ್ಪಟ್ಟ ಶಿವಾದಿಗಳಿಗೆ ಜಗತ್ಕಾರಣತ್ವಾದಿ ರೂಪವಾದ ಅರ್ಥವನ್ನು, ಪಿಪೀಲಿಕಾ ಲಿಪಿಗೆ ಸಮಾನವಾದ ಶ್ರುತಿಯು ನಿರಾಕರಿಸಲು ಸಾಧ್ಯವಿಲ್ಲ. ಇರುವೆಯು ಮಣ್ಣಿನ ಮೇಲೆ ಹರಿದಾಡಿದಾಗ ಮೂಡುವ ಅಕ್ಷರಗಳು ಪ್ರಮಾಣವಾಗಲು ಸಾಧ್ಯವಿಲ್ಲ. ಏಕೆಂದರೆ ಆ ಅಕ್ಷರಗಳನ್ನು ಇರುವೆಯು ಬುದ್ಧಿಪೂರ್ವಕವಾಗಿ ರಚಿಸಿರುವುದಿಲ್ಲ. ಆದರಂತೆಯೇ ಶ್ರುತಿಯು ಅಪೌರುಷೇಯವಾದ್ದರಿಂದ ಯಾವುದೇ ಪುರುಷನಿಂದ ಬುದ್ಧಿಪೂರ್ವಕವಾಗಿ ರಚಿಸಲ್ಪಟ್ಟಿರುವುದಿಲ್ಲ. ರುದ್ರಾದಿಗಳಾದರೋ ಸರ್ವಜ್ಞರು ಎಂದು ಪ್ರಸಿದ್ಧ. ಆದಪ್ರಯುಕ್ತ ಪಾಶುಪತಾದಿ ಸ್ಮೃತಿಗಳ ಪ್ರಾಮಾಣ್ಯವನ್ನು ಶ್ರುತಿಯು ಹೇಗೆ ತಾನೇ ನಿರಾಕರಿಸೀತು?

ಈ ಪ್ರಕಾರವಾಗಿ ಪೂರ್ವಪಕ್ಷದ ಸೂತ್ರಾಂಶವನ್ನು ಸ್ಪಷ್ಟಪಡಿಸಿ ಈಗ ಸೂತ್ರದ ಸಿದ್ಧಾಂತಾಂಶವನ್ನು ಹೇಳುತ್ತಾರೆ –

ಇತಿ ಚೇದ್ಯದ್ಯಶೇಷಜ್ಞಾ ರುದ್ರಾದ್ಯಾ ಹರಿಪೂರ್ವಕಾಃ ।

ಕಿಂ ನಾಶೇಷವಿದೋ ಮಾನಂ ಹ್ಯುಭಯತ್ರ ಸಮಂ ಭವೇತ್ ॥೬॥

ನ ಚಾಪ್ತಿನಿಶ್ಚಯಸ್ತತ್ರ ಶಕ್ಯತೇ ವ್ಯಭಿಚಾರತಃ ।

ಹೀಗೆ ಹೇಳಿದರೆ ಅದು ಸರಿಯಲ್ಲ. ರುದ್ರಾದಿಗಳು ಸರ್ವಜ್ಞರೂ ಆಪ್ತರೂ ಎಂದಾದರೆ, ಪಂಚರಾತ್ರಾದಿ ಸ್ಮೃತಿಗಳನ್ನು ರಚಿಸಿರುವ ಶ್ರೀಹರಿಯೇ ಮೊದಲಾದವರು ಸರ್ವಜ್ಞರೂ ಆಪ್ತರೂ ಆಗಿರಲು ಸಾಧ್ಯವಿಲ್ಲವೇ?

ಪೂರ್ವಪಕ್ಷಿಗಳು ಯಾವಕಾರಣದಿಂದ ರುದ್ರಾದಿಗಳಿಗೆ ಆಪ್ತತ್ವವನ್ನು ಪ್ರಮಾಣವೆಂದು ಹೇಳುವರೋ ಅದೇ ಕಾರಣದಿಂದಲೇ ಸಿದ್ಧಾಂತಿಗಳೂ ಶ್ರೀಹರಿ ಮನು ಮೊದಲಾದವರಿಗೆ ಆಪ್ತತ್ವವನ್ನು ಪ್ರತಿಪಾದಿಸುವರು. ಈ ರೀತಿ ಎರಡು ಸ್ಮೃತಿಗಳೂ ಪ್ರಾಮಾಣ್ಯ ವಿಷಯದಲ್ಲಿ ಸಮಾನವಾಗುತ್ತವೆ. ಹೀಗಿದ್ದರೂ ಈ ಎರಡು ಸ್ಮೃತಿಗಳಲ್ಲಿ ಯಾವುದು ಮೂಲಪ್ರಮಾಣದಿಂದ ಕೂಡಿದೆಯೋ ಅದಕ್ಕೇ ಪ್ರಾಮಾಣ್ಯವು. ಮೂಲಪ್ರಮಾಣದ ಸಂವಾದವನ್ನು ಹೊಂದಿಲ್ಲದಿರುವ ಸ್ಮೃತಿಯು ಪ್ರಮಾಣವಾಗಲಾರದು. ಪಂಚರಾತ್ರಾದಿ ಸ್ಮೃತಿಗಳನ್ನು ನಿರ್ಮಿಸಿರುವ ನಾರಾಯಣನಲ್ಲಿ ಎಲ್ಲ ಶಾಸ್ತ್ರಕಾರರೂ ಆಪ್ತತ್ವವನ್ನು ಅಂಗೀಕರಿಸಿದ್ದಾರೆ. ಆದರೆ ಶಿವಾದಿಗಳಲ್ಲಿ ಆಪ್ತಿನಿಶ್ಚಯಕ್ಕೆ ಉಪಾಯವಿಲ್ಲ.

ವಿವರಣೆ: 'ನಿತ್ಯಂ ವೃದ್ಧಿಕ್ಷಯಾಪೇತಮ್' ಇತ್ಯಾದಿಯಾಗಿ ಪರಮ ಪುರುಷನಾದ ನಾರಾಯಣನಿಂದ ಇತರರಲ್ಲಿ ಸರ್ವಜ್ಞತ್ವದ ಅಭಾವವನ್ನು ಹೇಳಲಾಗಿದೆ. ಹೀಗೆ ಶಿವಾದಿಗಳಲ್ಲಿ ಸರ್ವಜ್ಞತ್ವಕ್ಕೆ ವ್ಯಭಿಚಾರ ಬರುವುದರಿಂದ ಅವರಿಗೆ ಆಪ್ತತ್ವವನ್ನು ಹೇಳಲಿಕ್ಕೆ ಬರುವುದಿಲ್ಲ. ಅಲ್ಲದೆ ಪಾಶುಪತಾದಿ ಸ್ಮೃತಿಗಳಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೆ ದೃಷ್ಟ ಫಲವು ಕಂಡುಬರುವುದಿಲ್ಲವಾದ್ದರಿಂದ ರುದ್ರಾದಿಗಳಿಗೆ ಆಪ್ತಿನಿಶ್ಚಯಕ್ಕೆ ಭಂಗ ಬರುವುದು. ಆದಪ್ರಯುಕ್ತ ಪಾಶುಪತಾದಿ ಸ್ಮೃತಿಗಳು ಪ್ರಮಾಣವಾಗಲಾರವು.

ಹಾಗಾದರೆ ಕೆಲವು ಕಡೆ ಪಂಚರಾತ್ರಾದಿ ಸ್ಮೃತಿಗಳಲ್ಲಿ ಹೇಳಿದ್ದನ್ನು ಮಾಡಿದರೂ ದೃಷ್ಟಫಲವು ಕಾಣದಿರುವುದರಿಂದ ಅವುಗಳಿಗೂ ಫಲವ್ಯಭಿಚಾರ ಬರುವುದು. ಆದಪ್ರಯುಕ್ತ ಪಂಚರಾತ್ರಾದಿ ಸ್ಮೃತಿಗಳಿಗೂ ಅಪ್ರಾಮಾಣ್ಯ ಬರುವುದರಿಂದ ಅವುಗಳ ವಿರೋಧದಿಂದ ಪಾಶುಪತಾದಿ ಸ್ಮೃತಿಗಳು ಅಪ್ರಮಾಣ ಎಂದು ಹೇಳಕೂಡದು. ಹೀಗೆ ಹೇಳಿದರೆ –

ನ ಚಾಸ್ಯಾ ವ್ಯಭಿಚಾರೇಪಿ ಹೀಯತೇ ಮಾನತಾ ಕ್ವಚಿತ್ ।।೭।।

ನಿರ್ದೋಷವಾಕ್ಯಮೂಲತ್ವಾನ್ನ ಚ ತದ್ಯುಕ್ತಿಮೂಲತಾ ।

ಈ ಪಂಚರಾತ್ರಾದಿ ಸ್ಮೃತಿಗಳಿಗೆ ಕೆಲವು ಕಡೆ ಫಲವ್ಯಭಿಚಾರವಿದ್ದರೂ, ಅವುಗಳ ಪ್ರಾಮಾಣ್ಯಕ್ಕೆ ಭಂಗಬರುವುದಿಲ್ಲ. ಏಕೆಂದರೆ ಅವು ನಿರ್ದೋಷವಾಕ್ಯರೂಪವಾದ ವೇದಗಳನ್ನೇ ಮೂಲವನ್ನಾಗಿ ಹೊಂದಿವೆ. ಅವುಗಳ ಪ್ರಾಮಾಣ್ಯವು ಪಾಶುಪತಾದಿ ಸ್ಮೃತಿಗಳಂತೆ ಫಲಜನಕತ್ವಾದಿರೂಪವಾದ ಯುಕ್ತಿಮೂಲತ್ವವನ್ನು ಹೊಂದಿಲ್ಲ.

ಹಾಗಾದರೆ ಪಂಚರಾತ್ರಾದಿ ಸ್ಮೃತಿಗಳಿಗೆ ಪ್ರಾಮಾಣ್ಯವನ್ನು ಅಂಗೀಕರಿಸುವವರು ಸರ್ವಥಾ ಫಲಜನಕತ್ವಾದಿ ಪ್ರವೃತ್ತಿ ಸಾಮರ್ಥ್ಯವನ್ನು ಅಂಗೀಕರಿಸಬೇಕು. ಫಲವ್ಯಭಿಚಾರಕ್ಕೆ ಕರ್ತೃ–ಕರಣಾದಿಗಳಲ್ಲಿರುವ ವೈಗುಣ್ಯ ಅಥವಾ ದೋಷವೇ

ಕಾರಣವೆಂದು ಒಪ್ಪಬೇಕು. ಇಲ್ಲದಿದ್ದರೆ ಫಲವ್ಯಭಿಚಾರವಾದುದು ಪ್ರಮಾಣವೆಂದರೆ ವ್ಯಾಹತವಾಗುವುದು. ಅಲ್ಲದೇ ಫಲಸಂವಾದದಿಂದ ಸುಲಭವಾಗಿ ಪ್ರಾಮಾಣ್ಯವನ್ನು ನಿಶ್ಚಯಿಸಲು ಬರುವಾಗ, 'ನ ಚ ತದ್ಯುಕ್ತಿಮೂಲತಾ' ಎನ್ನುವುದು ಹೇಗೆ ಕೂಡುವುದು ಎಂದು ಜಿಜ್ಞಾಸೆಗಾಗಿ ಕೇಳಿದರೆ –

ವೇದೋಕ್ತಸ್ಯಾಧಿಕಾರಸ್ಯ ದುರ್ನಿರೂಪತ್ವತಃ ಸದಾ ॥೮॥

ನಿಯಮೋ ವ್ಯಭಿಚಾರೋ ವಾ ನೈವ ಜ್ಞಾತುಂ ಹಿ ಶಕ್ಯತೇ ।

ವೇದೋಕ್ತ ಅಥವಾ ಪಂಚರಾತ್ರಾದಿ ಆಗಮಗಳಲ್ಲಿ ಹೇಳಲ್ಪಟ್ಟ ಅಧಿಕಾರ ಮತ್ತು ಸಾಧನಾನುಷ್ಠಾನಕ್ಕೆ ಉಕ್ತವಾದ ಫಲವು ಸ್ವಾಭಾವಿಕವಾಗಿಯೇ ನಮ್ಮ ಪ್ರತ್ಯಕ್ಷಕ್ಕೆ ವಿಷಯವಲ್ಲವಾದ್ದರಿಂದ, ಫಲವಿಷಯದಲ್ಲಿ ನಿಯಮವಾಗಲೀ ವ್ಯಭಿಚಾರವಾಗಲೀ ತಿಳಿಯಲು ಶಕ್ಯವಿಲ್ಲ. ಆದಪ್ರಯುಕ್ತ ಫಲಸಂವಾದದಿಂದ ಪ್ರಾಮಾಣ್ಯಾದಿಗಳನ್ನು ನಿಶ್ಚಯಿಸುವುದು ಸಾಧ್ಯವಿಲ್ಲ.

ಹಾಗಾದರೆ ಪಂಚರಾತ್ರಾದಿಗಳ ಪ್ರಾಮಾಣ್ಯವನ್ನು ಇಷ್ಟಪಡುವವನು ಫಲ ಕಾಣದಿರುವುದಕ್ಕೆ ಅಧಿಕಾರಾದಿ ವೈಕಲ್ಯವನ್ನು ಕಲ್ಪಿಸುವಂತೆ ನಾನೂ ಕೂಡ ಪಾಶುಪತಾದಿ ಸ್ಮೃತಿಗಳಲ್ಲಿ ಫಲವ್ಯಭಿಚಾರವು ಅಧಿಕಾರಾದಿ ವೈಕಲ್ಯ ನಿಮಿತ್ತಕವೆಂದು ಕಲ್ಪಿಸುತ್ತೇನೆ ಎಂದು ಪೂರ್ವಪಕ್ಷಿಯು ಹೇಳಿದರೆ, ಅದು ಅಯುಕ್ತವೆಂದು ಹೇಳುತ್ತಾರೆ–

ಅಧಿಕಾರೋ ಹಿ ಸುಲಭಃ ಕಥಿತೋಽನ್ಯಾಗಾಮೇಷ್ವಲಮ್ ॥೯॥

ವೇದೋಕ್ತೋ ಹ್ಯಧಿಕಾರಸ್ತು ದುರ್ಲಭಃ ಸರ್ವಮಾನುಷೈಃ ।

ಪಾಶುಪತಾದಿ ಆಗಮಗಳಲ್ಲಿ ಹೇಳಲ್ಪಟ್ಟ ಅಧಿಕಾರವು (ಸಾಧನವೂ ಕೂಡ) ಸುಲಭವಾಗಿ ಅಂದರೆ ಅನಾಯಾಸವಾಗಿ ಸಾಧ್ಯವಾಗುವಂಥಹದು. ವೇದಗಳಲ್ಲಿ ಹೇಳಲ್ಪಟ್ಟ ಅಧಿಕಾರವಾದರೋ ಎಲ್ಲ ಮನುಷ್ಯರಿಂದ ಹೊದಲು ಅಶಕ್ಯವಾಗಿದೆ. ಇದು ಪ್ರಸಿದ್ಧವು. ಆದಪ್ರಯುಕ್ತ ಪಂಚರಾತ್ರಾದಿ ಆಗಮಗಳಲ್ಲಿ ಅಧಿಕಾರ ವೈಕಲ್ಯವನ್ನು ಕಲ್ಪಿಸುವುದು ಅಸಂಭಾವಿತವೇನಲ್ಲ ಎಂದು ಭಾವ.

ಹಾಗಾದರೆ ಬೇರೆ ಆಗಮಗಳಲ್ಲಿ ಅಧಿಕಾರ ಸಾಧನೆಯು ಸುಲಭ ಎಂದು ಹೇಗೆ ಹೇಳುತ್ತೀರಿ ಎಂದು ಕೇಳಿದರೆ –

ಅನ್ಯಾಗಾಮೇಷು ವಿಪ್ರತ್ವಮಪಿ ಚಂಡಾಲಜನ್ಮನಾಮ್ ॥೧೦॥

ಮಂಡಲಾಂತಃಪ್ರವೇಶೇನ ಕ್ರಮಶಃ ಪ್ರತಿಪಾದ್ಯತೇ ।

ಬೇರೆ ಆಗಮಗಳಲ್ಲಿ ಹೇಳಿರುವ ಪ್ರಕಾರ, ಅನೇಕ ಜನ್ಮಗಳ ಮಹಾತಪಸ್ಸು

ಇತ್ಯಾದಿಗಳಿಂದಲೂ ಹೊಂದಲಸಾಧ್ಯವಾದ ಬ್ರಾಹ್ಮಣ್ಯ ಯತಿತ್ವ ಇತ್ಯಾದಿಗಳೂ ಕೂಡ, ಕರ್ಮದಿಂದ ಅಥವಾ ಹುಟ್ಟಿನಿಂದ ಚಂಡಾಲನಾದವನಿಗೂ ಕ್ರಮವಾಗಿ ಮಂಡಲದೊಳಗೆ ಪ್ರವೇಶದಿಂದ ಪ್ರತಿಪಾದಿಸಲ್ಪಡುತ್ತದೆ.

ವಿವರಣೆ: ಯಾವನು ಎಷ್ಟೆಷ್ಟು ಜಾತಿಗಳಿಂದ ವ್ಯವಹಿತನಾಗುತ್ತಾನೋ ಅವನಿಗೆ ಅಷ್ಟು ಮಂಡಲಗಳನ್ನು ಕಲ್ಪಿಸಬೇಕು. ಅವುಗಳಲ್ಲಿ ಯಾವಾವ ಮಂಡಲವನ್ನು ಪ್ರವೇಶಿಸುತ್ತಾನೋ ಆಯಾಯ ಜಾತಿಯವನಾಗುತ್ತಾನೆ. ಕೊನೆಯ ಮಂಡಲವನ್ನು ಪ್ರವೇಶಿಸುವವನು ಬ್ರಾಹ್ಮಣನಾಗುತ್ತಾನೆ. "ದೀಕ್ಷಾ ಪ್ರವೇಶ ಮಾತ್ರೇಣ ಬ್ರಾಹ್ಮಣೋ ಭವತಿ ಕ್ಷಣಾತ್। ಕಾಪಾಲಂ ವ್ರತಮಾಸ್ಥಾಯ ಯತಿರ್ಭವತಿ ಮಾನವಃ॥" ಇವೇ ಮೊದಲಾಗಿ ಬೇರೆ ಆಗಮಗಳಲ್ಲಿ ಹೇಳಿರುವ ಅನುಷ್ಠಾನವು ಸುಲಭಸಾಧ್ಯವಾಗಿದೆ.

ಅಧಿಕಾರ ಸಾಧನಗಳಿಗೆ ಸೌಲಭ್ಯವು ಹೇಳಲ್ಪಟ್ಟಿರುವಂತೆ ಕೆಲವು ಕಡೆಗಳಲ್ಲಿ ದೌರ್ಬಲ್ಯವೂ ಹೇಳಲ್ಪಟ್ಟಿರುವುದರಿಂದ ಬೇರೆ ಆಗಮಗಳಲ್ಲಿ ಪರಸ್ಪರ ವಿರೋಧ ಬರುವುದರಿಂದ ಅವುಗಳಿಗೆ ಅಪ್ರಾಮಾಣ್ಯ ಬರುವುದು ಎನ್ನುತ್ತಾರೆ –

ಅಧಿಕಾರಂ ದುರಾಪಾದ್ಯಮುಕ್ತ್ವಾಽತಿಸುಲಭಂ ಪುನಃ ॥೧೧॥

ಅಶಕ್ಯಂ ಸಾಧನಂ ಚೋಕ್ತ್ವಾ ಸುಶಕಂ ತತ್ಫಲಾಪ್ತಯೇ ।

ಉಚ್ಯತೇಽತಸ್ತದುಕ್ತಂ ಹಿ ವ್ಯಭಿಚಾರಿ ಫಲೇಽಪಿ ತು ॥೧೨॥

ಕಥಂ ಪ್ರಮಾಣತಾಂ ಗಚ್ಛೇತ್.........................।

ಬೇರೆ ಆಗಮಗಳಲ್ಲಿ ಕೆಲವು ಕಡೆಗಳಲ್ಲಿ ಅಧಿಕಾರವನ್ನು ಹೊಂದುವುದು ಅಸಾಧ್ಯವೆಂದು ಹೇಳಿ, ಪುನಃ ಮತ್ತೊಂದು ಕಡೆಯಲ್ಲಿ ಅತಿ ಸುಲಭವಾಗಿ ಸಾಧ್ಯ ಎಂದು ಹೇಳಿರುವುದು ಕಂಡಿದೆ. ಅದರಂತೆಯೇ ಕೆಲವು ಕಡೆಗಳಲ್ಲಿ ಸಾಧನವು ಅಶಕ್ಯವೆಂದು ಹೇಳಿ, ಫಲವಾದರೋ ಸುಲಭಸಾಧ್ಯ ಎಂದು ಹೇಳಲ್ಪಟ್ಟಿದೆ. ಈ ಪ್ರಕಾರವಾಗಿ ಸಾಧನ ಹಾಗೂ ಫಲಗಳ ವಿಷಯದಲ್ಲಿ ವ್ಯಭಿಚಾರವಿರುವುದರಿಂದ ಪಾಶುಪತಾದಿ ಆಗಮಗಳ ವಚನಗಳು ಹೇಗೆ ಪ್ರಾಮಾಣ್ಯವನ್ನು ಹೊಂದುವವು? ಅಂದರೆ ಅವು ಯಾವ ರೀತಿಯಿಂದಲೂ ಪ್ರಮಾಣವಾಗಲಾರವು ಎಂದು ಭಾವ.

ವಿವರಣೆ: ಹೀಗೆ ಸ್ಮೃತಿವಿರೋಧವನ್ನು ಪರಿಹರಿಸಿ, ಈಗ ಯುಕ್ತಿವಿರೋಧವನ್ನು ಪರಿಹರಿಸುತ್ತಾರೆ. ಅದು ಹೇಗೆಂದರೆ – ಶ್ರುತ್ಯಾದಿ ಸಮನ್ವಯದಿಂದ ಬ್ರಹ್ಮನಿಗೆ ಜಗಜ್ಜನ್ಮಾದಿಕಾರಣತ್ವವು ನಿರೂಪಿತವಾಯಿತು. ಆದರೆ ಫಲವ್ಯಭಿಚಾರದ ಕಾರಣ ಶ್ರುತಿಗೆ ಅಪ್ರಾಮಾಣ್ಯ ಬರುವುದು. ಏಕೆಂದರೆ ಪುತ್ರಕಾಮೇಷ್ಟಿ ಇತ್ಯಾದಿಗಳನ್ನು ಮಾಡಿದರೂ ಪುತ್ರೋತ್ಸವಾದಿಗಳು ಆಗದಿರುವುದು ಕಂಡಿದೆ. ಹೀಗಿದ್ದರೂ ಶ್ರುತಿಯನ್ನು ಪ್ರಮಾಣ ಎಂದು ಒಪ್ಪುವುದಾದರೆ ಇದೇ ರೀತಿ ಫಲವ್ಯಭಿಚಾರವನ್ನು

ಹೊಂದಿರುವ ಪಾಶುಪತಾದಿಗಳೂ ಪ್ರಮಾಣವೆಂದು ಒಪ್ಪಬೇಕು. ಶ್ರುತಿಯ ಏಕದೇಶದಲ್ಲಿ ಅಪ್ರಾಮಾಣ್ಯ ಬಂದರೆ ಅದೇ ನ್ಯಾಯದಿಂದ ಬೇರೆ ಕಡೆಗಳಲ್ಲಿಯೂ ಅಪ್ರಾಮಾಣ್ಯ ಬರುವುದು. ಪಿಪೀಲಿಕಾಲಿಪಿಯಂತೆ ಬುದ್ಧಿಪೂರ್ವಕವಲ್ಲದ್ದು ಅಪ್ರಮಾಣ ಎಂದು ಹೇಳಿದರೆ ಅಪೌರುಷೇಯವಾದ ಶ್ರುತಿಯೂ ಬುದ್ಧಿಪೂರ್ವಕ ರಚನೆಯಲ್ಲವಾದ್ದರಿಂದ ಅಪ್ರಮಾಣವೇ ಆಗುವುದು. ಪೌರುಷೇಯವೆಂದು ಹೇಳಿದರೆ ಮೂಲಪ್ರಮಾಣದ ಅಭಾವದಿಂದಾಗಿ ಶ್ರುತಿಯೂ ವಂಚಕನ ವಚನದಂತೆ ಅಪ್ರಮಾಣವಾಗುವುದು. ಶ್ರುತಿಗೆ ಆಪ್ತಿಮೂಲತ್ವದ ಅಭಾವವಿರುವ ಕಾರಣ ಉನ್ಮತ್ತನ ಮಾತಿನಂತೆ ಅಪ್ರಮಾಣವಾಗುವುದು.

ಈ ಪ್ರಕಾರವಾದ ಯುಕ್ತಿಯಿಂದ ವೇದಕ್ಕೆ ಅಪ್ರಾಮಾಣ್ಯ ಶಂಕೆಯು ಉಂಟಾದರೆ ಅದನ್ನು ಮುಂದಿನ ಅಧಿಕರಣದಲ್ಲಿ ಪರಿಹರಿಸುತ್ತಾರೆ –

ನವಿಲಕ್ಷಣತ್ವಾಧಿಕರಣಮ್

ಸೂತ್ರ: ಓಂ ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್ ಓಂ

ಈ ಸೂತ್ರದ ತಾತ್ಪರ್ಯವನ್ನು ಹೇಳುತ್ತಾರೆ –

..................................ನಿತ್ಯತ್ವಾತ್ ಪುರುಷೋದ್ಭವೈಃ ।

ಉಜ್ಝಿತಂ ಸರ್ವದೋಷೈಶ್ಚ ಕಥಂ ನೋ ಮಾನತಾಂ ವ್ರಜೇತ್ ॥೧೩॥

ವೇದವಾಕ್ಯವು ನಿತ್ಯವಾಗಿರುವುದರಿಂದ, ಅಂದರೆ ಅಪೌರುಷೇಯವಾದ್ದರಿಂದ, ಪುರುಷರಿಂದ ಸಂಭವಿಸಬಹುದಾದ ಎಲ್ಲ ದೋಷಗಳಿಂದಲೂ ದೂರವಾಗಿದೆ. ಆದುದರಿಂದ ಹೇಗೆ ತಾನೆ ಪ್ರಾಮಾಣ್ಯವನ್ನು ಹೊಂದಲಾರದು? ಅಂದರೆ ಅದು ಪ್ರಮಾಣವೇ ಆಗುವುದು ಎಂದು ತಾತ್ಪರ್ಯ.

ವಿವರಣೆ: ನಿತ್ಯತ್ವ ಅಪೌರುಷೇಯತ್ವಗಳ ನಿಮಿತ್ತದಿಂದ ವೇದಗಳಿಗೆ ಪ್ರಾಮಾಣ್ಯವು ನಿಶ್ಚಿತವಾದ ಮೇಲೆ, ಫಲವ್ಯಭಿಚಾರ ಮೊದಲಾದ ಕಾರಣಗಳನ್ನು ಮುಂದಿಟ್ಟು ಅಪ್ರಾಮಾಣ್ಯ ಶಂಕಾ ಮಾಡುವುದು ಸರಿಯಲ್ಲ. ಫಲವ್ಯಭಿಚಾರಕ್ಕೆ ಅಧಿಕಾರ, ಸಾಮಗ್ರಿ ಇತ್ಯಾದಿ ಪ್ರತಿಬಂಧಕಗಳಿವೆಯೆಂದು ಕಲ್ಪಿಸಬೇಕು.

ಹಾಗಾದರೆ ನಾವು ವೇದಪ್ರಾಮಾಣ್ಯವನ್ನು ಅಂಗೀಕರಿಸಿದರೂ ವೇದನಿತ್ಯತ್ವವನ್ನು ಒಪ್ಪುವುದಿಲ್ಲ ಎಂದು ಹೇಳಿದರೆ, ಸೂತ್ರದಲ್ಲಿ ಸೂಚಿತವಾದ ಶ್ರುತಿಗಳನ್ನು ಉದಾಹರಿಸುವ ಮೂಲಕ ನಿತ್ಯತ್ವವನ್ನು ಉಪಪಾದಿಸುತ್ತಾರೆ –

ವಿರೂಪನಿತ್ಯಯಾ ವಾಚಾ ನಿತ್ಯಯಾऽನಿತ್ಯಯಾ ಸದಾ ।

ಇತ್ಯಾದಿಶ್ರುತಿಭಿರ್ವೇದೋ ನಿತ್ಯ ಇತ್ಯವಗಮ್ಯತೇ ॥೧೪॥

ವಿರೂಪನಾಮಕ ಋಷಿಯೇ, ನಿತ್ಯವಾದ ವೇದವಚನದಿಂದ, ಯಾವಾಗಲೂ ಇರತಕ್ಕ ನಿತ್ಯವಾದ ಶ್ರುತಿಯಿಂದಲೂ ಅನಿತ್ಯವಾದ ಸ್ಮೃತಿಯಿಂದಲೂ ಸರ್ವೋತ್ತಮನಾದ ಭಗವಂತನನ್ನು ಸ್ತುತಿಸುತ್ತೇನೆ – ಇತ್ಯಾದಿ ಶ್ರುತಿಗಳಿಂದ ವೇದವು ನಿತ್ಯವೆಂದು (ಅಪೌರುಷೇಯವೆಂದು) ತಿಳಿಯಲ್ಪಡುತ್ತದೆ.

ವಿವರಣೆ: 'ವಿರೂಪನಿತ್ಯಯಾ ವಾಚಾ' ಎನ್ನುವುದರಿಂದ 'ತಸ್ಮೈ ನೂನಮಭಿದ್ಯವೇ ವಾಚಾ ವಿರೂಪನಿತ್ಯಯಾ। ವೃಷ್ಣೇ ಚೋದಸ್ವ ಸುಷ್ಟುತಿಮ್' ಎನ್ನುವ ಶ್ರುತಿಯನ್ನು ತೆಗೆದುಕೊಳ್ಳಬೇಕು. 'ನಿತ್ಯಯಾಽನಿತ್ಯಯಾ' ಎನ್ನುವುದರಿಂದ 'ನಿತ್ಯಯ್ಯಾಽನಿತ್ಯಯಾ ವಾವ ಸ್ತೌಮಿ ಬ್ರಹ್ಮ ತತ್ಪರಮಂ ಪದಮ್' ಎನ್ನುವ ಶ್ರುತಿಯನ್ನು ಹಾಗೂ 'ಶ್ರುತಿರ್ವಾವ ನಿತ್ಯಾಽನಿತ್ಯಾ ವಾವ ಸ್ಮೃತಯೋ ಯಾಶ್ಚಾನ್ಯಾ ವಾಚಃ' ಎನ್ನುವ ಶ್ರುತಿಯನ್ನೂ ತೆಗೆದುಕೊಳ್ಳಬೇಕು. 'ಋಚಃ ಸಾಮಾನಿ ಜಜ್ಞಿರೇ' 'ಋಗ್ವೇದ ಏವಾಗ್ನೇರಜಾಯತ' ಇತ್ಯಾದಿ ವಾಕ್ಯಗಳಿಗೆ ಆ ಶ್ರುತಿಗಳು ಪುರುಷರಿಂದ ಹುಟ್ಟಿದವು ಎಂದು ಅರ್ಥ ಮಾಡಬಾರದು. ಹೀಗೆ ಮಾಡಿದರೆ ಅಪೌರುಷೇಯತ್ವ ಪ್ರತಿಪಾದಿಸುವ ಪ್ರಬಲ ಶ್ರುತಿಗಳಿಗೆ ವಿರೋಧ ಬರುವುದು. ಆ ಶ್ರುತಿಗಳು ಆಯಾಯ ಪುರುಷರಿಂದ ಪ್ರವರ್ತಿತವಾದವು ಎಂದು ಅರ್ಥಮಾಡಬೇಕು.

ಪಿಪೀಲಿಕಾಲಿಪಿಯಂತೆ ಶ್ರುತಿಯು ಅಬುದ್ಧಿಪೂರ್ವಕ ಎಂಬ ಕಾರಣ ನೀಡಿ, ಈ ಹಿಂದೆ ಶ್ರುತಿಗೆ ಅಪ್ರಮಾಣ್ಯ ಶಂಕೆಯನ್ನು ಮಾಡಿದ್ದನ್ನು ಈಗ ನಿರಾಕರಿಸುತ್ತಾರೆ –

ಪಿಪೀಲಿಕಾಲಿಪಿಶ್ಚಾಪಿ ಪ್ರಮಾಣಮವಿರೋಧತಃ ।

ವಿರೋಧವಿಲ್ಲದಿದ್ದರೆ ಪಿಪೀಲಿಕಾಲಿಪಿಯೂ ಪ್ರಮಾಣವೇ ಆಗುವುದು.

ವಿವರಣೆ: ಬುದ್ಧಿಪೂರ್ವಕವಲ್ಲ ಎಂಬ ಕಾರಣದಿಂದಲೇ ಯಾವುದೇ ಒಂದು ವಾಕ್ಯವು ಅಪ್ರಮಾಣವಾಗಲಾರದು. ಅದು ಯಥಾರ್ಥವಾದ ವಿಷಯಕ್ಕೆ ವಿರುದ್ಧವಾಗಿರಬಾರದು ಎನ್ನುವುದೇ ಪ್ರಾಮಾಣ್ಯ ನಿಶ್ಚಯಕ್ಕೆ ಮುಖ್ಯವಾದ ಹೇತು. ಆದಕಾರಣ ದೃಷ್ಟಾಂತಕ್ಕೆ ಸಾಧ್ಯವೈಕಲ್ಯ ಎನ್ನುವ ದೋಷ ಬರುವುದರಿಂದ, 'ವೇದಃ ಅಪ್ರಮಾಣಂ ಅಬುದ್ಧಿಪೂರ್ವಕತ್ವಾತ್ ಪಿಪೀಲಿಕಾಲಿಪಿವತ್' ಎನ್ನುವುದು ದುಷ್ಟಾನುಮಾನ ಎನಿಸುವುದು.

ಹಾಗಾದರೆ ಅಬುದ್ಧಿಪೂರ್ವಕತ್ವ ಹೇತುವಿನಿಂದ ನಾವು ಶ್ರುತಿಗೆ ಅಪ್ರಮಾಣ್ಯವನ್ನು ಅನುಮೇಯಿಸುವುದಿಲ್ಲ. ಪಿಪೀಲಿಕಾಲಿಪಿಯಂತೆ ಅಬುದ್ಧಿ ಪೂರ್ವಕವಾದುದರಿಂದ ಶ್ರುತಿಯು ಯಥಾರ್ಥಜ್ಞಾನಸಾಧನವಲ್ಲ. ಆದಪ್ರಯುಕ್ತ ಅದು ಅಪ್ರಮಾಣ ಎಂದು ಹೇಳಿದರೆ –

ಯಥಾ ದ್ರೌಣೇರುಲೂಕೇನ ಕೃತಮಪ್ಯಾಸ ಬೋಧಕಮ್ ॥೧೫॥

ಅವಿರುದ್ಧಂ ವಿರುದ್ಧಂ ತು ವಿರೋಧಾದೇವ ಬಾಧಿತಮ್ ।

ಮಹಾಭಾರತದಲ್ಲಿನ ಅಶ್ವತ್ಥಾಮನಿಗೆ ಸಂಬಂಧಿಸಿದ ಒಂದು ಪ್ರಸಂಗವನ್ನು ಇಲ್ಲಿ ಉದಾಹರಿಸುತ್ತಾರೆ. ದುರ್ಯೋಧನನ ಆಶೆಯಂತೆ ದ್ರೌಪದಿಯ ಐವರು ಮಕ್ಕಳನ್ನು ಸಂಹರಿಸುವ ಯೋಜನೆಯನ್ನು ಚಿಂತಿಸುತ್ತ ಮರದ ಕೆಳಗೆ ಕುಳಿತಿದ್ದ ಅಶ್ವತ್ಥಾಮನಿಗೆ ಒಂದು ಗೂಬೆಯು ಕಾಗೆಗಳನ್ನು ಸಂಹರಿಸುವ ತಂತ್ರವನ್ನು ನೋಡಿ ಜ್ಞಾನೋದಯವಾಯಿತಂತೆ. ರಾತ್ರಿ ವೇಳೆಯಲ್ಲಿ ಮಲಗಿದ್ದ ಅನೇಕ ಕಾಗೆಗಳನ್ನು ಒಂದೇ ಗೂಬೆಯು ಕೊಂದುಹಾಕಿದ್ದನ್ನು ನೋಡಿ ಅಶ್ವತ್ಥಾಮನಿಗೂ ನಾನೂ ಹೀಗೆಯೇ ಮಾಡಬಹುದು ಎಂದು ಪ್ರಚೋದನೆಯಾಯಿತು. ಗೂಬೆಯು ಅಶ್ವತ್ಥಾಮನಿಗೆ ತಿಳುವಳಿಕೆ ಕೊಡಬೇಕೆಂದು ಬುದ್ಧಿಪೂರ್ವಕವಾಗಿ ಹಾಗೆ ಮಾಡಲಿಲ್ಲವಾದರೂ ಅದು ಅಶ್ವತ್ಥಾಮನಿಗೆ ಯಥಾರ್ಥಜ್ಞಾನಕ್ಕೆ ಸಾಧನವಾಯಿತು. ಹಾಗೆಯೇ ಶ್ರುತಿಯೂ ಕೂಡ ಬುದ್ಧಿಪೂರ್ವಕವಾಗದಿದ್ದರೂ ಯಥಾರ್ಥಜ್ಞಾನಕ್ಕೆ ಸಾಧನವಾಗುವುದು. ಹಾಗಾದರೆ ಉನ್ಮತ್ತವಾಕ್ಯದಂತೆ ಪ್ರಮಾಣವಿರುದ್ಧವಾದ್ದರಿಂದ ಶ್ರುತಿಯು ಅಪ್ರಮಾಣವಾಗುವುದು ಎಂದು ಹೇಳುತ್ತೇವೆ ಎಂದರೆ ಅದೂ ಸರಿಯಲ್ಲ. ಉನ್ಮತ್ತವಾಕ್ಯವೂ ಕೂಡ ಪ್ರಮಾಣಕ್ಕೆ ವಿರುದ್ಧವೆಂಬ ಕಾರಣದಿಂದಲೇ ಅಪ್ರಮಾಣವಾಗುವುದೇ ಹೊರತು ಅದು ಕೇವಲ ಉನ್ಮತ್ತವಾಕ್ಯ ಎಂಬ ಕಾರಣದಿಂದಲ್ಲ.

ವಿರೋಧಾದರ್ಶನಾತ್ತಸ್ಮಾದ್ವೇದಪ್ರಾಮಾಣ್ಯಮಿಷ್ಯತೇ ॥೧೬॥

ತನ್ಮೂಲತ್ವಾತ್ಸ್ಮೃತೀನಾಂ ತು ವಿರೋಧೋ ಯತ್ರ ನ ಕ್ವಚಿತ್ ।

ಯಥಾರ್ಥಜ್ಞಾನವನ್ನು ಹುಟ್ಟಿಸುವ ವಿಷಯದಲ್ಲಿ ವಿರೋಧ ಕಂಡುಬರುವುದಿಲ್ಲ ಎನ್ನುವ ನಿಮಿತ್ತದಿಂದಲೇ ಶ್ರುತಿಗೆ ಪ್ರಾಮಾಣ್ಯವು ನಿಶ್ಚಯಿಸಲ್ಪಡುತ್ತದೆ. ಪಂಚರಾತ್ರಾದಿ ಸ್ಮೃತಿಗಳಿಗಾದರೋ ವೇದಮೂಲತ್ವದಿಂದ ಪ್ರಾಮಾಣ್ಯವು ಅಂಗೀಕರಿಸಲ್ಪಡುವುದು. ಯಾವ ವಿಷಯದಲ್ಲಿ ಯಾವ ಸ್ಮೃತಿಗಳಿಗೆ ಸರ್ವಥಾ ಪ್ರಮಾಣವಿರೋಧವಿಲ್ಲವೋ ಅವುಗಳಿಗೆ ಆ ವಿಷಯದಲ್ಲಿ ಪ್ರಾಮಾಣ್ಯವು ಅಂಗೀಕರಿಸಲ್ಪಡುವುದು.

ಪ್ರಮಾಣವಿರೋಧವು ಇಲ್ಲದಿರುವದರಿಂದ ಶ್ರುತಿಸ್ಮೃತಿಗಳು ಪ್ರಮಾಣ ಎಂದು ಹೇಳುವುದು ಅಯುಕ್ತ. ಏಕೆಂದರೆ ಶ್ರುತ್ಯಾದಿಗಳಲ್ಲಿ ಹೇಳಲ್ಪಟ್ಟ ಈಶ್ವರನ ಸರ್ವಜ್ಞತ್ವಾದಿಗಳಿಗೆ 'ಈಶ್ವರೋ ನ ಸರ್ವಜ್ಞಃ ಪುರುಷತ್ವಾತ್ ಯಜ್ಞದತ್ತವತ್' ಇತ್ಯಾದಿ ಅನುಮಾನದಿಂದ ವಿರೋಧವಿದೆ ಎಂದು ಹೇಳಿದರೆ –

ವಿರೋಧೋಽಪಿ ಸ ಏವೋಕ್ತಃ ಪ್ರತ್ಯಕ್ಷೇಣಾಗಮೇನ ವಾ ॥೧೭॥

'ವಿರೋಧಾದೇವ ಬಾಧಿತಂ' ಎಂದು ಅಪ್ರಮಾಣ್ಯಸಾಧಕವಾಗಿ ನಾವು ಹಿಂದೆ

ಹೇಳಿದ ವಿರೋಧವೂ ಕೂಡ ಪ್ರತ್ಯಕ್ಷ ಅಥವಾ ಆಗಮಗಳಿಂದಲೇ ಹೊರತು, ಅನುಮಾನದಿಂದಲ್ಲ.

ಹಾಗಾದರೆ ಮೀಮಾಂಸೆಯು ಯುಕ್ತ್ಯನುಸಂಧಾನಾತ್ಮಕವೇ ಆಗಿರುವುದರಿಂದ ಯುಕ್ತಿಯ ಸಹಕಾರವಿಲ್ಲದೆ ವೇದಾರ್ಥವಿಚಾರಕ್ಕೆ ಆರಂಭಣವೇ ಕೂಡುವುದಿಲ್ಲ ಎಂದು ಆಶಂಕಿಸಿದರೆ –

ಆಗಮೇನಾಗಮಸ್ಯೈವ ವಿರೋಧೇ ಯುಕ್ತಿರಿಷ್ಯತೇ ।

ಒಂದು ಆಗಮಕ್ಕೆ ಮತ್ತೊಂದು ಆಗಮದಿಂದ ವಿರೋಧವು ಕಂಡುಬಂದಾಗ ಮಾತ್ರ ವೇದಾರ್ಥನಿರ್ಣಯಕ್ಕಾಗಿ ಅನುಮಾನವು ಗ್ರಹಿಸಲ್ಪಡುತ್ತದೆ.

ಪ್ರತ್ಯಕ್ಷ ಆಗಮಗಳ ವಿರೋಧವೂ ಕೂಡ ಸ್ವರೂಪತಃ ಅಪ್ರಾಮಾಣ್ಯ ಸಾಧಕಗಳಲ್ಲ. ಉಪಜೀವ್ಯತ್ವಾದಿಗಳಿಂದ ಪ್ರಾಬಲ್ಯವಿದ್ದರೆ ಮಾತ್ರ ಪ್ರತ್ಯಕ್ಷಾದಿ ವಿರೋಧವು ಅಪ್ರಮಾಣ್ಯ ನಿಶ್ಚಯಕ್ಕೆ ಪ್ರಯೋಜಕವಾಗುತ್ತವೆ. ದುರ್ಬಲಗಳಾದರೆ ಸ್ವಯಂ ಬಾಧಿತವಾಗುತ್ತವೆ. ಸಮಬಲವುಳ್ಳವು ಪ್ರತಿಬಂಧವನ್ನು ಮಾತ್ರ ಮಾಡುವುದರಿಂದ ಅವು ಅಪ್ರಮಾಣ್ಯ ನಿಶ್ಚಯಕ್ಕೆ ಕಾರಣವಾಗಲಾರವು. ಹೀಗೆ ಉಪಜೀವ್ಯಾದಿಗಳ ವಿರೋಧದಿಂದ ವೇದಕ್ಕೆ ಅಪ್ರಾಮಾಣ್ಯ ಬರಬಹುದಾದರೂ, ಅದು ಸರ್ವಥಾ ಅಯಥಾರ್ಥತ್ವ ರೂಪವಲ್ಲ. ಅಪೌರುಷೇಯವಾದುದರಿಂದ ವೇದವು ನಿರ್ದೋಷತ್ವವನ್ನು ಹೊಂದಿದೆ. ಆದ್ದರಿಂದ ವೇದಕ್ಕೆ ಸರ್ವಥಾ ಅಪ್ರಾಮಾಣ್ಯವು ಕೂಡುವುದಿಲ್ಲ. ಆದಪ್ರಯುಕ್ತ ಆಗಮಗಳ ಪರಸ್ಪರ ವಿರೋಧ ಪರಿಹರಿಸಲು ಅನ್ಯಾರ್ಥವನ್ನು ಅವಶ್ಯವಾಗಿ ಕಲ್ಪಿಸಬೇಕು ಎಂದು ಹೇಳುತ್ತಾರೆ –

ಉಪಜೀವ್ಯವಿರೋಧೇ ತು ವೇದಸ್ಯಾನ್ಯಾರ್ಥಕಲ್ಪನಾ ॥೧೮॥

ಪ್ರತ್ಯಕ್ಷಮುಪಜೀವ್ಯಂ ಸ್ಯಾತ್ಪ್ರಾಯೋ ಯುಕ್ತಿರಪಿ ಕ್ವಚಿತ್ ।

ಆಗಮೈಕಪ್ರಮಾಣೇಷು ತಸ್ಯೈವ ಹ್ಯುಪಜೀವ್ಯತಾ ॥೧೯॥

ವೇದಕ್ಕೆ ಉಪಜೀವ್ಯ, ನಿರವಕಾಶತ್ವ ಇತ್ಯಾದಿಗಳ ವಿರೋಧವಿದ್ದಾಗ ಅನ್ಯಾರ್ಥ ಕಲ್ಪನೆ ಮಾಡಬೇಕು. ಲೌಕಿಕ ವಿಷಯಗಳಲ್ಲಿ ಹೆಚ್ಚು ಸಂದರ್ಭಗಳಲ್ಲಿ ಪ್ರತ್ಯಕ್ಷವೇ ಉಪಜೀವ್ಯ, ಕೆಲವು ಕಡೆಗಳಲ್ಲಿ ಯುಕ್ತಿಯೂ ಕೂಡ ಉಪಜೀವ್ಯವಾಗಬಹುದು. ಅಂಥಹ ಸಂದಂರ್ಭಗಳಲ್ಲಿ ಪ್ರತ್ಯಕ್ಷಾದಿಗಳಿಂದ ಸಿದ್ಧವಾದ ಪದಾರ್ಥಕ್ಕಿಂತ ಬೇರೆ ರೀತಿಯಾಗಿ ಹೇಳತಕ್ಕ ಶ್ರುತಿಗೆ ಅನ್ಯಾರ್ಥವನ್ನು ಮಾಡಬೇಕು. ಆದರೆ ಆಗಮವೊಂದನ್ನೇ ಪ್ರಮಾಣವನ್ನಾಗಿ ಹೊಂದಿರುವ 'ಜನಿತೋತ ವಿಷ್ಣೋಃ' ಇತ್ಯಾದಿ ಭಗವದ್ವಿಷಯಕ ಪ್ರತಿಪಾದಕ ಶ್ರುತಿಗಳಿಗೆ 'ನಿರವಷ್ಠಃ ನಿರವದ್ಯಃ' ಇತ್ಯಾದಿ ವೇದಗಳಿಗೇ ಉಪಜೀವ್ಯತ್ವವು. ಆದಪ್ರಯುಕ್ತ ಆಗಮಸಿದ್ಧಗಳಾದ ವಿಷಯಗಳಿಗೆ

ಅನ್ಯಥಾತ್ವವನ್ನು ಗ್ರಹಿಸತಕ್ಕ ಪ್ರತ್ಯಕ್ಷಾದಿಗಳು ಅಯಥಾರ್ಥಗಳೆಂದು ತಿಳಿಯಬೇಕು.

ಎರಡು ಆಗಮಗಳಿಗೆ ಪರಸ್ಪರ ವಿರೋಧವಿದ್ದ ಪಕ್ಷದಲ್ಲಿ ಮತ್ತೊಂದು ಆಗಮವನ್ನು ಆಶ್ರಯಿಸಿ ಯುಕ್ತಿಯ ಬಲದಿಂದ ವಿಚಾರ ಮಾಡತಕ್ಕದ್ದು ಎಂದು ಹೇಳಿದ್ದು ಅಯುಕ್ತ. ಇದು ಎಲ್ಲ ಕಡೆಗಳಲ್ಲಿಯೂ ಕೂಡುವುದಿಲ್ಲ ಎಂದರೆ –

ಯುಕ್ತೋಽಯುಕ್ತಶ್ಚ ಯದ್ಯರ್ಥ ಆಗಮಸ್ಯ ಪ್ರತೀಯತೇ ।

ಸ್ಯಾತ್ತತ್ರ ಯುಕ್ತಃ ಏವಾರ್ಥೋ..................................॥

ವೇದಕ್ಕೆ ಯುಕ್ತವೂ ಅಯುಕ್ತವೂ ಆದ ಅರ್ಥವು ತೋರುವುದಾದರೆ, ಅಂಥಹ ಕಡೆಗಳಲ್ಲಿ ಯುಕ್ತವಾದ ಅರ್ಥವನ್ನೇ ಗ್ರಹಿಸಬೇಕು. ಅಂದರೆ ಶ್ರುತಿಗೆ ಶ್ರುತ್ಯಂತರದಿಂದ ಅವಿರುದ್ಧವಾದ ಹಾಗೂ ಯುಕ್ತಿಯುಕ್ತವಾದ ಅರ್ಥವನ್ನು ಗ್ರಹಿಸಬೇಕು. ಅಯುಕ್ತವಾದ ಅರ್ಥವನ್ನು ಕೈಬಿಡಬೇಕು.

ಈಗ ಯುಕ್ತಿಯಲ್ಲಿ ಮೂರು ವಿಧಗಳಿವೆಯೆಂದು ತಿಳಿಸುತ್ತಾರೆ –

...................................ಯುಕ್ತಿಶ್ಚ ತ್ರಿವಿಧಾ ಮತಾ ॥೨೦॥

ವ್ಯಾಪ್ತಿಃ ಪ್ರತ್ಯಕ್ಷಗಾ ಯಸ್ಯಾ ಯುಕ್ತಿಗಾऽऽಗಮಗಾ ತಥಾ ।

ಪ್ರತ್ಯಕ್ಷಾಗಮಮೂಲಾ ತು ಯುಕ್ತಿಸ್ತತ್ರ ಬಲೀಯಸೀ ॥೨೧॥

ಯುಕ್ತಿಗೆ ಸಾಧ್ಯದಿಂದ ವ್ಯಾಪ್ತಿಯು ಹೇಗೆ ಗ್ರಹಿಸಲ್ಪಡುತ್ತದೆ ಎನ್ನುವುದನ್ನು ಅವಲಂಬಿಸಿ ಯುಕ್ತಿಯಲ್ಲಿ ಮೂರು ವಿಧ. ವ್ಯಾಪ್ತಿಯು ಪ್ರತ್ಯಕ್ಷದಿಂದ ತಿಳಿಯಲ್ಪಡುವುದು ಒಂದು ಬಗೆಯ ಯುಕ್ತಿ. ವ್ಯಾಪ್ತಿಯು ಯುಕ್ತಿಯಿಂದಲೇ ತಿಳಿಯಲ್ಪಡುವುದು ಎರಡನೆಯ ವಿಧದ ಯುಕ್ತಿ. ವ್ಯಾಪ್ತಿಯು ಆಗಮದಿಂದ ಗ್ರಹಿಸಲ್ಪಟ್ಟರೆ ಅದು ಮೂರನೆಯ ರೀತಿಯ ಯುಕ್ತಿ. ಇವುಗಳಲ್ಲಿ ಪ್ರತ್ಯಕ್ಷ ಅಥವಾ ಆಗಮದಿಂದ ಗೃಹೀತವಾದ ವ್ಯಾಪ್ತಿಯನ್ನು ಹೊಂದಿರುವ ಯುಕ್ತಿಯೇ ಬಲಿಷ್ಠವೆಂದು ತಿಳಿಯಬೇಕು. ಯುಕ್ತಿ ಮೂಲಕವಾದ ಯುಕ್ತಿಯು ಪ್ರತ್ಯಕ್ಷ ಅಥವಾ ಆಗಮವನ್ನೇ ಮೂಲವನ್ನಾಗಿ ಹೊಂದಿರುವ ಯುಕ್ತಿಗಿಂತ ದುರ್ಬಲವು.

ವಿವರಣೆ: ಈ ಪ್ರಕಾರವಾಗಿ ಪ್ರಮಾಣವಿರೋಧದಿಂದಲೇ ಅಪ್ರಾಮಾಣ್ಯದ ನಿಶ್ಚಯವು. ಮೇಲೆ ಹೇಳಿದ ಪ್ರಕಾರ ಪ್ರಮಾಣಗಳಲ್ಲಿ ಕೇವಲ ಮೂರು ವಿಧ ಮಾತ್ರ. ಶ್ರುತಿಗಳಿಗೆ ಈ ಮೂರು ವಿಧ ಪ್ರಮಾಣಗಳ ವಿರೋಧವೂ ಇರುವುದಿಲ್ಲ. ಶ್ರುತಿಗಳಿಗೆ ಬೋಧಕತ್ವ ಇರುವುದರಿಂದ ಅವು ಸ್ವತ ಏವ ಪ್ರಮಾಣವಾಗಿವೆ. ಆದರೆ ಪ್ರಮಾಣ ಅಪ್ರಮಾಣಗಳ ಲಕ್ಷಣವನ್ನೇ ತಿಳಿಯದಿದ್ದವರಿಗೆ ಪ್ರಾಮಾಣ್ಯ ನಿಶ್ಚಯವು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಕೆಲವು ಶ್ಲೋಕಗಳಲ್ಲಿ ಉದ್ದೇಶ – ಲಕ್ಷಣ –

ವಿಭಾಗ – ಪರೀಕ್ಷೆಗಳಿಂದ ಪ್ರಮಾಣಾದಿಗಳ ಸ್ವರೂಪವನ್ನು ನಿರೂಪಿಸುತ್ತಾರೆ. ಈಗಾಗಲೇ ಪ್ರಮಾಣಲಕ್ಷಣ ಮೊದಲಾದ ಗ್ರಂಥಗಳಲ್ಲಿ ಈ ವಿಷಯವನ್ನು ವಿವರವಾಗಿ ಪ್ರಸ್ತಾಪ ಮಾಡಿದ್ದರೂ, ಇಲ್ಲಿ ಪ್ರಸಂಗ ಬಂದಿದ್ದರಿಂದ, ಶಿಷ್ಯರ ಹಿತಕ್ಕಾಗಿ ಭಾಷ್ಯಕಾರರು ಅವುಗಳನ್ನು ಒಗ್ಗೂಡಿಸಿ ಇಲ್ಲಿ ಪುನಃ ನಿರೂಪಣೆ ಮಾಡಿರುತ್ತಾರೆ. ಇದರಿಂದ ವಿಚಾರ–ವಿಮರ್ಶೆಗಳಿಗೆ ಖಚಿತತೆ ಬರುತ್ತದೆ. ಆದ್ದರಿಂದ ಪುನರುಕ್ತಿ ಎಂಬ ದೋಷಕ್ಕೆ ಕಾರಣವಾಗುವುದಿಲ್ಲ.

ಮೊದಲಿಗೆ ಪ್ರಮಾಣದ ಸಾಮಾನ್ಯಲಕ್ಷಣವನ್ನು ನಿರೂಪಿಸುತ್ತಾರೆ –

ಯಾಥಾರ್ಥ್ಯಮೇವ ಮಾನತ್ವಂ ತನ್ಮುಖ್ಯಂ ಜ್ಞಾನಶಬ್ದಯೋಃ ।

ಅರ್ಥತ್ವಮರ್ಯತೈವ ಸ್ಯಾನ್ನ ಕ್ರಿಯಾರ್ಥೇಷು ಸಾ ಮತಾ ।।೨೨।।

ಯಾಥಾರ್ಥ್ಯವೇ ಪ್ರಮಾಣದ ಲಕ್ಷಣ. ವಸ್ತು ಹೇಗಿದೆಯೋ ಹಾಗೆಯೇ ತಿಳಿಸುಕೊಡುವುದೇ ಯಾಥಾರ್ಥತ್ವ. ಅದು ಜ್ಞಾನ ಶಬ್ದಗಳಲ್ಲಿ ಮುಖ್ಯವು. ಕರಣಭೂತಗಳಾದ ಪ್ರತ್ಯಕ್ಷ ಅನುಮಾನಗಳಲ್ಲಿ ಅಮುಖ್ಯವು. ಅರ್ಥ ಶಬ್ದದ ಪ್ರವೃತ್ತಿ ನಿಮಿತ್ತವು ತಿಳಿಯಲ್ಪಡುವಿಕೆಯೇ ಹೊರತು ವಿಷಯತ್ವವಲ್ಲ. ಕ್ರಿಯೆಗೆ ಸಂಬಂಧಿಸಿದ ವಿಷಯಗಳಲ್ಲಿ ಜ್ಞೇಯತ್ವವಿರುವುದಿಲ್ಲ. ಆದುದರಿಂದ ಅದು ಆರ್ಯಸಮ್ಮತವಲ್ಲ. ಜ್ಞೇಯತ್ವವಿಲ್ಲದಿರುವುದರಿಂದಲೇ ಕ್ರಿಯೆಯಲ್ಲಿ ಯಾಥಾರ್ಥ್ಯವಿಲ್ಲ. ಆದ್ದರಿಂದ ಲಕ್ಷಣಕ್ಕೆ ಕ್ರಿಯೆಯಲ್ಲಿ ಅತಿವ್ಯಾಪ್ತಿಯಿರುವುದಿಲ್ಲ.

'ತನ್ಮುಖ್ಯಂ ಜ್ಞಾನಶಬ್ದಯೋಃ' ಎಂದು ಹೇಳಿದ್ದು ಕೂಡುವುದಿಲ್ಲ. ಹಾಗೆ ಒಪ್ಪುವುದಾದರೆ ಜ್ಞಾನದಂತೆ ಶಬ್ದಕ್ಕೂ ಕೇವಲಪ್ರಮಾಣತ್ವವನ್ನು ಒಪ್ಪಬೇಕಾಗುವುದು ಎಂದು ಆಶಂಕಿಸಿದರೆ ಅದನ್ನು ಯುಕ್ತಿಪೂರ್ವಕವಾಗಿ ಪರಿಹರಿಸುತ್ತಾರೆ –

ಜ್ಞಾನಾರ್ಥೇ ಜ್ಞೇಯತಾ ಮುಖ್ಯಾ ಶಬ್ದಾರ್ಥೇ ತದನಂತರಮ್ ।

ಯಥಾರ್ಥಜ್ಞಾನಜನಕಾಃ ಯಥಾರ್ಥಾ ಯುಕ್ತಯಃ ಸ್ಮೃತಾಃ ।।೨೩।।

ಜ್ಞೇಯತ್ವವು ಜ್ಞಾನವಿಷಯದಲ್ಲಿ ಪ್ರಾಥಮಿಕ ಮುಖ್ಯತ್ವವನ್ನೂ, ಶಬ್ದದ ವಿಷಯದಲ್ಲಿ ತದನಂತರದ ಮುಖ್ಯತ್ವವನ್ನೂ ಅಂದರೆ ಅಮುಖ್ಯತ್ವವನ್ನೂ ಹೊಂದಿರುವುದು. ಜ್ಞಾನದಲ್ಲಿಯೇ ಯಾಥಾರ್ಥರೂಪವಾದ ಪ್ರಾಮಾಣ್ಯವು ಮುಖ್ಯ. ಕರಣಗಳಲ್ಲಿ ಅಮುಖ್ಯ. ಕರಣಗಳಲ್ಲಿ ಶಬ್ದಕ್ಕೆ ಪ್ರಾಧಾನ್ಯವಿರುವುದರಿಂದ ಇಲ್ಲಿ ಜ್ಞಾನದೊಂದಿಗೆ ಶಬ್ದವನ್ನೂ ಮುಖ್ಯವೆಂದು ಹೇಳಿದರು. ಯಥಾರ್ಥ ಜ್ಞಾನವನ್ನು ಹುಟ್ಟಿಸುವ ಯುಕ್ತಿಗಳು ಯಥಾರ್ಥ ಯುಕ್ತಿಗಳೆಂದು ಹೇಳಲ್ಪಡುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ, ಯಾಥಾರ್ಥ್ಯವು ಜ್ಞಾನದಲ್ಲಿ ಮುಖ್ಯವಾದರೆ,

ಕರಣಗಳಲ್ಲಾದರೋ ಅಮುಖ್ಯ. ಕರಣಗಳಲ್ಲಿಯೂ ಕೂಡ ಶಬ್ದದಲ್ಲಿ ಮುಖ್ಯ. ಪ್ರತ್ಯಕ್ಷಾನುಮಾನಗಳಲ್ಲಿ ಅಮುಖ್ಯ. ಆದಪ್ರಯುಕ್ತ ಪ್ರಾಮಾಣ್ಯಜನಕತ್ವವು ಜ್ಞಾನಕ್ಕೆ ಮುಖ್ಯವೂ ಪ್ರತ್ಯಕ್ಷಾದಿಗಳಿಗೆ ಅಮುಖ್ಯವೂ ಎಂದು ತಾತ್ಪರ್ಯ.

ಅನುಪ್ರಮಾಣಮೇತಾನಿ ಹ್ಯಕ್ಷಯುಕ್ತಿವಚಾಂಸ್ಯತಃ ।

ಪ್ರಾಮಾಣ್ಯಂ ನಾನುವಾದಸ್ಯ ಸ್ಮೃತೇರಪಿ ವಿಹೀಯತೇ ।।೨೪।।

ಯಾಥಾರ್ಥ್ಯಮೇವ ಪ್ರಾಮಾಣ್ಯಶಬ್ದಾರ್ಥೋ ಯದ್ವಿವಕ್ಷಿತಃ ।

ಜ್ಞಾನವು ಕೇವಲಪ್ರಮಾಣವಾದರೆ ಪ್ರತ್ಯಕ್ಷ ಅನುಮಾನ ಆಗಮಗಳು ಅನುಪ್ರಮಾಣಗಳು. ಯಾಥಾರ್ಥ್ಯವೇ ಪ್ರಮಾಣದ ಮುಖ್ಯಲಕ್ಷಣ. ಆದ್ದರಿಂದ ಯಥಾರ್ಥವಾದ ಅನುವಾದೆ ಹಾಗೂ ಸ್ಮೃತಿಗಳಿಗೂ ಪ್ರಾಮಾಣ್ಯವನ್ನು ಅವಶ್ಯವಾಗಿ ಅಂಗೀಕರಿಸತಕ್ಕದ್ದು.

ಬಾಧಕವಿರುವುದರಿಂದ ಸ್ಮೃತ್ಯಾದಿಗಳಿಗೆ ಪ್ರಮಾಣ್ಯವನ್ನು ಅಂಗೀಕರಿಸುವಂತಿಲ್ಲ ಎಂದು ಹೇಳಿದರೆ –

ಅಂಗೀಕೃತಂ ಚೇತ್ಪ್ರಾಮಾಣ್ಯಂ ಸ್ಮೃತ್ಯಾದೇಃ ಕಾ ವಿರುದ್ಧತಾ ।।೨೫।।

ಸ್ಮೃತಿ ಹಾಗೂ ಅನುವಾದಗಳಿಗೆ ಪ್ರಮಾಣ್ಯವನ್ನು ಅಂಗೀಕರಿಸಿದರೆ ಯಾವ ವಿರೋಧವಿದೆ ಅಥವಾ ಬಾಧಕವಾದರೂ ಏನಿದೆ?

ಫಲವಿಲ್ಲದಿರುವ ಕಾರಣ ಸ್ಮೃತಿ ಅನುವಾದಗಳು ಅಪ್ರಮಾಣವೇ ಆಗುತ್ತವೆ. ಯಾವುದು ಪ್ರಮಾಣವೋ ಆದಕ್ಕೆ ಸಫಲತ್ವವಿರುವುದು ಪ್ರತ್ಯಕ್ಷಾದಿಗಳಂತೆ ಎಂಬ ಬಾಧಕವಿರುವುದರಿಂದ, ಬಾಧಕವಿಲ್ಲ ಎನ್ನುವುದು ಹೇಗೆ ಕೂಡುವುದು ಎಂದರೆ –

ನ ಚಾಫಲತ್ವಂ ವಕ್ತವ್ಯಂ ಸರ್ವಸ್ಮೃತ್ಯನುವಾದಯೋಃ ।

ಫಲವತ್ವಂ ನ ಚಾಸ್ಮಾಭಿಃ ಪ್ರಾಮಾಣ್ಯಂ ಹಿ ವಿವಕ್ಷಿತಮ್ ।।೨೬।।

ಹಾಗೆ ಹೇಳುವುದು ಸರಿಯಲ್ಲ. ಏಕೆಂದರೆ ಕೆಲವು ಸ್ಮೃತಿಗಳಿಗೂ ಕೆಲವು ಅನುವಾದಗಳಿಗೂ ಸಫಲತ್ವವು ಕಂಡಿರುವುದರಿಂದ, ಎಲ್ಲ ಸ್ಮೃತ್ಯನುವಾದಗಳಿಗೂ ನಿಷ್ಫಲತ್ವವನ್ನು ಹೇಳತಕ್ಕದ್ದಲ್ಲ. ನಿಷ್ಫಲತ್ವ ಹೇತುವು ಅಪ್ರಯೋಜಕ. ಫಲವತ್ವವು ಪ್ರಾಮಾಣ್ಯಕ್ಕೆ ದ್ಯೋತಕವೆಂದು ನಾವು ಅಂಗೀಕರಿಸಿರುವುದಿಲ್ಲ. ಯಾಥಾರ್ಥ್ಯದ ಅಭಾವವೇ ಅಪ್ರಾಮಾಣ್ಯ ನಿಶ್ಚಾಯಕವು. ಅಪ್ರಾಮಾಣ್ಯಕ್ಕೆ ಕರಣದೋಷ ಬಾಧಕ ಪ್ರತ್ಯಯಗಳು ಪ್ರಯೋಜಕಗಳೇ ಹೊರತು ನಿಷ್ಫಲತ್ವವಲ್ಲ.

ಕರಣದೋಷ, ಬಾಧಕಪ್ರತ್ಯಯಗಳಂತೆಯೇ ನಿಷ್ಫಲತ್ವವೂ ಅಪ್ರಾಮಾಣ್ಯಕ್ಕೆ

ಪ್ರಯೋಜಕ ಎಂದು ಏಕೆ ಒಪ್ಪಬಾರದು ಎಂದರೆ –

ತೃಣಾದಿದರ್ಶನೇ ಕಿಂ ಚ ಫಲವತ್ತ್ವಂ ನಿಗದ್ಯತೇ ।

ಗ್ರಾಮಕ್ಕೆ ಹೊರಟ ದಾರಿಹೋಕನಿಗೆ ದಾರಿಯಲ್ಲಿ ಹುಲ್ಲು ಮೊದಲಾದವುಗಳ ದರ್ಶನದಿಂದ ಫಲವುಂಟೆಂದು ಹೇಳಲ್ಪಡುವುದೋ ಏನು? ತೃಣಾದಿ ದರ್ಶನವು ನಿಷ್ಫಲವಾದ್ದರಿಂದ ಅಪ್ರಮಾಣ ಎಂದು ಹೇಳುವುದು ಲೋಕದ ವ್ಯವಹಾರಕ್ಕೆ ವಿರುದ್ಧವಾದುದು. ಆದಪ್ರಯುಕ್ತ ನಿಷ್ಫಲತ್ವವು ಅಪ್ರಾಮಾಣ್ಯಕ್ಕೆ ಹೇತುವಲ್ಲ.

ತೃಣಾದಿ ದರ್ಶನದಿಂದಲೂ ಕಿಂಚಿತ್ ಸುಖದುಃಖಾದಿಗಳು ಹುಟ್ಟುವುದರಿಂದ ಅದಕ್ಕೆ ನಿಷ್ಫಲತ್ವವಿರುವುದಿಲ್ಲ ಎಂದು ಹೇಳಿದರೆ –

ಸುಖದುಃಖಾದಿಕಂ ಕಿಂಚಿತ್ಸ್ಮೃತಾವಪಿ ಹಿ ದೃಶ್ಯತೇ ॥೨೭॥

ಸ್ಮೃತ್ಯಾದಿಗಳಲ್ಲೂ ಕಿಂಚಿತ್ ಸುಖದುಃಖಾದಿಗಳು ಕಂಡುಬರುತ್ತವೆಯಷ್ಟೆ. ಆದಪ್ರಯುಕ್ತ 'ಸ್ಮೃತ್ಯಾದಿಗಳು ಅಪ್ರಮಾಣ ನಿಷ್ಫಲತ್ವವಿರುವುದರಿಂದ' ಎನ್ನುವ ಹೇತುವಿಗೆ ಸ್ವರೂಪಾಸಿದ್ಧಿ ಎನ್ನುವ ದೋಷ ಬರುವುದು.

'ಸ್ಮೃತ್ಯಾದಿಕಂ ನ ಪ್ರಮಾಣಂ ಜ್ಞಾತತಾನುತ್ಪಾದಕತ್ವಾತ್ ವ್ಯತಿರೇಕೇಣ ಪ್ರತ್ಯಕ್ಷಾದಿವತ್' ಎನ್ನುವ ಹೇತುವಿನಿಂದ ಸ್ಮೃತಿ ಅನುವಾದಗಳಿಗೆ ಅಪ್ರಾಮಾಣ್ಯ ಬರುವುದು. ಪ್ರತ್ಯಕ್ಷಾದಿಗಳು ಜ್ಞಾತತೆಯನ್ನು ಹುಟ್ಟಿಸುತ್ತವೆಯಾದ್ದರಿಂದ ಪ್ರಮಾಣ. ಅನಧಿಗತಾರ್ಥಗಂತೃತ್ವವೇ ಜ್ಞಾತತಾ. ಅಂದರೆ ಗೊತ್ತಿಲ್ಲದ್ದನ್ನು ತಿಳಿಸಿಕೊಡುವಿಕೆ. ಸ್ಮೃತ್ಯಾದಿಗಳಾದರೋ ಜ್ಞಾತತಾ ಅನುತ್ಪಾದಕವಾದ್ದರಿಂದ ಅಪ್ರಮಾಣ ಎಂದು ಹೇಳುವುದಾದರೆ –

ನ ಪರಿಚ್ಛೇದಕಾರ್ಯೇಣವ ಪ್ರಮಾಣಮಿತಿ ಚ ಪ್ರಮಾ ।

ಜ್ಞಾತತೆಯನ್ನು ಹುಟ್ಟಿಸುವುದೇ ಪ್ರಮಾಣ ಎನ್ನುವುದು ಸರಿಯಲ್ಲ. ಆದ್ದರಿಂದ ಸ್ಮೃತ್ಯಾದಿಗಳು ಜ್ಞಾತತಾ ಅನುತ್ಪಾದಕಗಳಾದ್ದರಿಂದ ಅಪ್ರಮಾಣ ಎಂದು ಹೇಳಿದ್ದು ಕೂಡುವುದಿಲ್ಲ. ಏಕೆಂದರೆ ಜ್ಞಾತತಾ ವಿಷಯದಲ್ಲಿ ಪ್ರಮಾಣವೇ ಇಲ್ಲ. ಅನಧಿಗತಾರ್ಥಗಂತೃತ್ವವೇ ಪ್ರಮಾಣ ಎಂದರೆ, ಹಿಂದೊಮ್ಮೆ ಘಟವನ್ನು ನೋಡಿ ಅದರ ಜ್ಞಾನ ಮಾಡಿಕೊಂಡಮೇಲೆ ಮತ್ತೊಂದು ದಿನ ಅದಕ್ಕೆ ಸದೃಶವಾದ ಧರ್ಮವುಳ್ಳ ವಸ್ತುವನ್ನು ನೋಡಿ ಅದರಂತೆಯೇ ಇದೂ ಒಂದು ಘಟ ಎಂದು ತಿಳಿದರೆ, ಆ ಘಟದ ಜ್ಞಾನವು ಅಪ್ರಮಾಣವಾಗಬೇಕಾಗುವುದು. ಆದಪ್ರಯುಕ್ತ ಪ್ರಾಮಾಣ್ಯವು ಎಲ್ಲಿದೆಯೋ ಅಲ್ಲಿ ಅನಧಿಗತಾರ್ಥಗಂತೃತ್ವವು ಎನ್ನುವ ವ್ಯಾಪ್ತಿಯೇ ಕೂಡುವುದಿಲ್ಲ.

ಈ ಪ್ರಕಾರವಾಗಿ ಪ್ರಮಾಣದ ಸಾಮಾನ್ಯ ಲಕ್ಷಣವನ್ನು ತಿಳಿಸಿಕೊಟ್ಟು, ಅದರ

ವಿಶೇಷ ಲಕ್ಷಣವನ್ನು ತಿಳಿಸಿಕೊಡುವ ಅಪೇಕ್ಷೆಯುಳ್ಳವರಾಗಿ ಮೊದಲಿಗೆ ಪ್ರತ್ಯಕ್ಷದ ಲಕ್ಷಣವನ್ನು ತಿಳಿಸುತ್ತಾರೆ –

ನಿರ್ದೋಷಾಕ್ಷೋದ್ಭವಂ ಹ್ಯತ್ರ ಪ್ರತ್ಯಕ್ಷಮಿತಿ ಗೀಯತೇ ।।೨೮।।

ಪ್ರಾಕೃತಂ ಶುದ್ಧಂ ಚೈತನ್ಯಮಕ್ಷಂ ತು ದ್ವಿವಿಧಂ ಮತಮ್ ।

ಪ್ರಮಾಣಗಳಲ್ಲಿ ಅಜ್ಞಾನ ವಿಪರೀತಜ್ಞಾನ ಮೊದಲಾದವುಗಳಿಗೆ ಕಾರಣವಾಗುವ ದೋಷಗಳಿಂದ ರಹಿತವಾದ ಇಂದ್ರಿಯಗಳಿಂದ ಹುಟ್ಟುವ ಜ್ಞಾನವು ಪ್ರತ್ಯಕ್ಷ ಎಂದು ಪ್ರಸಿದ್ಧಿ ಪಡೆದಿದೆ. ಈ ಪ್ರತ್ಯಕ್ಷದಲ್ಲಿಯೂ ಪ್ರಾಕೃತ ಮತ್ತು ಶುದ್ಧಚೈತನ್ಯ ಎಂಬುದಾಗಿ ಎರಡು ವಿಧವೆಂದು ಪ್ರಮಾಣ ಪ್ರಮಿತವಾಗಿದೆ.

ವಿವರಣೆ: ಇಲ್ಲಿ ಪ್ರಕೃತಿ ಶಬ್ದದಿಂದ ಅಹಂಕಾರ ಹಾಗೂ ಪಂಚಭೂತಗಳು ಹೇಳಲ್ಪಡುತ್ತವೆ. ಇವು ಸೂಕ್ಷ್ಮರೂಪದಿಂದ ನಿತ್ಯವಾಗಿದ್ದರೂ ಸೃಷ್ಟಿಯಲ್ಲಿ ಸ್ಥೂಲರೂಪದಲ್ಲಿ ಉಪಚಯವನ್ನು ಹೊಂದುವುದರಿಂದ ಪ್ರಾಕೃತ ಎನಿಸಿಕೊಳ್ಳುತ್ತವೆ. ಶುದ್ಧ ಎನ್ನುವುದರ ವಿವರಣೆಯೇ ಚೈತನ್ಯ ಎಂದು. ಪ್ರತ್ಯಕ್ಷದಲ್ಲಿ ಎರಡು ವಿಧವೆಂದರೆ ಇಂದ್ರಿಯಗಳಲ್ಲೂ ಎರಡು ವಿಧ ಎಂದ ಹೇಳಿದಂತಾಯಿತು.

ಇಂದ್ರಿಯಗಳಲ್ಲಿ ಎರಡು ವಿಧವೆಂದು ಪ್ರಮಿತವಾಗಿದೆ ಎಂದು ಹೇಳಿದರು. ಅದು ಹೇಗೆ ಎಂಬುದನ್ನು ವಿವರಿಸುತ್ತಾರೆ –

ಶುದ್ಧಮೀಶರಮಾಮುಕ್ತೇಷ್ವನ್ಯತ್ರ ಪ್ರಾಕೃತೈರ್ಯುತಮ್ ।।೨೯।।

ನಿರ್ದೋಷಮೇವ ಚೈತನ್ಯಮನ್ಯತ್ರೋಭಯಮಿಷ್ಯತೇ ।

ಈಶ ರಮಾ ಹಾಗೂ ಮುಕ್ತರಲ್ಲಿರುವ ಇಂದ್ರಿಯವು ಶುದ್ಧ ಚೈತನ್ಯ ಸ್ವರೂಪವೇ ಆಗಿರುವುದು. ಸಂಸಾರಿಗಳಲ್ಲಿ ಪ್ರಾಕೃತ ಮತ್ತು ಶುದ್ಧ ಎಂಬ ಎರಡು ವಿಧ ಇಂದ್ರಿಯಗಳೂ ಇರುತ್ತವೆ. ಉತ್ತಮ ಜೀವರಿಗೆ ಸಂಬಂಧಿಸಿದ ಶುದ್ಧಚೈತನ್ಯ ಸ್ವರೂಪವಾದ ಇಂದ್ರಿಯವು ಯಾವಾಗಲೂ ನಿರ್ದೋಷವೇ ಆಗಿರುವುದು. ಮಧ್ಯಮ ಜೀವರಿಗೆ ಸಂಬಂಧಿಸಿದ ಪ್ರಾಕೃತೇಂದ್ರಿಯದಲ್ಲಿ ಕಾಲಭೇದದಿಂದ ಸದೋಷತ್ವ ಹಾಗೂ ನಿರ್ದೋಷತ್ವ ಎಂಬುದಾಗಿ ಎರಡು ವಿಧ ಇಂದ್ರಿಯಗಳು ಅಂಗೀಕರಿಸಲ್ಪಡುತ್ತವೆ. ಅಧಮ ಜೀವರಿಗೆ ಸಂಬಂಧಿಸಿದ ಇಂದ್ರಿಯವು ಸದಾ ದೋಷಯುಕ್ತವೇ ಆಗಿರುವುದು. ಹೀಗೆ ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುವುದು.

ಯಥಾರ್ಥವಾದ ತತ್ತ್ವಜ್ಞಾನವನ್ನು ಹೊಂದಿರುವ ಸಾತ್ವಿಕರು, ಮಿಶ್ರಜ್ಞಾನವನ್ನು ಹೊಂದಿರುವ ರಾಜಸರು ಹಾಗೂ ಕೇವಲ ಮಿಥ್ಯಾಜ್ಞಾನದಿಂದ ಕೂಡಿರುವ ತಾಮಸರು ಹೀಗೆ ಮೂರು ವಿಧ ಜೀವರ ಬುದ್ಧಿಸ್ವರೂಪವನ್ನು ವಿವರಿಸುವ ಭಗವದ್ಗೀತೆಯ ೧೮ ನೇ ಅಧ್ಯಾಯದ ವಾಕ್ಯವನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಂಸಾರಿಗಳಲ್ಲಿ ಪ್ರವೃತ್ತಿಯು ಸಿದ್ಧಿಸಬೇಕಾದರೆ ಇಂದ್ರಿಯವನ್ನು ಅವಶ್ಯ ಅಂಗೀಕರಿಸಬೇಕು. ಅವರ ಇಂದ್ರಿಯವೂ ಶುದ್ಧವೇ ಆಗಲಿ ಎಂದು ಹೇಳುವುದು ಯುಕ್ತವಲ್ಲ. ಹಾಗಾದರೆ ಸಂಸಾರದಲ್ಲಿಯೂ ನಿಯಮೇನ ಯಥಾರ್ಥಜ್ಞಾನವೇ ಬರಬೇಕಾಗುವುದು. ಆದಪ್ರಯುಕ್ತ ಸಂಸಾರಿಗಳಲ್ಲಿ ಪ್ರಾಕೃತ ಇಂದ್ರಿಯವನ್ನಷ್ಟೇ ಒಪ್ಪಬೇಕು. ಪ್ರಾಕೃತ ಇಂದ್ರಿಯದಿಂದಲೇ ಸರ್ವವೂ ಕೂಡುವಾಗ ಸಂಸಾರಿಗಳಲ್ಲಿ ಶುದ್ಧೇಂದ್ರಿಯವನ್ನು ಅಂಗೀಕರಿಸುವ ಪ್ರಸಕ್ತಿಯೇ ಇರುವುದಿಲ್ಲ. ಮುಕ್ತಾವಸ್ಥೆಯಲ್ಲಿ ಶುದ್ಧೇಂದ್ರಿಯವಿರುವ ಪ್ರಯುಕ್ತ, ಮುಕ್ತಿಗಿಂತ ಮೊದಲು ಸಂಸಾರಾವಸ್ಥೆಯಲ್ಲೂ ಶುದ್ಧೇಂದ್ರಿಯವನ್ನು ಅಂಗೀಕರಿಸುವುದು ಯುಕ್ತವಲ್ಲ. ಆದಪ್ರಯುಕ್ತ ಮುಕ್ತಿಯಂತೆ ಶುದ್ಧೇಂದ್ರಿಯವೂ ಆಮೇಲೆಯೇ ಪ್ರಾಪ್ತವಾಗುವುದೆಂದು ಹೇಳಿದರೆ –

ಸುಖದುಃಖಾದಿ ವಿಷಯಂ ಶುದ್ಧಂ ಸಂಸಾರಗೇಷ್ವಪಿ ।।೩೦।।

ಕೇವಲ ಈಶ ರಮಾ ಮುಕ್ತರಲ್ಲಿ ಮಾತ್ರವಲ್ಲ, ಸಂಸಾರಿಗಳಲ್ಲಿಯೂ ಸುಖ ದುಃಖಾದಿಗಳನ್ನು ವಿಷಯಯೀಕರಿಸುವ ಸಲುವಾಗಿ ಶುದ್ಧವಾದ ಇಂದ್ರಿಯವನ್ನು ಅಂಗೀಕರಿಸಬೇಕು.

ಸಂಸಾರಿಗಳಿಗೆ ಸುಖದುಃಖಾದಿವಿಷಯಕವಾದ ಇಂದ್ರಿಯವನ್ನು ಒಪ್ಪೋಣ. ಆದರೆ ಪ್ರಾಕೃತ ಇಂದ್ರಿಯದಿಂದಲೇ ಸುಖದುಃಖಾದಿಗಳ ಜ್ಞಾನ ಸಾಧ್ಯವಿರುವಾಗ ಅದು ಶುದ್ಧವೆಂದೇ ಏಕೆ ಒಪ್ಪಬೇಕು ಎಂದು ಕೇಳಿದರೆ –

ನಿರ್ದೋಷತ್ವಾತಿನಿಯಮಾತ್ತದ್ಬಲಿಷ್ಠತಮಂ ಮತಮ್ ।

ಸುಖದುಃಖಾದಿ ವಿಷಯಕವಾದ ಇಂದ್ರಿಯವು ಅತ್ಯಂತ ಬಲಿಷ್ಠವಾದ್ದರಿಂದ ಸರ್ವಥಾ ಅಬಾಧ್ಯವೆಂದು ಸರ್ವಸಮ್ಮತವಾಗಿದೆ. ಅತಿಶಯವಾಗಿ ನಿಯಮೇನ ನಿರ್ದೋಷತ್ವವಿದ್ದರೆ ಮಾತ್ರ ಸರ್ವಥಾ ಅಬಾಧ್ಯತ್ವವು ಕೂಡುವುದು. ನಿಯಮೇನ ನಿರ್ದೋಷತ್ವವು ಶುದ್ಧವಾದ ಸಾಕ್ಷೀಂದ್ರಿಯಕ್ಕೇ ಸಂಬಂಧಿಸಿದ ಧರ್ಮ. ಪ್ರಾಕೃತೇಂದ್ರಿಯಕ್ಕೆ ನಿಯಮೇನ ನಿರ್ದೋಷತ್ವವು ಕೂಡುವುದಿಲ್ಲ. ಆದಪ್ರಯುಕ್ತ ಸಂಸಾರಿಗಳಲ್ಲಿಯೂ ಶುದ್ಧೇಂದ್ರಿಯವನ್ನು ಅಂಗೀಕರಿಸಬೇಕು.

ಹಾಗಾದರೆ 'ಶ್ರೋತ್ರಂ ಚಕ್ಷುಃಸ್ಪರ್ಶನಂ ಚ ರಸನಂ ಘ್ರಾಣಮೇವ ಚ। ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ।। ಎಂದು ಗೀತೆಯಲ್ಲಿ (ಅ-೧೫ ಶ್ಲೋ-೯) ಮನಸ್ಸು ಸೇರಿದಂತೆ ಒಟ್ಟು ಆರು ಇಂದ್ರಿಯಗಳೆಂದು ಹೇಳಿರುವುದರಿಂದ ಇಲ್ಲಿ ಪ್ರಾಕೃತ ಮತ್ತು ಶುದ್ಧ ಎಂದು ಎರಡು ವಿಧ ಇಂದ್ರಿಯವೆಂದು ಹೇಳಿದ್ದು ಅಯುಕ್ತ ಎಂದರೆ –

ಪಂಚೇಂದ್ರಿಯಮನೋಭೇದಾತ್ಪ್ರಾಕೃತಂ ಷಡ್ವಿಧಂ ಸ್ಮೃತಮ್ ।।೩೧।।

ಶ್ರೋತ್ರಾದಿ ಐದು ಮತ್ತು ಮನಸ್ಸು ಕೂಡಿಕೊಂಡು ಪ್ರಾಕೃತೇಂದ್ರಿಯವು ಆರು ವಿಧವೆಂದು ಸ್ಮೃತವಾಗಿದೆ.

ವಿವರಣೆ: ಪ್ರಾಕೃತ ಇಂದ್ರಿಯವು ಆರು ವಿಧವೆಂದು ಹೇಳಲ್ಪಟ್ಟಿರುವುದರಿಂದ ಗೀತಾ ವಾಕ್ಯಕ್ಕೆ ವಿರೋಧವಿಲ್ಲ. ಇಲ್ಲಿ ಜ್ಞಾನೇಂದ್ರಿಯವನ್ನು ಮಾತ್ರ ವಿವಕ್ಷಾ ಮಾಡಿಕೊಂಡು ಆರು ವಿಧ ಎಂದು ಹೇಳಲಾಗಿದೆ. ಆದ್ದರಿಂದ ಇದರೊಟ್ಟಿಗೆ ಐದು ಕರ್ಮೇಂದ್ರಿಗಳನ್ನೂ ಸೇರಿಸಿಕೊಂಡು ಹನ್ನೊಂದು ಇಂದ್ರಿಯಗಳು ಎಂದು ಕೆಲವು ಕಡೆ ಉಕ್ತವಾಗಿರುವುದಕ್ಕೆ ವಿರೋಧ ಬರುವುದಿಲ್ಲ. ಬುದ್ಧಿಯನ್ನು ಪ್ರತ್ಯೇಕವಾಗಿ ಪರಿಗಣಿಸಿ ಏಳು ಇಂದ್ರಿಯಗಳೆಂದು ಹೇಳಿದರೆ ಬುದ್ಧಿಯು ಮನಸ್ಸಿನಲ್ಲಿಯೇ ಒಂದು ಪ್ರಭೇದವಾಗಿರುವುದರಿಂದ ವಿರೋಧವಿಲ್ಲ. ಶ್ರೋತ್ರೇಂದ್ರಿಯವು ಭೂತಾಕಾಶದ ಪರಿಣಾಮವೆಂದು ಹೇಳಲ್ಪಟ್ಟಿರುವುದರಿಂದ ಆಕಾಶಾತ್ಮಕವಾದ ಶ್ರೋತ್ರೇಂದ್ರಿಯವು ಪ್ರಾಕೃತೇಂದ್ರಿಯವೇ ಎನಿಸುವುದು. ಶ್ರೋತ್ರೇಂದ್ರಿಯಕ್ಕೆ ಅವ್ಯಾಕೃತಾಕಾಶಾತ್ಮಕವನ್ನು ಅಂಗೀಕರಿಸಿದರೆ ಶಬ್ದವು ಎಲ್ಲ ಕಡೆಗಳಲ್ಲಿಯೂ ತೋರಬೇಕಾಗುವುದು. ಇದು ಅನುಭವಕ್ಕೆ ವಿರೋಧ. ಆದಪ್ರಯುಕ್ತ ಶ್ರೋತ್ರೇಂದ್ರಿಯವು ಪ್ರಾಕೃತವೇ ಎಂದು ಒಪ್ಪಬೇಕು. ಹೀಗೆ ಪ್ರಾಕೃತೇಂದ್ರಿಯದಲ್ಲಿಯೇ ಆರು, ಏಳು, ಹತ್ತು, ಹನ್ನೊಂದು, ಹನ್ನೆರಡು ಎಂಬುದಾಗಿ ನಾನಾ ವಿಧಗಳು ಅವಿರೋಧವಾಗಿಯೇ ಕೂಡುತ್ತವೆ. ಆದ್ದರಿಂದ ಪ್ರಾಕೃತ ಮತ್ತು ಶುದ್ಧ ಎಂಬ ವಿವಕ್ಷೆಯಿಂದ ಎರಡು ವಿಧ ಇಂದ್ರಿಯವೆಂಬ ಮೇಲಿನ ವಚನಕ್ಕೆ ವಿರೋಧ ಬರುವುದಿಲ್ಲ.

ಪ್ರತ್ಯಕ್ಷ ಅನುಮಾನ ಮತ್ತು ಆಗಮ ಎಂಬ ಕ್ರಮದಲ್ಲಿ ಅನುಪ್ರಮಾಣದಲ್ಲಿ ಮೂರು ವಿಧವೆಂದು ಉಕ್ತವಾಗಿದೆ. ಪ್ರತ್ಯಕ್ಷದ ನಿರೂಪಣೆಯ ನಂತರ ಈಗ ಜ್ಞಾನ ರೂಪವಾದ ಕೇವಲಪ್ರಮಾಣಕ್ಕೂ, ಜ್ಞಾನಸಾಧನರೂಪವಾದ ಅನುಪ್ರಮಾಣಕ್ಕೂ ಲಕ್ಷಣವನ್ನು ಹೇಳುತ್ತಾರೆ –

ಅನುಮಾ ಯುಕ್ತಿರೇವೋಕ್ತಾ ವ್ಯಾಪ್ತಿರೇವ ತು ಸಾ ಸ್ಮೃತಾ ।

ಪ್ರತಿಜ್ಞಾತಾರ್ಥಸಿದ್ಧ್ಯರ್ಥಂ ವ್ಯಾಪ್ತಿರೇವ ಯದೋದಿತಾ ।।೩೨।।

ಅವಶಿಷ್ಟಂ ಕಿಮತ್ರಾಸ್ತಿ ಲಿಂಗಂ ತತ್ರ ವಿಜಾನತಃ ।

ಅನುಮಾನವು ಯುಕ್ತಿ ಎನ್ನುವ ಶಬ್ದದಿಂದಲೇ ಹೇಳಲ್ಪಡುತ್ತದೆ. ವ್ಯಾಪ್ತಿ ಸ್ಮರಣ ಯುಕ್ತವಾದ ವ್ಯಾಪ್ಯವೇ ಅನುಮಾನ. ಪ್ರತಿಜ್ಞಾತವಾದ ಅರ್ಥದ ಸಿದ್ಧಿಗಾಗಿ ವ್ಯಾಪ್ತಿಯೇ ಹೇಳಲ್ಪಟ್ಟಾಗ ಆ ವಿಷಯದಲ್ಲಿ ಲಿಂಗ ಅಥವಾ ಹೇತುವನ್ನು ತಿಳಿದವನಿಗೆ ಹೇಳಬೇಕಾದುದು ಇನ್ನೇನೂ ಉಳಿದಿರುವುದಿಲ್ಲ.

ವಿವರಣೆ: 'ವಿಶೇಷೇಣ ಆಪ್ಯತೇ ಇತಿ ವ್ಯಾಪ್ತಿಃ' ಎನ್ನುವ ವ್ಯುತ್ಪತ್ತಿಯಿಂದ, ಸಾಧ್ಯದೊಂದಿಗೆ ಅವ್ಯಭಿಚರಿತ (ಅಂದರೆ ಎಂದಿಗೂ ಬಿಟ್ಟಿರದ) ಸಂಬಂಧವನ್ನು

ಹೊಂದಿರುವುದೇ ವ್ಯಾಪ್ತಿ. 'ಪರ್ವತದಲ್ಲಿ ಬೆಂಕಿಯಿದೆ ಹೊಗೆಯಿರುವುದರಿಂದ ಅಡಿಗೆಮನೆಯಲ್ಲಿರುವಂತೆ' ಎಂಬ ಅನುಮಾನದಲ್ಲಿ, ಪರ್ವತವು ಪಕ್ಷ, ಬೆಂಕಿಯು ಸಾಧ್ಯ, ಹೊಗೆಯಿರುವುದರಿಂದ ಎನ್ನುವುದು ಹೇತು, ಅಡಿಗೆಮನೆಯು ದೃಷ್ಟಾಂತ. 'ಎಲ್ಲಿ ಹೊಗೆಯಿರುವುದೋ ಅಲ್ಲಿ ನಿಯಮೇನ ಬೆಂಕಿ ಇರುವುದು' ಎನ್ನುವುದು ವ್ಯಾಪ್ತಿ. ಬೆಂಕಿಗೂ ಹೊಗೆಗೂ ಇರುವ ವ್ಯಾಪ್ಯ-ವ್ಯಾಪಕ ಸಂಬಂಧವನ್ನು ತಿಳಿದವನಿಗೆ ಮಾತ್ರ ಹೊಗೆಯನ್ನು ನೋಡಿದಾಗ ವ್ಯಾಪ್ತಿಯ ಸ್ಮರಣೆ ಬಂದು ಬೆಂಕಿಯ ಅಸ್ತಿತ್ವದ ಜ್ಞಾನವಾಗುವುದು. ವ್ಯಾಪ್ತಿಜ್ಞಾನವಿಲ್ಲದವನಿಗೆ ಕೇವಲ ಹೊಗೆಯನ್ನು ನೋಡುವುದರಿಂದ ಬೆಂಕಿಯ ಜ್ಞಾನ ಬರುವುದು ಸಾಧ್ಯವಿಲ್ಲ. ಆದಪ್ರಯುಕ್ತ ವ್ಯಾಪ್ತಿಸ್ಮರಣದಿಂದ ಸಹಿತವಾದ ವ್ಯಾಪ್ಯಜ್ಞಾನವೇ ಅನುಮಾನಕ್ಕೆ ಉಪಯುಕ್ತವು.

ಪರಾರ್ಥಾನುಮಾನಕ್ಕೆ (ಅಂದರೆ ಪರರಿಗೆ ಉಪದೇಶಿಸಲು ಪ್ರಯೋಗಿಸುವ ಅನುಮಾನಕ್ಕೆ) ಪ್ರತಿಜ್ಞಾ, ಹೇತು, ದೃಷ್ಟಾಂತ, ಉಪನಯ, ನಿಗಮನ ಎಂಬುದಾಗಿ ಐದು ಅವಯವಗಳು ನಿಯಮೇನ ಅವಶ್ಯ ಎಂದು ಹೇಳಿದರೆ –

ಯದಿ ಲಿಂಗಮಸಿದ್ಧಂ ಸ್ಯಾತ್ಕುತ ಏವಾಸ್ಯ ಮಾನತಾ ।।೩೩।।

ಯದಿ ಸ್ಮಾರಕಮಾತ್ರಂ ಸ್ಯಾತ್ಸ್ಮರ್ತುರ್ನಾತ್ರ ಪ್ರಯೋಜನಮ್ ।

ವಿವಾದಿತ ವಿಷಯದಲ್ಲಿ ಲಿಂಗವೇ ಅಸಿದ್ಧವಾಗಿದ್ದರೆ ಆಗ ಅದಕ್ಕೆ ಪ್ರಾಮಾಣ್ಯವಾದರೂ ಹೇಗೆ ಬಂದೀತು? ಬರುವುದಿಲ್ಲ ಎಂದರ್ಥ. ವ್ಯಾಪ್ತಿಜ್ಞಾನದ ಸ್ಮರಣೆಯನ್ನು ಹುಟ್ಟಿಸುವುದು ಮಾತ್ರ ಹೇತು ದೃಷ್ಟಾಂತಾದಿಗಳಿಗೆ ಪ್ರಯೋಜನ ಎಂದು ಹೇಳಿದರೆ, ಈ ಮೊದಲೇ ವ್ಯಾಪ್ತಿಜ್ಞಾನವನ್ನು ಹೊಂದಿದವನಿಗೆ ಹೇತ್ವಾದಿಗಳನ್ನು ತಿಳಿಸುವ ವಚನಗಳು ವ್ಯರ್ಥವೇ ಆಗುತ್ತವೆ.

ನ ಪಂಚಾವಯವೋಕ್ತೌ ಚ ವಿವಾದಾವಸಿತಿರ್ಭವೇತ್ ।।೩೪।।

ದೃಷ್ಟಾಂತಾದಿಷು ಚೈವಂ ಸ್ಯಾತ್ಸಾಧನಂ ಪುನರೇವ ತು ।

ಲಿಂಗೋಕ್ತಾವಪಿ ಚೈವಂ ಸ್ಯಾದನುಮಾವಸಿತಿರ್ಧ್ರುವಾ ।।೩೫।।

ಐದು ಅವಯವಗಳನ್ನು ಹೇಳಿದರೂ ವಿವಾದವು ಅಂತ್ಯಗೊಂಡು ಸಾಧ್ಯದ ಜ್ಞಾನವು ಆಗದೇ ಹೋಗಬಹುದು. ಸಾಧ್ಯದ ಜ್ಞಾನವಾಗಬೇಕಾದರೆ ಶ್ರೋತೃವಿನ ಜ್ಞಾನದ ಮಟ್ಟಕ್ಕೆ ತಕ್ಕಂತೆ ಎಷ್ಟು ಅವಯವಗಳನ್ನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳಿದರೆ ಸಾಕು. ಕೆಲವರಿಗೆ ಕೇವಲ ದಷ್ಟಾಂತವೊಂದೇ ಸಾಕಾಗಬಹುದು. ಮತ್ತೆ ಕೆಲವರಿಗೆ ಎರಡು, ಮೂರು, ನಾಲ್ಕು ಅಥವಾ ಐದು ಅವಯವಗಳೂ ಅವಶ್ಯವಾಗಬಹುದು. ವ್ಯಾಪ್ತಿಯನ್ನು ಹೇಳುವುದರಿಂದಲೇ ಅನುಮಾನ ಸಂಬಂಧಿಯಾದ ವಾಕ್ಯದ ಪರ್ಯವಸಾನವಾಗುವುದು. ಲಿಂಗದಿಂದಲೂ ವ್ಯಾಪ್ತಿ

ಪಕ್ಷಧರ್ಮತಾಗಳ ಸ್ಮರಣಾದಿಗಳು ಉಂಟಾಗುವುದರಿಂದ, ವ್ಯಾಪ್ತಿಯನ್ನು ಹೇಳಿದರೆ ಹೇಗೋ ಹಾಗೆಯೇ ಲಿಂಗವನ್ನು ಹೇಳಿದರೂ ಅನುಮಾನ ಸಂಬಂಧಿಯಾದ ವಾಕ್ಯದ ಪರ್ಯವಸಾನವು ನಿಶ್ಚಯವಾಗಿ ಆಗುವುದು.

ನಿರ್ದೋಷವಾದ ಯುಕ್ತಿಯೇ ಅನುಮಾನ. ದೋಷದ ಪರಿಜ್ಞಾನವಿದ್ದಾಗ ಮಾತ್ರ ಯುಕ್ತಿಯು ದೋಷರಹಿತವೋ ಅಲ್ಲವೋ ಎಂದು ತಿಳಿಯುವುದು ಸಾಧ್ಯ ಆದಪ್ರಯುಕ್ತ ಮೊದಲಿಗೆ ಯುಕ್ತಿದೋಷಗಳನ್ನು ನಿರೂಪಿಸುವುದು ಅವಶ್ಯಕ. ಧೂಮಾದಿಗಳಿಗೆ ಅಗ್ನ್ಯಾದಿಗಳ ಜ್ಞಾನವನ್ನು ಹುಟ್ಟಿಸುವ ಶಕ್ತಿಯಿದ್ದರೂ, ನಿಶ್ಚಯ ಜ್ಞಾನಕ್ಕೆ ಪ್ರತಿಬಂಧಕವಾದ ದೋಷದಿಂದ ಕೂಡಿದ್ದರೆ, ಸಂಶಯ ವಿಪರ್ಯಯಗಳನ್ನು ಹುಟ್ಟಿಸುತ್ತವೆ. ಯುಕ್ತಿದೋಷಗಳಲ್ಲಿ ಸಾಕ್ಷಾತ್ ಮತ್ತು ವಾಚನಿಕ ಎಂಬುದಾಗಿ ಎರಡು ವಿಧ. ಅದರಲ್ಲಿ ಮೊದಲಿಗೆ ಸಾಕ್ಷಾತ್ ದೋಷವನ್ನು ವಿಭಾಗಮಾಡಿ ಹೇಳುತ್ತಾರೆ –

ವಿರೋಧೋಽಸಂಗತಿಶ್ಚೈವ ಸಾಕ್ಷಾದ್ಯುಕ್ತೇಸ್ತು ದೂಷಣಮ್ ।

ಪ್ರತಿಜ್ಞಾಯಾಮಸಂಬಂಧೋ ಯುಕ್ತೇರುಕ್ತಾ ಹ್ಯಸಂಗತಿಃ ॥೩೬॥

ಸಾಕ್ಷಾತ್ ದೋಷವೆಂದರೆ ವಚನದ ಸಂಪರ್ಕವಿಲ್ಲದೇ ಅರ್ಥದಲ್ಲಿರತಕ್ಕ ದೋಷ. ಇದರಲ್ಲಿ ವಿರೋಧ ಮತ್ತು ಅಸಂಗತಿ ಎಂಬುದಾಗಿ ಎರಡು ವಿಧ. ಯುಕ್ತಿಗೆ ಪ್ರತಿಜ್ಞಾರ್ಥದ ವಿಷಯದಲ್ಲಿ ಆಕಾಂಕ್ಷಾರೂಪವಾದ ಸಂಬಂಧವು ಇಲ್ಲದಿರುವುದು ಅಸಂಗತಿ.

ವಿರೋಧೋಽಪಿ ತ್ರಿಧೈವ ಸ್ಯಾತ್ಪ್ರತಿಜ್ಞಾರ್ಥವಿರುದ್ಧತಾ ।

ಲಿಂಗರಾಹಿತ್ಯಮವ್ಯಾಪ್ತಿರ್ನ್ಯೂನಾಧಿಕ್ಯೇ ತು ವಾಚಿಕೇ ॥೩೭॥

ಸಾಧ್ಯವೆಂಬ ಧರ್ಮದಿಂದ ಸಹಿತವಾದ ಧರ್ಮಿಯು ಪ್ರತಿಜ್ಞಾರ್ಥವೆನಿಸುತ್ತದೆ. ಇದಕ್ಕಿರುವ ಪ್ರತಿಸ್ಪರ್ಧಿಯೇ ವಿರೋಧವು. ಯಾವ ಅರ್ಥದಲ್ಲಿ ಸಾಧ್ಯದ ಸಿದ್ಧಿಗೆ ಉಪಯುಕ್ತವಾದ ಲಿಂಗಜ್ಞಾನದ ಅಭಾವವೇ ಲಿಂಗರಾಹಿತ್ಯ. ವ್ಯಾಪ್ತ್ಯಾಭಾವವೇ ಅವ್ಯಾಪ್ತಿ. ಈ ಪ್ರಕಾರವಾಗಿ ಪ್ರತಿಜ್ಞಾರ್ಥವಿರೋಧ, ಲಿಂಗರಾಹಿತ್ಯ ಮತ್ತು ಅವ್ಯಾಪ್ತಿ ಎಂಬುದಾಗಿ ಸಾಕ್ಷಾತ್ ಯುಕ್ತಿ ವಿರೋಧವು ಮೂರೇ ವಿಧ.

ಹೀಗೆ ಸಾಕ್ಷಾತ್ತಾಗಿರುವ ಯುಕ್ತಿಯ ದೋಷಗಳನ್ನು ಹೇಳಿ ಈಗ ವಚನದ ಮೂಲಕ ಉಂಟಾಗುವ ದೋಷಗಳನ್ನು ಹೇಳುತ್ತಾರೆ. ನ್ಯೂನ ಮತ್ತು ಆಧಿಕ್ಯಗಳು ವಾಚನಿಕ ದೋಷಗಳು. ನ್ಯೂನ ಎಂದರೆ ಅವಶ್ಯವಾಗಿ ಹೇಳಬೇಕಾದ್ದನ್ನು ಪೂರ್ತಿಯಾಗಿ ಹೇಳದಿರುವುದು. ಕಾರ್ಯವಾಗಿದ್ದರೂ ಪುನಃ ಅದನ್ನು ಹೇಳುವುದು ಆಧಿಕ್ಯವೆಂಬ ದೋಷಕ್ಕೆ ಕಾರಣ.

ಹಾಗಾದರೆ ಸೋಪಾಧಿಕತ್ವ ಎಂಬ ಉಪಾಧಿನಿಮಿತ್ತಕವಾದ ದೋಷವು ಇರಬೇಕಾದರೆ ಇವಿಷ್ಟೇ ಅನುಮಾನ ದೋಷಗಳು ಎಂದು ಹೇಳುವುದು ಕೂಡುವುದಿಲ್ಲ ಎಂದರೆ, ಸೋಪಾಧಿಕತ್ವವೂ ಹಿಂದೆ ಹೇಳಿದ ದೋಷಗಳಲ್ಲಿಯೇ ಅಂತರ್ಭಾವವಾಗುವುದು ಎಂದು ತೋರಿಸುತ್ತಾರೆ –

ಸಾಧ್ಯವ್ಯಾಪಕವೈಲೋಮ್ಯಮವ್ಯಾಪ್ತಿಃ ಸಾಧನಸ್ಯ ಚ ।

'ಸಾಧ್ಯವ್ಯಾಪಕವೈಲೋಮ್ಯ' ಎಂದರೆ ಸಾಧ್ಯಕ್ಕೆ ವ್ಯಾಪಕವಾದ ಉಪಾಧಿಯಿಂದ ಸಾಧನವಾದ ಹೇತುವಿಗೆ ವ್ಯಾಪ್ಯ-ವ್ಯಾಪಕ ಭಾವವಿಲ್ಲದಿರುವುದು ಎಂದರ್ಥ. ಇದು ಅವ್ಯಾಪ್ತಿಯೇ ಆಗಿದೆ. ಸೋಪಾಧಿಕತ್ವ ಎಂಬುದು ಅವ್ಯಾಪ್ತಿಯಲ್ಲಿಯೇ ಅಂತರ್ಭಾವ ಹೊಂದುವುದು.

ವಿವರಣೆ: ಸಾಧ್ಯವೆನಿಸಿದ ಅಧರ್ಮಸಾಧನತ್ವ ಇತ್ಯಾದಿಗಳಿಗೆ ವ್ಯಾಪಕವಾದುದು ನಿಷಿದ್ಧತ್ವಾದಿ ಧರ್ಮವು. ಏಕೆಂದರೆ ಎಲ್ಲಿ ಅಧರ್ಮಸಾಧನತ್ವವೋ ಅಲ್ಲಿ ನಿಷಿದ್ಧತ್ವವು ಎಂಬುದಾಗಿ ನಿಯಮವಿರುತ್ತದೆ. ಎಲ್ಲಿ ಹಿಂಸಾತ್ವವೋ ಅಲ್ಲಿ ನಿಷಿದ್ಧತ್ವವು ಎಂಬ ನಿಯಮವಿಲ್ಲ. ಯಾಗೀಯ ಹಿಂಸಾದಲ್ಲಿ ಹಿಂಸಾತ್ವವಿದ್ದರೂ ಅಧರ್ಮಸಾಧನವಲ್ಲ. ಅದ್ದರಿಂದ ನಿಷಿದ್ಧತ್ವವಿಲ್ಲ. ಇದರಿಂದ ಸೋಪಾಧಿಕತ್ವದ ಸ್ವರೂಪವು ಹೇಳಲ್ಪಡುತ್ತದೆ. ಸಾಧ್ಯಕ್ಕೆ ವ್ಯಾಪಕವಾಗಿದ್ದು ಸಾಧನಕ್ಕೆ ವ್ಯಾಪಕವಾಗದಿರುವ ಧರ್ಮವೇ ಉಪಾಧಿ.

ಯಾವುದೇ ರೀತಿಯ ವಿರೋಧವಿದ್ದರೂ ಅದು ಪ್ರತಿಜ್ಞಾರ್ಥ ವಿರೋಧವೇ. ಆದ್ದರಿಂದ ದುರ್ಬಲದಿಂದ ವಿರೋಧವೂ ಪ್ರತಿಜ್ಞಾರ್ಥ ವಿರೋಧವೆಂದಾಗಲಿ ಎಂದರೆ –

ದುರ್ಬಲೇನ ವಿರೋಧೇಽಪಿ ನ ಪ್ರಮಾಣಮಸಾಧಕಮ್ ।।೩೮।।

ದುರ್ಬಲದಿಂದ ವಿರೋಧವಿದ್ದರೂ ಅನುಮಾನವು ಅಸಾಧಕವಾಗಲಾರದು. ಆದರೆ ಪ್ರಬಲ ಅಥವಾ ಸಮಬಲ ಪ್ರಮಾಣ ವಿರೋಧವೇ ಪ್ರತಿಜ್ಞಾರ್ಥ ವಿರೋಧವೆನಿಸುತ್ತದೆ ಎಂದು ಹೇಳುತ್ತಾರೆ.

ಹೀಗೆ ಅನುಮಾನ ವಿರೋಧವು ಮೂರಕ್ಕಿಂತ ಹೆಚ್ಚು ಇಲ್ಲವೆಂದು ಸಮರ್ಥಿಸಿದರೂ, ಅನುಮಾನವಿರೋಧದಲ್ಲಿ ಮೂರು ವಿಧವೆಂಬುದು ಯುಕ್ತವಲ್ಲ. ಪ್ರತಿಜ್ಞಾವಿರೋಧವು ಅವ್ಯಾಪ್ತಿಯಲ್ಲಿಯೇ ಸೇರುತ್ತದೆ. ಹೀಗೆ ಆಶಂಕಿಸಿದರೆ, ಭಿಕ್ಷುಪಾದ ಪ್ರಸರಣ ನ್ಯಾಯದಿಂದ(ಭಿಕ್ಷುವಿಗೆ ಕಾಲನ್ನು ಚಾಚುವ ಅವಕಾಶ ದೊರೆತರೆ, ಅದರಿಂದ ಅವನು ಸ್ವಲ್ಪ ಸ್ವಲ್ಪವೇ ಸರಿಯುತ್ತ ಮನೆಯೊಳಗೆ ಪ್ರವೇಶಿಸುತ್ತಾನೆ. ಇದೇ ಭಿಕ್ಷುಪಾದ ಪ್ರಸರಣ ನ್ಯಾಯ) 'ಸ್ವವಾಕ್ಯೇನ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಸ್ವವಾಕ್ಯೇನ ವಿರೋಧೇऽಪಿ ನೈವ ಸಾಧಕತಾಂ ವ್ರಜೇತ್ ।

ಕೇವಲ ಪ್ರಮಾಣವಿರೋಧವಿದ್ದರೆ ಮಾತ್ರವಲ್ಲ, ತನ್ನ ವಾಕ್ಯದಿಂದ ವಿರೋಧವಿದ್ದರೂ ಪ್ರಮಾಣವು ಸಾಧಕತ್ವವನ್ನು ಹೊಂದುವುದೇ ಇಲ್ಲ. ಅಂದರೆ ಸಾಧಕವಾಗುವುದೇ ಇಲ್ಲ.

ವಿವರಣೆ: ಪ್ರತಿಜ್ಞಾರ್ಥವಿರೋಧವು ಪ್ರಮಾಣವಿರೋಧ ಮತ್ತು ಸ್ವವಾಕ್ಯ ವಿರೋಧ ಎಂದು ಎರಡು ವಿಧ. ಇದರಲ್ಲಿ ಪ್ರಮಾಣವಿರೋಧವು ಪ್ರಬಲ ಪ್ರಮಾಣವಿರೋಧ ಮತ್ತು ಸಮಬಲ ಪ್ರಮಾಣವಿರೋಧ ಎಂದು ಎರಡು ವಿಧ. ಸ್ವವಾಕ್ಯವಿರೋಧವು ಅಪಸಿದ್ಧಾಂತ ಮತ್ತು ಜಾತಿ ಎಂದು ಎರಡು ವಿಧ. ಜಾತಿಯಾದರೋ ಸ್ವವಚನವಿರೋಧ, ಸ್ವನ್ಯಾಯವಿರೋಧ ಹಾಗೂ ಸ್ವಕ್ರಿಯಾ ವಿರೋಧ ಎಂದು ಮೂರು ವಿಧ. ಆದಪ್ರಯುಕ್ತ ಸ್ವವಾಕ್ಯವಿರೋಧವನ್ನು ಪ್ರತ್ಯೇಕವಾಗಿ ಪರಿಗ್ರಹಿಸಲೇಬೇಕು.

ಹೀಗೆ ಅನುಮಾನದ ದೋಷಗಳನ್ನು ನಿರೂಪಿಸಿ, ಪ್ರಸಂಗವಿರುವುದರಿಂದ, ಪರಕೀಯರು ನಿರೂಪಿಸಿದ ಎಲ್ಲ ನಿಗ್ರಹಸ್ಥಾನಗಳಿಗೂ ವಿರೋಧಾದಿಗಳಲ್ಲಿಯೇ ಅಂತರ್ಭಾವ ಎಂಬುದಾಗಿ ಹೇಳುತ್ತಾರೆ –

ಸಂವಾದಾನುಕ್ತಿಸಂಯುಕ್ತಾ ಏತ ಏವ ತು ನಿಗ್ರಹಾಃ ॥೩೯॥

ಸಂವಾದ, ಅನುಕ್ತಿಗಳಿಂದ ಕೂಡಿರುವ ವಿರೋಧ, ಅಸಂಗತಿ, ನ್ಯೂನ, ಆಧಿಕ್ಯ ಇವುಗಳೇ ನಿಗ್ರಹಸ್ಥಾನಗಳು.

ವಿವರಣೆ: ಇವುಗಳಿಂದ ಪ್ರತಿವಾದಿಯು ನಿಗ್ರಹಿಸಲ್ಪಡುತ್ತಾನೆ ಅಂದರೆ ಪರಾಜಯಿಸಲ್ಪಡುತ್ತಾನೆ ಎಂಬ ಅರ್ಥದಲ್ಲಿ ಇವು ನಿಗ್ರಹಸ್ಥಾನಗಳು. ಇಲ್ಲಿ ಸ್ಥಾನ ಶಬ್ದವು ನಿಮಿತ್ತ ಎಂಬ ಅರ್ಥದಲ್ಲಿದೆ. ವಿವಾದ ವಿಷಯವಾದ ಪ್ರಮೇಯದ ಅಂಗೀಕಾರವು ಸಂವಾದವೆನಿಸಿದರೆ, ಪರರಿಗೆ ಬೋಧಿಸುವುದಕ್ಕಾಗಿ ಅವಶ್ಯವಾಗಿ ಹೇಳಬೇಕಾಗಿದ್ದನ್ನು ಹೇಳದಿರುವುದೇ ಅನುಕ್ತಿ.

ಕಥೆಯಿಂದ ಹೊರಗಿರುವ ಅಪಸ್ಮಾರ, ಉನ್ಮಾದ ಮೊದಲಾದ ವಿರೋಧಗಳಿಗೆ ನಿಗ್ರಹಸ್ಥಾನವು ಇರುವುದಿಲ್ಲ ಎಂಬುದನ್ನು ತಿಳಿಸುವುದಕ್ಕೆ ಇಲ್ಲಿ 'ತು' ಎಂಬ ಶಬ್ದವು ಪ್ರಯೋಗಿಸಲ್ಪಟ್ಟಿದೆ.

ಹಾಗಾದರೆ ಕಥೆಯೆಂದರೆ ಯಾವುದು ಎಂದು ಕೇಳಿದರೆ, ಆ ಕಥೆಯ ಸ್ವರೂಪವನ್ನು ನಿರೂಪಿಸುವ ಸಲುವಾಗಿ ಕಥೆಯ ಸಾಮಾನ್ಯ ಲಕ್ಷಣ, ವಿಭಾಗ ಹಾಗೂ ಉದ್ದೇಶಗಳನ್ನು ಹೇಳುತ್ತಾರೆ –

ವಾದೋ ಜಲ್ಪೋ ವಿತಂಡೇತಿ ಕಥಾಸ್ತಿಸ್ರೋ ವಿಜಾನತಾಮ್ ।

ಅನೇಕ ವಿದ್ವಾಂಸರು ಮಾಡುವ ವಿಚಾರವನ್ನು ವಿಷಯೀಕರಿಸುವ ವಾಕ್ಯ ಸಂದರ್ಭ ರೂಪವಾದುದು ಕಥೆಯೆನಿಸುತ್ತದೆ. ಆ ಕಥೆಗಳಲ್ಲಿ ವಾದ, ಜಲ್ಪ ಹಾಗೂ ವಿತಂಡಾ ಎಂಬುದಾಗಿ ಮೂರು ವಿಧಗಳಿವೆಯೆಂದು ಜ್ಞಾನಿಗಳ ಮತವು.

ವಿವರಣೆ: ಕಥೆಯಲ್ಲಿ ಒಂದೇ ವಿಧವೆಂದು ಬೌದ್ಧರು. ವಾದ ವಿತಂಡ ಎಂಬುದಾಗಿ ಎರಡೇ ವಿಧಗಳೆಂದು ಶ್ರೀಹರ್ಷ. ವಾದ, ಜಲ್ಪ, ವಾದವಿತಂಡಾ ಹಾಗೂ ಜಲ್ಪವಿತಂಡಾ ಎಂಬುದಾಗಿ ನಾಲ್ಕು ವಿಧಗಳೆಂದು ಗೌಡನೈಯಾಯಿಕರು. ಇವರ ಮತವನ್ನು ನಿರಾಕರಿಸುವದಕ್ಕಾಗಿ 'ಕಥಾಸ್ತ್ರಿಸ್ರೋ ವಿಜಾನತಾಮ್' ಎಂದು ಹೇಳಿದ್ದಾರೆ. ಕಡಿಮೆ ಅಥವಾ ಹೆಚ್ಚಿನ ಸಂಖ್ಯೆಯನ್ನು ಹೇಳುವುದು ಜ್ಞಾನಿಗಳ ಮತಕ್ಕೆ ವಿರೋಧ ಬರುವುದರಿಂದ ಅಯುಕ್ತವು.

ಈಗ ವಾದ, ಜಲ್ಪ ಮತ್ತು ವಿತಂಡಾಗಳ ಲಕ್ಷಣವನ್ನು ಹೇಳುತ್ತಾರೆ –

ಸ್ವಾರ್ಥಂ ಪರಾರ್ಥಮಪಿ ವಾ ತತ್ತ್ವನಿರ್ಣಯಸಾಧಿನೀ ।।೪೦।।

ಕೇವಲಂ ತು ಕಥಾ ವಾದೋ ಜಲ್ಪೋಽರ್ಥಾದಿವ್ಯಪೇಕ್ಷಯಾ ।

ಸತಾಮೇವ ಕಥಾ ಜ್ಞೇಯಾ ವಿತಂಡಾ ತ್ವಸತಾಂ ಸತಾಮ್ ।।೪೧।।

ಅಪ್ರಕಾಶ್ಯ ಸ್ವಸಿದ್ಧಾಂತಮಸತಾಂ ಪಕ್ಷದೂಷಣಮ್ ।

ಸ್ವಪ್ರಯೋಜನ ಅಥವಾ ಪರಪ್ರಯೋಜನದ ಉದ್ದೇಶದಿಂದ ನೇರವಾಗಿ ತತ್ತ್ವನಿರ್ಣಯ ಸಾಧಕವಾದ ಕಥೆಯು ವಾದ ಎನಿಸುತ್ತದೆ. ವಾದದಲ್ಲಿ ತತ್ತ್ವನಿರ್ಣಯವಲ್ಲದೆ ಬೇರೆ ಯಾವ ಉದ್ದೇಶವೂ ಇರುವುದಿಲ್ಲ ಎಂದು ತಿಳಿಸಲು ಕೇವಲಂ ಎಂದು ಹೇಳಿದ್ದಾರೆ. ಜಲ್ಪಕಥೆಯಲ್ಲಿಯೂ ತತ್ತ್ವನಿರ್ಣಯದ ಉದ್ದೇಶವಿದ್ದರೂ, ವಾದವು ಜಲ್ಪಕ್ಕಿಂತ ವಿಲಕ್ಷಣ ಎಂದು ತಿಳಿಸಲು 'ತು' ಶಬ್ದವನ್ನು ಪ್ರಯೋಗಿಸಿದ್ದಾರೆ.

ಹಣ ಕೀರ್ತಿ ಇತ್ಯಾದಿಗಳ ಅಪೇಕ್ಷೆಯಿಂದ ಸಜ್ಜನರ ನಡುವೆಯೇ ನಡೆಯುವ ಕಥೆಯು ಜಲ್ಪವೆಂದು ತಿಳಿಯತಕ್ಕದ್ದು. ವಾದದಿಂದ ಬೇರೆ ಎಂದು ತಿಳಿಸಲು 'ಅರ್ಥಾದಿ ವ್ಯಪೇಕ್ಷಯಾ' ಎಂದು ಹೇಳಿದ್ದಾರೆ. ಯದ್ಯಪಿ ವಾದಕಥೆಯೂ ಸಜ್ಜನರ ನಡುವೆಯೇ ನಡೆಯುವುದು ಹಾಗೂ ಹಣ ಕೀರ್ತಿ ಇತ್ಯಾದಿಗಳ ಲಾಭವೂ ಇರುವುದು. ಆದರೆ ವಾದದಲ್ಲಿ ಪ್ರವೃತ್ತರಾದವರಿಗೆ ಅವುಗಳ ಅಪೇಕ್ಷೆಯಿರುವುದಿಲ್ಲ. ವಿತಂಡಾಕ್ಕಿಂತ ವಿಭಿನ್ನ ಎಂದು ತಿಳಿಸಲು 'ಸತಾಮೇವ' ಎಂದು ಹೇಳಿದ್ದಾರೆ.

ಅಸಜ್ಜನರಿಗೂ ಸಜ್ಜನರಿಗೂ ಆಗತಕ್ಕ ವಾದಜಲ್ಪಗಳಿಂದ ವಿಲಕ್ಷಣವಾದ ಕಥೆಯಾದರೋ ವಿತಂಡಾ ಎನಿಸುತ್ತದೆ. ಸಜ್ಜನರು ಸ್ವಸಿದ್ಧಾಂತವನ್ನು ಸಾಧಿಸದೆ, ಅಸಜ್ಜನರ ಪಕ್ಷವನ್ನು ದೂಷಣೆ ಮಾಡುವುದೇ ವಿತಂಡಾ ಕಥೆಯ ಲಕ್ಷಣ. ಈ

ನಿಯಮವಾದರೂ ಏಕೆ ಎಂದು ಪ್ರಶ್ನಿಸಿದರೆ, ತತ್ವಜ್ಞಾನಕ್ಕೆ ಅಯೋಗ್ಯರಾದ ಅಸಜ್ಜನರ ಸಮ್ಮುಖದಲ್ಲಿ ಸಜ್ಜನರು ತಮ್ಮ ಸಿದ್ಧಾಂತವನ್ನು ಸಾಧಿಸಿದರೆ ಅಯೋಗ್ಯರಿಗೂ ತತ್ವಜ್ಞಾನವು ಉಂಟಾಗುವ ಪ್ರಸಂಗ ಬರುವುದು. ಆದರೆ ಅವರಿಗೆ ತತ್ವಜ್ಞಾನವು ನಿಷೇಧಿಸಲ್ಪಟ್ಟಿದೆ.

ಸ್ವಪಕ್ಷವನ್ನು ಸಾಧಿಸದೆ ಪರಪಕ್ಷವನ್ನು ನಿರಾಕರಿಸುವ ಕಥೆಯು ವಿತಂಡಾದ ಲಕ್ಷಣ ಎನ್ನುವುದು ಸರಿಯಲ್ಲ. ಪರಪಕ್ಷದ ಖಂಡನೆಯು ಪರಪಕ್ಷ ಪ್ರತಿಪಾದಕವಾದ ಪ್ರಮಾಣಗಳ ದೂಷಣದಿಂದಲೇ ಆಗಬೇಕು. ನಿರಾಶ್ರಯವಾದ ದೂಷಣವನ್ನು ಮಾಡಲಿಕ್ಕೆ ಸಾಧ್ಯವಿಲ್ಲವಾದ್ದರಿಂದ ಸ್ವಪಕ್ಷಸಾಧನೆಯಿಲ್ಲದ ವಿತಂಡಾದಲ್ಲಿ ಪರಪಕ್ಷ ದೂಷಣೆಯು ಕೂಡುವುದಿಲ್ಲ. ಹೀಗೆ ಆಶಂಕಿಸಿದರೆ –

ಉಕ್ತೇ ತೈಃ ಪ್ರಥಮಂ ಮಾನೇ ವಕ್ತವ್ಯಂ ತಸ್ಯ ದೂಷಣಮ್ ।।೪೨।।

ಮೊದಲಿಗೆ ಅಸಜ್ಜನರು ತಮ್ಮ ಪಕ್ಷದ ಸಾಧನೆಗಾಗಿ ಪ್ರಮಾಣವನ್ನು ಹೇಳಬೇಕು. ಅನಂತರ ಸಜ್ಜನರು ಅದರ ದೂಷಣವನ್ನು ಮಾಡಬೇಕು. ವಾದಿಯಾದ ಅಸಜ್ಜನನು ಪರಪಕ್ಷದ ನಿರಾಕರಣೆಯ ಮೂಲಕ ಸ್ವಪಕ್ಷದ ಸಾಧನೆಯನ್ನು ಮಾಡಬೇಕು. ಪ್ರತಿವಾದಿ ಸಜ್ಜನನು ಅವನ ಪ್ರಮಾಣದ ದೂಷಣೆಯನ್ನಷ್ಟೇ ಮಾಡಿದರೆ ಸಾಕು.

ವಿವರಣೆ: ವಿದ್ಯೆಯಲ್ಲಿ ಸಮಾನತೆಯಿಲ್ಲದಿದ್ದರೂ ಗುರು ಶಿಷ್ಯ ಮುಂತಾದವರು ವಾದದಲ್ಲಿ ಅಧಿಕಾರ ಹೊಂದುತ್ತಾರೆ. ಏಕೆಂದರೆ ಅವರ ಉದ್ದೇಶ ಕೇವಲ ತತ್ವನಿರ್ಣಯವಷ್ಟೇ ಆಗಿರುತ್ತದೆ. ಸೋಲು–ಗೆಲವು, ಪ್ರತಿಷ್ಠೆ–ಕೀರ್ತಿ ಇತ್ಯಾದಿಗಳು ಮುಖ್ಯವಲ್ಲ. ಆದರೆ ಜಲ್ಪವಿತಂಡಾಗಳಲ್ಲಿ ಸಮಾನವಿದ್ಯೆಯನ್ನು ಹೊಂದಿರುವರಿಗೆ ಮಾತ್ರ ಅಧಿಕಾರವು. ಏಕೆಂದರೆ 'ಯಯೋರೇವ ಸಮಂ ವಿತ್ತಂ ಯಯೋರೇವ ಸಮಂ ಶ್ರುತಂ। ತಯೋರ್ವಿವಾಹೋ ವಾದಶ್ಚ ನೋತ್ತಮಾಧಮಯೋಃ ಕ್ವಚಿತ್' ಎಂಬುದಾಗಿ ಸ್ಮೃತಿಯು ಇರುವುದು. ಇಲ್ಲವಾದರೆ ಅತಿ ನಿಕೃಷ್ಟನಾಗಿರುವವನಿಗೂ ವ್ಯರ್ಥವಾದ ಕೀರ್ತಿಪ್ರಶಸ್ತಿಗಳೂ, ಉತ್ತಮನಾದವನಿಗೆ ಅಪಮಾನವೂ ಸಂಭವಿಸಬಹುದು. 'ಅಪೂಜ್ಯಾಃ ಪೂಜ್ಯತೇ ಯತ್ರ ಪೂಜ್ಯೋ ಯತ್ರಾವಮಾನಿತಃ। ತ್ರೀಣಿ ತತ್ರ ಭವಿಷ್ಯಂತಿ ದುರ್ಭಿಕ್ಷಂ ಮರಣಂ ಭಯಂ' ಎಂಬುದಾಗಿ ಶ್ರುತಿಯೂ ಇರುವುದು.

ಆದ್ದರಿಂದ ವಾದಿಗಳ ವಿದ್ಯಾಪರೀಕ್ಷೆಯು ಅವಶ್ಯಕವೆಂದು ಹೇಳುತ್ತಾರೆ –

ವಿದ್ಯಾ ಪರೀಕ್ಷಾಪೂರ್ವೈವ ವಿತಂಡಾ ಜಲ್ಪ ಏವ ಚ ।

ವಿತಂಡಾ ಜಲ್ಪಗಳಲ್ಲಿ ಚರ್ಚೆ ಪ್ರಾರಂಭಿಸುವ ಪೂರ್ವದಲ್ಲಿಯೇ ವಾದಿ ಪ್ರತಿವಾದಿಗಳ ವಿದ್ಯೆಯ ಮಟ್ಟವನ್ನು ಪರೀಕ್ಷಿಸಿ, ಅವರಲ್ಲಿ ಸಾಮ್ಯವಿದೆಯೆಂದು

ನಿಶ್ಚಯ ಮಾಡಿಕೊಳ್ಳಬೇಕು. ಸಾಮ್ಯವಿದ್ದವರಿಗೇ ಜಲ್ಪ ವಿತಂಡಾಗಳಲ್ಲಿ ಪ್ರವೇಶ.

ಹಾಗಾದರೆ ಜಲ್ಪ ವಿತಂಡಾಗಳಲ್ಲಿ ವಿದ್ಯಾಸಾಮ್ಯಾದಿಗಳನ್ನು ನಿರ್ಧರಿಸಲು ಯಾವ ರೀತಿಯಿಂದ ಪರೀಕ್ಷೆ ಮಾಡಬೇಕು ಎಂದು ಕೇಳಿದರೆ –

ಉಚ್ಚನೀಚತ್ವನಿರ್ಣೀತಿರ್ಯತೋ ಜಯಪರಾಜಯೌ ॥೪೩॥

ವಿನೈವ ತತ್ತ್ವ ನಿರ್ಣೀತಿಂ ನ ಹಿ ಜಲ್ಪಾದಿನಾ ಕ್ವಚಿತ್ ।

ವಿದ್ಯೆಯಿಂದ ಶ್ರೇಷ್ಠನು ಎಂದು ನಿರ್ಣಯಿಸಲ್ಪಡುವುದೇ ಜಯ, ಕಡಿಮೆಯವನು ಎಂದು ನಿರ್ಣಯಿಸಲ್ಪಡುವುದೇ ಪರಾಜಯ. ಆದಪ್ರಯುಕ್ತ ವಾದದಿದಂಲೇ ವಿದ್ಯಾಪರೀಕ್ಷೆಯನ್ನು ಮಾಡಬೇಕು. ತತ್ವನಿರ್ಣಯಸಾಧನವಾದ ವಾದವನ್ನು ಬಿಟ್ಟು ಜಲ್ಪಾದಿಗಳಿಂದ ಎಂದಿಗೂ ಉಚ್ಚತ್ವ–ನೀಚತ್ವ ಜ್ಞಾನವು ಆಗುವುದು ಸಾಧ್ಯವಿಲ್ಲ.

ಉಚ್ಚನೀಚತ್ವವಿಜ್ಞಾನಮಿತಿ ವಿದ್ಯಾಪರೀಕ್ಷಣಮ್ ॥೪೪॥

ವಾದೇನ ಚೋಚ್ಚನೀಚತ್ವವಿಜ್ಞಾನಂ ಭವತಿ ಸ್ಫುಟಮ್ ।

ಇತಿ ವಾದಸ್ಯ ಪೂರ್ವತ್ವಂ ತತ್ಸಿದ್ಧೌ ವ್ಯರ್ಥತಾಽನ್ಯಯೋಃ ॥೪೫॥

ವಾದದಿಂದಲೇ ಉಚ್ಚತ್ವ–ನೀಚತ್ವ ಜ್ಞಾನವು ಸ್ಪಷ್ಟವಾಗಿ ನಿರ್ಣೀತವಾಗುವುದು. ಆದಕಾರಣ ವಾದಕಥೆಗೆ ಪೂರ್ವತ್ವವು ಅಥವಾ ಕಾರಣತ್ವವು ಬರುವುದು. ಅಂದರೆ ಜಲ್ಪವಿತಂಡಾಗಳನ್ನು ಅಪೇಕ್ಷಿಸುವವರು ವಿದ್ಯಾಪರೀಕ್ಷೆಗಾಗಿ ಮೊದಲು ವಾದಕಥೆಯಲ್ಲಿ ತೊಡಗುವುದು ಅನಿವಾರ್ಯ ಎಂದಾಯಿತು.

ವಾದದಿಂದಲೇ ಉಚ್ಚತ್ವ ನೀಚತ್ವ ನಿರ್ಣಯವಾಗುತ್ತಿರಲು ವಿತಂಡಾ ಜಲ್ಪಗಳಿಗೆ ನಿಷ್ಪ್ರಯೋಜಕತ್ವವು ಬರುವುದು. ಆದಕಾರಣ ವಿದ್ಯಾಸಾಮ್ಯತೆ ಕಂಡುಬರದಿದ್ದರೆ ವಿದ್ಯಾಪರೀಕ್ಷೆಗಾಗಿ ನಡೆಸಿದ ವಾದದಿಂದಲೇ ಕಥೆಗೆ ಪರ್ಯವಸಾನವು.

ಜಲ್ಪ ವಿತಂಡಾಗಳನ್ನು ಅಪೇಕ್ಷಿಸುವವರಿಗೆ ಪೂರ್ವದಲ್ಲಿ ವಿದ್ಯಾಪರೀಕ್ಷೆ ನಡೆಸಬೇಕೆಂಬ ನಿಯಮಕ್ಕೆ ಅಪವಾದವನ್ನು ಹೇಳುತ್ತಾರೆ –

ಬಹುವಿದ್ಯತ್ವಸಿದ್ಧೌ ತು ನೈವ ವಾದೋಽಪಿ ಕಾರಣಮ್ ।

ಪರೀಕ್ಷೆಗಿಂತ ಮುಂಚೆಯೇ ಲೋಕಸಂವಾದಾದಿಗಳ ಮೂಲಕ ವಾದಿ–ಪ್ರತಿವಾದಿಗಳಲ್ಲಿ ಒಬ್ಬನಿಗೆ ಮತ್ತೊಬ್ಬನಿಗಿಂತ ವಿದ್ಯೆಯಲ್ಲಿ ಆಧಿಕ್ಯವಿರುವುದು ಎಂದು ಸಿದ್ಧವಾಗಿದ್ದರೆ ಆಗ ವಾದಕ್ಕೆ ಕೂಡ ಅವಕಾಶವಿರುವುದಿಲ್ಲ. ಅಂದಮೇಲೆ ಜಲ್ಪ ವಿತಂಡಾಗಳಿಗೆ ಅವಕಾಶವನ್ನು ಕೊಡಕೂಡದು ಎಂದು ಬೇರೆ ಹೇಳಬೇಕೇನು?

ಏಕೆಂದರೆ ವಾದಕಥೆಯು ವಿದ್ಯಾಪರೀಕ್ಷೆಯ ಕಾರಣವಾದುದು.

ಸ್ಪರ್ಧಾ ಮನೋಭಾವವುಳ್ಳವರಿಗೆ ಹಾಗೂ ಖ್ಯಾತಿಯನ್ನು ಅಪೇಕ್ಷಿಸುವವರಿಗೆ ವಾದವು ಕೂಡುವುದಿಲ್ಲ. ಏಕೆಂದರೆ ಅಂಥವರಲ್ಲಿ ಅಸತ್ಸಾಧನ, ಅಸದುತ್ತರ ಮುಂತಾದವುಗಳು ಅವಶ್ಯವಾಗಿ ಇರುತ್ತವೆ. ಆದಕಾರಣ ವಿದ್ಯೆಯ ಸಾಮ್ಯ ವೈಷಮ್ಯಗಳ ನಿರ್ಣಯವು ಸಾಧ್ಯವಿಲ್ಲ ಎಂದು ಆಶಂಕಿಸಿದರೆ –

ಸಭಾಸಭಾಪಪ್ರಾಶ್ನಿಕಪೂರ್ವಸ್ತು ಸ್ಪರ್ಧಿನಾಮಪಿ ।।೪೬।।

ವಾದವು ಸಭಾ, ಸಭಾಪತಿ, ಪ್ರಾಶ್ನಿಕರಿಂದ ನಿಯಮಿಸಲ್ಪಟ್ಟಿರುತ್ತದೆ. ಆದಕಾರಣ ಸ್ಪರ್ಧಿಗಳಿಗೂ ವಾದವು ಯುಕ್ತವೇ ಆಗಿದೆ. ಏಕೆಂದರೆ ಸಭೆಯ ನಿಯಮಾವಳಿಗೆ ತಕ್ಕಂತೆ ಹಾಗೂ ಸಭಾಪತಿಯ ಅಪ್ಪಣೆಯಂತೆಯೇ ವಾದವು ನಡೆಯಬೇಕೆಂಬ ನಿಯಮವಿರುತ್ತದೆ. ಅಸತ್ಸಾಧನಾದಿಗಳಿಗೆ ಅವಕಾಶವಿರುವುದಿಲ್ಲ.

ವಾದದಿಂದ ತತ್ವನಿರ್ಣಯ ಸಿದ್ಧಿಯಾದರೂ ಗೆದ್ದವರಿಗೆ ಇಷ್ಟವಾದ ದ್ರವ್ಯಾದಿಗಳು ಸಿದ್ಧಿಸುವುದಿಲ್ಲ ಎಂದು ಹೇಳಿದರೆ, ಹಾಗೆ ಹೇಳಕೂಡದು. ಏಕೆಂದರೆ–

ವಾದ ಏವೋಭಯಾರ್ಥಃ ಸ್ಯಾನ್ನಿರ್ಣೀತಿಜಯಕಾರಕಃ ।

ವಾದದಲ್ಲಿ ತತ್ವನಿಶ್ಚಯ ಹಾಗೂ ಜಯ ಎಂಬ ಎರಡು ವಿಧ ಪ್ರಯೋಜನವು ಇರುತ್ತದೆ. ಜಯದಿಂದ ಸಾಧ್ಯವಾದ ದ್ರವ್ಯಾದಿಗಳ ಲಾಭವೂ ಆಗುವುದು.

ವಿದ್ಯೆಯಲ್ಲಿ ಅಸಮರಾಗಿದ್ದರೆ ಜಯಿಸಿದವನಿಗೆ ದ್ರವ್ಯಾದಿಗಳು ಲಭಿಸುತ್ತವೆ. ವಿದ್ಯಾಸಾಮ್ಯವು ನಿರ್ಣೀತವಾದರೆ ಇಬ್ಬರಿಗೂ ದ್ರವ್ಯಾದಿಗಳು ಕೊಡಲ್ಪಡುತ್ತವೆ. ಬೇರೆ ಪ್ರಯೋಜನವಿರುವುದಿಲ್ಲ. ಆದಪ್ರಯುಕ್ತ ಪುನಃ ಜಲ್ಪವಿತಂಡಾಗಳ ಅವಶ್ಯಕತೆಯಿರುವುದಿಲ್ಲ ಎಂದು ಹೇಳಕೂಡದು. ಏಕೆಂದರೆ –

ತತ್ವಾಪ್ರಕಾಶ ಏವೈಕೋ ವಿತಂಡಾಜಲ್ಪಯೋಃ ಫಲಮ್ ।।೪೭।।

ತತ್ವವನ್ನು ಪ್ರಕಾಶಗೊಳಿಸದೇ ಪರವಂಚನಾ ಸಾಮರ್ಥ್ಯವನ್ನು ಹೊಂದಿರುವ ವಾದಿಗೆ ಆದರಿಂದ ದ್ರವ್ಯಾದಿಗಳ ಲಾಭವೊಂದೇ ವಿತಂಡಾಜಲ್ಪಗಳ ಫಲವು. ಆದಪ್ರಯುಕ್ತ ಜಲ್ಪವಿತಂಡಾಗಳಲ್ಲಿ ಪ್ರವೃತ್ತಿಯು ಕೂಡುವುದು.

ಹೀಗೆ ವಾದಕಥೆಯಿಂದ ವಿದ್ಯಾಪರೀಕ್ಷೆಯೆಂಬ ಪಕ್ಷವು ಸಮರ್ಥಿತವಾಯಿತು. ಈಗ ಬೇರೆ ರೀತಿಯಿಂದಲೂ ಸಾಧ್ಯವೆಂಬ ಪಕ್ಷವನ್ನು ಸಮರ್ಥಿಸುತ್ತಾರೆ –

ವಿನಾ ವಾದೇನ ವಿದ್ಯಾಯಾ ಯದಿ ಶಕ್ಯಂ ಪರೀಕ್ಷಣಮ್ ।

ಸ್ಯಾಜ್ಜಲ್ಪಾದಿರಪಿ ಕ್ವಾಪಿ ವಾದ ಏವಾನ್ಯಥಾ ಭವೇತ್ ।।೪೮।।

ವಾದಕಥೆಯ ಸಹಾಯವಿಲ್ಲದೆ ಸಂಪ್ರತಿಪನ್ನ ವಿದ್ವತ್ಪ್ರಸಿದ್ಧ್ಯಾದಿಗಳಿಂದ ವಿದ್ಯೆಯ ಪರೀಕ್ಷೆಯು ಎಲ್ಲಿಯಾದರೂ ಸಾಧ್ಯವಿದ್ದ ಪಕ್ಷದಲ್ಲಿ, ಆಗ ಸಮಾನ ವಿದ್ಯೆಯನ್ನು ಹೊಂದಿರುವವರಿಗೆ ವಾದಪೂರ್ವಪರೀಕ್ಷೆಯಿಲ್ಲದೆಯೇ ಜಲ್ಪವಿತಂಡಾದಿಗಳಿಗೆ ಅರ್ಹತೆಯು ಲಭಿಸುವುದು. ವಾದವಿಲ್ಲದೇ ವಿದ್ಯಾಪರೀಕ್ಷೆಯು ಅಶಕ್ಯವಾಗಿರುವ ಸಂದರ್ಭಗಳಲ್ಲಿ ಮಾತ್ರ ವಾದವು ಪ್ರಥಮ ಕರ್ತವ್ಯವಾಗುವುದು.

ಹಾಗಾದರೆ ವಿದ್ಯಾಪರೀಕ್ಷೆಯಾದರೂ ವಾದದಿಂದಲೇ ಆಗಬೇಕು ಎನ್ನುವುದು ಸರಿಯಲ್ಲ. ಕೇವಲ ತತ್ವನಿರ್ಣಯಕ್ಕೋಸ್ಕರ ಎಂದು ಹೇಳುವ ಹಾಗಿಲ್ಲ. ಏಕೆಂದರೆ ವಾದದಿಂದ ವಿದ್ಯಾಪರೀಕ್ಷೆ ಮಾಡಿದಾಗ ಅಲ್ಲಿಯೂ ಜಯಾಪಜಯಗಳು, ದ್ರವ್ಯಾದಿಗಳ ಲಾಭವು ಆಗುವುದೆಂದು ಹೇಳಲಾಗಿದೆ. ಇದು ಜಲ್ಪದ ಲಕ್ಷಣ. ಆದ್ದರಿಂದ ವಿದ್ಯಾಪರೀಕ್ಷೆಗೆ ಜಲ್ಪ–ವಾದಗಳ ಸಮಾಹಾರವಾದ ಬೇರೊಂದು ಕಥೆ ಏಕೆ ಆಗಬಾರದು? ಹಾಗಲ್ಲವೆಂದರೆ, ಇಲ್ಲಿ ವಾದಕಥೆಗೆ ಜಲ್ಪಶಬ್ದ ವಾಚ್ಯತ್ವವನ್ನು ಮಾತ್ರ ಆಪಾದಿಸುವುದೋ ಅಥವಾ ವಾದಶಬ್ದ ವಾಚ್ಯತ್ವವಿಲ್ಲವೆಂದೋ ಅಥವಾ ಎರಡು ನಿಮಿತ್ತಗಳು ಸೇರಿರುವಾಗ ವಾದಶಬ್ದಕ್ಕೆ ವ್ಯವಹಾರವು ಯುಕ್ತವಲ್ಲವೆಂದು ಆಪಾದಿಸಲ್ಪಡುವುದೋ ಎಂದು ಕೇಳಿದರೆ, ಈ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹೇಳುತ್ತಾರೆ –

ಜಲ್ಪ ಇತ್ಯಪಿ ನಾಮಸ್ಯಾದ್ವಾದಸ್ಯೈತಾದೃಶಸ್ಯ ತು ।

ಎರಡು ನಿಮಿತ್ತಗಳ ಸಮಾಹಾರವಾದ ವಾದಕ್ಕೆ ಜಲ್ಪ ಎನ್ನುವ ಹೆಸರು ಬರುವುದೆಂದು ಹೇಳುತ್ತಾರೆ.

ವಿವರಣೆ: ಇದಕ್ಕೆ ಸಂವಾದಿಯಾಗಿ 'ತುಲಾಯಾಂ ಪ್ರಮಾಣ ಪ್ರಮೇಯವತ್' ಎಂಬ ನ್ಯಾಯಸೂತ್ರದ ದೃಷ್ಟಾಂತವನ್ನು ನ್ಯಾಯಸುಧಾಕಾರರು ಈ ಸಂದರ್ಭದಲ್ಲಿ ನೀಡಿದ್ದಾರೆ. ಒಂದು ತಕ್ಕಡಿಯ ಪ್ರಾಮಾಣ್ಯವು ಇನ್ನೊಂದು ತಕ್ಕಡಿಯಿಂದ ನಿರ್ಧರಿಸಲ್ಪಡಲು ಆ ತಕ್ಕಡಿಯು ಪ್ರಮೇಯವೆನಿಸುವುದು. ಅದೇ ತಕ್ಕಡಿಯು ಚಿನ್ನ ಇತ್ಯಾದಿಗಳ ಭಾರವನ್ನು ನಿರ್ಧರಿಸಲು ಬಳಸಿದಾಗ ಅದು ಪ್ರಮಾಣವೆನಿಸುವುದು. ಹೀಗೆ ಎರಡು ನಿಮಿತ್ತಗಳ ಕಾರಣದಿಂದ ಒಂದೇ ತಕ್ಕಡಿಗೆ ಪ್ರಮಾಣ ಮತ್ತು ಪ್ರಮೇಯ ಎಂಬುದಾಗಿ ಉಭಯ ಶಬ್ದವಾಚ್ಯತ್ವವು ಕೂಡುವಂತೆ, ವಾದ–ಜಲ್ಪ ಎಂಬುದಾಗಿ ವಾದಕ್ಕೆ ಎರಡು ನಿಮಿತ್ತಗಳಿಂದ ಉಭಯಶಬ್ದವಾಚ್ಯತ್ವವೂ ಕೂಡುವುದು ಎಂದು ತಾತ್ಪರ್ಯ.

ವಾದಕಥೆಯಲ್ಲಿ ಪ್ರವೇಶ ಪಡೆಯಲು ವಾದಿಗಳಿಗೆ ಅಧಿಕಾರವಿದೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸುವುದೇ ವಿದ್ಯಾಪರೀಕ್ಷೆಯ ಮುಖ್ಯ ಉದ್ದೇಶ. ದ್ರವ್ಯಾದಿ ಲಾಭವು ಅವಾಂತರ ನಿಮಿತ್ತವಾದ್ದರಿಂದ ಮುಖ್ಯವಲ್ಲ. ಆದಪ್ರಯುಕ್ತ ವಿದ್ಯಾಪರೀಕ್ಷಾರ್ಥವಾದ ಕಥೆಯು ವಾದವೇ ಆಗುವುದು ಎಂದು ಹೇಳುತ್ತಾರೆ –

ಪ್ರತಿಜ್ಞಾಮಾತ್ರಸಾಧ್ಯತ್ವಮಪಿ ಸ್ಯಾದ್ಯಾಜ್ಞವಲ್ಕ್ಯವತ್ ॥೪೯॥

ಸಂವಾದೇ ವಾದಿನೋಃ ಕ್ವಾಪಿ ವಿವಾದೇ ಹೇತುರಿಷ್ಯತೇ ।

ವಿದ್ಯಾಪರೀಕ್ಷೆಗಾಗಿರುವ ಕಥೆಯಲ್ಲಿ ಯಾವುದಾದರೊಂದು ಪ್ರಮೇಯದ ಬಗ್ಗೆ ಕೇವಲ ಪ್ರತಿಜ್ಞೆಯಿಂದಲೇ ಅಂದರೆ ಪ್ರಮಾಣೋಪನ್ಯಾಸವಿಲ್ಲದ ವಚನದಿಂದಲೇ, ಯಾಜ್ಞವಲ್ಕ್ಯನ ಕಥೆಯಲ್ಲಿ ಹೇಗೋ ಹಾಗೆ, ಜ್ಞಾಪಕತ್ವವು ಆಗುವುದು. ವಾದಿ ಪ್ರತಿವಾದಿಗಳಿಗೆ ಸಂವಾದದಲ್ಲಿ ಪರಸ್ಪರ ಆಪ್ತತ್ವವಿದ್ದರೆ ಪ್ರತಿಜ್ಞಾಮಾತ್ರದಿಂದಲೇ ಪ್ರಮೇಯವು ತಿಳಿಯಲ್ಪಡುವುದು. ವಿವಾದವಿದ್ದರೆ ಪ್ರಮೇಯಕ್ಕೆ ಹೇತುವಾದ ಪ್ರಮಾಣವೆಂದು ಮಾತ್ರ ಅಂಗೀಕರಿಸಲ್ಪಡುವುದು. ಇದರಿಂದ ವಿದ್ಯಾಪರೀಕ್ಷಾರ್ಥ ಕಥೆಯು ವಾದವೆಂದೇ ನಿರ್ಣೀತವಾಗುವುದು.

ವಿವರಣೆ: ಬೃಹದಾರಣ್ಯೋಪನಿಷತ್ತಿನಲ್ಲಿ ಐದನೆಯ ಅಧ್ಯಾಯದಲ್ಲಿ ಶಾಕಲ್ಯ ಬ್ರಾಹ್ಮಣದಲ್ಲಿ, 'ಕತ್ಯೇವ ದೇವತಾ ಯಾಜ್ಞವಲ್ಕ್ಯ?' (ದೇವತೆಗಳು ಎಷ್ಟು ಜನ?) ಎಂದು ಶಾಕಲ್ಯನು ಯಾಜ್ಞವಲ್ಕ್ಯನನ್ನು ಪ್ರಶ್ನಿಸಿದಾಗ, ಅದಕ್ಕೆ ಉತ್ತರವಾಗಿ 'ತ್ರಿಯಸ್ತ್ರಿಂಶತ್' (ಮೂವತ್ತು ಮೂರು) ಎಂಬ ವಚನಮಾತ್ರದಿಂದಲೇ ಯಾಜ್ಞವಲ್ಕ್ಯನು ಪ್ರತಿಜ್ಞೆ ಮಾಡಿರುವನು. ವಿದ್ಯಾಪರೀಕ್ಷೆಗಾಗಿಯೇ ಈ ರೀತಿಯ ಪ್ರಶ್ನೋತ್ತರವು ಎಂಬುದು ಉಪಕ್ರಮವನ್ನು ನೋಡಿದಾಗ ತಿಳಿಯುತ್ತದೆ. ವಿದ್ಯಾಪರೀಕ್ಷಾರ್ಥ ಕಥೆಯಲ್ಲಿ ಕೇವಲ ಪ್ರತಿಜ್ಞೆಯಿಂದಲೇ ಸಾಧ್ಯಜ್ಞಾಪನವು ಆಗುವುದೆಂದು ಈ ದೃಷ್ಟಾಂತದಿಂದ ಸಿದ್ಧಿಸುತ್ತದೆ.

ಈಗ ಸಭಿಕರು, ಸಭಾಪತಿ ಹಾಗೂ ಪ್ರಾಶ್ನಿಕರ ಲಕ್ಷಣವನ್ನು ತಿಳಿಸುತ್ತಾರೆ –

ಸಭಾ ಸಭಾಪತಿಶ್ಚೈವ ಪ್ರಾಶ್ನಿಕಾಶ್ಚೈವ ವೈಷ್ಣವಾಃ ॥೫೦॥

ರಾಗದ್ವೇಷವಿಹೀನಾಶ್ಚ ಸ್ಯುಃ ಸಭ್ಯಾಃ ಸರ್ವವೇದಿನಃ ।

ಸಭಿಕರು, ಸಭಾಪತಿ ಹಾಗೂ ಪ್ರಾಶ್ನಿಕರು ವಿಷ್ಣುಭಕ್ತಿಯುಳ್ಳವರೇ ಆಗಿರಬೇಕು. ಅವರಿಗೆ ರಾಗದ್ವೇಷಗಳು ಇರಬಾರದು. ಸಭಿಕರು ಹಾಗೂ ಪ್ರಾಶ್ನಿಕರು ವಾದಿಪ್ರತಿವಾದಿಗಳ ದರ್ಶನದ ಹಾಗೂ ಕಥೋಪಯುಕ್ತವಾದ ಸರ್ವವನ್ನೂ, ಅಂದರೆ ವ್ಯಾಕರಣಾದಿಗಳನ್ನು, ತಿಳಿದವರಾಗಿರಬೇಕು. ಸಭಾಪತಿಯು ಸರ್ವವನ್ನೂ ತಿಳಿದಿರುವುದಕ್ಕೆ ಕಥೆಯಲ್ಲಿ ಉಪಯೋಗವಿಲ್ಲ. ಇದನ್ನು ತಿಳಿಸುವ ಉದ್ದೇಶದಿಂದ ಇಲ್ಲಿ ಸಭಾಪತಿಯನ್ನು ಉಲ್ಲೇಖಿಸಿಲ್ಲ.

ವಾದಿ–ಪ್ರತಿವಾದಿಗಳ ಗುಣದೋಷಗಳನ್ನು ನಿರ್ಣಯಿಸುವಲ್ಲಿ ಪ್ರಾಶ್ನಿಕರ ಉಪಯೋಗವಿದೆ. ಆದ್ದರಿಂದ ಅವರಿಗೆ ಸರ್ವ ವಿಷಯಕ ಜ್ಞಾನವಿರಬೇಕೆಂದು ಅಂಗೀಕರಿಸುತ್ತೇವೆ. ಆದರೆ ಸಭಿಕರಿಗೆ ಇದರ ಅವಶ್ಯಕತೆ ಏಕೆ ಎಂದು ಕೇಳಿದರೆ –

ಪ್ರಾಶ್ನಿಕಾಶ್ಚೈತದಜ್ಞಾನೇ ಸಭ್ಯಾಶ್ಚೈಷಾಂ ಚ ದೂರಗಾಃ ।।೫೧।।

ಪ್ರಮಾಣಂ ನಿರ್ಣಯಾಯ ಸ್ಯುಃ ಪಕ್ಷಪಾತವಿವರ್ಜಿತಾಃ ।

ಕೆಲವು ಸಂದರ್ಭಗಳಲ್ಲಿ ಪ್ರಾಶ್ನಿಕರಿಗೂ ಕೆಲವು ಸೂಕ್ಷ್ಮವಾದ ಪ್ರಮೇಯಗಳ ಬಗ್ಗೆ ಅಜ್ಞಾನ ಬರಬಹುದು. ಸಂಬಂಧಿಸಿದ ಪ್ರಮೇಯದ ಬಗ್ಗೆ ಜ್ಞಾನವಿರುವ ಹಾಗೂ ಪಕ್ಷಪಾತರಹಿತರಾದ ಸಭಿಕರೂ, ವಾದಿ–ಪ್ರತಿವಾದಿಗಳ ಗುಣದೋಷಗಳ ನಿರ್ಣಯದ ವಿಷಯದಲ್ಲಿ, ಪ್ರಮಾಣರೆನಿಸುತ್ತಾರೆ. ಆ ಸಭಿಕರಿಗೂ ಅಜ್ಞಾನವಿದ್ದ ಪಕ್ಷದಲ್ಲಿ, ಪಕ್ಷಪಾತರಹಿತರಾದ ದೇಶಾಂತರದಲ್ಲಿರುವ ಸಭ್ಯರೂ ವಾದಿಗಳ ಗುಣದೋಷಗಳ ನಿರ್ಣಯದಲ್ಲಿ ಪ್ರಮಾಣರೆನಿಸುತ್ತಾರೆ.

'ಅಪ್ರಕಾಶ್ಯ ಸ್ವಸಿದ್ಧಾಂತಂ' ಎಂದು ವಿತಂಡಾ ಕಥೆಯ ಲಕ್ಷಣವು ಹೇಳಲ್ಪಟ್ಟಿದೆ. ಅದು ವಾದ ಜಲ್ಪಗಳಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುತ್ತಾರೆ –

ಉಭಾಭ್ಯಾಂ ಸಾಧನಂ ಚೈವ ದೂಷಣಂ ವಾದಜಲ್ಪಯೋಃ ।।೫೨।।

ವಾದಜಲ್ಪಗಳಲ್ಲಿ ವಾದಿಪ್ರತಿವಾದಿಗಳಿಬ್ಬರಿಂದಲೂ ಸ್ವಪಕ್ಷಸಾಧನವೂ, ಪರಪಕ್ಷ ದೂಷಣವೂ ಮಾಡಲ್ಪಡತಕ್ಕದ್ದು. ವಿತಂಡಾದಲ್ಲಾದರೋ ಕೇವಲ ಪರಪಕ್ಷ ದೂಷಣದಿಂದಲೇ ಕೃತಾರ್ಥತೆಯು ಎಂದು ಹಿಂದೆ ಪ್ರತಿಪಾದಿಸಲಾಗಿದೆ. ವಾದಜಲ್ಪಗಳಲ್ಲಿ ಸ್ವಪಕ್ಷಸಾಧನೆಯೂ ಅವಶ್ಯಕ ಎಂದು ಇಲ್ಲಿ ಹೇಳಿರುವುದರಿಂದ, ಇವುಗಳಿಗೆ ವಿತಂಡಾ ಕಥೆಯಿಂದ ಪ್ರತ್ಯೇಕವಾದ ಲಕ್ಷಣ ಹೇಳಲ್ಪಟ್ಟಿತು.

ವಾದಿ ಪ್ರತಿವಾದಿಗಳಿಬ್ಬರೂ ಸೂಕ್ತವಾದ ಪ್ರಮಾಣಗಳಿಂದ ಮಂಡನೆ ಮತ್ತು ಖಂಡನೆಗಳನ್ನು ಸಾಧಿಸಬೇಕು ಎಂದು ಹೇಳಲಾಯಿತು. ಇಲ್ಲಿ ಸಾಧನಕ್ಕಾಗಿ ಯಾವ ಪ್ರಮಾಣವನ್ನು ಪ್ರಯೋಗಿಸಬೇಕು ಎಂದರೆ, ಎಲ್ಲಿ ಯಾವ ಪ್ರಮಾಣವು ಅವಶ್ಯಕವೋ ಅದನ್ನೇ ಹೇಳಬೇಕು ಎಂದು ಉತ್ತರಿಸಬಹುದು. ಇದು ಒಪ್ಪತಕ್ಕದ್ದೇ ಸರಿ. ಆದರೆ ಒಂದು ವಿಷಯದಲ್ಲಿ ಒಂದಕ್ಕಿಂತ ಹೆಚ್ಚು ಪ್ರಮಾಣವಿದ್ದರೆ ಎಲ್ಲವನ್ನೂ ಹೇಳಬೇಕೋ, ಅಥವಾ ಒಂದೇ ಪ್ರಮಾಣ ಹೇಳಿದರೆ ಸಾಕೋ, ಅದರಲ್ಲಿಯೂ ಯಾವ ಪ್ರಮಾಣವನ್ನು ಹೇಳುವುದು ಎಂದು ಆಶಂಕಿಸಿದರೆ –

ಸದ್ಭಿರಾಗಮ ಏವೈಕಃ ಪ್ರಯೋಜ್ಯೋऽಭೀಷ್ಟಸಾಧಕಃ ।

ಸ್ವಸಿದ್ಧಾಂತಾನುಸಾರೇಣ ಹ್ಯಸದ್ಭಿರನುಮೋಚ್ಯತೇ ।।೫೩।।

ಸಜ್ಜನರಿಂದ ಅಭೀಷ್ಟಸಾಧಕವಾದ ಮುಖ್ಯವಾದ ಆಗಮವೊಂದೇ ಪ್ರಮಾಣವಾಗಿ ಪ್ರಯೋಗಿಸಲ್ಪಡಬೇಕು. ಅಸಜ್ಜನರಿಂದ ತಮ್ಮ ಸಿದ್ಧಾಂತದ ಅನುಸಾರವಾಗಿಯೇ ಅನುಮಾನ ಅಂದರೆ ಯುಕ್ತಿಯು ಪ್ರಮಾಣರೂಪವಾಗಿ ಹೇಳಲ್ಪಡುತ್ತದೆ. ಹೀಗೆ ನಿಯಮವಿದೆ. ಇಲ್ಲದಿದ್ದರೆ ಕಥೆಯೇ ಕೂಡುವುದಿಲ್ಲ.

ಸಜ್ಜನರು ಆಗಮಪ್ರಮಾಣವನ್ನು ಹೇಳಬೇಕೆಂದು ಹೇಳಿದ್ದು ಯುಕ್ತವಲ್ಲ. ಏಕೆಂದರೆ ವೈದಿಕನಾದ ಪ್ರತಿವಾದಿಗೆ ಅದನ್ನು ದೂಷಿಸಿದಲ್ಲಿ ಅಪಸಿದ್ಧಾಂತವು ಬರುವುದು. ದೂಷಣೆ ಮಾಡದಿದ್ದರೆ, ಪರಪಕ್ಷದೂಷಣೆಯಿಲ್ಲವಾದ್ದರಿಂದ ಕಥಾ ಪ್ರಸಂಗವೇ ಇಲ್ಲದಂತಾಗುತ್ತದೆ. ಹೀಗೆ ಆಶಂಕಿಸಿದರೆ –

ಪ್ರತ್ಯಕ್ಷಾಗಮವೈರೂಪ್ಯಮಾಶ್ರಿತ್ಯಾನ್ಯಾರ್ಥತೈವ ತು ।

ಆಗಮೇ ದರ್ಶನೀಯಾತ್ರ ದೋಷೋ ಲಿಂಗವಿಲೋಮತಾ ॥೫೪॥

ಲಿಂಗಾನುಕೂಲ್ಯಂ ಸ್ವಾರ್ಥಸ್ಯ ಶ್ರುತ್ಯಾದೀನಾಮನುಗ್ರಹಃ ।

ವಾದಿಯಿಂದ ಪ್ರಯೋಗಿಸಲ್ಪಟ್ಟ ಆಗಮಕ್ಕೆ ಪರಾಭಿಮತವಾದ ಅರ್ಥದಲ್ಲಿ ಪ್ರತ್ಯಕ್ಷದಿಂದ ವಿರೋಧ ಕಂಡುಬಂದರೆ, ಪ್ರತ್ಯಕ್ಷಕ್ಕೆ ಅವಿರೋಧವಾಗಿ ಆಗಮಕ್ಕೆ ಅರ್ಥವನ್ನು ತೋರಿಸತಕ್ಕದ್ದು. ಇದರಿಂದ ಆಗಮಕ್ಕೆ ಅಪ್ರಮಾಣದ ನಿವಾರಣೆಯಾಗುವುದರಿಂದ ಅಪಸಿದ್ಧಾಂತವೆನಿಸುವುದಿಲ್ಲ. ಆಗಮವು ಪ್ರತ್ಯಕ್ಷಕ್ಕೆ ವಿರೋಧವಾಗಿದೆ ಎಂಬ ಪ್ರತಿವಾದಿಯ ಹೇಳಿಕೆಯನ್ನು, ಆಗಮಕ್ಕೆ ಅನ್ಯಾರ್ಥ ಮಾಡುವ ಮೂಲಕ, ದೂಷಣೆ ಮಾಡುವುದರಿಂದ ಪರಮತ ಖಂಡನೆಯೂ ಆಯಿತು. ಜೊತೆಗೆ ಪರವಾದಿಯ ಹೇಳಿಕೆಗೆ ಉಪಕ್ರಮಾದಿ ಲಿಂಗವಿರೋಧವೆಂಬ ದೋಷವನ್ನೂ ತೋರಿಸತಕ್ಕದ್ದು. ಅಲ್ಲದೆ ತನ್ನ ಅರ್ಥಕ್ಕೆ ಲಿಂಗಾನುಕೂಲ್ಯವನ್ನೂ, ವೇದ ಮೊದಲಾದವುಗಳ ಅನುಗ್ರಹವನ್ನೂ (ಸಮ್ಮತಿಯನ್ನೂ) ತೋರಿಸತಕ್ಕದ್ದು.

ಅನುಮಾನದ ಪ್ರಯೋಗದಲ್ಲಿ ತಮ್ಮ ತಮ್ಮ ಸಿದ್ಧಾಂತದ ಪ್ರಕಾರ ನಿಯಮೇನ ಇಂತಿಷ್ಟೇ ಅವಯವಗಳಿರಬೇಕು ಎಂಬ ಕಲ್ಪನೆಯನ್ನು ಸಮರ್ಥಿಸಬೇಕು ಎಂಬ ಪರಕೀಯನ ಹೇಳಿಕೆಯು ಸರಿಯಲ್ಲ. ಏಕೆಂದರೆ ಈ ರೀತಿಯ ಸಮರ್ಥನೆ ಅಶಕ್ಯವೆಂದು ಹೇಳುತ್ತಾರೆ –

ತ್ರಿಪಂಚಾವಯವಾಮೇವ ಯುಗ್ಮಾವಯವಿನೀಮಪಿ ॥೫೫॥

ನಿಯಮಾದ್ಯೋಽಸುಮಾಂ ಬ್ರೂಯಾತ್ತಂ ಬ್ರೂಯಾದ್ಯದಿ ತಾದೃಶೀ ।

ನಾನುಮೇತಿ ತದಾ ಕೇನ ಸಾಧ್ಯಾವಯವಕಲ್ಪನಾ ॥೫೬॥

ಅವಯವ ನಿಯಮವನ್ನು ಒಪ್ಪಿದವನು, ಅನುಮಾನ ಪ್ರಯೋಗದಲ್ಲಿ ನಿಯಮೇನ ಪ್ರತಿಜ್ಞಾ–ಹೇತು–ದೃಷ್ಟಾಂತ ಅಥವಾ ದೃಷ್ಟಾಂತ–ಉಪನಯ–ನಿಗಮನ ಎಂದು ಮೂರು, ಪ್ರತಿಜ್ಞಾ–ಹೇತು–ದೃಷ್ಟಾಂತ–ಉಪನಯ–ನಿಗಮನ ಎಂಬುದಾಗಿ ಐದು ಅಥವಾ ದೃಷ್ಟಾಂತ–ಉಪನಯಗಳೆಂಬ ಎರಡೇ ಅವಯವಗಳು ಎಂದು ಹೇಳಿದರೆ, ಅವನನ್ನು ಕುರಿತು ಆ ನಿಯಮವನ್ನು ಒಪ್ಪದ ಮತ್ತೊಬ್ಬನು, ಅದು ಅನುಮಾನದ ಪ್ರಯೋಗವೇ ಆಗುವುದಿಲ್ಲವೆಂದು ಹೇಳಿದ ಪಕ್ಷದಲ್ಲಿ, ಯಾವ

ಪ್ರಮಾಣದಿಂದ ಈ ರೀತಿಯ ಪಂಚಾವಯವ ಕಲ್ಪನೆಯು ಸಮರ್ಥಿಸಲ್ಪಟ್ಟೀತು?

ವಿವರಣೆ: ಮೀಮಾಂಸಕರು ಹಾಗೂ ತಾರ್ಕಿಕರೇ ಮೊದಲಾದವರು ಅನುಮಾನವು ಮೂರು ಹಾಗೂ ಐದು ಅವಯವಗಳಿಂದ ಕೂಡಿರುವುದೆಂದು ಹೇಳುವರು. ಬೌದ್ಧರು ನಿಯಮೇನ ಎರಡೇ ಅವಯವಗಳೆಂದು ಹೇಳುವರು. ಪಂಚಾವಯವವು ಅವಶ್ಯವೆನ್ನುವ ನೈಯಾಯಿಕರು ತಮ್ಮ ಹೇಳಿಕೆಯನ್ನು ಪ್ರತ್ಯಕ್ಷದಿಂದ ಸಾಧಿಸಿ ತೋರಿಸಲು ಸಾಧ್ಯವಿಲ್ಲ. ಏಕೆಂದರೆ ಪಂಚಾವಯವವುಳ್ಳ ವಾಕ್ಯಕ್ಕೂ ಲಿಂಗ ಜ್ಞಾನಕ್ಕೂ ಇರುವ ಕಾರ್ಯಕಾರಣಭಾವರೂಪವಾದ ಅರ್ಥವು ಪ್ರತ್ಯಕ್ಷಕ್ಕೆ ವಿಷಯವಾಗುವುದಿಲ್ಲ. ಆಗಮದಿಂದ ಸಿದ್ಧ ಮಾಡುವ ಪಕ್ಷದಲ್ಲಿ ಅಂಥಹ ಯಾವುದೇ ಆಗಮವಿರುವುದಿಲ್ಲ. 'ಪಂಚಾವಯವಯುಕ್ತಸ್ಯ ವಾಕ್ಯಸ್ಯ ಗುಣದೋಷ ವಿತ್' ಎನ್ನುವ ಭಾರತಾದಿ ವಾಕ್ಯವು ಪ್ರಮಾಣವೆಂದು ಹೇಳಿದರೆ ಅದೂ ಸರಿಯಲ್ಲ. ಏಕೆಂದರೆ ಅಲ್ಲಿ ಹೇಳಿರುವ ಪಂಚಾವಯವಗಳು ಬೇರೆಯೇ ಆಗಿವೆ. ಅರ್ಥಾಪತ್ತಿ ಯಿಂದ ಸಾಧಿಸುತ್ತೇನೆ ಎಂದರೆ ಅದು ಅನುಮಾನದಿಂದ ಬೇರೆಯಲ್ಲವಾದ್ದರಿಂದ ಆದರಿಂದಲೂ ಸಾಧಿಸುವ ಹಾಗಿಲ್ಲ.

ಹಾಗಾದರೆ ಪ್ರತ್ಯಕ್ಷಾದಿಗಳಿಂದ ಪಂಚಾವಯವ ಕಲ್ಪನೆಯು ಸಿದ್ಧಿಸದಿದ್ದರೆ ಅಡ್ಡಿಯಿಲ್ಲ. ಅನುಮಾನದಿಂದಲಾದರೂ ಅದು ಸಿದ್ಧಿಸುವುದು ಎಂದರೆ –

ನಿಯತಾವಯವಾಸಿದ್ಧೌ ವ್ಯಾಪ್ತಿಮಾತ್ರೇಣ ಸಾಧನಮ್ ।

ಕರ್ತವ್ಯಮೇವ ತೇನ ಸ್ಯಾತ್ತಸ್ಮಾತ್ಸೈವಾನುಮಾ ಮತಾ ॥೫೭॥

ಬೌದ್ಧನು ಐದು ಅವಯವಗಳುಳ್ಳ ವಾಕ್ಯವು ಜ್ಞಾನಕ್ಕೆ ಅವಶ್ಯವೆಂದು ಒಪ್ಪುವುದಿಲ್ಲ. ತಾರ್ಕಿಕರು ಎರಡೇ ಅವಯಗಳುಳ್ಳ ವಾಕ್ಯದಿಂದ ಜ್ಞಾನವು ಸಿದ್ಧಿಸುವುದೆಂದು ಒಪ್ಪುವುದಿಲ್ಲ. ಅನುಮಾನದಿಂದಲೂ ಅವಯವನಿಯಮವು ಸಿದ್ಧಿಸುವುದಿಲ್ಲ. ಐದು ಅವಯವಗಳನ್ನು ಹೇಳುವ ತಾರ್ಕಿಕನಿಗೆ, ಬೌದ್ಧನು ಅಧಿಕ ಎಂಬ ನಿಗ್ರಹಸ್ಥಾನವನ್ನು ಆಪಾದಿಸುತ್ತಾನೆ. ತಾರ್ಕಿಕನು ಬೌದ್ಧನಿಗೆ ನ್ಯೂನ ಎಂಬ ನಿಗ್ರಹವನ್ನು ಹೇಳುತ್ತಾನೆ. ಹೀಗೆ ಅವಯವನಿಯಮವು ಸಿದ್ಧಿಸದೇ ಇರುವಾಗ, ಬೇರೆ ಉಪಾಯವಿಲ್ಲದ ಕಾರಣದಿಂದ, ವ್ಯಾಪ್ತಿವಚನದಿಂದ ಮಾತ್ರವೇ ತಾರ್ಕಿಕನು ಅವಯವ ನಿಯಮವನ್ನು ಸಮರ್ಥನೆ ಮಾಡತಕ್ಕದ್ದು. ಬೌದ್ಧನೂ ಇದನ್ನೇ ಅನುಸರಿಸಬೇಕಾಗುತ್ತದೆ. ಆದಪ್ರಯುಕ್ತ ವ್ಯಾಪ್ತಿವಚನ ಇತ್ಯಾದಿಗಳಿಂದಲೇ ಪರಾರ್ಥ ಅನುಮಾನವು ಸಾಧಿಸಲ್ಪಡುವುದು. (ಯಾವುದಿದ್ದರೆ ಯಾವುದರ ಕಾರ್ಯ ಸಿದ್ಧಿಯೋ, ಯಾವುದಿಲ್ಲದಿದ್ದರೆ ಯಾವುದರ ಕಾರ್ಯಸಿದ್ಧಿ ಆಗುವುದಿಲ್ಲವೋ ಎಂಬ ಅನ್ವಯವ್ಯತಿರೇಕಗಳ ವ್ಯಾಪ್ತಿ) ಇಲ್ಲಿಗೆ ಅನುಮಾನ ಪ್ರಕರಣವು ಮುಗಿದುದು.

ಇಲ್ಲಿಯವರೆಗೆ ಸಾಮಾನ್ಯ ಹಾಗೂ ವಿಶೇಷ ರೂಪಗಳಿಂದ ಪ್ರಮಾಣಗಳ

ಲಕ್ಷಣ ಮುಂತಾದವುಗಳನ್ನು ನಿರೂಪಿಸಲಾಯಿತು. ಅದರಲ್ಲಿ ಪರಕೀಯರಿಂದ ನಿರೂಪಿತವಾದ ಸಾಮಾನ್ಯ ಲಕ್ಷಣಗಳು ನಿರಸ್ತವಾದವು. ಆದರೂ ಸ್ಮೃತಿಯ ಬಗ್ಗೆ ಹೇಳಬೇಕಾದ ವಿಶೇಷಾಂಶವು ಇರುವುದರಿಂದ, ಪ್ರಾಭಾಕರರು ಹೇಳಿದ ಲಕ್ಷಣವನ್ನು ವಿಶೇಷಾಕಾರವಾಗಿ ಇಲ್ಲಿ ನಿರಾಕರಿಸುತ್ತಾರೆ –

ಅನುಭೂತಿಃ ಪ್ರಮಾಣಂ ಚೇತ್ಕೇನ ಸ್ಮೃತಿರಪೋದ್ಯತೇ ।

ಪೂರ್ವಾನುಭೂತೇ ಕಿಂ ಮಾನಮಿತ್ಯುಕ್ತೇ ಸ್ಯಾತ್ಕಿಮುತ್ತರಮ್ ।।೫೮।।

ಮಾನಸಂ ತದ್ಧಿ ವಿಜ್ಞಾನಂ ತಚ್ಚ ಸಾಕ್ಷಿಪ್ರಮಾಣಕಮ್ ।

ಪ್ರಾಭಾಕರರು ಹೇಳುವಂತೆ ಅನುಭವವು ಪ್ರಮಾಣವಾದರೂ ಸ್ಮೃತಿಯು ಪ್ರಮಾಣವಲ್ಲ. ಅನುಭವವು ಪ್ರಮಾಣವೆಂದು ಒಪ್ಪುವ ಪಕ್ಷದಲ್ಲಿ, ಸ್ಮೃತಿಯೂ ಏಕೆ ಪ್ರಮಾಣವಾಗಲಾರದು? ಅದನ್ನು ಏಕೆ ಕೈಬಿಡಬೇಕು? ಸ್ಮೃತಿಯು ಅನುಭವವಲ್ಲ. ಆದ್ದರಿಂದ ಅದು ಪ್ರಮಾಣವಲ್ಲ ಎಂದು ಹೇಳುತ್ತೇವೆ ಎಂದರೆ, ಹಿಂದೆ ಅನುಭವಕ್ಕೆ ಬಂದದ್ದು ಸುಳ್ಳೇ? ಎಂದು ಕೇಳಬೇಕು. ಹಾಗೇನೂ ನಾನು ಹೇಳಲಿಲ್ಲ, ಹಿಂದಿನ ಅನುಭವವು ಸತ್ಯವೇ ಎಂದು ಉತ್ತರಿಸಿದರೆ, ಅನುಭವವು ಸತ್ಯವೆಂದು ಹೇಳಲು ಸ್ಮೃತಿಯಲ್ಲದೇ ಬೇರೆ ಯಾವ ಪ್ರಮಾಣವಿದೆ ಎಂದು ಅವನನ್ನು ಕೇಳಬೇಕು. ಅದಕ್ಕೆ ಅವನು ಉತ್ತರವನ್ನು ಕೊಡಲಾಗುವುದಿಲ್ಲ. ಅಂದು ಅನುಭವಿಸಿದ ವಸ್ತುವಿಗೆ ಈಗ ಇಂದ್ರಿಯಗಳ ಸನ್ನಿಕರ್ಷವಿರುವುದಿಲ್ಲ. ಆದಕಾರಣ ಅದು ಇಂದಿನ ಪ್ರತ್ಯಕ್ಷದಿಂದ ವಿಜ್ಞಾತವಾಗುವುದು ಸಾಧ್ಯವಿಲ್ಲ. ಆದರೆ ಅಂದಿನ ಪ್ರತ್ಯಕ್ಷವು ಮಾನಸಿಕ ಸಂಸ್ಕಾರದಿಂದ ಇಂದು ಸ್ಮರಣೆಗೆ ಬರುವುದು. ಮಾನಸಿಕ ಪ್ರತ್ಯಕ್ಷ ಅಥವಾ ಸಾಕ್ಷಾತ್ಕಾರವು ಸಾಕ್ಷಿರೂಪವೇ ಆಗಿದೆ. ಹೀಗೆ ಸಾಕ್ಷಿಯಿಂದ ಸಿದ್ಧವಾಗುವ ಸ್ಮೃತಿಯ ಪ್ರಾಮಾಣ್ಯವು ಅಬಾಧಿತವಾದುದು. ಆದ್ದರಿಂದ ಸ್ಮೃತಿಯು ಪ್ರಮಾಣವಲ್ಲ ಎನ್ನುವುದು ಕೂಡುವುದಿಲ್ಲ.

ಒಂದು ವಸ್ತುವಿನ ಜ್ಞಾನವಾಗಬೇಕಾದ ಪಕ್ಷದಲ್ಲಿ, ಇಂದ್ರಿಯಗಳಿಗೂ ಆ ವಸ್ತುವಿಗೂ ಪ್ರಾಪ್ತಿ (ಸಂಯೋಗ) ಉಂಟಾಗಬೇಕೆಂಬ ನಿಯಮವಿದೆ. ಆದರೆ ಹಿಂದೆ ಆಗಿಹೋದ ವಸ್ತುವಿನ ಸ್ಮರಣೆಯ ಕಾಲದಲ್ಲಿ ಆ ವಸ್ತುವಿಗೂ ಮನಸ್ಸಿಗೂ ಸಂಯೋಗವು ಇರುವುದಿಲ್ಲ. ಆದುದರಿಂದ ಸ್ಮೃತಿಯು ಮಾನಸಪ್ರತ್ಯಕ್ಷಜನ್ಯ ಎನ್ನುವುದು ಹೇಗೆ ಕೂಡುವುದು ಎಂದು ಆಶಂಕಿಸಿದರೆ –

ಅತೀತಾನಾಗತಂ ಯದ್ವದ್ಯೋಗಿಭಿರ್ದೃಶ್ಯತೇಽಜಸಾ ।।೫೯।।

ಏವಂ ಪೂರ್ವಾನುಭೂತಂ ಚ ಮಾನಸೈವಾವಗಮ್ಯತೇ ।

ಅಣಿಮಾದಿ ಸಿದ್ಧಿಯನ್ನು ಗಳಿಸಿರುವ ಯೋಗಿಗಳಿಂದ ಭೂತ ಭವಿಷ್ಯತ್ಕಾಲಗಳ

ವಸ್ತುಗಳು ಸಾಕ್ಷಾತ್ತಾಗಿಯೇ ನೋಡಲ್ಪಡುತ್ತವೆ. ಇಂಥಹ ಯೋಗಿಗಳ ವಿಷಯವು ಇತಿಹಾಸ ಪುರಾಣಗಳಲ್ಲಿ ಪ್ರಸಿದ್ಧವಾಗಿವೆ. ಹೀಗೆಯೇ ಪೂರ್ವದಲ್ಲಿ ಅನುಭವಕ್ಕೆ ಗೋಚರವಾದ ವಸ್ತುವೂ ಮನಸ್ಸಿನಿಂದಲೇ ತಿಳಿಯಲ್ಪಡುತ್ತದೆ.

ವಿಜ್ಞಾತಂ ಮನಸಾ ಪೂರ್ವಂ ಮಯ್ಯೈತತ್ಕೃತಮಿತ್ಯಪಿ ॥೬೦॥

ಸಾಕ್ಷಾದನುಭವಾತ್ಸಿದ್ಧಂ ಕಥಮೇವ ಹ್ಯಪೋದ್ಯತೇ ।

ಇದು ನನ್ನಿಂದ ಪೂರ್ವದಲ್ಲಿ ಮಾಡಲ್ಪಟ್ಟಿದ್ದು, ಇದು ನನ್ನಿಂದ ಮನಸ್ಸಿನಿಂದ ಸ್ಮರಿಸಲ್ಪಟ್ಟಿದ್ದೂ ಆಗಿರುವುದು. ಹೀಗೆ ಸ್ಮರಣೆಗೆ ಮಾನಸಜನ್ಯತ್ವವು ಸಾಕ್ಷಿ ಅನುಭವದಿಂದ ಸಿದ್ಧವಾಗಿದೆ.

ಮನಸ್ಸು ಸಾಕ್ಷೀಂದ್ರಿಯಕ್ಕೆ ಗೋಚರವಾದರೂ, ಮನಸ್ಸಿಗೂ ಸ್ಮೃತಿಗೂ ಕಾರ್ಯ ಕಾರಣಭಾವವು ಪ್ರತ್ಯಕ್ಷಗೋಚರವಲ್ಲ ಎಂದು ಹೇಳಕೂಡದು. ಅನ್ವಯ ವ್ಯತಿರೇಕಗಳ ಮೂಲಕ ಸಾಕ್ಷಿಗೆ ಆ ವಿಷಯದಲ್ಲಿ ಪ್ರಾಮಾಣ್ಯವು ಅಂಗೀಕರಿಸಲ್ಪಟ್ಟಿದೆ. ಆದಕಾರಣ ಸ್ಮೃತಿಯು ಅನುಭವವೆಂಬುದನ್ನು ಹೇಗೆ ತಾನೇ ನಿರಾಕರಿಸುವುದು ಸಾಧ್ಯ?

ಯಾಥಾರ್ಥ್ಯಮೇವ ಇತ್ಯಾದಿಗಳಿಂದ ಹೇಳಲ್ಪಟ್ಟ ಪ್ರಮೇಯಕ್ಕೆ ಪ್ರಕೃತದಲ್ಲಿ ಉಪಯೋಗವನ್ನು ಹೇಳುತ್ತಾರೆ –

ಏವಂ ಲಕ್ಷಣಕೇ ಮಾನತ್ರಯೇ ಬ್ರಹ್ಮಾದಿವಸ್ತುಷು ॥೬೧॥

ಪ್ರಮಾಣಂ ವೇದ ಏವೈಕಸ್ತತ್ಪ್ರಾಮಾಣ್ಯಂ ಚ ಸಾಧಿತಮ್ ।

ಹೀಗೆ ಯಾಥಾರ್ಥ್ಯರೂಪ ಲಕ್ಷಣವುಳ್ಳ ಪ್ರಮಾಣತ್ರಯದಲ್ಲಿ ವೇದವೊಂದೇ ಬ್ರಹ್ಮಾದಿ ವಸ್ತುಗಳಲ್ಲಿ ಮುಖ್ಯ ಪ್ರಮಾಣವು. ವೇದಪ್ರಾಮಾಣ್ಯವಾದರೋ ಹಿಂದೆಯೇ ಸಾಧಿಸಲ್ಪಟ್ಟಿದೆ.

ವಿವರಣೆ: ಬ್ರಹ್ಮ ಮೊದಲಾದ ಅತೀಂದ್ರಿಯ ವಸ್ತುಗಳ ವಿಷಯದಲ್ಲಿ ವೇದವೊಂದೇ ಪ್ರಮಾಣವು. ಯುಕ್ತ್ಯಾದಿಗಳಿಗೆ ಇಲ್ಲಿ ಅವಕಾಶವಿಲ್ಲ. ಪ್ರಾಕೃತ ರೂಪಾದಿಗಳುಳ್ಳ ದ್ರವ್ಯಗಳಲ್ಲಿಯೇ ಇಂದ್ರಿಯಗಳ ಪ್ರವೃತ್ತಿಯು. ಬ್ರಹ್ಮಾದಿಗಳಿಗೆ ಪ್ರಾಕೃತ ರೂಪಾದಿಗಳಿಲ್ಲ. ಇಂದ್ರಿಯಗಳಿಗೆ ಬ್ರಹ್ಮಾದಿಗಳ ಬಗ್ಗೆ ಜ್ಞಾನವನ್ನು ಹುಟ್ಟಿಸುವ ಅವಕಾಶವಿಲ್ಲ. ಆದಕಾರಣ ಈ ವಿಷಯದಲ್ಲಿ ಪ್ರತ್ಯಕ್ಷವು ಪ್ರಮಾಣವಾಗಲಾರದು. ಅನುಮಾನವು ವ್ಯಾಪ್ತಿಯನ್ನು ಅವಲಂಬಿಸಿದೆ. ಆದರೆ ವೇದಸಹಕೃತವಲ್ಲದ ಅನುಮಾನಕ್ಕೆ ಬ್ರಹ್ಮಾದಿಗಳಲ್ಲಿ ಪ್ರವೃತ್ತಿಯಿಲ್ಲ. ಪೌರುಷೇಯ ಆಗಮವಾದರೂ ಪರತಂತ್ರವು. ಹೀಗೆ ಪ್ರತ್ಯಕ್ಷ, ಅನುಮಾನ ಹಾಗೂ ಪೌರುಷೇಯ ಆಗಮಗಳಿಂದ ವೇದದ ಪ್ರಾಮಾಣ್ಯದ ವಿಷಯದಲ್ಲಿ ವಿರೋಧ ಬರುವುದು

ಸಾಧ್ಯವಿಲ್ಲ. ಆದಕಾರಣ ವೇದಪ್ರಾಮಾಣ್ಯವು ಅಬಾಧಿತವಾದುದು.

ಅಭಿಮಾನ್ಯಧಿಕರಣಮ್

ಸೂತ್ರ: ಓಂ ಅಭಿಮಾನಿ ವ್ಯಪದೇಶಾಸ್ತು ವಿಶೇಷಾನುಗತಿಭ್ಯಾಂ ಓಂ

ಸೂತ್ರಾರ್ಥ: ಮೃದಬ್ರವೀತ್ ಇತ್ಯಾದಿ ಶ್ರುತಿಗಳಲ್ಲಿ ಮೃದಾದಿ ಅಭಿಮಾನಿ ದೇವತೆಗಳೇ ಹೇಳಲ್ಪಟ್ಟಿದ್ದಾರೆ, ಮೃದಾದಿ ಜಡ ವಸ್ತುಗಳಲ್ಲ. ಶಕ್ತಿ ಹಾಗೂ ತಮ್ಮಿಂದ ಅಭಿಮನ್ಯವಾದ ವಸ್ತುಗಳಲ್ಲಿ ವ್ಯಾಪ್ತಿ ಇವುಗಳನ್ನು ಅಭಿಮಾನಿ ದೇವತೆಗಳು ಹೊಂದಿರುವುದರಿಂದ, ಅವರಿಗೆ ಸದೇಹತ್ವವನ್ನು ಒಪ್ಪಿದರೂ ಅಂತರ್ಧಾನ ಶಕ್ತಿಯಿಂದ ಅಗೋಚರತ್ವವು ಕೂಡುತ್ತದೆ.

ವೇದಕ್ಕೆ ಯುಕ್ತ್ಯಂತರದಿಂದ ವಿರೋಧವನ್ನು ಈ ಪ್ರಕರಣದಲ್ಲಿ ಪರಿಹರಿಸುತ್ತಾರೆ. ಹಿಂದಿನ ಅಧಿಕರಣದಲ್ಲಿಯೇ ಉಪಲಕ್ಷಣದಿಂದ ಎಲ್ಲ ಯುಕ್ತಿಗಳ ವಿರೋಧವೂ ಪರಿಹರಿಸಲ್ಪಟ್ಟಿವೆ. ಆದ್ದರಿಂದ ಈ ಅಧಿಕರಣಕ್ಕೆ ಆರಂಭಣೀಯತ್ವವು ಕೂಡುವುದಿಲ್ಲವೆಂದು ಹೇಳಕೂಡದು. ಅಭ್ಯಧಿಕಾಶಂಕೆಯು ಬರುವುದರಿಂದ ಈ ಅಧಿಕರಣಕ್ಕೆ ಆರಂಭಣೀಯತ್ವವು ಕೂಡುತ್ತದೆ ಎನ್ನುವ ಅಭಿಪ್ರಾಯದಿಂದ ಪೂರ್ವಪಕ್ಷವನ್ನು ಮೊದಲು ಅನುವಾದ ಮಾಡುತ್ತಾರೆ –

ತಥಾಪಿ ಮೃಜ್ಜಲಾದೀನಾಂ ಬುದ್ಧಿವಾಗಾದಿವಾಚಕಃ ।।೬೨।।

ದೃಷ್ಟವ್ಯಾಪ್ತಿವಿರುದ್ಧತ್ವಾತ್ತತ್ರ ಮಾನಂ ಕಥಂ ಭವೇತ್ ।

ವೇದಕ್ಕೆ ಫಲವ್ಯಭಿಚಾರ, ಆಪ್ತನಿಂದ ಉಕ್ತವಾಗಿದೆಯೆಂಬ ಗುಣವಿಲ್ಲದಿರುವುದು ಇತ್ಯಾದಿ ವಿರೋಧವು ಪರಿಹರಿಸಲ್ಪಟ್ಟಿದೆ. ಹಾಗಿದ್ದರೂ ವೇದಪ್ರಾಮಾಣ್ಯಕ್ಕೆ ವಿರೋಧವು ತಪ್ಪದು. ಏಕೆಂದರೆ 'ಮೃದಬ್ರವೀತ್' ಇತ್ಯಾದಿ ವೇದವು ಮಣ್ಣು, ನೀರು, ಅಗ್ನಿ ಮುಂತಾದವುಗಳಿಗೆ ಜ್ಞಾನ, ವಕ್ತೃತ್ವ, ಶ್ರೋತೃತ್ವ ಮುಂತಾದವುಗಳನ್ನು ಪ್ರತಿಪಾದಿಸುವುದು. ಇದು ಪ್ರಮಾಣಸಿದ್ಧವಾದ ವ್ಯಾಪ್ತಿ ಪಕ್ಷಧರ್ಮತೆಗಳಿಂದ ಸಹಿತವಾದ ಯುಕ್ತಿಗೆ ವಿರುದ್ಧ. ಇಂಥಹ ವಚನಗಳಿಂದ ಕೂಡಿರುವ ವೇದವು ಹೇಗೆ ತಾನೇ ಪ್ರಮಾಣವಾದೀತು? ಹೀಗೆ ಪೂರ್ವಪಕ್ಷವು.

ವಿವರಣೆ: 'ಮೃದಬ್ರವೀತ್' 'ಆಪೋಽಬ್ರುವನ್' 'ತತ್ತೇಜ ಐಕ್ಷತ' 'ತಾ ಆಪ ಐಕ್ಷಂತ' 'ಶೃಣೋತ ಗ್ರಾವಾಣೋ ವಿದುಷೋಽನು ಪ್ರಾಣಾಃ' 'ಆಪೋ ವಾ ಅಕಾಮಯಂತ' ಇತ್ಯಾದಿ ವೇದವು ಪ್ರಮಾಣವಲ್ಲ. ಏಕೆಂದರೆ 'ನೀಲಂ ನಭಃ' ಎನ್ನುವ ವಾಕ್ಯದಂತೆ ಯುಕ್ತಿಗೆ ವಿರುದ್ಧವಾದ ಅರ್ಥವನ್ನು ಹೇಳುತ್ತದೆ. ಮಣ್ಣಿನಿಂದ ಮಾಡಿದ ಮಡಿಕೆ ಮಾತನಾಡುವುದಿಲ್ಲ, ಅದು ಜಡವಾಗಿರುವ ಕಾರಣ ಜ್ಞಾನರಹಿತವಾಗಿರುವುದರಿಂದ, ಎನ್ನುವ ಯುಕ್ತಿಯು ಪ್ರತ್ಯಕ್ಷದಿಂದ ಸಿದ್ಧವಾಗಿದೆ.

ಮಣ್ಣು ಮಾತನಾಡಿತು ಎಂದು ಹೇಳುವ ವೇದವು ಪ್ರತ್ಯಕ್ಷದಿಂದ ಸಹಕೃತವಾದ ಯುಕ್ತಿಗೆ ವಿರುದ್ಧವಾದ್ದರಿಂದ ಅಪ್ರಮಾಣವಾಗುವುದು. ಇದೇ ರೀತಿ ಯುಕ್ತಿ ವಿರೋಧದಿಂದ ನೀರು ಬೆಂಕಿ ಇತ್ಯಾದಿಗಳ ಬಗ್ಗೆ ಹೇಳಲ್ಪಟ್ಟಿರುವ ವೇದ ವಾಕ್ಯಗಳೂ ಪ್ರಮಾಣವಾಗುವುದಿಲ್ಲ. ಈ ಪ್ರಕಾರವಾಗಿ ವೇದದ ಒಂದು ಕಡೆಯಲ್ಲಿ ಅಪ್ರಮಾಣವು ಬರುತ್ತಿರಲು, 'ಯತೋ ವಾ ಇಮಾನಿ ಭೂತಾನಿ ಜಾಯಂತೇ ಇತ್ಯಾದಿ ವಾಕ್ಯಾಂತರಂ ಅಪ್ರಮಾಣಂ ವೇದವಾಕ್ಯತ್ವಾತ್ ಮೃದಬ್ರವೀತ್ ಇತ್ಯಾದಿ ವಾಕ್ಯವತ್' ಎಂಬ ಅನುಮಾನದಿಂದ ಬೇರೆ ವೇದವಾಕ್ಯಗಳಿಗೂ ಅಪ್ರಮಾಣವನ್ನು ಹೇಳುತ್ತೇವೆ ಎಂದು ಪೂರ್ವಪಕ್ಷ. ಹಿಂದಿನ ನವಿಲಕ್ಷಣತ್ವಾಧಿಕರಣದ ನ್ಯಾಯದಿಂದಲೇ ಈ ವಿರೋಧವನ್ನೂ ಪರಿಹರಿಸಬೇಕು ಎಂದು ಹೇಳಕೂಡದು. ಅಲ್ಲಿ ಹೇಳಿದ ಫಲವ್ಯಭಿಚಾರಾದಿ ರೂಪವಾದ ಅಪ್ರಮಾಣ್ಯಸಾಧಕ ಹೇತುವಿಗೆ ವ್ಯಾಪ್ತಿ ಪಕ್ಷಧರ್ಮತಾಗಳು ನಿಶ್ಚಿತವಾಗದೇ ಇದ್ದುದರಿಂದ ಯುಕ್ತಿವಿರೋಧವನ್ನು ಪರಿಹರಿಸಲಿಕ್ಕೆ ಸಾಧ್ಯವಾಯಿತು. ಆದರೆ ಇಲ್ಲಿ ಹೇಳಿದ ಯುಕ್ತಿಗೆ ವ್ಯಾಪ್ತಿ ಪಕ್ಷಧರ್ಮತಾದಿಗಳು ಪ್ರಮಾಣ ದೃಷ್ಟವಾಗಿವೆ. ನಿರವಕಾಶವಾದ ದೃಢವಾದ ಯುಕ್ತಿವಿರೋಧವನ್ನು ಪರಿಹರಿಸಲು ಸಾಧ್ಯವಿಲ್ಲ. ಹಾಗಾದರೆ, ನಿತ್ಯವಾದುದರಿಂದ ವೇದವು ಪ್ರಮಾಣವು, ವೇದವಿರುದ್ಧವಾದ ಯುಕ್ತಿಯೇ ಅಪ್ರಮಾಣವು ಎಂದರೆ, ಹಾಗೆ ಹೇಳಕೂಡದು. ವ್ಯಾಪ್ತಿಪಕ್ಷಧರ್ಮತೆಗಳಿಂದ ಕೂಡಿದ ನಿರವಕಾಶ ಯುಕ್ತಿಗೆ ವಿರುದ್ಧವಾದ್ದರಿಂದ ವೇದಕ್ಕೇ ಅಪ್ರಾಮಾಣ್ಯವು. ಈಗಿನ ಮಣ್ಣು ಮುಂತಾದವು ಮಾತಾಡುವುದಿಲ್ಲವಾದರೂ, ವೇದಕಾಲದಲ್ಲಿ ಅವು ಮಾತನಾಡುತ್ತಿದ್ದವು ಎಂದು ಹೇಳಿದರೆ, ಅದು ಪ್ರತ್ಯಕ್ಷಾದಿ ಪ್ರಮಾಣಸಿದ್ಧವಲ್ಲ. ಹೀಗೆ ಯಾವರೀತಿಯಲ್ಲಿ ನೋಡಿದರೂ 'ಮೃದಬ್ರವೀತ್' ಇತ್ಯಾದಿ ವೇದವು ಅಪ್ರಮಾಣವಾಗುವುದು. ಅಂದಮೇಲೆ ಬ್ರಹ್ಮನಿಗೆ ಜಗತ್ಕಾರಣತ್ವವನ್ನು ಹೇಳುವ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಮುಂತಾದ ವೇದವೂ ಅಪ್ರಮಾಣವಾಗುವುದು. ಆದಪ್ರಯುಕ್ತ ಬ್ರಹ್ಮನಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲವಾದ್ದರಿಂದ ಬ್ರಹ್ಮಜಿಜ್ಞಾಸೆ ಮಾಡಬೇಕಿಲ್ಲ.

ಹೀಗೆ ಪೂರ್ವಪಕ್ಷ ಬಂದರೆ, ಅದನ್ನು ನಿರಾಕರಿಸಿ, 'ತತಃ' ಇತ್ಯಾದಿ ಮಾತುಗಳಿಂದ ಸಿದ್ಧಾಂತವನ್ನು ಹೇಳುತ್ತಾರೆ –

ತತಸ್ತನ್ನಾಮಕಃ ಕಶ್ಚಿತ್ಪುಮಾನನ್ಯೋ ಭವೇದಿತಿ ।।೬೩।।

ಯುಕ್ತ್ಯಾಗಮವಿರೋಧೇನ ಪ್ರಾಪ್ತಮತ್ರಾಭಿಧೀಯತೇ ।

ವೇದ ಹಾಗೂ ಯುಕ್ತಿಗಳು ನಿರವಕಾಶವಾಗಿರುವುದರಿಂದ ವೇದದಲ್ಲಿ ಹೇಳಲ್ಪಟ್ಟಿರುವ ಮಣ್ಣು ಮುಂತಾದವುಗಳಿಗೆ ಅಭಿಮಾನಿ ದೇವತೆಗಳ ಪರವಾಗಿ ಅರ್ಥಮಾಡಬೇಕು. ಮೃತ್ ಮುಂತಾದ ಹೇಸರುಳ್ಳ, ನಮ್ಮ ಇಂದ್ರಿಯಗಳಿಗೆ

ಅಗೋಚರನೂ ಹಾಗೂ ನಮಗಿಂತ ವಿಲಕ್ಷಣನೂ ಆದ, ಚೇತನನು ಮೃದಬ್ರವೀತ್ ಎಂಬಲ್ಲಿ ಮೃತ್ ಶಬ್ದದಿಂದ ಪ್ರತಿಪಾದಿಸಲ್ಪಡುತ್ತಾನೆ. ಯುಕ್ತಿ ಆಗಮಗಳಿಗೆ ಪರಸ್ಪರ ಅವಿರೋಧವು ಬರುವುದರಿಂದ, ಹಿಂದೆ ಹೇಳಿದ ಪ್ರಕಾರ ಪ್ರಮಿತವಾದುದು ಈ ಅಧಿಕರಣದಲ್ಲಿ ಹೇಳಲ್ಪಡುತ್ತದೆ. ಈ ಪ್ರಕಾರವಾಗಿ ಮೃದಬ್ರವೀತ್ ಇತ್ಯಾದಿ ವೇದವು ಅಭಿಮಾನಿ ಚೇತನನನ್ನು ಕುರಿತು ಹೇಳುವುದರಿಂದ ವೇದಕ್ಕೆ ಅಪ್ರಾಮಾಣ್ಯ ಬರುವುದಿಲ್ಲ ಎಂದು ಸಿದ್ಧವಾಗುವುದು.

ಮೃದಾದಿಗಳ ಅಭಿಮಾನಿ ದೇವತೆಗಳಿಗೆ ಮೃದಾದಿ ಶಬ್ದವಾಚ್ಯತ್ವವುಂಟು ಎಂದು ಹೇಳುವುದು ಆಯುಕ್ತ. ಏಕೆಂದರೆ ಮೃದಾದಿ ಶಬ್ದಗಳು ಜಡ ಪದಾರ್ಥಗಳಾದ ಮಣ್ಣು ಇತ್ಯಾದಿಗಳಲ್ಲಿ ರೂಢಿಯಲ್ಲಿದೆಯೇ ಹೊರತು, ಚೇತನಗಳಲ್ಲಿ ಅಲ್ಲ. ಸೂತ್ರಕಾರರೂ ಕೂಡ ದೇವತೆಗಳಲ್ಲಿ ಮೃದಾದಿ ಶಬ್ದಗಳಿಗೆ ವಚನವೃತ್ತಿಯನ್ನು ಹೇಳಿಲ್ಲ. ಹೀಗೆ ಆಕ್ಷೇಪ ಬಂದರೆ –

ಬಾಲರೂಢಿಂ ವಿನೈವಾಪಿ ವಿದ್ವದ್ರೂಢಿಸಮಾಶ್ರಯಾತ್ ॥೬೪॥

ತತ್ತನಾಮಾನ ಏವೈತೇ ತತ್ತದ್ವಸ್ತ್ವಭಿಮಾನಿನಃ ।

ಸಂತಿ................................॥

ಮೃತ್ ಮುಂತಾದ ಶಬ್ದಗಳಿಗೆ ಮಣ್ಣು ಮುಂತಾದ ವ್ಯವಹಾರವು ಅಜ್ಞ ರೂಢಿಯ ಪ್ರಕಾರ ಕೂಡುವುದು. ಆದರೆ ಅಜ್ಞರೂಢಿಗಿಂತ ವಿದ್ವದ್ರೂಢಿಯು ಪ್ರಬಲ. ವೇದಗಳಿಗೆ ಅರ್ಥಮಾಡಬೇಕಾದರೆ ವಿದ್ವದ್ರೂಢಿಯನ್ನು ಚೆನ್ನಾಗಿ ಆಶ್ರಯಿಸಬೇಕು. ವಿದ್ವದ್ರೂಢಿಯ ಪ್ರಕಾರ ಪೃಥಿವ್ಯಾದಿ ದೇವತೆಗಳು ಮೃತ್ ಮುಂತಾದ ಆಯಾಯ ನಾಮಗಳಿಂದ ವಾಚ್ಯರಾಗುತ್ತಾರೆ ಹಾಗೂ ಆಯಾಯ ವಸ್ತುಗಳ ಮೇಲೆ ಅಭಿಮಾನವುಳ್ಳವರೇ ಆಗುತ್ತಾರೆ.

ಹಾಗಾದರೆ ಅಭಿಮಾನಿದೇವತೆಗಳಿಗೆ ಏಕದೇಶದಲ್ಲಿರುವಿಕೆಯನ್ನು ಒಪ್ಪಿದರೆ ವೈಯರ್ಥ್ಯ ಬರುವುದು. ದೇಹವಿಲ್ಲವೆಂದರೆ ವಕ್ತೃತ್ವಾದಿಗಳು ಕೂಡುವುದಿಲ್ಲ. ವ್ಯಾಪ್ತರಿಗೆ ದೇಹವಿದ್ದ ಪಕ್ಷದಲ್ಲಿ ಕಾಣದಿರುವಿಕೆ ಎಂಬ ಬಾಧವು ಬರುವುದು. ಹೀಗೆ ದೋಷಗಳನ್ನು ಆಪಾದಿಸಿದರೆ, ಪರಿಹಾರಕ್ಕಾಗಿ ಸೂತ್ರಾಂಶವಾದ ವಿಶೇಷಾನು ಗತಿಭ್ಯಾಂ ಎಂಬುದಕ್ಕೆ 'ಕಶ್ಚಿತ್ತುಪಮಾನನ್ಯಃ' ಎಂಬುದಾಗಿ ತಾತ್ಪರ್ಯತಃ ವ್ಯಾಖ್ಯಾನ ಮಾಡಿದ್ದಾರೆ. ಆದನ್ನು 'ತೇಷಾಂ ವಿಶೇಷೇಣ' ಇತ್ಯಾದಿ ಮುಂದಿನ ಮಾತುಗಳಿಂದ ವಿವರಿಸುತ್ತಾರೆ –

.........ತೇಷಾಂ ವಿಶೇಷೇಣ ಶಕ್ತಿರನ್ಯೇಭ್ಯ ಉಚ್ಯತೇ ॥೬೫॥

ವ್ಯಾಪ್ತಿಶ್ಲೋಕ್ತಾನುಸಾರೇಣ ದೃಶ್ಯಂತೇ ಚಾಧಿಕಾರಿಭಿಃ ।

ಅಭಿಮಾನಿ ದೇವತೆಗಳಿಗೆ ನಮ್ಮಂಥವರಿಗಿಂತ ಅತಿಶಯವಾಗಿ 'ಆತ್ಮನಿ ಚೈವಂ ವಿಚಿತ್ರಾಶ್ಚ ಹಿ' ಇತ್ಯಾದಿಗಳಲ್ಲಿ ಹೇಳಿರುವ ಪ್ರಕಾರ ಸಾಮರ್ಥ್ಯವೂ, ವ್ಯಾಪ್ತಿಯೂ, ದೇಹವತ್ವವೂ ಕೂಡ ಹೇಳಲ್ಪಡುತ್ತದೆ. ನಮ್ಮಂಥವರ ಕಣ್ಣಿಗೆ ಕಾಣದವುಗಳನ್ನೂ ಕಾಣುವ ಸಾಮರ್ಥ್ಯವುಳ್ಳ ಯೋಗಿಗಳಿಂದ ಆ ಅಭಿಮಾನಿ ದೇವತೆಗಳು ನೋಡಲ್ಪಡುತ್ತಾರೆ.

ಹಾಗಿದ್ದರೂ ಮೃದಬ್ರವೀತ್ ಮುಂತಾದ ವೇದವಾಕ್ಯಗಳಿಗೆ ಅಬೋಧಕತ್ವ ರೂಪವಾದ ಅಪ್ರಾಮಾಣ್ಯವು ಬಂದೇ ಬರುವುದು. ಪದಗಳು ಪದಾರ್ಥಗಳೊಡನೆ ಇರುವ ವಾಚ್ಯ–ವಾಚಕಭಾವರೂಪ ಸಂಬಂಧದ ಜ್ಞಾನರೂಪವಾದ ವ್ಯುತ್ಪತ್ತಿಯನ್ನು ಅಪೇಕ್ಷಿಸುತ್ತವೆ. ಹೀಗೆ ಅನ್ವಯ–ವ್ಯತಿರೇಕಗಳಿಂದ ತಿಳಿದುಬರುತ್ತದೆ. ಮೃದಾದಿ ಶಬ್ದಗಳಿಗೆ ತದಭಿಮಾನಿ ದೇವತೆಗಳಲ್ಲಿ ವ್ಯುತ್ಪತ್ತಿಯು ಕೂಡುವುದಿಲ್ಲ. ಏಕೆಂದರೆ ವಾಚ್ಯವಾಚಕ ಸಂಬಂಧವನ್ನು ತಿಳಿಯಬೇಕಾದರೆ ವಾಚ್ಯವಾದ ವಸ್ತುವಿನ ಜ್ಞಾನವು ಅವಶ್ಯಕ. ಆದರೆ ಇಲ್ಲಿ ಮೃದಾದಿ ಶಬ್ದದಿಂದ ವಾಚ್ಯರಾದ ದೇವತೆಗಳು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗುವುದಿಲ್ಲ. ಲಿಂಗದ ಅಭಾವದಿಂದಾಗಿ ಯುಕ್ತಿಯಿಂದ ಅವರನ್ನು ತಿಳಿಯಲು ಸಾಧ್ಯವಿಲ್ಲ. ವ್ಯುತ್ಪತ್ತಿಯು ಕೂಡುವುದಿಲ್ಲವಾದ್ದರಿಂದ ಶಬ್ದದಿಂದಲೂ ದೇವತೆಗಳ ಬಗ್ಗೆ ಜ್ಞಾನವು ಬರುವುದಿಲ್ಲ. ಎಲ್ಲಿಯೂ ಕಾಣದೇ ಇದ್ದುದನ್ನು ಕಲ್ಪನೆ ಮಾಡಬೇಕಾಗುವುದು. ದೃಶ್ಯತೇ ಚ ಎಂದು ಹೇಳಿದ್ದರೂ, ಅದು ಯೋಗಿಗಳಿಗೆ ಸಂಬಂಧಿಸಿದ್ದು. ನಮಗಂತೂ ದೇವತೆಗಳು ಕಾಣುವುದು ಸಾಧ್ಯವಿಲ್ಲ. ಆದ್ದರಿಂದ ದೇವತೆಗಳಲ್ಲಿ ಮೃದಾದಿ ಶಬ್ದವಾಚ್ಯತ್ವವು ಕೂಡುವುದಿಲ್ಲ. ಹೀಗೆ ಆಶಂಕಿಸಿದರೆ –

ಶಾಸ್ತ್ರೋಕ್ತವಸ್ತುನಶ್ಚೈವ ವ್ಯುತ್ಪತ್ತಿಃ ಶಾಸ್ತ್ರಲಿಂಗತಃ ।।೬೬।।

ವ್ಯುತ್ಪತ್ತಿಃ ಸಾ ಬಲವತೀ ಮೂರ್ಖವ್ಯುತ್ಪತ್ತಿತೋ ಹಿ ಯತ್ ।

ದೃಢಯುಕ್ತಿವಿರೋಧೇ ತು ಸರ್ವತ್ರ ನ್ಯಾಯ ಈದೃಶಃ ।।೬೭।।

ಕೇವಲ ಶಾಸ್ತ್ರದಿಂದಲೇ ತಿಳಿಯಲು ಯೋಗ್ಯವಾದ ವಸ್ತುಗಳಿಗೂ ವಾಚ್ಯವಾಚಕ ಸಂಬಂಧರೂಪವಾದ ವ್ಯುತ್ಪತ್ತಿಯು ಕೂಡುತ್ತದೆ. ಶಾಸ್ತ್ರರೂಪಲಿಂಗದಿಂದಲೇ ಆ ಜ್ಞಾನವು ಸಂಭವಿಸುವುದು. ಶಬ್ದಶಕ್ತಿಯನ್ನು ತಿಳಿದ ಜ್ಞಾನಿಗಳಿಂದ ಶಾಸ್ತ್ರಲಿಂಗದ ಜ್ಞಾನದಿಂದ ಸಂಪಾದಿಸಲ್ಪಟ್ಟ ವ್ಯುತ್ಪತ್ತಿಯು ಶಾಸ್ತ್ರಲಿಂಗದ ಜ್ಞಾನವಿಲ್ಲದ ಮೂರ್ಖರ ವ್ಯುತ್ಪತ್ತಿಗಿಂತ ಪ್ರಬಲವಾಗಿರುವುದು. ಈ ಕಾರಣದಿಂದ ಮೃದಾದಿ ನಾಮಗಳಿಂದ ವಾಚ್ಯರಾದ ದೇವತೆಗಳೇ ಆಯಾಯ ಶಬ್ದಗಳಿಂದ ಪ್ರತಿಪಾದಿಸಲ್ಪಡುತ್ತಾರೆ. ವೇದ ವಾಕ್ಯಗಳಿಗೆ ವ್ಯಾಪ್ತಿ ಪಕ್ಷಧರ್ಮತಾ ಸಹಿತವಾದ ದೃಢವಾದ ಯುಕ್ತಿವಿರೋಧವು ಕಂಡುಬರುವ ಎಲ್ಲ ಕಡೆಗಳಲ್ಲಿಯೂ, ಇದೇ ರೀತಿ ನ್ಯಾಯವನ್ನು ಅನುಸರಿಸಿ, ಅವಿರೋಧವಾದ ಅರ್ಥವನ್ನು ಸ್ವೀಕರಿಸಿ, ವಿರೋಧವನ್ನು ಪರಿಹರಿಸತಕ್ಕದ್ದು.

ಅಸದಧಿಕರಣಮ್

ಓಂ ಅಸದಿತಿ ಚೇನ್ನ ಪ್ರತಿಷೇಧಮಾತ್ರತ್ವಾತ್ ಓಂ

ಈ ಅಧಿಕರಣದಲ್ಲಿ ಪ್ರಾಗಭಾವಕ್ಕೆ ಜಗತ್ಕರ್ತೃತ್ವವನ್ನು ಹೇಳುವ ಶ್ರುತಿಸಂವಾದ ಸಹಿತವಾದ ಯುಕ್ತಿಯನ್ನು ನಿರಾಕರಿಸುತ್ತಾರೆ.

'ನ ವಿಲಕ್ಷಣತ್ವಾತ್' ಎನ್ನುವ ಅಧಿಕರಣದಲ್ಲಿಯೇ ವೇದಕ್ಕೆ ಬರತಕ್ಕ ಎಲ್ಲ ಯುಕ್ತಿ ವಿರೋಧಗಳನ್ನೂ ಪರಿಹರಿಸಲಾಗಿದೆ. ದೃಢವಾದ ಯುಕ್ತಿವಿರೋಧದ ಪರಿಹಾರವೂ ಅಭಿಮಾನ್ಯಧಿಕರಣದಲ್ಲಿ ಹೇಳಿದ ನ್ಯಾಯದಿಂದ ಸಾಧಿಸಲ್ಪಡುವುದು. ಹೀಗೆ ಗತಾರ್ಥ ವಾಗುವುದರಿಂದ ಈ ಅಧಿಕರಣವು ಅನಾರಂಭಣೀಯವೆಂದು ಆಶಂಕೆಯು ಬರಲು, ಗತಾರ್ಥತೆಯನ್ನು ಪರಿಹರಿಸುತ್ತ, ಈ ಅಧಿಕರಣದ ಉಪಾಧಿಯನ್ನು ಹೇಳುತ್ತಾರೆ –

ಅಲ್ಪವಾಕ್ಯಯುತಾ ಯುಕ್ತಿರ್ಬಹುಲೈವ ವಿರೋಧಿನೀ ।

ಯತ್ರ ತತ್ರ ಕಥಂ ವಸ್ತುನಿರ್ಣಯಃ ಸ್ಯಾದಿತೀರಿತೇ ॥೬೮॥

ವಿರೋಧಿಯುಕ್ತಿಬಾಹುಲ್ಯಾದಿತಿ ನ್ಯಾಯೋ ವಿನಿಶ್ಚಿತಃ ।

ಅಲ್ಪವಾಕ್ಯಗಳಿಂದ ಕೂಡಿದ ಯುಕ್ತಿಯು ಹೆಚ್ಚಾಗಿಯೇ ವಿರೋಧಿಯಾದಾಗ ವಸ್ತುವಿನ ನಿಶ್ಚಯವು ಹೇಗೆ ಆಗುವುದು ಎಂಬುದಾಗಿ ಪೂರ್ವಪಕ್ಷಿಯು ಆಕ್ಷೇಪ. ಅದು ಸರಿಯಲ್ಲ. ಏಕೆಂದರೆ ಪೂರ್ವಪಕ್ಷದ ಯುಕ್ತಿಗಳಿಗಿಂತ ಸಿದ್ಧಾಂತಯುಕ್ತಿಗಳಿಗೆ ಪ್ರಾಬಲ್ಯವಿದೆ. ಆದಪ್ರಯುಕ್ತ ವಸ್ತುನಿರ್ಣಯವು ಆಗುವುದು ಎಂಬ ನ್ಯಾಯವು ಈ ಅಧಿಕರಣದಲ್ಲಿ ನಿಶ್ಚಯಿಸಲ್ಪಟ್ಟಿದೆ.

ಹಾಗಾದರೆ ಪೂರ್ವಪಕ್ಷಕ್ಕೆ ಶ್ರುತಿಯುಕ್ತಿಗಳ ಸಹಕಾರವಿರುವಾಗ ಕೇವಲ ಪ್ರಬಲವಾದ ಯುಕ್ತಿಯನ್ನು ಆಶ್ರಯಿಸಿರುವ ಸಿದ್ಧಾಂತವು ಹೇಗೆ ಕೂಡುವುದು ಎಂದರೆ, ಹಿಂದೆ ಹೇಳಿದ್ದನ್ನೇ ವಿವರಿಸುತ್ತಾರೆ –

ಯುಕ್ತೇಸ್ತು ಯುಕ್ತಿಬಾಹುಲ್ಯಮಾಗಮಾದಾಗಮಸ್ಯ ಚ ॥೬೯॥

ಕಥಂ ನ ನಿರ್ಣಯಂ ಕುರ್ಯಾದಿತಿ..................।

ಪೂರ್ವಪಕ್ಷದಲ್ಲಿ ಹೇಳಿದ ಯುಕ್ತಿಗಳಿಗಿಂತ ಸಿದ್ಧಾಂತ ಯುಕ್ತಿಗಳಿಗೆ ಬಾಹುಲ್ಯವು. ಹಾಗೆಯೇ ಪೂರ್ವಪಕ್ಷದಲ್ಲಿ ತೋರಿಸಿದ ಆಗಮಗಳಿಗಿಂತ ಸಿದ್ಧಾಂತದಲ್ಲಿಯ ಆಗಮಗಳಿಗೆ ಬಾಹುಲ್ಯವು. ಸಿದ್ಧಾಂತದ ಯುಕ್ತಿ ಹಾಗೂ ಆಗಮಗಳು ಪ್ರಬಲವಾಗಿರುವಾಗ ನಿರ್ಣಯವು ಹೇಗೆ ಆಗಲಾರದು? ಆದಕಾರಣ ಈ ಅಧಿಕರಣದ ಆರಂಭವು ಯುಕ್ತವೇ ಆಗುವುದು. (ಇಲ್ಲಿ ಬಾಹುಲ್ಯವು ಪ್ರಾಧಾನ್ಯ

ಹಾಗೂ ಪ್ರಾಬಲ್ಯವನ್ನು ಸೂಚಿಸುವುದು.)

ಇನ್ನು ಯಾವುದೇ ವಸ್ತುವು ಹುಟ್ಟುವುದಕ್ಕೆ ಮೊದಲಿಗೆ ಆ ವಸ್ತುವಿನ ಅಭಾವವಿರುತ್ತದೆ. ಇದನ್ನೇ ಪ್ರಾಗಭಾವ ಎನ್ನುತ್ತಾರೆ. ಈಶ್ವರಾದಿಗಳಿಗೆ ಪ್ರಲಯ ಕಾಲದಲ್ಲಿ ಸತ್ವಾಭಾವವು ಶ್ರುತಿಗಳಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಪ್ರಾಗಭಾವಕ್ಕೆ ಕಾರಣತ್ವವು ಸಿದ್ಧಿಸುತ್ತದೆ. 'ಅಸದೇವೇದಮಗ್ರ ಆಸೀತ್' 'ಸದಸದೇವ ಸನ್ಮನೋಽ-ಕುರುತ' 'ಅಸತಃ ಸದಜಾಯತ' ಇವೇ ಮೊದಲಾದ ಶ್ರುತಿಗಳ ಸಂವಾದವೂ ಇರುವುದು. ಆದ್ದರಿಂದ ಅಸತ್ತಿಗೇ ಜಗತ್ಕಾರಣತ್ವವನ್ನು ಅಂಗೀಕರಿಸಬೇಕು ಎಂದರೆ–

...................................ಅಸತ್ಕಾರಣಂ ನ ಹಿ ।

ಶ್ರುತ್ಯರ್ಥೋ ಭವತಿ ಕ್ವಾಪಿ ಶ್ರುತಿಪ್ರಾಯೋಪಪತ್ತಿಭಿಃ ॥೭೦॥

ಅವಿರೋಧಶ್ಚತುರ್ಥೇ ತು ಪಾದೇ ಸಮ್ಯಕ್ಸಮರ್ಥ್ಯತೇ ।

ಅಸತ್ ಅಥವಾ ಪ್ರಾಗಭಾವವು ಜಗತ್ಕರ್ತೃವು ಎಂಬುದು ಶ್ರುತ್ಯರ್ಥವಲ್ಲ. ಇದು ಯುಕ್ತಿಗೆ ವಿರುದ್ಧವಾದುದರಿಂದ ಅನುಮಾನದಿಂದಲೂ ಅಸತ್ತಿಗೆ ಕಾರಣತ್ವವನ್ನು ಸಾಧಿಸಲು ಶಕ್ಯವಿಲ್ಲ. ಸಂಭಾವಿತವಾದುದೇ ಶ್ರುತ್ಯರ್ಥವೂ, ಅನುಮಾನದಿಂದ ಸಾಧಿಸಲಿಕ್ಕೆ ಯೋಗ್ಯವೂ ಆಗುವುದು. ಪ್ರಾಗಭಾವಕ್ಕೆ ಕರ್ತೃತ್ವವು ಎಲ್ಲಿಯೂ ಕಂಡುಬಂದಿಲ್ಲ. ನಾಲ್ಕನೆಯ ಪಾದದಲ್ಲಿ ಶ್ರುತಿಪ್ರಧಾನವಾದ ಯುಕ್ತಿಗಳಿಂದ ಶ್ರುತಿಗಳಿಗೆ ಅವಿರೋಧವು ಚೆನ್ನಾಗಿ ಸಮರ್ಥಿಸಲ್ಪಡುತ್ತದೆ.

ಈಗ ಅಸತ್ತಿಗೆ ಭಾವತ್ವರೂಪ ಅರ್ಥವನ್ನಿಟ್ಟುಕೊಂಡು 'ಅಸದಿತಿ ಚೇನ್ನ' ಎಂಬ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ –

ಅಸತ್ಕಾರ್ಯಂ ಯಥಾ ದೃಷ್ಟಂ ವಸ್ತುತ್ವಾತ್ಕಾರಣಂ ತಥಾ ॥೭೧॥

ಇತಿ ಚೇನ್ನ ನಿಷೇಧೈಕಸ್ವರೂಪಸ್ಯ ನ ಕರ್ತೃತಾ ।

ಮಹದಾದಿ ಕಾರ್ಯಪದಾರ್ಥಗಳು ಪ್ರಲಯಕಾಲದಲ್ಲಿ ಇರುವುದಿಲ್ಲವೆಂದು ಪ್ರಮಿತವಾಗಿವೆ. ಇದೇರೀತಿ ಭಾವಪದಾರ್ಥವಾದುದರಿಂದ ಕಾರಣರೆಂದು ಸಿದ್ಧಾಂತಿಗಳಿಂದ ಅಂಗೀಕರಿಸಲ್ಪಟ್ಟ ಈಶ್ವರಾದಿಗಳೂ ಪ್ರಲಯದಲ್ಲಿ ಇರುವುದಿಲ್ಲ ಎಂದು ಹೇಳಕೂಡದು. ಏಕೆಂದರೆ ನಿಷೇಧವೇ ಸ್ವರೂಪವಾಗಿವುಳ್ಳ ಅಭಾವಕ್ಕೆ ಕರ್ತೃತ್ವವು ಕೂಡುವುದಿಲ್ಲ.

ಹಾಗಾದರೆ ಪ್ರಾಗಭಾವಕ್ಕೆ ನಿಷೇಧೈಕ ಸ್ವರೂಪತ್ವವೂ ಇದ್ದು ಕರ್ತೃತ್ವವೂ ಇದ್ದರೆ ಏನು ವಿರೋಧವಿದೆ? ಘಟಾದಿಗಳ ಅಭಾವಕ್ಕೆ ಕರ್ತೃತ್ವವಿಲ್ಲದಿದ್ದರೂ, ಪ್ರಲಯ ಕಾಲದಲ್ಲಿರುವ ವಿಶ್ವಪ್ರಾಗಭಾವಕ್ಕೆ ಕರ್ತೃತ್ವವು ಇರುವುದು. ಹೀಗೆ ಆಶಂಕಿಸಿದರೆ –

ಬುದ್ಧಿಪೂರ್ವಪ್ರವೃತ್ತಿರ್ಹಿ ಕರ್ತೃತ್ವಮಿತಿ ನಿಶ್ಚಿತಮ್ ॥೭೨॥

ಪ್ರತಿಷೇಧಾತ್ಮಕತ್ವಂ ತು ಭಾವಸ್ಯಾಭಾವಧರ್ಮತಃ ।

ಬುದ್ಧಿಪೂರ್ವಕವಾದ ಇಚ್ಛಾ ಪ್ರಯತ್ನ ಮುಂತಾದ ರೂಪವಾದ ಪ್ರವೃತ್ತಿಯೇ ಕರ್ತೃತ್ವ ಎಂಬುದಾಗಿ ಇಲ್ಲಿ ಎಲ್ಲ ಪರೀಕ್ಷಕರಿಂದಲೂ ನಿರ್ಣಯಿಸಲ್ಪಟ್ಟಿದೆ. ಪ್ರಾಗಭಾವಕ್ಕೆ ಬುದ್ಧಿಪೂರ್ವಕವಾದ ಪ್ರವೃತ್ತಿಯು ಅಸಂಭವವಾದ್ದರಿಂದ ಕರ್ತೃತ್ವವು ಕೂಡುವುದಿಲ್ಲ. ಕರ್ತೃತ್ವವುಳ್ಳ ಕುಂಬಾರ ಮುಂತಾದ ಭಾವಪದಾರ್ಥಗಳಿಗೆ ಭೇದವೆಂದು ಕರೆಯಲ್ಪಡುವ ಅನ್ಯೋನ್ಯಾಭಾವ ಎಂಬ ಧರ್ಮವು ಇರುವುದರಿಂದ ನಿಷೇಧೈಕ ಸ್ವರೂಪತ್ವವು ಕೂಡುವುದು.

ಇದು ಅಸಂಗತ. ಏಕೆಂದರೆ, ಕರ್ತೃತ್ವವುಳ್ಳ ಕುಂಬಾರ ಮುಂತಾದವರಿಗೆ ನಿಷೇಧಾತ್ಮಕತ್ವವಿಲ್ಲ. ನಿಷೇಧರೂಪವಾದ ಅನ್ಯೋನ್ಯಾಭಾವಕ್ಕೆ ಕರ್ತೃತ್ವವು ಇರುವುದಿಲ್ಲ. ಹೀಗೆ ಆಶಂಕಿಸಿದರೆ–

ಧರ್ಮಧರ್ಮ್ಯೈಕ್ಯತಶ್ಚೈವ ನ ತು ತನ್ಮಾತ್ರತಾ ಭವೇತ್ ॥೭೩॥

ಧರ್ಮ–ಧರ್ಮಿಗಳಿಗೆ (ಅಂದರೆ ಅನ್ಯೋನ್ಯಾಭಾವ ಮತ್ತು ಕುಂಬಾರಾದಿಗಳಿಗೆ) ಐಕ್ಯವಿದ್ದುದರಿಂದ ಹಾಗೂ ಕುಂಬಾರಾದಿ ಭಾವಪದಾರ್ಥಗಳಿಗೆ ಅಭಾವರೂಪವಾದ ಧರ್ಮವಿದ್ದುದರಿಂದ, ನಿಷೇಧಾತ್ಮಕತ್ವವು ಇದೆ. ಹೀಗೆ ಭಾವಪದಾರ್ಥಗಳಿಗೆ ನಿಷೇಧಾತ್ಮಕತ್ವ ಇದ್ದರೂ, ನಿಷೇಧಸ್ವರೂಪಮಾತ್ರತ್ವವು ಕೂಡುವುದಿಲ್ಲ. ಇಲ್ಲಿ ಭೇದನಿರಾಕರಣಕ್ಕಾಗಿ 'ಏವ' ಶಬ್ದವನ್ನೂ, ನಿಷೇಧರೂಪತ್ವಕ್ಕೆ ಕುಂಬಾರಾದಿಗಳಲ್ಲಿ ಅಕರ್ತೃತ್ವದೊಡನೆ ವ್ಯಭಿಚಾರ ಹೇಳಿದರೆ ಅದನ್ನು ನಿರಾಕರಿಸಲು 'ಮಾತ್ರ' ಶಬ್ದವನ್ನೂ ಪ್ರಯೋಗಿಸಲಾಗಿದೆ.

ಕುಂಬಾರ ಮೊದಲಾದ ಭಾವಪದಾರ್ಥಗಳಿಗೆ ವಿಧಿ ಹಾಗೂ ನಿಷೇಧ ರೂಪತ್ವಗಳೆರಡೂ ಇರುವುದರಿಂದ ಕೇವಲ ಪ್ರತಿಷೇಧರೂಪತೆಯು ಇರುವುದಿಲ್ಲ. ಹಾಗೆಯೇ ಪ್ರಾಗಭಾವಕ್ಕೂ ಕೇವಲ ಪ್ರತಿಷೇಧರೂಪತೆಯು ಇರುವುದಿಲ್ಲ. ಆದ್ದರಿಂದ ಹೇತುವು ಸ್ವರೂಪಾಸಿದ್ಧವಾಗುವುದು. ಘಟದ ಪ್ರಾಗಭಾವರೂಪ ದೃಷ್ಟಾಂತವು ಸಾಧನ ರಹಿತವಾಗುವುದು. ಹೀಗೆ ಆಶಂಕಿಸಿದರೆ –

ಅಭಾವಸ್ಯ ಚ ಭಾವೋಽಪಿ ಧರ್ಮೋಽಥಾಪಿ ಹಿ ಧರ್ಮಿಣಃ ।

ತಾದೃಕ್ತ್ವಂ ಮಾತ್ರತೇಹೋಕ್ತಾ ಬುದ್ಧಿರಾಹಿತ್ಯಮೇವ ತತ್ ॥೭೪॥

ಪಕ್ಷವೆನಿಸಿದ ವಿಶ್ವದ ಪ್ರಾಗಭಾವಕ್ಕೂ ದೃಷ್ಟಾಂತವೆನಿಸಿದ ಘಟಾಭಾವಕ್ಕೂ ಭಾವರೂಪವಾದ ಪ್ರಮೇಯತ್ವ ಮುಂತಾದ ಧರ್ಮವು ಇರುತ್ತದೆ. ಧರ್ಮವು ಧರ್ಮಿಯಿಂದ ಅಭಿನ್ನವೂ ಆಗಿದೆಯೆಂಬುದಾಗಿ 'ಚ' ಶಬ್ದದಿಂದ ಹೇಳಲ್ಪಡುತ್ತದೆ.

ಆದರೂ ಸ್ವರೂಪಾಸಿದ್ಧಿ ಮುಂತಾದ ದೋಷಗಳು ಬರುವುದಿಲ್ಲ. ಏಕೆಂದರೆ ಧರ್ಮಿಗೆ ಪ್ರತಿಶೇಧಾತ್ಮಕತ್ವವೇ ಪ್ರತಿಷೇಧಮಾತ್ರತ್ವವೆಂದು ಈ ಸೂತ್ರದಲ್ಲಿ ಹೇಳಲ್ಪಟ್ಟಿದೆ. ಪ್ರತಿಷೇಧಮಾತ್ರತ್ವವಿರುವುದರಿಂದಲೇ ವಿಶ್ವದ ಪ್ರಾಗಭಾವಕ್ಕೆ ಘಟಾಭಾವಕ್ಕೆ ಇರುವಂತೆಯೇ ಬುದ್ಧಿರಾಹಿತ್ಯವು ಸಿದ್ಧಿಸುತ್ತದೆ.

ಭಾವಕ್ಕೆ ಅಭಾವರೂಪ ಧರ್ಮವಿರುವುದರಿಂದ ಅಭಾವಕ್ಕೆ ಭಾವರೂಪ ಧರ್ಮವೂ ಇದೆಯೆಂಬುದಾಗಿ ಹೇಳಿದ್ದು ಅಯುಕ್ತವು. ಏಕೆಂದರೆ ಭಾವಕ್ಕೆ ಅಭಾವರೂಪ ಧರ್ಮವೂ, ಅಭಾವಕ್ಕೆ ಭಾವರೂಪ ಧರ್ಮವೂ ಇದೆ ಎಂಬುದಕ್ಕೆ ಪ್ರಮಾಣವಿಲ್ಲ. ಸಂಬಂಧವಿರುವ ವಸ್ತ್ರ ಮತ್ತು ಅದರ ಬಿಳಿಯ ಬಣ್ಣ ಇವುಗಳಲ್ಲಿ ಧರ್ಮ–ಧರ್ಮಿಭಾವವು ಕಂಡಿದೆ. ಸಂಬಂಧವೇ ಇಲ್ಲದ ಮೇರು ಮಂದರಗಳಲ್ಲಿ ಧರ್ಮ–ಧರ್ಮಿಭಾವವು ಕಂಡಿಲ್ಲ. ಆದ್ದರಿಂದ ಭಾವ–ಅಭಾವಗಳಿಗೆ ಸಂಬಂಧವೇ ಇರುವುದಿಲ್ಲ. ಅವು ವಿರುದ್ಧ ಸ್ವಭಾವವುಳ್ಳದ್ದಾಗಿವೆ. ಏಕೆಂದರೆ ವಿಧಿನಿಷೇಧ ರೂಪಗಳಾಗಿವೆ. ಅವುಗಳಿಗೆ ಅಭೇದವೂ ಹೇಳಲ್ಪಟ್ಟಿದೆ. ಪರಸ್ಪರ ಭಿನ್ನವಾದ ವಸ್ತುಗಳಿಗೆ ಮಾತ್ರ ಧರ್ಮ–ಧರ್ಮಿಭಾವವು ಕೂಡುವುದು. ಆದ್ದರಿಂದ ಭಾವಾ–ಭಾವಗಳಿಗೆ ಧರ್ಮ– ಧರ್ಮಿಭಾವವೂ ಕೂಡುವುದಿಲ್ಲ. ಹೀಗೆ ಆಶಂಕಿಸಿದರೆ –

ವಿಶೇಷ್ಯತ್ವೈವ ಧರ್ಮಿತ್ವಂ ಪ್ರಥಮಪ್ರತಿಪತ್ತಿಷು ।

ನಿಷೇಧವಿಧಿರೂಪತ್ವಂ ಭಾವಾಭಾವತ್ವಮತ್ರ ಹಿ ।।೭೫।।

ವಿಶೇಷ್ಯತ್ವವೇ ಧರ್ಮಿತ್ವವು. ಆದ್ದರಿಂದ ವಿಶೇಷಣತ್ವವೇ ಧರ್ಮತ್ವವು ಎಂದು ತಿಳಿಯಬೇಕು. ಮೊದಲಿಗೆ ಜ್ಞಾನಬರುವಾಗಲೇ ವಿಧಿ ಹಾಗೂ ನಿಷೇಧರೂಪವಾಗಿ ತೋರುವ ಧರ್ಮಗಳು ಭಾವ ಹಾಗೂ ಅಭಾವಗಳೆಂದು ಇಲ್ಲಿ ವಿವಕ್ಷಿತವಾಗಿದೆ.

ವಿವರಣೆ: ಯಾವುದು ಯಾವುದರಿಂದ ವಿಶೇಷವಾಗಿ ತಿಳಿಯಲ್ಪಡುವುದೋ ಅದು ಅದರ ಧರ್ಮಿಯೆನಿಸುತ್ತದೆ. ಇನ್ನೊಂದು ಧರ್ಮವೆನಿಸುತ್ತದೆ. ಅಂದರೆ ಧರ್ಮವು ವಿಶೇಷಣ, ಧರ್ಮಿಯು ವಿಶೇಷ್ಯ. ಬೇರೆ ರೀತಿಯಲ್ಲಿ ಧರ್ಮ–ಧರ್ಮಿಗಳನ್ನು ಹೇಳಲಿಕ್ಕೆ ಶಕ್ಯವಿಲ್ಲ. ಭಾವ–ಅಭಾವಗಳಿಗೆ ವಿಶೇಷ್ಯ–ವಿಶೇಷಣ ಭಾವವು ಸರ್ವಾನುಭವ ಸಿದ್ಧವಾಗಿದೆ. ಏಕೆಂದರೆ ಈ ರೀತಿಯ ವಿಶೇಷ್ಯ–ವಿಶೇಷಣ ಭಾವವು ಇಲ್ಲದಿದ್ದಲ್ಲಿ 'ಘಟವು ಪಟವಲ್ಲ' ಹಾಗೂ 'ಅಭಾವವು ಪ್ರಮೇಯವು' ಎಂಬ ವ್ಯವಹಾರವು ಕೂಡುವುದಿಲ್ಲ. ಭಾವ–ಅಭಾವಗಳಿಗೆ ಸಂಬಂಧವಿಲ್ಲ. ಆದ್ದರಿಂದ ಧರ್ಮ–ಧರ್ಮಿ ಭಾವವು ಕೂಡುವುದಿಲ್ಲ ಎಂದು ಹೇಳುವುದು ಯುಕ್ತವಲ್ಲ. ಭಾವ–ಅಭಾವಗಳಿಗೆ ವಿಶೇಷ್ಯ–ವಿಶೇಷಣರೂಪವಾದ ಸಂಬಂಧವಿದೆ. ಆದ್ದರಿಂದ ಧರ್ಮ–ಧರ್ಮಿ ಭಾವವು ಕೂಡುವುದು. ಭಾವ–ಅಭಾವಗಳಲ್ಲಿ ಅಭೇದವಿದ್ದರೂ ವಿಶೇಷ ಶಕ್ತಿಯಿಂದ ವಿಶೇಷ್ಯ–ವಿಶೇಷಣತ್ವ ರೂಪವಾದ ಧರ್ಮ–ಧರ್ಮಿ ಭಾವವು ಯುಕ್ತವೇ ಆಗುತ್ತದೆ. ಭಾವಾಭಾವಗಳಿಗೆ

ಅಭೇದವಿದ್ದರೆ ಘಟಾದಿಗಳಿಗೆ ಭಾವತ್ವವೂ ಪ್ರಾಗಭಾವಾದಿಗಳಿಗೆ ಅಭಾವತ್ವವು ಎಂಬ ನಿಯಮವೇ ಇಲ್ಲದಂತಾಗುವುದು ಎಂದು ಹೇಳುವುದು ಯುಕ್ತವಲ್ಲ. ಏಕೆಂದರೆ ಇದು ಲೋಕದಲ್ಲಿ ವ್ಯವಹಾರಸಿದ್ಧವಾದ ನಿಯಮ. ಪ್ರಥಮ ಪ್ರತಿಪತ್ತಿಗೆ ವಿಧಿರೂಪದಲ್ಲಿ ತೋರುವುದು ಭಾವ, ನಿಷೇಧರೂಪದಲ್ಲಿ ತೋರುವುದು ಅಭಾವ ಎನ್ನುವ ವ್ಯವಸ್ಥೆಯು ಎಲ್ಲರಿಂದಲೂ ಅಂಗೀಕೃತವಾಗಿದೆ. ಒಂದು ಘಟವನ್ನು ನೋಡಿದ ಕೂಡಲೇ ಅದರಲ್ಲಿ ಘಟದ ಭಾವವಿದೆ ಎಂದು ಮೊದಲು ವಿಧಿರೂಪವಾಗಿ ತಿಳಿಯಲ್ಪಟ್ಟು, ಆಮೇಲೆ ಅದು ಪಟವು ಆಗುವುದಿಲ್ಲ ಎಂದು ಪಟದ ನಿಷೇಧರೂಪವಾಗಿ ತಿಳಿಯಲ್ಪಡುತ್ತದೆ. ಪ್ರಾಗಭಾವಾದಿಗಳೂ ಮೊದಲು ನಿಷೇಧರೂಪವಾಗಿ ಧರ್ಮಿ ಸ್ವರೂಪದಿಂದ ತಿಳಿಯಲ್ಪಟ್ಟು, ಆಮೇಲೆ ಅಲ್ಲಿ ಪ್ರಾಗಭಾವವವಿದೆ ಎಂಬ ಪ್ರಮೇಯವಾಗಿ ವಿಧಿರೂಪದಿಂದ ತಿಳಿಯಲ್ಪಡುತ್ತದೆ.

ಈಗ 'ಅಸತ್ಕಾರ್ಯಂ ಯಥಾ ದೃಷ್ಟಂ' ಎನ್ನುವ ಅನುಮಾನವನ್ನು ವಿಶೇಷವಾಗಿ ನಿರಾಕರಿಸುವ ಅಪೇಕ್ಷೆಯಿಂದ ಸೂತ್ರಕಾರರು ಮುಂದಿನ ಸೂತ್ರದಲ್ಲಿ ಅದರ ಪ್ರಸ್ತಾವ ಮಾಡಿದ್ದಾರೆ –

ಸೂತ್ರ: ಓಂ ಅಪೀತೌ ತದ್ವತ್ಪ್ರಸಂಗಾದಸಮಂಜಸಮ್ ಓಂ

ಸೂತ್ರಾರ್ಥ: ಅಭಾವಕ್ಕೆ ಜಗತ್ಕರ್ತೃತ್ವವನ್ನು ಅಂಗೀಕರಿಸಿದರೆ, ಪ್ರಲಯದಲ್ಲಿ ಈಶ್ವರ ಮೊದಲ್ಗೊಂಡು ಎಲ್ಲಕ್ಕೂ ಅಭಾವವಿರುವುದೆಂಬ ಪ್ರಸಂಗವು ಬರುವುದು. ಆದರೆ ಪ್ರಲಯದಲ್ಲಿ ಈಶ್ವರಾದಿಗಳ ಅಸ್ತಿತ್ವವು ಪ್ರಮಾಣಗಳಿಂದ ತಿಳಿದುಬರುತ್ತಿರಲು ಅವುಗಳನ್ನು ಬಿಟ್ಟು ಅಭಾವಕ್ಕೆ ಜಗತ್ಕರ್ತೃತ್ವವನ್ನು ನಿರ್ಣಯಿಸುವುದು ಶಕ್ಯವಿಲ್ಲ.

ಈಶ್ವರಾದಿಗಳು ಭಾವಪದಾರ್ಥವಾದುದರಿಂದ ಘಟದಂತೆಯೇ ಎನ್ನುವ ಅನುಮಾನದಿಂದ ಈಶ್ವರಾದಿಗಳಿಗೆ ಪ್ರಲಯದಲ್ಲಿ ಇಲ್ಲದಿರುವಿಕೆ ಎಂಬುದು ಕೂಡುವುದು ಎಂದರೆ –

ಸರ್ವನಾಶೇಷ್ವಪಿ ಸದಾ ಶಿಷ್ಟತ್ವಾದ್ಯಸ್ಯ ಕಸ್ಯ ನುಃ ।

ನಾಶೋऽಯಂ ವಿಮತೋऽಪಿ ಸ್ಯಾತ್ ನಾಶತ್ವಾತ್ಕರ್ತೃಶೇಷವಾನ್ ॥೭೬॥

ಯಾವಾಗಲೂ ಎಲ್ಲ ವಸ್ತುಗಳ ನಾಶಗಳಲ್ಲಿಯೂ ನಾಶದ ಕರ್ತೃವೋ ಅಥವಾ ಅಕರ್ತೃವೋ ಆದ ಯಾವನೋ ಒಬ್ಬ ಪುರುಷನು ಉಳಿಯುವನು. ಅಂತೆಯೇ ಈ ವಿವಾದ ವಿಷಯವಾದ ಮಹಾಪ್ರಲಯರೂಪ ವಿನಾಶವೂ ಕೂಡ, ಅದು ನಾಶವಾಗಿರುವುದರಿಂದ, ಪುರುಷಶೇಷವುಳ್ಳದ್ದು ಆಗುವುದು.

ಒಟ್ಟಿನಲ್ಲಿ ಅಭಿಪ್ರಾಯವೇನೆಂದರೆ, ಜಗತ್ತು ನಾಶವಾದಾಗ ಅದರ ಕರ್ತೃವಾದ ಪುರುಷನೊಬ್ಬನು ಉಳಿಯುತ್ತಾನೆ. ಪ್ರಲಯದಲ್ಲಿ ನಾಶವಾಗದೇ ಉಳಿಯುವ

ಪುರುಷನೊಬ್ಬನಿಗೇ ವಿಶ್ವಕರ್ತೃತ್ವವು ಸಂಭವಿಸುವಾಗ, ಅಭಾವಕ್ಕೆ ಕರ್ತೃತ್ವವನ್ನು ಕಲ್ಪಿಸುವುದಕ್ಕೆ ಅವಕಾಶವಿರುವುದಿಲ್ಲ. ಲೋಕದಲ್ಲಿಯೂ, ಘಟದ ಉತ್ಪತ್ತಿಗೆ ಮುಂಚೆ ಕುಂಬಾರ ಹಾಗೂ ಪ್ರಾಗಭಾವಗಳೆರಡೂ ಇರುವಾಗ, ಪ್ರಾಗಭಾವಕ್ಕೆ ಕರ್ತೃತ್ವವು ಕಂಡಿರುವುದಿಲ್ಲ. ಬದಲಾಗಿ ಕುಂಬಾರನೇ ಘಟದ ಕರ್ತೃ ಎಂದು ಕಂಡಿರುತ್ತದೆ.

ಸುಂದೋಪಸುಂದ ನ್ಯಾಯದಿಂದ, ನಾಶಕ್ಕೆ ಕಾರಣನಾದ ಪುರುಷನೂ ನಾಶ ಹೊಂದುವುದರಿಂದ, ನಾಶವಾದ ಮೇಲೆ ಯಾವ ಪುರುಷನೂ ಉಳಿಯುವುದಿಲ್ಲ. ಆದಕಾರಣ ಅಭಾವಕ್ಕೇ ಜಗತ್ಕರ್ತೃತ್ವವನ್ನು ಹೇಳಬೇಕು ಎಂದು ಪೂರ್ವಪಕ್ಷಿಯ ವಾದ. (ಸುಂದ, ಉಪಸುಂದ ಎಂಬ ಇಬ್ಬರು ದೈತ್ಯರು, ತಿಲೋತ್ತಮೆಯೆಂಬ ಅಪ್ಸರ ಸ್ತ್ರೀಯನ್ನು ಕಾಮಿಸಿ, ಪರಸ್ಪರ ಹೊಡೆದಾಡಿಕೊಂಡು ಇಬ್ಬರೂ ನಾಶವನ್ನು ಹೊಂದಿದರು. ಕೊನೆಯಲ್ಲಿ ಇಬ್ಬರಲ್ಲಿ ಯಾರೂ ಉಳಿಯಲಿಲ್ಲ. ಇದೇ ಸುಂದೋಪ ಸುಂದ ನ್ಯಾಯ ಎಂಬುದಾಗಿ ಪುರಾಣ ಪ್ರಸಿದ್ಧ.). ಇದಕ್ಕೆ ಉತ್ತರವನ್ನು 'ನ ಚಾಶೇಷ' ಇತ್ಯಾದಿ ವಚನದಿಂದ ಹೇಳುತ್ತಾರೆ –

ನ ಚಾಶೇಷನೃನಾಶಸ್ತು ದೃಷ್ಟೋ ದೃಶ್ಯೋಽಸ್ತಿ ವಾ ಕ್ವಚಿತ್ ।

ಧರ್ಮಾಧರ್ಮಾಶ್ರಯತ್ವೇನ ಸ್ವೀಕಾರ್ಯೋಽಪಿ ನರೋ ಲಯೇ ।।೭೭।।

ಎಲ್ಲ ಪುರುಷರ ನಾಶವೆನ್ನುವುದು ಎಲ್ಲಿಯೂ, ಈ ಹಿಂದೆಯೂ ಕಂಡುಬಂದಿಲ್ಲ ಮತ್ತು ಮುಂದೆಯೂ ಕಂಡುಬರುವಂಥಹದೂ ಅಲ್ಲ. ವರ್ತಮಾನದಲ್ಲಂತೂ ಯಾರಿಗೂ ಕಂಡುಬರುತ್ತಿಲ್ಲ.

ಹಿಂದೆ ಹೇಳಿದ ಅನುಮಾನದಿಂದಷ್ಟೇ ಅಲ್ಲ, ಧರ್ಮ ಮತ್ತು ಅಧರ್ಮಗಳಿಗೆ ಆಶ್ರಯವಾಗಿರುವುದೆಂಬ ಕಾರಣದಿಂದಲೂ, ಪ್ರಲಯ ಕಾಲದಲ್ಲಿ ಜೀವಾತ್ಮನ ಇರುವಿಕೆಯನ್ನು ಒಪ್ಪಲೇಬೇಕು.

ವಿವರಣೆ: ಅಭಿಪ್ರಾಯವೇನೆಂದರೆ, ಪ್ರಲಯಕಾಲದಲ್ಲಿರುವ ಧರ್ಮವು ಆಶ್ರಯವುಳ್ಳದ್ದಾಗಿದೆ. ಅದು ಧರ್ಮವಾಗಿರುವುದರಿಂದ, ಈಗಿನ ಕಾಲದ ಧರ್ಮದಂತೆ ಎಂದು ಅನುಮಾನ. ಇದೇರೀತಿ ಅಧರ್ಮಕ್ಕೂ ಅನುಮಾನವನ್ನು ಪ್ರಯೋಗಿಸಬೇಕು. ಧರ್ಮಾಧರ್ಮಗಳ ಆಶ್ರಯನು ಜೀವಾತ್ಮನಿಂದ ಅನ್ಯನು ಎನ್ನುವುದು ಯುಕ್ತವಲ್ಲ. ಆದುದರಿಂದ ಪ್ರಲಯದಲ್ಲಿ ಜೀವನು ಇರುವುದರಿಂದ, ಯಾವುದೇ ಭಾವಪದಾರ್ಥವು ಇಲ್ಲವೆಂದು ಸಾಧಿಸುವುದು ಅಯುಕ್ತವಾಗುವುದು. ಈಶ್ವರನನ್ನು ಸಾಧಿಸುವುದಕ್ಕಾಗಿಯೂ ಈ ಅನುಮಾನವನ್ನು ಹೇಳಬಹುದು. ಆಶ್ರಯ ಶಬ್ದಕ್ಕೆ ಅಧಿಷ್ಠಾತೃವೆಂಬ ಅರ್ಥವೂ ಇದೆ. ಧರ್ಮಾಧರ್ಮಗಳು ಅತೀಂದ್ರಿಯ ಪದಾರ್ಥಗಳು. ಆದುದುರಿಂದ ಜೀವನು ಅಧಿಷ್ಠಾತೃವಾಗಿರಲು

ಸಾಧ್ಯವಿಲ್ಲ. ಆದಕಾರಣ ಜೀವನಿಂದ ಭಿನ್ನನಾದ ಈಶ್ವರನು ಧರ್ಮಾಧರ್ಮಗಳ ಅಧಿಷ್ಠಾತೃವಾಗಿರುವನು. ಈ ಕಾರಣದಿಂದ ಪ್ರಲಯದಲ್ಲಿ ಈಶ್ವರನ ಅಸ್ತಿತ್ವವನ್ನು ಅಂಗೀಕರಿಸಲೇಬೇಕು.

ಹಾಗಾದರೆ ಪ್ರಲಯದಲ್ಲಿ ಯಾವುದೇ ಭಾವಕ್ಕೂ ಅಸ್ತಿತ್ವವನ್ನು ಒಪ್ಪದ ನನ್ನ ಪಕ್ಷದಲ್ಲಿ ಧರ್ಮಾಧರ್ಮಗಳೂ ಇಲ್ಲವೇ ಇಲ್ಲ. ಧರ್ಮಾಧರ್ಮಗಳೇ ಇಲ್ಲವೆಂದ ಮೇಲೆ ಅವುಗಳಿಗೆ ಆಶ್ರಯ ಅಥವಾ ಅಧಿಷ್ಠಾತೃವಾಗಿ ಜೀವನಾಗಲೀ ಈಶ್ವರನಾಗಲೀ ಇರಲು ಸಾಧ್ಯವಿಲ್ಲ. ಹೀಗೆ ಪೂರ್ವಪಕ್ಷಿಯು ಹೇಳಿದರೆ, ಅವನನ್ನು ಕೇಳಬೇಕು – ಧರ್ಮಾಧರ್ಮಗಳೆಂಬ ಸಂಜ್ಞೆಯುಳ್ಳ ಅದೃಷ್ಟವು ಇದೆ. ಅದು ಕಾರ್ಯಕ್ಕೆಲ್ಲ ಕಾರಣವಾಗಿರುವುದು. ಆದರೆ ಅದು ಪ್ರಲಯದಲ್ಲಿ ಇರುವುದಿಲ್ಲ ಎಂದು ಹೇಳುತ್ತೀಯೋ? ಅಥವಾ ಅದೃಷ್ಟವಿದ್ದರೂ ಅದು ಕಾರಣವಲ್ಲವೆಂದು ನಿನ್ನ ಅಭಿಪ್ರಾಯವೋ? ಅಥವಾ ಅದೃಷ್ಟವೆಂಬುದೇ ಇಲ್ಲವೆಂದು ಹೇಳುತ್ತೀಯೋ? ಮೊದಲನೆಯ ಕಲ್ಪವನ್ನು 'ಅನಾದಿತ್ವಂ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಅನಾದಿತ್ವಂ ವಿನಾಽದೃಷ್ಟಂ ಕಥಂ ಸ್ಯಾತ್ಕಾರಣಂ ಕ್ವಚಿತ್ ।

ಪ್ರಲಯಕಾಲದಲ್ಲಿ ಅದೃಷ್ಟವು ಇಲ್ಲವೆಂದರೆ, ಸೃಷ್ಟಿಕಾಲದಲ್ಲಿ ಉಂಟಾಗುವ ಕಾರ್ಯಕ್ಕೆ ಕಾರಣವು ಹೇಗೆ ಆಗುವುದು? ಅಸ್ತಿತ್ವವನ್ನೇ ಹೊಂದಿರದ ವಸ್ತುವು ಯಾವುದೇ ಕಾರ್ಯಕ್ಕೆ ಕಾರಣವಾಗಲಾರದು. ಅಂದರೆ ಸೃಷ್ಟಿಕಾರ್ಯಕ್ಕೆ ಕಾರಣವೇ ಇಲ್ಲದಂತಾಗುವ ಪ್ರಸಂಗ ಬರುವುದು. ಆದುದರಿಂದ ಇಲ್ಲದ ಅದೃಷ್ಟವನ್ನು ಕಾರಣವೆಂದು ಹೇಳಿದರೆ, ಉತ್ಪತ್ತಿಯುಳ್ಳ ಎಲ್ಲ ಪದಾರ್ಥಗಳಿಗೂ ಒಂದು ನಿಮಿತ್ತ ಕಾರಣವು ಇರುವುದೆಂಬ ನಿಯಮಕ್ಕೆ ಇಲ್ಲಿ ಭಂಗ ಉಂಟಾಗುವುದು.

ಹಾಗಾದರೆ ಈಗಿನ ಕಾರ್ಯಗಳಿಗೆಲ್ಲ ಅದೃಷ್ಟವು ಕಾರಣವು. ಆದರೆ ಆದಿ ಕಾಲದಲ್ಲಿ ಉಂಟಾಗುವ ಕಾರ್ಯಕ್ಕೆ ಅದೃಷ್ಟವು ಕಾರಣವಲ್ಲ ಎಂದು ನಾನು ಅಂಗೀಕರಿಸುತ್ತೇನೆ. ಆದಕಾರಣ ಅದೃಷ್ಟವು ಪ್ರಲಯಕಾಲದಲ್ಲಿ ಇರಬೇಕಿಲ್ಲ ಎಂದು ಹೇಳಿದರೆ, ಇದನ್ನೂ 'ಅನಾದಿತ್ವಂ' ಎನ್ನುವುದರಿಂದ ನಿರಾಕರಿಸುತ್ತಾರೆ –

ಪ್ರಲಯದಲ್ಲಿ ಅಸ್ತಿತ್ವವಿಲ್ಲವೆಂಬ ಕಾರಣದಿಂದಲೇ ಆದಿಕಾಲದ ಕಾರ್ಯಕ್ಕೆ ಕಾರಣವಾಗದಿರುವ ಅದೃಷ್ಟವು, ಈಗಿನ ಕಾಲದಲ್ಲಿ ಉಂಟಾಗುವ ಕಾರ್ಯಕ್ಕೆ ಕಾರಣವು ಹೇಗೆ ಆಗುವುದು? ಯಾವುದೇ ರೀತಿಯಿಂದಲೂ ಆಗಲಾರದು. ಈಗಿನ ಕಾರ್ಯಕ್ಕೆ ಅದೃಷ್ಟವು ಕಾರಣವಲ್ಲ ಕಾರ್ಯವಾಗಿರುವುದರಿಂದ ಆದಿಕಾಲದ ಕಾರ್ಯದಂತೆ ಎನ್ನುವ ಅನುಮಾನವು ಸಂಭವಿಸುತ್ತದೆ. ಈಗಿನ ಕಾರ್ಯಕ್ಕೆ ಅದೃಷ್ಟವೇ ಕಾರಣವು ಎಂದು ಅಂಗೀಕರಿಸಿದ ಪಕ್ಷದಲ್ಲಿ, ಈಗಿನಂತೆ ಸೃಷ್ಟಿಕಾಲದ ಕಾರ್ಯವೂ ಅದೃಷ್ಟದ ಕಾರ್ಯವೇ ಎಂದು ಒಪ್ಪಬೇಕಾಗುವುದು.

ಆದಿಕಾಲದಲ್ಲಿರುವ ಕಾರ್ಯಕ್ಕೆ ಅದೃಷ್ಟವು ಕಾರಣವಾಗುವುದು ಬೇಡ. ಹಾಗಿದ್ದರೂ ಪ್ರಲಯಕಾಲದಲ್ಲಿ ಅದೃಷ್ಟವು ಇದೆಯೆಂದು ಅಂಗೀಕರಿಸಬೇಕು. ಏಕೆಂದರೆ, 'ಅನಾದಿತ್ವಂ ವಿನಾ' ಪ್ರಲಯದಲ್ಲಿ ಅಸ್ತಿತ್ವವಿಲ್ಲದಿದ್ದರೆ ಅದೃಷ್ಟವು ಈಗಿನ ಕಾಲದ ಕಾರ್ಯಕ್ಕೂ ಕಾರಣವು ಹೇಗೆ ಆಗುವುದು? ಮಧ್ಯದಲ್ಲಿ ಅದೃಷ್ಟವು ಹುಟ್ಟಿಕೊಳ್ಳುತ್ತದೆ ಎನ್ನುವುದು ಕೂಡುವುದಿಲ್ಲ.

ಹಾಗಾದರೆ ಅದೃಷ್ಟವು ಉತ್ಪತ್ತಿಯುಳ್ಳ ಎಲ್ಲ ಪದಾರ್ಥಗಳಿಗೂ ನಿಮಿತ್ತಕಾರಣವಾಗಿದ್ದರೂ, ಪ್ರಲಯಕಾಲದಲ್ಲಿ ಅದರ ಅಸ್ತಿತ್ವವನ್ನು ಅಂಗೀಕರಿಸುವುದು ಬೇಡ. ಆದಿಕಾಲದಲ್ಲಿಯೇ ಹುಟ್ಟುವ ಅದೃಷ್ಟವು ಮಹದಾದಿಕಾರ್ಯಗಳಿಗೆ ಕಾರಣವಾಗುವುದು ಎಂದು ಅಂಗೀಕರಿಸಲಿಕ್ಕೆ ಅಡ್ಡಿಯಿಲ್ಲ ಎಂದರೆ, ಆದಿಕಾಲದಲ್ಲಿ ಹುಟ್ಟುವ ಅದೃಷ್ಟವು ಅದರ ಹಿಂದಿನ ಅದೃಷ್ಟದಿಂದ ಹುಟ್ಟಿದೆಯೋ ಅಥವಾ ಇಲ್ಲವೋ ಎಂದು ಕೇಳಬೇಕು. 'ಪೂರ್ವಾದೃಷ್ಟಾತ್' ಇತ್ಯಾದಿ ವಚನದಿಂದ ಇವೆರಡು ಕಲ್ಪಗಳನ್ನೂ ನಿರಾಕರಿಸುತ್ತಾರೆ –

ಪೂರ್ವದೃಷ್ಟಾತ್ಪರಾದೃಷ್ಟಂ ಯದಿ ನೈವೋತ್ತರಂ ಕುತಃ ।।೭೮।।

ಪೂರ್ವದಲ್ಲಿದ್ದ ಅದೃಷ್ಟದಿಂದ ಆಮೇಲಿನ ಅದೃಷ್ಟವು ಹುಟ್ಟುತ್ತದೆ ಎನ್ನುವ ಪಕ್ಷದಲ್ಲಿ, ಆದಿಕಾಲದಲ್ಲಿ ಹುಟ್ಟತಕ್ಕ ಅದೃಷ್ಟವನ್ನು ನಾವು ಪಕ್ಷವೆಂದು ಪರಿಗಣಿಸುವುದೇ ಇಲ್ಲ. ಆದರೆ ಅದಕ್ಕೆ ಕಾರಣವೆನಿಸಿದ ಪ್ರಲಯಕಾಲದಲ್ಲಿರುವ ಪೂರ್ವಾದೃಷ್ಟವನ್ನೇ ಪಕ್ಷವೆಂದು ಹೇಳುತ್ತೇವೆ. ಆದುದರಿಂದ ಆಶ್ರಯಾಸಿದ್ಧಿಯು ಹೇಗೆ ಬರುವುದು?

ಎರಡನೆಯ ಕಲ್ಪಕ್ಕೂ 'ಪೂರ್ವಾದೃಷ್ಟಾತ್' ಎಂಬುದರಿಂದಲೇ ಉತ್ತರಿಸುತ್ತಾರೆ. ಮೊದಲಿನ ಅದೃಷ್ಟದಿಂದ ಆಮೇಲಿನ ಅದೃಷ್ಟವು ಹುಟ್ಟುವುದೇ ಇಲ್ಲವೆಂದು ಅಂಗೀಕರಿಸಿದ ಪಕ್ಷದಲ್ಲಿ, ಆದಿಕಾಲದಲ್ಲಿನ ಅದೃಷ್ಟದ ಉತ್ಪತ್ತಿಯು ಕೂಡುವುದೇ ಇಲ್ಲ.

ಹಾಗಾದರೆ ಹುಟ್ಟತಕ್ಕ ಎಲ್ಲ ಅದೃಷ್ಟಗಳೂ ಹಿಂದಿನ ಅದೃಷ್ಟದಿಂದಲೇ ಹುಟ್ಟುತ್ತವೆ ಎಂದು ಹೇಳುವುದಿಲ್ಲ. ಆದಿಕಾಲದ ಅದೃಷ್ಟಕ್ಕೆ ಅದರ ಹಿಂದಿನ ಅದೃಷ್ಟವು ಕಾರಣವಲ್ಲ. ಮಹದಾದಿ ಕಾರ್ಯಗಳಿಗೆ ಅದೃಷ್ಟವು ಕಾರಣವು ಎಂದು ಹೇಳಿದರೆ – ಸೃಷ್ಟಿಯ ಮೊದಲಿನ ಅದೃಷ್ಟವು ಅದಕ್ಕೆ ಹಿಂದಿನ ಅದೃಷ್ಟದಿಂದ ಹುಟ್ಟುವುದಿಲ್ಲ ಎನ್ನುವ ಪಕ್ಷದಲ್ಲಿ, ಆಮೇಲಿನ ಮಹದಾದಿ ಕಾರ್ಯಗಳೂ ಅದೃಷ್ಟದಿಂದ ಹುಟ್ಟುವುದೆಂದು ಏಕೆ ಅಂಗೀಕರಿಸಬೇಕು? ಮಹದಾದಿ ಕಾರ್ಯವೂ ಅದೃಷ್ಟಾಪೇಕ್ಷೆಯಿಲ್ಲದೇ ಹುಟ್ಟುವುದು ಎನ್ನುವುದು ಅಯುಕ್ತವಾಗಲಾರದು. ಇಲ್ಲದಿದ್ದಲ್ಲಿ ಆ ಅದೃಷ್ಟವೂ ಕಾರ್ಯವೇ ಆಗಿರುವುದರಿಂದ ಅದಕ್ಕೂ ಮತ್ತೊಂದು ಅದೃಷ್ಟದ ಅಪೇಕ್ಷೆಯು ಇದೆ ಎಂದು ಅಂಗೀಕರಿಸಬೇಕಾಗುತ್ತದೆ.

ಹಾಗಾದರೆ, ಅದೃಷ್ಟವು ಕಾರ್ಯಕ್ಕೆ ಕಾರಣವೇ ಆಗುವುದಿಲ್ಲ ಅಥವಾ ಅದೃಷ್ಟವೇ ಇಲ್ಲ ಎಂದು ಹೇಳುತ್ತೇವೆ. ಏಕೆಂದರೆ ಅದೃಷ್ಟವು ಇದೆಯೆಂದಾಗಲೀ, ಅದೃಷ್ಟವು ಕಾರಣವೆಂಬುದಾಗಲೀ ಪ್ರತ್ಯಕ್ಷಕ್ಕೆ ಗೋಚರವಾಗದು. ಆದುದರಿಂದ ಅನುಮಾನದಲ್ಲಿ ಆಶ್ರಯಾಸಿದ್ಧಿಯು ತಪ್ಪುವುದೇ ಇಲ್ಲ. ಹೀಗೆ ಆಶಂಕಿಸಿದರೆ –

ಅದೃಷ್ಟಂ ಕಾರಣಂ ನೋ ಚೇಲ್ಲಯೇ ಮಾನಂ ಚ ಕಿಂ ಭವೇತ್ ।

ಪ್ರತ್ಯಕ್ಷಕ್ಕೆ ಅಗೋಚರವಾದ್ದರಿಂದ ಅದೃಷ್ಟವೇ ಇಲ್ಲ ಹಾಗೂ ಇದ್ದರೂ ಕಾರಣವಲ್ಲ ಎಂದು ಹೇಳುವುದಾದರೆ, ಪ್ರಲಯ ವಿಷಯದಲ್ಲಾದರೂ ಏನು ಪ್ರಮಾಣವಿರುವುದು? ಪ್ರಲಯವಾದರೂ ಪ್ರತ್ಯಕ್ಷಕ್ಕೆ ಅಗೋಚರವು. ಪ್ರಲಯದಲ್ಲಿ ಈಶ್ವರಾದಿಗಳು ಇರುವುದಿಲ್ಲವೆಂಬ ಅನುಮಾನವೂ ಪ್ರಮಾಣವಾಗಲಾರದು. ಏಕೆಂದರೆ ಪರಕೀಯರ ಪ್ರಕಾರ ಈಶ್ವರಾದಿಗಳಿಗೆ ಪ್ರಸಿದ್ಧಿಯಿಲ್ಲ. ಆದ್ದರಿಂದ ಪರಕೀಯಾನುಮಾನದಲ್ಲಿ ಪಕ್ಷದಲ್ಲಿ ಸಾಧ್ಯಾಪ್ರಸಿದ್ಧಿ ಎಂಬ ದೋಷವು ಬರುವುದು.

ಈ ಅಧಿಕರಣದ ಮೊದಲನೆಯ ಸೂತ್ರದಲ್ಲಿ ಪ್ರಾಗಭಾವಕ್ಕೆ ಕರ್ತೃತ್ವವನ್ನು ನಿರಾಕರಿಸುವುದಕ್ಕಾಗಿ ಅನುಮಾನವನ್ನು ಹೇಳಿದರು. ಈಗ ಈ ಸೂತ್ರದಿಂದಲೂ "ಜಗತ್ತಿಗೆ ಅಭಾವವು ಕರ್ತೃವಲ್ಲ. ಏಕೆಂದರೆ ಚೇತನನೇ ಕರ್ತನು ಎನ್ನುವ ವಿಷಯದಲ್ಲಿ ದೃಷ್ಟಾಂತವಿರುವುದು" ಎನ್ನುವ ಅಭಿಪ್ರಾಯದಿಂದ, ಜಗತ್ತು ಚೇತನ ಕರ್ತೃಕ ಎನ್ನುವ ವಿಷಯದಲ್ಲಿ ಅನುಮಾನವನ್ನು ಹೇಳುತ್ತಾರೆ –

ಉತ್ಪತ್ತಿನಾಶಕಾರೀ ಚ ಬುದ್ಧಿಮಾನ್ ದೃಶ್ಯತೇ ಕ್ವಚಿತ್ ।।೭೯।।

ತದ್ದೃಷ್ಟಾಂತೇನ ಸರ್ವತ್ರ ಕರ್ತಾ ಕಿಂ ನಾನುಮೀಯತೇ ।

ಬುದ್ಧಿಪೂರ್ವಕವಾಗಿ ಉತ್ಪತ್ತಿನಾಶಗಳನ್ನು ಮಾಡುವ ಕರ್ತೃವು ಘಟಪಟಾದಿ ಪದಾರ್ಥಗಳಲ್ಲಿ ಕಂಡುಬರುತ್ತಾನೆ. ಈ ದೃಷ್ಟಾಂತದಿಂದ ಜಗತ್ಸೃಷ್ಟ್ಯಾದಿ ಎಲ್ಲ ಕಾರ್ಯಗಳಲ್ಲಿಯೂ ಬುದ್ಧಿಯುಳ್ಳ ಕರ್ತನಿರಲೇಬೇಕೆಂದು ಅನುಮಾನದಿಂದ ಏಕೆ ಊಹಿಸಬಾರದು?

ಹಾಗಾದರೆ ಅನುಮಾನದಿಂದ ಈಶ್ವರನಿಗೆ ಜಗತ್ಕರ್ತೃತ್ವವನ್ನು ಪ್ರತಿಪಾದಿಸುವ ಸೂತ್ರಕಾರರ ಈ ಹೇಳಿಕೆಯು ತಮ್ಮ ಹಿಂದಿನ ವಚನಕ್ಕೆ ವಿರುದ್ಧವಾಗಿದೆ. 'ಶಾಸ್ತ್ರಯೋನಿತ್ವಾತ್' ಇತ್ಯಾದಿ ಸೂತ್ರಗಳಿಂದ ಈಶ್ವರನ ಬಗ್ಗೆ ಅನುಮಾನದ ಪ್ರಾಮಾಣ್ಯವನ್ನು ಸ್ವತಃ ಸೂತ್ರಕಾರರೇ ನಿರಾಕರಿಸಿದ್ದಾರೆ. ಹೀಗೆ ಆಶಂಕಿಸಿದರೆ –

ಆಗಮಾನುಗೃಹೀತಾ ತು ಮಾನಮೇಷಾऽನುಮಾऽಪಿ ತು ।।೮೦।।

ಸೂತ್ರಕಾರರು ಎಲ್ಲ ರೀತಿಯಿಂದಲೂ ಈಶ್ವರನ ವಿಷಯದಲ್ಲಿ ಅನುಮಾನದ ಪ್ರಮಾಣ್ಯವನ್ನು ನಿರಾಕರಿಸಿಲ್ಲ. ಆದರೆ ಆಗಮಗಳಿಂದ ಅನುಗೃಹೀತವಾಗಿಲ್ಲದ

ಅನುಮಾನಗಳಿಗೆ ಮಾತ್ರ ಪ್ರಾಮಾಣ್ಯವನ್ನು ನಿರಾಕರಿಸಿದ್ದಾರೆ. ಆಗಮಗಳಿಂದ ಅನುಗೃಹೀತವಾದ ಅನುಮಾನವು ಈಶ್ವರನ ವಿಷಯದಲ್ಲಿ ಪ್ರಮಾಣವೇ ಆಗುವುದು ಎಂಬುದಾಗಿಯೇ ಸೂತ್ರಕಾರರ ಅಭಿಮತವಾಗಿದೆ. ಹಾಗಿಲ್ಲದಿದ್ದರೆ ವೇದಾರ್ಥ ನಿರ್ಣಯದಲ್ಲಿ ಯುಕ್ತಿಯ ಅನುಸಂಧಾನರೂಪವಾದ ಜಿಜ್ಞಾಸೆಯನ್ನೇ ಆರಂಭಿಸುತ್ತಿರಲಿಲ್ಲ. ಈಗ ಹೇಳಲ್ಪಟ್ಟ ಅನುಮಾನವಾದರೂ 'ಯತೋ ವಾ ಇಮಾನಿ ಭೂತಾನಿ' ಇತ್ಯಾದಿ ಆಗಮಗಳಿಂದ ಅನುಗೃಹೀತವಾದುದೇ ಆಗಿದೆ. ಆದಪ್ರಯುಕ್ತ ಈಶ್ವರನ ವಿಷಯದಲ್ಲಿ ಪ್ರಮಾಣವಾಗುವುದು. ಆದುದರಿಂದ ಯಾವುದೇ ವಿರೋಧವಿರುವುದಿಲ್ಲ.

ಹೀಗೆ ಅಭಾವಕ್ಕೆ ವಿಶ್ವಕರ್ತೃತ್ವವನ್ನು ಸಾಧಿಸುವ ಅನುಮಾನವನ್ನು ನಿರಾಕರಿಸಿ, ವಿಶ್ವಕ್ಕೆ ಈಶ್ವರನೇ ಕರ್ತೃವು ಎಂಬ ಉತ್ತರವನ್ನು ಅನುಮಾನದಿಂದಲೇ ಸಮರ್ಥಿಸಲಾಯಿತು. ಇದನ್ನು ಮತಾಂತರದಿಂದ (ತರ್ಕದ ಅಪ್ರಾಮಾಣ್ಯವನ್ನು ವಾದಿಸುವವರ ಮತದಿಂದ) ಆಕ್ಷೇಪಿಸಿ ಸಮಾಧಾನ ಹೇಳತಕ್ಕ ಸೂತ್ರ –

ಸೂತ್ರ: ಓಂ ತರ್ಕಾಪ್ರತಿಷ್ಠಾನಾದನ್ಯಥಾಪ್ಯನುಮೇಯಮಿತಿ

ಚೇದೇವಮಪ್ಯನಿರ್ಮೋಕ್ಷ ಪ್ರಸಂಗಃ ಓಂ

ಸೂತ್ರಾರ್ಥ: ಅನುಮಾನವನ್ನು ಆಧರಿಸಿರುವ ಪೂರ್ವಪಕ್ಷವಾಗಲೀ ಸಿದ್ಧಾಂತವಾಗಲೀ ಪ್ರಮಾಣವೆನಿಸುವುದಿಲ್ಲ. ಏಕೆಂದರೆ, ಹೀಗೆಯೇ ಅನುಮಾನ ಮಾಡತಕ್ಕದ್ದು, ಬೇರೆ ರೀತಿಯಿಂದ ಮಾಡತಕ್ಕದ್ದಲ್ಲ ಎಂಬುದಾಗಿ ತರ್ಕಕ್ಕೆ ವ್ಯವಸ್ಥೆಯಿರುವುದಿಲ್ಲ. ವಿಪರೀತವಾಗಿಯೂ ಅನುಮಾನ ಮಾಡಲು ಬರುತ್ತದೆ. ಹೀಗೆ ಶಂಕಿಸುವುದು ಸರಿಯಲ್ಲ. ಏಕೆಂದರೆ ತರ್ಕಕ್ಕೆ ಅಪ್ರಾಮಾಣ್ಯವನ್ನು ಹೇಳಿದರೆ ಮೋಕ್ಷವೇ ಇಲ್ಲದಂತಾಗುವುದು. ಒಟ್ಟಿನಲ್ಲಿ ಸೂತ್ರದ ಅಭಿಪ್ರಾಯವೇನೆಂದರೆ – ಕೇವಲ ತರ್ಕವು ಪ್ರಮಾಣವಲ್ಲ. ಆದರೆ ಪ್ರತ್ಯಕ್ಷ, ಆಗಮ ಮುಂತಾದ ಪ್ರಮಾಣಗಳ ಅನುಗ್ರಹವಿದ್ದರೆ ಅಂಥಹ ತರ್ಕವೂ ಪ್ರಮಾಣವಾಗಿ ಗ್ರಾಹ್ಯವಾಗುತ್ತದೆ.

ಈ ಸೂತ್ರದ ಅಭಿಪ್ರಾಯವನ್ನು ಮುಂದಿನ ವಚನದಿಂದ ಸ್ಪಷ್ಟಪಡಿಸುತ್ತಾರೆ –

ಆಗಮಾನುಗ್ರಹಾಭಾವೇ ನ ತರ್ಕಃ ಸ್ಯಾತ್ಪ್ರತಿಷ್ಠಿತಃ ।

ಅಕ್ಷಜಾಗಮಮೂಲಸ್ಯ ಸ್ಯಾದೇವಾಸ್ಯ ಪ್ರತಿಷ್ಠಿತಿಃ ।।೮೧।।

ಪ್ರಮಾಣದ ಅನುಗ್ರಹವಿಲ್ಲದೇ ಹೋದರೆ ತರ್ಕವು (ಅನುಮಾನವು) ಪ್ರಮಾಣ ಎನಿಸುವುದಿಲ್ಲ. ಪ್ರತ್ಯಕ್ಷಾಗಮಗಳೇ ಮೂಲವಾಗುಳ್ಳ ಈ ಅನುಮಾನಕ್ಕೆ ಪ್ರಾಮಾಣ್ಯವು ಬಂದೇ ಬರುತ್ತದೆ.

ಈ ವ್ಯವಸ್ಥೆಯನ್ನು ಒಪ್ಪದೆ, ಎಲ್ಲ ಕಡೆಯಲ್ಲಿಯೂ ಪ್ರತಿಪಕ್ಷಾನುಮಾನಕ್ಕೆ

ಅವಕಾಶವಿದೆಯೆಂದೂ, ಎಲ್ಲ ಅನುಮಾನಗಳೂ ಅಪ್ರಮಾಣವೆಂದೂ ವಾದಿಸುವ ಪ್ರತಿಪಕ್ಷದವನಿಗೆ 'ಅನ್ಯಥಾ' ಎಂಬ ವಚನದಿಂದ ಉತ್ತರವನ್ನು ಹೇಳುತ್ತಾರೆ –

ಅನ್ಯಥಾऽಸ್ಯಾಪ್ರತಿಷ್ಠಾ ಚ ಸ್ವವಾಚಾ ವ್ಯಾಹತೈವ ಹಿ ।

ಹಿಂದೆ ಹೇಳಿದ ವ್ಯವಸ್ಥೆಯನ್ನು ಒಪ್ಪದಿದ್ದ ಪಕ್ಷದಲ್ಲಿ, ಎಲ್ಲ ಅನುಮಾನಗಳಿಗೆ ಅಪ್ರಾಮಾಣ್ಯವು ತನ್ನ ವಚನದಿಂದಲೇ ಬಾಧಿತವಾಗುವುದು. ಅಂದರೆ ಯಾವನು ಹೀಗೆ ಅಂಗೀಕರಿಸುವುದಿಲ್ಲವೋ ಅವನಿಗೆ ಸ್ವವಚನ ವಿರೋಧವು ಬರುವುದರಿಂದ ಮೋಕ್ಷವೇ ಇಲ್ಲವೆನ್ನುವ ಪ್ರಸಂಗವು ಬರುತ್ತದೆ.

ಸೂತ್ರ: ಓಂ ಏತೇನ ಶಿಷ್ಟಾ ಅಪರಿಗ್ರಹಾ ಅಪಿ ವ್ಯಾಖ್ಯಾತಾಃ ಓಂ

ಇದು ಈ ಅಧಿಕರಣದ ಕೊನೆಯ ಸೂತ್ರ. ಈ ಸೂತ್ರವನ್ನು ಕೆಲವರು ಹೀಗೆ ವ್ಯಾಖ್ಯಾನಿಸುತ್ತಾರೆ – 'ನ ವಿಲಕ್ಷಣತ್ವ' ಮುಂತಾದ ಸೂತ್ರಗಳಿಂದ ಪ್ರಕೃತವಾದ ಉಪಾದಾನಕಾರಣವಾಗಿ ಹೇಳಲ್ಪಟ್ಟ ಪ್ರಧಾನವನ್ನೇ ಜಗತ್ಕಾರಣವೆಂಬ ವಾದವನ್ನು ನಿರಾಕರಿಸಲಾಯಿತು. ಪರಮಾಣು ಮೊದಲಾದವುಗಳೇ ಜಗತ್ಕಾರಣ ಎಂಬ ವಾದವನ್ನು ಶಿಷ್ಟರಾದ ಮನು ವ್ಯಾಸ ಮೊದಲಾದವರು ಪರಿಗ್ರಹಿಸಿರುವುದಿಲ್ಲ. ಅಂಥಹ ವಾದಗಳೂ ಇದರಿಂದ ನಿರಸ್ತವಾದವು ಎಂದು ತಿಳಿಯಬೇಕು. ಹೀಗೆ ಕೆಲವರು ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ. ಈ ವ್ಯಾಖ್ಯಾನವನ್ನು 'ನ ಚ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ನ ಚ ಶಿಷ್ಟಾಗೃಹೀತತ್ವಂ ನಿರೀಶಾದೀಶವಾದಿನಃ ॥೮೨॥

ನಿರೀಶ್ವರವಾದಿ ಸಾಂಖ್ಯನಿಗಿಂತ ಈಶ್ವರವಾದಿಗಳಾದ ವೈಶೇಷಿಕರಿಗೆ ಶಿಷ್ಟರಿಂದ ಪರಿಗ್ರಹಿಸಲ್ಪಟ್ಟಿಲ್ಲ ಎಂಬ ಭಾವವು ಇಲ್ಲವೇ ಇಲ್ಲ.

ವಿವರಣೆ: ಈಶ್ವರನನ್ನು ಒಪ್ಪುವ ವೈಶೇಷಿಕಾದಿಗಳಿಗಿಂತ ಈಶ್ವರನನ್ನು ಒಪ್ಪದ ಸಾಂಖ್ಯನೇ ಹೆಚ್ಚಿನ ರೀತಿಯಲ್ಲಿ ಶಿಷ್ಟರಿಗೆ ವಿರುದ್ಧನೆಂಬ ವಿಚಾರವೇ ಉಚಿತವಾಗುತ್ತದೆ. ಏಕೆಂದರೆ ಈ ಅಧಿಕರಣದಲ್ಲಿ ಬ್ರಹ್ಮನು ಜಗತ್ಕಾರಣನು ಎಂಬ ವಿಷಯಕ್ಕೆ ವಿರುದ್ಧವಾದ ವಾದಗಳನ್ನು ನಿರಾಕರಿಸಲಾಗುತ್ತದೆ. ಸಾಂಖ್ಯನು ಈಶ್ವರನನ್ನೇ ಒಪ್ಪುವುದಿಲ್ಲ ಎಂದ ಮೇಲೆ ಈಶ್ವರನು ಜಗತ್ಕಾರಣನೆಂಬುದನ್ನು ಅವನು ಹೇಗೆ ಒಪ್ಪುತ್ತಾನೆ? ಹೀಗೆ ವೇದಾಂತಕ್ಕೆ ಅತ್ಯಂತ ವಿರುದ್ಧವಾದ್ದರಿಂದ ಸಾಂಖ್ಯನ ವಾದವು ಶಿಷ್ಟರಿಗೆ ಅಸಮ್ಮತವು. ಆದರೆ ವೈಶೇಷಿಕಾದಿಗಳು ಬ್ರಹ್ಮನನ್ನೂ, ಅವನು ಜಗತ್ತಿಗೆ ನಿಮಿತ್ತಕಾರಣವೆಂಬುದನ್ನೂ ಅಂಗೀಕರಿಸಿದ್ದಾರೆ. ಆದರೆ ಪ್ರಧಾನಕ್ಕೆ ಉಪಾದಾನ ಕಾರಣತ್ವವನ್ನು ಅಂಗೀಕರಿಸಿಲ್ಲ. ಈ ಕಾರಣದಿಂದ ವೇದಾಂತಕ್ಕೆ ಸ್ವಲ್ಪ ವಿರೋಧಿಯಾದುದರಿಂದ ವೈಶೇಷಿಕರ ವಾದವು ಸ್ವಲ್ಪಮಟ್ಟಿಗೆ ಅಸಮ್ಮತವು.

ಹಾಗಾದರೆ ಸೂತ್ರಾರ್ಥವು ಯಾವುದು ಎಂದರೆ –

ಅತೋಽವಶಿಷ್ಟಜೀವಾದಿಕರ್ತೃತಾಽತ್ರ ನಿಷಿಧ್ಯತೇ ।

ಬೇರೆ ಅರ್ಥಗಳನ್ನು ಈಗಾಗಲೇ ನಿರಾಕರಿಸಿರುವುದರಿಂದ ಅವಶಿಷ್ಟವಾದ ಜೀವಾದಿ ಕರ್ತೃತ್ವವು ಈ ಸೂತ್ರದಲ್ಲಿ ನಿರಾಕರಿಸಲ್ಪಡುತ್ತದೆ. ಅಂದರೆ, ವೇದಕ್ಕೆ ಅಸಮ್ಮತವಾದ ಜೀವ, ಪ್ರಧಾನ, ಅಸತ್ತು, ಕಾಲ, ಸ್ವಭಾವ ಮುಂತಾದವುಗಳಿಗೆ ಜಗತ್ಕಾರಣತ್ವವನ್ನು ಹೇಳುವ ಮತಗಳೆಲ್ಲವೂ ಈ ಸೂತ್ರದಿಂದ ನಿರಾಕೃತವಾದವು ಎಂದು ವ್ಯಾಖ್ಯಾನ ಮಾಡಿದಂತಾಯಿತು.

ಹಾಗಾದರೆ ಜೀವಾದಿ ಎಂಬಲ್ಲಿರುವ ಆದಿ ಶಬ್ದದಿಂದ ಅಸತ್ಕರ್ತೃತ್ವ ವಾದವೂ ಪರಿಗ್ರಹಿಸಲ್ಪಟ್ಟಿದೆ ಎಂದು ಹೇಳುವುದು ಯುಕ್ತವಲ್ಲ. ಏಕೆಂದರೆ 'ಅಸದಿತಿ ಚೇನ್ನ' ಎಂಬ ಸೂತ್ರದ ವ್ಯಾಖ್ಯಾನದಲ್ಲಿ ಇದನ್ನು ನಿರಾಕರಸಿರುವುದರಿಂದ, ಮತ್ತೆ ಅದನ್ನು ಗ್ರಹಿಸಿದರೆ ಪುನರುಕ್ತಿ ಮುಂತಾದ ದೋಷಗಳು ಬರುತ್ತವೆ. ಹೀಗೆ ಆಶಂಕಿಸಿದರೆ–

ತನ್ಮನೋಽಕುರುತೇತ್ಯಾದೇರಸತೋ ಮನಸೋ ಜನಿಃ ।।೮೩।।

ನಿವಾರಿತಾ ತು ಪೂರ್ವತ್ರ ಹ್ಯಕಸ್ಮಾದಿತಿ ತದ್ವಿನಾ ।

ಅಸತೋ ವಿಶ್ವಜನನಮಾಶಂಕ್ಯಾತ್ರ ನಿಷಿಧ್ಯತೇ ।।೮೪।।

ಪ್ರಾಗಭಾವದ ಮನಸ್ಸಿನಿಂದ, ಅಂದರೆ ಜ್ಞಾನ ಇಚ್ಛೆ ಪ್ರಯತ್ನಗಳಿಂದ, ಜಗತ್ತು ಹುಟ್ಟಿತು ಎಂದು 'ತನ್ಮನೋಽಕುರುತ' ಇತ್ಯಾದಿ ಪ್ರಮಾಣದಿಂದಲೂ ಹಿಂದಿನ ಯುಕ್ತಿಯಿಂದಲೂ ಆಶಂಕಿಸಲ್ಪಟ್ಟದ್ದು ಮೊದಲಿಗೆ ನಿರಾಕರಿಸಲ್ಪಟ್ಟಿತು. 'ಪ್ರತಿಷೇಧ ಮಾತ್ರತ್ವಾತ್' ಇತ್ಯಾದಿ ವಚನದಿಂದ ಇದು ಸ್ಪಷ್ಟವು. 'ಅಕಸ್ಮಾದ್ಧೀಮಾವಿರಾಸೀತ್' ಇತ್ಯಾದಿ ಶ್ರುತಿಗಳಿಂದ, ಮನಸ್ಸನ್ನು ಹೊರತುಪಡಿಸಿ (ಜ್ಞಾನೇಚ್ಛಾದಿಗಳಿಲ್ಲದೆ), ಶೂನ್ಯದ ದೆಶೆಯಿಂದ ಜಗತ್ತಿನ ಉತ್ಪತ್ತಿಯನ್ನು ಆಶಂಕಿಸಿ, ಅದು ಇಲ್ಲಿ ನಿಷೇಧಿಸಲ್ಪಡುತ್ತದೆ.

ವಿವರಣೆ: ಹಾಗಾದರೆ ಜಗತ್ತಿಗೆ ಅಭಾವವು ಕರ್ತೃವಲ್ಲ ಎಂದು ಒಪ್ಪೋಣ. ಆದರೂ ಜೀವಾದಿಗಳಿಂದ ಉತ್ಪತ್ತಿಯನ್ನು ಹೊಂದುತ್ತದೆ. ಏಕೆಂದರೆ 'ಜೀವಾದ್ಭವಂತಿ ಭೂತಾನಿ' 'ಪ್ರಧಾನಾದಿದಮುತ್ಪನ್ನಂ' 'ಅಕಸ್ಮಾದ್ಧೀದಮಾವಿ–ರಾಸೀತ್' ಇತ್ಯಾದಿ ಶ್ರುತಿಗಳು ಜೀವಾದಿಗಳಿಗೆ ಕಾರಣತ್ವವನ್ನು ಹೇಳುತ್ತವೆ. ಘಟ, ದಧಿ, ಕಂಟಕ, ತೈಕ್ಷ್ಣ್ಯ ಮೊದಲಾದ ದೃಷ್ಟಾಂತಗಳೂ ಇದರ ಪರವಾಗಿ ಇವೆ. ಘಟವು ಚೇತನದಿಂದ ಉತ್ಪತ್ತಿಗೂ, ದಧಿಯು ಅಚೇತನದಿಂದ ಉತ್ಪತ್ತಿಗೂ, ತೈಕ್ಷ್ಣ್ಯ ಕಂಟಕಗಳು ಕಾರಣವಿಲ್ಲದೆ ಉತ್ಪತ್ತಿಗೂ ದೃಷ್ಟಾಂತಗಳು. ಜಗತ್ತು ಜೀವಕರ್ತೃಕವು ಕಾರ್ಯವಾದುದರಿಂದ ಘಟದಂತೆ ಇತ್ಯಾದಿ ಅನುಮಾನಗಳಿಂದಲೂ ಜೀವಾದಿ

ಕರ್ತೃತ್ವವಾದವು ಸಿದ್ಧಿಸುತ್ತದೆಯೆಂದು ಹೇಳಿದರೆ, ಬುದ್ಧಿ ಇತ್ಯಾದಿಗಳನ್ನು ಹೊಂದಿರುವ ಮುಖ್ಯವಾದ ಕರ್ತೃತ್ವವನ್ನು ನಾವು ಜೀವಾದಿಗಳಿಗೆ ಅಂಗೀಕರಿಸಿಯೇ ಇಲ್ಲ. ಈವ್ಯಾಖ್ಯಾನದಲ್ಲಿ ಉಕ್ತವಾಗಿರುವ ಕರ್ತೃ ಶಬ್ದವು ಕೇವಲ ಕಾರಣತ್ವದಲ್ಲಿಯೇ ತಾತ್ಪರ್ಯವುಳ್ಳದ್ದೆಂದು ತಿಳಿಯಬೇಕು.

ಇಲ್ಲಿ ಜೀವಾದಿಗಳಿಗೆ ವಿಶ್ವಕಾರಣತ್ವವನ್ನು ಮಾತ್ರ ಶಂಕಿಸುತ್ತೀರೋ? ಅಥವಾ ಜೀವಾದಿಗಳಿಗೇ ಕಾರಣತ್ವವೆಂದು ಶಂಕಿಸುತ್ತೀರೋ? ಎಂದು ಪ್ರಶ್ನೆ. ಮೊದಲನೆಯ ಕಲ್ಪದಲ್ಲಿ ಸಿದ್ಧಾಂತ ವಿರೋಧವಿಲ್ಲ. ಏಕೆಂದರೆ ಜೀವನು ಅದೃಷ್ಟವನ್ನು ಆಶ್ರಯಿಸಿರುವುದರಿಂದ ನಿಮಿತ್ತಕಾರಣನೆಂದೂ, ಪ್ರಧಾನವು ಉಪಾದಾನ ಕಾರಣವೆಂದೂ ಅಂಗೀಕರಿಸಿದ್ದೇವೆ. ಎರಡನೆಯ ಪಕ್ಷವು ಕೂಡುವುದಿಲ್ಲ. ಏಕೆಂದರೆ ಹಿಂದೆ ಹೇಳಿದ ದೃಷ್ಟಾಂತಗಳಲ್ಲಿ ಜೀವನೊಬ್ಬನೇ ಕಾರಣನೆಂಬುದಕ್ಕೆ ಸ್ಥಾಪಕ ಯುಕ್ತಿಯು ಇರುವುದಿಲ್ಲ. ಅಲ್ಲದೆ ಯಾವುದು ಕಾರ್ಯವೋ ಅದು ಸಕರ್ತೃಕವು ಎಂಬ ನಿಯಮವೂ ಇದೆ. ಇಲ್ಲಿ 'ಪ್ರಾಪಕಂ' ಇತ್ಯಾದಿ ವಚನದಿಂದ ಜೀವನಿಗೇ ಕಾರಣತ್ವವೆಂಬ ಪಕ್ಷವೇ ಆಶಂಕಿಸಲ್ಪಡುತ್ತದೆ.

ಪ್ರಾಪಕಂ ವಾಕ್ಯಮಾತ್ರಂ ತು ಪರಿಹಾರೋಽವಿಶೇಷತಃ ।

'ನ ಜೀವಾತ್ ಕಾರಣಂ ಪರಂ' 'ನ ಹ್ಯನ್ಯತ್ಕಾರಣಂ ಮತಂ' (ಜೀವನಿಂದ ಬೇರೆಯಾದ ಕಾರಣವಿಲ್ಲ, ಇನ್ನೊಂದು ಕಾರಣವಿಲ್ಲ) ಇತ್ಯಾದಿ ವಾಕ್ಯಮಾತ್ರವು ಜೀವಾದಿಗಳೇ ಕಾರಣವೆಂಬ ಆಶಂಕೆಯನ್ನು ಹುಟ್ಟಿಸುತ್ತವೆ. ಈ ಪೂರ್ವಪಕ್ಷಕ್ಕೆ ಪರಿಹಾರವು ಸಮಾನವಾಗಿದೆ. ಅಂದರೆ, ಪೂರ್ವಪಕ್ಷಗಳು ಪ್ರತಿಷೇಧಮಾತ್ರ ಸ್ವರೂಪವನ್ನು ಹಾಗೂ ದೃಷ್ಟಾಂತವನ್ನು ಹೊಂದಿರುವುದು ಎಂಬ ಕಾರಣಗಳಿಂದ ಯುಕ್ತಿವಿರುದ್ಧಗಳಾಗಿವೆ. 'ಸ್ವಪಕ್ಷ ದೋಷಾಚ್ಚ' ಎಂಬ ಸೂತ್ರದಿಂದ ಅವುಗಳಿಗೆ ಅಪ್ರಾಮಾಣಿಕತ್ವವೂ ಉಕ್ತವಾಗಿದೆ. ಅಂಥಹುದೇ ಪರಿಹಾರವು ಇಲ್ಲಿಯೂ ಸಮಾನವಾಗಿದೆ ಎಂದರ್ಥ.

ವಿವರಣೆ: ಜೀವಾದಿಗಳೇ ಕಾರಣವೆಂದು ಹೇಳುವ ವಾಕ್ಯಗಳು ಲೋಕ ವಿರುದ್ಧವೆಂದು ತಿಳಿಯಬಾರದು. ಏಕೆಂದರೆ ಕೇವಲ ವಾಕ್ಯದಿಂದಲೇ ಸಿದ್ಧವಾಗುವ ಅರ್ಥದಲ್ಲಿ ವಾಕ್ಯದಿಂದ ತೋರುವ ಅರ್ಥವೇ ಗ್ರಹಿಸಲ್ಪಡುತ್ತದೆ. ಹೊರತು ಲೋಕವನ್ನು ಅನುಸರಿಸುವುದಿಲ್ಲ. ಹೀಗೆ ಪೂರ್ವಪಕ್ಷಿಯು ತಿಳಿಯುತ್ತಾನೆ. ಪ್ರಧಾನಾದಿಗಳಿಗೆ ಜಗತ್ಕಾರಣತ್ವವನ್ನು ಹೇಳುವ ಮತಗಳನ್ನು ದ್ವಿತೀಯಪಾದದಲ್ಲಿ ನಿರಾಕರಿಸುವರು. ಆ ಮತಗಳನ್ನು ಈ ಪಾದದಲ್ಲಿಯೂ ನಿರಾಕರಿಸಿದರೆ ಪುನರುಕ್ತಿ ದೋಷವು ಬರುವುದು ಎಂದು ಆಶಂಕಿಸಿದರೆ ಅದನ್ನೂ 'ಪ್ರಾಪಕಂ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ. ಇಲ್ಲಿ ಶಂಕಾಪ್ರಾಪಕವು ಕೇವಲ ವಾಕ್ಯವೇ ಹೊರತು ಮತವಲ್ಲ. ಇಲ್ಲಿ ಶ್ರುತಿಯಿಂದ ಅನುಗೃಹೀತವಾದ ಯುಕ್ತಿಗಳಿಂದ ಪ್ರತಿಪಾದಿತವಾದ

ಪ್ರಧಾನಾದಿಗಳು ಕಾರಣವೆಂಬ ಮತವು ನಿರಾಕರಿಸಲ್ಪಡುತ್ತದೆ. ಮುಂದಿನ ಪಾದದಲ್ಲಿ ಸಾಂಖ್ಯ ಮುಂತಾದ ಮತಗಳು ನಿರಾಕರಿಸಲ್ಪಡುತ್ತವೆ. ಆದುದರಿಂದ ಪುನರುಕ್ತಿ ದೋಷವಿಲ್ಲ.

ಜೀವಾದಿಗಳಿಗೆ ಕರ್ತೃತ್ವವನ್ನು ಹೇಳುವ ವಾದಗಳು ಯುಕ್ತಿವಿರುದ್ಧಗಳೆಂಬುದು ಹೇಗೆ ಎಂದು ಆಶಂಕಿಸಿದರೆ –

ಕ್ವಚಿಜ್ಜೀವಾಕೃತಂ ದೃಷ್ಟ್ವಾಽಚೇತನಾದೇವ ಚಾಕೃತಮ್ ।।೮೫।।

ತದ್ವದೇವಾನುಮಾಽನ್ಯತ್ರ ವಸ್ತುತ್ವಾತ್ಕ್ರಿಯತೇ ಶ್ರುತೇಃ ।

ಕೆಲವು ಕಡೆಗಳಲ್ಲಿ ಜೀವನಿಗಾಗಲೀ ಅಚೇತನಕ್ಕಾಗಲೀ ಕರ್ತೃತ್ವವಿಲ್ಲವೆಂದು ಕಂಡುಬರುವುದರಿಂದ, ಅದರಂತೆಯೇ ಮಹದಾದಿ ಇತರ ವಸ್ತುಗಳೂ, ಅವು ವಸ್ತುವಾಗಿರುವುದರಿಂದ, ಅವುಗಳಿಗೂ ಕರ್ತೃತ್ವವಿಲ್ಲವೆಂದೂ ತಿಳಿಯಲ್ಪಡುತ್ತದೆ. ಹಾಗೂ 'ಸ ಇದಂ ಸರ್ವಮಸೃಜತ' ಇತ್ಯಾದಿ ಶ್ರುತಿಗಳಿರುವುದರಿಂದ ಜೀವಾದಿಗಳಿಗೆ ಕರ್ತೃತ್ವವಿಲ್ಲವೆಂದು ಅನುಮಿತಿಯು ಮಾಡಲ್ಪಡುತ್ತದೆ.

ವಿವರಣೆ: ಇಲ್ಲಿ ಕೆಳಕಂಡ ಪ್ರಕಾರವಾಗಿ ಅನುಮಾನವು ಪ್ರಯೋಗಿಸಲ್ಪಡುತ್ತದೆ. ಮಹದಾದಿ ಕಾರ್ಯಗಳು ಜೀವಕೃತವಲ್ಲ, ಜೀವನಂತೆ ವಸ್ತುವಾಗಿರುವುದರಿಂದ. ವಿವಾದಾಸ್ಪದವಾದ ಈ ಜಗತ್ತು ಪ್ರಧಾನದಿಂದ ಹುಟ್ಟಿದ್ದಲ್ಲ, ಪ್ರಧಾನದಂತೆಯೇ ವಸ್ತುವಾಗಿರುವುದರಿಂದ. ವಿವಾದಾಸ್ಪದವಾದ ಈ ಜಗತ್ತು ಅಸತ್ತಿನಿಂದ ಹುಟ್ಟಿದ್ದಲ್ಲ, ಘಟದಂತೆಯೇ ವಸ್ತುವಾಗಿರುವುದರಿಂದ. ಅಲ್ಲದೆ ಈ ಜಗತ್ತನ್ನು ಕುರಿತು ಜೀವನಿಗೆ ನಿಮಿತ್ತಕಾರಣತ್ವವೂ ಪ್ರದಾನಕ್ಕೆ ಉಪಾದಾನಕಾರಣತ್ವವೂ ಅಂಗೀಕರಿಸಲ್ಪಟ್ಟಿದೆ. ಆದರೂ ಅವುಗಳಿಗೆ ಸ್ವತಂತ್ರವಾಗಿ ಜಗತ್ಕಾರಣತ್ವವು ಇಲ್ಲ ಎಂದು ತಿಳಿಸಲು ಈ ವಚನಗಳು ಪ್ರಸಕ್ತವಾಗಿವೆ. ಆದಕಾರಣ ವಿರೋಧವಿಲ್ಲ.

ಹಾಗಾದರೆ ಈ ಜಗತ್ತು ಈಶ್ವರನಿಂದ ಹುಟ್ಟಿಲ್ಲ ಈಶ್ವರನಂತೆಯೇ ವಸ್ತುವಾದುದರಿಂದ ಎಂದು ಅನುಮಾನಿಸಲು ಶಕ್ಯವಾಗಿದೆ. ಆದ್ದರಿಂದ ಸತ್ಪ್ರತಿಪಕ್ಷವು ಬರುತ್ತದೆ ಎಂದು ಆಶಂಕಿಸಿದರೆ, ಅದನ್ನು ಪರಿಹರಿಸಲು ಇಲ್ಲಿ 'ಶ್ರುತೇಃ' ಎಂದು ಹೇಳಿದ್ದಾರೆ. 'ಸ ಇದಂ ಸರ್ವಮಸೃಜತ' ಇತ್ಯಾದಿ ಶ್ರುತಿಗಳಿಂದ ಮಹದಾದಿ ಎಲ್ಲವೂ ಈಶ್ವರನಿಂದ ಹುಟ್ಟಿವೆ ಎಂದು ತಿಳಿದುಬರುವುದು. ಇದರಿಂದ ಪ್ರತಿಪಕ್ಷಾನುಮಾನಗಳಿಗೆ ಬಾಧಬರುವುದರಿಂದ ಅವುಗಳಿಗೆ ಅಪ್ರಾಮಾಣ್ಯವು ಬರುವುದೆಂದು ಅರ್ಥ. ಹಾಗಾದರೆ 'ಜೀವಾದ್ಭವಂತಿ' ಇತ್ಯಾದಿ ಶ್ರುತಿಗಳಿರುವುದರಿಂದ ನಿಮ್ಮ ಅನುಮಾನಗಳಲ್ಲಿಯೂ ಇದು ಸಮಾನವು ಎಂದು ಆಕ್ಷೇಪಿಸಿದರೆ, ಅದಕ್ಕೂ ಉತ್ತರವಾಗಿ 'ಶ್ರುತೇಃ' ಎಂದು ಹೇಳಿದ್ದಾರೆ. ಜೀವ ಮುಂತಾದ ಶಬ್ದಗಳಿಗೆ ಬ್ರಹ್ಮ ಎಂಬುದಾಗಿ 'ನಾಮಾನಿ ಸರ್ವಾಣಿ ಯಮಾವಿಶಂತಿ'

ಇತ್ಯಾದಿ ಶ್ರುತಿ ಪ್ರಸಿದ್ಧವಿರುವುದರಿಂದ ನಮ್ಮ ಅರ್ಥಕ್ಕೆ ಶ್ರುತಿ ವಿರೋಧವಿರುವುದಿಲ್ಲ. ಈ ಪ್ರಕಾರವಾಗಿ ಈ ಅಧಿಕರಣದಲ್ಲಿ ಪ್ರಾಗಭಾವಾದಿಗಳಿಗೆ ಪ್ರಬಲವಾದ ಯುಕ್ತಿ ವಿರೋಧವಿರುವುದರಿಂದ ಜಗಜ್ಜನ್ಮಾದಿಕಾರಣತ್ವವು ನಿರಾಕರಿಸಲ್ಪಟ್ಟಿತು. ಹಾಗೂ ಶ್ರುತಿಸಂವಾದವಿರುವುದರಿಂದ ಬ್ರಹ್ಮನಿಗೆ ಜಗತ್ಕಾರಣತ್ವವು ಸಮರ್ಥಿತವಾಯಿತು.

ಭೋಕ್ತ್ರಧಿಕರಣಮ್

ಹಿಂದಿನ ಅಧಿಕರಣದಲ್ಲಿ ಬ್ರಹ್ಮನು ಜಗತ್ಕಾರಣ ಎಂಬ ವಿಷಯದಲ್ಲಿ ಶ್ರುತಿಗಳ ಸಂವಾದವಿರುವುದರಿಂದ ಪ್ರಬಲವಾದ ಯುಕ್ತಿಯಿಂದ ವಿರೋಧವನ್ನು ಪರಿಹರಿಸಿದರು. ಈ ಅಧಿಕರಣದಲ್ಲಿ ಶ್ರುತಿಸಿದ್ಧವಾದ ಲಿಂಗಸಹಿತವಾದ ಪ್ರಬಲವಾದ ಯುಕ್ತಿಯಿಂದ ವಿರೋಧವನ್ನು ಪರಿಹರಿಸುತ್ತಾರೆ. ಹೇಗೆಂದರೆ ಬ್ರಹ್ಮನಿಗೆ ವಾಸ್ತವವಾದ ಜಗತ್ಕಾರಣತ್ವವು ಸಂಭವಿಸುವುದಿಲ್ಲ. ಏಕೆಂದರೆ ಬ್ರಹ್ಮನು ಸರ್ವಕಾರಣನಲ್ಲದ ಮುಕ್ತಜೀವನಿಂದ ಅತ್ಯಂತಾಭಿನ್ನನು. ಮುಕ್ತಜೀವನು ಈಶ್ವರನಿಂದ ಅತ್ಯಂತಾಭಿನ್ನನು ಎಂಬುದು 'ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ' ಇತ್ಯಾದಿ ಶ್ರುತಿಸಿದ್ಧವಾಗಿದೆ. ಇನ್ನು ಜೀವನಿಗೆ ಸಂಸಾರಾವಸ್ಥೆಯಲ್ಲಿ ಸರ್ವಕಾರಣತ್ವವು ತೋರಿಬರುವುದಿಲ್ಲ. ಸಂಸಾರಾವಸ್ಥೆಯಲ್ಲಿ ಇಲ್ಲದ ಅಪೂರ್ವತೆಯು ಮುಕ್ತನಾದಾಗ ಕಂಡುಬರುವುದು ಸಾಧ್ಯವಿಲ್ಲ. ಹೀಗೆ ಜೀವನಿಗೆ ಸರ್ವಕಾರಣತ್ವವು ಸಿದ್ಧಿಸುವುದಿಲ್ಲವು. ಆದ್ದರಿಂದ ಜೀವನಿಂದ ಅಭಿನ್ನನಾದ ಬ್ರಹ್ಮನಿಗೂ ಜಗತ್ಕಾರಣತ್ವಾದಿಗಳು ಸಿದ್ಧಿಸದೇ ಹೋಗುವುದು ಎಂದು ಪೂರ್ವಪಕ್ಷ. ಇದಕ್ಕೆ ಉತ್ತರವಾಗಿ ಹೊರಟಿರುವ ಸೂತ್ರ –

ಸೂತ್ರ: ಓಂ ಭೋಕ್ತ್ರಾಪತ್ತೇರವಿಭಾಗಶ್ಚೇತ್ಸ್ಯಾಲ್ಲೋಕವತ್ ಓಂ

ಸೂತ್ರಾರ್ಥ: ಭೋಕ್ತೃವಾದ ಜೀವನಿಗೆ ಮೋಕ್ಷದಲ್ಲಿ ಬ್ರಹ್ಮಭಾವವು ಶ್ರುತವಾಗಿರುವುದರಿಂದ, ಜೀವ ಬ್ರಹ್ಮರಿಗೆ ವಿಭಾಗವು (ಭೇದವು) ಇರುವುದಿಲ್ಲ, ಎಂದರೆ ಹಾಗೆ ಹೇಳಕೂಡದು. ಏಕೆಂದರೆ ವಾಸ್ತವವಾಗಿ ಜೀವ ಬ್ರಹ್ಮರಿಗೆ ಭೇದವೇ ಇದೆ. 'ಪರೇಽವ್ಯಯೇ ಸರ್ವ ಏಕೀಭವಂತಿ' ಎಂಬುದಾಗಿ ಶ್ರುತಿಯಲ್ಲಿ ಹೇಳಿರುವ ಏಕೀಭಾವ ಎಂಬ ಪ್ರಯೋಗವು ಲೋಕವ್ಯವಹಾರದಲ್ಲಿ ಹೇಗೋ ಹಾಗೆಯೇ ಕೂಡುವುದು. ಬೇರೆ ಬೇರೆ ಪಾತ್ರೆಗಳಲ್ಲಿದ್ದ ನೀರುಗಳನ್ನು ಒಂದೇ ಪಾತ್ರೆಯಲ್ಲಿ ಕೂಡಿಸಿದಾಗ ಆ ನೀರು ಈ ನೀರು ಒಂದಾಯಿತು ಎಂಬ ಏಕೀಭಾವವು ಸ್ಥಾನೈಕ್ಯ ಎಂಬ ಅರ್ಥದಲ್ಲಿ ಹೇಳಲಾಗುತ್ತದೆ. ಅದೇ ರೀತಿ ಹಿಂದೆ ಬೇರೆ ಬೇರೆಯಾಗಿದ್ದ ಬ್ರಾಹ್ಮಣರು ಈಗ ಒಂದಾದರು ಎಂದರೆ ಭಿನ್ನ ಭಿನ್ನ ಅಭಿಪ್ರಾಯ ಹೊಂದಿದ್ದವರು ಈಗ ಒಂದೇ ಅಭಿಪ್ರಾಯಕ್ಕೆ ಬಂದರು ಎಂಬುದಾಗಿ ಮತ್ಯೈಕ್ಯ ರೂಪವಾದ ಏಕೀಭಾವವನ್ನು ಹೇಳಲಾಗುತ್ತದೆ. ಮುಕ್ತಿಯಲ್ಲಿ ಜೀವ ಬ್ರಹ್ಮರು ಒಂದೇ ಆಗುವರು ಎಂದರೆ ಸ್ಥಾನಭೇದ ಮತ್ತು ಮತಭೇದಗಳಿರುವುದಿಲ್ಲ ಎಂದಷ್ಟೇ ಅರ್ಥವಾಗುವುದು.

ಹೊರತು ಸರ್ವರೀತಿಯಿಂದ ಐಕ್ಯರಾದರು ಎಂಬ ಅಭಿಪ್ರಾಯವಿರುವುದಿಲ್ಲ.

ಹೀಗೆ ಹೇಳುವುದು ಸರಿಯಲ್ಲ. 'ಏಕೀಭವಂತಿ' ಎನ್ನುವ ಶ್ರುತಿಗೆ ಐಕ್ಯರೂಪ ಮುಖ್ಯಾರ್ಥದಲ್ಲಿ ಬಾಧಕವಿರುವುದಿಲ್ಲ. ಬಾಧಕವಿಲ್ಲದೆ ಸ್ಥಾನೈಕ್ಯ ಇತ್ಯಾದಿ ಅನ್ಯಾರ್ಥ ಕಲ್ಪಿಸಿದರೆ ಅತಿಪ್ರಸಂಗವು ಬರುವುದು. ಹೀಗೆ ಆಕ್ಷೇಪ ಬಂದರೆ, ಮುಖ್ಯಾರ್ಥದಲ್ಲಿ ಬಾಧಕವನ್ನು ತೋರಿಸುವ ಮೂಲಕ 'ಸ್ಯಾಲ್ಲೋಕವತ್' ಎಂಬ ಸೂತ್ರಾಂಶವನ್ನು ನಾನ್ಯತ್ ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಾರೆ –

ನಾನ್ಯದನ್ಯತ್ವಮಾಪನ್ನಂ ಕ್ವಚಿದ್ದೃಷ್ಟಂ ಕಥಂಚನ ।।೮೬।।

ಅತೋ ಜೀವಸ್ಯ ನ ಬ್ರಹ್ಮಭಾವಃ ಸ್ಯಾದ್ಧಿ ಕದಾಚನ ।

ಬೇರೆಯೇ ಆಗಿರುವ ಒಂದು ವಸ್ತುವು ತನ್ನಿಂದ ಇತರವಾದ ಇನ್ನೊಂದು ವಸ್ತುವಿನೊಂದಿಗೆ ಅಭೇದವನ್ನು ಹೊಂದಿದೆ ಎಂಬುದು ಎಂದಿಗೂ ಯಾವುದೇ ಉಪಾಯದಿಂದಲೂ ಕಂಡುಬಂದಿಲ್ಲ. ಆದಕಾರಣ ಜೀವನಿಗೂ ಯಾವುದೇ ಕಾಲದಲ್ಲಿಯೂ (ಮುಕ್ತಿಯಲ್ಲಿಯೂ ಕೂಡ) ಬ್ರಹ್ಮತ್ವವು ಬರುವುದೇ ಇಲ್ಲ.

ಕ್ವಚಿದ್ಭಿನ್ನತಯಾ ದೃಷ್ಟಂ ತದಭಿನ್ನತಯಾ ಕಥಮ್ ।।೮೭।।

ದೃಶ್ಯೇನ್ನೋ ದೃಷ್ಟಪೂರ್ವಂ ಹಿ ತಾದೃಶಂ ನ ಚ ದೃಶ್ಯತೇ ।

ಒಂದು ಕಾಲದಲ್ಲಿ ಬೇರೆ ವಸ್ತುವಿಗಿಂತ ಭಿನ್ನವೆಂದೇ ತಿಳಿಯಲ್ಪಟ್ಟ ಒಂದು ವಸ್ತುವು ಬೇರೆ ಯಾವುದೋ ಕಾಲದಲ್ಲಿ ಅದರಿಂದ ಅಭಿನ್ನವಾಗಿ ಹೇಗೆ ತಾನೇ ತಿಳಿಯಲ್ಪಡುವುದು? ಏಕೆಂದರೆ ಮೊದಲಿಗೆ ಭಿನ್ನವೆಂದು ತಿಳಿಯಲ್ಪಟ್ಟ ವಸ್ತುವು ಕಾಲಾಂತರದಲ್ಲಿ ಅಭಿನ್ನವೆಂದು ಪ್ರಮಿತವಾದುದು ಹಿಂದೆ ಎಂದೂ ಕಂಡಿಲ್ಲ, ಮುಂದೆ ಎಂದಿಗೂ ಹಾಗೆ ಕಂಡುಬರುವುದೇ ಇಲ್ಲ. ಆದಕಾರಣ ಏಕೀಭವಂತಿ ಇತ್ಯಾದಿ ಶ್ರುತಿಗೆ ಮುಖ್ಯಾರ್ಥಕ್ಕೆ ಬಾಧ ಬರುವುದರಿಂದ ಅಮುಖ್ಯಾರ್ಥವನ್ನೇ ಸ್ವೀಕರಿಸತಕ್ಕದ್ದು. ಹೀಗೆ ಪರರು ಹೇಳಿದ ಯುಕ್ತಿಯು ಅಸಿದ್ಧವಾದುದರಿಂದ ಬ್ರಹ್ಮನ ಜಗತ್ಕಾರಣತ್ವ ವಿಷಯದಲ್ಲಿ ಯುಕ್ತಿವಿರೋಧವಿಲ್ಲವೆಂದು ಸಿದ್ಧಿಸುತ್ತದೆ.

ವಿವರಣೆ: ಬ್ರಹ್ಮನಿಗೆ ಪರಿಣಾಮವನ್ನು ಹೇಳುವವರು ಈ ಸೂತ್ರವನ್ನು ಬೇರೆ ರೀತಿಯಿಂದ ವ್ಯಾಖ್ಯಾನ ಮಾಡುತ್ತಾರೆ. ಇದಕ್ಕೆ ಹಿಂದಿನ ಅಧಿಕರಣದಲ್ಲಿ ಬ್ರಹ್ಮನು ಚೇತನಾಚೇತನಾತ್ಮಕ ಪ್ರಪಂಚಕ್ಕೆ ಉಪಾದಾನ ಕಾರಣವಾದುದರಿಂದ ಅದು ಬ್ರಹ್ಮನಿಂದ ಅಭಿನ್ನವೆಂದು ಹೇಳಲ್ಪಟ್ಟಿದೆ. ಇದನ್ನು ಆಕ್ಷೇಪಿಸಿ ಸಮಾಧಾನ ಹೇಳಲು ಈ ಸೂತ್ರವು ಹೊರಟಿದೆ. ಹೇಗೆಂದರೆ, ಚೇತನಾಚೇತನಾತ್ಮಕ ಪ್ರಪಂಚವು ಬ್ರಹ್ಮನಿಂದ ಅಭಿನ್ನವಾದರೆ, ಚೇತನನು ಭೋಕ್ತೃವು, ಅಚೇತನಾತ್ಮಕ ವಿಷಯಗಳು ಭೋಗ್ಯವು ಎಂಬ ವಿಭಾಗವು ಆಗದಿರಲಿ. ಏಕೆಂದರೆ ಭೋಕ್ತೃವೂ ಭೋಗ್ಯವೂ

ಒಂದೇ ಆಗಬೇಕಾಗುವುದು ಎಂದು ಹೇಳಿದರೆ ಅದು ಸರಿಯಲ್ಲ. ಈ ವಿಭಾಗವು ಅವಶ್ಯಕವೇ ಆಗಿದೆ. ಏಕೆಂದರೆ ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿದೆ. ಹೇಗೆ ಲೋಕದಲ್ಲಿ ಸಮುದ್ರದ ನೊರೆ ಮತ್ತು ತರಂಗಗಳು ಸಮುದ್ರದ ಸ್ವರೂಪಗಳೇ ಆಗಿದ್ದರೂ ಅವುಗಳನ್ನು ಪ್ರತ್ಯೇಕವಾಗಿ ಗ್ರಹಿಸುವುದಕ್ಕೆ ಯಾವುದೇ ಭಂಗ ಬರುವುದಿಲ್ಲವೋ, ಘಟಾಕಾಶ ಮಠಾಕಾಶಗಳು ಮಹಾಕಾಶದ ಸ್ವರೂಪಗಳೇ ಆಗಿದ್ದರೂ ಅವುಗಳ ವಿಭಾಗಕ್ಕೆ ಬಾಧಕವಿಲ್ಲವೋ ಹಾಗೆಯೇ ಜಗತ್ತಿಗೂ ಬ್ರಹ್ಮನಿಗೂ ಸ್ವರೂಪತಃ ಭೇದವಿಲ್ಲದಿದ್ದರೂ ಅವುಗಳಲ್ಲಿ ವಿಭಾಗವು ಕೂಡುವುದು. ಇದು ಬ್ರಹ್ಮ ಪರಿಣಾಮವಾದಿಗಳ ವ್ಯಾಖ್ಯಾನ.

ಈ ವ್ಯಾಖ್ಯಾನವನ್ನು ದೂಷಿಸುತ್ತಾರೆ –

ಭೋಕ್ತೃತ್ವಾಪತ್ತಿತ ಇತಿ ಯನ್ಮತಂ ತತ್ಕುತೋ ಹರಿಃ ।।೮೮।।

ಭೋಕ್ತ್ರಾಪತ್ತೇರಿತಿ ಪ್ರಾಹ..........................।

ಭೋಕ್ತ್ರಾಪತ್ತೇಃ ಎನ್ನುವುದಕ್ಕೆ ಭೋಕ್ತೃತ್ವಾಪತ್ತೇಃ ಎಂಬ ವ್ಯಾಖ್ಯಾನವು ಒಂದು ವೇಳೆ ಸೂತ್ರಕಾರಿಗೆ ಸಮ್ಮತವಾಗಿದ್ದರೆ, ಭೋಕ್ತ್ರಾಪತ್ತೇಃ ಎಂದು ಏಕೆ ಹೇಳಿದರು? ಆದ್ದರಿಂದ ಭೋಕ್ತೃತ್ವಾಪತ್ತಿ ಎಂಬ ಅರ್ಥದಲ್ಲಿ ವ್ಯಾಖ್ಯಾನ ಮಾಡುವುದು ಸೂತ್ರಕಾರರಿಗೆ ಸಮ್ಮತವಲ್ಲ.

ವಿವರಣೆ: ರಾಮಾನುಜೀಯರ ವ್ಯಾಖ್ಯಾನದ ಪ್ರಕಾರ, ಬ್ರಹ್ಮನಿಗೆ ಚಿದಚಿದ್ವಸ್ತುಗಳು ಶರೀರವಾದರೆ ಜೀವನಿಗೆ ಹೇಗೋ ಹಾಗೆ ಬ್ರಹ್ಮನಿಗೂ ಸುಖದುಃಖಾದಿ ಭೋಕ್ತೃತ್ವವು ಬರಬೇಕಾಗುವುದು. ಆದ್ದರಿಂದ ಜೀವಬ್ರಹ್ಮರಲ್ಲಿ ಸ್ವಭಾವವಿಭಾಗವು ಇಲ್ಲದೇ ಹೋಗಲಿ. ಹೀಗೆ ಶಂಕಿಸುವುದು ಸರಿಯಲ್ಲ. ಹೀಗೆ ವ್ಯಾಖ್ಯಾನಿಸುವವರಿಗೂ ಸಮಾನ ಶಬ್ದ ದೋಷವು, ಅಂದರೆ ಭೋಕ್ತ್ಯ ಶಬ್ದಕ್ಕೆ ಭಾವಪ್ರಧಾನವಾದ ಭೋಕ್ತೃತ್ವ ಎನ್ನುವ ಅರ್ಥವನ್ನು ಹೇಳುವ ದೋಷವು ಬರುವುದು. ಉದಾಹರಣೆಗೆ ಹೇಳುವುದಾದರೆ, ಕಾಡಿನಲ್ಲಿ ಮಲಗಿದ್ದರೂ ರಾಜನಿಗೆ ಹುಳು ಹುಪ್ಪಟಾದಿ ಕಡಿತ ಮುಂತಾದ ಉಪದ್ರವಗಳು ಇರುವುದಿಲ್ಲ. ಏಕೆಂದರೆ ರಾಜನಿಗೆ ಅವುಗಳನ್ನು ನಿವಾರಿಸಿಕೊಳ್ಳಲು ಅಗತ್ಯವಾದ ಸಾಧನ ಸಲಕರಣೆಗಳೂ ಅವನ ಅಧೀನವಾಗಿದ್ದು ಅವನಿಗೆ ಸ್ವಾತಂತ್ರ್ಯವೂ ಇರುತ್ತದೆ. ಹಾಗೆಯೇ ಬ್ರಹ್ಮನಿಗೂ ಸುಖದುಃಖಾದಿ ಬೋಕ್ತೃತ್ವವು ಬರುವುದಿಲ್ಲ.

ತದನನ್ಯತ್ವಾಧಿಕರಣಮ್

ಓಂ ತದನನ್ಯತ್ವಮಾರಂಭಣಶಬ್ದಾದಿಭ್ಯಃ ಓಂ

ಹಿಂದಿನ ಅಧಿಕರಣದಲ್ಲಿ ಪ್ರಮಾಣಮೂಲಕತ್ವ ಹಾಗೂ ಪ್ರಮಾಣ

ಸಂವಾದದಿಂದ ಕೂಡಿದ ಪ್ರಬಲವಾದ ಯುಕ್ತಿಯ ವಿರೋಧವನ್ನು ಪರಿಹರಿಸಿದರು. ಈಗ ಬಾಹುಲ್ಯ ನಿಮಿತ್ತಕ ಪ್ರಬಲವಾದ ಯುಕ್ತಿಯಿಂದ ಬರುವ ವಿರೋಧವನ್ನು ಈ ಅಧಿಕರಣದಲ್ಲಿ ಪರಿಹರಿಸುತ್ತಾರೆ.

ಬ್ರಹ್ಮಪರಿಣಾಮವಾದಿಯು ಈ ಸೂತ್ರಕ್ಕೆ ಹೀಗೆ ವ್ಯಾಖ್ಯಾನ ಮಾಡುತ್ತಾನೆ. ಹಿಂದೆ ಸಾಂಖ್ಯಮತವು ನಿರಾಕೃತವಾಯಿತು. ಈಗ ವೈಶೇಷಿಕಾದಿ ಮತಗಳನ್ನು ನಿರಾಕರಿಸುತ್ತಾರೆ. ವೈಶೇಷಿಕರ ಪ್ರಕಾರ, ಸ್ವರೂಪ ಕಾರ್ಯ ವ್ಯಪದೇಶ ಇತ್ಯಾದಿಗಳ ಭೇದಗಳಿಂದ ಕಾರ್ಯಕ್ಕೆ ಕಾರಣಸ್ವರೂಪತ್ವವು ಇಲ್ಲವಾಗುವುದರಿಂದ ಪ್ರಪಂಚಕ್ಕೆ ಬ್ರಹ್ಮನಿಂದ ಅಭೇದವಿಲ್ಲವೆಂಬ ಆಕ್ಷೇಪವನ್ನು ತೋರಿಸಿ ಈ ಸೂತ್ರದಿಂದ ಸಮಾಧಾನ ಹೇಳಲಾಗುತ್ತದೆ. ಹೇಗೆಂದರೆ, ಕಾರಣನಾದ ಬ್ರಹ್ಮನಿಂದ ಕಾರ್ಯವೆನಿಸಿದ ಪ್ರಪಂಚಕ್ಕೆ ಅಭೇದವು. ಏಕೆಂದರೆ, 'ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಇತ್ಯಾದಿ ಶಬ್ದಗಳ ದೆಶೆಯಿಂದ. ಈ ವ್ಯಾಖ್ಯಾನವನ್ನು ನಿರಾಕರಿಸುತ್ತಾರೆ –

..............................ಕಥಂ ಚ ತದನನ್ಯತಾ ।

ಜಗತಸ್ತ್ವವಿಕಾರಿತ್ವಂ ಉಕ್ತನ್ಯಾಯೇನ ಸಾಧಿತೇ ॥೮೯॥

ಸ್ವತಂತ್ರಕಾರಣಾನ್ಯತ್ವಂ ತೇನ ಹ್ಯತ್ರ ನಿಷಿಧ್ಯತೇ ।

ಹಿಂದೆ 'ನ ಚ ಪ್ರಕೃತಿಶಬ್ದೇನ' ಇತ್ಯಾದಿ ಉಕ್ತ ನ್ಯಾಯದಿಂದ ಜಗತ್ತು ಬ್ರಹ್ಮನ ವಿಕಾರವಲ್ಲವೆಂದು ಸಾಧಿಸಲಾಗಿದೆ. ಹೀಗಿರಲು ಈ ಸೂತ್ರದಿಂದ ಜಗತ್ತಿಗೆ ಬ್ರಹ್ಮನಿಂದ ಅತ್ಯಂತಾಭೇದವು ಹೇಗೆ ತಾನೇ ಪ್ರತಿಪಾದಿಸಲ್ಪಡುವುದು? ಆದಕಾರಣ ಬ್ರಹ್ಮನಿಗೆ ಬೇರೆಯಾದುದಕ್ಕೆ ಸ್ವತಂತ್ರಕಾರಣತ್ವವು ಈ ಅಧಿಕರಣದಲ್ಲಿ ನಿಷೇಧಿಸಲ್ಪಡುತ್ತದೆ.

ಹಾಗಾದರೆ 'ಅದ್ಭ್ಯಃ ಸಂಭೂತಃ' ಇತ್ಯಾದಿ ವಚನವಿರುವುದರಿಂದ ಬ್ರಹ್ಮಾತಿರಿಕ್ತವಾದ ಸ್ವತಂತ್ರಕಾರಣವು ಉಪಲಬ್ಧವಾಗುವುದಿಲ್ಲ ಎನ್ನುವುದು ಹೇಗೆ ಕೂಡುತ್ತದೆ ಎಂದು ಆಕ್ಷೇಪಿಸಿದರೆ, ಅದಕ್ಕೆ ಪರಿಹಾವಾಗಿ ಮುಂದಿನ ಸೂತ್ರ –

ಸೂತ್ರ: ಓಂ ಸತ್ವಾಚ್ಚಾವರಸ್ಯ ಓಂ

ಸೂತ್ರಾರ್ಥ: ಬ್ರಹ್ಮಾತಿರಿಕ್ತವಾದ ಕಾರಣವೇ ಇಲ್ಲವೆಂದು ಹೇಳಿದರೆ ಈ ದೋಷವು ಬರುವುದು. ಆದರೆ ನಾವು ಹಾಗೆ ಹೇಳುವುದಿಲ್ಲ. ಬ್ರಹ್ಮನಿಗಿಂತ ಅವರವಾದ ಅಂದರೆ ಬ್ರಹ್ಮಾಧೀನವಾದ ಪ್ರಕೃತಿ ಮುಂತಾದ ಕಾರಣಕ್ಕೆ ಅಸ್ತಿತ್ವವಿದೆ. ಆದಪ್ರಯುಕ್ತ 'ಅದ್ಭ್ಯಃ ಸಂಭೂತಃ' ಇತ್ಯಾದಿ ವಚನವು ಯುಕ್ತವಾಗುವುದು.

ಪ್ರಕೃತಿ ಮುಂತಾದ ಕಾರಣಗಳ ಸಮೂಹವು ಈಶ್ವರನ ಅಧೀನದಲ್ಲಿರುವುದು ಎನ್ನುವ ವಿಷಯಕ್ಕೆ ಪ್ರಮಾಣವನ್ನು ತೋರಿಸುವ ಮೂಲಕ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ –

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವಶ್ಚೇತನಾ ಧೃತಿಃ ।।೯೦।।

ಯತ್ಪ್ರಸಾದಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ ।

ಇತಿ ಶ್ರುತೇಃ ....।।

ಪ್ರಕೃತಿ ಮುಂತಾದ ದ್ರವ್ಯ, ಧರ್ಮಾಧರ್ಮಗಳು, ಕಾಲ, ಪ್ರಕೃತ್ಯಾದಿಗಳ ಪರಿಣಾಮರೂಪ ಸ್ವಭಾವ, ಜೀವರು, ಸರ್ವಧಾರಕವಾದ ಚಿತ್ಪ್ರಕೃತಿ ಅಂದರೆ ಮಹಾಲಕ್ಷ್ಮಿ, ಇವೆಲ್ಲವೂ ಯಾವನ ಅನುಗ್ರಹದಿಂದ ಇವೆಯೋ, ಯಾವನು ಉಪೇಕ್ಷೆ ಮಾಡಿದರೆ ಇರುವುದಿಲ್ಲವೋ ಎಂಬುದಾಗಿ ಶ್ರುತಿಗಳು ಹೇಳುತ್ತವೆ.

ಸೂತ್ರ: ಓಂ ಅಸದ್ವ್ಯಪದೇಶಾನ್ನೇತಿ ಚೇನ್ನ

ಧರ್ಮಾಂತರೇಣ ವಾಕ್ಯಶೇಷಾತ್ ಓಂ

ಸೂತ್ರಾರ್ಥ: 'ನಾಸದಾಸೀನ್ನೋಸದಾಸೀತ್ತದಾನೀಂ' ಇತ್ಯಾದಿ ಶ್ರುತಿಗಳಲ್ಲಿ ಮಹಾಪ್ರಲಯದಲ್ಲಿ ಮೂರ್ತವಾಗಲೀ ಅಮೂರ್ತವಾಗಲೀ ಇರಲಿಲ್ಲ ಎಂಬುದಾಗಿ ಸಮಸ್ತವಾದ ಪ್ರಪಂಚಕ್ಕೆ ಅಸತ್ವವನ್ನು ಹೇಳಿರುವುದರಿಂದ ಹಿಂದೆ ಪ್ರಕೃತ್ಯಾದಿಗಳಿಗೆ ಅಸ್ತಿತ್ವವನ್ನು ಹೇಳಿದ್ದು ಅಯುಕ್ತ ಎಂದು ಹೇಳಿದರೆ ಅದು ಸರಿಯಲ್ಲ. ಏಕೆಂದರೆ ಪ್ರಕೃತ್ಯಾದಿಗಳು ಇರುತ್ತವೆ ಎಂದು ಹೇಳತಕ್ಕ 'ತಮಃ ಆಸೀತ್' ಇತ್ಯಾದಿ ವಾಕ್ಯಶೇಷವಿದ್ದ ಪ್ರಯುಕ್ತ. ಸ್ವಾತಂತ್ರ್ಯವೆಂಬ ಧರ್ಮವಿಶೇಷದ ಅಭಿಪ್ರಾಯದಿಂದ ಅಸತ್ವವನ್ನು ಹೇಳಿರುವುದರಿಂದ ಪ್ರಕೃತ್ಯಾದಿಗಳಿಗೆ ಈಶ್ವರನ ಅಧೀನವಾದ ಅಸ್ತಿತ್ವವು ಯುಕ್ತವಾಗುತ್ತದೆ.

ಇದನ್ನೇ 'ತದ್ವಶಃ' ಎಂಬ ವಚನದಿಂದ ವ್ಯಾಖ್ಯಾನ ಮಾಡುತ್ತಾರೆ –

ತದ್ವಶಸ್ಯ ಭಾವೋ ನ ಪರ ಇತ್ಯತಃ ।।೯೧।।

ಪ್ರಕೃತ್ಯಾದಿಗಳಿಗೆ ಈಶ್ವರಾಧೀನವಾದ ಅಸ್ತಿತ್ವವಿದೆ. ಆದರೆ ಸ್ವಾತಂತ್ರ್ಯ ಮುಂತಾದ ಧರ್ಮಗಳು ಇರುವುದಿಲ್ಲ ಎಂಬುದಾಗಿ 'ತಸ್ಮಾದ್ಧಾನ್ಯನ್ನಪರಃ ಕಿಂಚನಾಸ' ಎನ್ನುವ ವಾಕ್ಯಶೇಷದಿಂದ ತಿಳಿದುಬರುವುದು.

ಹಾಗಾದರೆ ಈಶ್ವರನು ಪ್ರಕೃತ್ಯಾದಿಗಳನ್ನು ಕಾರಣವಾಗಿ ಬಳಸದೇ ಸೃಷ್ಟ್ಯಾದಿಗಳನ್ನು ಮಾಡುವನೋ ಅಥವಾ ನಿಯಮವಾಗಿ ಅವುಗಳ ಸಹಾಯದಿಂದಲೇ ಮಾಡುವನೋ ಎಂದು ಕೇಳುತ್ತೇವೆ. ಮೊದಲನೆಯ ಕಲ್ಪವನ್ನು

ಒಪ್ಪಿಕೊಂಡರೆ ನೀವು ಹಿಂದೆ ಪ್ರತಿಪಾದಿಸಿದ ಪ್ರಕೃತ್ಯಾದಿಗಳಿಗೆ ಕಾರಣತ್ವವೇ ಕೂಡುವುದಿಲ್ಲ. ಎರಡನೆಯ ಕಲ್ಪದಲ್ಲಾದರೂ ಈಶ್ವರನ ಸ್ವಾತಂತ್ರ್ಯಕ್ಕೇ ಭಂಗ ಬರುವುದು. ಕೆಲವು ಕಾರ್ಯಗಳನ್ನು ಪ್ರಕೃತ್ಯಾದಿಗಳನ್ನು ಕಾರಣವಾಗಿಟ್ಟುಕೊಂಡು ಮಾಡಿದರೆ, ಇನ್ನೂ ಕೆಲವನ್ನು ಅವುಗಳ ನೆರವಿಲ್ಲದೇ ಸ್ವತಂತ್ರವಾಗಿ ಮಾಡುವನು ಎಂದು ಹೇಳುವುದು ಯುಕ್ತವಾಗುವುದಿಲ್ಲ. ಆದುದರಿಂದ ಈಶ್ವರನು ಯಾವುದೇ ಕಾರಣದ ಅಪೇಕ್ಷೆಯಿಲ್ಲದೆಯೇ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ ಎಂದು ಒಪ್ಪುವುದೇ ಶ್ರೇಷ್ಠ. ಇದರಿಂದ ಈಶ್ವರನ ನಿರವಧಿಕವಾದ ಪ್ರಭುತ್ವವನ್ನು ಸಮರ್ಥಿಸಿದಂತಾಗುವುದು. ತಮಸ್ಸು ಇತ್ಯಾದಿಗಳು ಪ್ರಲಯಕಾಲದಲ್ಲಿ ಇದ್ದವೆಂದು ಶ್ರುತವಾಗಿದ್ದರೂ, ಅವುಗಳು ಈಶ್ವರನ ಸೃಷ್ಟ್ಯಾದಿ ಕ್ರಿಯೆಯಲ್ಲಿ ಕಾರಣರೂಪದಿಂದ ಶ್ರುತವಾಗಿಲ್ಲ. ಆದ್ದರಿಂದ ಪ್ರಮಾಣಬಾಧವೂ ಇರುವುದಿಲ್ಲ. ಹೀಗೆ ಆಶಂಕಿಸಿದರೆ ಅದಕ್ಕೆ ಪರಿಹಾರರೂಪವಾಗಿ ಮುಂದಿನ ಸೂತ್ರ –

ಸೂತ್ರ: ಓಂ ಯುಕ್ತೇಃ ಶಬ್ದಾಂತರಾಚ್ಚ ಓಂ

ಸೂತ್ರಾರ್ಥ: ಈಶ್ವರನು ಸ್ವೇಚ್ಛೆಯಿಂದ ಸ್ವಾಧೀನವಾದ ಸಾಧನಾಂತರಗಳನ್ನು ಉಪಾದಾನಮಾಡಿಕೊಂಡು ಸೃಷ್ಟಿಯನ್ನು ಮಾಡುತ್ತಾನೆ ಎಂಬುದು ಯುಕ್ತವಾದ ಪ್ರಯುಕ್ತ ಈಶ್ವರನ ಸ್ವಾತಂತ್ರ್ಯಕ್ಕೆ ಬಾಧಬರುವುದಿಲ್ಲ. ಹೀಗೇಕೆ ಅರ್ಥ ಮಾಡಬೇಕು ಎಂದರೆ, 'ಅದ್ಭ್ಯಃ ಸಂಭೂತೋ ಹಿರಣ್ಯಗರ್ಭಃ' ಇತ್ಯಾದಿ ಶಬ್ದಾಂತರಗಳೂ ಇರುತ್ತವೆ.

ಹಾಗಾದರೆ ಈ ಸೂತ್ರದಲ್ಲಿ ಯುಕ್ತೇಃ ಎಂಬುದಾಗಿ ತಮ್ಮ ಪಕ್ಷದಲ್ಲಿ ಕಾರಣತ್ವಾದಿಗಳು ಕೂಡುವುದು ಎಂದು ಹೇಳಿದ್ದು ಹೇಗೆ ಎಂಬ ಪ್ರಶ್ನೆ ಬಂದರೆ –

ಶಕ್ತೋಽಪಿ ಹ್ಯನ್ಯಥಾ ಕರ್ತುಂ ಸ್ವೇಚ್ಛಾನಿಯಮತೋ ಹರಿಃ ।

ಕಾರಣೈರ್ನಿಯತೈರೇವ ಕರೋತೀದಂ ಜಗತ್ಸದಾ ॥೯೨॥

ಕಾರಣಗಳಿಲ್ಲದೇ ಕಾರ್ಯಗಳನ್ನು ಮಾಡುವುದಕ್ಕೆ ಸಮರ್ಥನಾಗಿದ್ದರೂ, ಶ್ರೀಹರಿಯು ತನ್ನ ಇಚ್ಛೆಗೆ ತಕ್ಕಂತೆ ನಿಯಮಗಳನ್ನು ರೂಪಿಸಿಕೊಂಡು, ತನ್ನ ಅಧೀನದಲ್ಲಿರುವ ನಿಯತವಾದ ಕಾರಣಗಳಿಂದಲೇ ಈ ಜಗತ್ತನ್ನು ಯಾವಾಗಲೂ ಸೃಷ್ಟಿ ಮಾಡುತ್ತಾನೆ. 'ಅನ್ಯಥಾ ಕರ್ತುಂ' ಎಂಬುದಕ್ಕೆ ಇನ್ನೊಂದು ರೀತಿಯಿಂದಲೂ ಅರ್ಥಮಾಡಬಹುದು. ಶ್ರೀಹರಿಯು ಪ್ರಕೃತಿಯಿಂದ ಅಹಂಕಾರವನ್ನು, ಅಹಂಕಾರದಿಂದ ಮಹತ್ತತ್ವವನ್ನು, ಹಾಗೆಯೇ ಪ್ರಕೃತಿಯನ್ನು ನಿಮಿತ್ತಕಾರಣವನ್ನಾಗಿಯೂ ಕಾಲಾದಿಗಳನ್ನು ಉಪಾದಾನಕಾರಣವನ್ನಾಗಿಯೂ ಮಾಡಿಕೊಂಡು ಸೃಷ್ಟಿಯನ್ನು ಮಾಡುವುದರಲ್ಲಿ ಸಮರ್ಥನೇ ಆಗಿರುವನು. ಹಾಗಿದ್ದರೂ, ಸೃಷ್ಟಿಕ್ರಿಯೆಯು ನಿಶ್ಚಿತವಾದ ಕ್ರಮದಿಂದಲೇ ಆಗಬೇಕೆಂದು ತಾನೇ

ಮಾಡಿಕೊಂಡ ನಿಯಮಕ್ಕೆ ಭಂಗಬಾರದಂತೆ ಶ್ರೀಹರಿಯು ಕಾರಣಾಂತರಗಳನ್ನು ಅಪೇಕ್ಷಿಸಿ ಕಾರ್ಯಗಳನ್ನು ಮಾಡುವನು.

'ಭಾವೇ ಚೋಪಲಬ್ಧೇಃ' ಎನ್ನುವ ಸೂತ್ರಕ್ಕೆ ಕೆಲವರು ವಿಪರೀತವಾಗಿ ವ್ಯಾಖ್ಯಾನ ಮಾಡುತ್ತಾರೆ. ಹೇಗೆಂದರೆ, ಮಣ್ಣು ಮುಂತಾದ ಕಾರಣಗಳು ಇದ್ದರೇ ಘಟ ಮುಂತಾದ ಕಾರ್ಯದ ಉಪಲಬ್ಧಿಯಾಗುವುದರಿಂದ, ಕಾರ್ಯಕ್ಕೆ ಕಾರಣದಿಂದ ಅಭೇದವಿರುತ್ತದೆ. ಏಕೆಂದರೆ, ಯಾವುದು ಯಾವುದರಿಂದ ಭಿನ್ನವೋ ಅದು ಅದರ ಅಸ್ತಿತ್ವವಿದ್ದಾಗಲೇ ಉಪಲಬ್ಧವಾಗುವುದೆಂಬುದು ಸರಿಯಲ್ಲ. ತೈಲ ಮುಂತಾದ ಕಾರ್ಯವಸ್ತುವಿನಲ್ಲಿ ತಿಲಾದಿ ಕಾರಣವಸ್ತುವು ಉಪಲಬ್ಧವಾಗಿರುತ್ತದೆ. ಹಾಗೆಯೇ ಕುಂಡಲ ಮುಂತಾದ ಕಾರ್ಯವಸ್ತುವಿನಲ್ಲಿ ಸುವರ್ಣ ಮುಂತಾದ ಕಾರಣವಸ್ತುವು ಉಪಲಬ್ಧವಾಗಿರುತ್ತದೆ. ಕಾರ್ಯ–ಕಾರಣಗಳಲ್ಲಿ ಅಭೇದವಿಲ್ಲದಿದ್ದರೆ ಕಾರಣದಿಂದ ಕಾರ್ಯದ ಉತ್ಪತ್ತಿಯು ಆಗದೇ ಹೋಗುವುದು. ಕಾರಣ ಮತ್ತು ಕಾರ್ಯಗಳಿಗೆ ಅಭೇದವನ್ನು ಹೇಳುವ ಈ ವ್ಯಾಖ್ಯಾನವನ್ನು 'ನಿತ್ಯಭೇದೋ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ನಿತ್ಯಭೇದೋ ನಿಮಿತ್ತೇನ ಹ್ಯುಪಾದಾನೇನ ತು ದ್ವಯಮ್ ।

ಅಸದ್ಯತ್ಕಾರ್ಯರೂಪೇಣ ಕಾರಣಾತ್ಮತಯಾಸ್ತಿ ಹಿ ॥೯೩॥

ಕಾರ್ಯಕ್ಕೆ ನಿಮಿತ್ತ ಕಾರಣದಿಂದ ನಿಯಮೇನ ಭೇದವೂ, ಉಪಾದಾನ ಕಾರಣದಿಂದ ಭೇದಾಭೇದವೂ ಇರುವುದು. ಇದು ಪ್ರಮಾಣ ಪ್ರಸಿದ್ಧವಾಗಿದೆ. ಕಾರ್ಯವು ಕಾರಣದಿಂದ ಭಿನಾಭಿನ್ನವೆಂಬುದು ಹೇಗೆ ಪ್ರಮಾಣಸಿದ್ದವಾಗುತ್ತದೆ ಎಂದು ಆಕ್ಷೇಪ ಬಂದರೆ, 'ಅಸತ್' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ. ಘಟಾದಿಗಳು ಮೃದಾದಿ ಕಾರಣರೂಪದಿಂದ ಉತ್ಪತ್ತಿಗೆ ಮುಂಚೆ ಇರುವುದು ಸತ್ಯವಾದರೂ, ಅವೇ ಮೃದಾದಿಗಳು ಘಟಾದಿ ಕಾರ್ಯರೂಪದಿಂದ ಇರುವುದಿಲ್ಲ. ಹೀಗೆ ಉಪಾದಾನ ಕಾರಣದಿಂದ ಕಾರ್ಯವು ಭೇದಾಭೇದವೆಂದು ನಿರ್ಣಯಿಸಲ್ಪಡುತ್ತದೆ.

ಹೀಗಾದರೂ ಏಕೆ ಅಂಗೀಕರಿಸಬೇಕು ಎಂದರೆ –

ಅನವಸ್ಥಾಽನ್ಯಥಾ ಹಿ ಸ್ಯಾತ್ಸರ್ವತ್ರೋತ್ಪತ್ತಿನಾಶಯೋಃ ।

ಉತ್ಪತ್ತಿಗೆ ಮುಂಚೆ ಕಾರ್ಯವಸ್ತುವಿಗೆ ಕಾರ್ಯರೂಪದಿಂದ ಆತ್ಯಂತಿಕ ಸತ್ವವನ್ನೂ ಕಾರಣದಿಂದ ಅತ್ಯಂತಾಭೇದವನ್ನೂ ಅಂಗೀಕರಿಸಿದರೆ, ಎಲ್ಲ ಕಡೆಗಳಲ್ಲಿಯೂ ಉತ್ಪತ್ತಿ ಮತ್ತು ವಿನಾಶಗಳಿಗೆ ಅನವಸ್ಥೆಯು ಬರಬೇಕಾಗುವುದು.

ಹಿಂದೆ 'ಶಕ್ತೋಽಪಿ ಹಿ' 'ಯಚ್ಚ ನಿತ್ಯಭೇದಃ' ಎಂಬುದಾಗಿ ಹೇಳಿದ ಎರಡು

ಸಂಗತಿಗಳನ್ನೂ ಶ್ರುತಿಯಿಂದಲೂ ಸಮರ್ಥಿಸುತ್ತಾರೆ –

ಶಕ್ತೋಽಪಿ ಭಗವಾನ್ವಿಷ್ಣುರಕರ್ತುಂ ಕರ್ತುಮನ್ಯಥಾ ।।೯೪।।

ಸ್ವಭಿನ್ನಂ ಕಾರಣಾಭಿನ್ನಂ ಭಿನ್ನಂ ವಿಶ್ವಂ ಕರೋತ್ಯಜಃ ।

ಇತಿ ಶ್ರುತೇರವಸಿತ ಉಕ್ತಾರ್ಥೋಽಯಮಶೇಷತಃ ।।೯೫।।

ಉತ್ಪತ್ತಿರಹಿತನೂ ಷಡ್ಗುಣಪೂರ್ಣನೂ ಆದ ಶ್ರೀಹರಿಯು ಯಾವುದೇ ಕಾರ್ಯವನ್ನು ಮಾಡದಿರಲಿಕ್ಕೂ, ಕಾರಣಗಳಿಲ್ಲದೆಯೇ ಅಥವಾ ಕಾರಣಗಳಲ್ಲಿ ವ್ಯತ್ಯಾಸಮಾಡಿ ಕಾರ್ಯವನ್ನು ಮಾಡಲು ಸಮರ್ಥನಾದರೂ ನಿಮಿತ್ತಕಾರಣನಾಗಿ ತನ್ನಿಂದ ಭಿನ್ನವಾಗಿಯೂ, ಉಪಾದಾನ ಕಾರಣದಿಂದ ಭಿನ್ನಾಭಿನ್ನವಾಗಿಯೂ ಈ ಜಗತ್ತನ್ನು ಸ್ವೇಚ್ಛಾನುಸಾರಿಯಾದ ನಿಯಮಗಳಿಂದ ತನ್ನ ಅಧೀನವಾದ ಕಾರಣವಸ್ತುಗಳಿಂದ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡುತ್ತಾನೆ. ಹೀಗೆ ಶ್ರುತಿಯಿಂದ ಹಿಂದೆ ಹೇಳಿದ ಹಾಗೂ ಈಗ ಹೇಳಲ್ಪಟ್ಟ ಈ ವಿಷಯವು ಸಿದ್ಧವಾಯಿತು.

ಇತರವ್ಯಪದೇಶಾಧಿಕರಣಮ್

ಓಂ ಇತರವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ ಓಂ

ಈ ಅಧಿಕರಣದಲ್ಲಿ ಶ್ರುತಿಪ್ರಾಪ್ತವಾದ ಜೀವಕರ್ತೃತ್ವ ಪಕ್ಷವು ವಿಸ್ತಾರವಾಗಿ ನಿರಾಕರಿಸಲ್ಪಡುತ್ತದೆ. ಇಲ್ಲಿ ಜೀವನಿಗೆ ಯಾವುದೇ ವಿಧದಿಂದಲೂ ಕರ್ತೃತ್ವವಿಲ್ಲ ಎಂದು ಪ್ರತಿಪಾದಿಸಲಾಗಿದೆಯೆಂದು ಹೇಳಕೂಡದು. ಏಕೆಂದರೆ 'ಕರ್ತಾ ಶಾಸ್ತ್ರಾರ್ಥವತ್ವಾತ್' ಎಂದು ಮುಂದೆ ಹೇಳಲಾಗುವ ವಿಷಯದಿಂದ ವಿರೋಧವು ಬರುವುದು. ಹಾಗಾದರೆ ಜೀವನಿಗೆ ಈಶ್ವರಾಧೀನವಾದ ಕರ್ತೃತ್ವವನ್ನು ಅಂಗೀಕರಿಸಿ, ಸ್ವಾತಂತ್ರ್ಯವನ್ನು ಮಾತ್ರ ಇಲ್ಲಿ ನಿಷೇಧಿಸಲಾಗಿದೆ ಎಂದು ಹೇಳುವುದೂ ಯುಕ್ತವಲ್ಲ. 'ಹಿತಾಕರಣಾದಿ ದೋಷಪ್ರಸಕ್ತಿಃ' ಮುಂತಾದ ಸೂತ್ರಗಳಿಗೆ ಹಾಗೆ ಅರ್ಥ ಮಾಡಲು ಶಕ್ಯವಾದರೂ, 'ಕೃತ್ಸ್ನಪ್ರಸಕ್ತಿರ್ನಿರವಯತ್ವ ಶಬ್ದಕೋಪೋ ವಾ' ಎನ್ನುವ ಸೂತ್ರವು ಕರ್ತೃತ್ವವನ್ನು ಸರ್ವಥಾ ನಿಷೇಧಿಸುವುದಾಗಿ ಕಂಡುಬರುತ್ತದೆ. ಆದುದರಿಂದ ಜೀವನಿಗೆ ಕರ್ತೃತ್ವವಿಲ್ಲವೆಂಬ ಅರ್ಥದಲ್ಲಿಯೇ ತಾತ್ಪರ್ಯವಿರುವುದು. ಹೀಗೆ ಹೇಳುವುದೂ ಕೂಡುವುದಿಲ್ಲ. ಏಕೆಂದರೆ ಮುಂದೆ ಹೇಳಲಾಗುವ ವಿಷಯಗಳಿಂದ ವಿರೋಧವು ಬರುವುದು. ಹಾಗಾದರೆ ಜೀವನಿಗೆ ಕೇವಲ ಅಭಿಮಾನಿಕವಾದ ಕರ್ತೃತ್ವವು ಇರುವುದು, ವಾಸ್ತವವಾಗಿ ಕರ್ತೃತ್ವವು ಇಲ್ಲ. ಆದುದರಿಂದ ವಿರೋಧ ಬರುವುದಿಲ್ಲವೆಂದು ಹೇಳಿದರೆ ಅದೂ ಕೂಡುವುದಿಲ್ಲ. ಏಕೆಂದರೆ 'ವಿಹಾರೋಪದೇಶಾತ್' ಇತ್ಯಾದಿ ಸೂತ್ರಗಳಿಂದ ವಾಸ್ತವವಾದ ಕರ್ತೃತ್ವವನ್ನೇ ಸಾಧನ ಮಾಡಲಾಗುವುದು. ಆದಪ್ರಯುಕ್ತ ಈ ಅಧಿಕರಣಕ್ಕೆ ಸಂಗತಿಯೇ ಇಲ್ಲ. ಹೀಗೆ ಪೂರ್ವಪಕ್ಷಿಯು ಆಶಂಕಿಸಿದರೆ, ಜೀವಕರ್ತೃತ್ವವು ಈಶ್ವರಾಧೀನವೆಂದು

ಒಪ್ಪದಿದ್ದರೆ ಇಂಥಹ ಪ್ರಸಂಗವು ಬರುತ್ತದೆ. ಆದ್ದರಿಂದ ಮೊದಲು ಜೀವಕರ್ತೃತ್ವವು ಈಶ್ವರಾಧೀನವಾದುದು ಎಂದು ಅಂಗೀಕರಿಸಬೇಕು ಎಂದು ಹೇಳಿ, ಅದಕ್ಕೆ ವಿರೋಧವಾದ ತರ್ಕಗಳನ್ನು ಪರಿಹರಿಸುವ ಕ್ರಮವನ್ನು ಅನುವ್ಯಾಖ್ಯಾನಕಾರರು ಇಲ್ಲಿ ಆಗಮವಾಕ್ಯವನ್ನು ದೃಷ್ಟಾಂತವಾಗಿ ನೀಡುವುದರ ಮೂಲಕ ತೋರಿಸುತ್ತಾರೆ –

ಅನಂಶಸ್ಯಾಪಿ ಜೀವಸ್ಯ ಕಿಂಚಿತ್ಸಾಮರ್ಥ್ಯಯೋಜನಾಮ್ ।

ಕಾರ್ಯೇಷು ಯಃ ಕರೋತ್ಯದ್ಧಾ ನಮಸ್ತಸ್ಮೈ ಸ್ವಯಂಭುವೇ ॥೯೬॥

ನಿರಂಶನೂ ಆದ ಜೀವನಿಗೆ ಕಾರ್ಯಕ್ಕೆ ಅನುರೂಪವಾದ ಕಿಂಚಿತ್ ಸಾಮರ್ಥ್ಯ ಪ್ರಯೋಗವನ್ನು ಯಾವಾತನು ಕಾರ್ಯಗಳಲ್ಲಿ ಚೆನ್ನಾಗಿ ಮಾಡುತ್ತಾನೋ ಅಂಥಹ ಸ್ವತಂತ್ರನಾದ ನಾರಾಯಣನಿಗೆ ನಮಸ್ಕಾರ.

ಜೀವನು ನಿರಂಶನಾಗಿದ್ದರೂ ಪರಮೇಶ್ವರನ ಅಚಿಂತ್ಯಶಕ್ತಿಯಿಂದ ಕಾರ್ಯಕ್ಕೆ ಎಷ್ಟು ಬೇಕೋ ಅಷ್ಟು ಶಕ್ತಿಯನ್ನು ಮಾತ್ರ ಪ್ರಯೋಗಿಸುವ ಸಾಮರ್ಥ್ಯವು ಅವನಲ್ಲಿ ಕೂಡುವುದು. ಆದ್ದರಿಂದ ಕೃತ್ಸ್ನಪ್ರಸಕ್ತಿ ಸಾಮರ್ಥ್ಯರೂಪ ದೋಷವು ಬರುವುದಿಲ್ಲ.

ಹೀಗೆ ಜೀವನಿಗೆ ಈಶ್ವರಾಧೀನ ಕರ್ತೃತ್ವವನ್ನು ಒಪ್ಪಿದರೆ ಯಾವುದೇ ದೋಷವು ಬರುವುದಿಲ್ಲವೆಂದು ತೋರಿಸಿ, ಈಗ ಅಭಿಪ್ರೇತವಾದ ಅರ್ಥದಲ್ಲಿ ಸೂತ್ರವನ್ನು ಯೋಜಿಸುತ್ತಾರೆ –

ಯದಿ ಭಾಗೇನ ಕಾರ್ಯೇಷು ಜೀವಶಕ್ತಿಂ ನ ಯೋಜಯೇತ್ ।

ಹರಿಸ್ತದಾ ಹಿ ಸರ್ವತ್ರ ಕೃತ್ಸ್ನಯತ್ನೋಽಶಿತಾಽಪಿ ವಾ ॥೯೭॥

ಒಂದು ವೇಳೆ ಶ್ರೀಹರಿಯು ಕಾರ್ಯಗಳಲ್ಲಿ ಕಾರ್ಯಕ್ಕೆ ಅನುಗುಣವಾದ ಅಂಶದಿಂದ ಜೀವನಿಗೆ ಶಕ್ತಿಯನ್ನು ಉಪಯೋಗಿಸುವಂತೆ ಮಾಡದಿದ್ದರೆ, ಆಗ ಹುಲ್ಲು ಎತ್ತುವಿಕೆ ಮುಂತಾದ ಎಲ್ಲ ಕಾರ್ಯಗಳಲ್ಲಿಯೂ ತನ್ನ ಪೂರ್ಣವಾದ ಶಕ್ತಿಯನ್ನು ಬಳಸಬೇಕಾಗುತ್ತದೆ. ಇಲ್ಲವೇ ಏಕದೇಶ ಪ್ರವೃತ್ತಿಯಲ್ಲಿ ಅಂಶವುಳ್ಳವನು ಆಗಬೇಕಾಗುವುದು. ಆದರೆ ಇದು ಶ್ರುತಿ ಹಾಗೂ ಅನುಭವಗಳಿಗೆ ವಿರುದ್ಧ. ಆದ್ದರಿಂದ ಈಶ್ವರಾಧೀನವಾಗಿಯೇ ಜೀವನು ಕರ್ತನು ಎಂದು ನಿಶ್ಚಿತವಾಗುತ್ತದೆ.

ಹಾಗಾದರೆ ಜೀವನ ಶಕ್ತಿಯಿಂದಲೇ ಇದನ್ನು ಕೂಡಿಸಬಹುದು ಎಂದರೆ, ಹೀಗೆ ಹೇಳುವುದು ಅಯುಕ್ತ. ಏಕೆಂದರೆ ಅಘಟಿತವಾದುದನ್ನು ಘಟನ ಮಾಡುವ ಅಚಿಂತ್ಯವಾದ ಶಕ್ತಿಯು ಜೀವನಿಗೆ ಇರುವುದಿಲ್ಲ. ಹಾಗೇನಾದರೂ ಅಂಥಹ ಶಕ್ತಿ ಇದ್ದಿದ್ದರೆ ಹಿತಾಕರಣಾದಿ ದೋಷದ ಪ್ರಸಕ್ತಿಯೇ ಬರುತ್ತಿರಲಿಲ್ಲ.

ಹಾಗಾದರೆ 'ವ್ಯತಿರೇಕೋ ಗಂಧವತ್' ಎಂಬ ಸೂತ್ರಾಂಶದಿಂದ ಜೀವರಿಗೆ

ಬಹುರೂಪತ್ವವನ್ನು ಸೂತ್ರಕಾರರೇ ಮುಂದೆ ಹೇಳುವರು. ಹಾಗೂ ಉತ್ಕ್ರಾಂತಿ ಗತ್ಯಾಗತೀನಾಂ ಎಂಬ ಸೂತ್ರದಿಂದ ಜೀವರಿಗೆ ಅಣುತ್ವವನ್ನು ಹೇಳುವರು. ಅಂಶತ್ವವನ್ನು ಒಪ್ಪದಿದ್ದರೆ, ಅಣುವಾದ ಜೀವನಿಗೆ ಏಕಕಾಲದಲ್ಲಿ ಬಹುರೂಪಗಳು ಕೂಡುವುದಿಲ್ಲ. ಹೀಗೆ ಸೂತ್ರಗಳಿಂದಲೇ ಸಾಂಶತ್ವವು ಸಿದ್ಧವಾಗಿರುವಾಗ, ಈ ಅಧಿಕರಣದಲ್ಲಿ ಸೂತ್ರಕಾರರು 'ನಿರವಯತ್ವ ಶಬ್ದ ಕೋಪೋ ವಾ' ಎಂದು ಹೇಗೆ ಹೇಳಿದರು? ಎನ್ನುವ ಗೂಢಾಭಿಸಂಧಿಯ ಆಶಂಕೆಯನ್ನು 'ಅಂಶಿನೋ ಹಿ' ಮುಂತಾದ ವಚನದಿಂದ ಪರಿಹರಿಸುತ್ತಾರೆ –

ಅಂಶಿನೋ ಹಿ ಪಟಾದ್ಯಾ ಯೇ ಭಿನ್ನೈರೇವ ಪರಸ್ಪರಮ್ ।

ಅಂಶೈರಂಶಿನ ಉಚ್ಯಂತೇ ನೈವಮೇವ ಹಿ ಚೇತನಾಃ ॥೯೮॥

ಅತೋಽನಂಶಿನ ಇತ್ಯೇವ ಶ್ರುತಿರೇತೇಷು ವರ್ತತೇ ।

ಅಪ್ಯನೇಕಸ್ವರೂಪೇಷು ವಿಶೇಷಾದೇವ ಕೇವಲಮ್ ॥೯೯॥

ಬಹುಸ್ವರೂಪತಾಖ್ಯಾ ತು ತೇಷ್ವಸ್ತ್ಯೇವ ಹಿ ಸಾಂಶತಾ ।

ಅಂಶಿಗಳೆಂದು ಪ್ರಸಿದ್ಧವಾಗಿರುವ ಪಟಾದಿಗಳು ಪರಸ್ಪರವಾಗಿ ಭಿನ್ನಗಳೇ ಆದರೂ ಅಂಶಿಯಿಂದ ಭಿನ್ನಾಭಿನ್ನಗಳಾದ ಅಂಶಗಳಿಂದ (ತಂತುಗಳಿಂದ) ಕೂಡಿರುವುದಾಗಿ ಹೇಳಲ್ಪಡುತ್ತವೆ. ಆದರೆ ಚೇತನಗಳು ಅಂಶಗಳನ್ನು ಹೊಂದಿದ್ದರೂ ಪಟಾದಿಗಳಲ್ಲಿರುವ ಹಾಗೆ ಭಿನ್ನಾಭಿನ್ನವಾದ ಅಂಶಗಳಿಂದ ಕೂಡಿದ ಅಂಶಿಗಳಲ್ಲ. ಆದ್ದರಿಂದ ಅಭೇದವಿದ್ದರೂ ಭೇದಕಾರ್ಯನಿರ್ವಾಹಕವೂ, ಭೇದಪ್ರತಿನಿಧಿಯೂ ಆದ ವಿಶೇಷದಿಂದಲೇ ಬಹುಸ್ವರೂಪವುಳ್ಳ, ಆದ್ದರಿಂದಲೇ ಸಾಂಶರೂ ಆದ ಈ ಚೇತನರಲ್ಲಿ ಅನಂಶಿನಃ (ಅಂಶವಿಲ್ಲದವರು) ಇತ್ಯಾದಿ ಶ್ರುತಿಯು ಇರುತ್ತದೆ. ಸರ್ವಥಾ ಅಂಶಗಳೇ ಇಲ್ಲವೆಂಬುದು ಶ್ರುತಿಯ ಅಭಿಪ್ರಾಯವಲ್ಲ. ಆದ್ದರಿಂದ ವಿರೋಧವಿಲ್ಲವೆಂದು ಅಭಿಪ್ರಾಯ.

ಚೇತನರಲ್ಲಿ ಅಂಶ–ಅಂಶಿಗಳಿಗೆ ಭೇದವಿಲ್ಲವಾದರೂ ವಿಶೇಷದ ಬಲದಿಂದಲೇ ಬಹುಸ್ವರೂಪತ್ವವು ಹೇಳಲ್ಪಡುತ್ತದೆ. ಇದು ಪ್ರಮಾಣಪ್ರಸಿದ್ಧವಾಗಿದೆ. ಆದ್ದರಿಂದ ಸಾಂಶತ್ವವೂ ಕೂಡುತ್ತದೆ.

ಹಾಗಾದರೆ ಈಶ್ವರಾಧೀನತೆಯ ಅಪೇಕ್ಷೆಯಿಲ್ಲದೇ ಸಾಂಶತ್ವ–ನಿರಂಶತ್ವಗಳು ಸಿದ್ಧಿಸುವುದರಿಂದ, ಏಕದೇಶದಿಂದ ಕ್ರಿಯೆಯು ಕೂಡುವಾಗ, ಕೃತ್ಸ್ನಪ್ರಸಕ್ತಿಯಿಲ್ಲ. ವಿಭಿನ್ನಾಂಶಗಳಿಲ್ಲದ ಪ್ರಯುಕ್ತ ನಿರವಯತ್ವ ಶಬ್ದಕೋಪವೂ ಪರಿಹಾರವಾಗುತ್ತದೆ. ಇದಕ್ಕೆ ಬೇರೆಯಾದ ಈಶ್ವರನ ಕಾರ್ಯವೇನೂ ತೋರುವುದಿಲ್ಲ ಎಂಬ ಪೂರ್ವಪಕ್ಷಿಯ ಗೂಢಾಭಿಸಂಧಿಯು ಇರುವುದಾದರೆ ಅದನ್ನು ಪರಿಹರಿಸುತ್ತಾರೆ –

ಬಹುತ್ವೇನಾವಿನಾಭಾವಾದ್ಭಿನ್ನತಾ ನಿಯಮಾದ್ಭವೇತ್ ।।೧೦೦।।

ಯದಿ ನೈವಂ ನಿಯಮಕೃದ್ಭಗವಾನ್ಪುರುಷೋತ್ತಮಃ ।

ಗುಣಪೂರ್ಣನಾದ ನಾರಾಯಣನು ಹೀಗೆ ನಿಯಮವನ್ನು ಮಾಡದಿದ್ದ ಪಕ್ಷದಲ್ಲಿ, ಬಹುತ್ವಕ್ಕೂ ಭೇದಕ್ಕೂ ನಿಯತ ಸಂಬಂಧವಿರುವುದರಿಂದ, ಬಹುತ್ವ ಹೇತುವಿನಿಂದ ಜೀವರಲ್ಲಿಯೂ ಅಂಶ-ಅಂಶಿ ಭೇದವು ಬರಬೇಕಾಗುವುದು.

ಆದ್ದರಿಂದ ಜೀವರ ಸ್ವರೂಪ, ಸ್ವಭಾವ, ವಿಶೇಷಗಳಿಗೆ ಈಶ್ವರನೇ ನಿಯಾಮಕನಾಗಿದ್ದು, ಚೇತನರಲ್ಲಿ ವಿಶೇಷವನ್ನು ನಿಮಿತ್ತವನ್ನಾಗಿ ಮಾಡಿ, ವಿರುದ್ಧವಾಗಿದ್ದರೂ ಅಭೇದ ಬಹುತ್ವಗಳನ್ನು ಒಂದೇ ಕಡೆಯಲ್ಲಿ ವ್ಯವಸ್ಥೆಗೊಳಿಸಿ, ಕೃತ್ಸ್ನಪ್ರಸಕ್ತಿಯ ದೋಷ ಬರದಂತೆ, ಜೀವನಲ್ಲಿ ಕಾರ್ಯಾನುರೂಪ ಶಕ್ತಿಯನ್ನು ಯೋಜನೆ ಮಾಡುತ್ತ, ಜೀವನಿಂದ ಕಾರ್ಯಗಳನ್ನು ಮಾಡಿಸುತ್ತಾನೆ ಎಂಬುದೇ ಎಲ್ಲರೂ ಒಪ್ಪಬೇಕಾದ ಸಿದ್ಧಾಂತ.

ಶ್ರುತೇಸ್ತು ಶಬ್ದಮೂಲತ್ವಾಧಿಕರಣಮ್

ಓಂ ಶ್ರುತೇಸ್ತು ಶಬ್ದಮೂಲತ್ವಾತ್ ಓಂ

ಈಶ್ವರನ ಸ್ವತಂತ್ರ ಕರ್ತೃತ್ವದ ವಿಷಯದಲ್ಲಿ ಹಿಂದೆ ಹೇಳಿದ ಕೃತ್ಸ್ನಪ್ರಸಕ್ತಿ ಮುಂತಾದ ದೋಷಗಳು ಬರುವುದಿಲ್ಲ. ಏಕೆಂದರೆ, ಲೋಕದಲ್ಲಿ ಪರಸ್ಪರ ವಿರುದ್ಧವೆನಿಸಿರುವ ಅಣುತ್ವ-ಮಹತ್ವ ಮುಂತಾದ ಧರ್ಮಗಳು ಅವನಲ್ಲಿ ಸ್ವಲ್ಪವೂ ವಿರೋಧವಿಲ್ಲದೇ ಕೂಡುತ್ತವೆ ಎಂಬುದು ಶ್ರುತಿ ಪ್ರಸಿದ್ಧ. ಪರಮಾತ್ಮನ ಧರ್ಮಗಳು ಕೇವಲ ಆಗಮಗಳಿಂದಲೇ ವೇದ್ಯವು. ಯುಕ್ತಿಗೆ ನಿಲುಕುವುದಿಲ್ಲ. ಆದ್ದರಿಂದ ಯುಕ್ತಿ ವಿರೋಧವಿರುವುದಿಲ್ಲ ಎಂಬ ತತ್ವವನ್ನು ಈ ಅಧಿಕರಣದಲ್ಲಿ ಸಮರ್ಥಿಸಲಾಗಿದೆ.

ಈ ಅಧಿಕರಣದಲ್ಲಿ ಪ್ರಸಕ್ತವಾಗಿರುವ ಪೂರ್ವಪಕ್ಷವು ಹೀಗಿದೆ –

ಜೀವನಿಗೆ ಹೇಗೋ ಹಾಗೆ ಈಶ್ವರನಿಗೂ ಕೃತ್ಸ್ನಪ್ರಸಕ್ತಿ ದೋಷವು ಬರುವುದು. ಆದಪ್ರಯುಕ್ತ ಈಶ್ವರನಿಗೂ ಕರ್ತೃತ್ವವು ಯುಕ್ತವಾಗುವುದಿಲ್ಲ. ಬ್ರಹ್ಮಾಂಡ ಮತ್ತು ಪಿಪೀಲಿಕಾಂಡ (ಇರುವೆ ಮೊಟ್ಟೆ) ಮುಂತಾದ ವಿವಿಧ ಗಾತ್ರದ ಪದಾರ್ಥಗಳ ನಿರ್ಮಾಣದಲ್ಲಿ ಸಮಾನವಾದ ಶಕ್ತಿಯನ್ನು ಪ್ರಯೋಗಿಸುವವನು ಪ್ರೇಕ್ಷಾವಂತ ಎನಿಸಲಾರನು. ಬೇರೆ ಗತಿಯಿಲ್ಲವಾದ್ದರಿಂದ ದೋಷವಿಲ್ಲ ಎಂದು ಹೇಳಿದರೆ ಈಶ್ವರತ್ವಕ್ಕೇ ಘಾತವುಂಟಾಗುವುದು. ಇದರ ನಿವಾರಣೆಗಾಗಿ ಏಕದೇಶ ಪ್ರವೃತ್ತಿಯನ್ನು ಅಂಗೀಕರಿಸಿದರೆ, 'ನೇಹ ನಾನಾಸ್ತಿ' ಇತ್ಯಾದಿ ನಿರವಯತ್ವ ಪ್ರತಿಪಾದಕ ಶ್ರುತಿಗಳ ವಿರೋಧ ಬರುವುದು. ಈಶ್ವರನಿಗೆ ಶರೀರೇಂದ್ರಿಯಗಳು ಇಲ್ಲವಾದ್ದರಿಂದ ಕರ್ತತ್ವವು ಕೂಡುವುದಿಲ್ಲ. ಏಕೆಂದರೆ ಲೋಕದಲ್ಲಿ ಹೀಗೆ

ಕಂಡಿರುವುದಿಲ್ಲ. ಈಶ್ವರನು ನಿರ್ವಿಶೇಷನಾದ್ದರಿಂದ ಅವನಲ್ಲಿ ವಿಶೇಷವೂ ಕೂಡುವುದಿಲ್ಲ. ಆದ್ದರಿಂದ ಈಶ್ವರನಿಗೆ ಸರ್ವಕರ್ತೃತ್ವವು ಯುಕ್ತವಾಗುವುದಿಲ್ಲ.

ಹೀಗೆ ಬರುವ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ನಿರಾಕರಿಸುತ್ತಾರೆ. ಅದರ ತಾತ್ಪರ್ಯವನ್ನು 'ತಸ್ಯ ತು' ಇತ್ಯಾದಿ ವಚನದಿಂದ ಹೇಳುತ್ತಾರೆ –

ತಸ್ಯ ತ್ವಶೇಷಶಕ್ತಿತ್ವಾದ್ಯುಜ್ಯತೇ ಸರ್ವಮೇವ ಚ ॥೧೦೧॥

ಜೀವನಿಂದ ವಿಶೇಷವುಳ್ಳ ಆ ನಾರಾಯಣನಿಗೆ 'ಯೋಽಸೌ ವಿರುದ್ಧೋಽ-ವಿರುದ್ಧಃ' ಇತ್ಯಾದಿ ಶ್ರುತಿಯಲ್ಲಿ ಅಲೌಕಿಕತ್ವವು ಉಕ್ತವಾಗಿದೆ. ಅವನನ್ನು ಆಗಮಗಳಿಂದ ಮಾತ್ರ ತಿಳಿಯಲು ಸಾಧ್ಯ. ಆದಪ್ರಯುಕ್ತ ಈಶ್ವರನಲ್ಲಿ ಯುಕ್ತಿ ವಿರೋಧಕ್ಕೆ ಅವಕಾಶವು ಇರುವುದಿಲ್ಲ. 'ವಿಚಿತ್ರ ಶಕ್ತಿಃ ಪುರುಷಃ' 'ಸರ್ವೈರ್ಯುಕ್ತಾ ಶಕ್ತಿಭಿರ್ದೇವತಾ ಸಾ' ಇತ್ಯಾದಿ ಶ್ರುತಿಗಳಿಂದ ಈಶ್ವರನು ವಿಚಿತ್ರವಾದ ಸಮಸ್ತ ಶಕ್ತಿಯುಳ್ಳವನೆಂದು ತಿಳಿದುಬರುವುದು. ಆದಪ್ರಯುಕ್ತ ಈಶ್ವರನಲ್ಲಿ ಎಲ್ಲವೂ ಯುಕ್ತಿಸಮ್ಮತವೇ ಆಗುತ್ತವೆ. ಎಲ್ಲವೂ ಅಂದರೆ – ಭಿನ್ನಾಂಶಗಳಿಲ್ಲದಿದ್ದರೂ ಕಾರ್ಯಗಳಲ್ಲಿ ಸಮಗ್ರ ಶಕ್ತಿಯ ಪ್ರಸಕ್ತಿಯು ಇಲ್ಲವೆಂಬುದು, ಸ್ವರೂಪಾಂಶಗಳ ಬಾಹುಲ್ಯವಿದ್ದರೂ ಭೇದಾಭಾವವು, ಅಂಶದಿಂದ ಕಾರ್ಯವನ್ನು ಮಾಡಿದರೂ ನಿರವಯತ್ವ ಶ್ರುತಿಯ ವ್ಯಾಕೋಪದ ಅಭಾವವು, ಪ್ರಾಕೃತ ದೇಹರಹಿತನಾದರೂ ಕರ್ತೃತ್ವದ ನಿರ್ವಹಣೆ ಮುಂತಾದ ಎಲ್ಲವೂ ಕೂಡುತ್ತವೆ.

ಇನ್ನು ಪರಿಣಾಮವಾದಿಗಳೂ ವಿವರ್ತವಾದಿಗಳೂ, ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನೆಂಬುದನ್ನು 'ಕೃತ್ಸ್ನಪ್ರಸಕ್ತಿಃ' ಎಂಬ ಸೂತ್ರದಿಂದ ಆಕ್ಷೇಪಿಸಿ, 'ಶ್ರುತೇಸ್ತು' ಇತ್ಯಾದಿ ಸೂತ್ರಗಳಿಂದ ಅದರ ಸಮಾಧಾನವು ಹೇಳಲ್ಪಡುವುದು ಎಂಬುದಾಗಿ ವ್ಯಾಖ್ಯಾನ ಮಾಡುತ್ತಾರೆ. ಹೇಗೆಂದರೆ, ತದಾತ್ಮಾನಂ ಸ್ವಯಮಕುರುತ ಇತ್ಯಾದಿ ಶ್ರುತಿಗಳಿಂದ ಬ್ರಹ್ಮವು ಜಗದುಪಾದಾನಕಾರಣವೆಂಬ ಸಂಗತಿಯೂ, ಕೃತ್ಸ್ನ ಪರಿಣಾಮವಿಲ್ಲವೆಂಬ ಸಂಗತಿಯೂ ತಿಳಿದುಬರುತ್ತದೆ. ಇದಕ್ಕೆ ಶಬ್ದಗಳೇ ಮೂಲ ಪ್ರಮಾಣವಾದ್ದರಿಂದ ಯುಕ್ತಿವಿರೋಧಕ್ಕೆ ಅವಕಾಶವಿರುವುದಿಲ್ಲ. 'ಸರ್ವಕರ್ಮಾ ಸರ್ವಕಾಮ' ಇತ್ಯಾದಿ ಶ್ರುತಿಯಲ್ಲಿ ಪರದೇವತೆಯಲ್ಲಿ ಸರ್ವಶಕ್ತಿತ್ವವು ಉಕ್ತವಾಗಿದೆ. ಆದುದರಿಂದ ನಿರವಯವನಾದರೂ ಕೃತ್ಸ್ನ ಪ್ರಸಕ್ತಿಯು ಇಲ್ಲದಿರುವುದರಿಂದ ಬ್ರಹ್ಮನಿಗೆ ಜಗತ್ತಿನ ಉಪಾದಾನಕಾರಣತ್ವವು ಯುಕ್ತವಾಗುತ್ತದೆ. ಇತ್ಯಾದಿ ವ್ಯಾಖ್ಯಾನವು ಅಯುಕ್ತವು. ಏಕೆಂದರೆ ಹಾಗಾದಲ್ಲಿ ಈ ಸೂತ್ರಗಳಿಗೆ ಈ ಅಧ್ಯಾಯದಲ್ಲಿ ಅಂತರ್ಭಾವರೂಪ ಸಂಗತಿಯು ಇಲ್ಲವೆಂದಾಗುವ ಪ್ರಸಂಗವು ಬರುವುದು. ಅದು ಹೇಗೆಂದರೆ –

ವಿರೋಧಃ ಸರ್ವವೈಶಿಷ್ಟ್ಯೇ ಯೋ ದ್ವಿತೀಯೇ ನಿರಸ್ಯತೇ ।

ನಾರಾಯಣಸ್ಯ ತ್ವಧ್ಯಾಯೇ ತದನ್ಯೇ ತತ್ರ ತತ್ರಗಾಃ ।।೧೦೨।।

ಪರಬ್ರಹ್ಮನಾದ ನಾರಾಯಣನಿಗೆ ಸಮಸ್ತ ಚೇತನಾಚೇತನಾತ್ಮಕ ಪ್ರಪಂಚದಿಂದ ವೈಲಕ್ಷಣ್ಯ, ಸರ್ವೋತ್ತಮತ್ವ ಮುಂತಾದ ವೈಶಿಷ್ಟ್ಯದ ವಿಷಯದಲ್ಲಿ ಕಂಡುಬರುವ ಯುಕ್ತ್ಯಾದಿ ವಿರೋಧವಾದರೂ ಈ ದ್ವಿತೀಯಾಧ್ಯಾಯದಲ್ಲಿ ನಿರಾಕರಿಸಲ್ಪಡುತ್ತದೆ. ಇದಕ್ಕಿಂತ ಬೇರೆಯಾದ ವಿರೋಧಗಳು ಆಯಾಯ ಅಧಿಕರಣಗಳಲ್ಲಿಯೇ ನಿರಾಕರಿಸಲ್ಪಟ್ಟಿರುತ್ತವೆ.

ಹಾಗಾದರೆ ಶ್ರುತಿಗಳ ಪರಸ್ಪರ ವಿರೋಧವೂ ಎರಡನೆಯ ಅಧ್ಯಾಯದಲ್ಲಿ 'ನ ವಿಯದಶ್ರುತೇಃ' ಇತ್ಯಾದಿ ಸೂತ್ರಗಳಿಂದ ಪರಿಹರಿಸಲ್ಪಟ್ಟಿದೆ. ಆದುದರಿಂದ ಬ್ರಹ್ಮನ ಸರ್ವವೈಶಿಷ್ಟ್ಯದ ವಿಷಯದಲ್ಲಿಯೇ ವಿರೋಧವು ಇದೇ ಅಧ್ಯಾಯದಲ್ಲಿ ಪರಿಹರಿಸಲ್ಪಡುತ್ತದೆ ಎಂಬುದು ಹೇಗೆ ಸಂಗತವಾಗುವುದು ಎಂದರೆ –

ಸೃಷ್ಟಿಸಂಹಾರವಾಕ್ಯಾನಾಂ ಜೀವರೂಪಾಭಿಧಾಯಿನಾಂ ।

ಅಪ್ಯನ್ಯೋನ್ಯಾವಿರೋಧಸ್ತು ದ್ವಿತೀಯಾಧ್ಯಾಯಗೋಚರಃ ।।೧೦೩।।

ಜೀವರ ಸ್ವರೂಪವನ್ನು (ಹಾಗೂ ಪ್ರಾಣಾದಿಗಳನ್ನು) ಹೇಳುವ ವಾಕ್ಯಗಳಿಗೂ, ಸೃಷ್ಟಿ ಸಂಹಾರಗಳನ್ನು ಪ್ರತಿಪಾದಿಸುವ ವಾಕ್ಯಗಳಿಗೂ ಪರಸ್ಪರ ವಿರೋಧ ಪರಿಹಾರವು ಎರಡನೆಯ ಅಧ್ಯಾಯದ ವಿಷಯವೇ ಆಗಿದ್ದರೂ ಸಹ, ಅದು ಪರಮೇಶ್ವರನ ಸರ್ವವೈಶಿಷ್ಟ್ಯ ವಿರೋಧ ಪರಿಹಾರರೂಪವೇ ಆಗಿರುತ್ತದೆ.

ಇನ್ನು ಈಶ್ವರನಿಗೆ ಶರೀರ–ಇಂದ್ರಿಯಾದಿ ಕರಣಗಳಿಲ್ಲವಾದ್ದರಿಂದ ಕರ್ತೃತ್ವವು ಕೂಡುವುದಿಲ್ಲವೆಂಬ ಆಕ್ಷೇಪದ ಸಮಾಧಾನಕ್ಕಾಗಿ ಹೊರಟಿರುವ ಸೂತ್ರ –

ಸೂತ್ರ: ಓಂ ವಿಕರಣತ್ವಾನ್ನೇತಿ ಚೇತ್ತದುಕ್ತಂ ಓಂ

ಈ ಸೂತ್ರವು ಅನಾರಂಭಣೀಯವು, ಪುನರುಕ್ತವಾದುದರಿಂದ ಎಂದು ಆಕ್ಷೇಪ. ಶ್ರುತೇಸ್ತು ಶಬ್ದಮೂಲತ್ವಾತ್, ಆತ್ಮನಿ ಚೈವಂ ವಿಚಿತ್ರಾಶ್ಚ ಹಿ, ಸರ್ವೋಪೇತಾ ಚ ತದ್ದರ್ಶನಾತ್ ಎನ್ನುವ ಸೂತ್ರಗಳಿಂದಲೇ ಅಲೌಕಿಕತ್ವ, ಶಬ್ದೈಕ ಸಮಧಿಗಮ್ಯತ್ವ, ವಿಚಿತ್ರಾನಂತಶಕ್ತಿತ್ವ ಮುಂತಾದ ಯುಕ್ತಿಗಳಿಂದ ಎಲ್ಲ ಅಸಂಭವನೀಯತೆಯನ್ನೂ ಪರಿಹರಿಸಲಾಗಿದೆ. ಈ ವಿಷಯದಲ್ಲಿ ಯಾವುದೇ ಅಭ್ಯಧಿಕಾಶಂಕೆಯೂ ಬಂದಿಲ್ಲ. ಆದ್ದರಿಂದ ಈ ಸೂತ್ರಕ್ಕೆ ಆರಂಭಣೀಯತ್ವವು ಕೂಡುವುದಿಲ್ಲ ಎಂದರೆ –

ಮಾನಮೇಯವಿಶೇಷೇಣ ಪುನರುಕ್ತಿರ್ನ ಜಾಯತೇ ।

'ಅತ ಏವ ಪ್ರಾಣಃ' ಇತ್ಯಾದಿಗಳಲ್ಲಿ ಪ್ರಮಾಣವು ಒಂದೇ ಆಗಿದ್ದರೂ, ಪ್ರಮೇಯದ ವಿಷಯದಲ್ಲಿ ವಿಶೇಷವಿರುವುದರಿಂದ ಹೇಗೆ ಪುನರುಕ್ತಿಯಿಲ್ಲವೋ,

ಹಾಗೆಯೇ ಪ್ರಮೇಯಗಳಲ್ಲಿ ಐಕ್ಯವಿದ್ದರೂ ಪ್ರಮಾಣಗಳಲ್ಲಿ ವಿಶೇಷವಿರುವ ಪ್ರಯುಕ್ತ ಪುನರುಕ್ತಿಯು ಸಂಭವಿಸುವುದಿಲ್ಲ.

ನ ಪ್ರಯೋಜನವತ್ವಾಧಿಕರಣಮ್

ಯಾವ ಪ್ರಯೋಜನಕ್ಕಾಗಿ ಸೃಷ್ಟ್ಯಾದಿಗಳೋ ಆ ಪ್ರಯೋಜನದ ನ್ಯೂನತೆಯು ಕಂಡುಬರುವುದರಿಂದ ಈಶ್ವರನಲ್ಲಿ ಅಪೂರ್ಣತೆಯು ಪ್ರಾಪ್ತವಾಗುವುದು. ಈ ಆಕ್ಷೇಪ ಪರಿಹಾರಕ್ಕಾಗಿ ಈ ಅಧಿಕರಣವು ಪ್ರಸಕ್ತವಾಗಿದೆ. ಈಶ್ವರನಿಗೆ ಸೃಷ್ಟ್ಯಾದಿಗಳಿಂದ ಪ್ರಯೋಜನವು ಇದೆಯೋ ಇಲ್ಲವೋ? ಎಂಬುದಾಗಿ ಪ್ರಶ್ನೆ. ಪ್ರಯೋಜನವಿದೆಯೆಂದರೆ ಅಪೂರ್ಣತೆಯು ಬರಬೇಕಾದೀತು. ಪ್ರಯೋಜನವು ಇಲ್ಲವೆಂದರೆ ಕರ್ತೃತ್ವವೇ ಕೂಡುವುದಿಲ್ಲ. ಹೀಗೆ ಎರಡು ಕಲ್ಪಗಳಲ್ಲಿಯೂ ಈಶ್ವರನಿಗೆ ಸೃಷ್ಟ್ಯಾದಿ ಕರ್ತೃತ್ವವು ಕೂಡಲಾರದು ಎಂದು ಪೂರ್ವಪಕ್ಷಿಯ ಅಭಿಪ್ರಾಯ. ಇದರಲ್ಲಿ ಮೊದಲನೆಯದನ್ನು **ಓಂ ನ ಪ್ರಯೋಜನವತ್ವಾತ್ ಓಂ** ಎಂಬ ಮೊದಲನೆಯ ಸೂತ್ರದಿಂದಲೂ ಎರಡನೆಯ ಪಕ್ಷವನ್ನು **ಓಂ ಲೋಕವತ್ತು ಲೀಲಾಕೈವಲ್ಯಂ ಓಂ** ಎಂಬ ಎರಡನೆಯ ಸೂತ್ರದಿಂದಲೂ ನಿರಾಕರಿಸುತ್ತಾರೆ. ಇದನ್ನೇ ಅನುವ್ಯಾಖ್ಯಾನದಲ್ಲಿ 'ಸದಾ ' ಇತ್ಯಾದಿ ವಚನದಿಂದ ವಿವರಿಸುತ್ತಾರೆ –

ಸದಾ ಪ್ರವೃತ್ತಿರೀಶಸ್ಯ ಸ್ವಭಾವಾದೇವ ಕೇವಲಮ್ ।।೧೦೪।।

ಹೇಗೆ ಲೋಕದಲ್ಲಿ ಅಗ್ನಿ ವಾಯ್ವಾದಿಗಳಿಗೆ ಊರ್ಧ್ವಗಮನಾದಿ ಪ್ರವೃತ್ತಿಯು ಸ್ವಭಾವದಿಂದಲೇ ಇರುವುದೋ, ಹಾಗೆಯೇ ಈಶ್ವರನಿಗೆ ಪ್ರಯೋಜನವು ಇಲ್ಲದಿದ್ದರೂ ಯಾವಾಗಲೂ ಸ್ವಭಾವದಿಂದಲೇ ಸೃಷ್ಟ್ಯಾದಿಗಳಲ್ಲಿ ಪ್ರವೃತ್ತಿಯು ಪ್ರಮಾಣ ಪ್ರಮಿತವಾಗಿದೆ.

ಹಾಗಾದರೆ ಏನೂ ಪ್ರಯೋಜನವಿಲ್ಲದೆ ಚೇತನರ ಪ್ರವೃತ್ತಿಯುಂಟಾಗುವುದು ಲೋಕದಲ್ಲಿ ಕಂಡಿಲ್ಲವೆಂದು ಆಕ್ಷೇಪಿಸಿದರೆ, ಮತ್ತನಿಗೆ ಯಾವುದೇ ಪ್ರಯೋಜನವಿಲ್ಲದಿದ್ದರೂ ಕೇವಲ ಸುಖೋದ್ರೇಕದಿಂದಲೇ ನೃತ್ಯ ಗಾನಾದಿಗಳಲ್ಲಿ ಪ್ರವೃತ್ತಿಯು ಕಂಡುಬರುವುದೆಂದು ಹೇಳುತ್ತೇವೆ. ಹಾಗಾದರೆ ಜ್ಞಾನಿಗಳ ಪ್ರವೃತ್ತಿಯು ಪ್ರಯೋಜನ ಅಥವಾ ಯಾವುದೇ ಉದ್ದೇಶವಿಲ್ಲದೆ ಆಗುವುದು ಕಂಡಿಲ್ಲ. ಈ ಸೃಷ್ಟ್ಯಾದಿ ವ್ಯಾಪಾರವು ಜ್ಞಾನಿಯ ಪ್ರವೃತ್ತಿಯೇ ಆದ್ದರಿಂದ ಪ್ರಯೋಜನ ಉದ್ದೇಶಗಳು ಇರಬೇಕಾಗುತ್ತವೆ. ಹೀಗೆ ಬರುವ ಆಶಂಕೆಯನ್ನು 'ಅಂಗಚೇಷ್ಟಾ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಅಂಗಚೇಷ್ಟಾ ಯಥಾ ಪುಂಸಃ ಕಾಶ್ಚಿದುದ್ದೇಶವರ್ಜಿತಾಃ ।

ದೇವಸ್ಯೈಷ ಸ್ವಭಾವೋಽಯಮಿತ್ಯಾಹ ಶ್ರುತಿರಂಜಸಾ ।।೧೦೫।।

ಪ್ರವಚನಾದಿಗಳನ್ನು ಮಾಡುವ ಸಮಯದಲ್ಲಿ ಉದ್ದೇಶವಿಲ್ಲದಿದ್ದರೂ ಹೇಗೆ ಪುರುಷನ ಅಂಗಚೇಷ್ಟಾದಿ ಪ್ರವೃತ್ತಿಯು ಕಂಡುಬರುವುದೋ ಹಾಗೆಯೇ ಈಶ್ವರನ ಪ್ರವೃತ್ತಿಯು. ಇದಕ್ಕೆ ಪ್ರಮಾಣವನ್ನು ಹೇಳುತ್ತಾರೆ – 'ದೇವಸ್ಯೈಷ ಸ್ವಭಾವೋಽಯಮಾಪ್ತಕಾಮಸ್ಯ ಕಾ ಸ್ಪೃಹಾ' ಎನ್ನುವ ಶ್ರುತಿಯು ಚೆನ್ನಾಗಿಯೇ ಈ ಅರ್ಥವನ್ನು ಹೇಳುತ್ತದೆ. ಅಂದರೆ, ಶ್ರೀಹರಿಯ ಈ ಸೃಷ್ಟ್ಯಾದಿ ವಿಷಯಕವಾದ ಇಚ್ಛಾಪೂರ್ವಕ ಪ್ರವೃತ್ತಿಯು ಸ್ವಭಾವವೇ ಆದುದರಿಂದ ಆಪ್ತಕಾಮನಾದ ಶ್ರೀಹರಿಗೆ ಯಾವ ಪ್ರಯೋಜನದ ಆವಶ್ಯಕತೆಯೇ ಇರುವುದಿಲ್ಲವಾದ್ದರಿಂದ, ಪ್ರಯೋಜನದ ಇಚ್ಛೆಯಾದರೂ ಏಕಿರುವುದು?

ಇನ್ನು ಪರಿಪೂರ್ಣನಾದ ಪರಬ್ರಹ್ಮನಿಗೂ ತನ್ನ ಸಂಕಲ್ಪಮಾತ್ರದಿಂದಲೇ ಉಂಟಾಗುವ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಾದಿಗಳಿಗೆ ಲೀಲೆಯೇ ಒಂದು ಪ್ರಯೋಜನವು ಎಂದು ರಾಮಾನುಜೀಯರು ವ್ಯಾಖ್ಯಾನ ಮಾಡುತ್ತಾರೆ. ಅವರ ವ್ಯಾಖ್ಯಾನವನ್ನು 'ಕ್ರೀಡಾ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಕ್ರೀಡಾಂ ಪ್ರಯೋಜನಂ ಕೃತ್ವಾ ಸೃಷ್ಟಿಃ ಶ್ರುತಿವಿರೋಧಿನೀ ।

ಇತಿ ಕೇವಲಲೀಲೈವ ನಿರ್ಣೀತಾ ಪ್ರಭುಣಾ ಸ್ವಯಮ್ ॥೧೦೬॥

ಕ್ರೀಡೆಯನ್ನು ಪ್ರಯೋಜನವನ್ನಾಗಿವುಳ್ಳ ಸೃಷ್ಟಿಯು ಶ್ರುತಿವಿರೋಧಿಯಾಗಿದೆ. ದೇವಸ್ಯೈಷ ಸ್ವಭಾವೋಽಯಂ ಆಪ್ತಕಾಮಸ್ಯ ಕಾ ಸ್ಪೃಹಾ ಎಂಬುದಾಗಿ ಸಯುಕ್ತಿಕವಾಗಿ ಪರಮಾತ್ಮನಿಗೆ ಪ್ರಯೋಜನ ಲೇಶವೂ ಇಲ್ಲವೆಂದು ಶ್ರುತಿಯಿಂದ ಸಿದ್ಧಾಂತ ಮಾಡಲ್ಪಟ್ಟಿದೆ. ಆದುದರಿಂದ ಅವರ ವ್ಯಾಖ್ಯಾನವು ಅಯುಕ್ತವೇ ಆಗುವುದು. ಸೂತ್ರಕಾರರಾದ ಭಗವಾನ್ ವೇದವ್ಯಾಸರಿಂದ ಶ್ರುತ್ಯನುಸಾರಿಯಾದ ಕೇವಲ ಲೀಲೆಯೇ ಸೃಷ್ಟ್ಯಾದಿ ಪ್ರವೃತ್ತಿಯೆಂದು ಸ್ಪಷ್ಟವಾಗಿ ನಿರ್ಣಯಿಸಲ್ಪಟ್ಟಿದೆ. ಕ್ರೀಡೆಯೆಂಬ ಪ್ರಯೋಜನಕ್ಕಾಗಿ ಎಂಬುದು ಸೂತ್ರಕಾರರ ಅಭಿಪ್ರಾಯವಾಗಿದ್ದರೆ ಈ ಸೂತ್ರದಲ್ಲಿ 'ಲೀಲಾರ್ಥಂ' ಎಂದು ಹೇಳಬೇಕಿತ್ತು. ಹಾಗೆ ಹೇಳಿಲ್ಲ. 'ಲೀಲಾಕೈವಲ್ಯಂ' ಕೇವಲ ಕ್ರೀಡೆಯೇ ಎಂದು ಹೇಳಲ್ಪಟ್ಟಿದೆ.

ಯಾವುದೇ ವಿಷಯದಲ್ಲಿ ಪ್ರವೃತ್ತಿ ಹುಟ್ಟಲಿಕ್ಕೆ ತನಗಾಗಲೀ ಪರರಿಗಾಗಲೀ ಆದರಿಂದ ಪ್ರಯೋಜನವು ಅವಶ್ಯವಾಗಿ ಇರಬೇಕು. ಇಲ್ಲದಿದ್ದರೆ ಪ್ರವೃತ್ತಿಯೇ ಕೂಡುವುದಿಲ್ಲ. ಆದರೆ ಈಶ್ವರನ ಪ್ರವೃತ್ತಿಯಲ್ಲಿ ಯಾವುದೇ ರೀತಿಯ ಪ್ರಯೋಜನವಿರುವುದಿಲ್ಲ. ಸೂತ್ರಕಾರರು 'ನ ಪ್ರಯೋಜನವತ್ತ್ವಾತ್' ಎಂಬ ಸೂತ್ರದಿಂದ ಇದನ್ನು ಸ್ಪಷ್ಟಪಡಿಸಿದ್ದಾರೆ. 'ಆಪ್ತಕಾಮಸ್ಯ ಕಾ ಸ್ಪೃಹಾ' ಎಂಬುದಾಗಿ ಶ್ರುತಿಯೂ ಇದನ್ನೇ ಹೇಳುತ್ತದೆ. ಆದ್ದರಿಂದ ಈಶ್ವರನಿಗೆ ಸೃಷ್ಟ್ಯಾದಿಗಳಲ್ಲಿ ಪ್ರವೃತ್ತಿಯೇ ಕೂಡುವುದಿಲ್ಲ ಎಂದರೆ –

ಆತ್ಮಪ್ರಯೋಜನಾರ್ಥಾಯ ಸ್ಪೃಹಾಂ ಶ್ರುತಿರವಾರಯತ್ ।

ನ ಪ್ರಯೋಜನವತ್ತ್ವೇನೇತ್ಯತ ಆಹ ಜಗದ್ಗುರುಃ ॥೧೦೭॥

'ಆತ್ಮಕಾಮಸ್ಯ ಕಾ ಸ್ಪೃಹಾ' ಎನ್ನುವ ಶ್ರುತಿಯೂ ಹಾಗೂ 'ನ ಪ್ರಯೋಜನವತ್ತ್ವಾತ್' ಎಂದು ಸೂತ್ರಕಾರರೂ, ಈಶ್ವರನಲ್ಲಿ ಸ್ವಪ್ರಯೋಜನಕ್ಕಾಗಿ ಸೃಷ್ಟ್ಯಾದಿ ಇಚ್ಛೆಯನ್ನು ನಿರಾಕರಿಸಿರುತ್ತಾರೆ. ಆದರೆ ಪರರಿಗೆ ಪ್ರಯೋಜನಕ್ಕೋಸ್ಕರ ಎಂಬುದು ಶ್ರುತಿಯಿಂದಲೂ ಸೂತ್ರಕಾರರಿಂದಲೂ ಅಂಗೀಕೃತವೇ ಆಗಿದೆ. ಈಶ್ವರನು ಸೃಷ್ಟ್ಯಾದಿಗಳನ್ನು ಮಾಡುತ್ತಾನೆ ಎಂಬುದು ಪ್ರಮಾಣಸಿದ್ಧ. ಸ್ವಪ್ರಯೋಜನವಿಲ್ಲವೆಂದಮೇಲೆ ಪರಪ್ರಯೋಜನದ ಉದ್ದೇಶವಿದೆ ಎಂಬುದು ಸ್ಪಷ್ಟ. ಇದನ್ನೇ ಸೂತ್ರಕಾರರು 'ನ' ಎನ್ನುವುದರಿಂದ ಸ್ವಪ್ರಯೋಜನವಿಲ್ಲವೆಂದು ತಿಳಿಸಿ, ಪರಪ್ರಯೋಜನಕ್ಕಾಗಿ ಪರಮಾತ್ಮನ ಪ್ರವೃತ್ತಿ ಎಂಬುದನ್ನು 'ಪ್ರಯೋಜನವತ್ತ್ವಾತ್' ಎನ್ನುವುದರಿಂದ ಸ್ಪಷ್ಟಪಡಿಸಿದ್ದಾರೆ.

ಹಾಗಾದರೆ 'ಕಾ ಸ್ಪೃಹಾ' ಎನ್ನುವ ಶ್ರುತಿಯು ಈಶ್ವರನಿಗೆ ಪ್ರಯೋಜನದ ಇಚ್ಛೆಯನ್ನಷ್ಟೇ ನಿಷೇಧಿಸಲು ಹೊರಟಿಲ್ಲ. ಆದರೆ ಇಚ್ಛಾರೂಪವಾದ ಗುಣವನ್ನೇ ನಿಷೇಧಿಸುತ್ತದೆ ಎಂದು ಕೆಲವರ ವ್ಯಾಖ್ಯಾನ. ಅದನ್ನು 'ಇಚ್ಛಾಮಾತ್ರಂ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿರಿತಿ ಸೃಷ್ಟೌ ವಿನಿಶ್ಚಿತಾಃ।

ಇತಿ ಪ್ರಶಂಸಯಾ ಕಾಮಶ್ರುತಿಭ್ಯಶ್ಚೈವ ಯುಕ್ತಿತಃ ॥೧೦೮॥

ಮಹಾತಾತ್ಪರ್ಯಯುಕ್ತೇಶ್ಚ ನೇಚ್ಛಾಮಾತ್ರಂ ನಿಷಿಧ್ಯತೇ।

'ಕಾ ಸ್ಪೃಹಾ' ಎನ್ನುವ ಶ್ರುತಿಯು ಈಶ್ವರನಿಗೆ ಇಚ್ಛೆಯೇ ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಈಶ್ವರನಿಗೆ ಇಚ್ಛೆಯಿದೆಯೆಂಬುದು ಪ್ರಮಾಣ ಸಿದ್ಧವು. ಸೃಷ್ಟಿಯ ವಿಷಯದಲ್ಲಿ ವಿಶಿಷ್ಟವಾದ ನಿಶ್ಚಿತ ಬುದ್ಧಿಯುಳ್ಳವರು ಶ್ರೀಹರಿಯ ಸೃಷ್ಟಿಯು ಕೇವಲ ಅವನ ಇಚ್ಛೆಗೆ ಒಳಪಟ್ಟಿರುವುದು ಎಂದು ತಿಳಿಯುತ್ತಾರೆ. ಹೀಗೆ ತಿಳಿದವರನ್ನು ವಿನಿಶ್ಚಿತರು ಎಂದು ಪ್ರಶಂಸೆ ಮಾಡಿರುವುದರಿಂದಲೂ, 'ಕಾಮ-ಸ್ತದಗ್ರೇ ಸಮವರ್ತತಾಧಿ' 'ಸೋಽಕಾಮಯತ' ಇತ್ಯಾದಿ ಕಾಮಪ್ರತಿಪಾದಕ ಶ್ರುತಿಗಳಿರುವುದರಿಂದಲೂ ಹಾಗೂ 'ಈಶ್ವರಃ ಇಚ್ಛಾವಾನ್ ಆತ್ಮತ್ವಾತ್ ಯಜ್ಞದತ್ತ ವತ್' ಇತ್ಯಾದಿ ಯುಕ್ತಿಯಿಂದಲೂ ಶ್ರೀಹರಿಗೆ ಇಚ್ಛೆಯಿದೆಯೆಂಬುದು ಸಿದ್ಧವು. ಮಹಾತಾತ್ಪರ್ಯರೂಪ ಯುಕ್ತಿಯೂ ಇರುವುದು. ಈಶ್ವರನಲ್ಲಿ, ಇಚ್ಛೆಯಿಲ್ಲದ ಪಕ್ಷದಲ್ಲಿ, ಸರ್ವವೇದಗಳ ಮಹಾತಾತ್ಪರ್ಯವು ಇಲ್ಲದಂತಾಗುವುದು ಎಂಬ ಬಾಧಕವಿದೆ. ಆದಪ್ರಯುಕ್ತ ಈಶ್ವರನಿಗೆ ಇಚ್ಛೆಯಿಲ್ಲವೆನ್ನುವುದು ನಿಷೇಧಿಸಲ್ಪಡುತ್ತದೆ.

ಹಾಗಾದರೆ ಮಹಾತಾತ್ಪರ್ಯರೂಪ ಯುಕ್ತಿಯಿರುವುದರಿಂದ ಎಂದು ಹೇಳಿದುದು ಅಯುಕ್ತವು. ಹೇಗೆಂದರೆ ಈಶ್ವರನು ಇಚ್ಛೆಯುಳ್ಳವನಾಗಿರದಿದ್ದರೆ ಆಗ ಶ್ರುತಿಯ ಮಹಾತಾತ್ಪರ್ಯಕ್ಕೆ ವಿಷಯನಾಗಲಾರನು ಎನ್ನುವಲ್ಲಿ ವ್ಯಾಪ್ತಿಯು ಇರುವುದಿಲ್ಲ. ಏಕೆಂದರೆ ಧರ್ಮಾದಿಗಳಿಗೆ ಇಚ್ಛೆಯಿಲ್ಲದಿದ್ದರೂ ಅವುಗಳಿಗೆ ಆವಾವ ಶಾಸ್ತ್ರಗಳ ಮಹಾತಾತ್ಪರ್ಯ ವಿಷಯತ್ವವು ಕಂಡಿರುತ್ತದೆ. ಹೀಗೆ ಆಶಂಕಿಸಿದರೆ –

ಮೋಕ್ಷಾರ್ಥಾಃ ಶ್ರುತಯೋ ಯಸ್ಮಾತ್ಸ ಚ ತಸ್ಯ ಪ್ರಸಾದತಃ ।।೧೦೯।।

ಉನ್ನಿನೀಷತಿ ವಾಕ್ಯಾಚ್ಚ ಲೋಕದೃಷ್ಟಾನುಸಾರತಃ।

ಎಲ್ಲ ಶ್ರುತಿಗಳೂ ಮೋಕ್ಷವನ್ನೇ ಪ್ರಯೋಜನವನ್ನಾಗಿ ಹೊಂದಿವೆ. ಆ ಮೋಕ್ಷವಾದರೂ ಪರಮೇಶ್ವರನ ಪ್ರಸಾದದಿಂದಲೇ ಸಾಧ್ಯ. ಆ ಪ್ರಸಾದಕ್ಕಾದರೂ ಈಶ್ವರನ ಇಚ್ಛೆಯೇ ನಿಮಿತ್ತಕಾರಣವು. ಆದ್ದರಿಂದ ಆ ಪರಮೇಶ್ವರನಿಗೆ ಇಚ್ಛೆಯನ್ನು ಅಂಗೀಕರಿಸಬೇಕು. ಹಾಗಿಲ್ಲದಿದ್ದ ಪಕ್ಷದಲ್ಲಿ ಪರಮಾತ್ಮನ ಪ್ರಸಾದವಾಗಲೀ, ಮೋಕ್ಷವಾಗಲೀ ಸಾಧ್ಯವಿಲ್ಲ. ಈಶ್ವರನ ಜ್ಞಾನದಿಂದಲೇ ಮೋಕ್ಷವು ಲಭಿಸುವುದರಿಂದ ಇಚ್ಛೆಯಾಗಲೀ ಪ್ರಸಾದವಾಗಲೀ ಬೇಕಿಲ್ಲ ಎಂದು ಆಶಂಕಿಸಿದರೆ 'ಲೋಕದೃಷ್ಟಾನುಸಾರತಃ' ಎಂಬುದೇ ಆಶಂಕೆಗೆ ಪರಿಹಾರ. 'ವಿಮತೋ ಬಂಧ ಮೋಕ್ಷಃ ಪ್ರಭುಪ್ರಸಾದಸಾಧ್ಯೋ ಮೋಕ್ಷತ್ವಾತ್ ಶೃಂಖಲಾಮೋಕ್ಷವತ್' ಅಂದರೆ, ವಿಮತವಾದ ಮೋಕ್ಷವು ಈಶ್ವರನ ಪ್ರಸಾದದಿಂದ ಸಾಧ್ಯವಾದುದು ಮೋಕ್ಷವಾದ ಕಾರಣದಿಂದ. ಇದಕ್ಕೆ ಶೃಂಖಲಾ ಮೋಕ್ಷವೇ (ಬೇಡಿಯ ಕಳಚುವಿಕೆ) ದೃಷ್ಟಾಂತವು. ಇವೇ ಮೊದಲಾದ ಲೋಕದಲ್ಲಿ ದೃಷ್ಟವಾದ ವ್ಯಾಪ್ತಿಯಿಂದ ಕೂಡಿದ ಅನುಮಾನಕ್ಕೆ ಅನುಸಾರವಾಗಿ ಎಂದರ್ಥ. ಈ ರೀತಿಯ ಅನುಮಾನದಿಂದ ಮಾತ್ರವಲ್ಲ, ಆಗಮದಿಂದಲೂ ಎಂಬುದನ್ನು 'ಉನ್ನಿನೀಷತೇ' ಇತ್ಯಾದಿ ವಚನದಿಂದ ಹೇಳುತ್ತಾರೆ. 'ಏಷ ಹ್ಯೇವ ಸಾಧುಕರ್ಮ ಕಾರಯತಿ। ತಂ ಯಮೇಭ್ಯೋ ಲೋಕೇಭ್ಯಃ ಉನ್ನಿನೀಷತೇ' 'ತದಿಚ್ಛಯಾ ಯತೋ ಹ್ಯಸ್ಯ ಬಂದಮೋಕ್ಷೌ ಪ್ರತಿಷ್ಠಿತೌ' ಅಂದರೆ, 'ಈ ಪರಮೇಶ್ವರನೇ ಯಾರನ್ನು ಈ ಲೋಕಗಳಿಂದ ಊರ್ಧ್ವಲೋಕಗಳಿಗೆ ಕಳುಹಿಸಬೇಕೆಂದು ಇಚ್ಛಿಸುತ್ತಾನೋ, ಅವನಿಂದ ಯಥಾರ್ಥ ಜ್ಞಾನಕ್ಕೆ ಸಾಧನವಾದ ಉತ್ತಮ ಕರ್ಮಗಳನ್ನು ಮಾಡಿಸುತ್ತಾನೆ' 'ಅವನ ಇಚ್ಛೆಯಿಂದಲೇ ಜೀವನ ಬಂಧಮೋಕ್ಷಗಳು ಪ್ರತಿಷ್ಠಿತವಾಗಿವೆ' ಇತ್ಯಾದಿ ಆಗಮ ವಾಕ್ಯಗಳಿಂದಲೂ ಈಶ್ವರನ ಪ್ರಸಾದದಿಂದಲೇ ಮೋಕ್ಷವು ಎಂದು ಸಿದ್ಧವಾಗುತ್ತದೆ.

ಇಚ್ಛಾನಿಮಿತ್ತಕೋ ಯಸ್ಮಾತ್ತದಭಾವೇ ಕುತಃ ಶ್ರುತಿಃ ।।೧೧೦।।

ಮಹಾತಾತ್ಪರ್ಯರಹಿತಾ ಪ್ರಮಾಣತ್ವಂ ಗಮಿಷ್ಯತಿ।

ಪರಮಾತ್ಮನ ಇಚ್ಛೆಯ ನಿಮಿತ್ತವಾಗಿಯೇ ಶ್ರುತಿಗಳು ಮೋಕ್ಷವನ್ನೇ

ಪ್ರಯೋಜನವನ್ನಾಗಿ ಹೊಂದಿವೆ. ಆ ಇಚ್ಛೆಯೇ ಇಲ್ಲದಿದ್ದರೆ ಮಹಾತಾತ್ಪರ್ಯ ರಹಿತವಾಗುವ ಶ್ರುತಿಯು ಹೇಗೆ ಪ್ರಾಮಾಣ್ಯವನ್ನು ಪಡೆಯುತ್ತದೆ? ಆದುದರಿಂದ ಪರಮಾತ್ಮನಿಗೆ ಇಚ್ಛೆಯಿದೆ ಎಂಬುದನ್ನು ಅವಶ್ಯವಾಗಿ ಅಂಗೀಕರಿಸತಕ್ಕದ್ದು.

ಇನ್ನು ಶ್ರುತಿಗಳಿಗೆ ಮೋಕ್ಷಾಖ್ಯ ಪ್ರಯೋಜನವಿರುವುದರಿಂದಲೇ ಪ್ರಾಮಾಣ್ಯವು ಎಂದು ಹೇಳುವುದು ಅಯುಕ್ತವು. ಏಕೆಂದರೆ ಯಾಥಾರ್ಥ್ಯವೇ ಪ್ರಾಮಾಣ್ಯದ ಲಕ್ಷಣವೆಂದು ಹೇಳಲ್ಪಟ್ಟಿದೆ. ಆದ್ದರಿಂದ ಫಲವತ್ವ ಎಂಬುದು ಪ್ರಾಮಾಣ್ಯ ನಿರ್ಧಾರಕವಾಗಲಾರದು. ತೃಣಾದಿಗಳ ದರ್ಶನದಿಂದ ಯಾವುದೇ ಪ್ರಯೋಜನವಿಲ್ಲ ಎಂದರೂ ಅದರಲ್ಲಿ ಪ್ರಾಮಾಣ್ಯವಿದೆ. ಹೀಗೆ ಆಶಂಕಿಸಿದರೆ –

ಯಾಥಾರ್ಥ್ಯಮೇವ ಮಾನತ್ವಮಪಿ ವಾಕ್ಯಂ ಪ್ರಯೋಜಕಮ್ ।।೧೧೧।।

ಮಾನತ್ವಮೇತಿ ತತ್ರಾಪಿ ಯತ್ಸಂಪೂರ್ಣಪ್ರಯೋಜನಮ್।

ಯಾಥಾರ್ಥ್ಯವೇ ಪ್ರಾಮಾಣ್ಯವು ಎಂಬುದು ಸತ್ಯವೇ. ಆದರೂ ಯಾವ ವಾಕ್ಯವು ಮಹಾಪ್ರಯೋಜನ, ಪ್ರಧಾನವಿಷಯಗಳನ್ನು ಹೊಂದಿರುವುದೋ ಅದು ಪ್ರಾಮಾಣ್ಯವನ್ನು ಹೊಂದುವುದು. ಅವಾಂತರ ವಿಷಯ ಪ್ರಯೋಜನಗಳಿಂದ ವಾಕ್ಯದ ಪ್ರಮಾಣ್ಯವು ಸಂಭವಿಸುವುದಿಲ್ಲ. ಅಂದರೆ, ಯಾವ ವಾಕ್ಯವು ಯಾವ ಮಹಾಪ್ರಯೋಜನವನ್ನು ಉದ್ದೇಶಿಸಿ ಯಾವ ಪ್ರಧಾನ ವಿಷಯವನ್ನು ಪ್ರತಿಪಾದಿಸಲು ಪ್ರವೃತ್ತವಾಗಿದೆಯೋ, ಆ ವಾಕ್ಯಕ್ಕೆ ಆ ವಿಷಯಪ್ರಯೋಜನ ಗಳಿಂದಲೇ ಯುಕ್ತವಾದ ಪ್ರಾಮಾಣ್ಯವನ್ನು ಹೊಂದುತ್ತದೆ. ಇಲ್ಲವಾದರೆ ಅವಾಂತರ ಪ್ರಯೋಜನಾದಿಗಳೂ ಸಿದ್ಧಿಸಲಾರವು. ವೇದವಾಕ್ಯವಾದರೋ ಮೋಕ್ಷವನ್ನು ಉದ್ದೇಶಿಸಿ ಪರಮೇಶ್ವರನಲ್ಲಿ ಮಹಾತಾತ್ಪರ್ಯವುಳ್ಳದ್ದಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಆ ಪರಮೇಶ್ವರನ ವಿಷಯಕ ಜ್ಞಾನ ಹಾಗೂ ಅದರಿಂದ ಮೋಕ್ಷವೆಂಬ ವಿಷಯ ಪ್ರಯೋಜನಗಳಿಂದಲೇ ಪ್ರಾಮಾಣ್ಯವು ಎಂದು ತಾತ್ಪರ್ಯ.

ವೈಷಮ್ಯನೈರ್ಘೃಣ್ಯಾಧಿಕರಣಮ್

ಓಂ ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ತಥಾ ಹಿ ದರ್ಶಯತಿ ಓಂ

ಪ್ರಾಣಿಗಳಿಗೆ ವಿವಿಧವಾದ ದೇಹೇಂದ್ರಿಯಗಳನ್ನೂ, ವಿಷಯಗಳನ್ನೂ ಹೊಂದಿಸುವ ಈಶ್ವರನು, ಅವುಗಳಿಂದ ಧರ್ಮ ಹಾಗೂ ಅಧರ್ಮ ರೂಪವಾದ ಕರ್ಮಗಳನ್ನು ಮಾಡಿಸಿ ಸುಖ ಹಾಗೂ ದುಃಖ ರೂಪವಾದ ಫಲಗಳನ್ನು ನೀಡುತ್ತಾನೆ ಎಂಬುದು ಪ್ರಮಾಣಗಳಿಂದ ಸಿದ್ಧವಾಗಿದೆ. ಜೀವರ ಕರ್ಮವನ್ನು ಅಪೇಕ್ಷಿಸಿ ಫಲವನ್ನು ನೀಡುವುದಾದರೆ ಈಶ್ವರನ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವುದು. ಕರ್ಮವನ್ನು ಅಪೇಕ್ಷಿಸದೇ ಫಲವನ್ನು ನೀಡುತ್ತಾನೆ ಎಂದರೆ ನಿಷ್ಕಾರಣವಾಗಿ ಕೆಲವರಿಗೆ ಸುಖವನ್ನೂ ಕೆಲವರಿಗೆ ದುಃಖವನ್ನೂ ಕೊಡುವುದರಿಂದ

ವಿಷಮನಾಗುವನು. ಕಾರಣವಿಲ್ಲದೇ ದುಃಖವನ್ನು ನೀಡಿದರೆ ಅವನು ನಿಷ್ಕರುಣಿ ಎನಿಸುವನು. ಹೀಗೆ ಈಶ್ವರನಿಗೆ ನಮ್ಮಂತೆ ವೈಷಮ್ಯ ಮತ್ತು ನೈರ್ಘೃಣ್ಯಗಳು ಕಂಡುಬರುವುದರಿಂದ ಸರ್ವಕರ್ತೃತ್ವವು ಕೂಡುವುದಿಲ್ಲ. ಹೀಗೆ ಬರುವ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ನಿರಾಕರಿಸಲಾಗುತ್ತದೆ. ಅದರಲ್ಲಿ ಮೊದಲನೆಯ ಸೂತ್ರದಿಂದ ಈಶ್ವರನಿಗೆ ಕರ್ಮಾದಿ ಸಾಪೇಕ್ಷವಾದ ಕರ್ತೃತ್ವವನ್ನು ಅಂಗೀಕರಿಸಿ, ವೈಷಮ್ಯ ನೈರ್ಘೃಣ್ಯಗಳು ಪರಿಹರಿಸಲ್ಪಟ್ಟಿವೆ. 'ಪುಣ್ಯೇನ ಪುಣ್ಯಂ ಲೋಕಂ ನಯತಿ, ಪಾಪೇನ ಪಾಪಂ' ಎನ್ನುವ ಶ್ರುತಿಯು ವಿಷಮವಾದ ಕರ್ಮದಿಂದ ವಿಷಮವಾದ ಫಲವೆಂದು ಹೇಳುವುದರಿಂದ ಈಶ್ವರನಿಗೆ ಯಾವ ದೋಷವೂ ಬರುವುದಿಲ್ಲ. ಕಾರಣವಿಲ್ಲದೆ ವಿಷಮ ಫಲಕ್ಕೆ ಕಾರಣವಾಗುವ ಕರ್ಮಗಳನ್ನಾದರೂ ಏಕೆ ಮಾಡಿಸಬೇಕು? ಹೀಗೆ ಮಾಡುವುದು ನಿಷ್ಕಾರುಣ್ಯವಲ್ಲವೇ? ಎಂದು ಆಕ್ಷೇಪಿಸಿದರೆ –

'ನ ಕರ್ಮವಿಭಾಗಾದಿತಿ ಚೇನ್ನಾನಾದಿತ್ವಾತ್' ಎನ್ನುವ ಸೂತ್ರದಿಂದ ಕರ್ಮಾದಿಗಳಿಗೆ ಅನಾದಿತ್ವವು ಹೇಳಲ್ಪಟ್ಟಿತು. ವೈಷಮ್ಯಾದಿಗಳು ಇಲ್ಲದಿದ್ದರೂ, ಕರ್ಮವನ್ನು ಅಪೇಕ್ಷಿಸಿಯೇ ಫಲ ನೀಡುವವನಿಗೆ ಸ್ವಾತಂತ್ರ್ಯ ಬರಲಾರದು ಎಂದು ಆಶಂಕಿಸಿದರೆ – ಅದಕ್ಕೆ ಉತ್ತರವಾಗಿ 'ಉಪಪದ್ಯತೇ ಚ' ಎನ್ನುವ ಸೂತ್ರವು ಹೊರಟಿತು. ಕರ್ಮಾದಿಗಳ ಅಸ್ತಿತ್ವ ಮುಂತಾದವೂ ಕೂಡ ಈಶ್ವರನ ಅಧೀನವೆಂದು ಆರಂಭಣಾಧಿಕರಣದಲ್ಲಿ ಸಮರ್ಥಿಸಲಾಗಿದೆ. ತನ್ನ ಅಧೀನದಲ್ಲಿರುವ ಸತ್ತಾದಿಗಳನ್ನು ಅಪೇಕ್ಷಿಸಿದರೆ ಸ್ವಾತಂತ್ರ್ಯಕ್ಕೆ ಚ್ಯುತಿಯಿರುವುದಿಲ್ಲ. ಹಾಗಿದ್ದರೂ ವೈಷಮ್ಯಾದಿ ದೋಷಗಳು ಬರಬೇಕಾಗುತ್ತವೆ ಎಂದು ಆಕ್ಷೇಪಿಸಿದರೆ – ಅದಕ್ಕೆ ಉತ್ತರವಾಗಿ 'ಉಪಲಭ್ಯತೇ ಚ' ಎಂದು ಹೇಳಿದ್ದಾರೆ. ಅಂದರೆ, ಇಂಥಹ ವೈಷಮ್ಯಾದಿಗಳು ಪರಮಾತ್ಮನಲ್ಲಿ ಯಾವುದೇ ದೋಷವಿಲ್ಲದೆ ಕೂಡುತ್ತವೆ. 'ಸ ಕಾರಯೇತ್ಪುಣ್ಯ–ಮಥಾಽಪಿ ಪಾಪಂ ನ ತಾವತಾ ದೋಷವಾನೀಶಿತಾಪಿ' ಇತ್ಯಾದಿ ಪ್ರಮಾಣಗಳಿಂದ ಇದು ಸಿದ್ಧವಾಗಿದೆ. ಆದಕಾರಣ ಇದು ಅನಿಷ್ಟವಲ್ಲ ಎಂದರೆ – ಇದು ಅಯುಕ್ತ ಎಂದು ಪೂರ್ವಪಕ್ಷ. ಏಕೆಂದರೆ ವೈಷಮ್ಯ ನೈರ್ಘೃಣ್ಯಗಳು ನಿಜವಾಗಿಯೂ ದೂಷಣಗಳೋ ಅಲ್ಲವೋ ಎಂದು ಪ್ರಶ್ನೆ. ದೂಷಣವಾಗಿದ್ದರೆ ಕೊನೆಯಲ್ಲಾದರೂ ಅದನ್ನು ಒಪ್ಪುವುದು ಹೇಗೆ? ದೂಷಣವಲ್ಲವೆಂದು ಹೇಳಿದರೆ ಅದನ್ನು ಮೊದಲೇ ಅಂಗೀಕರಿಸಬಹುದಲ್ಲ? ಮೊದಲು ಕರ್ಮಸಾಪೇಕ್ಷತೆಯನ್ನು ಒಪ್ಪಿ, ಅನಂತರ ಅದರಲ್ಲಿನ ದೋಷಗಳನ್ನು ಪರಿಹರಿಸುವ ಕ್ಲೇಷವಾದರೂ ಏಕೆ ಎಂದರೆ –

ವೈಷಮ್ಯಂ ಚೈವ ನೈರ್ಘೃಣ್ಯಂ ವೇದಾಪ್ರಾಮಾಣ್ಯಕಾರಣಮ್ ॥೧೧೨॥

ನಾಂಗೀಕಾರ್ಯಮತೋಽನ್ಯತ್ತು ನ ವೈಷಮ್ಯಾದಿನಾಮಕಮ್।

ವೇದಗಳ ಅಪ್ರಮಾಣ್ಯಕ್ಕೆ ಕಾರಣವಾಗುವ ವೈಷಮ್ಯ ನೈರ್ಘೃಣ್ಯಗಳನ್ನು

ಈಶ್ವರನಲ್ಲಿ ಅಂಗೀಕರಿಸಕೂಡದು. ಇಂಥಹ ವೈಷಮ್ಯಾದಿಗಳಿಂದ ಬೇರೆಯಾದುದು ವೈಷಮ್ಯಾದಿಗಳೇ ಅಲ್ಲ ಹಾಗೂ ದೂಷಣವಾಗುವುದೂ ಇಲ್ಲ.

ವಿವರಣೆ: ವೈಷಮ್ಯ ನೈರ್ಘೃಣ್ಯಗಳಲ್ಲಿ ಎರಡು ವಿಧ. ಕರ್ಮಾದಿಗಳನ್ನು ಅಪೇಕ್ಷಿಸದೇ ಬರುವಂಥಹದು ಒಂದು ವಿಧ. ಕರ್ಮಾದಿಗಳನ್ನು ಅಪೇಕ್ಷಿಸಿಯೂ ಅವುಗಳ ಅಸ್ತಿತ್ವ ಮುಂತಾದವು ಈಶ್ವರನ ಅಧೀನವಾದ್ದರಿಂದ ಬರುವಂಥಹದು ಇನ್ನೊಂದು ವಿಧ. ಇವುಗಳಲ್ಲಿ ಮೊದಲನೆಯದು ವೇದಗಳ ಅಪ್ರಾಮಾಣ್ಯಕ್ಕೆ ಕಾರಣವಾಗುವುದರಿಂದ ಈಶ್ವರನಲ್ಲಿ ಇಂಥಹ ವೈಷಮ್ಯವನ್ನು ಅಂಗೀಕರಿಸುವುದು ಉಚಿತವಲ್ಲ. ಕರ್ಮಾದಿಗಳ ಸತ್ತಾದಿಗಳಿಗೂ ಈಶ್ವರಾಧೀನತ್ವವಿದ್ದ ಪ್ರಯುಕ್ತ ಕರ್ಮಾದಿ ಸಾಪೇಕ್ಷತ್ವ ರೂಪ ವೈಷಮ್ಯ ನೈರ್ಘೃಣ್ಯಗಳೂ ಕೂಡ ವೈಷಮ್ಯಾದಿ ನಾಮವುಳ್ಳದ್ದಲ್ಲ. ಆದ್ದರಿಂದ ಅವು ದೂಷಣವೇ ಆಗುವುದಿಲ್ಲ. ವೈಷಮ್ಯಾದಿಗಳು ಸ್ವರೂಪತಃ ದೋಷಗಳೇ ಅಲ್ಲ. ಆದರೆ ದೋಷದ ಕಾರಣಗಳಾದುದರಿಂದ ದೋಷವೆನಿಸುತ್ತವೆ. ಪರಾಧೀನರಾದ ಜೀವರಲ್ಲಿ ದೋಷಕ್ಕೆ ಕಾರಣವಾಗುವ ಇವು ಸ್ವತಂತ್ರನಾದ ಪರಮಾತ್ಮನ ವಿಷಯದಲ್ಲಿ ದೋಷಕ್ಕೆ ಕಾರಣವಾಗುವುದೇ ಇಲ್ಲ.

ಸರ್ವಧರ್ಮೋಪಪತ್ತ್ಯಧಿಕರಣಮ್

ಸೂತ್ರ: ಓಂ ಸರ್ವಧರ್ಮೋಪಪತ್ತೇಶ್ಚ ಓಂ

ಸೂತ್ರಾರ್ಥ: ಈಶ್ವರನಲ್ಲಿ ಜ್ಞಾನ ಆನಂದ ಮುಂತಾದ ಎಲ್ಲ ಸದ್ಗುಣಗಳಿಗೂ, ದುಃಖ ಮುಂತಾದ ದೋಷಾಭಾವಗಳಿಗೂ ಉಪಪತ್ತಿಯಿರುವುದರಿಂದ ಈಶ್ವರನು ಸಮಸ್ತ ಕಲ್ಯಾಣಗುಣಗಳಿಂದ ಪೂರ್ಣನೆಂದೂ ಸಮಸ್ತ ದೋಷದೂರನೆಂದೂ ಸಿದ್ಧವಾಗುವುದು.

ಎಲ್ಲ ಚೇತನಗಳೂ ಅಪೂರ್ಣವಾದ ಗುಣ ಹಾಗೂ ದೋಷಗಳಿಂದ ಕೂಡಿರುವುದಾಗಿ ಕಂಡಿದೆ. ಅದೇ ರೀತಿ ಚೇತನತ್ವವಿರುವುದರಿಂದ ಈಶ್ವರನೂ ಅಪೂರ್ಣಗುಣವುಳ್ಳವನೂ ದೋಷಿಯೂ ಆಗಲಿ ಎಂಬ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ನಿರಾಕರಿಸುತ್ತಾರೆ. ಇದನ್ನು ಭಾಷ್ಯದಲ್ಲಿ ಶ್ರುತಿಯನ್ನು ಉದಾಹರಿಸುವ ಮೂಲಕ ನಿರಾಕರಿಸಿದ್ದಾರೆ. ಅದನ್ನೇ ಯುಕ್ತಿಯಿಂದ ಇಲ್ಲಿ ಸ್ಪಷ್ಟಪಡಿಸುತ್ತಾರೆ –

ಯದಧೀನತಾ ಗುಣಾಶ್ಚೈವ ದೋಷಾ ಅಪಿ ಹಿ ಸರ್ವಶಃ ||೧೧೩||

ಗುಣಾಸ್ತಸ್ಯ ಕಥಂ ನ ಸ್ಯುಃ ಸರ್ವದೋಷಾಶ್ಚ ಕಥಂ ಪುನಃ|

ಸಮಸ್ತಗಳಾದ ಗುಣಗಳೂ ದೋಷಗಳೂ ಕೂಡ ಶ್ರೀಹರಿಯ ಅಧೀನಗಳೇ ಎಂಬುದಾಗಿ ಶ್ರುತಿಗಳಿಂದ ಸಿದ್ಧವಾಗಿದೆ. ಆದ್ದರಿಂದ ಶ್ರೀಹರಿಗೆ ಜ್ಞಾನಾನಂದಾದಿ ಗುಣಗಳು ಇದ್ದೇ ಇರುತ್ತವೆ ಮತ್ತು ದೋಷಾದಿಗಳು ಇರುವುದೇ ಇಲ್ಲವು.

ಸರ್ವಧರ್ಮೋಪಪತ್ತೇಸ್ತದ್ವಾಕ್ಯೈರಪಿ ಹಿ ತಾದೃಶೈಃ ||೧೧೪||

ನಿರ್ದೋಷಾಶೇಷಗುಣಕೋ ನಿರ್ಣೀತೋ ಭಗವಾನ್ ಹರಿಃ|

ಸರ್ವಧರ್ಮ ಪ್ರತಿಪಾದಕ ಯುಕ್ತಿಯಿರುವುದರಿಂದಲೂ, ಗುಣಪೂರ್ಣತ್ವ ಹಾಗೂ ದೋಷದೂರತ್ವ ಪ್ರತಿಪಾದಕ ವಾಕ್ಯಗಳಿರುವುದರಿಂದಲೂ ಭಗವಾನ್ ಶ್ರೀಹರಿಯು ನಿರ್ದೋಷನೆಂದೂ ಸಮಸ್ತಗುಣಪೂರ್ಣನೆಂದೂ ಸಿದ್ಧವಾಗುವುದು. ಇಲ್ಲಿ 'ಹಿ' ಶಬ್ದವು 'ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾಃ ಅಪಿ ನೈವಾತ್ರ ಶಂಕಾ' ಇತ್ಯಾದಿ ಶ್ರುತಿ ವಾಕ್ಯವನ್ನು ಸೂಚಿಸುತ್ತದೆ.

ವಿವರಣೆ: ಈಶ್ವರನು ಸಕಲಗುಣಪರಿಪೂರ್ಣ ಹಾಗೂ ಸಮಸ್ತದೋಷದೂರ ಎಂಬುದನ್ನು ಮುಂದೆ ಹೇಳಿರುವ ಯುಕ್ತಿಗಳಿಂದ ತಿಳಿಯಬಹುದು. ನಮಗೆ ಬೇಕೆನಿಸಿದ ವಸ್ತುವು ದೊರೆಯದಿರಲು ಎರಡು ಕಾರಣಗಳಿವೆ. ಅದರಲ್ಲಿ ಸ್ವಾತಂತ್ರ್ಯವಿಲ್ಲದಿರುವುದು ಹಾಗೂ ಅದನ್ನು ಪಡೆಯುವ ಇಚ್ಛೆಯಿಲ್ಲದಿರುವುದು. ಅದೇರೀತಿಯಲ್ಲಿ ಎರಡು ಕಾರಣಗಳಿಂದ ವಸ್ತುವನ್ನು ಬಿಡಲಿಕ್ಕೆ ಆಗುವುದಿಲ್ಲ. ಬಿಡಲು ಸ್ವಾತಂತ್ರ್ಯವಗಲೀ ಇಚ್ಛೆಯಾಗಲೀ ಇಲ್ಲದಿರುವುದು. ಈಶ್ವರನಿಗಾದರೋ ಸರ್ವತ್ರ ಸ್ವಾತಂತ್ರ್ಯವು ಇರುತ್ತದೆ ಮತ್ತು ಸರ್ವದಾ ಆನಂದಾದಿ ಗುಣಗಳನ್ನು ಹೊಂದಿರಬೇಕೆಂಬ ಹಾಗೂ ದುಃಖಾದಿ ದೋಷಗಳು ಇರಬಾರದೆಂಬ ಇಚ್ಛೆಯೂ ಇರುತ್ತದೆ. ಏಕೆಂದರೆ ಅವನು ಸರ್ವಜ್ಞನಾಗಿದ್ದಾನೆ. ಆದ್ದರಿಂದ ಈಶ್ವರನಿಗೆ ಸಕಲಗುಣಪೂರ್ಣತ್ವವೂ ಸಮಸ್ತ ದೋಷದೂರತ್ವವೂ ಹೇಗೆ ಸಂಭವಿಸಲಾರದು? ಇಲ್ಲಿ ಈ ಯುಕ್ತಿಗಳಿವೆ. ಈಶ್ವರನು ಸಕಲಗುಣಪೂರ್ಣನೂ ಸಕಲದೋಷದೂರನೂ ಆಗಿರುವನು, ಸ್ವತಂತ್ರನಾದ ಪ್ರಯುಕ್ತ. ಈಶ್ವರನು ಪೂರ್ಣ ಗುಣವುಳ್ಳವನು, ಪೂರ್ಣ ಜ್ಞಾನವುಳ್ಳವನು, ಪೂರ್ಣ ಸುಖವುಳ್ಳವನು, ಅದರಲ್ಲಿ ಇಚ್ಛೆಯಿದ್ದು ಸ್ವತಂತ್ರನಾಗಿರುವ ಪ್ರಯುಕ್ತ. ಯಾವನು ಯಾವುದರಲ್ಲಿ ಇಚ್ಛೆಯುಳ್ಳವನಾಗಿದ್ದು ಸ್ವತಂತ್ರನಿರುತ್ತಾನೋ ಅವನು ಅದನ್ನುಳ್ಳವನು. ಈಶ್ವರನು ವಿವಾದಾಸ್ಪದವಾದ ದೋಷವುಳ್ಳವನಲ್ಲ, ಅದನ್ನು ಬಿಡುವ ಇಚ್ಛೆಯುಳ್ಳವನು ಹಾಗೂ ಸ್ವತಂತ್ರನಾಗಿರುವ ಪ್ರಯುಕ್ತ. ಈ ಪ್ರಕಾರವಾಗಿ ಸರ್ವಧರ್ಮಗಳ, ಅಂದರೆ ಎಲ್ಲ ಗುಣಗಳ ಹಾಗೂ ದೋಷಾಭಾವಗಳ ಪ್ರತಿಪಾದಕಯುಕ್ತಿಯಿರುವುದರಿಂದಲೂ, ಸಕಲಗುಣಪೂರ್ಣತ್ವ ಪ್ರತಿಪಾದಕವಾಕ್ಯಗಳು ಇರುವುದರಿಂದಲೂ ಭಗವಾನ್ ಶ್ರೀಹರಿಯು ನಿರ್ದೋಷಗಳಾದ ಅಶೇಷಗುಣಗಳಿಂದ ಕೂಡಿರುವನೆಂದು ಸಿದ್ಧವಾಗುವುದು.

|| ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ

ಶ್ರೀಮದನುವ್ಯಾಖ್ಯಾನೇ ದ್ವಿತೀಯಾಧ್ಯಾಯಸ್ಯ ಪ್ರಥಮಃ ಪಾದಃ ||

|| ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಮೊದಲನೆಯ ಪಾದದ ಕನ್ನಡ ಅನುವಾದವು ಮುಗಿದುದು ||

ಎರಡನೆಯ ಅಧ್ಯಾಯ
ಎರಡನೆಯ ಪಾದ

ಜಗಜ್ಜನ್ಮಾದಿ ಕಾರಣನೂ ಸಕಲಗುಣಪೂರ್ಣನೂ ಸಮಸ್ತದೋಷದೂರನೂ ಆದ ಪರಬ್ರಹ್ಮನಾದ ವಿಷ್ಣುವಿನಲ್ಲಿ ಎಲ್ಲ ಶ್ರುತಿಗಳಿಗೆ ಸಮನ್ವಯವನ್ನು ಮೊದಲನೆಯ ಅಧ್ಯಾಯದಲ್ಲಿ ಪ್ರತಿಪಾದಿಸಲಾಯಿತು. ಶ್ರುತಿಸಮನ್ವಯಕ್ಕೆ ಪರರಿಂದ ಮಾಡಲ್ಪಟ್ಟ ನಾಲ್ಕು ರೀತಿಯ ವಿರೋಧವನ್ನು ಮೊದಲನೆಯ ಪಾದದಲ್ಲಿ ಕ್ರಮದಿಂದ ನಿರಾಕರಿಸಿದರು. ಸಾಂಖ್ಯಾದಿ ಶಾಸ್ತ್ರಗಳ ವಿರೋಧವನ್ನು ಈ ಎರಡನೆಯ ಪಾದದಲ್ಲಿ ನಿರಾಕರಿಸುತ್ತಾರೆ.

ಸ್ಮೃತಿಯುಕ್ತಿಶ್ರುತಿಗುಣಯುಕ್ತಯೋ ಬಹುಯುಕ್ತಯಃ ।

ಏವಂ ಚತುರ್ವಿಧಾ ನೈವ ವಿರುದ್ಧ್ಯಂತೇಽನ್ವಯಂ ಪ್ರತಿ ॥೧॥

ಇತಿ ಪ್ರಥಮಪಾದೇನ ನಿರ್ಣೀತೇಽಪ್ಯಭಿಯೋಗತಃ ।

ದರ್ಶನಾನಾಂ ಪ್ರವೃತ್ತತ್ವಾನ್ಮಂದ ಆಶಂಕತೇ ಪುನಃ ॥೨॥

ಸ್ಮೃತಿ, ಯುಕ್ತಿ, ಶ್ರುತ್ಯುಪಸರ್ಜನ ಯುಕ್ತಿಗಳು, ಬಹುಯುಕ್ತಿಗಳು, ಹೀಗೆ ನಾಲ್ಕು ವಿಧವಾದ ವಿರೋಧಗಳು ಶ್ರುತಿಸಮನ್ವಯದಿಂದ ಸಿದ್ಧವಾದ ಅರ್ಥವನ್ನು ವ್ಯತ್ಯಸ್ತಗೊಳಿಸಲು ಸಮರ್ಥವಾಗುವುದಿಲ್ಲ. ಹೀಗೆ ಪ್ರಥಮಪಾದದಿಂದ ನಿರ್ಣಯಿಸಲ್ಪಟ್ಟಿದ್ದರೂ, ಸಾಂಖ್ಯಾದಿ ದರ್ಶನಗಳು ಆಗ್ರಹದಿಂದ ಪ್ರವೃತ್ತವಾದುದರಿಂದ, ಅಜ್ಞರಿಗೆ ಸಮನ್ವಯದ ವಿಷಯದಲ್ಲಿ ಪುನಃ ಶಂಕೆಯು ಬರುತ್ತದೆ.

ಇನ್ನು ಶ್ರುತಿಗಳಾದರೋ ಅಪೌರುಷೇಯವಾದ್ದರಿಂದ ಅವುಗಳಲ್ಲಿ ದೋಷ ಶಂಕೆಗೆ ಅವಕಾಶವಿಲ್ಲ. ಅವು ಪ್ರಬಲಯುಕ್ತಿಗಳಿಂದ ಉಪಪಾದಿತವಾದ ಅರ್ಥದಿಂದ ಕೂಡಿವೆ ಹಾಗೂ ಸಮಸ್ತ ಪ್ರತಿಪಕ್ಷಗಳ ನಿರಾಸೆಯಿಂದ ದೃಢೀಕರಿಸಲ್ಪಟ್ಟಿವೆ. ಹೀಗೆ ನಿಶ್ಚಿತವಾದ ಶ್ರುತಿಗಳಿಂದ ಸಮನ್ವಯವನ್ನು ಸಾಧಿಸಿದ ಮೇಲೆ ಸಾಂಖ್ಯಾದಿ ಶಾಸ್ತ್ರಗಳ ಆಗ್ರಹದಿಂದ ಪುನಃ ಶಂಕೆಯು ಬರುವುದು ಹೇಗೆ ಸಾಧ್ಯ? ಹೀಗೆ ಪ್ರಮಾಣದಿಂದ ನಿರ್ಣಯಿಸಲ್ಪಟ್ಟಿದ್ದರೂ ಸಂಶಯ ಬರುವುದಾದರೆ ಯಾವ ವಿಷಯದಲ್ಲಿಯೂ ಇದಮಿತ್ಥಂ ಎನ್ನುವ ನಿರ್ಣಯವಾಗುವುದೇ ಸಾಧ್ಯವಿಲ್ಲ. ಹೀಗೆ ಆಕ್ಷೇಪವು ಬಂದರೆ ಅದರ ನಿವಾರಣೆಗಾಗಿಯೇ 'ಮಂದಃ ಆಶಂಕತೇ' ಕೇವಲ ಅಜ್ಞನು ಹೀಗೆ ಶಂಕೆ

ಪಡುತ್ತಾನೆ ಎಂಬುದಾಗಿ ಹೇಳಿದ್ದಾರೆ ಎಂದರೆ ಅದು ಸಮಂಜಸವಾಗದು. ಏಕೆಂದರೆ ಕಾರಣವನ್ನು ಆಲೋಚಿಸದೆ ಶಂಕಿಸುವ ಪುರುಷನಿಗೆ ಶಾಸ್ತ್ರದಲ್ಲಿ ಅಧಿಕಾರವೇ ಇರುವುದಿಲ್ಲ. ಆದ್ದರಿಂದ 'ಆಗ್ರಹದಿಂದ ಸಾಂಖ್ಯಾದಿ ಶಾಸ್ತ್ರಗಳು ಪ್ರವೃತ್ತವಾಗಿವೆ' ಎಂದು ಹೇಳಿದ ಶಂಕಾಕಾರಣವನ್ನು 'ಅನಾದಿ' ಇತ್ಯಾದಿ ವಚನದಿಂದ ವಿವರಿಸುತ್ತಾರೆ –

ಅನಾದಿಕಾಲತೋ ವೃತ್ತಾಃ ಸಮಯಾ ಹಿ ಪ್ರವಾಹತಃ ।

ನ ಚೋಚ್ಛೇದೋಸ್ತಿ ಕಸ್ಯಾಪಿ ಸಮಸ್ಯೇತ್ಯತೋ ವಿಭುಃ ।।೩।।

ಸಂಖ್ಯಾದಿ ಶಾಸ್ತ್ರಗಳು ಪ್ರವಾಹ ರೂಪದಿಂದ ಅನಾದಿಕಾಲದಿಂದ ಇರತಕ್ಕವುಗಳೇ ಆಗಿವೆ. ಯಾವುದೊಂದು ಸಮಯಕ್ಕೂ ಸಹ ನಾಶವೆಂಬುದು ಇರುವುದಿಲ್ಲ. ಈ ಕಾರಣದಿಂದ ಮಂದನು ಶಂಕಿಸುತ್ತಾನೆ.

ಭ್ರಾಂತಿಮೂಲತ್ವಮೇತೇಷಾಂ ಪೃಥಗ್ದರ್ಶಯತಿ ಸ್ಫುಟಮ್ ।

ತರ್ಕೈರ್ದೃಢತಮೈರೇವ ವಾಕ್ಯೈಶ್ಚಾಗಮವಾದಿನಾಮ್ ।।೪।।

ಆದ್ದರಿಂದಲೇ ಭಗವಾನ್ ವೇದವ್ಯಾಸರು, ಈ ಸಾಂಖ್ಯಾದಿ ಸಮಯಗಳು ಭ್ರಾಂತಿ ಮೂಲಕವಾದವುಗಳು ಎಂಬುದನ್ನು ವಿಸ್ತಾರವಾಗಿ ಅತ್ಯಂತ ದೃಢವಾದ (ಪರರಿಂದ ಅಬಾಧ್ಯವಾದ) ಯುಕ್ತಿಗಳಿಂದಲೂ ಹಾಗೂ ಆಗಮ ಪ್ರಮಾಣ್ಯವನ್ನು ಒಪ್ಪುವ ವಾದಿಗಳನ್ನು ಕುರಿತು ಪ್ರಬಲವಾದ ಆಗಮವಾಕ್ಯಗಳಿಂದಲೂ ಸ್ಪಷ್ಟವಾಗಿ ತೋರಿಸುತ್ತಾರೆ.

ಹಾಗಾದರೆ ಅನಾದ್ಯನಂತ ಕಾಲದಿಂದ ನಾಶವಿಲ್ಲದ ಒಂದೇ ರೀತಿಯ ಪ್ರವೃತ್ತಿಯು ವೇದಾದಿ ಆಗಮಗಳಿಗೆ ಅಂಗೀಕರಿಸಲ್ಪಟ್ಟಿದೆ. ಆದರೆ ಅವು ಭ್ರಾಂತಿಮೂಲಕಗಳಲ್ಲ. ಅನಾದ್ಯನಂತಕಾಲದಿಂದ ಚಾಲ್ತಿಯಲ್ಲಿರುವ ಸಾಂಖ್ಯಾದಿ ಸಮಯಗಳಿಗೂ ಸಮಾನ ನ್ಯಾಯದಿಂದ ಭ್ರಾಂತಿಮೂಲಕತ್ವವು ನಿರಾಕರಿಸಲ್ಪಡುತ್ತದೆ. ಹೀಗೆ ಆಶಂಕಿಸಿದರೆ –

ದೌರ್ಲಭ್ಯಾಚ್ಛುದ್ಧಬುದ್ಧೀನಾಂ ಬಾಹುಲ್ಯಾದಲ್ಪವೇದಿನಾಮ್ ।

ತಾಮಸತ್ವಾಚ್ಚ ಲೋಕಸ್ಯ ಮಿಥ್ಯಾಜ್ಞಾನಪ್ರಸಕ್ತಿತಃ ।।೫।।

ವಿದ್ವೇಷಾತ್ಪರಮೇ ತತ್ತ್ವೇ ತತ್ತ್ವವೇದಿಷು ಚಾನಿಶಮ್ ।

ಅನಾದಿವಾಸನಾಯೋಗಾದಸುರಾಣಾಂ ಬಹುತ್ವತಃ ।।೬।।

ದುರಾಗ್ರಹಗೃಹೀತತ್ವಾದ್ವರ್ತಂತೇ ಸಮಯಾಃ ಸದಾ ।

ನಿರ್ಮಲವಾದ ಅಂತಃಕರಣವುಳ್ಳ ಸಜ್ಜನರು ವಿರಳ. ಭ್ರಮದ ಅಧಿಷ್ಠಾನ ಸ್ವರೂಪವನ್ನಷ್ಟೇ ತಿಳಿದಿರುವ ಸಮಯಪ್ರವರ್ತಕರೇ ಬಹಳ. ರಾಜರು ಮುಂತಾದವರಲ್ಲಿ ತಮೋಗುಣದ್ದೇ ಪ್ರಾಧಾನ್ಯ. ಆದ್ದರಿಂದ ಕುಪಂಡಿತರುಗಳಿಂದ ಮಿಥ್ಯಾಜ್ಞಾನದ ಪ್ರಸಕ್ತಿ. ಸರ್ವೋತ್ತಮನಾದ ಶ್ರೀಹರಿಯಲ್ಲಿ ಹಾಗೂ ಅವನಲ್ಲಿ ಶ್ರದ್ಧೆಯುಳ್ಳ ತತ್ವಜ್ಞಾನಿಗಳಲ್ಲಿ ಮಿಥ್ಯಾಜ್ಞಾನಿಗಳಿಗಿರುವ ನಿರಂತರವಾದ ದ್ವೇಷ. ಅನಾದಿಯಾದ ಅಯೋಗ್ಯವಾದ ಸಂಸ್ಕಾರದ ಸಂಬಂಧದಿಂದ ವಿಪರೀತವಾದ ಪ್ರಯತ್ನಾದಿಗಳಲ್ಲಿ ಪ್ರಚೋದಿಸುವ ಬುದ್ಧ್ಯಾದಿಗಳಿಗೆ ಅಭಿಮಾನಿಗಳಾದ ಅಸುರರ ಆಧಿಕ್ಯ. ದುರಾಗ್ರಹಗ್ರಸ್ತರಾದ ಮತಪ್ರವರ್ತಕರು. ಆದಪ್ರಯುಕ್ತ ಯಾವಾಗಲೂ ಸಮಯಗಳು ಇದ್ದೇ ಇರುತ್ತವೆ.

ಹಾಗಾದರೆ ಸುದೃಢವಾದ ಈ ಮತಗಳನ್ನು ನಿಃಶೇಷವಾಗಿ ನಿರಾಕರಿಸುವುದು ಅಶಕ್ಯವಾದ್ದರಿಂದ, ಈ ನಿರಾಕರಣೆಯು ವ್ಯರ್ಥವೆಂದರೆ –

ತಥಾಽಪಿ ಶುದ್ಧಬುದ್ಧೀನಾಮೀಶಾನುಗ್ರಹಯೋಗಿನಾಮ್ ।।೭।।

ಸುಯುಕ್ತಯಸ್ತಮೋ ಹನ್ಯುರಾಗಮಾನುಗತಾಃ ಸದಾ ।

ಇತಿ ವಿದ್ಯಾಪತಿಃ ಸಮ್ಯಕ್ಸಮಯಾನಾಂ ನಿರಾಕೃತಿಮ್ ।।೮।।

ಚಕಾರ ನಿಜಭಕ್ತಾನಾಂ ಬುದ್ಧಿಶಾಣತ್ವಸಿದ್ಧಯೇ ।

ಹಾಗಿದ್ದರೂ ನಿರ್ಮಲವಾದ ಅಂತಃಕರಣವುಳ್ಳ ಹಾಗೂ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾದ ಸಜ್ಜನರಿಗೆ, ಆಗಮ ಮೊದಲಾದ ಪ್ರಮಾಣಗಳಿಂದ ಗೃಹೀತವಾದ ವ್ಯಾಪ್ತ್ಯಾದಿಗಳುಳ್ಳ, ಸುಯುಕ್ತಿಗಳು ಅಜ್ಞಾನವನ್ನು ಯಾವಾಗಲೂ ನಾಶಮಾಡಲಿ ಎಂಬ ಕಾರಣದಿಂದ ವೇದವ್ಯಾಸರು ದೃಢವಾದ ಯುಕ್ತಿಗಳಿಂದ ಹಾಗೂ ವಾಕ್ಯಗಳಿಂದ ಸಮಯಗಳ ನಿರಾಕರಣೆಯನ್ನು ಚೆನ್ನಾಗಿಯೇ ಮಾಡಿದ್ದಾರೆ. ಅಲ್ಲದೆ ಎಂದಿಗೂ ದುರ್ಮತಗಳಿಂದ ಪ್ರಭಾವಿತರಾಗದ ತಮ್ಮ ನಿಜಭಕ್ತರಾದ ಬ್ರಹ್ಮಾದಿಗಳ ಬುದ್ಧಿಶಾಣತ್ವ ಸಿದ್ಧಿಗಾಗಿ ಇಲ್ಲಿ ಸಮಯಗಳ ನಿರಾಕರಣೆ ಮಾಡಿದ್ದಾರೆ. ಸಜ್ಜನರಿಗೆ ಅಜ್ಞಾನನಿರಸನ ರೂಪವಾದ ಪ್ರಯೋಜನವೂ, ಅಜ್ಞಾನದ ಪ್ರಸಕ್ತಿಯೇ ಇಲ್ಲದ ಬ್ರಹ್ಮಾದಿಗಳಿಗೆ ಬುದ್ಧಿಶಾಣತ್ವರೂಪ ಪ್ರಯೋಜನವೂ ಇರುವುದರಿಂದ ವೇದವ್ಯಾಸರು ಇಲ್ಲಿ ಮಾಡಿರುವ ಸಮಯಗಳ ನಿರಾಕರಣೆಯು ವ್ಯರ್ಥವಲ್ಲ.

ರಚನಾನುಪಪತ್ತ್ಯಧಿಕರಣಮ್

ಓಂ ರಚನಾನುಪಪತ್ತೇಶ್ಚ ನಾನುಮಾನಮ್ ಓಂ

ಮೊದಲನೆಯದಾದ ಈ ಅಧಿಕರಣದಲ್ಲಿ ನಿರೀಶ್ವರ ಸಾಂಖ್ಯಮತವನ್ನು ನಿರಾಕರಿಸುತ್ತಾರೆ. ಮೊದಲು ಈ ಮತದ ಸ್ವರೂಪವನ್ನು ತಿಳಿಸುತ್ತಾರೆ –

ಚೇತನಾಚೇತನಂ ತತ್ತ್ವದ್ವಯಮೇವ ನಿರೀಶ್ವರಾಃ ॥೯॥

ಆಹುಸ್ತತ್ಪಂಚಪಂಚತ್ವವಿಭಾಗಸ್ಥಮಚೇತನಮ್ ।

ಚೇತನಂ ತದಸಂಖ್ಯಾತಂ ಭಿನ್ನಮನ್ಯದ್ಭಿದೋಜ್ಝಿತಮ್ ॥೧೦॥

ನಿರೀಶ್ವರಾಃ ಎಂದರೆ ಈಶ್ವರನನ್ನು ಅಂಗೀಕರಿಸದೆ ಇರುವ ಸಾಂಖ್ಯರು. ಅವರು ಕೇವಲ ಚೇತನ ಮತ್ತು ಅಚೇತನ ಎಂಬುದಾಗಿ ಎರಡೇ ತತ್ವಗಳು ಇರುವುದೆಂದೂ ಅದರಲ್ಲಿ ಅಚೇತನ ತತ್ವವು ಇಪ್ಪತ್ತೈದು ವಿಭಾಗಗಳಿಂದ ಕೂಡಿದೆಯೆಂದೂ ಹೇಳುತ್ತಾರೆ. ಚೇತನ ಮತ್ತು ಅಚೇತನಗಳೆಂಬ ಈ ಎರಡು ತತ್ವಗಳೂ ಅಸಂಖ್ಯಾತವಾಗಿವೆ. ಚೇತನಗಳು ಪರಸ್ಪರ ಭಿನ್ನವಾಗಿದ್ದರೂ ಅಚೇತನಗಳಲ್ಲಿ ಪರಸ್ಪರ ಭೇದವಿಲ್ಲ ಎಂಬುದಾಗಿಯೂ ಹೇಳುತ್ತಾರೆ.

ಇನ್ನು ಈಶ್ವರನನ್ನು ಅಂಗೀಕರಿಸದಿದ್ದರೆ ಯಾರಿಗೂ ಪ್ರವೃತ್ತಿಯೇ ಕೂಡಲಾರದು. ಸೃಷ್ಟ್ಯಾದಿಗಳೂ ಸಂಭವಿಸುವುದಿಲ್ಲ. ಅಚೇತನವು ಚೇತನದಿಂದ ಅಧಿಷ್ಠಿತವಾಗದೆ ಎಲ್ಲಿಯೂ ಪ್ರವೃತ್ತಿಯುಳ್ಳದ್ದಾಗಿ ಕಂಡಿಲ್ಲ. ಆದ್ದರಿಂದ ಪ್ರಧಾನಕ್ಕೆ ಒಂದು ಅಧಿಷ್ಠಾತೃವೆನಿಸಿದ ಈಶ್ವರನಿರಬೇಕು. ಆದಕಾರಣ ಈಶ್ವರನೆಂಬ ಮೂರನೆಯ ತತ್ವವನ್ನು ಹೇಗೆ ಅಂಗೀಕರಿಸುವುದಿಲ್ಲ ಎಂದು ಆಶಂಕಿಸಿದರೆ –

ಅಚೇತನಸ್ಯ ಕರ್ತೃತ್ವಂ ಸ್ವಾತಂತ್ರ್ಯೇಣ ನಿಗದ್ಯತೇ ।

ಅಚೇತನಕ್ಕೆ ಅಂದರೆ ಪ್ರಧಾನ ಅಥವಾ ಜಡಪ್ರಕೃತಿಗೆ ಸ್ವತಂತ್ರವಾದ ಕರ್ತೃತ್ವವು ಇರುವುದಾಗಿ ಸಾಂಖ್ಯರಿಂದ ಹೇಳಲ್ಪಡುತ್ತದೆ. ಸ್ವಾತಂತ್ರ್ಯೇಣ ಎಂದರೆ ಚೇತನಾಧಿಷ್ಠಾನವಿಲ್ಲದೆ ಎಂದರ್ಥ. ಕರ್ತೃತ್ವವು ಅಚೇತನಕ್ಕೆ ಮಾತ್ರ, ಚೇತನಕ್ಕಿಲ್ಲ ಎಂದು ತಾತ್ಪರ್ಯ.

ಇದನ್ನೇ 'ವತ್ಸವಿವೃದ್ಧಿನಿಮಿತ್ತಂ ಕ್ಷೀರಸ್ಯ ಯಥಾ ಪ್ರವೃತ್ತಿರಜ್ಞಸ್ಯ। ಪುರುಷಸ್ಯ ವಿಮೋಕ್ಷನಿಮಿತ್ತಂ ತಥಾ ಪ್ರವೃತ್ತಿಃ ಪ್ರಧಾನಸ್ಯ॥' ಎಂಬುದಾಗಿ ಸಾಂಖ್ಯ ಕಾರಿಕೆಯಲ್ಲಿ ಹೇಳಲಾಗಿದೆ. 'ಅಚೇತನವಾದ ಹಾಲಿಗೆ ಕರುವಿನ ಬೆಳವಣಿಗೆಗಾಗಿ ಪ್ರವೃತ್ತಿಯು ಹೇಗೆ ಆಗುತ್ತದೋ ಹಾಗೆಯೇ ಪುರುಷನ ವಿಮೋಚನೆಯೆಂಬ ಪ್ರಯೋಜನಕ್ಕಾಗಿ ಅಚೇತನವಾದ ಪ್ರಧಾನಕ್ಕೆ ಪ್ರವೃತ್ತಿಯು ಆಗುತ್ತದೆ' ಹೀಗೆ ಈ ಕಾರಿಕೆಯ ಅರ್ಥ.

ಅಚೇತನದ ವಿಷಯದಲ್ಲಿ 'ಅನ್ಯದ್ ಭಿದೋಜ್ಝಿತಂ' ಪರಸ್ಪರ ಭೇದವಿಲ್ಲ ಎಂದು ಹೇಳಲಾಯಿತು. ಇದು ಸರಿಯಲ್ಲ. ಏಕೆಂದರೆ ಅಚೇತನಗಳಿಗೂ ಚೇತನಗಳ ಹಾಗೆ ಪರಸ್ಪರ ಭೇದವಿರುವುದು ಪ್ರತ್ಯಕ್ಷಸಿದ್ಧವಾಗಿದೆ. ಹೀಗೆ ಆಶಂಕಿಸಿದರೆ –

ಪರಸ್ಪರವಿಭೇದಶ್ಚ ಕಾರ್ಯಾಣಾಮಾಲಯಂ ಭವೇತ್ ॥೧೧॥

ಪ್ರಲಯದ ಪರ್ಯಂತವಾಗಿ ಕಾರ್ಯಗಳಿಗೆ (ಕಾರ್ಯಜನ್ಯ ಪದಾರ್ಥಗಳಿಗೆ) ಪರಸ್ಪರವಾಗಿ ಭೇದವೂ ಕೂಡ ಇರುವುದೆಂದು ಸಾಂಖ್ಯರಿಂದ ಹೇಳಲ್ಪಡುತ್ತದೆ.

ಇನ್ನು ಸಾಂಖ್ಯರಲ್ಲಿಯೂ ಇರುವ ಮತಭೇದವನ್ನು 'ಭೋಕ್ತೃತಾಂ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಭೋಕ್ತೃತಾಂ ಚೇತನಸ್ಯಾಹುಃ ಕೇಚಿತ್ತಾಮಪಿ ನಾಪರೇ ।

ಸಾಂಖ್ಯರಲ್ಲಿ ಕೆಲವರು ಚೇತನನಿಗೆ ಭೋಕ್ತೃತ್ವವನ್ನು ಹೇಳುತ್ತಾರೆ. ಇತರರು ಭೋಕ್ತೃತ್ವವನ್ನೂ ಹೇಳುವುದಿಲ್ಲ.

ವಿವರಣೆ: ಭೋಕ್ತೃತ್ವವನ್ನು ಒಪ್ಪದವರು ಅದಕ್ಕೆ 'ತಸ್ಮಾನ್ನ ಬಧ್ಯತೇ ನ ಮುಚ್ಯತೇ ನಾಪಿ ಸಂಸರತಿ ಕಶ್ಚಿತ್। ವಧ್ಯತೇ ಸಂಸರತಿ ಮುಚ್ಯತೇ ಚ ನಾನಾಶ್ರಯಾ ಚ ಪ್ರಕೃತಿಃ॥' ಎಂಬ ಪ್ರಮಾಣವನ್ನು ಹೇಳುತ್ತಾರೆ. "ತ್ರೈಗುಣ್ಯಾದಿಗಳಿಲ್ಲದಿರುವುದರಿಂದ ಪುರುಷನು ಬಂಧಿಸಲ್ಪಡುವುದಿಲ್ಲ, ಮುಕ್ತನಾಗುವುದಿಲ್ಲ ಮತ್ತು ಯಾವನೂ ಸಂಸಾರಿಯೂ ಆಗುವುದಿಲ್ಲ. ಆದರೆ ಅನೇಕ ಪುರುಷರ ಸಂಬಂಧ ಹೊಂದಿದ ಪ್ರಕೃತಿಯು ಬಂಧಿಸಲ್ಪಡುತ್ತದೆ, ಸಂಸಾರವನ್ನು ಹೊಂದುತ್ತದೆ, ಮತ್ತು ಮುಕ್ತಿಯನ್ನೂ ಹೊಂದುತ್ತದೆ." ಹೀಗೆ ಈ ಪ್ರಮಾಣವಾಕ್ಯದ ಅರ್ಥ. ಪ್ರಕೃತಿಯಲ್ಲಿಯೇ ಬಂಧ ಮೋಕ್ಷ ಹಾಗೂ ಸಂಸಾರಗಳು ಇರುತ್ತವೆ. ಅವು ಪುರುಷರಲ್ಲಿ ಉಪಚಾರದಿಂದ ಹೇಳಲ್ಪಡುತ್ತವೆ. ಭೃತ್ಯನಲ್ಲಿರುವ ಜಯಾಪಜಯಗಳು ಅವರಿಗೆ ಆಶ್ರಯನಾದ ರಾಜನಲ್ಲಿ ಹೇಗೆ ಉಪಚಾರದಿಂದ ಇರುತ್ತವೋ ಹಾಗೆಯೇ ಪ್ರಕೃತಿಯಲ್ಲಿರತಕ್ಕ ಭೋಗ(ಸಂಸಾರ) ಹಾಗೂ ಮುಕ್ತಿಗಳು ಆಶ್ರಯನಾದ ಪುರುಷನಿಗೆ ಹೇಳಲ್ಪಡುತ್ತವೆ. ಆದರೆ ವಾಸ್ತವವಾಗಿ ಭೋಗಾದಿಗಳು ಇರುವುದಿಲ್ಲ.

ಹಾಗಾದರೆ ಚೇತನನಿಗೆ ಕರ್ತೃತ್ವವಿಲ್ಲದಿದ್ದರೆ ಭೋಕ್ತೃತ್ವವಾದರೂ ಹೇಗೆ ಕೂಡುತ್ತದೆ ಎಂದು ಕೇಳಿದರೆ –

ಸ್ವರೂಪಚೇತನ್ಯಬಲಾತ್ಸ್ವಪ್ರಕಾಶಾಚ್ಚ ಭೋಗಿತಾಮ್ ॥೧೨॥

ಸುಖದುಃಖಾದಿಗಳನ್ನು ಅನುಭವಿಸುವುದು ಭೋಕ್ತೃತ್ವವೆನಿಸುತ್ತದೆ. ಅದು ಕ್ರಿಯಾವೇಶವಿಲ್ಲದೆ ಸ್ವರೂಪ ಚೈತನ್ಯದ ಬಲದಿಂದಲೇ ಕೂಡುತ್ತದೆ. ಈ ಸುಖಾದಿ ಅನುಭವತ್ವವು ಸ್ವಪ್ರತೀತಿಯಿಂದ ಸಿದ್ಧವಾಗಿದೆ. ಇದನ್ನೇ 'ಭೋಕ್ತೃತ್ವ ಯೋಗ್ಯತಾ ಚ ಪುರುಷಸ್ಯ ಚೈತನ್ಯಂ' ಎಂಬುದಾಗಿ ಹೇಳಿದ್ದಾರೆ. ಅಂದರೆ ಸುಖದುಃಖಾದಿಗಳನ್ನು ಭೋಗ ಮಾಡುವ ಯೋಗ್ಯತೆಯು ಪುರುಷನ ಚೈತನ್ಯವೆನಿಸುತ್ತದೆ ಎಂದರ್ಥ.

ಹಾಗಾದರೆ ಸ್ವಪ್ರತೀತಿಯಿಂದ ಸಿದ್ಧಿಸಿದ ಭೋಕ್ತೃತ್ವವನ್ನು ಇತರರು ಏಕೆ ಒಪ್ಪುವುದಿಲ್ಲ ಎಂದರೆ, ಅದಕ್ಕೆ ಉತ್ತರವನ್ನು 'ಪ್ರಕೃತೇಶ್ಚ' ಇತ್ಯಾದಿ ಮಾತುಗಳಿಂದ

ಹೇಳುತ್ತಾರೆ –

ಪ್ರಕೃತೇಶ್ಚ ಸ್ವರೂಪಸ್ಯ ವಿವೇಕಾಗ್ರಹಮೇವ ತು ।

ಅಭೋಗವಾದಿನೋ ಭೋಗಮಾಹುರ್ಭೇದಗ್ರಹಾತ್ತಯೋಃ ।।೧೩।।

ಭೋಗಿನಾಂ ಮುಕ್ತಿರುದ್ದಿಷ್ಟಾ ಸ ಏವಾಭೋಗವಾದಿನಾಮ್ ।

ಪ್ರಕೃತಿಯ ಸ್ವರೂಪಕ್ಕೂ ಆತ್ಮಸ್ವರೂಪಕ್ಕೂ ಇರುವ ಭೇದದ ಅಜ್ಞಾನವೇ ಭೋಗದ ವ್ಯವಹಾರಕ್ಕೆ ಕಾರಣವೆಂದು ಭೋಕ್ತೃತ್ವವನ್ನು ಒಪ್ಪದವರು ಹೇಳುತ್ತಾರೆ.

ಪುರುಷನಿಗೆ ಭೋಗವನ್ನು ಒಪ್ಪುವವರ ಮತದಲ್ಲಿ ಪುರುಷನಿಗೆ ಪ್ರಕೃತಿಯೊಡನೆ ಸಂಯೋಗವು ಕೇವಲ ಭೋಗಕ್ಕಲ್ಲ, ಮೋಕ್ಷಕ್ಕಾಗಿಯೂ ಆಗಿದೆ. ಪ್ರಕೃತಿ–ಪುರುಷ ಎಂಬ ಭೇದವು ತಿಳಿಯುವವರೆಗೆ ಪ್ರಕೃತಿಸಂಯೋಗವು ಪುರುಷನ ಭೋಗಕ್ಕೆ ಕಾರಣವಾಗುತ್ತದೆ. ಹೀಗೆ ಭೇದದ ಅಜ್ಞಾನವೇ ಬಂಧವು. ಭೇದದ ಜ್ಞಾನವೇ ಮುಕ್ತಿಗೆ ಕಾರಣವಾಗುವುದು. ಹೀಗೆ ಬಂಧವು ಕೂಡುವುದರಿಂದ, ಬಂಧನಿವೃತ್ತಿ ರೂಪವಾದ ಮೋಕ್ಷವೂ ಕೂಡುವುದು.

ಪುರುಷನಿಗೆ ಭೋಗವನ್ನು ಒಪ್ಪದವರ ಮತದಲ್ಲಿ, ಪ್ರಕೃತಿ ಪುರುಷರ ನಡುವೆ ಭೇದದ ಜ್ಞಾನವೇ ಬಂಧವು, ಭೇದದ ಅಜ್ಞಾನವೇ ಮುಕ್ತಿಯೆಂದು ಹೇಳಲ್ಪಟ್ಟಿದೆ.

ಹೀಗೆ ಈವರೆಗೆ ಉಪನ್ಯಾಸ ಮಾಡಲ್ಪಟ್ಟ ಮತವು ದುಷ್ಟವಾದುದರಿಂದ ಅದನ್ನು ಈಗ ನಿರಾಕರಿಸುತ್ತಾರೆ –

ಈಶಸ್ಯಾಸಂಗ್ರಹಾದೇವ ನ ಯುಕ್ತೌ ತಾವುಭಾವಪಿ ।।೧೪।।

ಚೇತನೇಚ್ಛಾನುಸಾರೇಣ ಯದಾ ದೃಷ್ಟಃ ಪಟೋದ್ಭವಃ ।

ಏತಾದೃಶತ್ವಮನ್ಯಸ್ಯ ವಸ್ತುತ್ವಾತ್ಕೇನ ವಾರ್ಯತೇ ।।೧೫।।

ಈಶ್ವರನನ್ನು ಅಂಗೀಕಾರ ಮಾಡದಿರುವ ಕಾರಣದಿಂದಲೇ ಪುರುಷನಿಗೆ ಭೋಕ್ತೃತ್ವವನ್ನು ಒಪ್ಪುವ ಹಾಗೂ ಒಪ್ಪದಿರುವ ಈ ಎರಡೂ ಪಕ್ಷಗಳೂ ಅಯುಕ್ತವು. ಲೋಕದಲ್ಲಿ ಚೇತನನ ಇಚ್ಛಾನುಸಾರವಾಗಿ ಪಟದ ಉತ್ಪತ್ತಿಯು ಕಂಡುಬರುವುದು. ಇತರವಾದ ಮಹದಾದಿಗಳಿಗೂ ಪಟದಂತೆಯೇ ವಸ್ತುತ್ವವನ್ನು ಹೊಂದಿವೆ. ಆದುದರಿಂದ ಅವುಗಳಿಗೂ ಪಟದಂತೆಯೇ ಚೇತನೇಚ್ಛಾನುಸಾರಿಯಾದ ಉತ್ಪತ್ತಿಯು ಯಾವ ಕಾರಣದಿಂದ ನಿವಾರಿಸಲ್ಪಡುತ್ತದೆ? ಆದ್ದರಿಂದ ಮಹದಾದಿ ಕಾರ್ಯಗಳ ಉತ್ಪತ್ತಿಯಲ್ಲಿಯೂ ಚೇತನನ ಕಾರಣತ್ವವನ್ನು ಒಪ್ಪಲೇಬೇಕು.

ಘಟ ಪಟಾದಿಗಳ ಉತ್ಪತ್ತಿಯಲ್ಲಿ ಚೇತನರಾದ ಕುಂಬಾರ ಮುಂತಾದವರ

ಪ್ರವೃತ್ತಿಯು ಕಂಡುಬರುವುದರಿಂದ, ಅದರ ದೃಷ್ಟಾಂತದಿಂದ ಮಹದಾದಿಗಳ ಉತ್ಪತ್ತಿಯೂ ಚೇತನನ ಇಚ್ಛಾಧೀನವಾಗಿರುವುದು. ಹೀಗೆ ಸ್ವಪಕ್ಷವನ್ನು ಸಾಧನೆ ಮಾಡಿ, ಪರಪಕ್ಷದ ನಿರಾಕರಣಕ್ಕಾಗಿ 'ರಚನಾನುಪಪತ್ತೇಶ್ಚ ನಾನುಮಾನಂ' ಎಂಬ ಸೂತ್ರವನ್ನು ವ್ಯಾಖ್ಯಾನಿಸಲು 'ನ ಚ ಕಾಚಿತ್' ಇತ್ಯಾದಿ ವಚನದಿಂದ ಪೀಠಿಕೆಯನ್ನು ರಚಿಸುತ್ತಾರೆ –

ನ ಚ ಕಾಚಿತ್ಪ್ರಮೋಕ್ತಾರ್ಥೇ ಶ್ರುತಿರೇವ ಪ್ರಮಾ ಹಿ ನಃ ।

ಆಪ್ತತ್ವಮುಕ್ತಮಾರ್ಗೇಣ ವಕ್ತುರ್ನೈವೋಪಪದ್ಯತೇ ।।೧೬।।

ಅಪ್ರಾಮಾಣ್ಯಸ್ವತಸ್ತಸ್ಯ ಸ್ವೀಕಾರಾದಪಿ ಮಾಯಿವತ್ ।

ಸ್ವೋಕ್ತಾಖಿಲನಿಷೇಧೀ ಸ್ಯಾನ್ನ ಕಿಂಚಿತ್ಪ್ರಸಿಧ್ಯತಿ ।।೧೭।।

ಸಾಂಖ್ಯನು ಹೇಳಿದ ಪ್ರಧಾನವೇ ಸ್ವತಂತ್ರವಾಗಿ ಜಗತ್ಕಾರಣವೆಂಬ ವಿಷಯದಲ್ಲಿ ಯಾವ ಪ್ರಮಾಣವೂ ಇರುವುದಿಲ್ಲ. ಶ್ರುತಿಯು ನಮ್ಮ ಮತದ ವಿಷಯದಲ್ಲಿಯೇ ಪ್ರಮಾಣವಾಗಿರುತ್ತದೆ. ಶ್ರುತಿಗೆ ವಿರುದ್ಧವಾದುದನ್ನು ಹೇಳಿರುವುದರಿಂದ ಸಾಂಖ್ಯ ಶಾಸ್ತ್ರವನ್ನು ರಚಿಸಿದವನಿಗೆ ಆಪ್ತತ್ವವು ಕೂಡುವುದೇ ಇಲ್ಲ. ಅಪ್ರಮಾಣ್ಯವನ್ನು ಸ್ವತಃ ಎಂದು ಅಂಗೀಕರಿಸಿರುವುದರಿಂದಲೂ ಅವನಿಗೆ ಆಪ್ತತ್ವವು ಕೂಡುವುದಿಲ್ಲ. ಮಾಯಾವಾದಿಯಂತೆ ತಾನು ಹೇಳಿದ ಎಲ್ಲವನ್ನೂ ತಾನೇ ನಿಷೇಧಿಸುವವನು ಆಗುವನು. ಪರಸ್ಪರ ವಿರೋಧವಿದ್ದರೆ ಯಾವುದೂ ಸಿದ್ಧಿಸುವುದಿಲ್ಲ.

ಹಾಗಾದರೆ ಮಹದಾದಿ ಪ್ರಪಂಚಕ್ಕೆ ಅವ್ಯಕ್ತವಾದ ಪ್ರಕೃತಿಯು ಕಾರಣವು ಎನ್ನುವ ವಿಷಯದಲ್ಲಿ ಪ್ರತ್ಯಕ್ಷವು ಪ್ರಮಾಣವಾಗುವುದು ಬೇಡ. ಆಗಮವೂ ಕೂಡ ಪ್ರಮಾಣವಾಗದಿದ್ದರೆ ಅಡ್ಡಿಯಿಲ್ಲ. ಆದರೆ ಅನುಮಾನದಿಂದ ಪ್ರಕೃತಿಯು ಮಹದಾದಿ ಉತ್ಪತ್ತಿಗೆ ಕಾರಣವೆಂದು ಸಿದ್ಧಿಸುತ್ತದೆ ಹೀಗೆ ಸಾಂಖ್ಯರ ಪೂರ್ವಪಕ್ಷ.

ಹಾಗಾದರೆ ಈ ಅನುಮಾನದಿಂದ ಪ್ರಕೃತಿಯು ಜಗತ್ತಿನ ಉಪಾದಾನಕಾರಣವೆಂದು ಸಿದ್ಧಿಸುವುದೋ ಅಥವಾ ಸ್ವತಂತ್ರವಾಗಿ ಕಾರಣವೆಂದು ಸಿದ್ಧಿಸುವುದೋ ಎಂದು ಕೇಳುತ್ತೇವೆ. ಮೊದಲನೆಯ ಪಕ್ಷದಲ್ಲಿ ಸಿದ್ಧಸಾಧನವು. ಏಕೆಂದರೆ ನಾವೂ ಸಹ ಪ್ರಧಾನವನ್ನು ಜಗತ್ತಿನ ಉಪಾದಾನಕಾರಣವಾಗಿ ಅಂಗೀಕರಿಸಿದ್ದೇವೆ. ಎರಡನೆಯ ಪಕ್ಷವನ್ನು ನಿರಾಕರಿಸಲು 'ರಚನಾನುಪಪತ್ತೇಶ್ಚ ನಾನುಮಾನಂ' ಎಂಬ ಸೂತ್ರವು ಹೊರಟಿದೆ. 'ಇದಂ' ಇತ್ಯಾದಿ ವಚನದಿಂದ ಇದನ್ನು ವ್ಯಾಖ್ಯಾನಿಸುತ್ತಾರೆ –

ಇದಂ ನಾಚೇತನವಶಂ ವಸ್ತುತ್ವಾತ್ಪ್ರತಿಪನ್ನವತ್ ।

ಇತ್ಯೇವ ಪ್ರತಿಷಿದ್ಧಸ್ಯ ಕೇನ ಮೂಲಾನುಮಾ ಭವೇತ್ ।।೧೮।।

ಈ ಮಹದಾದಿ ಕಾರ್ಯವು ಸ್ವತಂತ್ರವಾದ ಅಚೇತನಾಧೀನವಾದ ಉತ್ಪತ್ತಿಯನ್ನು ಹೊಂದಿರುವುದಿಲ್ಲ, ಪ್ರಧಾನದಂತೆ ವಸ್ತುವಾಗಿರುವುದರಿಂದ. ಹೀಗೆ ಪ್ರತಿಯಾದ ಅನುಮಾನದಿಂದಲೇ ನಿಷೇಧಿಸಲ್ಪಡುವ ಪ್ರಧಾನದ ಸ್ವಾತಂತ್ರ್ಯಕ್ಕೆ ಸಾಧಕವಾದ ಅನುಮಾನವು ಯಾವ ಸಾಮರ್ಥ್ಯದಿಂದ ಪ್ರಮಾಣವಾಗುವುದು?

ಹೀಗೆ ಪ್ರಧಾನಕ್ಕೆ ಸ್ವತಂತ್ರ ಪ್ರವೃತ್ತಿಯು ಕೂಡುವುದಿಲ್ಲವೆಂದು ಅನುಮಾನ ವಿರೋಧದಿಂದ ತೋರಿಸಿ, ಆದುದರಿಂದ ಅನುಮಾನವು ಪ್ರಮಾಣವಾಗುವುದಿಲ್ಲ ಎಂಬುದಾಗಿ ಸೂತ್ರದ ತಾತ್ಪರ್ಯವನ್ನು ಹೇಳಿದರು. ಈಗ ಅದನ್ನೇ ವಿವರಿಸುತ್ತ ಬೇರೆ ಪ್ರತಿಪಕ್ಷಾನುಮಾನವನ್ನು ತೋರಿಸುತ್ತಾರೆ –

ಸ್ವತಂತ್ರವೃತ್ತೀ ರಚನಾ ಸಾ ಚೈವಾಚೇತನೇ ಕುತಃ ।

ಅಚೇತನತ್ವಂ ಸ್ವಾತಂತ್ರ್ಯಮಿತಿ ಚಾತ್ಮಪ್ರಮಾಹತಮ್ ।।೧೯।।

ಸ್ವತಂತ್ರವಾದ ಪ್ರವೃತ್ತಿಯು ರಚನೆಯೆನಿಸುವುದು. ಅಂಥಹ ಪ್ರವೃತ್ತಿಯು ಅಚೇತನದಲ್ಲಿ ಹೇಗೆ ಉಂಟಾದೀತು? ಅಚೇತನವಾಗಿದ್ದು ಸ್ವತಂತ್ರವೂ ಆಗಿದೆ ಎಂದು ಹೇಳುವುದು ಸ್ವವಚನ ವಿರೋಧವೂ ಪ್ರಮಾಣವಿರುದ್ಧವೂ ಆಗುವುದು. ಅಚೇತನತ್ವ ಮತ್ತು ಸ್ವಾತಂತ್ರ್ಯ ಇವೆರಡೂ ಒಂದೇ ಕಡೆಯಲ್ಲಿ ಕೂಡುವುದಿಲ್ಲ.

ಹಾಗಾದರೆ ಅಚೇತನಕ್ಕೆ ಸ್ವಾತಂತ್ರ್ಯವನ್ನು ಹೇಳುವುದರಿಂದ ಸ್ವವ್ಯಾಹತಿಯು ಹೇಗೆ? ಏಕೆಂದರೆ ಸ್ವಾತಂತ್ರ್ಯ ಎಂದರೆ ಚೇತನತ್ವ ಎನಿಸುವುದಿಲ್ಲ. ಅದೇರೀತಿ ಅಚೇತನತ್ವವು ಅಸ್ವಾತಂತ್ರ್ಯ ಎನಿಸುವುದಿಲ್ಲ. ಆದ್ದರಿಂದ ಪ್ರಮಾಣ ವಿರೋಧವು ಹೇಗೆ ಎಂದು ಆಕ್ಷೇಪಿಸಿದರೆ ಸ್ವಾತಂತ್ರ್ಯ ಎಂದರೇನು ಎಂದು ತಿಳಿಸುತ್ತಾರೆ –

ಸ್ವೇಚ್ಛಾನುಸಾರಿತಾಮೇವ ಸ್ವಾತಂತ್ರ್ಯಂ ಹಿ ವಿದೋ ವಿದುಃ ।

ತನ್ನ ಇಚ್ಛಾನುಸಾರವಾದ ಪ್ರವೃತ್ತಿಯನ್ನೇ ಸ್ವಾತಂತ್ರ್ಯವೆಂದು ಎಲ್ಲ ಜ್ಞಾನಿಗಳೂ ತಿಳಿಯುತ್ತಾರೆ.

ಹಾಗಾದರೆ ಅಚೇತನತ್ವವೆಂದರೆ ಚೇತನತ್ವವಿಲ್ಲವೆಂದು ಅರ್ಥ, ಇಚ್ಛಾರಹಿತತ್ವ ಎಂದಲ್ಲ. ಆದ್ದರಿಂದ ಸ್ವವ್ಯಾಹತವು ಹೇಗಾಗುವುದು ಎಂದು ಆಶಂಕಿಸಿದರೆ –

ಕುತ ಇಚ್ಛಾಽಚೇತನಸ್ಯ ಸೇಚ್ಛಂ ಚೇತ್ಕಿಮಚೇತನಮ್ ।।೨೦।।

ಅಚೇತನಕ್ಕೆ ಇಚ್ಛೆಯು ಹೇಗೆ ಅಂದರೆ ಯಾವ ಕಾರಣದಿಂದ ಬರುತ್ತದೆ? ಇಚ್ಛೆಯು ಇರುವುದಾದರೆ ಅದು ಅಚೇತನವು ಹೇಗಾದೀತು?

ಹೀಗೆ ಅಚೇತನಕ್ಕೆ ಸ್ವಾತಂತ್ರ್ಯವನ್ನು ಅಂಗೀಕರಿಸಿದರೆ ಬರುವ ಸ್ವವ್ಯಾಹತಿಯನ್ನು ತೋರಿಸಿ, ಈಗ ಪ್ರಮಾಣವಿರೋಧವನ್ನು ಉಪಪಾದಿಸುತ್ತಾರೆ –

ಇಚ್ಛಾಮ್ಯಹಮಿತಿ ಹ್ಯೇವ ನಿಜಾನುಭವರೋಧತಃ ।

ಅಚೇತನೇಚ್ಛಾಪಗತಾ.........................॥

ನಾನು ಇಚ್ಛಿಸುತ್ತೇನೆ ಎಂಬ ಸಾಕ್ಷಿರೂಪ ಅನುಭವವು ಅಚೇತನಕ್ಕೆ ಇರುವುದಿಲ್ಲ. ಈ ಕಾರಣದಿಂದ ಅಚೇತನಕ್ಕೆ ಇಚ್ಛೆಯು ನಿರಾಕೃತವಾಗುವುದು.

ಹಾಗಾದರೆ ನಾನು ಇಚ್ಛಿಸುತ್ತೇನೆ ಎಂಬುದು ಕೇವಲ ವ್ಯವಹಾರವೇ ಹೊರತು ಅನುಭವವಲ್ಲ. ಇದಕ್ಕಾದರೋ ಭೇದದ ಅಜ್ಞಾನವೇ ಕಾರಣ. ಇಚ್ಛಾಕರ್ತೃತ್ವವು ಅಂತಃಕರಣದ ಧರ್ಮ. ಆತ್ಮನು ನಿತ್ಯನೂ ನಿರ್ವಿಕಾರನೂ ಆದುದರಿಂದ ಅದು ಆತ್ಮನ ಧರ್ಮವಲ್ಲ. ಆತ್ಮ ಮತ್ತು ಅಂತಃಕರಣಗಳಿಗಿರುವ ಭೇದವು ತಿಳಿಯದೇ ಇರುವುದರಿಂದ ಆತ್ಮನಲ್ಲಿ ಈ ಧರ್ಮವು ಆರೋಪಿಸಲ್ಪಡುತ್ತದೆ. ಆದ್ದರಿಂದ ಅಚೇತನಕ್ಕೆ ಇಚ್ಛೆಯು ಕೂಡುವುದಿಲ್ಲ ಎಂದು ಹೇಳಿದ್ದು ಯುಕ್ತವಲ್ಲ ಎಂದರೆ –

....................ಯದಿ ಭೇದಾಗ್ರಹೋಽತ್ರ ಚ ॥೨೧॥

ಕಥಂ ಸ ನ ಘಟಸ್ಯ ಸ್ಯಾತ್.......................।

ಭೇದದ ಜ್ಞಾನವಿಲ್ಲದಿರುವುದೇ ಈ ರೀತಿಯ ವ್ಯವಹಾರಕ್ಕೆ ಕಾರಣ ಎಂದು ಹೇಳುವ ಪಕ್ಷದಲ್ಲಿ, ಆ ಭೇದದ ಅಜ್ಞಾನವು ಘಟದ ವ್ಯವಹಾರಕ್ಕೆ ಹೇಗೆ ಕಾರಣವಾಗಲಾರದು?

ಇನ್ನು ಭೇದದ ಜ್ಞಾನವು ಭೇದದ ಅಜ್ಞಾನಕ್ಕೆ ವಿರೋಧಿಯು. ಆದಕಾರಣ ಭೇದದಿಂದ ತೋರುವ ಘಟದಲ್ಲಿ ಭೇದದ ಅಜ್ಞಾನವಿಲ್ಲವೆಂದು ಹೇಳುವುದಾದರೆ –

....................................ಮನೋ ಮ ಇತಿ ಭೇದತಃ ।

ಮನಸೋಽಪಿ ಗೃಹೀತತ್ವಾತ್ ಉಭಯಾತ್ಮಕತಾ ಯತಃ॥೨೨॥

ಕಾಮಸ್ಯ ತು ಮನಃ ಕಾಮಃ ಪ್ರಿಯಾಪ್ರಿಯವಿಭೇದತಃ ।

ದ್ವೈವಿಧ್ಯಂ ದೃಶ್ಯತೇ ಚಾಸ್ಯ ತಸ್ಮಾದಭೇದಾಗ್ರಹಃ ಕುತಃ ॥೨೩॥

ನನ್ನ ಮನಸ್ಸು ಎಂಬುದಾಗಿ ಮನಸ್ಸಿಗೂ ಆತ್ಮನಿಗೂ ಭೇದಜ್ಞಾನವು ಇರುವುದರಿಂದ, ಭೇದದ ಅಜ್ಞಾನದಿಂದ ವ್ಯವಹಾರವು ಎನ್ನುವುದು ಯುಕ್ತವಲ್ಲ. ಅಂತಃಕರಣ ರೂಪವಾದ ಇಚ್ಛೆಗೆ ಆತ್ಮ ಮತ್ತು ಮನೋಧರ್ಮತ್ವಗಳೆರಡೂ ಇರುವುದರಿಂದ 'ಮನಃ ಕಾಮಃ' ಎನ್ನುವ ಶ್ರುತಿಯು ಯುಕ್ತವಾಗುತ್ತದೆ. ಆತ್ಯಂತಿಕ ಇಷ್ಟ ಹಾಗೂ ತಾತ್ಕಾಲಿಕ ಇಷ್ಟ ಎಂಬ ಪ್ರಭೇದಗಳಿಂದ ಈ ಕಾಮಕ್ಕೆ ದ್ವೈವಿಧ್ಯವು ಕಂಡುಬರುತ್ತದೆ. ಆದುದರಿಂದ ಭೇದ ಜ್ಞಾನವಿಲ್ಲದಿರುವುದು ವ್ಯವಹಾರಕ್ಕೆ ಕಾರಣ

ಎಂಬುದು ಯಾವ ಪ್ರಮಾಣದಿಂದ ಕಲ್ಪಿಸಬೇಕು? ಹೀಗೆ ಅನುಭವವನ್ನು ಅಪಲಾಪ ಮಾಡುವುದು ಯಾವ ಪ್ರಮಾಣದಿಂದಲೂ ಸಿದ್ಧಿಸುವುದಿಲ್ಲ.

'ರಚನಾನುಪಪತ್ತೇಃ' ಸೂತ್ರಾರ್ಥದ ಉಪಸಂಹಾರಮಾಡುತ್ತ 'ನಾನುಮಾನಂ' ಎಂಬುದಕ್ಕೆ ಬೇರೆ ರೀತಿಯಿಂದ ವ್ಯಾಖ್ಯಾನ ಮಾಡುತ್ತಾರೆ –

ರಚನಾನುಪಪತ್ತೇಸ್ತನ್ನ ಸರ್ವಜ್ಞಾನುಮಾಗತಮ್ ।

ಅಚೇತನಂ ಜಗತ್ಕರ್ತೃ ....॥೨೪॥

ಆದುದರಿಂದ ಸರ್ವಜ್ಞತ್ವ ಸಾಧಕವಾದ ಅನುಮಾನದಿಂದ ತಿಳಿಯಲ್ಪಟ್ಟ ಅಚೇನವಾದ ಪ್ರಧಾನಕ್ಕೆ ಸ್ವತಂತ್ರವಾದ ಪ್ರವೃತ್ತಿಯು ಕೂಡುವುದಿಲ್ಲ. ಆದಪ್ರಯುಕ್ತ ಪ್ರಧಾನವು ಜಗತ್ಕರ್ತೃವಾಗಲಾರದು.

ಹಾಗೇ ಆಗಲಿ. ಆದರೆ ಪರಿಮಾಣ ಮುಂತಾದ ಯುಕ್ತಿಗಳಿಂದ ಮಹದಾದಿ ಕಾರ್ಯಗಳಿಗೆಲ್ಲ ಮೂಲಕಾರಣವು ಇರುವುದೆಂದು ತಿಳಿಯುತ್ತದೆ. ಅದೇ ಪ್ರಧಾನ. ಅದಕ್ಕೆ ಬೇರೆ ಕಾರಣವನ್ನು ಕಲ್ಪಿಸುವುದರಲ್ಲಿ ಪ್ರಮಾಣವೂ ಇಲ್ಲ. ಹಾಗೆ ಕಲ್ಪಿಸಿದರೆ ಅನವಸ್ಥೆ ಬರುತ್ತದೆ. ಸ್ವಾತಂತ್ರ್ಯವೆಂದರೆ, ಆ ಪ್ರಧಾನಕ್ಕೆ ಬೇರೆ ಕಾರಣವಿಲ್ಲವೆಂದೇ ಅರ್ಥ, ಸ್ವೇಚ್ಛಾನುಸಾರಿ ಪ್ರವೃತ್ತಿಯೆಂದಲ್ಲ. ಅಚೇತನಕ್ಕೆ ಅಂಥಹ ಸ್ವಾತಂತ್ರ್ಯವು ಅಸಂಭಾವಿತವಲ್ಲ. ಏಕೆಂದರೆ ಅಚೇತನಗಳಾದ ಹಾಲು, ನೀರು ಇತ್ಯಾದಿಗಳಲ್ಲಿ ಸ್ವಾತಂತ್ರ್ಯವು ಕಂಡಿರುತ್ತದೆ. ಹಾಲು ಮತ್ತೊಬ್ಬನಿಂದ ಪ್ರೇರಿತವಾಗದೆ ಇದ್ದರೂ ಕರುಗಳ ವೃದ್ಧಿಗಾಗಿ ಪ್ರವೃತ್ತವಾಗುತ್ತದೆ ಮತ್ತು ತಾನಾಗಿಯೇ ಮೊಸರಿನ ಸ್ವರೂಪವನ್ನು ಹೊಂದುತ್ತದೆ. ಮೋಡಗಳಿಂದ ಸುರಿಸಲ್ಪಟ್ಟ ನೀರು ಜಂಬೀರ, ನಾರಿಕೇಲ ಮುಂತಾದವುಗಳಲ್ಲಿ ನಾನಾರೀತಿಯ ವಿಕಾರವನ್ನು ಹೊಂದುತ್ತದೆ ಮತ್ತು ನದಿಯಾಗಿ ಹರಿಯುತ್ತದೆ. ಹಸುವು ತಿಂದ ಹುಲ್ಲು ಹಾಲಾಗಿ ಪರಿಣಮಿಸುತ್ತದೆ. ಲೋಹವು ಅಯಸ್ಕಾಂತದ ಬಳಿಗೆ ಸೆಳೆಯಲ್ಪಡುತ್ತದೆ. ಆದ್ದರಿಂದ ಅಚೇತನಕ್ಕೆ ಸ್ವತಂತ್ರ ಪ್ರವೃತ್ತಿಯನ್ನು ಅಂಗೀಕರಿಸಿದರೆ ಹಿಂದೆ ಹೇಳಿದ ಸಿದ್ಧಸಾಧನ ಇತ್ಯಾದಿ ದೋಷಗಳು ಬರುವುದಿಲ್ಲ. ಈ ಆಶಂಕೆಯನ್ನು ಪರಿಹರಿಸಲು 'ಓಂ ಪಯೋಽಂಬುವಚ್ಚೇತ್ತತ್ರಾಪಿ ಓಂ' ಎಂಬ ಸೂತ್ರವು ಹೊರಟಿದೆ 'ಪಯೋಽಂಬ್ವಾದಿ' ಇತ್ಯಾದಿ ವಚನದಿಂದ ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ –

..........................ಪಯೋಽಂಬ್ವಾದಿ ಚ ನೋಪಮಾ ।

ಏತತ್ಪ್ರಶಾಸ್ತಿವಚನಾಚ್ಚೇತನಾಚೇತನಸ್ಯ ಚ ॥೨೫॥

ಈ ಚೇತನಾಚೇತನ ಜಗತ್ತಿಗೆ ಪರಮಾತ್ಮನೇ ಪ್ರೇರಕನಾಗಿದ್ದು ಪ್ರವೃತ್ತಿಯನ್ನು ಹೊಂದಿಸುತ್ತಾನೆ ಎಂದು ಪ್ರತಿಪಾದಿಸುವ ಶ್ರುತಿಯು ಇರುವುದರಿಂದ, ಹಾಲು

ನೀರು ಇತ್ಯಾದಿಗಳಲ್ಲಿ ಕಾಣುವ ವಿಕಾರವೇ ಮೊದಲಾದ ಪ್ರವೃತ್ತಿಯು, ಅಚೇತನಕ್ಕೆ ಸ್ವಾತಂತ್ರ್ಯವನ್ನು ಸಮರ್ಥಿಸುವ ವಿಷಯದಲ್ಲಾಗಲೀ, ಅವುಗಳಿಗೆ ಸ್ವಾತಂತ್ರ್ಯವನ್ನು ನಿರಾಕರಿಸುವ ಯುಕ್ತಿಯನ್ನು ಅಲ್ಲಗಳೆಯುವುದಕ್ಕಾಗಲೀ ದೃಷ್ಟಾಂತವಾಗಲಾರದು.

ಇಚ್ಛೆಯನ್ನು ಹೊಂದಿರುವ ಗುಣ ಆತ್ಮನಿಗೇ ಹೊರತು ಜಡಕ್ಕಲ್ಲವೆಂಬ ವಿಷಯದಲ್ಲಿ ಮೊದಲು ಅನುಭವವನ್ನು ಪ್ರಮಾಣವಾಗಿ ಹೇಳಲಾಯಿತು. ಅದಕ್ಕೆ ಶ್ರುತಿವಿರೋಧವನ್ನು ಹೇಳಿದಾಗ ಅಂತಃಕರಣಧರ್ಮ ಮತ್ತು ಆತ್ಮಧರ್ಮ ಎಂದು ಕಾಮವು ಎರಡು ವಿಧವಾಗಿರುವುದರಿಂದ ಶ್ರುತಿಯ ವಿರೋಧವಿಲ್ಲವೆಂದು ಹೇಳಲಾಯಿತು. ಅಂತೂ ಆತ್ಮನಿಗೆ ಇಚ್ಛೆಯುಂಟು ಎಂಬ ವಿಷಯವನ್ನು ಕೈಬಿಟ್ಟಂತಯೇ ಆಯಿತು. ಇದು 'ಘಟ್ಟಕುಟೀ ಪ್ರಭಾತನ್ಯಾಯ' ವನ್ನೇ ಅನುಸರಿಸಿದಂತೆ ಎಂದು ಪೂರ್ವಪಕ್ಷಿಯ ಆಕ್ಷೇಪ (ಘಟ್ಟ ಎಂದರೆ ಸುಂಕದ ಕಟ್ಟೆ. ಅಲ್ಲಿ ಕಾಯುವವರಿಗಾಗಿ ಇರುವ ಚಿಕ್ಕ ಮನೆಗೆ ಕುಟೀ ಎನ್ನುತ್ತಾರೆ. ಸುಂಕವನ್ನು ತಪ್ಪಿಸುವುದಕ್ಕೋಸ್ಕರ ಬೇರೆ ದಾರಿಯಿಂದ ಊರನ್ನು ಸೇರಬೇಕೆಂದು ಕೆಲವು ವರ್ತಕರು ರಾತ್ರಿಯಲ್ಲಿ ಆ ದಾರಿಯನ್ನು ಕಾಣದೆ ಹುಡುಕುತ್ತ ಅಲೆದು ಕೊನೆಗೆ ಸುಂಕದ ಕಟ್ಟೆಯ ಬಳಿ ಬರುವುಷ್ಟರಲ್ಲಿ ಬೆಳಗಾಯಿತು. ಇದೇ ಘಟ್ಟಕುಟೀನ್ಯಾಯ). ಈ ಆಕ್ಷೇಪವನ್ನು ಸಿಂಹಾವಲೋಕನ ನ್ಯಾಯದಿಂದ 'ದ್ವೈವಿಧ್ಯೇಽಪಿ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ದ್ವೈವಿಧ್ಯೇಽಪಿ ತು ಕಾಮಾದೇಃ ಕುತಃ ಸ್ವಾಮಿತ್ವಮಾತ್ಮನಃ ।

ಸಾಕ್ಷಾದನುಭವಾರೂಢಂ ಶಕ್ಯತೇಽಪೋದಿತುಂ ಕ್ವಚಿತ್ ॥೨೬॥

ಕಾಮಾದಿಗಳಿಗೆ ದ್ವೈವಿಧ್ಯವಿದ್ದರೂ, ಸಾಕ್ಷಾತ್ತಾಗಿ ಅನುಭವಸಿದ್ಧನಾದ ಆತ್ಮನಿಗೆ ಕಾಮಾದಿಗಳ ಮೇಲಿನ ಸ್ವಾಮಿತ್ವವನ್ನು ಯಾವ ಪ್ರಮಾಣದಿಂದ ಎಲ್ಲಿಯಾದರೂ ಅಲ್ಲಗಳೆಯಲು ಶಕ್ಯವೇ? ಯಾವ ರೀತಿಯಿಂದಲೂ ಶಕ್ಯವಿಲ್ಲ ಎಂದು ತಾತ್ಪರ್ಯ.

(ಆತ್ಮಧರ್ಮರೂಪ ಹಾಗೂ ಮನೋವೃತ್ತಿರೂಪ ಎಂಬುದಾಗಿ ಕಾಮವು ಎರಡು ವಿಧವು. ಇವೆರಡರಲ್ಲಿ ಮನೋವೃತ್ತಿರೂಪವಾದ ಕಾಮದ ಮೇಲೆ ಆತ್ಮನಿಗೇ ಸ್ವಾಮಿತ್ವವು, ಹೊರತು ಮನಸ್ಸಿಗಲ್ಲ. ಏಕೆಂದರೆ 'ನಾನು ಇಚ್ಛಿಸುತ್ತೇನೆ' ಎಂಬ ಸಾಕ್ಷಿರೂಪ ಅನುಭವದಿಂದ ಇದು ಸಿದ್ಧವಾಗಿದೆ.)

ಹಾಗಾದರೆ ಆತ್ಮನಿಗೇ ಕಾಮದ ಮೇಲೆ ಸ್ವಾಮಿತ್ವವಿರಲಿ, ಮನಸ್ಸಿಗೆ ಸ್ವಾಮಿತ್ವ ಇಲ್ಲದಿದ್ದರೂ ಚಿಂತೆಯಿಲ್ಲ. ಆದರೂ ವಿರೋಧ ಪರಿಹಾರವಾಗುವುದಿಲ್ಲ. ಏಕೆಂದರೆ ಇಚ್ಛಾಸ್ವಾಮಿತ್ವವು ಇಲ್ಲವಾದರೂ ಯಾವುದೋ ಒಂದು ರೀತಿಯ ಇಚ್ಛೆಯ ಸಂಬಂಧವನ್ನು ಮನಸ್ಸಿಗೆ ಅಂಗೀಕರಿಸಲಾಗಿದೆ. ಈ ಆಶಂಕೆಯನ್ನು 'ಇಚ್ಛಾ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಇಚ್ಛಾಸ್ವಾಮಿತ್ವಮೇವೋಕ್ತಮಿಚ್ಛಾವತ್ತ್ವಂ ನ ಚಾಪರಮ್ ।

'ಅಚೇತನೇಚ್ಛಾಪಗತಾ' ಇತ್ಯಾದಿಗಳಲ್ಲಿ ಇಚ್ಛೆಯ ಮೇಲಿನ ಸ್ವಾಮಿತ್ವವನ್ನೇ ಇಚ್ಛೆಯನ್ನು ಹೊಂದಿರುವಿಕೆ ಎಂಬ ಅರ್ಥದಲ್ಲಿ ಹೇಳಲಾಗಿದೆ. ಹೊರತು ಇಚ್ಛೆಗೆ ಉಪಾದಾನವೆಂದು ಹೇಳಿಲ್ಲ. ಇಚ್ಛಾಸ್ವಾಮಿತ್ವ ರೂಪವಾದ ಇಚ್ಛಾವತ್ತ್ವವು ಕರ್ತೃತ್ವಕ್ಕೆ ಉಪಯುಕ್ತವು, ಹೊರತು ಇಚ್ಛೋಪಾದಾನತ್ವವಲ್ಲ. ಆತ್ಮನಿಗೆ ಇಚ್ಛಾ ಸ್ವಾಮಿತ್ವವಿದ್ದ ಪ್ರಯುಕ್ತ ಅವನು ಇಚ್ಛಾನುಸಾರವಾಗಿ ಪ್ರಯತ್ನಿಸುತ್ತಾನೆ. ಇಚ್ಛೆಗೆ ಉಪಾದಾನವಾದ ಅಚೇತನವಾದ ಮನಸ್ಸೇ ಪ್ರಯತ್ನಿಸುವುದಿಲ್ಲ.

ಹಾಗಾದರೆ ಸಂಪೂರ್ಣವಾಗಿ ಸ್ವಾಧೀನದಲ್ಲಿರುವ ವಸ್ತುವು ಮಾತ್ರ ಯಥೇಷ್ಟ ವಿನಿಯೋಗಕ್ಕೆ ಬರುವುದು. ಯಥೇಷ್ಟವಾಗಿ ವಿನಿಯೋಗಿಸುವವನು ಮಾತ್ರ ಸ್ವಾಮಿಯೆನಿಸುತ್ತಾನೆ. ಆದರೆ ಇಚ್ಛೆಗೆ ಸಂಪೂರ್ಣ ವಿನಿಯೋಗಿತ್ವವೂ, ಇಚ್ಛೆಯನ್ನು ಯಥೇಷ್ಟವಾಗಿ ವಿನಿಯೋಗಿಸುವಂಥಹ ಇಚ್ಛಾಸ್ವಾಮಿತ್ವವೂ ಇರುವುದಿಲ್ಲ. ಹೀಗೆ ಆಕ್ಷೇಪಿಸಿದರೆ ಅದಕ್ಕೆ ಉತ್ತರವನ್ನು **ಕಿಂಚಿತ್** ಇತ್ಯಾದಿ ವಚನದಿಂದ ಹೇಳುತ್ತಾರೆ –

ಕಿಂಚಿತ್ತದ್ವಶಗತ್ವೇಽಪಿ ಸ್ವಾಮಿತ್ವಂ ಲೋಕವದ್ಭವೇತ್ ।।೨೭।।

ಪ್ರಬಲವಿರೋಧದ ದೆಶೆಯಿಂದ ಇಚ್ಛೆಯು ಆತ್ಮನಿಗೆ ಅತ್ಯಂತ ವಶವಾಗದೇ ಇದ್ದರೂ, ಸ್ವಲ್ಪಮಟ್ಟಿಗೆ ವಶದಲ್ಲಿರುವುದರಿಂದ ಆತ್ಮನಿಗೆ ಇಚ್ಛಾಸ್ವಾಮಿತ್ವವು ಇದ್ದೇ ಇರುವುದು. ಲೋಕದಲ್ಲಿ ಗೋವಳನಿಗೆ ಗೋವು ವಶವಾಗಿರುವಂತೆ. ಗೋವಳನಿಗೆ ಗೋವು ಅತ್ಯಂತ ವಶವಲ್ಲದಿದ್ದರೂ, ಕಿಂಚಿತ್ ವಶವಾಗಿರುವುದರಿಂದ ಅವನನ್ನು ಗೋವಿನ ಒಡೆಯ ಎಂದೇ ಕರೆಯುವುದು ಲೋಕರೂಢಿ.

ಅಚೇತನದ ಕರ್ತೃತ್ವವನ್ನು ನಿರಾಕರಿಸಲು, ಆತ್ಮನಿಗೇ ಇಚ್ಛೆಯ ಮೇಲಿನ ಸ್ವಾಮಿತ್ವವು, ಮನಸ್ಸಿಗೆ ಅಲ್ಲ ಎಂಬುದನ್ನು ಸಮರ್ಥಿಸಲಾಯಿತು. ಹಾಗಾದರೆ ಈಶ್ವರನಿಗೂ, ಕುಂಬಾರಾದಿಗಳ ಮನೋವೃತ್ತಿರೂಪವಾದ ಇಚ್ಛೆಯ ಸ್ವಾಮಿತ್ವವು ಇಲ್ಲವಾಗುವುದರಿಂದ, ಘಟಾದಿ ಕರ್ತೃತ್ವವು ಇಲ್ಲವಾಗಲಿ ಎಂಬುದಾಗಿ ಆಕ್ಷೇಪ ಬಂದರೆ, ಅದನ್ನು 'ಸರ್ವಾತ್ಮ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಸರ್ವಾತ್ಮತಂತ್ರಕಾಮಾದೇಃ ಕಿಮುತೈವ ಪರೇಶಿತುಃ ।

ಜೀವನಿಗೂ ಕಾಮಾದಿಗಳ ಮೇಲೆ ಸ್ವಾಮಿತ್ವವಿದೆ ಎಂಬುದನ್ನು ಹಿಂದೆ ಸಮರ್ಥಿಸಲಾಗಿದೆ. ಸರ್ವರೀತಿಯಿಂದಲೂ ಎಲ್ಲ ಜೀವರುಗಳ ಎಲ್ಲ ರೀತಿಯ ಪ್ರವೃತ್ತಿಗಳಿಗೆ ಕಾರಣವಾದ ಕಾಮಾದಿಗಳು ಸದಾಕಾಲವೂ ಪರಮಾತ್ಮನ ಅಧೀನವಾಗಿಯೇ ಇರುತ್ತವೆ. ಅಂಥಹ ಸರ್ವೋತ್ತಮನಾದ ಶ್ರೀಹರಿಗೆ ಇಚ್ಛಾಸ್ವಾಮಿತ್ವವಿದೆಯೆಂದು ಬೇರೆ ಹೇಳಬೇಕೇನು?

ಹಾಗಾದರೆ 'ಕಾಮಃ ಸಂಕಲ್ಪಃ' ಎಂಬುದಾಗಿ ಮನಸ್ಸಿಗೆ ಕಾಮಸ್ವಾಮಿತ್ವವನ್ನು ಹೇಳುವ ವೇದವಚನವಿರುವುದರಿಂದ, ಅನುಭವದ ಬಲದಿಂದ ಆತ್ಮನಿಗೇ ಕಾಮಸ್ವಾಮಿತ್ವವೆಂದು ಹೇಳಿದ್ದು ಅಯುಕ್ತ ಎಂದು ಆಕ್ಷೇಪಿಸಿದರೆ –

ನ ಚಾನುಭವಗಂ ಕಾಮಸ್ವಾಮಿತ್ವಂ ವೇದವಾಗಪಿ ।।೨೮।।

ಶಕ್ತಾಪವದಿತುಂ ತಸ್ಮಾತ್ಸಾ ತದನ್ಯಾಭಿಧಾಯಿನೀ ।

ಅನುಭವದಿಂದ ಸಿದ್ಧಿಸುವ ಆತ್ಮನ ಕಾಮಸ್ವಾಮಿತ್ವವನ್ನು ವೇದವಾಕ್ಯವೂ ಕೂಡ ಅಲ್ಲಗಳೆಯಲು ಸಮರ್ಥವಲ್ಲ. ಪ್ರಬಲವಾದ ಅನುಭವದಿಂದ ಶ್ರುತಿಯು ಬಾಧಿತವಾದುದರಿಂದ, ಆ ಶ್ರುತಿಯು ಸ್ವಾಮಿತ್ವದಿಂದ ಬೇರೆಯಾದ ಕಾಮದ ಉಪಾದಾನತ್ವವನ್ನು ಹೇಳುವುದು ಎಂದು ತಿಳಿಯಬೇಕು.

ವಿವರಣೆ: ಜೀವ ಮತ್ತು ಈಶ್ವರ ಇಬ್ಬರೂ ಜೀವನ ಶರೀರದಲ್ಲಿ ಇರುತ್ತಾರೆ. ಆದರಲ್ಲಿ ಈಶ್ವರನು ಅಂತಃಕರಣವನ್ನು ಸ್ಪಷ್ಟವಾಗಿ ನೋಡಿ, ಅದರಲ್ಲಿ ಜ್ಞಾನ ಇಚ್ಛಾ ಪ್ರಯತ್ನರೂಪವಾದ ವೃತ್ತಿಗಳನ್ನು ತನ್ನ ಇಚ್ಛಾದಿಗಳಿಂದ ಹುಟ್ಟಿಸಿ, ಬಾಹ್ಯ ಸಾಧನಗಳನ್ನು ಅಧಿಷ್ಠಾನ ಮಾಡಿ, ಘಟಾದಿಗಳನ್ನು ಉತ್ಪಾದಿಸುತ್ತಾನೆ. ಜೀವನಾದರೋ ಈಶ್ವರನಿಂದ ಕೊಡಲ್ಪಟ್ಟ ಸ್ವಾಮಿತ್ವವನ್ನು ಹೊಂದಿರುತ್ತಾನೆ. ಜೀವನ ಕಾಮ ಮುಂತಾದ ಸಕಲ ವೃತ್ತಿಗಳಿಗೂ ಈಶ್ವರನೇ ಕಾರಣನೆಂಬುದಾಗಿ ಭಗವದ್ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನ ವಚನವಿದೆ – "ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾ ಸತ್ಯ ದಮಃ ಶಮಃ। ಸುಖಂ ದುಃಖಂ ಭವೋ ಬಾವೋ ಭಯಂ ಚಾಭಯಮೇವ ಚ।। ಅಹಿಂಸಾ ಸಮತಾ ತುಷ್ಟಿಃ ತಪೋ ದಾನಂ ಯಶೋಽಯಶಃ। ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ।।" ಆದ್ದರಿಂದ ಈಶ್ವರನಿಗೇ ಮುಖ್ಯವಾದ ಸ್ವಾಮಿತ್ವ ಹಾಗೂ ಕರ್ತೃತ್ವ. ಜೀವನಿಗಾದರೋ ಅಮುಖ್ಯವಾದ ಸ್ವಾಮಿತ್ವ ಹಾಗೂ ಕರ್ತೃತ್ವ. ಭಾಗವತದ ಪಂಚಮಸ್ಕಂದ ಹತ್ತನೆಯ ಅಧ್ಯಾಯದಲ್ಲಿ ಜಡಭರತನು ರಹೂಗಣ ರಾಜನಿಗೆ ಇದೇ ಪ್ರಮೇಯವನ್ನೇ "ಸ್ವಸ್ವಾಮಿಭಾವೋ ಧ್ರುವ ಏಷ ಯತ್ರ ತರ್ಹ್ಯಚ್ಯುತೇಽಸಾವಿತಿ ಕೃತ್ಯಯೋಗಃ" (ಎಂದಿಗೂ ಅಳಿಯದ ಸ್ವಾಮಿ–ಭೃತ್ಯ ಸಂಬಂಧವು ಅಚ್ಯುತನಲ್ಲಿ ಇರುತ್ತದೆ) ಇತ್ಯಾದಿ ಮಾತುಗಳಲ್ಲಿ ಹೇಳುತ್ತಾನೆ. ಅಚ್ಯುತನಲ್ಲಿಯೇ ಮುಖ್ಯವಾದ ಸ್ವಾಮಿತ್ವವು, ಇತರರಲ್ಲಿ ಸೇವಕತ್ವವೇ ಇರುವುದು. ಈಶ್ವರನಿಂದ ಇತರರಲ್ಲಿ ಸ್ವಾಮಿ–ಭೃತ್ಯ ಭಾವವು ಅಮುಖ್ಯವು. ಆದ್ದರಿಂದಲೇ ಇತರರಲ್ಲಿ ಮುಖ್ಯವಾದ ಕರ್ತೃತ್ವವು ಸಂಭವಿಸುವುದಿಲ್ಲ ಎಂದು ಭಾಗವತದ ಈ ಮಾತಿನಿಂದ ಸಿದ್ಧವಾಗುತ್ತದೆ.

ಇನ್ನು ಕಾಮಾದಿಗಳ ಸ್ವರೂಪವಾದರೋ ಸಾಕ್ಷಿರೂಪ ಅನುಭವದಿಂದಲೇ ಸಿದ್ಧವಾದುದರಿಂದ ಅನುಭವಕ್ಕೆ ಉಪಜೀವ್ಯತ್ವವು ಸಿದ್ಧಿಸುತ್ತದೆ. ಅಲ್ಲದೆ ಆ

ಸಾಕ್ಷಿಯೂ ಆತ್ಮನಿಗೆ ಕಾಮಾದಿಗಳ ಮೇಲೆ ಸ್ವಾಮಿತ್ವವನ್ನೇ ವಿಷಯೀಕರಿಸುತ್ತದೆ. ಉಪಜೀವ್ಯವೇ ಪ್ರಬಲವಾದ್ದರಿಂದ ಉಪಜೀವಕದಿಂದ ಅದು ಬಾಧಿತವಾಗುವುದಿಲ್ಲ. ಅಪೌರುಷೇಯತ್ವದ ನಿಮಿತ್ತ ವೇದಕ್ಕೆ ಪ್ರಾಬಲ್ಯವಿದ್ದರೂ, ಉಪಜೀವ್ಯಕ್ಕಿಂತಲೂ ದುರ್ಬಲವೇ ಆಗುವುದು. 'ಉಪಜೀವ್ಯ ವಿರೋಧೇ ತು ನ ಪ್ರಾಮಾಣ್ಯಮಮುಷ್ಯಚ' ಎಂಬುದಾಗಿ ತತ್ತ್ವನಿರ್ಣಯದಲ್ಲಿನ ಉಕ್ತವಾಗಿರುವ ಬ್ರಹ್ಮತರ್ಕದ ವಚನದ ಪ್ರಕಾರ ಉಪಜೀವ್ಯಕ್ಕೆ ವಿರೋಧವು ಪ್ರಾಮಾಣ್ಯಕ್ಕೆ ಬಾಧಕವು. ಉಪಜೀವ್ಯವಾದ ಕಾರಣ ಪ್ರಬಲವಾದ ಸಾಕ್ಷಿ ಅನುಭವದಿಂದ ಶ್ರುತಿಯು ಬಾಧಿತವಾಗುವುದರಿಂದ 'ಕಾಮಃ ಸಂಕಲ್ಪಃ' ಎನ್ನುವ ಶ್ರುತಿಯು ಮನಸ್ಸಿಗೆ ಕಾಮಸ್ವಾಮಿತ್ವವನ್ನು ಹೇಳುವುದಿಲ್ಲ, ಆದ್ದರಿಂದ ಉಪಾದಾನತ್ವ ವನ್ನು ಹೇಳುತ್ತದೆ ಎಂದು ಅರ್ಥಮಾಡಬೇಕು.

ಕೇವಲ ಉಪಜೀವ್ಯದಿಂದ ಬಾಧ ಬರುವುದೆಂಬ ಕಾರಣದಿಂದಷ್ಟೇ ಹೀಗೆ ಶ್ರುತಿಗೆ ಅನ್ಯಾರ್ಥ ಮಾಡಬೇಕು ಎಂದು ಹೇಳಿಲ್ಲ, ಮತ್ತೆ ಯುಕ್ತಿವಿರೋಧವೂ ಇದೆ ಎಂದು ಹೇಳುತ್ತಾರೆ –

ಮೋಕ್ಷಕಾಮೋ ಭವೇದನ್ಯೋ ಯದಿ ಮುಕ್ತಾದ್ಭವಿಷ್ಯತಃ ।।೨೯।।

ಮೋಕ್ಷಕಾಮಸ್ಯ ಕಿಂ ತೇನ ಸ್ವನಾಶಾರ್ಥಂ ಚ ಕೋ ಯತೇತ್ ।

ಕಾಮವು ಅಂತಃಕರಣದ ಪ್ರವೃತ್ತಿಯೆಂದು ಒಪ್ಪಿದರೆ, ಮೋಕ್ಷವಿಷಯಕ ಕಾಮವೂ ಅಂತಃಕರಣಕ್ಕೇ ಆಗಬೇಕು ಎಂದಾಗುವುದು. ಆದರೆ ಮೋಕ್ಷವು ಆತ್ಮನಿಗೆ ಎಂದು ಪ್ರಸಿದ್ಧವು. ಇದರಿಂದ ಮೋಕ್ಷವನ್ನು ಅಪೇಕ್ಷಿಸುವವನು ಮುಂದೆ ಮುಕ್ತಿಯನ್ನು ಹೊಂದುವವನಿಂದ ಭಿನ್ನನು ಎಂದು ಹೇಳಿದಂತಾಯಿತು. ಆದ್ದರಿಂದ ಮುಕ್ತಿಯನ್ನು ಇಚ್ಛಿಸುವ ಹಾಗೂ ಅದಕ್ಕಾಗಿ ಸಾಧನೆಯನ್ನು ಮಾಡುವ ಅಧಿಕಾರಿಗೆ ಏನೂ ಪ್ರಯೋಜನವಾಗದು. ಯಾವ ಪ್ರಯೋಜನವೂ ಇಲ್ಲದ ಸಾಧನೆಯನ್ನು ಮಾಡಿ ಯಾರು ತಾನೆ ತನ್ನ ನಾಶಕ್ಕಾಗಿ ಪ್ರಯತ್ನಿಸುತ್ತಾರೆ? ಇದು ಲೋಕದ ವ್ಯವಹಾರಕ್ಕೂ ವಿರುದ್ಧವೇ ಆಗಿದೆ. ಏಕೆಂದರೆ ಫಲದ ಅಪೇಕ್ಷೆ ಮತ್ತು ಸಾಧನದ ಅನುಷ್ಠಾನ ಇವೆರಡೂ ಒಂದೇ ಕಡೆಯಲ್ಲಿರುವುದು ಲೋಕದಲ್ಲಿ ಕಂಡುಬರುವುದು.

ಈ ಪ್ರಕಾರವಾಗಿ ನಿರೀಶ್ವರ ಸಾಂಖ್ಯಮತವನ್ನು ಸಾಧಾರಣ ದೂಷಣಗಳಿಂದ ನಿರಾಕರಿಸಿ, ಪ್ರಕೃತಿಗೆ ಕರ್ತೃತ್ವವು ಆತ್ಮನಿಗೆ ಭೋಕ್ತೃತ್ವವು ಎಂದು ಹೇಳುವವರ ಮತವನ್ನು 'ಕರ್ತೃತ್ವಂ' ಇತ್ಯಾದಿ ಮಾತುಗಳಿಂದ ನಿರಾಕರಿಸುತ್ತಾರೆ –

ಕರ್ತೃತ್ವಂ ಯಸ್ಯ ತಸ್ಯೈವ ಭೋಕ್ತೃತ್ವಮುಪಲಭ್ಯತೇ ।।೩೦।।

ವಿಭಾಗೇ ಚ ತಯೋರ್ಮಾನಂ ನೈವ ಕಿಂಚಿತ್ಕ್ವಚಿದ್ಭವೇತ್ ।

ಯಾವನಿಗೆ ಕರ್ತೃತ್ವವೋ ಅವನಿಗೇ ಭೋಕ್ತೃತ್ವವೆಂಬುದು ಲೋಕದಲ್ಲಿ

ಕಂಡುಬರುತ್ತದೆ. ಹಾಗಿರುವಾಗ ಕರ್ತೃತ್ವ ಮತ್ತು ಭೋಕ್ತೃತ್ವಗಳು ಒಂದೆಡೆಯಲ್ಲಿ ಕೂಡಿರುವುದಿಲ್ಲವೆಂಬುದಕ್ಕೆ ಎಲ್ಲಿಯೂ ಯಾವ ಪ್ರಮಾಣವೂ ಕಂಡುಬಂದಿಲ್ಲ.

ಆತ್ಮನಿಗೆ ಮೋಕ್ಷವಾಗದಿರಲಿ ಎಂದು ನೀವು ಆಪಾದನೆ ಮಾಡಿದ್ದು ನಮಗೆ ಇಷ್ಟವೇ ಆಗಿದೆ. ಏಕೆಂದರೆ ಪ್ರಕೃತಿಗೇ ಮೋಕ್ಷವೆಂದು ನಮ್ಮಿಂದ ಅಂಗೀಕೃತವಾಗಿದೆ. ಏಕೆಂದರೆ ಬಂಧವೂ ಪ್ರಕೃತಿಯಲ್ಲಿಯೇ ಇರುವುದು. ಹೀಗೆ ಹೇಳಿದರೆ –

ಸರ್ವಮಾನವಿರೋಧೈಕದುರ್ದೀಕ್ಷಾದೀಕ್ಷಿತಸ್ತ್ವಯಮ್ ।

ಮಾಯಾವದ್ಯುಪಮಾಂ ಯಾಯಾತ್ ತಚ್ಚಶಬ್ದಾನ್ನಿರಾಕೃತಃ ॥೩೧॥

ಈ ಸಾಂಖ್ಯನಿಗೆ ಸರ್ವಪ್ರಮಾಣಗಳ ವಿರೋಧವನ್ನು ಮಾಡುವುದರಲ್ಲಿಯೇ ಮುಖ್ಯವಾದ ದುಷ್ಟದೀಕ್ಷೆಯಿರುವುದು. ಹೀಗೆ ಮಾಯಾವಾದಿಗಳ ಸಾದೃಶ್ಯವಿರುವ ಕಾರಣ 'ರಚನಾನುಪತ್ತೇಶ್ಚ' ಎಂಬಲ್ಲಿ ಚ ಶಬ್ದದಿಂದ ಸಾಂಖ್ಯನು ನಿರಾಕರಿಸಲ್ಪಟ್ಟಿದ್ದಾನೆ.

ಅನ್ಯತ್ರಾಭಾವಾಧಿಕರಣಮ್

ಓಂ ಅನ್ಯತ್ರಾಭಾವಾಚ್ಚ ನ ತೃಣಾದಿವತ್ ಓಂ

ಈ ಅಧಿಕರಣದಲ್ಲಿ ಈಶ್ವರಾನುಗ್ರಹೀತ ಜಡಪ್ರಕೃತಿಯು ಜಗತ್ಕರ್ತೃ ಎಂದು ವಾದಿಸುವ ಪತಂಜಲಿ ಮತವನ್ನು ಅಂದರೆ ಸೇಶ್ವರ ಸಾಂಖ್ಯಮತವನ್ನು ನಿರಾಕರಿಸುತ್ತಾರೆ.

ಈ ಸೂತ್ರಕ್ಕೆ ಕೆಲವರು ಹೀಗೆ ವ್ಯಾಖ್ಯಾನ ಮಾಡುತ್ತಾರೆ –

ಗೋವಿನಿಂದ ಭಕ್ಷಿಸಲ್ಪಟ್ಟ ಹುಲ್ಲು ಎಲೆ ಮುಂತಾದವು ತಾವಾಗಿಯೇ ಹಾಲಾಗಿ ಪರಿವರ್ತನೆ ಹೊಂದುತ್ತವೆ. ಹಾಗೆಯೇ ಪ್ರಧಾನವು ತನ್ನಷ್ಟಕ್ಕೇ ಮಹದಾದಿ ರೂಪದಿಂದ ಪರಿಣಾಮ ಹೊಂದುತ್ತದೆ ಎಂಬ ಆಶಂಕೆಯನ್ನು ಇಲ್ಲಿ ನಿರಾಕರಿಸಲಾಗುತ್ತದೆ. ತೃಣಾದಿಗಳಂತೆ ಪ್ರಧಾನಕ್ಕೆ ಸ್ವಯಂಪರಿಣಾಮ ಹೇಳುವುದು ಕೂಡುವುದಿಲ್ಲ. ಏಕೆಂದರೆ ತೃಣಾದಿಗಳಿಗೂ ಸ್ವಯಂ ಪರಿಣಾಮವಿರುವುದಿಲ್ಲ. ಏಕೆಂದರೆ ಭಕ್ಷಿತವಾದ ತೃಣಾದಿಗಳು ಮಾತ್ರ ಕ್ಷೀರವಾಗುತ್ತವೆ. ಬೇರೆ ಕಡೆಯಲ್ಲಿರುವ ತೃಣಾದಿಗಳು ಕ್ಷೀರವಾಗಿ ಪರಿಣಾಮ ಹೊಂದುವುದಿಲ್ಲ.

ಈ ವ್ಯಾಖ್ಯಾನವು ಸರಿಯಲ್ಲ. ಹೇಗೆಂದರೆ ಮೊದಲು ಮಾಡಿದ ಆಶಂಕೆಯೇ ಅಯುಕ್ತ. ಏಕೆಂದರೆ 'ಪಯೋಂಬುವಚ್ಚೇತ್ ತತ್ರಾಪಿ' ಎಂಬ ಸೂತ್ರದಿಂದಲೇ ಈ ಆಶಂಕೆಯನ್ನು ಪರಿಹರಿಸಲಾಗಿದೆ. ಇನ್ನು ಈ ಆಶಂಕೆಗೆ ಸೂಚಿಸಿರುವ ಪರಿಹಾರವೂ ಯುಕ್ತವಾದುದಲ್ಲ. ಗೋವಿನಲ್ಲಿ ತೃಣಾದಿಗಳು ಕ್ಷೀರರೂಪದಿಂದ ಪರಿಣಾಮ

ಹೊಂದುತ್ತವೆ, ಬೇರೆ ಕಡೆಯಲ್ಲಿ ಹಾಗೆ ಆಗುವುದಿಲ್ಲ ಎಂದು ಹೇಳುವುದರಿಂದ, ಪ್ರಕೃತಿಗೆ ಸಹಕಾರಿ ಕಾರಣವೊಂದಿದೆ ಎಂದು ಹೇಳಿದಂತಾಗುತ್ತದೆ. ಹೊರತು ಈಶ್ವರನ ಅಪೇಕ್ಷೆಯಿದೆ ಎಂದು ಹೇಳಿದಂತಾಗುವುದಿಲ್ಲ. ಆದ್ದರಿಂದ ಇದು ಸೂತ್ರದ ಯಥಾರ್ಥವಾದ ವ್ಯಾಖ್ಯಾನವೆನಿಸುವುದಿಲ್ಲ.

ಹಾಗಾದರೆ ಈ ಸೂತ್ರದ ಸರಿಯಾದ ವ್ಯಾಖ್ಯಾನವೇನು ಎಂದು ಕೇಳಿದರೆ, ಈ ಅಧಿಕರಣದಲ್ಲಿ ನಿರಾಕರಿಸಲ್ಪಡುವ ಸೇಶ್ವರಸಾಂಖ್ಯಮತವನ್ನು ಮೊದಲು ಅನುವಾದ ಮಾಡುತ್ತಾರೆ –

ಸಾಂಖ್ಯಸ್ತು ಸೇಶ್ವರೋ ಬ್ರೂತೇ ಕ್ಷೇತ್ರಾನುಗ್ರಹಶಕ್ತಿಮಾನ್ ।

ಅಸ್ತೀಶ್ವರಃ ಸ್ವಯಂ ಭಾತಃ ಕ್ಲೇಶಕರ್ಮಾದಿವರ್ಜಿತಃ ।।೩೨।।

ಕ್ಷೇತ್ರಶಕ್ತಿಮತೀ ಚೈವ ಪ್ರಕೃತಿರ್ಬೀಜಶಕ್ತಿಮಾನ್ ।

ಜೀವಃ ಪರ್ಜನ್ಯವದ್ದೈವಶಕ್ತಿಮಾನೀಶ್ವರಃ ಸ್ಮೃತಃ ।।೩೩।।

ಪೃಥಿವೀವತ್ಪ್ರಧಾನಂ ತಜ್ಜೀವಃ ಸನ್ನಿಧಿಮಾತ್ರತಃ ।

ಬೀಜಾವಪನಕರ್ತೈವೇತ್ಯತ್ರ ಪ್ರಾಹ ಸ್ವಯಂ ಪ್ರಭುಃ ।।೩೪।।

ಈಶ್ವರನನ್ನು ಒಪ್ಪುವ ಸಾಂಖ್ಯನು ಹೀಗೆ ಹೇಳುತ್ತಾನೆ – ಈಶ್ವರನು ಕ್ಷೇತ್ರಕ್ಕೆ ಅಂದರೆ ಉಪಾದಾನವಾದ ಪ್ರಕೃತಿಗೆ ಅನುಗ್ರಹ ಮಾಡುವ ಶಕ್ತಿಯುಳ್ಳವನೇ ಆಗಿರುತ್ತಾನೆ. ಅವನು ಇಂದ್ರಿಯಾದಿಗಳ ಅಪೇಕ್ಷೆಯಿಲ್ಲದೆ ಎಲ್ಲವನ್ನೂ ಸ್ವತಃ ತಿಳಿಯುವವನು ಅಂದರೆ ಸರ್ವಜ್ಞನು. ಕ್ಲೇಶ ಕರ್ಮಾದಿಗಳಿಲ್ಲದವನು. ಪ್ರಕೃತಿಯು ಉಪಾದಾನತ್ವ ಶಕ್ತಿಯುಳ್ಳದ್ದು. ಜೀವನೇ ಬೀಜಶಕ್ತಿಯುಳ್ಳವನು. ಪ್ರಕೃತಿ ಹಾಗೂ ಜೀವನ ಶಕ್ತಿಯು ಈಶ್ವರನ ಅಧೀನವಾದುದುಲ್ಲ. ಈಶ್ವರನು ಮೋಡದಂತೆ ಅದೃಷ್ಟ ಸ್ವರೂಪತ್ವ ಶಕ್ತಿಯುಳ್ಳವನೆಂದು ಶ್ರುತಿಸ್ಮೃತಿಗಳಿಂದ ಸಿದ್ಧನು. ಪೃಥಿವಿಗೆ ಸ್ವಾಧೀನವಾದ ಉಪಾದಾನತ್ವ ಶಕ್ತಿಯು ಇರುವ ಹಾಗೆ ಪ್ರಧಾನವು ಸ್ವಾಧೀನವಾದ ಉಪಾದಾನತ್ವ ಶಕ್ತಿಯನ್ನು ಹೊಂದಿರುವುದು. ವೃಕ್ಷಾದಿಗಳ ಬೀಜಗಳ ಹಾಗೆ ಬೀಜನಾದುದರಿಂದ ಜೀವನೂ ಸ್ವಾಧೀನವಾದ ಬೀಜತ್ವ ಶಕ್ತಿಯುಳ್ಳವನು ಎಂದು ಅನುಮೇಯಿಸತಕ್ಕದ್ದು. ಜೀವನು ಕೇವಲ ಸನ್ನಿಧಿ ಮಾತ್ರದಿಂದಲೇ ಬೀಜವನ್ನು ಬಿತ್ತುವವನು ಎನಿಸುತ್ತಾನೆ. ಈಶ್ವರನು ಕೇವಲ ಕ್ಷೇತ್ರಾನುಗ್ರಾಹಕನಾದ್ದರಿಂದ ಬೀಜವನ್ನು ಬಿತ್ತುವುದರಲ್ಲಿ ಅವನ ಪಾತ್ರವಿಲ್ಲ. ಇನ್ನು ಜೀವನೂ ಸಾಕ್ಷಾತ್ತಾಗಿ ಬೀಜವನ್ನು ಬಿತ್ತುವುದಿಲ್ಲ. ಶರೀರ ಮುಂತಾದ ರೂಪದಲ್ಲಿರುವ ಪ್ರಕೃತಿಯೇ ಜೀವನಲ್ಲಿರುವ ಬೀಜತ್ವಶಕ್ತಿಯನ್ನು ಬಳಸಿಕೊಂಡು ಉತ್ಪತ್ತಿಕ್ರಿಯೆಯನ್ನು ನಡೆಸುತ್ತದೆ. ಸನ್ನಿಧಾನವಾದ ಜೀವನಿಗೂ ಶರೀರಾದಿ ಪ್ರಕೃತಿಗೂ ಇರುವ

ಭೇದವನ್ನು ತಿಳಿಯದೆ ಜೀವನೇ ಕರ್ತೃವೆಂದು ಲೋಕದಲ್ಲಿ ವ್ಯವಹಾರವಿರುತ್ತದೆ.

ಈ ರೀತಿಯ ಸೇಶ್ವರ ಸಾಂಖ್ಯರ ವಾದವನ್ನು ಸ್ವಯಂ ಸಮರ್ಥರಾದ ವೇದವ್ಯಾಸರು 'ಅನ್ಯತ್ರಾಭಾವಾಚ್ಚ ನ ತೃಣಾದಿವತ್' ಎನ್ನುವ ಸೂತ್ರದಲ್ಲಿ ನಿರಾಕರಿಸುತ್ತಾರೆ. ಇದನ್ನೇ 'ಅನ್ಯತ್ರ' ಇತ್ಯಾದಿ ವಚನದಿಂದ ಶ್ರೀಮದಾಚಾರ್ಯರು ವಿವರಿಸುತ್ತಾರೆ –

ಅನ್ಯತ್ರ ಕಾऽಪಿ ಶಕ್ತಿರ್ನ ಸ್ವಾತಂತ್ರ್ಯೇಣ ಈಶ ಏವ ಹಿ ।

ಶಕ್ತೀಸ್ತಾಃ ಪ್ರೇರಯತ್ಯಂಜಸ್ತದಧೀನಾಶ್ಚ ಸರ್ವದಾ ॥೩೫॥

ಸತ್ತಾ ಪ್ರಧಾನಪುರುಷಶಕ್ತೀನಾಂ ಚ ಪ್ರತೀತಯಃ ।

ಪ್ರವೃತ್ತಯಶ್ಚ ತಾಃ ಸರ್ವಾಃ ನಿತ್ಯಂ ನಿತ್ಯಾತ್ಮನಾ ಯತಃ ॥೩೬॥

ತಥಾऽನಿತ್ಯತಯಾ ನಿತ್ಯಂ ನಿತ್ಯಶಕ್ತ್ಯಾ ಸ್ವಯೇಶ್ವರಃ ।

ನಿಯಾಮಯತಿ ನಿತ್ಯಂ ಚ ನ ಋತೇ ತ್ವದಿತಿ ಶ್ರುತೇಃ ॥೩೭॥

ಪ್ರಕೃತಿ, ಪುರುಷ, ಬೀಜ ಹಾಗೂ ಪೃಥಿವ್ಯಾದಿಗಳಲ್ಲಿಯೂ ಸ್ವತಂತ್ರವಾಗಿ ಯಾವುದೇ ರೀತಿಯ ಶಕ್ತಿಯೂ ಇರುವುದಿಲ್ಲ. ಆವಾವ ಶಕ್ತಿಗಳನ್ನು ಈಶ್ವರನೇ ಚೆನ್ನಾಗಿ ಪ್ರೇರಿಸುತ್ತಾನೆ ಎಂಬುದಾಗಿ ಶ್ರುತ್ಯಾದಿಗಳಲ್ಲಿ ಪ್ರಸಿದ್ಧವಾಗಿದೆ. ಆದಕಾರಣ ಈಶ್ವರನನ್ನು ಬಿಟ್ಟು ಬೇರೆ ಕಡೆಗಳಲ್ಲಿ ಯಾವ ಶಕ್ತಿಯೂ ಸ್ವತಂತ್ರವಾಗಿ ಇರುವುದಿಲ್ಲ. ಪ್ರಕೃತಿ ಹಾಗೂ ಪುರುಷರಲ್ಲಿರುವ ಶಕ್ತಿಗಳ ಸ್ವರೂಪ, ಪ್ರಮಾವಿಷಯತ್ವ ಹಾಗೂ ಆವಾವ ಪ್ರವೃತ್ತಿಗಳು, ಇವೆಲ್ಲವೂ ಯಾವಾಗಲೂ ಈಶ್ವರನ ಅಧೀನವೇ ಆಗಿರುತ್ತವೆ. ನಿತ್ಯವಾದ ಪದಾರ್ಥಗಳ ನಿತ್ಯತ್ವವೂ, ಅನಿತ್ಯವಾದವುಗಳ ಅನಿತ್ಯತ್ವವೂ ಸರ್ವದಾ ಶ್ರೀಹರಿಯ ಅಧೀನವಾಗಿಯೇ ಇರುತ್ತವೆ. ಶ್ರೀಹರಿಯು ಪರಾಧೀನವಲ್ಲದ ಸ್ವಕೀಯವಾದ ನಿತ್ಯವಾದ ಶಕ್ತಿಯಿಂದ ಅವುಗಳನ್ನು ಸದಾಕಾಲವೂ ನಿಯಮನ ಮಾಡುತ್ತಾನೆ. ಇದಕ್ಕೆ 'ನ ಋತೇ ತ್ವತ್ ಕ್ರಿಯತೇ ಕಿಂಚನಾರೇ' ಇತ್ಯಾದಿ ಶ್ರುತಿಯು ಪ್ರಮಾಣವಾಗಿದೆ. ಆದ್ದರಿಂದ ಹಿಂದೆ ಹೇಳಿದ ಸಾಂಖ್ಯರ ಮತ ಅಯುಕ್ತವು.

ಇನ್ನು ಪ್ರಧಾನಾದಿಗಳ ಸತ್ತಾ ಪ್ರವೃತ್ತಿ ಪ್ರಮಿತಿಗಳು ಭಗವದಧೀನವೆಂದು ಯಾವುದು ಹೇಳಲ್ಪಟ್ಟಿತೋ ಅದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ –

ಸ್ವಬಾವಜೀವಕರ್ಮಾಣಿ ದ್ರವ್ಯಂ ಕಾಲಃ ಶ್ರುತಿಃ ಕ್ರಿಯಾಃ ।

ಯತ್ಪ್ರಸಾದಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ ॥೩೮॥

ಇತಿ ಶ್ರುತೇರ್ನ ಸತ್ತಾದ್ಯಾ ಅಪಿ ನಾರಾಯಣಂ ವಿನಾ ।

ತತ್ಪತಂಜಲಿವಿಂಧ್ಯಾದಿಮತಂ ನ ಪುರುಷಾರ್ಥದಮ್ ॥೬೧॥

ಸ್ವಭಾವ, ಜೀವ, ಧರ್ಮಾಧರ್ಮಗಳ ಅಭಿವ್ಯಕ್ತಿ, ದ್ರವ್ಯ, ಕಾಲ, ವೇದ, ಪರಿಸ್ಪಂದಗಳು ಇವೆಲ್ಲವೂ ಯಾವ ಶ್ರೀಹರಿಯ ಅನುಗ್ರಹದಿಂದ ಇರುತ್ತವೆಯೋ, ಹಾಗೂ ಅನುಗ್ರಹವಿಲ್ಲದೆ ಇರುವುದಿಲ್ಲವೋ ಹೀಗೆ ಶ್ರುತಿಯಿರುವುದರಿಂದ – ಪ್ರಧಾನಾದಿಗಳ ಸತ್ತಾದಿಗಳೂ ಕೂಡ ಶ್ರೀಹರಿಯ ಪ್ರೇರಣೆಯಿಲ್ಲದೆ ಇರುವುದಿಲ್ಲ. ಆದುದರಿಂದ ಪತಂಜಲಿ (ಸೇಶ್ವರ ಸಾಂಖ್ಯ), ವಿಂಧ್ಯ (ನಿರೀಶ್ವರ ಸಾಂಖ್ಯ) ಮುಂತಾದ ಹಾಗೂ ಇವರ ಏಕದೇಶಿಗಳಾದ ಪಂಚಶಿಖ, ಕೃಷ್ಣ ಮುಂತಾದವರ ಮತವು ಪುರುಷಾರ್ಥಪ್ರದವಲ್ಲ. ಆದ್ದರಿಂದ ತ್ಯಾಜ್ಯವೆಂದು ಅರ್ಥ.

ಅಭ್ಯುಪಗಮಾಧಿಕರಣಮ್

ಓಂ ಅಭ್ಯುಪಗಮೇಽಪ್ಯರ್ಥಾಭಾವಾತ್ ಓಂ

ಈ ಅಧಿಕರಣದಲ್ಲಿ ಚಾರ್ವಾಕ ಮತವನ್ನು ನಿರಾಕರಿಸುತ್ತಾರೆ. ಪ್ರತ್ಯಕ್ಷವೊಂದೇ ಪ್ರಮಾಣ. ಪ್ರತ್ಯಕ್ಷಕ್ಕೆ ಅಗೋಚರವಾದ ಧರ್ಮ ಅಧರ್ಮ ಈಶ್ವರ ಮುಂತಾದ ಅತೀಂದ್ರಿಯ ವಸ್ತುಗಳು ಇಲ್ಲವೇ ಇಲ್ಲ. ದೇಹವೇ ಆತ್ಮವು. ಅರ್ಥ ಕಾಮಗಳೇ ಪುರುಷಾರ್ಥಗಳು. ಇದೇ ಚಾರ್ವಾಕರ ಮತ.

ಪ್ರಧಾನಕ್ಕೆ ಪ್ರವೃತ್ತಿಯು ಸಂಭವಿಸುವುದಿಲ್ಲ ಎಂಬುದನ್ನು ಹಿಂದಿನ ಅಧಿಕರಣದಲ್ಲಿ ಹೇಳಲಾಗಿತ್ತು. ಈಗ ಪ್ರವೃತ್ತಿಯನ್ನು ಅಂಗೀಕರಿಸಿದರೂ ಅದರ ಪ್ರಯೋಜನವಿಲ್ಲವೆಂದು ಈ ಸೂತ್ರವು ಪ್ರತಿಪಾದಿಸುತ್ತದೆ ಎಂಬುದಾಗಿ ಕೆಲವರು ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ. ಈ ವ್ಯಾಖ್ಯಾನವು ಅಯುಕ್ತವಾದುದು. ಈ ಸೂತ್ರಕ್ಕೆ ಈ ಅರ್ಥವನ್ನು ಹೇಳುವ ಅಭಿಪ್ರಾಯವಿದ್ದ ಪಕ್ಷದಲ್ಲಿ ಅಭ್ಯುಪಗಮೇ ಎಂಬುದು ವ್ಯರ್ಥವಾಗುವುದು. ಅರ್ಥಾಭಾವಾಚ್ಚ ಎಂದು ಹೇಳಿದ್ದರೆ ಸಾಕಾಗಿತ್ತು. ಇಲ್ಲಿ ಅರ್ಥಾಭಾವಾತ್ (ಪ್ರಯೋಜನವಿಲ್ಲವಾದ್ದರಿಂದ) ಎಂಬ ಹೇತುವು ಸಾಂಖ್ಯ ಮತವು ಅಯುಕ್ತವೆಂದು ಸಾಧಿಸುವುದೋ ಅಥವಾ ಪ್ರಕೃತಿಗೆ ಪ್ರವೃತ್ತಿಯು ಕೂಡುವುದಿಲ್ಲವೆಂದು ಸಾಧಿಸುವುದೋ ಎಂದು ಪ್ರಶ್ನೆ. ಮೊದಲನೆಯ ಪಕ್ಷ ಕೂಡುವುದಿಲ್ಲ. ಏಕೆಂದರೆ ಹೇತುಸಾಧ್ಯಗಳಿಗೆ ವೈಯಧಿಕರಣವಿದೆ. ಅಂದರೆ ಹೇತು ಸಾಧ್ಯಗಳು ಒಂದೆಡೆಯಿಲ್ಲ. ಹೇತು ಸಾಧ್ಯಗಳಿಗೆ ಏಕಾಧಿಕರಣದಲ್ಲಿ ಸಮಾವೇಶವನ್ನು ಹೇಳಿದರೆ ತಮ್ಮ ಮತದ ರೀತಿಯಿಂದ ಹೇತುವಿಗೆ ಸಾಧ್ಯದ ವ್ಯಭಿಚಾರ ಬರುವುದು. ಎರಡನೆಯ ಪಕ್ಷವೂ ಸರಿಯಲ್ಲ. ಪ್ರಕೃತಿಗೆ ಪ್ರವೃತ್ತಿಯನ್ನು ಅಂಗೀಕರಿಸಿ ಅನಂತರ ನಿರಾಕರಿಸಿದರೆ ಅಭ್ಯುಪಗಮದಿಂದ (ಅಂಗೀಕಾರದಿಂದ) ವಿರೋಧವು ಬರುವುದು. ಏಕೆಂದರೆ ಅಭ್ಯುಪಗಮವಾದದಲ್ಲಿ ಯಾವುದನ್ನು ಅಂಗೀಕರಿಸುತ್ತಾರೋ ಅದನ್ನೇ ನಿರಾಕರಿಸುವುದಿಲ್ಲ. ಆದಪ್ಯಯುಕ್ತ ಇದು ಸೂತ್ರದ ಅಭಿಪ್ರಾಯವಲ್ಲ.

ಹಾಗಾದರೆ ಅಚೇತನಕ್ಕೆ ಕರ್ತೃತ್ವವು ಇಲ್ಲವೆಂದರೂ, ಶರೀರಕ್ಕೇ ಚೈತನ್ಯವಿರುವುದರಿಂದ ಕರ್ತೃತ್ವವು ಸಂಭವಿಸುತ್ತದೆ. ಆದ್ದರಿಂದ ಈಶ್ವರಾದಿಗಳಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳುವ ಚಾರ್ವಾಕನ ಮತವನ್ನು ಈ ಅಧಿಕರಣದಲ್ಲಿ ನಿರಾಕರಿಸುತ್ತಾರೆ. ಮೊದಲು 'ಚಾರ್ವಾಕೈಃ' ಇತ್ಯಾದಿ ವಾಕ್ಯದಿಂದ ಚಾರ್ವಾಕಮತವನ್ನು ಅನುವಾದ ಮಾಡುತ್ತಾರೆ –

ಚಾರ್ವಾಕೈರುಚ್ಯತೇ ಮಾನಮಕ್ಷಜಂ ನಾಪರಂ ಕ್ವಚಿತ್ ।

ದೇಹ ಆತ್ಮಾ ಪುಮರ್ಥಶ್ಚ ಕಾಮಾರ್ಥಾಭ್ಯಾಂ ವಿನಾ ನ ಹಿ ॥೪೦॥

ಚಾರ್ವಾಕರಿಂದ ಪ್ರತ್ಯಕ್ಷವೇ ಪ್ರಮಾಣವೆಂದು ಹೇಳಲ್ಪಡುತ್ತದೆ. ಪ್ರತ್ಯಕ್ಷದಿಂದ ಇತರವಾದ ಅನುಮಾನ ಆಗಮಗಳು ಯಾವುದೇ ವಿಷಯದಲ್ಲಿಯೂ ಪ್ರಮಾಣವೆಂದು ಹೇಳಲ್ಪಡುವುದಿಲ್ಲ. ದೇಹವೇ ಆತ್ಮವು. ಕಾಮ ಅರ್ಥಗಳನ್ನು ಬಿಟ್ಟು ಬೇರೆ ಪುರುಷಾರ್ಥವೇ ಇಲ್ಲ ಎಂದೂ ಅವರಿಂದ ಹೇಳಲ್ಪಡುತ್ತದೆ. (ಚಾರು ಅಂದರೆ ಮನೋಹರವಾದ ಬುದ್ಧಿ. ಇಂಥಹ ಬುದ್ಧಿಯುಳ್ಳ ಬೃಹಸ್ಪತ್ಯಾಚಾರ್ಯರು ಲಕ್ಷಣಾವೃತ್ತಿಯಿಂದ ಚಾರ್ವಿ ಎನಿಸುತ್ತಾರೆ. ಅವರ ಶಿಷ್ಯರೇ ಚಾರ್ವಾಕರು.)

ಈ ಮತದ ನಿರಾಕರಣಕ್ಕಾಗಿ ಸೂತ್ರವನ್ನು ವ್ಯಾಖ್ಯಾನಿಸಲು 'ಯದ್ಯೈವಂ' ಇತ್ಯಾದಿ ವಾಕ್ಯದಿಂದ ಉಪೋದ್ಘಾತವನ್ನು ಹೇಳುತ್ತಾರೆ –

ಯದ್ಯೈವಂ ದರ್ಶನೇನಾಸ್ಯ ಕೋಽರ್ಥಃ ಪ್ರತ್ಯಕ್ಷಗೋಚರಃ ।

ಲಬ್ಧಸ್ತೇನೈವ ಹಿ ನರೈಃ ಶಾಸ್ತ್ರಾತ್ಕಿಂ ಮೋಹನಂ ವಿನಾ ॥೪೧॥

ಸ್ವಪರಾರ್ಥವಿಹೀನತ್ವಾತ್ಸ್ವಮತೇನೈವ ನಿಷ್ಫಲಮ್ ।

ಕಿಮಿತ್ಯುನ್ಮತ್ತವಚ್ಛಾಸ್ತ್ರಂ ವೃಥಾ ಪ್ರಲಪತಿ ಸ್ವಯಮ್ ॥೪೨॥

ಹೀಗೆ ಅತೀಂದ್ರಿಯವಾದ ವಸ್ತುವೇ ಇಲ್ಲವೆಂದಾದರೆ, ಆಗ ಈ ಶಾಸ್ತ್ರಕ್ಕೆ ವಿಷಯ ಪ್ರಯೋಜನಗಳು ಇಲ್ಲವಾಗಬೇಕಾದೀತು. ಈ ಶಾಸ್ತ್ರವನ್ನು ನಿರ್ಮಿಸಿದ ಬೃಹಸ್ಪತಿಗೆ ಪ್ರತ್ಯಕ್ಷಕ್ಕೆ ಗೋಚರವಾದ ಯಾವ ವಿಷಯ ಪ್ರಯೋಜನಗಳು ಪ್ರಾಪ್ತವಾಗಿವೆ ಎಂದು ಕೇಳಿದರೆ ಯಾವುದೂ ಇಲ್ಲವೆಂದೇ ಉತ್ತರವಾಗುವುದು. ಶಿಷ್ಯರಿಗೂ ಏನೂ ಪ್ರಾಪ್ತವಾಗಿರುವುದಿಲ್ಲ. ಈ ಶಾಸ್ತ್ರದಿಂದ ಶಿಷ್ಯರಿಗೆ ಮೋಹನವನ್ನು ಬಿಟ್ಟು ಬೇರೆ ಯಾವುದೇ ಪ್ರಯೋಜನವಿಲ್ಲ. ಹೇಗೆಂದರೆ ಅಂತೀಂದ್ರಿಯವಾದ ವಿಷಯಾದಿಗಳು ಅವರಿಗೆ ಲಬ್ಧವಾಗುವುದಿಲ್ಲ. ಏಕೆಂದರೆ ಅವುಗಳು ಇರುವುದೇ ಇಲ್ಲವು. ಪ್ರತ್ಯಕ್ಷಕ್ಕೆ ಗೋಚರವಾಗುವ ವಿಷಯಾದಿಗಳು ಅವು ಪ್ರತ್ಯಕ್ಷಕ್ಕೆ ಗೋಚರವೆಂಬ ಕಾರಣದಿಂದಲೇ ಶಾಸ್ತ್ರಕ್ಕೆ ವಿಷಯವೇ ಆಗುವುದಿಲ್ಲ. ಹೀಗೆ ಅಭಿಪ್ರಾಯ. ತನ್ನ ಶಾಸ್ತ್ರದಿಂದ ತನಗೂ ಉಪಯೋಗವಿಲ್ಲ, ಆದನ್ನೇ ಪಾಲಿಸುವ

ಬೇರೆಯವರಿಗೂ ಉಪಯೋಗವಿಲ್ಲ. ಆದುದರಿಂದ ವಿಷಯ ಪ್ರಯೋಜನಗಳಿಂದ ರಹಿತವಾದ ಈ ಶಾಸ್ತ್ರವನ್ನು ಬುದ್ಧಿಯುಳ್ಳ ಯಾವನು ತಾನೆ ಹುಚ್ಚನಂತೆ ವೃಥಾ ಪ್ರಲಪಿಸುತ್ತಾನೆ?

ಹಾಗಾದರೆ ಪ್ರಮಾಣವನ್ನು ಅನುಸರಿಸಿ ಪ್ರಯೋಜನವಿರುತ್ತದೆ. ಆದರೆ ಪ್ರಯೋಜನವನ್ನನುಸರಿಸಿ ಅಪ್ರಾಮಾಣಿಕವಾದ ಅರ್ಥವನ್ನು ಅಂಗೀಕರಿಸಿದರೆ ಅತಿಪ್ರಸಂಗವು ಬರುವುದು. ಹೇಗೆಂದರೆ ನೀರಡಿಕೆಯಿಂದ ಬಾಯಾರಿದವನಿಗೆ ಮರುಭೂಮಿಯಲ್ಲಿ ನೀರಿನ ಸಿದ್ಧಿಯನ್ನು ಅಂಗೀಕರಿಸುವ ಪ್ರಸಂಗ ಬರುವುದು. ಆದ್ದರಿಂದ ಹಾಗೆ ಮಾಡುವುದು ಉಚಿತವಲ್ಲ. ಪ್ರತ್ಯಕ್ಷವೊಂದೇ ಪ್ರಮಾಣ ಎಂದು ಅಂಗೀಕರಿಸುವುದರಿಂದ ಲೋಕವ್ಯವಹಾರವು ಕೂಡುವುದಿಲ್ಲವೆಂದು ಹೇಳಕೂಡದು. ಸಂಭಾವನೆಯಿಂದಲೇ ಲೋಕವ್ಯವಹಾರವು ಕೂಡುತ್ತದೆ. 'ಗೌರೋಽಹಂ ಜಾನಾಮಿ' (ನಾನು ಗೌರವರ್ಣದವನೆಂದು ತಿಳಿಯುತ್ತೇನೆ) ಎಂಬ ಪ್ರತ್ಯಕ್ಷದಿಂದ ದೇಹವೇ ಆತ್ಮವೆಂದು ತಿಳಿದುಬರುತ್ತದೆ. ಆದುದರಿಂದ ಕಾಲಾಂತರದಲ್ಲಿ ಪ್ರಯೋಜನವನ್ನು ಹೊಂದಬೇಕಾದ ಪುರುಷನೇ ಇಲ್ಲದಿರುವುದರಿಂದ, ಧರ್ಮ ಮೋಕ್ಷಗಳೆಂಬ ಪ್ರಯೋಜನವನ್ನೂ ಅತೀಂದ್ರಿಯವಾದ ವಿಷಯವನ್ನೂ ಅಂಗೀಕರಿಸುವುದು ಶಕ್ಯವಲ್ಲ ಎಂಬ ಆಶಂಕೆಯು ಬಂದರೆ ಅದರ ಪರಿಹಾರವನ್ನು 'ದೇಹಾದನ್ಯೋ' ಇತ್ಯಾದಿ ಮಾತುಗಳಿಂದ ಹೇಳುತ್ತಾರೆ –

ದೇಹಾದನ್ಯೋಽನುಭವತ ಆತ್ಮಾ ಭಾತಿ ಶರೀರಿಣಾಮ್ ।

ಮಮ ದೇಹ ಇತಿ ವ್ಯಕ್ತಂ ಮಮಾರ್ಥ ಇತಿವತ್ಸದಾ ॥೪೩॥

ದೇಹಾಭಿಮಾನವುಳ್ಳವರಿಗೆ, ಪ್ರಮಾಣವೆಂದು ಪರರು ಒಪ್ಪಿದ ಪ್ರತ್ಯಕ್ಷದಿಂದಲೇ 'ನನ್ನ ಹಣ' ಇತ್ಯಾದಿ ವ್ಯವಹಾರದಲ್ಲಿ ಯಾವಾಗಲೂ ಭೇದದ ಜ್ಞಾನವಿರುವಂತೆ 'ನನ್ನ ದೇಹ' ಎಂದು ಹೇಳುವಾಗಲೂ ಆತ್ಮನು ದೇಹದಿಂದ ಭಿನ್ನನಾಗಿಯೇ ತೋರುತ್ತಾನೆ.

ಹಾಗಾದರೆ ದೇಹಕ್ಕಿಂತ ಭಿನ್ನನಾದ ಆತ್ಮನು ಇರಲಿ. ಆದರೂ ಅರ್ಥಕಾಮಗಳನ್ನು ಬಿಟ್ಟು ಬೇರೆಯಾದ ಪುರುಷಾರ್ಥ ಹಾಗೂ ಅದರ ಸಾಧನ ಮುಂತಾದುದರ ಬಗ್ಗೆ ಏನು ಪ್ರಮಾಣವು ? ಎಂದರೆ, ಅದಕ್ಕೆ ಅನುಮಾನ ಮತ್ತು ವೇದಾದಿ ಆಗಮಗಳು ಎಂಬುದಾಗಿ ಉತ್ತರ ಹೇಳುತ್ತೇವೆ. ಇವುಗಳಿಗಾದರೂ ಪ್ರಾಮಾಣ್ಯವು ಹೇಗೆ ಎಂದರೆ–

ಪ್ರತ್ಯಕ್ಷಸ್ಯೈವ ಮಾನತ್ವಮಿತಿ ಕೇನಾವಸೀಯತೇ ।

ಯದಿ ತತ್ಸಾಧಕಂ ವೇದಪ್ರಾಮಾಣ್ಯೇ ನ ಕಥಂ ಭವೇತ್ ॥೪೪॥

ಪ್ರತ್ಯಕ್ಷವೊಂದೇ ಪ್ರಮಾಣವೆಂಬುದು ಯಾವುದರಿಂದ ನಿರ್ಣಯಿಸಲ್ಪಡುತ್ತದೆ ಎಂದು ಕೇಳುತ್ತೇವೆ. ಪರರ ವಚನ ಅನುಮಾನಗಳಿಂದ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನು ಅನುಮೇಯಿಸುತ್ತೇವೆ ಎಂದರೆ, ವೇದ ಪ್ರಾಮಾಣ್ಯದ ವಿಷಯದಲ್ಲಿಯೂ ಅವು ಹೇಗೆ ಪ್ರಾಮಾಣ್ಯ ಸಾಧಕವಾಗಲಾರವು? ಆದುದರಿಂದ ಪ್ರತ್ಯಕ್ಷಪ್ರಾಮಾಣ್ಯವು ಗ್ರಹಣವಾಗುವ ರೀತಿಯಲ್ಲಿಯೇ ವೇದವಾಕ್ಯ ಜ್ಞಾನಕ್ಕೂ ಪ್ರಾಮಾಣ್ಯವು ಗೃಹೀತವಾಗುತ್ತದೆ ಎಂದು ತಾತ್ಪರ್ಯ.

ಹಾಗಾದರೆ ಜ್ಞಾನದ ಗ್ರಾಹಕಕ್ಕೆ ಪ್ರಾಮಾಣ್ಯ ಗ್ರಾಹಕತ್ವವು ಸ್ವಾಭಾವಿಕವೇ ಆದರೂ ಅಪವಾದದಿಂದ ಅದು ಅಪ್ರಾಮಾಣ್ಯವನ್ನು ಗ್ರಹಿಸುತ್ತದೆ. ಆದುದರಿಂದ ವೇದಾದಿಗಳ ಪ್ರಾಮಾಣ್ಯವು ಹೇಗೆ ಸಿದ್ಧಿಸುತ್ತದೆ ಎಂದರೆ, ಇದು ಪ್ರತ್ಯಕ್ಷದ ವಿಷಯದಲ್ಲಿಯೂ ಸಮಾನವೇ. ಅಪವಾದವು ಅದೃಷ್ಟವಾದುದರಿಂದ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವು ಸಿದ್ಧಿಸುತ್ತದೆ ಎಂದರೆ, ಇದು ವೇದಾದಿಗಳಲ್ಲಿಯೂ ಸಮಾನವು ಎಂಬುದಾಗಿ 'ನ ಚ' ಇತ್ಯಾದಿ ವಚನದಿಂದ ಹೇಳುತ್ತಾರೆ –

ನ ಚಾನ್ಯಾಮಾನತಾ ಕ್ವಾಪಿ ಪ್ರಮಾಣೇನಾವಸೀಯತೇ ।

ಸ್ವಮತೇನಾರ್ಥರಹಿತ ಉಪೇಕ್ಷ್ಯಃ ಪಕ್ಷ ಈದೃಶಃ ।।೪೫।।

ಪ್ರತ್ಯಕ್ಷದಿಂದ ಇತರವಾದ ಅನುಮಾನ ಆಗಮಾದಿಗಳ ಅಪ್ರಾಮಾಣ್ಯವು ಯಾವುದೇ ವಿಷಯದಲ್ಲಿಯೂ ಪ್ರಮಾಣದಿಂದ ನಿರ್ಣೀತವಾಗುವುದಿಲ್ಲ. ತನ್ನ ಸಮ್ಮತಿಯಿಂದಲೇ ವಿಷಯ ಪ್ರಯೋಜನಾದಿಗಳಿಂದ ರಹಿತವಾದ ಈಶ್ವರಾದಿ ಅತೀಂದ್ರಿಯ ಪದಾರ್ಥಗಳನ್ನು ಅಂಗೀಕರಿಸದ ದುಷ್ಟವಾದ ಚಾರ್ವಾಕ ಮತವು ಉಪೇಕ್ಷ ಮಾಡತಕ್ಕದ್ದು.

ಪುರುಷಾಶ್ಮಾಧಿಕರಣಮ್

ಓಂ ಪುರುಷಾಶ್ಮವದಿತಿ ಚೇತ್ತಥಾಪಿ ಓಂ

ಈ ಅಧಿಕರಣದಲ್ಲಿ ನಿರೀಶ್ವರ ಸಾಂಖ್ಯರಲ್ಲಿ ಏಕದೇಶಿಗಳಾದ, ಪುರುಷೋಪಸರ್ಜನ ಪ್ರಕೃತಿಯೇ ಕರ್ತೃವೆಂದು ಹೇಳುವವರ ಮತವು ನಿರಾಕರಿಸಲ್ಪಡುತ್ತದೆ. ಅಂದರೆ 'ಕೇವಲ ಅಚೇತನಕ್ಕೆ ಕರ್ತೃತ್ವವು ಕೂಡದಿದ್ದರೂ ಚೇತನದ ಸನ್ನಿಧಾನದಿಂದ ಅಚೇತನಕ್ಕೆ ಕರ್ತೃತ್ವವು ಸಂಭವಿಸುತ್ತದೆ. ಆದ್ದರಿಂದ ಈಶ್ವರನು ಬೇಕಿಲ್ಲ' ಎಂಬ ಆಶಂಕೆಯು ಈ ಅಧಿಕರಣದಲ್ಲಿ ನಿರಾಕರಿಸಲ್ಪಡುತ್ತದೆ.

ಸೂತ್ರಾರ್ಥ: ಅಚೇತನವಾದ ಶರೀರವು ಚೇತನನ ಸಂಬಂಧದಿಂದ ಕಲ್ಲು ತೂರುವುದು ಮುಂತಾದ ಪ್ರವೃತ್ತಿಯನ್ನು ಮಾಡುತ್ತದೆ. ಹಾಗೆಯೇ ಪ್ರಧಾನವು ಜೀವನ ಸಂಬಂಧದಿಂದ ಮಹದಾದಿ ಕಾರ್ಯಗಳನ್ನು ಮಾಡುತ್ತದೆ ಎಂದು

ಹೇಳುವುದಾದರೆ, ಶರೀರದ ಪ್ರವೃತ್ತಿಯೂ ಕೂಡ ಈಶ್ವರನ ಅಧೀನವಾಗಿಯೇ ಇರುವುದರಿಂದ ದೃಷ್ಟಾಂತವು ಸಮಂಜಸವಲ್ಲ. ಆದಪ್ರಯುಕ್ತ ಈ ಮತವು ಅಯುಕ್ತವು.

ಈ ಸೂತ್ರಾರ್ಥವನ್ನೇ 'ಸನ್ನಿಧಾನಾತ್' ಇತ್ಯಾದಿ ವಚನದಿಂದ ವಿವರಿಸುತ್ತಾರೆ–

ಸನ್ನಿಧಾನಾಚ್ಚೇತನಸ್ಯ ವರ್ತತೇ ಯದ್ಯಚೇತನಮ್ ।

ತಥಾಪ್ಯಬುದ್ಧಿಪೂರ್ವತ್ವಾದುಕ್ತದೋಷಃ ಸಮೋ ಭವೇತ್ ।।೪೬।।

ಹೇಗೆ ಅಚೇತನವಾದ ಶರೀರವು ಚೇತನನ ಸನ್ನಿಧಾನದಿಂದಲೇ ಕಲ್ಲು ತರುವುದು ಇತ್ಯಾದಿ ಕಾರ್ಯಗಳನ್ನು ಮಾಡುತ್ತದೋ ಹಾಗೆಯೇ ಅಚೇತನವಾದ ಪ್ರಕೃತಿಯು ಪುರುಷನ ಸನ್ನಿಧಾನದಿಂದಲೇ ಮಹದಾದಿಕಾರ್ಯವನ್ನು ಮಾಡುವುದು. ಹೀಗೆ ಅಧಿಕವಾದ ಶಂಕೆಯು ಬರುವುದು. ಆದರೂ ಅಚೇತನವಾದ ಪ್ರಕೃತಿಗೆ ಜ್ಞಾನ ಇಚ್ಛಾ ಪ್ರಯತ್ನಗಳು ಇಲ್ಲವಾದುದರಿಂದ, ರಚನಾನುಪಪತ್ತೇಃ ಎಂಬಲ್ಲಿ ಹೇಳಿದ ದೋಷವು ಅದೇರೀತಿ ಇಲ್ಲಿಯೂ ಬರುವುದು.

ವಿವರಣೆ: ಇಲ್ಲಿನ ಅಧಿಕಾಂಶಕೆಯು ಹೀಗಿದೆ – ಮಹದಾದಿ ಕಾರ್ಯವು ಪುರುಷನನ್ನು ಉಪಸರ್ಜನವಾಗಿವುಳ್ಳ ಅಂದರೆ ಅಪ್ರಧಾನವಾಗಿವುಳ್ಳ ಪ್ರಕೃತಿಯಿಂದ ಮಾಡಲ್ಪಟ್ಟದ್ದು, ಕಾರ್ಯವಾದುದರಿಂದ, ಕಲ್ಲನ್ನು ತರುವುದು ಇತ್ಯಾದಿ ಕಾರ್ಯಗಳಂತೆ. ಆದ್ದರಿಂದ ಈಶ್ವರನಿಂದ ಏನು ಪ್ರಯೋಜನ?

ಇದಕ್ಕೆ ಪರಿಹಾರವು ಹೀಗಿದೆ – ಜ್ಞಾನ ಇಚ್ಛೆ ಪ್ರಯತ್ನಗಳನ್ನು ಹೊಂದಿರುವುದೇ ಕರ್ತೃತ್ವವು. ಪುರುಷನ ಸನ್ನಿಧಾನವಿದ್ದರೂ, ಅಚೇತನವಾದ್ದರಿಂದ, ಪ್ರಕೃತಿಗೆ ಬುದ್ಧಿಮತ್ತೆಯು ಸಂಭವಿಸಲಾರದು. ಬುದ್ಧಿಯು ಇಲ್ಲವಾದರೆ ಬುದ್ಧಿಯ ಕಾರ್ಯಗಳಾದ ಇಚ್ಛಾ ಪ್ರಯತ್ನಗಳು ಕೂಡುವುದಿಲ್ಲ. ಆದುದರಿಂದ ಅಚೇತನದ ಕರ್ತೃತ್ವವೆಂಬ ಪ್ರತಿಜ್ಞೆಯು ವ್ಯಾಹತವೇ ಆಗಿದೆ. ಪ್ರಕೃತಿಗೆ ಕರ್ತೃತ್ವವನ್ನು ಒಪ್ಪಿದರೆ ಅಚೇತನತ್ವವನ್ನು ಅಂಗೀಕರಿಸಿರುವುದಕ್ಕೆ ವಿರುದ್ಧವಾಗುತ್ತದೆ. ಹೀಗೆ ವ್ಯಾಹತವು.

ಹಾಗಾದರೆ ಪುರುಷನೇ ಉಪಸರ್ಜನವಾಗಿರುವ ಶರೀರಕ್ಕೆ ಅಶ್ಮಾನಯನಾದಿ ಕರ್ತೃತ್ವವಿದೆಯೆಂಬ ದೃಷ್ಟಾಂತವನ್ನು ತೋರಿಸಿದುದರಿಂದ ಇದು ಹೇಗೆ ಎಂದು ಶಂಕಿಸಬಾರದು. ಏಕೆಂದರೆ ಹಿಂದೆ ಹೇಳಿದ ರೀತಿಯಿಂದ ಶರೀರಕ್ಕೆ ಕರ್ತೃತ್ವವು ಅಸಮ್ಮತವು. ದೃಷ್ಟಾಂತದಲ್ಲಿ ಇನ್ನೊಂದು ದೂಷಣವನ್ನು ತೋರಿಸಲು 'ಅಂಗಿತ್ವಾನುಪಪತ್ತೇಃ' ಎಂಬ ಸೂತ್ರವು ಹೊರಟಿದೆ. 'ಅಂಗಿತ್ವಂ' ಇತ್ಯಾದಿ ವಚನದಿಂದ ಈ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ –

ಅಂಗಿತ್ವಂ ಪುರುಷಸ್ಯೈವ ಸರ್ವೈರೇವಾನುಭೂಯತೇ ।

ತದಂಗತ್ವೋಕ್ತಿತಶ್ಚೈವ ಸ್ಯಾತ್ಸರ್ವಸ್ಯಾಪಲಾಪಕಃ ।।೪೮।।

ಕಿಮು ಸರ್ವೇಶ್ವರಸ್ಯಾಸ್ಯ ಹ್ಯಪಲಾಪಾದ್ಯತೋಽಖಿಲಮ್ ।

ಅಂಗಿತ್ವ ಎಂದರೆ ಪ್ರಧಾನತ್ವವೆಂದೂ, ಅಂಗತ್ವ ಎಂದರೆ ಅಪ್ರಧಾನತ್ವವೆಂದೂ ಅರ್ಥ. ಶರೀರವನ್ನು ಕುರಿತು ಜೀವನಿಗೇ ಪ್ರಧಾನತ್ವವು ಎಂಬುದು ಎಲ್ಲರಿಗೂ ಅನುಭವದಿಂದ ಗೋಚರವಾಗುತ್ತದೆ. ಶರೀರವನ್ನು ಕುರಿತು ಪ್ರಾಧಾನ್ಯವನ್ನು ಪಡೆದಿರುವ ಜೀವನಿಗೆ ಅಪ್ರಾಧಾನ್ಯವನ್ನು ಹೇಳುವ ಸಾಂಖ್ಯನು ಎಲ್ಲವನ್ನೂ ಅಪಲಾಪ ಮಾಡುವ ದೋಷಕ್ಕೆ ಕಾರಣನಾಗುತ್ತಾನೆ. ಯೋಗಿಪ್ರತ್ಯಕ್ಷ, ಅನುಮಾನ ಹಾಗೂ ಆಗಮರೂಪವಾದ ಎಲ್ಲ ಪ್ರಮಾಣವೂ ಈಶ್ವರನನ್ನು ಸರ್ವಕರ್ತೃವೆಂದು ಪ್ರತಿಪಾದಿಸುವುತ್ತವೆ. ಸರ್ವಕರ್ತೃವೆಂದು ಪ್ರತಿಪಾದಿಸಬೇಕಾದ ಸರ್ವೋತ್ತಮನಾದ ಈಶ್ವರನನ್ನು ಅಪಲಾಪ ಮಾಡುವುದರಿಂದ, ಸಾಂಖ್ಯನು ಮಾಡುವ ಈಶ್ವರನಿರಾಸೆ ವಾದವು ಎಲ್ಲ ಪ್ರಮಾಣಗಳಿಗೆ ವಿರುದ್ಧವಾದುದು ಎಂದು ಹೇಳಲೇಬೇಕಾಗುವುದು.

ಅನ್ಯಥಾನುಮಿತ್ಯಧಿಕರಣಮ್

ಈ ಅಧಿಕರಣದಲ್ಲಿ ಜೀವನೇ ಪ್ರಧಾನಕರ್ತೃವೆನ್ನುವ ನಿರೀಶ್ವರ ಸಾಂಖ್ಯರ ಏಕದೇಶಿಗಳ ಮತವನ್ನು ನಿರಾಕರಿಸುತ್ತಾರೆ. ಹೇಗೆಂದರೆ, ಅಶ್ಮಾನಯನ ಮೊದಲಾದ ಪ್ರವೃತ್ತಿಯಲ್ಲಿ ಪುರುಷನಿಗೆ ಪ್ರಾಧಾನ್ಯವೂ, ಶರೀರಕ್ಕೆ ಉಪಸರ್ಜನತ್ವವೂ ಅನುಭವ ಸಿದ್ಧವಾದುದೆಂದು ಹಿಂದೆ ಸಮರ್ಥಿಸಲಾಯಿತು. ಇದೇ ದೃಷ್ಟಾಂತದಿಂದ ಮಹದಾದಿ ಕಾರ್ಯಕ್ಕೂ ಪ್ರಕೃತಿಯನ್ನು ಉಪಸರ್ಜನವಾಗಿವುಳ್ಳ ಪುರುಷನೇ ಕರ್ತೃವೆಂದು ಅನುಮಾನ ಮಾಡುತ್ತೇವೆ. ಆದ್ದರಿಂದ ಈಶ್ವರನೇಕೆ? ಎಂಬುದಾಗಿ ಪೂರ್ವಪಕ್ಷ.

ಇದನ್ನು ದೂಷಿಸಲು ಹೊರಟಿರುವ ಸೂತ್ರ–

ಓಂ ಅನ್ಯಥಾಽನುಮಿತೌ ಚ ಜ್ಞಶಕ್ತಿವಿಯೋಗಾತ್ ಓಂ

'ಅಂಗಿತ್ವಂ' ಇತ್ಯಾದಿ ವಚನದಿಂದ ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ –

ಅಂಗಿತ್ವಂ ಯದಿ ತಸ್ಯೈವ ಸ್ವಾತಂತ್ರ್ಯಂ ಚೇನ್ನ ಚಾಖಿಲಮ್ ।।೪೯।।
ತತ್ಪ್ರೇರಣೇಽಪ್ಯಶಕ್ತತ್ವಾತ್ಸ್ವತಂತ್ರೋಽನ್ಯೋ ಹ್ಯಪೇಕ್ಷಿತಃ ।
ನ ಚ ಸ್ವಾತಂತ್ರ್ಯಮಸ್ಯೈವ ಪ್ರತ್ಯಕ್ಷಾದಿವಿರೋಧತಃ ।।೫೦।।
ಹಿತಾಕ್ರಿಯಾದಿದೋಷಾಚ್ಚ ಭದ್ರಂ ನಾನೀಶ್ವರಂ ಮತಮ್ ।

ಒಂದು ಪಕ್ಷ ಜೀವನಿಗೆ ಪ್ರಧಾನತ್ವ ಅಥವಾ ಕರ್ತತ್ವವನ್ನೂ, ಪ್ರಕೃತಿಗೆ ಅಪ್ರಧಾನತ್ವವನ್ನೂ ಒಪ್ಪಿದರೂ, ಆ ಜೀವನಿಗೆ ಅಖಿಲವಾದ ಸ್ವಾತಂತ್ರ್ಯವಿಲ್ಲದಿದ್ದಲ್ಲಿ

ಪ್ರಕೃತಿಯ ಪ್ರೇರಣೆಯಲ್ಲಿಯೂ ಸಮರ್ಥನಾಗುವುದಿಲ್ಲ. ಆದ್ದರಿಂದ ಸ್ವತಂತ್ರನಾದ ಮತ್ತೊಬ್ಬನನ್ನು (ಅಂದರೆ ಪರಮೇಶ್ವರನನ್ನು) ಒಪ್ಪಲೇಬೇಕಾಗುವುದು. ಬೇರೆ ಕಾರ್ಯಗಳಿಗೆ ಈಶ್ವರನ ಅಪೇಕ್ಷೆಯಿಲ್ಲವೆಂದು ಹೇಳಿದರೂ, ಪ್ರಕೃತಿ ಪ್ರೇರಣೆಯಲ್ಲಿ ಈಶ್ವರನ್ನು ಅಪೇಕ್ಷಿಸಲೇಬೇಕು. ಜೀವನಿಗೆ ಸರ್ವಸ್ವಾತಂತ್ರ್ಯವನ್ನು ಅಂಗೀಕರಿಸಿದರೆ ಪ್ರತ್ಯಕ್ಷಾದಿ ಪ್ರಮಾಣವಿರೋಧವು ಬರುವುದು. ಆದ್ದರಿಂದ ಜೀವನಿಗೆ ಸ್ವಾತಂತ್ರ್ಯವು ಇರುವುದೇ ಇಲ್ಲ. ಜೀವನು ತನಗೆ ಸದಾ ಹಿತವನ್ನು ಮಾಡಿಕೊಳ್ಳುವುದಕ್ಕೆ ಮತ್ತು ಅಹಿತವನ್ನು ತಪ್ಪಿಸುವುದಕ್ಕೆ ಅಸಮರ್ಥನು ಎಂಬ ದೋಷವು ಇರುವುದರಿಂದ, ಈಶ್ವರನನ್ನು ಒಪ್ಪದ ಮತವು ಅಮಂಗಲಕರ. ಪಾತಂಜಲಿ ಮತದವರು ಈಶ್ವರನನ್ನು ಒಪ್ಪಿದರೂ, ಅವನಲ್ಲಿ ನಿರವಧಿಕ ಸ್ವಾತಂತ್ರ್ಯವನ್ನು ಅಂಗೀಕರಿಸಿಲ್ಲ. ಆದ್ದರಿಂದ ಅದೂ ನಿರೀಶ್ವರ ಮತವೇ ಆಗುವುದು.

ಹಾಗಾದರೆ ಭಿನ್ನಕ, ಸಂಸಾರಮೋಚಕ ಮುಂತಾದ ನಿರೀಶ್ವರ ಮತಗಳು ಇವೆಯಲ್ಲ, ಅವುಗಳನ್ನೇಕೆ ನಿರಾಕರಿಸುವುದಿಲ್ಲ ಎಂದು ಕೇಳಿದರೆ, ಅವುಗಳೂ ಕೂಡ ಹಿಂದೆ ಹೇಳಿದ ದೂಷಣಗಳಿಂದಲೇ ನಿರಸ್ತವಾಗುತ್ತವೆ ಎಂದು ಉತ್ತರ. ಹಾಗೂ ಅಭ್ಯಧಿಕಾಶಂಕೆಯು ಇರುವುದಿಲ್ಲ ಎಂದು ಹೇಳುತ್ತಾರೆ –

ಸಂಸಾರಿಣೋऽನ್ಯಂ ಸರ್ವೇಶಂ ಸರ್ವಶಕ್ತಿಮನೌಪಮಮ್ ॥೫೧॥

ಚೇತನಾಚೇತನಸ್ಯಾಸ್ಯ ಸತ್ತಾದೇಸ್ತದಧೀನತಾಮ್ ।

ನಾಂಗೀಕುರ್ವಂತಿ ಯೇ ತೇಷಾಂ ಸರ್ವೇಷಾಂ ಚ ಸಮಾ ಇಮೇ ॥೫೨॥

ತಸ್ಮಾಚ್ಛ್ರುತಿಪ್ರಮಾಣೇನ ಯುಕ್ತಿಭಿಶ್ಚ ಪರೋ ಹರಿಃ ।

ಅಂಗೀಕಾರ್ಯತಮೋ ನಿತ್ಯಃ ಸರ್ವೈರಪಿ ಸುನಿಶ್ಚಿತಮ್ ॥೫೩॥

ಸಮಸ್ತ ಚೇತಾಚೇತನ ಜಗತ್ತಿಗಿಂತ ವಿಲಕ್ಷಣನೂ, ಸರ್ವಶಕ್ತನೂ, ಅಸದೃಶನೂ, ಬ್ರಹ್ಮಾದಿಗಳಿಗೆ ನಿಯಾಮಕನೂ ಆದ ಶ್ರೀಹರಿಯನ್ನು ಹಾಗೂ ಚೇತನಾ-ಚೇತನಾತ್ಮಕ ಪ್ರಪಂಚದ ಸತ್ತಾದಿಗಳಿಗೆ ಅವನ ಅಧೀನತ್ವವನ್ನೂ ಯಾರು ಅಂಗೀಕರಿಸುವುದಿಲ್ಲವೋ, ಅವರೆಲ್ಲರಿಗೂ ಈ ದೋಷಗಳು ಸಮಾನವಾಗಿವೆ. ಆದ್ದರಿಂದ ಶ್ರುತ್ಯಾದಿ ಪ್ರಮಾಣ ದಿಂದಲೂ ಯುಕ್ತಿಗಳಿಂದಲೂ ಸರ್ವೋತ್ತಮನಾದ ಶ್ರೀಹರಿಯು ಯಾವಾಗಲೂ ಎಲ್ಲರಿಂದಲೂ ಅತ್ಯಂತ ನಿಶ್ಚಯವಾಗಿ ಹಾಗೂ ಮುಖ್ಯವಾಗಿ ಅಂಗೀಕರಿಸಲ್ಪಡತಕ್ಕವನು.

ವೈಶೇಷಿಕಾಧಿಕರಣಮ್

ಓಂ ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಮ್ ಓಂ

ಈ ಅಧಿಕರಣದಲ್ಲಿ ಪರಮಾಣ್ವಾರಂಭವಾದಿಗಳಾದ ವೈಶೇಷಿಕಾದಿ ಮತವನ್ನು ನಿರಾಕರಿಸುತ್ತಾರೆ. ಕಾರ್ಯವಾದರೂ ಪರಮಾಣುಗಳೆಂಬ ಸಮವಾಯಿಕಾರಣದಿಂದ

ಆಗುವುದು ಎಂದು ಹೇಳುವವರೇ ಪರಮಾಣ್ವಾರಂಭವಾದಿಗಳು. ವೈಶೇಷಿಕಾದಿಗಳು ಪರಮೇಶ್ವರನ ಸ್ವರೂಪವನ್ನು ಒಪ್ಪಿದರೂ ಅವನ ಧರ್ಮಗಳಾದ ಸುಖಾದಿಗಳ ಬಗ್ಗೆ ಸಂದೇಹ ಪಡುತ್ತಾರೆ ಹಾಗೂ ಸೃಷ್ಟಿ ಪ್ರಲಯಾದಿಗಳ ಕ್ರಮವನ್ನು ಬೇರೆಯಾಗಿಯೇ ತಿಳಿಯುತ್ತಾರೆ. ಈ ಕಾರಣದಿಂದ ಅವರ ಮತವು ಅಸಮಂಜಸವು. ಆದ್ದರಿಂದ ಅವರ ಮತವನ್ನು ನಿರಾಸೆ ಮಾಡುವುದಕ್ಕಾಗಿ ಈ ಅಧಿಕರಣವನ್ನು ಆರಂಭಿಸಿರುವುದು ಯುಕ್ತವೇ ಆಗಿದೆ. ಈ ಅಭಿಪ್ರಾಯವುಳ್ಳವರಾಗಿ ಶ್ರೀಮದಾಚಾರ್ಯರು ಅವರ ಮತವನ್ನು 'ನಿತ್ಯ' ಇತ್ಯಾದಿ ವಚನದಿಂದ ಮೊದಲು ಅನುವಾದ ಮಾಡುತ್ತಾರೆ –

ನಿತ್ಯಜ್ಞಾನಪ್ರಯತ್ನೇಚ್ಛಂ ಸಂಖ್ಯಾದ್ಯೈರಪಿ ಪಂಚಭಿಃ ।।೫೩।।

ಯುಕ್ತಮೀಶಂ ವದಂತೋಽನ್ಯೇ ತದಿಚ್ಛಾದೃಷ್ಟಚೋದಿತಾಃ ।

ಪರಮಾಣವಶ್ಚತುರ್ವರ್ಗಾಃ ಸಂಯುಜ್ಯಂತೇ ದ್ವಿಶೋಽಖಿಲಾಃ ।।೫೪।।

ಪರಮಾಣುದ್ವಯೇನೈವ ದ್ವ್ಯಣುಕಂ ನಾಮ ಜಾಯತೇ ।

ದ್ವ್ಯಣುಕತ್ರಯೇಣ ತ್ರ್ಯಣುಕಂ ತೈಶ್ಚತುರ್ಭಿಸ್ತದಾತ್ಮಕಮ್ ।।೫೫।।

ತತಸ್ತ್ವನಿಯಮೇನೈವ ಖಂಡಾವಯವಿನಾಂ ಭವಃ ।

ತತಶ್ಚಾನಿಯಮೇನೈವ ಸರ್ವಾವಯವಿಸಂಭವಃ ।।೫೬।।

ಈಶ್ವರನನ್ನು ಒಪ್ಪುವ ಇತರರಾದ ವೇಶೇಷಿಕರು ಈಶ್ವರನು ನಿತ್ಯವಾದ ಜ್ಞಾನ, ಪ್ರಯತ್ನ, ಇಚ್ಛೆಗಳುಳ್ಳವನು ಹಾಗೂ ಸಂಖ್ಯಾ, ಪರಿಮಾಣ, ಪೃಥಕ್ತ್ವ, ಸಂಯೋಗ, ವಿಭಾಗ ಎಂಬುದಾಗಿ ಐದು, ಹೀಗೆ ಒಟ್ಟು ಎಂಟೇ ಗುಣಗಳುಳ್ಳವನು ಎಂದು ಹೇಳುತ್ತಾರೆ. ಈಶ್ವರನ ಇಚ್ಛೆಯಿಂದಲೂ, ಅದೃಷ್ಟವುಳ್ಳ ಆತ್ಮಸಂಯೋಗದಿಂದಲೂ ಪ್ರೇರಿಸಲ್ಪಟ್ಟ ಸಮಸ್ತ ಪರಮಾಣುಗಳು ಕ್ರಿಯಾಶೀಲವಾಗುತ್ತವೆ. ಪ್ರಲಯದಲ್ಲಿ ಪೃಥಿವಿ, ಜಲ, ಅಗ್ನಿ, ವಾಯು ಎಂಬ ನಾಲ್ಕು ವರ್ಗಗಳಲ್ಲಿ ವಿಭಕ್ತವಾಗಿದ್ದ ಈ ಪರಮಾಣುಗಳು ಎರಡೆರಡರಂತೆ ಸಂಯೋಗ ಹೊಂದುತ್ತವೆ. (ಸಜಾತೀಯವಾದ ಪರಮಾಣುಗಳೆರಡರ ನಡುವೆ ಸಂಯೋಗದಿಂದಲೇ ದ್ರವ್ಯದ ಆರಂಭವು. ಆದ್ದರಿಂದ ಇಲ್ಲಿ ಸ್ಪರ್ಶ ಗುಣರಹಿತವಾದ ಗಗನದ ಪರಮಾಣುಗಳನ್ನು ತೆಗೆದುಕೊಂಡಿಲ್ಲ). ಸಂಯುಕ್ತ ಸಜಾತೀಯ ಪರಮಾಣುದ್ವಯದಿಂದಲೇ ದ್ವ್ಯಣುಕ ನಾಮಕ ದ್ರವ್ಯದ ಉತ್ಪತ್ತಿ. ಅಂಥಹ ಮೂರು ದ್ವ್ಯಣುಕಗಳ ಸಂಯೊಗದಿಂದ ಒಂದು ತ್ರ್ಯಣುಕವು ಹುಟ್ಟುತ್ತದೆ. ನಾಲ್ಕು ತ್ರ್ಯಣುಕಗಳಿಂದ ಚತುರಣುಕಾತ್ಮಕವಾದ ದ್ರವ್ಯವು ಹುಟ್ಟುತ್ತದೆ. ಆಮೇಲೆ ಆ ಚತುರಣುಕಾದಿಗಳಿಂದ ಸಂಖ್ಯಾನಿಯಮವಿಲ್ಲದೆ ಖಂಡಾವಯವಿಗಳ ಉತ್ಪತ್ತಿಯು. ಈ ಖಂಡಾವಯವಿಗಳಿಂದ ಸಂಖ್ಯಾನಿಯಮವಿಲ್ಲದೆಯೇ ಎಲ್ಲ

ಅಂತ್ಯಾವಯವಿಗಳಾದ ಶರೀರೇಂದ್ರಿಯ ವಿಷಯಗಳ ಉತ್ಪತ್ತಿಯು. ವೈಶೇಷಾದಿಗಳ ಪ್ರಕಾರ ಇದು ದ್ರವ್ಯದ ಉತ್ಪತ್ತಿ ಕ್ರಮವು. ಗುಣಗಳಿಗೂ ಕರ್ಮಗಳಿಗೂ ಅವುಗಳ ಆಶ್ರಯಗಳಲ್ಲಿ ಉತ್ಪತ್ತಿಯು ಎಂಬುದನ್ನು ತಿಳಿಯತಕ್ಕದ್ದು.

ಭಾವರೂಪ ಕಾರ್ಯವೆಲ್ಲವೂ ಸಮವಾಯಿಕಾರಣ, ಅಸಮವಾಯಿಕಾರಣ ಹಾಗೂ ನಿಮಿತ್ತಕಾರಣ ಎನ್ನುವ ಮೂರು ಕಾರಣಗಳಿಂದ ಹುಟ್ಟುತ್ತವೆ. ಇವುಗಳ ಸ್ವರೂಪವನ್ನು 'ಕಾರಣಂ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಕಾರಣಂ ಸಮವಾಯ್ಯಾಖ್ಯಂ ಪರಮಾಣ್ವಾದಿರತ್ರ ಹಿ ।

ಈಶೇಚ್ಛಾದೃಷ್ಟಕಾಲಾಸ್ತು ನಿಮತ್ತಂ ಕಾರಣಂ ಮತಮ್ ।।೫೭।।

ಪರಮಾಣ್ವಾದಿ ದ್ರವ್ಯದಲ್ಲಿ ಸರ್ವಕಾರ್ಯವೂ ಸಮವೇತವಾಗಿಯೇ ಹುಟ್ಟುವುದರಿಂದ, ದ್ವ್ಯಣುಕಾದಿ ಕಾರ್ಯಗಳ ಉತ್ಪತ್ತಿಯಲ್ಲಿ ಪರಮಾಣ್ವಾದಿ ದ್ರವ್ಯವು ಸಮವಾಯಿಕಾರಣವು. ಈಶ್ವರನ ಇಚ್ಛೆ, ಅದೃಷ್ಟ, ಕಾಲ ಇವುಗಳು ನಿಮತ್ತಕಾರಣಗಳು.

ಸಾಮಾನ್ಯಾನ್ತ್ಯವಿಶೇಷೌ ಚ ಸಮವಾಯಶ್ಚ ತತ್ತ್ರಯಮ್ ।

ನಿತ್ಯಂ ಕ್ರಿಯಾ ಅನಿತ್ಯಾಶ್ಚ ಗುಣದ್ರವ್ಯೇ ದ್ವಿರೂಪಕೇ ।।೫೮।।

ಸಾಮಾನ್ಯ, ಅಂತ್ಯವಿಶೇಷ (ಅತ್ಯಂತ ವ್ಯಾವೃತ್ತಿಗೆ ಕಾರಣವಾದ ವಿಶೇಷ) ಹಾಗೂ ಸಮವಾಯ, ಇವು ಮೂರು ನಿತ್ಯಗಳು. ಎತ್ತುವಿಕೆ, ಇಳಿಸುವಿಕೆ, ಸಂಕುಚನ, ವಿಸ್ತರಣ, ಗಮನಾದಿ ಕ್ರಿಯೆಗಳು ಅನಿತ್ಯಗಳು. ಗುಣ ಹಾಗೂ ದ್ರವ್ಯಗಳು ನಿತ್ಯ–ಅನಿತ್ಯಗಳೆಂದು ಎರಡು ವಿಧವಾಗಿವೆ.

ಹೀಗೆ ಕಾರ್ಯ ಅಕಾರ್ಯಗಳ ವಿಭಾಗವನ್ನು ಹೇಳಿ, ಯಾವುದು ಯಾವುದಕ್ಕೆ ಅಸಮವಾಯಿ ಕಾರಣ ಎನ್ನುವುದನ್ನು 'ಕಾರ್ಯೇ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಕಾರ್ಯೇ ಗುಣಕ್ರಿಯಾಣಾಂ ತು ಸಮವಾಯ್ಯನ್ಯಕಾರಣಮ್ ।

ಕಾರಣಸ್ತಾ ಗುಣಾದ್ಯಾಸ್ತು ಸಂಯೋಗೋ ದ್ರವ್ಯಕಾರಣಮ್ ।।೫೯।।

ಕಾರ್ಯ ಹಾಗೂ ಅಕಾರ್ಯ ದ್ರವ್ಯಗಳಲ್ಲಿ ಹುಟ್ಟುವ ಗುಣಗಳಿಗೆ ಸಮವಾಯಿ ಕಾರಣದಲ್ಲಿರತಕ್ಕ ಗುಣ ಮುಂತಾದವು ಅಸಮವಾಯಿ ಕಾರಣವೆನಿಸುತ್ತವೆ. ಆದರೆ ದ್ರವ್ಯಕ್ಕೆ ಸಮವಾಯಿಕಾರಣದ ಅವಯವಸಂಯೊಗವು ಅಸಮವಾಯಿ ಕಾರಣವು.

ಏವಂ ಸ್ಥಿತೇಽಪಿ ಸಿದ್ಧಾಂತೇ ವಿಶೇಷಸ್ತತ್ರ ಕಲ್ಪಿತಃ ।

ದ್ವ್ಯಣುಕೇ ಪರಮಾಣೌ ಚ ಹ್ರಸ್ವತ್ವಂ ಪರಿಮಂಡಲಮ್ ।।೬೦।।

ನ ಕಾರಣಂ ಕಾರ್ಯಗುಣೇ ವೈರೂಪ್ಯಂ ತತ್ರ ಕಾರಣಮ್ ।

ಇತ್ಯಾಹುಃ ....।।

ಕಾರಣದಲ್ಲಿರತಕ್ಕ ಪರಿಮಾಣವು ಕಾರ್ಯದಲ್ಲಿರತಕ್ಕ ಪರಿಮಾಣಕ್ಕೆ ಅಸಮವಾಯಿ ಕಾರಣವು ಹೀಗೆ ಸಾಮಾನ್ಯವಾಗಿ ಸಿದ್ಧಾಂತವಿದ್ದರೂ, ವೈಶೇಷಿಕರು ಪರಿಮಾಣ ವಿಶೇಷದಲ್ಲಿ ಅನ್ಯಥಾಭಾವವನ್ನು ಅಂದರೆ ವ್ಯತ್ಯಾಸವನ್ನು ಕಲ್ಪಿಸುತ್ತಾರೆ. ದ್ವ್ಯಣುಕದಲ್ಲಿನ ಹ್ರಸ್ವತ್ವ–ಅಣುತ್ವಗಳು ದ್ವ್ಯಣುಕಕಾರ್ಯವಾದ ತ್ರ್ಯಣುಕದಲ್ಲಿರುವ ಮಹತ್ವ–ದೀರ್ಘತ್ವಗಳಿಗೆ ಅಸಮವಾಯಿ ಕಾರಣವಾಗುವುದಿಲ್ಲ. ಪರಮಾಣುವಿನಲ್ಲಿ ಇರುವ ಅಣುತ್ವವು ಪರಮಾಣುವಿನ ಕಾರ್ಯವಾದ ದ್ವ್ಯಣುಕದ ಹ್ರಸ್ವತ್ಯ–ಅಣುತ್ವಗಳಿಗೆ ಅಸಮವಾಯಿ ಕಾರಣವಾಗುವುದಿಲ್ಲ. ಏಕೆಂದರೆ ದ್ವ್ಯಣುಕ ತ್ರ್ಯಣುಕದಲ್ಲಿರುವ ಪರಿಮಾಣಗಳಿಗೂ, ಪರಮಾಣು ಹಾಗೂ ದ್ವ್ಯಣುಕದಲ್ಲಿರುವ ಪರಿಮಾಣಗಳಿಗೂ ವೈರೂಪ್ಯ ಅಂದರೆ ವಿಜಾತೀಯತ್ವವಿದೆ. ಸಜಾತೀಯವಾದ ಪರಿಮಾಣಗಳ ನಡುವೆ ಮಾತ್ರ, ತಂತು–ಪಟಗಳಲ್ಲಿರುವಂತೆ, ಕಾರ್ಯ–ಕಾರಣ ಭಾವವು ಕಂಡುಬರುತ್ತದೆ. ಹೀಗೆ ವೈಶೇಷಿಕರು ಹೇಳುತ್ತಾರೆ.

ಈ ರೀತಿಯಾಗಿ ವೈಶೇಷಿಕರ ಮತವನ್ನು ಅನುವಾದ ಮಾಡಿ ಈಗ ಆ ಮತವನ್ನು ನಿರಾಕರಿಸಲು 'ತಾನ್' ಇತ್ಯಾದಿ ವಚನದಿಂದ ಸೂತ್ರಕ್ಕೆ ಪೀಠಿಕೆ ರಚಿಸುತ್ತಾರೆ –

............ತಾನಥೋವಾಚ ವಿದ್ಯಾಧೀಶಃ ಸ್ವಯಂ ಪ್ರಭುಃ ।।೬೧।।

ಸಕಲ ವಿದ್ಯಾಧೀಶರಾದ ಸಮರ್ಥರಾದ ವೇದವ್ಯಾಸರು 'ಮಹದ್ದೀರ್ಘವದ್ವಾ' ಇತ್ಯಾದಿ ಸೂತ್ರಗಳಿಂದ ಆ ವೈಶೇಷಿಕರನ್ನು ಕುರಿತು ಸಾಕ್ಷಾತ್ತಾಗಿ ದೋಷಗಳನ್ನು ಹೇಳಿರುತ್ತಾರೆ.

ದ್ವ್ಯಣುಕ ಮುಂತಾದವುಗಳ ಪರಿಮಾಣವು ತ್ರ್ಯಣುಕಾದಿ ಪರಿಮಾಣಗಳಿಗೆ ಅಸಮವಾಯಿ ಕಾರಣವಲ್ಲವೆಂದು ಹೇಳುವ ವೈಶೇಷಿಕರ ಮತವು ಯುಕ್ತಿವಿರುದ್ಧ ಎಂಬುದನ್ನು 'ಮಹತ್ವಂ ಚ' ಇತ್ಯಾದಿ ವಚನದಿಂದ ತೋರಿಸುವ ಮೂಲಕ 'ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಂ' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಾರೆ –

ಮಹತ್ವಂ ಚೈವ ದೀರ್ಘತ್ವಂ ತ್ರ್ಯಣುಕಾದ್ಯೇಷು ಕಲ್ಪಿತಮ್ ।

ತಸ್ಮಾಚ್ಚ ಸದೃಶಂ ಕಾರ್ಯಂ ತತ್ಕಾರ್ಯೇಷೂಪಜಾಯತೇ ।।೬೨।।

ಯಥಾ ತಥೈವ ಹ್ರಸ್ವತ್ವಾತ್ಪಾರಿಮಾಂಡಿಲ್ಯತೋಽಪಿ ಹಿ ।

ಜಾಯೇತ ಸದೃಶಂ ಕಾರ್ಯೇ ಪರಿಮಾಣಂ ಸಮತ್ವತಃ ।।೬೩।।

ಮಹತ್ವವೂ ದೀರ್ಘತ್ವವೂ ತ್ರ್ಯಣುಕಾದಿಗಳಲ್ಲಿಯೇ ಕಲ್ಪಿಸಲ್ಪಟ್ಟಿದೆ. ತ್ರ್ಯಣುಕ ಮುಂತಾದ ಅವಯವಿಯಿಂದ ಬೇರೆಯಾಗಿರುವ ಕಾರ್ಯದಲ್ಲಿ ಇರುವ ಮಹತ್ವ ದೀರ್ಘತ್ವಗಳಿಂದ ಸದೃಶವಾದ ಪರಿಮಾಣವು ತ್ರ್ಯಣುಕಾದಿ ಕಾರ್ಯವಾದ ಚತುರಣುಕಾದಿಗಳಲ್ಲಿ ಹೇಗೆ ಹುಟ್ಟುತ್ತದೋ, ಹಾಗೆಯೇ ಹ್ರಸ್ವತ್ವವೆಂಬ ಪರಮಾಣು ಪರಿಮಾಣದಿಂದಲೂ ಕಾರ್ಯದಲ್ಲಿ ಪರಿಮಾಣವು ಉಂಟಾಗಬಹುದು, ಕಾರ್ಯ ಪರಿಮಾಣತ್ವವು ಸಮಾನವಾಗಿರುವುದರಿಂದ.

ನ ಚೇನ್ಮಹತ್ವತಶ್ಚೈವ ದೀರ್ಘತ್ವಾದಪಿ ನೋ ಭವೇತ್ ।

ಹಾಗೆ ಆಗದಿದ್ದರೆ ತ್ರ್ಯಣುಕಾದಿಗಳಲ್ಲಿನ ಮಹತ್ವದಿಂದಲೂ ದೀರ್ಘತ್ವದಿಂದಲೂ ಚತುರಣುಕ ಮುಂತಾದವುಗಳಲ್ಲಿನ ಪರಿಮಾಣವು ಹುಟ್ಟಲು ಸಾಧ್ಯವೇ ಇಲ್ಲ.

ಪರಮಾಣು ಪರಿಮಾಣದಿಂದ ದ್ವ್ಯಣುಕದ ಉತ್ಪತ್ತಿಯೂ, ದ್ವ್ಯಣುಕದ ಪರಿಮಾಣ ದಿಂದ ತ್ರ್ಯಣುಕದ ಪರಿಮಾಣದ ಉತ್ಪತ್ತಿಯೂ ಸಂಭವಿಸುತ್ತವೆ. ಏಕೆಂದರೆ ಅವುಗಳು ಏಕಜಾತೀಯ. ಹೀಗೆ ವೈಶೇಷಿಕರು ಮಾಡಿದ ಅನುಮಾನವು ಯುಕ್ತವಲ್ಲ. ಏಕೆಂದರೆ ಪ್ರತಿತರ್ಕದಿಂದ ಇವುಗಳನ್ನು ಪರಾಭವ ಮಾಡಲು ಬರುತ್ತದೆ. ಆದಕಾರಣ ವೈಶೇಷಿಕರ ಮತವು ದೋಷದುಷ್ಟವು ಎಂಬುದನ್ನು 'ಸದೃಶಸ್ಯ ಹಿ' ಇತ್ಯಾದಿ ವಚನದಿಂದ ತೋರಿಸುತ್ತಾರೆ –

ಸದೃಶಸ್ಯ ಹಿ ಕಾರ್ಯಸ್ಯ ನೈವ ಯೋಗಃ ಕಥಂಚನ ।।೬೪।।

ಅಪ್ರತ್ಯಕ್ಷತ್ವಮೇವ ಸ್ಯಾದ್ಯತಃ ಕಾರ್ಯೇಷ್ವಣುತ್ವತಃ ।

ಇತಿ ಚೇನ್ನ ಮಹತ್ವಂ ಚ ಪರಮಾಣಾವಣಾವಪಿ ।।೬೫।।

ಕಥಂ ತ್ರ್ಯಣುಕಪೂರ್ವೇಷು ನಾಣುತ್ವಮಪಿ ಕಥ್ಯತೇ ।

ವೈಶೇಷಿಕರು ಹೇಳುವ ಯಾವ ಪ್ರಕಾರದಿಂದಲೂ ಸದೃಶವಾದ ಕಾರ್ಯವು ಸಂಭವಿಸುವುದಿಲ್ಲ. ಏಕೆಂದರೆ, ಪರಮಾಣುವಿನ ಅಣುತ್ವವು ಸಜಾತೀಯವಾದ ದ್ವ್ಯಣುಕ ದಲ್ಲಿಯೂ, ಅಂಥಹುದೇ ಅಣುತ್ವವು ತ್ರ್ಯಣುಕ, ಚತುರಣುಕಗಳಲ್ಲೂ ಸಂಭವಿಸುವುದು. ಹೀಗೆ ಎಲ್ಲ ಕಾರ್ಯಗಳಲ್ಲಿಯೂ ಅಣುತ್ವವು ಬರುವುದರಿಂದ ಕಾರ್ಯವು ನಮ್ಮ ಪ್ರತ್ಯಕ್ಷಕ್ಕೆ ವಿಷಯವಾಗದಿರುವ ಪ್ರಸಂಗವು ಬರುವುದು. ದ್ರವ್ಯವು ನಮ್ಮ ಪ್ರತ್ಯಕ್ಷಕ್ಕೆ ವಿಷಯವಾಗಿದೆ. ಮಹತ್ವ–ದೀರ್ಘತ್ವಾದಿಗಳು ಇದ್ದಾಗ ಮಾತ್ರ ದ್ರವ್ಯವು ಪ್ರತ್ಯಕ್ಷಕ್ಕೆ ಗೋಚರವಾಗುವುದು. ಪರಮಾಣುವಿನಲ್ಲಿ

ಮಹತ್ವಾದಿಗಳು ಇರುವುದಿಲ್ಲ ಹಾಗೂ ವೈಶೇಷಿಕರ ಪ್ರಕಾರ ಪರಮಾಣುವು ಪರಂಪರೆಯಿಂದ ದ್ರವ್ಯದ ಉತ್ಪತ್ತಿಗೆ ಕಾರಣವು. ಆದಪ್ರಯುಕ್ತ ಯಾವುದೇ ದ್ರವ್ಯವು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗದೇ ಹೋಗುವ ಪ್ರಸಂಗವು ಬರುವುದು. ಇದು ಪ್ರತ್ಯಕ್ಷಕ್ಕೆ ವಿರುದ್ಧ. ಆದ್ದರಿಂದ ಪರಮಾಣು, ದ್ವ್ಯಣುಕ ತ್ರ್ಯಣುಕಾದಿಗಳಲ್ಲಿ ಮಹತ್ವ ದೀರ್ಘತ್ವವು ಇರುವುದಿಲ್ಲ ಎಂದು ಹೇಳಲು ಹೇಗೆ ಸಾಧ್ಯ? ಅದೇರೀತಿ ದ್ವಣುಕ ಮುಂತಾದವುಗಳಲ್ಲಿಯೂ ಅಣುತ್ವವು ಇರುವುದೆಂದು ಏಕೆ ಹೇಳಬಾರದು? ಆದ್ದರಿಂದ ವೈಶೇಷಿಕರ ಮತವು ದೋಷದುಷ್ಟವಾಗಿದೆ.

ಹಾಗಾದರೆ ಪರಮಾಣುವಿನಲ್ಲಿ ಅಣುತ್ವ ಮಹತ್ವಗಳು ಇರುವುದೆಂದು ಹೇಳಿದರೆ, ಅವು ಪರಸ್ಪರ ವಿರುದ್ಧವಾಗುವುದರಿಂದ ಒಂದೇ ಕಡೆಯಲ್ಲಿ ಅವು ಹೇಗೆ ಕೂಡುತ್ತವೆ? ಪರಿಮಾಣವು ದ್ರವ್ಯವಿರುವವರೆಗೂ ಇರುವ ಗುಣವಾದ ಪ್ರಯುಕ್ತ ಕಾಲಭೇದದಿಂದ ಈ ವಿರೋಧವನ್ನು ಪರಿಹರಿಸಲು ಶಕ್ಯವಿಲ್ಲವೆಂದು ಆಶಂಕಿಸಿ, 'ಪ್ರತ್ಯಕ್ಷತ್ವತದನ್ಯತ್ವೇ' ಇತ್ಯಾದಿ ವಚನದಿಂದ ವ್ಯಾಹತಿಯನ್ನು ಪರಿಹರಿಸುತ್ತಾರೆ –

ಪ್ರತ್ಯಕ್ಷತ್ವತದನ್ಯತ್ವೇ ಪುರುಷಾಪೇಕ್ಷಯಾಽಖಿಲೇ ।।೬೬।।

ಅಣುತ್ವಂ ಚ ಮಹತ್ವಂ ಚ ಯತೋ ವಸ್ತುವ್ಯಪೇಕ್ಷಯಾ ।

ಪರಮಾಣು ಮೊದಲಾದ ಎಲ್ಲ ದ್ರವ್ಯಗಳಲ್ಲಿಯೂ ಪ್ರತ್ಯಕ್ಷತ್ವ ಅಪ್ರತ್ಯಕ್ಷತ್ವ ಧರ್ಮಗಳೆರಡೂ ಇದ್ದೇ ಇರುತ್ತವೆ. ಪುರುಷರ ಭೇದದಿಂದ ಈ ವ್ಯವಸ್ಥೆಯು ಕೂಡುತ್ತದೆ. ಹಾಗೆಯೇ ಅಣುತ್ವ ಮಹತ್ವಗಳೂ ಎಲ್ಲ ವಸ್ತುಗಳಲ್ಲಿ ಇರುತ್ತವೆ. ಒಂದೇ ವಸ್ತುವಿನಲ್ಲಿ ಇನ್ನೊಂದು ವಸ್ತುವಿನ ಅಪೇಕ್ಷೆಯಿಂದ ಅಣುತ್ವ–ಮಹತ್ವ ಇವೆರಡು ಧರ್ಮಗಳೂ ವಿರೋಧವಿಲ್ಲದೆಯೇ ಹೇಳಲ್ಪಡುತ್ತವೆ.

ಹಾಗಿದ್ದರೂ ಎಲ್ಲ ದ್ರವ್ಯಗಳಲ್ಲಿಯೂ ಮಹತ್ವ ಅಣುತ್ವಗಳೆರಡನ್ನೂ ಒಪ್ಪುವುದು ಯುಕ್ತವಲ್ಲ. ಏಕೆಂದರೆ ಇವೆರಡು ಗುಣಗಳನ್ನೂ ಒಂದು ದ್ರವ್ಯದಲ್ಲಿ ಅಂಗೀಕರಿಸ ಬೇಕಾದರೆ, ಅದಕ್ಕಿಂತ ಚಿಕ್ಕದಾದ ಹಾಗೂ ದೊಡ್ಡದಾದ ಇತರ ಎರಡು ದ್ರವ್ಯಗಳಿದ್ದರೆ ಮಾತ್ರ ಸಾಧ್ಯ. ದ್ವ್ಯಣುಕಾದಿಗಳಲ್ಲಿ ಇದು ಸಂಭವಿಸುತ್ತದೆ. ಆದರೆ ಪರಮಾಣುವಿನಲ್ಲಿ, ಅದಕ್ಕಿಂತ ಚಿಕ್ಕ ವಸ್ತುವು ಇಲ್ಲವಾದ್ದರಿಂದ, ಅಣುತ್ವ ಮಾತ್ರ ಇರಲು ಸಾಧ್ಯ ಎಂದು ಆಶಂಕಿಸಿದರೆ, 'ತಾರತಮ್ಯಸ್ಥಿತಾ' ಇತ್ಯಾದಿ ವಚನದಿಂದ ಅದನ್ನು ಪರಿಹರಿಸುತ್ತಾರೆ –

ತಾರತಮ್ಯಸ್ಥಿತಾ ಯಸ್ಮಾತ್ಪದಾರ್ಥಾಃ ಸರ್ವ ಏವ ಚ ।।೬೭।।

ಯಥಾ ಮಹತ್ವವಿಶ್ರಾಂತಿಸ್ತಥಾಣುತ್ವಸ್ಯ ಚೇಷ್ಯತೇ ।

ಪರಿಮಾಣತ್ವತಶ್ಚೇನ್ನ ಮಹತ್ವಸ್ಯಾಪಿ ವಿಶ್ರಮಃ ।।೬೮।।

ಎಲ್ಲ ಪದಾರ್ಥಗಳೂ ಪರಿಮಾಣ ತಾರತಮ್ಯವುಳ್ಳದ್ದಾಗಿಯೇ ಇರುತ್ತವೆ. ಈ ಕಾರಣದಿಂದ ಪರಮಾಣುವಿಗೂ ಮಹತ್ವವು ಯುಕ್ತವಾಗುತ್ತದೆ. ಹೇಗೆ ಪರಿಮಾಣದ ಮಹತ್ವಕ್ಕೆ (ಪರಿಮಾಣ ಉತ್ಕರ್ಷಕ್ಕೆ) ವಿಶ್ರಾಂತಿಯೋ ಹಾಗೆಯೇ ಪರಿಮಾಣ ತಾರತಮ್ಯದ ಪ್ರಯುಕ್ತ, ಅಣುತ್ವಕ್ಕೂ (ಪರಿಮಾಣಾಪಕರ್ಷಕ್ಕೂ) ವಿಶ್ರಾಂತಿಯು. ಹೀಗೆ ಅಂಗೀಕರಿಸುವುದಾದರೆ ಮಹತ್ವಕ್ಕೂ ಸಹ ವಿಶ್ರಾಂತಿಯಿರುವುದಿಲ್ಲ. ಹೀಗೇಕೆ ಎಂದರೆ–

ದೃಶ್ಯತೇಽನಂತ ಇತ್ಯೇವ ತಥಾನಂತ್ಯಮಣಾವಪಿ ।

ನ ಮಹತ್ತತ್ವಗುಣತ ಏತಾವಾನಿತಿ ಹೀಶ್ವರಃ ॥೬೯॥

ಪರಿಚ್ಛಿನ್ನಸ್ತಥಾಕೋಶ್ಚ ನೈತಾವದ್ಭಾಗತಾ ಕ್ವಚಿತ್ ।

ವಿಶ್ರಾಂತೋ ಯದ್ಯನಂತಾಂಶಃ ಕಶ್ಚಿದಸ್ತೀತಿ ಗಮ್ಯತೇ ॥೭೦॥

ನಾವಸಾಯಯಿತುಂ ಶಕ್ಯೋ ವಿರೋಧಾದೇವ ಕೇವಲಮ್ ।

ಪರಿಮಾಣದ ಉತ್ಕರ್ಷದಲ್ಲಿನ ತಾರತಮ್ಯಕ್ಕೆ ಅವಧಿ ಇಲ್ಲದ್ದಾಗಿಯೇ ಸಾಕ್ಷ್ಯಾದಿಗಳಿಂದ ಕಂಡುಬರುತ್ತದೆ. ಹಾಗೆಯೇ ಅಣುವಿನಲ್ಲಿರುವ ಪರಿಮಾಣದ ಅಪಕರ್ಷದಲ್ಲಿನ ತಾರತಮ್ಯವೂ ಅವಧಿರಹಿತವಾಗಿಯೇ ಕಂಡುಬರುತ್ತದೆ. ಮಹತ್ತತ್ವಾದಿ ಪರಿಮಾಣಗಳ ಗಣನೆಯಿಂದ, ಈಶ್ವರನೂ ಸಹ ಇಂತಿಷ್ಟೇ ಗುಣವುಳ್ಳವನು (ಆರೇ ಗುಣವುಳ್ಳವನು, ಎಂಟೇ ಗುಣವುಳ್ಳವನು ಇತ್ಯಾದಿ) ಎಂಬುದಾಗಿ ಗುಣ–ಪರಿಮಾಣಗಳ ಪರಿಮಿತಿಗೆ ಒಳಪಡುವುದಿಲ್ಲ. ಅಂದರೆ ಈಶ್ವರನ ಗುಣ–ಪರಿಮಾಣಗಳು ಅಪರಿಚ್ಛಿನ್ನವಾಗಿವೆ ಎಂದರ್ಥ. ಇದೇ ದೃಷ್ಟಾಂತದ ಆಧಾರದಿಂದ, ಪರಿಮಾಣದ ಅಣುತ್ವಕ್ಕೂ ಇಂತಿಷ್ಟೇ ಭಾಗವಿರುವುವಿಕೆ ಎಂಬುದು ಯಾವ ದ್ರವ್ಯದಲ್ಲಿಯೂ ಸಿದ್ಧಿಸುವುದಿಲ್ಲ. ಇನ್ನು ಅಣುವಿನ ಪರಿಮಾಣದ ಅನಂತಾಂಶವುಳ್ಳ ದ್ರವ್ಯವಿಶೇಷವು ಎಲ್ಲಿಯಾದರೂ ಇರುವುದೆಂಬುದನ್ನು ನಿರ್ಣಯಿಸಲು ಶಕ್ಯವೇ ಇಲ್ಲ. ಏಕೆಂದರೆ ಪರಿಮಾಣದ ಅಪಕರ್ಷದ ತಾರತಮ್ಯಕ್ಕೆ ವಿಶ್ರಾಂತಿಯಿದೆ ಎಂದೂ ಹಾಗೂ ಅದು ಅನಂತಾಂಶವುಳ್ಳದ್ದೆಂದೂ ಹೇಳುವುದು ಪರಸ್ಪರ ವಿರೋಧವಾಗುವುದು.

ಹಾಗಾದರೆ ಪರಿಮಾಣ ಉತ್ಕರ್ಷದ ತಾರತಮ್ಯಕ್ಕೆ ಆನಂತ್ಯವಿದೆ ಎನ್ನುವುದು ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತದೆ ಎಂದು ಕೇಳಿದರೆ –

ಕೇವಲಂ ಸಾಕ್ಷಿಮಾನೇನ ಕಾಲೋ ದೇಶೋಽಪಿ ನಾಂತವಾನ್ ॥೭೧॥

ಅಪರ್ಯವಸಿತಿಶ್ಚಾಕೋರ್ದೃಶ್ಯತೇ ಸಾಕ್ಷಿಣಾ ದ್ವಯೋಃ ।

ಯದಿ ನೋ ಸಾಕ್ಷಿಗಮ್ಯಂ ತನ್ಮಹತ್ವಂ ಕೇನ ಗಮ್ಯತೇ ।।೭೨।।

ವಿಶ್ರಾಂತಿಸ್ತಾರತಮ್ಯೇನ ದೃಶ್ಯತೇ ಹ್ಯನುಮಾನತಃ ।

ಕೇವಲ ಸಾಕ್ಷಿರೂಪ ಪ್ರಮಾಣದಿಂದ ಕಾಲವೂ, ಅವ್ಯಾಕೃತ ಆಕಾಶವೂ (ದೇಶವೂ) ನಿರವಧಿಕ ಉತ್ಕರ್ಷದ ತಾರತಮ್ಯವುಳ್ಳದ್ದಾಗಿ ತಿಳಿದುಬರುತ್ತದೆ. ಕಾಲದೇಶಗಳೆರಡರಲ್ಲೂ ಪರಿಮಾಣ ಅಪಕರ್ಷದ ತಾರತಮ್ಯಕ್ಕೂ ನಿರವಧಿಕತೆಯು ಸಾಕ್ಷಿಯಿಂದಲೇ ತಿಳಿದು ಬರುತ್ತದೆ. ಒಂದು ಪಕ್ಷದಲ್ಲಿ ದೇಶಕಾಲಾದಿಗಳ ಪರಿಮಾಣ ಅಪಕರ್ಷದ ಅನಂತತೆಯು ಸಾಕ್ಷಿಯಿಂದ ತಿಳಿದು ಬರುವುದಿಲ್ಲವಾದರೆ ಪರಿಮಾಣ ಉತ್ಕರ್ಷದ ಅನಂತತೆಯೂ ಸಹ ಯಾವುದರಿಂದ ತಿಳಿದು ಬರುವುದು ಸಾಧ್ಯ? ಏಕೆಂದರೆ ತಾರತಮ್ಯ ರೂಪಯುಕ್ತಿಯಿಂದ ಪರಿಮಾಣೋತ್ಕರ್ಷ ಪರಂಪರೆಯ ವಿಶ್ರಾಂತಿಯು ಕಂಡುಬರುತ್ತದೆ.

ಹಾಗಾದರೆ ಕಾಲಾದಿಗಳಲ್ಲಿ ನಿರವಧಿಕವಾದ ಉತ್ಕರ್ಷವುಳ್ಳ ಪರಿಮಾಣವು ಆಗಮ ದಿಂದ ಸಿದ್ಧಿಸಲಿ ಎಂದು ಆಶಂಕಿಸಿದರೆ –

ಯದ್ಯಾಗಮಾದನಂತಂ ತನ್ಮಹತ್ವಮವಗಮ್ಯತೇ ।।೭೩।।

ಅನಂತಮೇವ ಚಾಣುತ್ವಂ ಕುತೋ ನೈವಾವಸೀಯತೇ ।

ಮಹತ್ವಾಣುತ್ವಯೋರ್ನೈವ ವಿಶ್ರಾಂತಿರುಪಲಭ್ಯತೇ ।।೭೪।।

ಒಂದು ಪಕ್ಷದಲ್ಲಿ ಆಗಮದಿಂದ ಕಾಲಾದಿಗಳ ಮಹತ್ವವು ಅನಂತವೆಂದು ತಿಳಿದುಬರುತ್ತದೆ ಎನ್ನುವುದಾದರೆ, ಅದೇರೀತಿ ಪರಿಮಾಣದ ಅಪಕರ್ಷವೂ ಅವಧಿ ರಹಿತವೆಂದು ಏಕೆ ನಿರ್ಣಯಿಸಲಾಗುವುದಿಲ್ಲ? ಕಾಲಾದಿಗಳಲ್ಲಿನ ಅಣುತ್ವ ಮಹತ್ವಗಳಿಗೆ ವಿಶ್ರಾಂತಿಯಿದೆ ಎಂಬುದಾಗಿ ನಿರ್ಧರಿಸಲು ಯಾವುದೇ ಪ್ರಬಲವಾದ ಪ್ರಮಾಣವು ಇರುವುದಿಲ್ಲ. ಅವುಗಳ ಆನಂತ್ಯಕ್ಕೆ ಯಾವುದೇ ಬಾಧಕವಿಲ್ಲವಾದ ಪ್ರಯುಕ್ತ ಕಾಲಾದಿಗಳ ಪರಿಮಾಣದ ಅಪಕರ್ಷ ಮತ್ತು ಉತ್ಕರ್ಷಗಳು ಸತ್ಯವೆಂದು ಅಂಗೀಕರಿಸಲೇಬೇಕು.

ಹಾಗಾದರೆ ಪರಿಮಾಣಾಪಕರ್ಷದ ಆನಂತ್ಯವನ್ನು ಅಂಗೀಕರಿಸಿದರೆ ಬಾಧಕವಿದ್ದೇ ಇದೆ. ಹೇಗೆಂದರೆ ಅಪಕರ್ಷವೆಂದರೆ ಅಲ್ಪತೆ, ಆನಂತ್ಯವೆಂದರೆ ಅನಲ್ಪತೆ. ವಿಶೇಷಣ– ವಿಶೇಷ್ಯ ಭಾವವು ವಿರುದ್ಧವಾದವುಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವು ತೋರುವುದರಿಂದ ಅಪಕರ್ಷದ ಆನಂತ್ಯವು ಅಗ್ರಾಹ್ಯವು ಎಂಬ ಆಶಂಕೆಯನ್ನು 'ಅನ್ಯದೇವ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಅನ್ಯದೇವ ಹ್ಯನಂತತ್ವಂ ಮಹತ್ವಾಣುತ್ವಯೋಃ ಸಮಮ್ ।

ಬಹುತ್ವಾಲ್ಪತ್ವಯೋರ್ಯದ್ವತ್ಸಂಖ್ಯಾಯಾಮುಪಲಭ್ಯತೇ ॥೭೫॥

ಆನಂತ್ಯಮೇಕಭಾಗಾನಾಂ ತಾವತ್ತ್ವಂ ಹ್ಯೇವ ಗಣ್ಯತೇ(ಹ್ಯವಗಮ್ಯತೇ) ।

ಅನಂತತ್ವವೆಂದರೆ ಅನಲ್ಪತೆಯೆಂದು ಅರ್ಥವಲ್ಲ. ಅನಲ್ಪತೆಗಿಂತ ಭಿನ್ನವೇ ಆದ ಪರಿಚ್ಛೇದರಾಹಿತ್ಯ (ಅಳತೆಯಿಲ್ಲದಿರುವುದು) ಎಂಬುದೇ ಅನಂತತ್ವಕ್ಕೆ ಅರ್ಥ. ಈ ಧರ್ಮವು ಅಣುತ್ವ–ಮಹತ್ವಗಳೆರಡರಲ್ಲಿಯೂ ಸಮಾನವಾಗಿದೆ. ಆದ್ದರಿಂದ ಅಲ್ಪತ್ವದ ಆನಂತ್ಯವೆಂಬುದು ಯುಕ್ತವೇ ಆಗುವುದು. ಸಂಖ್ಯೆಯಲ್ಲಿರುವ ಬಹುತ್ವ–ಅಲ್ಪತ್ವಗಳಿಗೆ ವಿಶೇಷಣವಾಗಿ ಅನಂತತ್ವವು ಕಂಡುಬರುವಂತೆಯೇ ಅಣುತ್ವ–ಮಹತ್ವಗಳಲ್ಲಿಯೂ ಕಂಡುಬರುವುದು. ಸಂಖ್ಯಾಶಾಸ್ತ್ರದಲ್ಲಿ ಸಂಖ್ಯೆಯ ಒಂದೊಂದು ಭಾಗಕ್ಕೂ ನಿರವಧಿಕತೆಯು ಎಣಿಸಲ್ಪಡುತ್ತದೆ. ಹೇಗೆಂದರೆ ಅತ್ಯಂತ ಚಿಕ್ಕ ಸಂಖ್ಯೆಯೆಂದು ಪರಿಗಣಿಸಲ್ಪಡುವ ಒಂದು ಎಂಬ ಸಂಖ್ಯೆಯಲ್ಲಿಯೂ ಅಪರಿಮಿತ ಭಾಗಗಳನ್ನು ಗಣನೆ ಮಾಡಬಹುದು. ಅದಕ್ಕೆ ಮಿತಿಯಿರುವುದಿಲ್ಲ. ಅತ್ಯಂತ ದೊಡ್ಡದಾದ ಸಂಖ್ಯೆಯೆಂದು ಪರಿಗಣಿಸಲಾದ ಪರಾರ್ಧದ ಮೇಲೆಯೂ ಗಣನೆಗೆ ಸಿಗಲಾರದಷ್ಟು ಅನಂತ ಸಂಖ್ಯೆಗಳಿವೆ. ಆದರೆ ಗಣನಕಾರರಿಗೆ ಅದರಿಂದ ಪ್ರಯೋಜನವಿಲ್ಲವೆಂದು ಅವುಗಳಿಗೆ ನಿರ್ದಿಷ್ಟ ಸಂಜ್ಞೆಗಳನ್ನು ಹೇಳಿಲ್ಲ.

ಹೀಗೆ ಕಾಲ ಆಕಾಶಗಳಲ್ಲಿನ ಪರಿಮಾಣದ ಅಣುತ್ವ–ಮಹತ್ವಗಳಿಗೆ ಮಿತಿಯಿಲ್ಲ ಎಂದು ಸಾಕ್ಷಿಪ್ರಮಾಣದಿಂದ ಸಮರ್ಥನೆ ಮಾಡಿ, ಈಶ್ವರನಲ್ಲಿ ಅವುಗಳ ಆನಂತ್ಯವನ್ನು ಅಣೀಯಾಂಶ್ಚ ಇತ್ಯಾದಿ ವಚನದಿಂದ ಸಾಧಿಸುತ್ತಾರೆ –

ಅಣೀಯಾಂಶ್ಚ ಮಹೀಯಾಂಶ್ಚ ಭಗವಾನಾಗಮೋದಿತಃ ॥೭೬॥

ಆನಂತ್ಯವಾಚಕಃ ಶಬ್ದೋ ದ್ವಿಧಾನಂತ್ಯೇಽಪಿ ಮಾನತಾಮ್ ।

'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಆಗಮದಿಂದ ಪರಮಾತ್ಮನು ಅಣುವಿಗಿಂತ ಅಣುವೂ ಮಹತ್ತಿಗಿಂತ ಮಹತ್ತರನೂ ಎಂಬುದಾಗಿ ಹೇಳಲ್ಪಟ್ಟಿದ್ದಾನೆ. ಇದರಿಂದ ಈಶ್ವರನಲ್ಲಿನ ಪರಿಮಾಣದ ಉತ್ಕರ್ಷ ಅಪಕರ್ಷಗಳಿಗೆ ಪರಿಮಿತಿಯಿಲ್ಲವೆಂಬುದು ಸಿದ್ಧವಾಗುತ್ತದೆ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಶ್ರುತಿಯಲ್ಲಿನ 'ಅನಂತ' ಶಬ್ದವು ಬ್ರಹ್ಮನ ಪರಿಮಾಣದ ಅನಂತತ್ವವನ್ನು ಹೇಳುವುದು. ಆದ್ದರಿಂದ ಇದು ಉತ್ಕರ್ಷ–ಅಪಕರ್ಷಗಳ ಅನಂತ್ಯದ ಬಗ್ಗೆಯೂ ಪ್ರಾಮಾಣ್ಯವನ್ನು ಹೊಂದುತ್ತದೆ.

ಯಾತಿ ನೈವ ಗುಣಾಲ್ಪತ್ವಂ ಕಾಲಾಲ್ಪತ್ವಂ ಚ ಮಾನಗಮ್ ॥೭೭॥

ಸರ್ವಕಾಲಗತಸ್ಯಾಲ್ಪಕಾಲೇಽಪಿ ಸ್ಯಾದವಸ್ಥಿತಿಃ ।

ಮಹಾಗುಣಸ್ಯ ಚಾಲ್ಪೋಽಪಿ ಗುಣಃ ಸ್ಯಾದಿತಿ ಚೇದ್ಭವೇತ್ ॥೭೮॥

ಕಾಲದಿಂದಲೂ ಗುಣದಿಂದಲೂ ಅನಂತತ್ವವನ್ನು ಹೇಳುವ ಅನಂತಂ ಬ್ರಹ್ಮ ಎಂಬ ಶ್ರುತಿಯು ಗುಣಾಲ್ಪತ್ವ ಹಾಗೂ ಕಾಲಾಲ್ಪತ್ವಗಳಿಗೆ ಸರ್ವಥಾ ಪ್ರಮಾಣವೇ ಆಗಲಾರದು. ಸರ್ವಕಾಲಗಳಲ್ಲಿ ಇರುವವನಿಗೆ ಅಲ್ಪಕಾಲದಲ್ಲಿಯೂ ಇರುವಿಕೆಯು ಕೂಡುತ್ತದೆ. ಮಹಾಗುಣ ಕ್ರಿಯಾದಿಗಳನ್ನು ಹೊಂದಿರುವವನಿಗೆ ಅಲ್ಪಗುಣಾದಿಗಳು ಆಗುವುದು. ಹೀಗೆ ಆಶಂಕಿಸಿದರೆ, ಅದು ಆಗಿಯೇ ಆಗುತ್ತದೆ ಎಂದು ಉತ್ತರ.

ತಾವತ್ತ್ವಮೇವ ನೈವ ಸ್ಯಾದ್ದೇಶೇಽಪ್ಯೇತನ್ನ ನೋ ಮತಮ್ ।

ಹಾಗಾದರೆ 'ನೈವ ಗುಣಾಲ್ಪತ್ವಂ' ಎಂಬುದಾಗಿ ಗುಣಾಲ್ಪತ್ವವನ್ನು ನಿರಾಕರಿಸಿದುದು ಹೇಗೆ ಎಂದು ಕೇಳಿದರೆ, 'ತಾವತ್ತ್ವಮೇವ' ಕೇವಲ ಅಲ್ಪತ್ವವೇ ಎಂಬುದು ಎಂದಿಗೂ ಆಗಲಾರದೆಂದು ಅಭಿಪ್ರಾಯ. ಅವ್ಯಾಕೃತಾಕಾಶ ಮತ್ತು ಪರಿಮಾಣದ ವಿಷಯದಲ್ಲೂ ಈ ಕೇವಲ ಅಲ್ಪತ್ವವೇ ಎಂಬುದನ್ನು ನಾವು ಒಪ್ಪುವುದಿಲ್ಲ.

ಹಾಗಾದರೆ ಈಶ್ವರಾದಿಗಳಿಗೆ ನಿರವಧಿಕವಾದ ಉತ್ಕೃಷ್ಟ ಹಾಗೂ ಅಪಕೃಷ್ಟ ಪರಿಮಾಣಗಳೆರಡನ್ನು ಸಮರ್ಥಿಸುವುದು ಯುಕ್ತವಲ್ಲ. ಏಕೆದರೆ ಸೂತ್ರಕಾರರು ಈ ವಿಷಯವನ್ನು ಎಲ್ಲಿಯೂ ಹೇಳಿಲ್ಲ. ಈ ಆಕ್ಷೇಪವನ್ನು 'ಮಹತಃ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಮಹತೋಽಲ್ಪತ್ವಮಪಿ ಹಿ ವ್ಯೋಮವತ್ಪ್ರಾಹ ವೇದವಿತ್ ॥೭೯॥

ನಿರವಧಿಕವಾದ ಪರಿಮಾಣೋತ್ಕರ್ಷವುಳ್ಳ ಬ್ರಹ್ಮನಿಗೂ ಅಲ್ಪಪರಿಮಾಣತ್ವವನ್ನು ಆಕಾಶದ ದೃಷ್ಟಾಂತದಿಂದ ವೇದವಿದರಾದ ಸೂತ್ರಕಾರರು 'ವ್ಯೋಮವಚ್ಚ' ಎಂಬ ಸೂತ್ರಾಂಶದಿಂದ ಹೇಳಿರುತ್ತಾರೆ.

ಕಾಲ ಹಾಗೂ ಆಕಾಶಗಳಲ್ಲಿಯೂ, ಈಶ್ವರನಲ್ಲಿಯೂ ನಿರವಧಿಕವಾದ ಪರಿಮಾಣ ಉತ್ಕರ್ಷ–ಅಪಕರ್ಷಗಳಿರುವುದು ಎಂಬುದಾಗಿ ಸಾಕ್ಷಿಯಿಂದಲೂ ಆಗಮದಿಂದಲೂ ಸಮರ್ಥಿಸಲಾಯಿತು. ಇನ್ನು ಇದನ್ನು ಒಪ್ಪದಿದ್ದಲ್ಲಿ ಬಾಧಕವನ್ನು 'ಯದಿ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಯದ್ಯಲ್ಪದೇಶಸಂಸ್ಥಾನಂ ನ ಸರ್ವತ್ರಾಪಿ ನೋ ಭವೇತ್ ।

ಸ್ಥಿತಸ್ಯ ಹ್ಯಲ್ಪದೇಶೇಷು ಸರ್ವಗತ್ವಂ ಭವೇದ್ಧ್ರುವಮ್ ॥೮೦॥

ಏಕತ್ರಾಪ್ಯನವಸ್ಥಸ್ಯ ಕುತ ಏವಾಖಿಲಸ್ಥತಾ ।

ಶೂನ್ಯತ್ವಮೇವ ತಸ್ಯ ಸ್ಯಾದ್ಯಸ್ಯೈಕತ್ರಾಪಿ ನ ಸ್ಥಿತಿಃ ॥೮೧॥

ಅತೋ ನಾಣುತ್ವವಿಶ್ರಾಂತಿರ್ನ ಮಹತ್ವಸ್ಯ ಚ ಕ್ವಚಿತ್ ।

ಒಂದು ಪಕ್ಷದಲ್ಲಿ ಕಾಲಾದಿಗಳಿಗೆ ಅಲ್ಪದೇಶದಲ್ಲಿ ಸ್ಥಿತಿಯು ಇಲ್ಲವಾದರೆ ಆಗ ಸರ್ವತ್ರದಲ್ಲಿ ಇರುವಿಕೆಯು ಸಿದ್ಧಿಸಲಾರದು. ಏಕೆಂದರೆ ಅಲ್ಪದೇಶಗಳಲ್ಲಿ ಸ್ಥಿತಿಯನ್ನು ಹೊಂದಿರುವವನಿಗೇ ಸರ್ವದೇಶಗಳಲ್ಲಿ ಸ್ಥಿತಿಯು ಎಂಬುದು ಪ್ರಸಿದ್ಧವು. ಒಂದೊಂದು ಪ್ರದೇಶದಲ್ಲಿಯೂ ಇಲ್ಲದಿರುವ ವ್ಯಕ್ತಿಗೆ ಸರ್ವದೇಶಗಳಲ್ಲಿ ಸ್ಥಿತಿಯು ಹೇಗೆ ಆದೀತು? ಯಾವುದಕ್ಕೆ ಏಕದೇಶದಲ್ಲಿಯೂ ಸ್ಥಿತಿಯು ಇರುವುದಿಲ್ಲವೋ ಅದಕ್ಕೆ ಶೂನ್ಯತೆಯೇ ಪ್ರಾಪ್ತವಾಗುವುದು. ಅಂದರೆ ಅದು ಅತ್ಯಂತ ಅಸತ್ವವೇ ಆಗುವುದು. ಆದುದರಿಂದ ಎಲ್ಲಿಯೂ ಪರಿಮಾಣದ ಅಪಕರ್ಷದ ತಾರತಮ್ಯಕ್ಕೂ ಉತ್ಕರ್ಷದ ತಾರತಮ್ಯಕ್ಕೂ ವಿಶ್ರಾಂತಿಯು ಸಂಭವಿಸುವುದಿಲ್ಲ.

ಹೀಗೆ ಕಾಲ ಆಕಾಶ ಈಶ್ವರ ಇವುಗಳಲ್ಲಿರುವ ಪರಿಮಾಣದಲ್ಲಿ ಉತ್ಕರ್ಷ-ಅಪಕರ್ಷಗಳ ಆನಂತ್ಯವಿರುವುದೆಂಬುದಾಗಿ ಹೇಳಿದರು. ಕೇವಲ ಇವುಗಳಲ್ಲಿ ಮಾತ್ರವೇ ಅಲ್ಲ, ಪ್ರಕೃತಿ ಇತ್ಯಾದಿ ಸರ್ವಗತವೂ ಪರಮಮಹತ್ತರವೂ ಆದ ಬೇರೆ ದ್ರವ್ಯದಲ್ಲಿಯೂ ಈ ರೀತಿಯ ಆನಂತ್ಯವು ಇದೆಯೆಂಬ ಸಂಗತಿಯನ್ನು 'ಉಭಯಾನಂತ್ಯಯುಕ್' ಇತ್ಯಾದಿ ವಚನದಿಂದ ಹೇಳುತ್ತಾರೆ –

ಉಭಯಾನಂತ್ಯಯುಕ್ ತಸ್ಮಾದ್ಯದಿ ಮುಖ್ಯಂ ಮಹದ್ಭವೇತ್ ।।೮೨।।

ತಚ್ಚ ಬ್ರಹ್ಮ ಪರಂ ಸಾಕ್ಷಾತ್ಸರ್ವಾನಂತ್ಯಯುತಂ ಸದಾ ।

ಕಾಲ ಮುಂತಾದವುಗಳ ಆನಂತ್ಯದ ಬಗ್ಗೆ ಹೇಳಿದ ನ್ಯಾಯದಿಂದ, ಪ್ರಕೃತಿ ಮುಂತಾದ ಪರಮಮಹತ್ತಾದ ದ್ರವ್ಯದಲ್ಲಿಯೂ ಉಭಯರೀತಿಯ ಆನಂತ್ಯವು ಇರುತ್ತದೆ. ಕಾಲ ಮುಂತಾದವು ಅನಂತತ್ವವನ್ನು ಹೊಂದಿದ್ದರೂ, ನಿರಪೇಕ್ಷವಾದ ಹಾಗೂ ಮುಖ್ಯವಾದ ಅನಂತತ್ವವು ಪರಬ್ರಹ್ಮನಲ್ಲಿ ಮಾತ್ರವಿರುವುದು. ಏಕೆಂದರೆ ಕಾಲ ಮುಂತಾದವುಗಳ ಅನಂತತ್ವವು ಈಶ್ವರಾಧೀನವಾದುದು ಎಂದರ್ಥ.

ಇನ್ನು ಪರಮಾಣುಗಿಂತ ಕಡಿಮೆ ಪರಿಮಾಣವುಳ್ಳ ದ್ರವ್ಯವು ಇಲ್ಲವೆಂದು ಶಂಕಿಸಬಾರದು. ಏಕೆಂದರೆ ಪರಮಾಣುಗಳಿಗೆ ಭಾಗಗಳಿರುತ್ತವೆ ಮತ್ತು ಆ ಭಾಗಗಳಿಗೂ ಮತ್ತೆ ಭಾಗಗಳಿರುತ್ತವೆ. ಹೀಗೆ ಪರಿಮಾಣ ಅಪಕರ್ಷದ ತಾರತಮ್ಯಕ್ಕೆ ವಿಶ್ರಾಂತಿಯು ಇರುವುದಿಲ್ಲ. ಇದು ಸಾಕ್ಷಿರೂಪ ಪ್ರಮಾಣದಿಂದ ಸಿದ್ಧವಾಗುತ್ತದೆ. ಹೀಗೆ ಸಿದ್ಧಾಂತವು. ಆದರೆ ಸಾಕ್ಷಿ ಎಂಬ ಪ್ರಮಾಣವನ್ನೇ ನಾನು ಒಪ್ಪುವುದಿಲ್ಲ ಎಂದು ಪರವಾದಿಯು ಹೇಳಿದರೆ, ಅದಕ್ಕೆ ಬಾಧಕವನ್ನು 'ಯದಿ ಸಾಕ್ಷೀ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಯದಿ ಸಾಕ್ಷೀ ಸ್ವಯಂಭಾತೋ ನ ಮಾನಂ ಕೇನ ಗಮ್ಯತೇ ।।೮೩।।

ಅಕ್ಷಜಾದೇಶ್ಚ ಮಾನತ್ವಮನವಸ್ಥಾನ್ಯಥಾ ಭವೇತ್ ।

ಅತಃ ಸರ್ವಪದಾರ್ಥಾನಾಂ ಭಾಗಾಃ ಸಂತ್ಯೇವ ಸರ್ವದಾ ।।೮೪।।

ಸರ್ವದಿಕ್ಷ್ವಪಿ ಸಂಬಂಧಾದವಿಭಾಗಃ ಪರಾಣುತಾ ।

ಸ್ವಪ್ರಕಾಶರೂಪ ಸಾಕ್ಷಿಯನ್ನು ಪ್ರಮಾಣವೆಂದು ಅಂಗೀಕರಿಸದಿದ್ದರೆ, ಪ್ರತ್ಯಕ್ಷಾದಿಗಳ ಪ್ರಾಮಾಣ್ಯವೂ, ಆಕಾಶ ಮುಂತಾದ ಬಾಹ್ಯ ಹಾಗೂ ಸುಖ ಮುಂತಾದ ಆಂತರಿಕ ಪದಾರ್ಥಗಳೂ ಹೇಗೆ ತಿಳಿಯಲ್ಪಡುವುದು? ಅವುಗಳು ಸಾಕ್ಷಿಯಿಂದ ಇತರವಾದ ಪ್ರಮಾಣಗಳಿಂದ ತಿಳಿದುಬರುತ್ತವೆ ಎಂದು ಹೇಳಿದರೆ ಅನವಸ್ಥೆಯು ಬರುವುದು. ಆದ್ದರಿಂದ ಸಾಕ್ಷಿರೂಪ ಪ್ರಮಾಣವನ್ನು ಒಪ್ಪಲೇಬೇಕು. ಆ ಸಾಕ್ಷಿಯಿಂದ ಎಲ್ಲ ಪದಾರ್ಥಗಳಿಗೂ ಅವುಗಳ ಭಾಗಗಳಿಗೂ ಯಾವಾಗಲೂ ಭಾಗಗಳು ಇದ್ದೇ ಇರುತ್ತವೆ ಎಂದು ಸಿದ್ಧವಾಗುವುದು. ಹಾಗೂ ಏಕಕಾಲದಲ್ಲಿ ಸರ್ವದಿಕ್ಕುಗಳೊಂದಿಗೂ ಅವುಗಳ ಸಂಯೋಗವಿರುವುದೆಂಬ ಯುಕ್ತಿಯಿಂದಲೂ ಭಾಗಗಳಿವೆಯೆಂದು ತಿಳಿದು ಬರುತ್ತದೆ. ವಿಭಾಗ ಮಾಡಲು ಆಗದಿರುವುದು ಎಂಬುದೇ ಪರಮಾಣು ಶಬ್ದದ ಪ್ರವೃತ್ತಿ ನಿಮಿತ್ತವು. 'ಅವಿಭಾಗಃ ಪರಾಣುತಾ' ಎಂದು ಇಲ್ಲಿ ಹೇಳಿರುವ ಪರಮಾಣುವಿನ ಲಕ್ಷಣಕ್ಕೆ ಶ್ರೀಮನ್ನ್ಯಾಯಸುಧಾದಲ್ಲಿ 'ಯಾವುದಕ್ಕೆ ವಿಭಿನ್ನವಾದ ಅವಯವಗಳಿದ್ದರೂ ಅವುಗಳು ಯಾವತ್ತೂ ವಿಭಾಗ ಹೊಂದುವುದಿಲ್ಲವೋ ಅದೇ ಪರಮಾಣು' ಎಂಬುದಾಗಿ ಶ್ರೀಮಜ್ಜಯತೀರ್ಥರು ವ್ಯಾಖ್ಯಾನ ಮಾಡಿದ್ದಾರೆ.

ಇನ್ನು ಸೂತ್ರಕಾರರು ಪರಿಮಾಣದ ಅಸಮವಾಯಿಕಾರಣಗಳ ವಿಷಯದಲ್ಲಿ ಹೇಳಿರುವ ದೂಷಣವನ್ನು ಇನ್ನಿತರ ಅಸಮವಾಯಿಕಾರಣದ ವಿಷಯಗಳಲ್ಲಿಯೂ ಅನ್ವಯಿಸಿಕೊಳ್ಳಬೇಕು ಎನ್ನುವ ಅಭಿಪ್ರಾಯದಿಂದ, ದ್ರವ್ಯದ ಅಸಮವಾಯಿ ಕಾರಣವಾದ ಸಂಯೋಗವಿಷಯದಲ್ಲಿ ಅನ್ಯಥಾ ಪ್ರತಿಪತ್ತಿಯನ್ನು ನಿರಾಕರಿಸುತ್ತಾರೆ–

ತತ್ಸಂಯೋಗಾದನಿಯತಾತ್ಪದಾರ್ಥಾನಾಂ ಜನಿರ್ಭವೇತ್ ।।೮೫।।

ದ್ವಯೋರೇವ ತು ಸಂಯೋಗ ಇತಿ ಕೇನಾವಸೀಯತೇ ।

ಅವಯವಗಳ ಸಂಯೋಗವು ದ್ರವ್ಯಗಳಿಗೆ ಅಸಮವಾಯಿಕಾರಣವು ಎಂದು ಹೇಳುವ ವೈಶೇಷಿಕಾದಿಗಳೂ ಸಹ ಪರಮಾಣುವಿನಿಂದ ಕಾರ್ಯೋತ್ಪತ್ತಿಯಾಗಲು ಸಜಾತೀಯವಾದ ಎರಡೇ ಪರಮಾಣುಗಳ ಸಂಯೋಗವೇ ಕಾರಣವೆಂದು ಹೇಳುತ್ತಾರೆ. ಅದು ನಂಬಿಕೆಗೆ ಅರ್ಹವಾದುದಲ್ಲ. ಏಕೆಂದರೆ ಯಾವುದೇ ನಿಯಮಕ್ಕೊಳಪಡದೆ ಆ ಕಾರಣಗಳ (ಪರಮಾಣುಗಳ) ಸಂಯೋಗದಿಂದ ದ್ರವ್ಯಗಳ ಉತ್ಪತ್ತಿಯು ಆಗುವುದು. (ಹೇಗೆಂದರೆ – ಕೆಲವು ಸಂದರ್ಭಗಳಲ್ಲಿ ಎರಡು ಪರಮಾಣುಗಳ ಸಂಯೋಗದಿಂದ ದ್ವ್ಯಣುಕವೆಂಬ ಕಾರ್ಯವು ಹುಟ್ಟುತ್ತದೆ. ಕೆಲವೊಮ್ಮೆ ಮೂರು ಪರಮಾಣುಗಳ ಸಂಯೋಗದಿಂದ ತ್ರ್ಯಣುಕವೆಂಬ

ಕಾರ್ಯವು ಹುಟ್ಟುತ್ತದೆ. ಇದೇರೀತಿ ನಾಲ್ಕು ಪರಮಾಣುಗಳು ಸಂಯೋಗಗೊಂಡು ಚತುರಣುಕವು ಹುಟ್ಟಬಹುದು. ಕೆಲವೊಮ್ಮೆ ಸಜಾತೀಯ ಪರಮಾಣುಗಳು ಸಂಯೊಗಗೊಂಡರೆ, ಇನ್ನೂ ಕೆಲವು ಸಲ ವಿಜಾತೀಯ ಪರಮಾಣುಗಳು ಸಂಯೊಗಗೊಂಡು ಕಾರ್ಯದ ಉತ್ಪತ್ತಿಗೆ ಕಾರಣವಾಗಬಹುದು. ಮತ್ತೊಂದು ಸಂದರ್ಭದಲ್ಲಿ ಪರಮಾಣುವಿಗೂ ದ್ವ್ಯಣುಕಕ್ಕೂ ಸಂಯೋಗವಾಗಬಹುದು. ಹೀಗೆ ಪರಮಾಣುಗಳ ಸಂಯೊಗದಲ್ಲಿ ಯಾವುದೇ ನಿರ್ದಿಷ್ಟ ನಿಯಮವೆಂಬುವುದು ಇರುವುದಿಲ್ಲ.). ಆದ್ದರಿಂದ ಆದಿಕಾರ್ಯಕ್ಕೆ ಎರಡು ಸಜಾತೀಯವಾದ ಪರಮಾಣುಗಳ ಸಂಯೋಗವೇ ಅಸಮವಾಯಿಕಾರಣವು ಎಂಬುದಾಗಿ ಯಾವ ಪ್ರಮಾಣದಿಂದ ನಿರ್ಧಾರವಾಗುತ್ತದೆ?

ಇನ್ನು ಸಜಾತೀಯವೇ ಆದ ಪರಮಾಣುಗಳ ಸಂಯೋಗವೇ ದ್ವ್ಯಣುಕಾದಿ ಕಾರ್ಯದ ಉತ್ಪತ್ತಿಗೆ ಕಾರಣ ಎಂಬ ನಿಯಮವು ಪ್ರಮಾಣರಹಿತವಲ್ಲ. ಏಕೆಂದರೆ ಪರಮಾಣುವಿನ ಕಾರ್ಯವಾದ ದ್ವ್ಯಣುಕಾದಿಗಳಲ್ಲಿ ಗಂಧಾದಿಗಳ ಉತ್ಪತ್ತಿಯೇ ಈ ನಿಯಮದ ಬಗ್ಗೆ ಪ್ರಮಾಣವಾಗುತ್ತದೆ. ಹೇಗೆಂದರೆ ಪರಮಾಣುವಿನ ಕಾರ್ಯವಾದ ದ್ವ್ಯಣುಕಾದಿಗಲ್ಲಿ ಗಂಧಾದಿಗಳು ಕಂಡುಬರುತ್ತವೆ. ಇದು ಸಾಧ್ಯವಾಗಬೇಕಾದರೆ ಸಂಯೋಗವಾಗುವ ಪರಮಾಣುಗಳು ಸಜಾತೀಯವೇ ಆಗಿರಬೇಕು. ಏಕೆಂದರೆ ವಿಜಾತೀಯವಾದ ಪೃಥಿವಿ ಮತ್ತು ಜಲದ ಪರಮಾಣುಗಳ ಸಂಯೋಗದಿಂದ ಒಂದು ಕಾರ್ಯವು ಉತ್ಪತ್ತಿಯಾದ ಪಕ್ಷದಲ್ಲಿ ಆಗ್ಗ ಆ ಕಾರ್ಯವು ಗಂಧರಹಿತವೂ ಸ್ನೇಹಗುಣರಹಿತವೂ ಆಗಬೇಕಾಗುವುದು. ಹೀಗೆ ಆಕ್ಷೇಪಿಸಿದರೆ, 'ಕಾರಣಸ್ಯ' ಇತ್ಯಾದಿ ವಚನದಿಂದ ಅದನ್ನು ಪರಿಹರಿಸುತ್ತಾರೆ –

ಕಾರಣಸ್ಯ ಗುಣಾಸ್ತೇನ ಭವೇಯುಃ ಕಾರ್ಯಗಾ ಅಪಿ ।।೮೬।।

ತಾರತಮ್ಯೇನ ಸರ್ವೇಽಪಿ ಮಹಾಂತಶ್ಚಾಣವೋ ಯತಃ ।

'ದ್ವಯೋರೇವ ಸಂಯೋಗಃ' ಎಂಬ ನಿಯಮವಿಲ್ಲದುದರಿಂದ, ಕಾರಣದ ಗಂಧಾದಿ ಗುಣಗಳು ಕಾರ್ಯದಲ್ಲಿರುವ ಗಂಧಾದಿ ಗುಣಗಳ ಉತ್ಪತ್ತಿಗೆ ಕಾರಣವೂ ಆಗುತ್ತವೆ. ಇದರಲ್ಲಿ ದೋಷವೇನು? ತಾರತಮ್ಯದಿಂದ ಸರ್ವಪದಾರ್ಥಗಳೂ ಮಹತ್ತುಗಳೆಂದೂ ಅಣುಗಳೆಂದೂ ಸಮರ್ಥಿಸಿಸಲ್ಪಟ್ಟಿವೆ. ಆದ್ದರಿಂದ ಎರಡೇ ಪರಮಾಣುಗಳಿಗೆ ಸಂಯೋಗ ಎಂಬ ನಿಯಮವು ಯಾವ ಪ್ರಮಾಣದಿಂದ ನಿಶ್ಚಿತವಾಗುತ್ತದೆ?

ತತ್ಪ್ರೋಕ್ತಸೃಷ್ಟೌ ತು ಮಾನಂ ಕೇವಲಕಲ್ಪನಾ ।।೮೭।।

ಕಥಂ ಸಾಕ್ಷಿಮಿತಸ್ಯಾಸ್ಯ ಶಕ್ನುಯಾದ್ವಾರಣೇ ಕ್ವಚಿತ್ ।

ಇನ್ನು ತಾರ್ಕಿಕರು (ವೈಶೇಷಿಕರು) ಹೇಳಿದ ಸೃಷ್ಟಿ ಪ್ರಕ್ರಿಯೆಯ ವಿಷಯದಲ್ಲಿ

ಪ್ರಮಾಣವು ಇರುವುದಿಲ್ಲ. ಅದು ಕೇವಲ ಕಲ್ಪನೆಯು. ಮೂಲಾಧಾರವಿಲ್ಲದ ಈ ವಾದವು ಸಾಕ್ಷಿಯಿಂದ ಸಿದ್ಧವಾದ ನಿಯಮರಹಿತ ಸೃಷ್ಟಿ ಪ್ರಕಾರವನ್ನು ಎಲ್ಲಿಯೂ ಬಾಧಿಸಲು ಸಮರ್ಥವಾಗುವುದಿಲ್ಲ.

ಹಾಗಾದರೆ ಪರಮಾಣು ದ್ವ್ಯಣುಕಗಳೇ ಮೊದಲು ಸಾಕ್ಷಿಸಿದ್ಧವಾಗಿಲ್ಲ. ಅಂದಮೇಲೆ ಅವುಗಳಿಂದ ಆರಂಭವಾಗುವ ಸೃಷ್ಟಿ ಪ್ರಕ್ರಿಯೆಯೂ ಸಾಕ್ಷಿಯಿಂದ ಸಿದ್ಧವಾಗಲಾರದು. ಆದುದರಿಂದ 'ಸಾಕ್ಷಿಮಿತಸ್ಯ' ಎಂದು ಹೇಳಿದ್ದು ಯುಕ್ತವಾಗದು ಎಂದರೆ –

ಯದಿ ಸಾಕ್ಷಿಮಿತಂ ನೈತನ್ನಾನುಮಾ ತತ್ರ ವರ್ತತೇ ।।೮೮।।

ಪಕ್ಷೀಕರ್ತುಮಶಕ್ಯತ್ವಾತ್ಕುತ ಏವಾನುಮಾ ಭವೇತ್ ।

ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್ ।।೮೯।।

ಪರಮಾಣು ಮುಂತಾದವು ಸಾಕ್ಷಿಸಿದ್ಧವಲ್ಲವೆಂದರೆ, ಅದು ಅಪ್ರಮಾಣವೇ ಆಗುವುದು. ಅದರ ವಿಷಯದಲ್ಲಿ ಅನುಮಾನವೂ ಪ್ರವೃತ್ತವಾಗಲಾರದು. ಪಕ್ಷೀಕರಿಸಲು ಶಕ್ಯವಿಲ್ಲವಾದುದರಿಂದ ಅನುಮಾನವು ಯಾವ ಕಾರಣದಿಂದಲೂ ಸಂಭವಿಸಲಾರದು. ಯಾವನು ಯಾವ ದೇಶವನ್ನು ಕುರಿತು ಹೆಜ್ಜೆಯಿಡುವುದನ್ನೇ ಇನ್ನೂ ಪ್ರಾರಂಭಿಸಲ್ಲವೋ, ಅವನು ಆ ದೇಶವನ್ನು ಹೇಗೆತಾನೆ ಹೊಂದುವನು? ಏಕೆಂದರೆ ಚಲ ಮತ್ತು ಅಚಲ ವಸ್ತುಗಳ ಸಂಯೋಗಕ್ಕೆ ಚಲವಸ್ತುವಿನ ಕ್ರಿಯೆಯೇ ಕಾರಣವಾಗುವುದು. ಇದು ಹೇಗೋ ಹಾಗೆ, ಅನುಮಾನದ ಉತ್ಪತ್ತಿ ಎಂಬ ಕ್ರಿಯೆಗೆ ಪಕ್ಷೀಕರಣವೇ ಕಾರಣವು. ಪರ್ವತ, ಬೆಂಕಿ ಮುಂತಾದವು ಅನುಮಾನದ ವಿಷಯವಾಗಲಾರವು. ಪರ್ವತ ಬೆಂಕಿಗಳಲ್ಲಿನ ಸಂಬಂಧವು ಅನುಮಾನದ ವಿಷಯವಾಗುತ್ತದೆ. ಹಾಗೂ ಸಂಬಂಧಿಗಳ ಜ್ಞಾನವಿಲ್ಲದೆ ಸಂಬಂಧದ ಜ್ಞಾನವಾಗಲಾರದು. ಆದ್ದರಿಂದ ಪಕ್ಷೀಕರಣವಿಲ್ಲದಿದ್ದರೆ ಅನುಮಾನದ ಉತ್ಪತ್ತಿಯೇ ಸಂಭವಿಸುವುದಿಲ್ಲ.

ಇನ್ನು ದ್ವ್ಯಣುಕವನ್ನು ಪಕ್ಷೀಕರಿಸಿ ಪರಮಾಣುವಿನ ಬಗ್ಗೆ ಅನುಮಾನ ಮಾಡಬೇಕು. ಏಕೆಂದರೆ ಕಾರ್ಯವೇ ಕಾರಣದ ಬಗ್ಗೆ ಪ್ರಮಾಣವೆಂದು ತಾರ್ಕಿಕರು ಹೇಳಿದ್ದಾರೆ. ಆ ದ್ವ್ಯಣುಕವೆಂಬ ಕಾರ್ಯವು ಇದುವರೆಗೂ ಸಿದ್ಧವಾಗಿಲ್ಲ. ಆದ್ದರಿಂದ ಅದನ್ನು ಪಕ್ಷೀಕರಿಸಲು ಸಾಧ್ಯವಿಲ್ಲ. ಅಂದಮೇಲೆ ದ್ವ್ಯಣುಕದ ಕಾರಣವಾದ ಪರಮಾಣುವಿನ ಬಗ್ಗೆ ಅನುಮಾನವು ಹೇಗೆ ತಾನೆ ಸಾಧ್ಯವಾಗುವುದು?

ಹೀಗೆ ಪರಮಾಣು ದ್ವ್ಯಣುಕಗಳು ಅನುಮಾನದಿಂದ ಸಿದ್ಧಿಸುವುದಿಲ್ಲವೆಂದು ಹೇಳಿ, ಪ್ರಸಂಗವಿರುವುದರಿಂದ, ಆಕಾಶಾದಿಗಳ ಪರಿಮಾಣದ ಉತ್ಕರ್ಷದಲ್ಲಿನ ಅನಂತತ್ವವೂ ಅನುಮಾನದಿಂದ ಸಿದ್ಧವಾಗುವುದಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ –

ದೇಶಾಂತರಾದಿಶಬ್ದಾಶ್ಚ ಶಶಶೃಂಗಾದಿಶಬ್ದವತ್ ।

ದೇಶಾಂತರಾದಿಗಳನ್ನು ಸಾಧಸಿಕೊಡುವ ಅನುಮಾನ ಪ್ರಯೋಗಗಳು ಶಶಶೃಂಗಾದಿ ಸಾಧಕ ಅನುಮಾನ ಪ್ರಯೊಗಗಳಿಗೆ ಸಮಾನವಾಗಿಯೇ ಇರುತ್ತವೆ.

ವಿವಾದ ವಿಷಯವಾದ ದೇಶವು ತನಗಿಂತ ಸ್ಥೂಲವೂ ಸದೃಶವೂ ಆದ ದ್ರವ್ಯಾಂತರದಿಂದ ಯುಕ್ತವಾದುದು, ದೇಶವಾಗಿರುವುದರಿಂದ. ಹಸ್ತಾದಿ ದೇಶವು ದೃಷ್ಟಾಂತ. ಆ ದ್ರವ್ಯಾಂತರವೂ ಇದರಂತೆಯೇ. ಹೀಗೆಯೇ ಕಾಲದಲ್ಲಿಯೂ ಅನುಮಾನ ಮಾಡಬಹುದು. ಹೀಗೆ ಶಶಶೃಂಗದ ವಿಷಯದಲ್ಲಿ ಅನುಮಾನವನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ ಅತ್ಯಂತ ಅಸತ್ತಾದ ಎಲ್ಲಿಯೂ ತೋರದಿರುವ ಶಶಶೃಂಗಕ್ಕೆ ಗೋವು ಮುಂತಾದವುಗಳ ಶೃಂಗಗಳಿಂದ ಸಾದೃಶ್ಯವೂ ಸಜಾತೀಯತೆಯೂ ಇರುವುದಿಲ್ಲ. ಹಾಗಾದರೆ ಆಕಾಶಾದಿಗಳೂ ಒಂದೊಂದೇ ಇರುವುದರಿಂದ ಸಾದೃಶ್ಯಾದಿಗಳು ಇಲ್ಲವೆಂದು ಹೇಳಕೂಡದು. ಔಪಾಧಿಕ ಭೇದವಿದ್ದ ಪ್ರಯುಕ್ತ ಕೂಡುವುದು ಎಂದು ಆಶಂಕಿಸಿದರೆ, ಅದನ್ನು 'ಸದೃಶಂ ಚ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಸದೃಶಂ ಚ ಸಜಾತೀಯಂ ನಾಸ್ಮತ್ಪಕ್ಷೇ ಕಿಮೇವ ಹಿ ।।೯೦।।

ಸಂಪ್ರತಿಪನ್ನ ದೇಶವು ಅದಕ್ಕಿಂತ ಸ್ಥೂಲವೂ ಸದೃಶವೂ ಸಜಾತೀಯವೂ ಆದ ವಸ್ತುವಿನಿಂದ (ಅಂದರೆ ಜೀವನಿಂದ ಅಥವಾ ಈಶ್ವರನಿಂದ) ಯುಕ್ತವಾದುದು ನಮ್ಮ ಪಕ್ಷದಲ್ಲಿ ಏಕೆ ಸಿದ್ಧವಾಗದು? ಆಗಿಯೇ ಆಗುವುದು. ಆದ್ದರಿಂದ ನಿಮ್ಮ ಪಕ್ಷಕ್ಕೆ ಸಿದ್ಧಸಾಧನವೆಂಬ ದೋಷವು ಬರುವುದು. ಹಾಗೂ ಆಕಾಶಾದಿಗಳ ಪರಿಮಾಣ ಉತ್ಕರ್ಷದ ಆನಂತ್ಯವು ಸಿದ್ಧಿಸುವುದಿಲ್ಲ. ಆದ್ದರಿಂದ ಅರ್ಥಾಂತರತ್ವವೂ ಬರುವುದು.

ಹೀಗೆ ಪರಮಾಣು ದ್ವ್ಯಣುಕಗಳಿಗೆ ಹಾಗೂ ಆಕಾಶಾದಿಗಳ ಪರಿಮಾಣದಲ್ಲಿನ ಉತ್ಕರ್ಷದ ಆನಂತ್ಯಕ್ಕೆ ಸಾಕ್ಷಿಸಿದ್ಧತ್ವವನ್ನು ಅಂಗೀಕರಿಸದೆ ಕೇವಲ ಅನುಮಾನದಿಂದ ಸಾಧಿಸುವುದು ಅಯುಕ್ತವೆಂದು ಸಮರ್ಥಿಸಲಾಯಿತು.

ಇನ್ನು ಆಗಮವನ್ನು ಅನಾದರಿಸಿ, ಈಶ್ವರ ಧರ್ಮಾದಿಗಳನ್ನು ಸಾಧಿಸಲು ಮಾಡಲ್ಪಡುವ ಅನುಮಾನವೂ ಅಯುಕ್ತವೆಂಬುದನ್ನು ಇಲ್ಲಿ ಪ್ರಸಂಗವಿರುವುದರಿಂದ 'ಯೇನೈವ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಯೇನೈವ ಚ ಪ್ರಕಾರೇಣಾತ್ಯಸಿದ್ಧಮನುಮೀಯತೇ ।

ತೇನೈವ ಶಶಶೃಂಗಾದೇಃ ಶಕ್ಯಮಸ್ತಿತ್ವಕಲ್ಪನಮ್ ।।೯೧।।

ಯಾವ ಪ್ರಕಾರದಿಂದ ಆಗಮಾದಿಗಳಿಂದ ಅತ್ಯಂತ ಅಸಿದ್ಧವಾದುದೂ

ಅನುಮಾನದಿಂದ ಕಲ್ಪಿಸಬಹುದೋ, ಅದೇ ಪ್ರಕಾರ ಶಶಶೃಂಗಾದಿ ಅತ್ಯಂತ ಅಸತ್ತಾದ ಪದಾರ್ಥಗಳ ಅಸ್ತಿತ್ವವನ್ನೂ ಕಲ್ಪಿಸಲು ಬರುತ್ತದೆ.

ಅನುಮಾನವು ಯಾವಾಗ ಉಪಯುಕ್ತವಾಗುವುದೆಂದರೆ –

ಪ್ರತ್ಯಕ್ಷಮಾಗಮೋ ವಾಪಿ ಭವೇದ್ಯತ್ರ ನಿಯಾಮಕಃ ।

ಸೈವ ವ್ಯಾಪ್ತಿರ್ಭವೇನ್ಮಾನಂ ನಾನ್ಯಾ ಸಂದಿಗ್ಧಮೂಲತಃ ।।೯೨।।

ಎಲ್ಲಿ ಪ್ರತ್ಯಕ್ಷ ಆಗಮ ಹಾಗೂ ಅನುಮಾನಗಳಿಂದ ಗೃಹೀತವಾದ ವ್ಯಾಪ್ತಿಯು ಪ್ರಾಮಾಣ್ಯಕ್ಕೆ ನಿಯಾಮಕವಾಗಿದೆಯೋ ಅದೇ ವ್ಯಾಪ್ತಿಯು ಅನುಮಾನದ ಪ್ರಾಮಾಣ್ಯಕ್ಕೆ ಉಪಯುಕ್ತವಾಗುವುದು. ಪ್ರತ್ಯಕ್ಷಾದಿ ಅಗೃಹೀತವಾದ ವ್ಯಾಪ್ತಿಯು ಸಂದೇಹಕ್ಕೆ ಮೂಲವಾದ ಅವ್ಯಭಿಚಾರತ್ವದ ಕಾರಣ ಅನುಮಾನ ಪ್ರಾಮಾಣ್ಯಕ್ಕೆ ಉಪಯುಕ್ತವಾಗಲಾರದು.

ಹಾಗಾದರೆ ಪ್ರತ್ಯಕ್ಷಾದಿಗಳಿಂದ ಸಿದ್ಧವಾದ ವ್ಯಾಪ್ತಿಯು ಧೂಮಾನುಮಾನದಂತೆ ಪರಮಾಣು ಮುಂತಾದವುಗಳ ಅನುಮಾನಗಳಲ್ಲಿಯೂ ಇದ್ದೇ ಇರುತ್ತದೆ. ಏಕೆಂದರೆ ಧೂಮಕ್ಕೆ ಅಗ್ನಿಯೊಡನೆ ಸಾಹಚರ್ಯವು ಇರುವಂತೆ, ಪರಮಾಣು ಮುಂತಾದವು ಮಹದಾದಿ ಪದಾರ್ಥಗಳೊಂದಿಗೆ ಸಾವಯತ್ವಾದಿಗಳಿಂದ ಸಾಹಚರ್ಯವನ್ನು ಹೊಂದಿರುತ್ತವೆ. ಈ ಆಶಂಕೆಯನ್ನು 'ಸಹದರ್ಶನಮಾತ್ರೇಣ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಸಹದರ್ಶನಮಾತ್ರೇಣ ನ ವ್ಯಾಪ್ತಿರವಸೀಯತೇ ।

ಯದ್ವೈವಾವ್ಯತಿರೇಕೇಸ್ಯ ಹ್ಯಕ್ಷಜಂ ವಾಽಽಗಮೋ ಭವೇತ್ ।।೯೩।।

ತನ್ನಿರ್ಧಾರಿತಯುಕ್ತಿರ್ವಾ ವ್ಯಾಪ್ತಿಃ ಸೈವಾಪರಾ ನ ಹಿ ।

ಧೂಮಾದಿ ಹೇತುವಿಗೆ ಅಗ್ನ್ಯಾದಿ ಸಾಧ್ಯದಿಂದ ಸಾಮಾನಾಧಿಕರಣ್ಯ ದರ್ಶನ ಮಾತ್ರದಿಂದ ವ್ಯಾಪ್ತಿಯು ನಿಶ್ಚಯಿಸಲ್ಪಡುವುದಿಲ್ಲ. ಸಾಧನವೆಂದು ಹೇಳಲ್ಪಡುವ ಯುಕ್ತಿಯು ಸಾಧ್ಯವನ್ನು ಬಿಟ್ಟು ಇಲ್ಲದಿರುವ ಕಡೆಗಳಲ್ಲಿ, ಪ್ರತ್ಯಕ್ಷವಾಗಲೀ ಆಗಮವಾಗಲೀ, ಅಥವಾ ಪ್ರತ್ಯಕ್ಷ ಆಗಮಗಳಿಂದ ನಿರ್ಣಯಿಸಲ್ಪಟ್ಟ ಯುಕ್ತಿಯಾಗಲೀ ಪ್ರಮಾಣವಾಗಿರುವುದೋ, ಅದೇ ವ್ಯಾಪ್ತಿಯು. ಕೇವಲ ಸಾಮಾನಾಧಿಕರಣ್ಯ ದರ್ಶನ ಮೂಲಕವಾದುದು ವ್ಯಾಪ್ತಿಯೇ ಅಲ್ಲ.

ಹಾಗಾದರೆ ಇದೇ ನ್ಯಾಯದಿಂದಲೇ ಮಹದಾದಿ ಆರಂಭಕತ್ವ ಮುಂತಾದವುಗಳಿಗೂ ವ್ಯಾಪ್ತಿನಿಶ್ಚಯವು ಕೂಡುವುದರಿಂದ, ಪರಮಾಣ್ವಾದಿಗಳ ವಿಷಯದಲ್ಲಿ ಅನುಮಾನದ ಪ್ರವೃತ್ತಿಯು ಆಗುವುದಿಲ್ಲವೆಂದು ಹೇಗೆ ಹೇಳುತ್ತೀರಿ

ಎಂದು ಆಶಂಕಿಸಿದರೆ, ಅದು ಯುಕ್ತವಲ್ಲ. ಏಕೆಂದರೆ ಅಲ್ಲಿ ಪಕ್ಷೇತರತ್ವ ರೂಪ ಉಪಾಧಿಯು ಇರುವುದರಿಂದ ವ್ಯಭಿಚಾರವಿಲ್ಲವೆಂದು ನಿಶ್ಚಯವಾಗುವುದಿಲ್ಲ. ಹಾಗಾದರೆ ಪಕ್ಷದಿಂದ ಬೇರೆಯಾಗಿರುವುದು ಉಪಾಧಿಯೆನಿಸಲಾರದೆಂದು ಹೇಳಿದರೆ, ಅದಕ್ಕೆ ಬಾಧಕವನ್ನು ಹೇಳುತ್ತಾರೆ –

ಅನ್ಯಥಾ ಸಪ್ತಮರಸಭಾವೋಽಪ್ಯನುಮಯಾಪತೇತ್ ।।೯೪।।

ಅನಿಷ್ಟಾನಿ ಚ ಸರ್ವಾಣಿ ಹ್ಯನುಮಾ ಕಾಮಚಾರಿಣೀ ।

ಹಾಗಲ್ಲದೆ ಬೇರೆ ಪ್ರಮಾಣದ ಸಹಕಾರವಿಲ್ಲದಂಥ ಅನುಮಾನದಿಂದ ಪರಮಾಣ್ವಾದಿ ಸಿದ್ಧಿಯನ್ನು ಒಪ್ಪಿದ ಪಕ್ಷದಲ್ಲಿ, ಅಂಥಹ ಅನುಮಾನದಿಂದ ಲೋಕಾನುಭವಕ್ಕೆ ವಿರುದ್ಧವಾದ 'ಏಳನೆಯ ರಸವಿದೆ' 'ಬೆಂಕಿಯು ತಣ್ಣಗಿದೆ' ಇತ್ಯಾದಿ ಅನಿಷ್ಟಗಳೆಲ್ಲವೂ ಸಂಭವಿಸುತ್ತವೆ. ಏಕೆಂದರೆ ಇಂಥಹ ಅನುಮಾನವು ಕಾಮಚಾರಿಯಾದುದು. ಯಾವುದೇ ವಿಷಯದಲ್ಲಿಯೂ ಇಂಥಹ ಅನುಮಾನವನ್ನು ಮಾಡಬಹುದು. ಹೀಗೆ ಬಾಧಕವಿರುವ ಪ್ರಯುಕ್ತ ಪರಮಾಣ್ವಾದಿಗಳಿಗೆ ಸಾಕ್ಷಿವೇದ್ಯತ್ವವನ್ನು ಅಂಗೀಕರಿಸಬೇಕು. ಸಾಕ್ಷಿವೇದ್ಯವಲ್ಲವಾದ್ದರಿಂದ ಸಪ್ತಮ ರಸ, ಅಗ್ನಿಯ ಶೈತ್ಯ ಮುಂತಾದವು ಅಪ್ರಮಾಣವೆಂದೂ, ಸಾಕ್ಷಿವೇದ್ಯವಾದ್ದರಿಂದ ಪರಮಾಣ್ವಾದಿಗಳು ಪ್ರಮಾಣವೆಂದೂ ಸಿದ್ಧವಾಗುತ್ತದೆ.

ಸೂತ್ರ: ಓಂ ಸಮವಾಯಾಭ್ಯುಪಗಮಾಚ್ಚ ಸಾಮ್ಯಾದನವಸ್ಥಿತೇಃ ಓಂ

ಸೂತ್ರಾರ್ಥ: ಅವಯವ ಅವಯಯಿಗಳಿಗೆ ಭೇದವನ್ನು ಒಪ್ಪಿ ಸಮವಾಯವನ್ನು ಒಪ್ಪಿದುದರಿಂದ, ಹಾಗೂ ಸಮವಾಯಕ್ಕೂ ಸಮವಾಯಿಗಳಿಂದ ಭಿನ್ನತ್ವ ಸಾಮ್ಯವಿರುವುದರಿಂದ, ಅಲ್ಲಿಯೂ ಸಮವಾಯವನ್ನು ಅಂಗೀಕರಿಸಿದರೆ ಅನವಸ್ಥೆಯು ಬರುವುದು. ಆದಕಾರಣ ಸಮವಾಯವು ಅಸಂಭವವಾದ್ದರಿಂದ, ಪರಮಾಣ್ವಾದಿಗಳಿಗೆ ದ್ರವ್ಯಾದಿ ಕಾರಣತ್ವವು ಕೂಡುವುದಿಲ್ಲ.

ಈ ಸೂತ್ರವನ್ನು 'ಕಾರ್ಯಕಾರಣಯೋಶ್ಚೈವ' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ಕಾರ್ಯಕಾರಣಯೋಶ್ಚೈವ ಗುಣಾದೇಃ ಪಂಚಕಸ್ಯ ಚ ।।೯೫।।

ಭಿನ್ನಸ್ಯೈವ ತು ಸಂಬಂಧಃ ಸಮವಾಯೋಽನ್ಯ ಈರ್ಯತೇ ।

ವೈಶೇಷಿಕಾದಿಗಳು ಕಾರ್ಯಕಾರಣಗಳಿಗೂ ಗುಣಾದಿ ಪಂಚಕಕ್ಕೂ ಅತ್ಯಂತ ಭೇದವನ್ನು ಒಪ್ಪಿ, ಅವುಗಳಿಗೆ ಅತ್ಯಂತ ಭಿನ್ನವಾದ ಸಮವಾಯ ಸಂಬಂಧವನ್ನು ಹೇಳುತ್ತಾರೆ. ಈ ಕಾರಣದಿಂದಲೂ ವೈಶೇಷಿಕಾದಿಗಳ ಮತವು ಅಯುಕ್ತವು.

ಇಲ್ಲಿ ಕಾರ್ಯ-ಕಾರಣ ಶಬ್ದಗಳು ಅವಯವಿ-ಅವಯವ ವಾಚಕಗಳು. ಇವುಗಳು ಗುಣಗುಣಿಗಳಿಂದ ಇತರವಾದ ಪದಾರ್ಥಗಳ ಸಂಗ್ರಾಹಕಗಳೆಂದು ಮೊದಲನೆಯ 'ಚ' ಶಬ್ದವು ಸೂಚಿಸುತ್ತದೆ. ಗುಣ, ಅವಯವ, ಕ್ರಿಯಾ, ಸಾಮಾನ್ಯ ಮತ್ತು ವಿಶೇಷ ಇವುಗಳೇ ಗುಣಪಂಚಕಗಳು. ಎರಡನೆಯ 'ಚ' ಶಬ್ದದಿಂದ ಗುಣಿ, ಅವಯವಿ, ಕ್ರಿಯಾಶ್ರಯ, ಜಾತ್ಯಾಶ್ರಯ, ವಿಶೇಷಾಶ್ರಯ ಎಂಬ ಗುಣ್ಯಾದಿ ಪಂಚಕವನ್ನು ಸೂಚಿಸುತ್ತಾರೆ.

ಇಲ್ಲಿಯ ಅಭಿಪ್ರಾಯವಿದು. ವೈಶೇಷಿಕರೇ ಮುಂತಾದವರು ಅವಯವ-ಅವಯವಿಗಳಲ್ಲಿ, ಗುಣ-ಗುಣಿಗಳಲ್ಲಿ, ಕ್ರಿಯಾ-ಕ್ರಿಯಾಶ್ರಯಗಳಲ್ಲಿ, ಜಾತಿ-ವ್ಯಕ್ತಿಗಳಲ್ಲಿ, ವಿಶೇಷ ಹಾಗೂ ನಿತ್ಯ ದ್ರವ್ಯಗಳಲ್ಲಿ ಅತ್ಯಂತ ಭೇದವನ್ನು ಒಪ್ಪಿ, ಅತ್ಯಂತ ಭಿನ್ನವಾದ ಸಮವಾಯವೆಂಬ ಸಂಬಂಧವನ್ನು ಅಂಗೀಕರಿಸುತ್ತಾರೆ. ಅದು ಶಕ್ಯವಿಲ್ಲ. ಆದ್ದರಿಂದ ಈ ಮತವು ಅಯುಕ್ತವು.

ಹಾಗಾದರೆ 'ಇಹ ತಂತುಷು ಪಟಃ' (ಈ ತಂತುಗಳಲ್ಲಿ ಪಟವಿದೆ), 'ಇಹ ಪಟೇ ರೂಪಂ' (ಈ ಪಟದಲ್ಲಿ ರೂಪವಿದೆ), 'ಇಹ ಗವಿ ಗೋತ್ವಂ' (ಈ ಗೋವಿನಲ್ಲಿ ಗೋತ್ವವಿದೆ) ಇತ್ಯಾದಿ ಅಬಾಧಿತವಾದ ಅನುಭವವಿದೆ. 'ಇಲ್ಲಿ ಈ ವಸ್ತುವಿದೆ' ಎನ್ನುವ ಅನುಭವವು (ಇಹ ಮತ್ತು ಇದಂ ಎನ್ನುವ ಜ್ಞಾನವು) ಬೇರೆಯಾದ ಒಂದು ಸಂಬಂಧವಿಲ್ಲದೆ ಕೂಡಲಾರದು. ಅಭಿನ್ನವಾದ ವಸ್ತುಗಳಲ್ಲಿ ಸಂಯೋಗ ಸಂಬಂಧವಿರುವುದು. ಇಂಥಹ ಸಂಯೋಗವು ದ್ರವ್ಯಗಳಲ್ಲಿ ಮಾತ್ರ ಇರುತ್ತದೆ. 'ಈ ಕುಂಡದಲ್ಲಿ ಬದರಗಳು ಇವೆ' ಎಂಬ ಅನುಭವವು ಕುಂಡ-ಬದರಗಳ ಸಂಯೋಗಪೂರ್ವಕವಾಗಿಯೇ ಕಂಡುಬರುವುದು. ಆದರೆ ಕುಂಡ-ಬದರಗಳಿಗಿರುವ ಭೇದದ ಕಾರಣ ಈ ಸಂಬಂಧವು ಸಂಯೋಗದಿಂದ ಭಿನ್ನವಾಗಿದ್ದು ಸಮವಾಯವೆನಿಸುತ್ತದೆ. ಈ ಸಮವಾಯವು ಗುಣಾದಿಗಳಲ್ಲಿಯೂ ಇರುತ್ತದೆ. ಆದ್ದರಿಂದ ಹೀಗೆ ಪ್ರಮಾಣಸಿದ್ಧವಾದ ಸಮವಾಯವನ್ನು ಅಂಗೀಕರಿಸುವ ವೈಶೇಷಿಕಾದಿಗಳು ಅಯುಕ್ತಭಾಷಿಗಳು ಎನ್ನುವುದು ಹೇಗೆ ಎಂದು ಆಕ್ಷೇಪಿಸಿದರೆ –

ಭಿನ್ನತ್ವಸಾಮ್ಯತಸ್ತಸ್ಯ ತಾಭ್ಯಾಂ ಯೋಗೋ ಭವೇದ್ಧ್ರುವಮ್ ।।೯೬।।

ಭಿನ್ನತ್ವ ಸಾಮ್ಯದಿಂದಲೂ, ಇಹ ಪ್ರತ್ಯಯ ಸಾಮ್ಯದಿಂದಲೂ ಸಮವಾಯಕ್ಕೆ ಅವಯವ-ಅವಯವ್ಯಾದಿಗಳ ಸಂಬಂಧವು ನಿಶ್ಚಯವಾಗಿ ಇರಲೇಬೇಕಾಗುವುದು.

ಇಲ್ಲಿನ ಅಭಿಪ್ರಾಯವು ಹೀಗಿದೆ – 'ಇಹ ತಂತುಷು ಪಟಃ' ಇತ್ಯಾದಿ ಅನುಭವವು, ಭಿನ್ನವಾದ ತಂತು-ಪಟಗಳ ಸಂಬಂಧ ಜ್ಞಾನಪೂರ್ವಕವಾದುದು ಮತ್ತು 'ಇಹ ತಂತು ಪಟಯೋಃ ಸಮವಾಯಃ' ಎಂಬ ಅಬಾಧಿತವಾದ ಇಹ ಪ್ರತ್ಯಯವೂ ಇರುವುದು. ಆದ್ದರಿಂದ ತಂತುಪಟಗಳೊಡನೆ ಇರುವ ಸಂಯೋಗಕ್ಕೂ ಆ ತಂತುಪಟಗಳೆರಡರಿಂದ ಸಮವಾಯ ಸಂಬಂಧವನ್ನು ಅಂಗೀಕರಿಸಬೇಕಾಗುತ್ತದೆ.

ಹಾಗೆ ಅಂಗೀಕರಿಸುವುದಿಲ್ಲ ಎಂದು ಹೇಳುವ ವೈಶೇಷಿಕರ ಮತವು ಅಯುಕ್ತವು.

ಇನ್ನು ಸಮವಾಯದಲ್ಲಿಯೂ ಇಹಂ ಇದಂ ಎಂಬ ಜ್ಞಾನವು ಸಮವಾಯದ ಅಧೀನವೇ ಆಗಿರುತ್ತದೆ. ಅಪಸಿದ್ಧಾಂತವಾಗಲೀ ಅನವಸ್ಥೆಯಾಗಲೀ ಸಂಭವಿಸುವುದಿಲ್ಲ. ಏಕೆಂದರೆ ಸಮವಾಯವು ಸ್ವನಿರ್ವಾಹಕವಾಗಿದೆ. ಹೀಗೆ ಆಶಂಕಿಸಿದರೆ –

ಸ ಸ್ವನಿರ್ವಾಹಕಶ್ಚೇತ್ಸ್ಯಾದ್ದ್ರವ್ಯಮೇವ ತಥಾ ನ ಕಿಮ್ ।

ಆ ಅವಯವ–ಅವಯವಿ ಸಮವಾಯವು ಸ್ವನಿರ್ವಾಹಕವೆನ್ನುವುದಾದರೆ, ಆಗ ದ್ರವ್ಯವೇ ಏಕೆ ಸ್ವನಿರ್ವಾಹಕವಾಗಬಾರದು?

ಇಲ್ಲಿನ ಅಭಿಪ್ರಾಯವಿದು. ಸಮವಾಯವು ಸಂಬಂಧರೂಪವಾದುದರಿಂದ ಸ್ವನಿರ್ವಾಹಕವು. ಆದರೆ ದ್ರವ್ಯವು ಸ್ವನಿರ್ವಾಹಕವಲ್ಲ ಎನ್ನುವುದು ಸರಿಯಲ್ಲ. ಏಕೆಂದರೆ ಸಮವಾಯ ಅಥವಾ ಸ್ವನಿರ್ವಾಹಕತ್ವವು ಸಿದ್ಧಿಸದಿದ್ದರೆ ಸಂಯೋಗರೂಪ ಸಂಬಂಧವೂ ಸಿದ್ಧಿಸುವುದಿಲ್ಲ. ಸಂಯೋಗಕ್ಕೂ ಸ್ವನಿರ್ವಾಹಕತ್ವವು ಬರುವುದು. ಸಂಯೋಗವು ಅನಿತ್ಯವಾದುದರಿಂದ ಸ್ವನಿರ್ವಾಹಕವಾಗಲಾರದು ಎಂದು ಹೇಳಕೂಡದು. ಏಕೆಂದರೆ ಸಮವಾಯದ ನಿತ್ಯತೆಯು ಸಿದ್ಧವಾಗಿಲ್ಲ.

ಹೀಗೆ ದ್ರವ್ಯದಿಂದ ಗುಣಾದಿಗಳಿಗೆ ಅತ್ಯಂತ ಭೇದವಿದ್ದರೂ ಅವುಗಳಿಗೆ ಸಂಬಂಧವು ಸಮವಾಯರೂಪವಾದುದು ಅಥವಾ ಬೇರೆ ರೀತಿಯದು ಎನ್ನುವುದು ಸಿದ್ಧಿಸಲಿಲ್ಲ. ಸಮವಾಯದಂತೆ ದ್ರವ್ಯಕ್ಕೇ ಸ್ವನಿರ್ವಾಹತಕತ್ವವು ಸಂಭವಿಸುವುದು ಮತ್ತು ಕಲ್ಪನಾಲಾಘವವೂ ಬರುವುದೆಂದು ಪ್ರತಿಪಾದಿಸಿದರು. ಈಗ ಗುಣಾದಿಗಳಿಗೆ ದ್ರವ್ಯದಿಂದ ಅತ್ಯಂತ ಭೇದವಿಲ್ಲದಿರುವುದರಿಂದ ಸಮವಾಯವು ಸಿದ್ಧಿಸುವುದಿಲ್ಲ ಎನ್ನುವ ಅಭಿಪ್ರಾಯದಿಂದ, ಗುಣದ್ರವ್ಯಗಳ ಭೇದದ ವಿಷಯದಲ್ಲಿ ಪರರು ಹೇಳಿದ ಹೇತುಗಳನ್ನು ನಿರಾಕರಿಸಲು 'ವಿಶೇಷಃ' ಇತ್ಯಾದಿ ವಚನಗಳಿಂದ ಉಪೋದ್ಘಾತವನ್ನು ಹೇಳುತ್ತಾರೆ –

ವಿಶೇಷಸ್ತದ್ಗತ್ವಾದಿರ್ಯದ್ಯಭಿನ್ನೇಽವಸೀಯತೇ ।।೯೭।।

ಗುಣಕ್ರಿಯಾದಿರೂಪಸ್ಯ ನಿಷೇಧಃ ಕೇನ ಹೇತುನಾ ।

ಒಂದು ವೇಳೆ ಅವಯವ ಅವಯವ್ಯಾದಿಗಳಲ್ಲಿರುವ ವಿಶೇಷವು ಅಭಿನ್ನವಾದ ಸಮವಾಯದಲ್ಲಿ ಅಂಗೀಕರಿಸಲ್ಪಟ್ಟರೆ, ಆಗ ಗುಣಕ್ರಿಯಾದಿರೂಪ ವಿಶೇಷಕ್ಕೆ ನಿಷೇಧವು ಯಾವ ಕಾರಣದಿಂದ(ಯುಕ್ತಿಯಿಂದ) ಆಗುವುದು? ಅಂದರೆ ಯಾವ ಕಾರಣದಿಂದಲೂ ಆಗಲಾರದು ಎಂದು ತಾತ್ಪರ್ಯ.

ಇದರಿಂದ ಏನು ಹೇಳಿದಂತಾಯಿತು ಎಂದು ಕೇಳಿದರೆ, ಅದಕ್ಕೆ

ಪರಿಹಾರವನ್ನು 'ದ್ರವ್ಯಮೇವ' ಇತ್ಯಾದಿ ವಚನದಿಂದ ಹೇಳುತ್ತಾರೆ –

ದ್ರವ್ಯಮೇವ ತತೋಽನಂತವಿಶೇಷಾತ್ಮತಯಾ ಸದಾ ॥೯೮॥

ನಾನಾವ್ಯವಹೃತೇರ್ಹೇತುರನಂತತ್ವಂ ವಿಶೇಷತಃ ।

ಸಮವಾಯದಂತೆ ಗುಣಾದಿಗಳು ದ್ರವ್ಯದ ವಿಶೇಷವಾದುದರಿಂದ, ದ್ರವ್ಯವೇ ಎಲ್ಲ ಕಾಲದಲ್ಲಿಯೂ ಎಷ್ಟೆಷ್ಟು ವ್ಯವಹಾರಗಳಿರುತ್ತವೋ ಅಷ್ಟಷ್ಟು ವಿಶೇಷಗಳನ್ನು ಹೊಂದಿದ್ದು, ವ್ಯಪದೇಶ ಮುಂತಾದ ನಾನಾ ವ್ಯವಹಾರಗಳಿಗೆ ಕಾರಣವಾಗುತ್ತದೆ.

ಇನ್ನು ಅನಂತವಿಶೇಷಾತ್ಮಕವು ಒಂದೇ ದ್ರವ್ಯವು ಎಂಬುದು 'ನನ್ನ ತಾಯಿಯು ಬಂಜೆ' 'ಕೃತಕವಾದುದು ನಿತ್ಯವು' ಎಂಬಂತೆ ಸ್ವವ್ಯಾಹತವಾಗುವುದು ಎಂದು ಹೇಳಿದರೆ, ಈ ಆಶಂಕೆಯನ್ನು 'ಅನಂತತ್ವಂ ವಿಶೇಷತಃ' ಎಂಬ ವಚನದಿಂದ ಪರಿಹರಿಸುತ್ತಾರೆ. ಅನಂತತ್ವವೆಂದರೆ ಸಂಖ್ಯಾವಿಶೇಷವು, ಏಕತ್ವವೆಂದರೆ ಅಭೇದವು. ಎಲ್ಲಿ ಅನೇಕತ್ವವೋ ಅಲ್ಲಿ ನಿಯಮೇನ ಭೇದವು ಎನ್ನುವ ವ್ಯಾಪ್ತಿ ಇರುವುದಿಲ್ಲ. ಭೇದದ ಪ್ರತಿನಿಧಿಯಾದ ವಿಶೇಷದಿಂದಲೇ ಅನೇಕತ್ವವು ಕೂಡುವುದು. ಈಶ್ವರನೆಂಬ ದ್ರವ್ಯದಲ್ಲಿರುವ ಈಶ್ವರಾಭಿನ್ನ ಜ್ಞಾನಾದಿ ಧರ್ಮಗಳಿಗೆ ಅನಂತತ್ವವು, ಈಶ್ವರನಿಂದ ಭಿನ್ನವಾದ ದ್ರವ್ಯಗಳಲ್ಲಿರುವ ವಿಶೇಷಗಳಿಗೆ ಅನೇಕತ್ವವು ಹೀಗೆ ತಿಳಿಯತಕ್ಕದ್ದು.

ಹಾಗಾದರೆ ಈ ವಿಶೇಷವು ದ್ರವ್ಯದ ಸ್ವರೂಪವೇ ಆದ ಪಕ್ಷದಲ್ಲಿ ದ್ರವ್ಯದ ವಿಶೇಷ ಎನ್ನುವುದು ಹೇಗೆ ಕೂಡುವುದು ಹೀಗೆ ಶಂಕಿಸಬಾರದು. ಏಕೆಂದರೆ ವಿಶೇಷಕ್ಕೂ ದ್ರವ್ಯದ ಸ್ವರೂಪಕ್ಕೂ ಭೇದವಿಲ್ಲದಿದ್ದರೂ ಭೇದದ ಪ್ರತಿನಿಧಿಯಾದ ವಿಶೇಷದಿಂದಲೇ ದ್ರವ್ಯದ ವಿಶೇಷವೆಂಬ ಭೇದದ ವ್ಯವಹಾರವು ಕೂಡುವುದು. ಹಾಗಾದರೆ ಆ ವಿಶೇಷಕ್ಕೆ ಕೂಡ ವಿಶೇಷತ್ವ ಧರ್ಮದ ಸಿದ್ಧಿಗಾಗಿ ಮತ್ತೊಂದು ವಿಶೇಷವನ್ನು ಒಪ್ಪಬೇಕಾಗುತ್ತದೆ. ಇದಕ್ಕೆ ಕೊನೆಯಿಲ್ಲ. ಆದ್ದರಿಂದ ಅನವಸ್ಥೆಯು. ಹೀಗೆ ಆಶಂಕಿಸಿದರೆ, ಅದನ್ನು 'ವಿಶೇಷಶ್ಚ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ವಿಶೇಷಶ್ಚ ವಿಶೇಷೀ ಸ ಸ್ವೇನೈವ ಸಮವಾಯವತ್ ॥೯೯॥

ಸಮವಾಯದಂತೆ ದ್ರವ್ಯದಲ್ಲಿರುವ ಆ ವಿಶೇಷವೂ ತನ್ನಿಂದಲೇ ವಿಶೇಷವುಳ್ಳದ್ದು. ಅದಕ್ಕೆ ವಿಶೇಷಾಂತರದ ಅಪೇಕ್ಷೆಯಿಲ್ಲ.

ಈ ವಿಷಯದಲ್ಲಿ ಪೂರ್ವಪಕ್ಷವು ಹೀಗಿದೆ – ಗುಣಗುಣಿ ಮುಂತದವುಗಳಲ್ಲಿ ಭೇದವನ್ನು ಒಪ್ಪಿರುವ ನಾವು (ವೈಶೇಷಿಕರು) 'ಇಲ್ಲಿ ಇದು' ಎಂಬ ವ್ಯವಹಾರದ ನಿರ್ವಹಣೆಗಾಗಿ ಸಮವಾಯವನ್ನು ಒಪ್ಪಿರುತ್ತೇವೆ. ಆ ಸಮವಾಯದ ಅನವಸ್ಥೆ ಪರಿಹಾರಕ್ಕಾಗಿ ಅದಕ್ಕೆ ಸ್ವನಿರ್ವಾಹಕತ್ವವನ್ನು ಅಂಗೀಕರಿಸುತ್ತೇವೆ. ಆದರೆ ಗುಣ

ಗುಣಿಗಳಿಗೆ ಅಭೇದವನ್ನು ಹೇಳುವ ನೀವು (ಸಿದ್ಧಾಂತಿಗಳು) ಭೇದ ವ್ಯವಹಾರಕ್ಕಾಗಿ ವಿಶೇಷವನ್ನು ಅಂಗೀಕರಿಸಿದ್ದೀರಿ. ಅದಕ್ಕೆ ಅನವಸ್ಥೆಯನ್ನು ತಪ್ಪಿಸಲು ಸ್ವನಿರ್ವಾಹಕತ್ವ ವನ್ನು ನೀವೂ ಸಹ ಅಂಗೀಕರಿಸಿದ್ದೀರಿ. ಇವೆರಡೂ ಪಕ್ಷಗಳೂ ಸಮಾನವೇ ಆಗಿರುವಾಗ, ನೀವು ಅಭೇದದ ಪಕ್ಷದಲ್ಲಿ ಹೇಳುವ ಆ ವಿಶೇಷ ಯಾವುದು? ಗುಣಗುಣ್ಯಾದಿ ಭೇದದ ಬಗ್ಗೆ ಪ್ರಮಾಣವಿಲ್ಲದಿರುವುದೇ ವಿಶೇಷವೆಂಬುದು ಸರಿಯಲ್ಲ. ಏಕೆಂದರೆ ಅಭೇದದ ಬಗ್ಗೆಯೂ ಪ್ರಮಾಣವಿಲ್ಲ. ಹೀಗೆ ಆಶಂಕಿಸಿದರೆ ಅದನ್ನು 'ಕಲ್ಪನಾ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಕಲ್ಪನಾಗುರುತಾದೋಷಾತ್ಪದಾರ್ಥಾಂತರತಾ ನ ಹಿ ।

ಕಲ್ಪಯಿತ್ವಾ ಷಟ್ಪದಾರ್ಥಾನ್ ಸಾಭಾವಾನಪಿ ಕೇವಲಮ್ ॥೧೦೦॥

ಏಕಸ್ಮಿನ್ ಸ ವಿಶೇಷಶ್ಚೇತ್ ಕಿಂ ಪೂರ್ವಂ ತಸ್ಯ ವಿಸ್ಮೃತಿಃ ।

ಕಲ್ಪನಾಗೌರವ ದೋಷವು ಬರುವುದರಿಂದ, ಗುಣ–ಗುಣಿ ಮುಂತಾದವುಗಳಿಗೆ ಪದಾರ್ಥಾಂತರತ್ವವು ಅಂದರೆ ಭೇದವು ಇರುವುದಿಲ್ಲ. ಹಾಗಾದರೆ ಕಲ್ಪನಾಗೌರವದ ಪರಿಹಾರಕ್ಕಾಗಿ, ಅಭಾವವೂ ಸೇರಿದಂತೆ ಕೇವಲ ಆರು ಪದಾರ್ಥಗಳನ್ನೇ ಕಲ್ಪನೆ ಮಾಡಿ, ಒಂದೇ ಸಮವಾಯದಲ್ಲಿಯೇ ವಿಚಿತ್ರ ವ್ಯವಹಾರ ಕಾರಣವಾದ ವಿಶೇಷವನ್ನು ಅಂಗೀಕರಿಸುತ್ತೇವೆ ಎಂದರೆ, ದ್ರವ್ಯದಲ್ಲಿ ಆ ವಿಶೇಷವನ್ನು ಅಂಗೀಕರಿಸಲು ವಿಸ್ಮರಣವೇಕೆ?

ಇನ್ನು ಗುಣ–ಗುಣಿ ಮುಂತಾದವುಗಳಲ್ಲಿ ಅಭೇದಪಕ್ಷವೂ ಅಂಗೀಕರಿಸತಕ್ಕದ್ದಲ್ಲ ಏಕೆಂದರೆ ವಿಶೇಷದ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಆಶಂಕಿಸಿದರೆ –

ಯೇನ ಪ್ರತ್ಯಕ್ಷಸಿದ್ಧೇನ ವ್ಯವಹಾರೋಽಖಿಲೋ ಭವೇತ್ ॥೧೦೧॥

ಭಾವಾಭಾವವಿಭಾಗೇನ ಯಂ ವಿನಾ ನ ಕಥಂಚನ ।

ಏತಾದೃಶೇ ವಿಶೇಷೇಽಸ್ಮಿನ್ ಕೋ ದ್ವೇಷೋ ವಾದಿನಾಂ ಭವೇತ್ ॥೧೦೨॥

ಪ್ರತ್ಯಕ್ಷಸಿದ್ಧವಾದ ಯಾವುದರಿಂದ ವಿಧಿನಿಷೇಧವೆಂಬ ಎರಡು ವಿಧದ ಎಲ್ಲ ವ್ಯವಹಾರವೂ ಸಂಭವಿಸುವುದೋ ಹಾಗೂ ಯಾವುದು ಇಲ್ಲದಿದ್ದರೆ ಯಾವುದೇ ವ್ಯವಹಾರವು ಸಂಭವಿಸಲಾರದೋ, ಅಂಥಹ ಸರ್ವವ್ಯವಹಾರ ನಿರ್ವಾಹಕವಾದ ವಿಶೇಷವನ್ನು ವಾದಿಗಳು ಯಾವ ದ್ವೇಷದ ಕಾರಣದಿಂದ ಅಂಗೀಕರಿಸುವುದಿಲ್ಲ?

ಇನ್ನು ಅಭೇದದ ವಿಷಯದಲ್ಲಿಯೂ ಪ್ರಮಾಣವಿಲ್ಲವೆಂದು ಹೇಳುವವರಿಗೆ 'ಅಭೇದೇನ' ಇತ್ಯಾದಿ ವಚನದಿಂದ ಉತ್ತರವನ್ನು ನೀಡುತ್ತಾರೆ –

ಅಭೇದೇನ ಪ್ರತೀತಿಶ್ಚ ಕಾರ್ಯಕಾರಣಪೂರ್ವಕೇ ।

ಅಭಾವಾಂತೇ ಪದಾರ್ಥೇಽಸ್ಮಿನ್ ಸವಿಶೇಷಾವಸೀಯತೇ ।।೧೦೩।।

ಇಲ್ಲಿ 'ಕಾರ್ಯಕಾರಣ' ಶಬ್ದದಿಂದ ಅವಯವ-ಅವಯವಿಗಳೂ, 'ಪೂರ್ವ' ಶಬ್ದದಿಂದ ಗುಣ-ಗುಣಿಗಳೂ, 'ಅಭಾವ' ಶಬ್ದದಿಂದ ಅನ್ಯೋನ್ಯಾಭಾವವೂ ಗ್ರಹಿಸಲ್ಪಡುತ್ತವೆ. ಈ ವಾಕ್ಯದ ಅಭಿಪ್ರಾಯ ಹೀಗಿದೆ. ಅವಯವ-ಅವಯವಿ, ಗುಣ- ಗುಣಿ ಇತ್ಯಾದಿ ಅನ್ಯೋನ್ಯಾಭಾವವೇ ಅಂತ್ಯವಾಗುಳ್ಳ ಎಲ್ಲ ಪದಾರ್ಥಗಳ ಬಗ್ಗೆ ಅಭೇದ ಜ್ಞಾನವಾದರೂ ವಿಶೇಷದಿಂದ ಕೂಡಿರುವುದೆಂದು ಸಾಕ್ಷಿಯಿಂದ ನಿರ್ಣಯಿಸಲ್ಪಡುತ್ತದೆ.

ಈ ಹಿಂದೆ 'ವಿಶೇಷಃ ತದ್ಗತತ್ವಾದಿಃ ಯದ್ಯಭಿನ್ನೇಽವಸೀಯತೇ' ಎಂಬಲ್ಲಿ ಸಮವಾಯದಲ್ಲಿ ವಿಶೇಷವನ್ನು ಅಂಗೀಕರಿಸಬೇಕೆಂದು ಹೇಳಿದ್ದು ಅಷ್ಟೇ ಅಲ್ಲ, ಎಲ್ಲ ಪದಾರ್ಥಗಳಲ್ಲಿಯೂ ಆ ವಿಶೇಷವನ್ನು ಅಂಗೀಕರಿಸತಕ್ಕದ್ದು ಎಂದು 'ಸಾಮಾನ್ಯಾದಿ ಪದಾರ್ಥೇಷು' ಇತ್ಯಾದಿ ವಚನದಿಂದ ಪ್ರತಿಪಾದಿಸುತ್ತಾರೆ –

ಸಾಮಾನ್ಯಾದಿಪದಾರ್ಥೇಷು ತನ್ನಿಷ್ಠತ್ವಾದಯೋಽಖಿಲಾಃ ।

ಕಥಂ ಧರ್ಮಾ ನಿವಾರ್ಯಂತೇ ವಸ್ತ್ವೈಕ್ಯೇಽಪಿ ಹಿ ವಾದಿಭಿಃ ।।೧೦೪।।

ಕಾರ್ಯಸ್ಯ ತತ್ತನ್ನಿಷ್ಠತ್ವಂ ಗುಣಾದೇರ್ವ್ಯಾಪಿತಾದಿಕಃ ।

ಕಥಂ ವಿಶೇಷೋ ನೈವಾಸ್ತಿ ಸ ಚ ಧರ್ಮೋಽಪರೋ ಯದಿ ।।೧೦೫।।

ಷಟ್ ಪದಾರ್ಥಾತಿರೇಕಃ ಸ್ಯಾತ್ .... ।

ಸಾಮಾನ್ಯ ಅಥವಾ ಜಾತಿ ಮುಂತಾದ ಪದಾರ್ಥಗಳಲ್ಲಿ ಆಯಾಯ ವಸ್ತುಗತತ್ವ ಮುಂತಾದ ಎಲ್ಲ ಧರ್ಮಗಳೂ ವಸ್ತುವಿನಿಂದ (ಧರ್ಮಿಯಿಂದ) ಅಭಿನ್ನವಾಗಿಯೇ ಇರುತ್ತವೆ. ಇದನ್ನು ವಾದಿಗಳು ಹೇಗೆ ತಾನೆ ನಿರಾಕರಿಸಲು ಸಾಧ್ಯ? ಅವಯವಿಗೆ ತನ್ನ ಅವಯವಗತತ್ವವು ಹಾಗೂ ಗುಣಾದಿಗಳಿಗೆ ತಮ್ಮ ಆಶ್ರಯವನ್ನು ವ್ಯಾಪಿಸಿರುವುದು ಇವೇ ಮೊದಲಾದ ವಿಶೇಷವು ಇರುವುದಿಲ್ಲವೆಂಬುದು ಹೇಗೆ ಯುಕ್ತವಾಗುತ್ತದೆ? ಆಯಾಯ ವಸ್ತುನಿಷ್ಠತ್ವ ಮುಂತಾದುದು ತನ್ನ ಆಶ್ರಯದಿಂದ ಭಿನ್ನವೆಂದು ಅಂಗೀಕರಿಸುವುದಾದರೆ, ಆ ಧರ್ಮಗಳಿಗೆ ಆರು ಪದಾರ್ಥಗಳಿಂದ ಅತಿರೇಕವು (ಭೇದವು) ಬರಬೇಕಾಗುತ್ತದೆ. ಆದ್ದರಿಂದ ಆರೇ ಪದಾರ್ಥಗಳು ಎಂಬ ನಿಯಮಕ್ಕೆ ಭಂಗ ಬರುತ್ತದೆ.

ಹಾಗಾದರೆ ಧರ್ಮಗಳು ಧರ್ಮಿಯಿಂದ ಭಿನ್ನಗಳೇ ಆಗಿವೆ. ಹಿಂದೆ ಹೇಳಿದ ಷಟ್ ಪದಾರ್ಥನಿಯಮವೆಂಬ ದೋಷವೂ ಬರುವುದಿಲ್ಲ. ಏಕೆಂದರೆ ನೈಯಾಯಿಕರೇ ಮುಂತಾದವರು ಆರೇ ಪದಾರ್ಥಗಳೆಂಬ ನಿಯಮವನ್ನು ಅಂಗೀಕರಿಸಿಲ್ಲ. ತದ್ಗತತ್ವಾದಿ ಧರ್ಮವನ್ನು ಬೇರೆಯೇ ಪದಾರ್ಥವಾಗಿ ಒಪ್ಪಿರುತ್ತಾರೆ.

ಆದ್ದರಿಂದ ಭಿನ್ನವಾದ ಧರ್ಮದ ಸಂಸರ್ಗದ ಮೂಲಕ 'ತಂತುಷುಃ ಪಟಃ' 'ಶುಕ್ಲಃ ಪಟಃ' ಇತ್ಯಾದಿ ಸಕಲ ವ್ಯವಹಾರವೂ ಸಿದ್ಧಿಸುವುದು. ಆದಪ್ರಯುಕ್ತ ವಿಶೇಷದ ಸಿದ್ಧಿಯು ಆಗಲಾರದು ಎಂದು ಆಕ್ಷೇಪ ಬಂದರೆ ಅದನ್ನು 'ಪದಾರ್ಥಾನಿಯಮೇಪಿ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

...............................ಪದಾರ್ಥಾನಿಯಮೇಽಪಿ ಹಿ ।

ಧರ್ಮಸ್ಯ ಧರ್ಮಸಂತಾನಾದನವಸ್ಥಾಖಿನಿರ್ಭವೇತ್ ॥೧೦೬॥

ಪದಾರ್ಥಗಳು ಆರೇ ಎಂಬ ನಿಯಮವು ಇಲ್ಲವೆಂಬ ಪಕ್ಷದಲ್ಲಿಯೂ ಧರ್ಮಕ್ಕೆ ಧರ್ಮಸಮುದಾಯದ ದೆಶೆಯಿಂದ ಅನವಸ್ಥೆಯು ಆಶ್ರಯವಾಗುವುದು. ಆದ್ದರಿಂದ ಧರ್ಮ–ಧರ್ಮಗಳಿಗೆ ಆಶ್ರಯದ ಅಭೇದವನ್ನೂ, ವ್ಯವಹಾರ ನಿರ್ವಹಣೆಗಾಗಿ ವಿಶೇಷವನ್ನೂ ಅಂಗೀಕರಿಸಬೇಕು.

ಹಾಗಾದರೆ ದ್ರವ್ಯಾದಿ ಧರ್ಮಗಳಾದ ಅಸ್ತಿತ್ವಾದಿಗಳಲ್ಲಿಯೂ ಅಸ್ತಿತ್ವ ಮುಂತಾದುದು ಉಂಟು. ಅದು ಆಶ್ರಯದಿಂದ ಭಿನ್ನವೇ ಆಗಿರುತ್ತದೆ. ಆದರೂ ಅದು ಅನವಸ್ಥೆಗೆ ಕಾರಣವಾಗುವುದಿಲ್ಲ. ಅದು ಉತ್ಪತ್ತಿ ಜ್ಞಪ್ತಿಗಳಿಗೆ ಪ್ರತಿಬಂಧಕವಾಗುವುದಿಲ್ಲವಾದ್ದರಿಂದ ದೋಷವಾಗುವುದಿಲ್ಲ. ಆಶ್ರಯದಿಂದ ಧರ್ಮವು ಭಿನ್ನವಾದ ಕಾರಣದಿಂದ ವ್ಯವಹಾರವು ಸಂಭವಿಸುವುದರಿಂದ ವಿಶೇಷವನ್ನು ಏಕೆ ಒಪ್ಪಬೇಕು ಎಂದು ಆಕ್ಷೇಪಿಸಿದರೆ –

ಸಾಮಾನ್ಯಸ್ಯಾಪಿ ಸಾಮಾನ್ಯಂ ಗುಣಸ್ಯಾಪಿ ಗುಣೋ ಹ್ಯತಃ ।

ನಾಂಗೀಕೃತಃ ಸ ಚ ಯದಿ ನಾನವಸ್ಥಾ ಕ್ವಚಿದ್ಭವೇತ್ ॥೧೦೭॥

ಗೋತ್ವಾದಿ ಜಾತಿಗೂ ಸತ್ತಾ ಮುಂತಾದ ಜಾತಿಯನ್ನು ಹಾಗೂ ರೂಪ ಮುಂತಾದ ಗುಣಗಳಿಗೂ ಸಂಖ್ಯಾ ಪೃಥಕ್ತ್ವ ಮುಂತಾದ ಗುಣಗಳನ್ನು ಅನವಸ್ಥೆಯ ಭಯದಿಂದ ಅಂಗೀಕರಿಸಿರುವುದಿಲ್ಲ.

ಇನ್ನು ಜಾತಿಗೂ ಜಾತಿಯಿದೆ, ಗುಣಕ್ಕೂ ಗುಣವಿದೆ. ಅಬಾಧಿತ ಪ್ರತೀತಿಯಿಂದ ಇದು ಸಿದ್ಧವಾದುದರಿಂದ ಉತ್ಪತ್ತಿ ಜ್ಞಪ್ತಿಗಳಿಗೆ ಪ್ರತಿಬಂಧಕವಾಗದು. ಆದಕಾರಣ ಅನವಸ್ಥೆಯು ದೋಷವಾಗದು ಎಂದು ಹೇಳುತ್ತೇವೆ ಎಂದರೆ, ಹಾಗಾದರೆ ಜಾತಿಗೆ ಜಾತಿ, ಗುಣಕ್ಕೆ ಗುಣ ಮುಂತಾದವನ್ನು ಅಂಗೀಕರಿಸಿದರೆ ಎಲ್ಲಿಯೂ ಅನವಸ್ಥೆಯು ಉಂಟಾಗದಿರಲಿ ಎಂಬುದೇ ಉತ್ತರವಾಗುವುದು.

ಇನ್ನು ಧರ್ಮ–ಧರ್ಮಿಗಳೆರಡರಲ್ಲಿ ಅಭೇದವನ್ನೂ ವಿಶೇಷವನ್ನೂ ಒಪ್ಪದವನು ಗುಣ ಹಾಗೂ ಜಾತಿಗಳಿಗೆ ಅವುಗಳನ್ನು ವಿಷಯೀಕರಿಸುವ ಪ್ರತೀತಿಯನ್ನೇ ಅಪಲಾಪ ಮಾಡುವ ಹಾಗೂ ಬಾಧಕವಿಲ್ಲದೆ ಭ್ರಾಂತಿಯನ್ನು

ಒಪ್ಪಬೇಕಾದ ಪ್ರಸಂಗ ಬರುವುದು. ಆದರೆ ಧರ್ಮ-ಧರ್ಮಿಗಳಲ್ಲಿ ಪರಸ್ಪರ ಅಭೇದವನ್ನೂ ವಿಶೇಷವನ್ನೂ ಒಪ್ಪುವವರಿಗೆ ಈ ದೋಷಗಳೆರಡೂ ಬರುವುದಿಲ್ಲ. ಆದ್ದರಿಂದ ನಮಗೆ ಅಭೇದ ಪಕ್ಷದಲ್ಲಿಯೇ ಆದರವಿದೆ ಎಂಬ ಅಭಿಪ್ರಾಯದಿಂದ 'ಅಸ್ಮತ್ಪಕ್ಷೇ' ಇತ್ಯಾದಿ ವಚನವನ್ನು ಹೇಳುತ್ತಾರೆ –

ಅಸ್ಮತ್ಪಕ್ಷೇ ಗುಣಾದ್ಯಾಶ್ಚ ತದ್ವಂತೋ ಹಿ ವಿಶೇಷತಃ ।

ಅನನ್ಯತ್ವಾನ್ನಾನವಸ್ಥಾ ಭೇದೋ ನಾಶೇ ಭವೇತ್ತಥಾ ॥೧೦೮॥

ಧರ್ಮ-ಧರ್ಮಿಗಳಲ್ಲಿ ಅಭೇದವಿದ್ದರೂ ಭೇದಕಾರ್ಯ ನಿರ್ವಾಹಕವಾದ ವಿಶೇಷವನ್ನು ಒಪ್ಪಿರುವ ನಮ್ಮ ಪಕ್ಷದಲ್ಲಿ ಗುಣದಲ್ಲಿ ಗುಣ ಹಾಗೂ ಜಾತಿಯಲ್ಲಿ ಜಾತಿ ಮುಂತಾದ ವ್ಯವಹಾರವು ಕೂಡುವುದು. ಧರ್ಮ-ಧರ್ಮಿಗಳಿಗೆ ಅಭೇದವಿರುವುದರಿಂದ ಧರ್ಮಪರಂಪರೆಗೆ ಅನವಸ್ಥೆಯೂ ಉಂಟಾಗುವುದಿಲ್ಲ. ಅವಯವಾದಿಗಳು ಇರುವಾಗಲೇ ಅವಯವಿ ಮುಂತಾದವು ನಾಶವಾದ ಪಕ್ಷದಲ್ಲಿ, ಅವಯವ-ಅವಯವಿಗಳಲ್ಲಿ ಭೇದಾಭೇದವು ಸಂಭವಿಸುವುದು. ಅವಯವ-ಅವಯವಿಗಳು ಕೂಡಿಯೇ ನಾಶವಾದರೆ ಆಗ ಭೇದಾಭೇದವು ಸಂಭವಿಸುವುದಿಲ್ಲ.

ಹಾಗಾದರೆ ಭೇದಾಭೇದಗಳು ಒಂದೆಡೆಯಲ್ಲಿ ಇರುವುದು ವಿರುದ್ಧವಾಗುವುದು. ಆದ್ದರಿಂದ ಅಯಾವದ್ ದ್ರವ್ಯಭಾವಿಯಾದ (ದ್ರವ್ಯ ಇರುವಾಗಲೇ ನಾಶವಾಗುವ), ಅವಯವಿ, ಗುಣ, ಕರ್ಮ, ಸಾಮಾನ್ಯಗಳಿಗೆ ಅವಯವ ಮುಂತಾದವುಗಳಿಂದ ಭೇದಾಭೇದವನ್ನು ಒಪ್ಪುವುದು ಹೇಗೆ? ಎಂದು ಆಕ್ಷೇಪಿಸಿದರೆ –

ವಿಶೇಷಮೇವ ಸಂಶ್ರಿತ್ಯ ವಿಶೇಷೋ ಬಲವಾನ್ ಯತಃ ।

ದೃಷ್ಟಿಪ್ರಮಾಣತಶ್ಚೈವ ವಿರೋಧೋ ದರ್ಶನೇ ಕಥಮ್ ॥೧೦೯॥

ವಿರೋಧೋ ಹ್ಯವಿರೋಧಶ್ಚ ಯತೋ ದರ್ಶನಮಾನಕೌ ।

ತತೋ ದೃಷ್ಟೇ ವಿರೋಧಸ್ತು ಸದ್ಭಿರಾಪಾದ್ಯತೇ ಕಥಮ್ ॥೧೧೦॥

ವಿಶೇಷವು ಭೇದಕಾರ್ಯನಿರ್ವಹಣೆಯಲ್ಲಿ ಬಲಿಷ್ಠವಾದುದರಿಂದ ವಿಶೇಷವನ್ನೇ ಆಶ್ರಯಿಸಿ ಭೇದ-ಅಭೇದಗಳು ಏಕತ್ರ ಸಂಭವಿಸುತ್ತವೆ. ಪ್ರಮಾಣ ಭೂತವಾದ ದೃಷ್ಟಿಗೆ, ಅಂದರೆ ವಿಶೇಷಸಹಿತವಾದ ಪ್ರತ್ಯಕ್ಷಕ್ಕೆ ಭೇದಾಭೇದಗಳು ವಿರುದ್ಧವಲ್ಲ. ಹಾಗಿರುವಾಗ ಭೇದಾಭೇದಗಳು ಏಕತ್ರ ಹಾಗೂ ಏಕಕಾಲದಲ್ಲಿ ತೋರುವುದರಲ್ಲಿ ವಿರೋಧವೆಲ್ಲಿದೆ? ವಿರೋಧ-ಅವಿರೋಧಗಳೆರಡಕ್ಕೂ ಪ್ರತ್ಯಕ್ಷವೇ ಪ್ರಮಾಣವು. ಆದ್ದರಿಂದ ಪ್ರತ್ಯಕ್ಷ ಪ್ರಮಾಣದಿಂದ ತೋರುವ ಭೇದಾಭೇದಗಳ ವಿಷಯದಲ್ಲಿ ಯಾವ ಸಜ್ಜನರು ತಾನೇ ವಿರೋಧವನ್ನು ವ್ಯಕ್ತ ಪಡಿಸಲು ಸಾಧ್ಯ?

ಹಾಗಾದರೆ ಆ ಭೇದಾಭೇದವು ಎಲ್ಲ ದ್ರವ್ಯಗಳಲ್ಲಿಯೂ ಇದೆಯೋ ಅಥವಾ ಕೆಲವೇ ದ್ರವ್ಯಗಳಲ್ಲಿಯೋ? ಎಂಬ ಪ್ರಶ್ನೆ ಬಂದರೆ ಅದನ್ನು 'ಅಭಿನ್ನಃ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ.

ಅಭಿನ್ನೋ ಭಗವಾನ್ಸ್ವೇನ ತದನ್ಯೇನ ವಿಭೇದವಾನ್ ।

ನಿತ್ಯಾ ಧರ್ಮಾಸ್ತದೀಯಾಸ್ತು ಸರ್ವೇಽಸ್ಮಾನ್ನೈವ ಭೇದಿನಃ ॥೧೧೧॥

ಸಾಮಸ್ತ್ಯೋಚ್ಛೇದಿನೋಽನ್ಯತ್ರ ಧರ್ಮಾ ಉಭಯರೂಪಿಣಃ ।

ಭಾವೇ ತ ಏವ ಚೋಚ್ಛೇದಾತ್ತದನ್ಯೇ ಚ ಸಮಸ್ತಶಃ ॥೧೧೨॥

ಭಗವಾನ್ ಶ್ರೀಹರಿಯು ತನ್ನ ಅವಯವ ಗುಣ ಕ್ರಿಯಾದಿಗಳಿಂದ ಅಭಿನ್ನನು. ತನ್ನಿಂದ ಭಿನ್ನವಾದ ಪ್ರಕೃತಿ ಜೀವ ಜಡಾತ್ಮಕ ಪ್ರಪಂಚದಿಂದ ಭೇದವುಳ್ಳವನು. ಇಲ್ಲಿ ಭಗವಾನ್ ಎಂಬ ಶಬ್ದದಿಂದ ಉಪಲಕ್ಷಣದಿಂದ ಚೇತನರನ್ನೂ ತೆಗೆದುಕೊಳ್ಳಬೇಕು. ಇನ್ನು ಶ್ರೀಹರಿಯಲ್ಲಿನ ಧರ್ಮಗಳೆಲ್ಲವೂ ನಿತ್ಯವಾದವುಗಳೇ ಅಂದರೆ ಯಾವದ್ ದ್ರವ್ಯಭಾವಿಗಳಾಗಿವೆ. ಶ್ರೀಹರಿಯಿಂದ ಹಾಗೂ ಚೇತನರಿಂದ ಭಿನ್ನವಾದ ಜಡವಸ್ತುಗಳಲ್ಲಿ ಅಯಾವದ್ ದ್ರವ್ಯಭಾವಿ ಧರ್ಮಗಳಿರುತ್ತವೆ.

ಧರ್ಮಿಯು ಇರುವಾಗಲೇ ಸಮಗ್ರವಾಗಿ ಸಮೂಲವಾಗಿ ಯಾವ ಧರ್ಮಗಳು ನಾಶವನ್ನು ಹೊಂದುತ್ತವೋ ಅವು ಉಭಯರೂಪಾತ್ಮಕ ಅಂದರೆ ಭೇದಾ-ಭೇದಾತ್ಮಕಗಳು ಎನಿಸುತ್ತವೆ. ಹಾಗಾದರೆ ಅವು ಕಾಲಭೇದದಿಂದ ಭೇದಾ-ಭೇದವೆನಿಸುತ್ತವೆ ಎಂದು ಭಾವಿಸಬಾರದು. ಅವು ಧರ್ಮಿಯೊಂದಿಗೆ ಇರುವಾಗಲೇ ಭೇದಾಭೇದಗಳಾಗಿರುತ್ತವೆ. ಏಕೆಂದರೆ ವಿನಾಶ ಹೊಂದಿದುದು ಅಸತ್ಯವಾದುದರಿಂದ ಭೇದ ಚಿಂತನೆಗೆ ಅವಕಾಶವಿಲ್ಲ. ವಿನಾಶದ ಪೂರ್ವದಲ್ಲಿ ಅತ್ಯಂತ ಅಭೇದವೆಂದರೆ, ವಿನಾಶವೇ ಸಂಭವಿಸದು. ಆದ್ದರಿಂದ ಎಲ್ಲ ಅಯಾವದ್ ದ್ರವ್ಯಭಾವಿ ಧರ್ಮಗಳೂ ಧರ್ಮಿಯಿಂದ ಭಿನ್ನವೂ ಅಭಿನ್ನವೂ ಆಗಿರುತ್ತವೆ. ಇದಕ್ಕೆ ಪ್ರತ್ಯಕ್ಷವೇ ಪ್ರಮಾಣ.

ಹಾಗಾದರೆ ಹಿಂದೆ 'ಸರ್ವದಿಕ್ಷ್ವಪಿ ಸಂಯೋಗಾತ್' ಎಂಬುದಾಗಿ ಅಂಶಗಳಿಂದ ಸಂಯೋಗವೆಂದು ಹೇಳಿದುದು ಅಯುಕ್ತವಾದುದು. ಏಕೆಂದರೆ ಅನವಸ್ಥೆಯು ಬರುತ್ತದೆ. ಹೇಗೆಂದರೆ ಘಟದ ಸಂಯೋಗವು ಘಟದ ಅಂಶದೊಡನೆ ಸಂಯೋಗವಾದಾಗಲೇ ಆಗುವುದು. ಆ ಘಟಾಂಶದ ಸಂಯೋಗವೂ ಮತ್ತೊಂದು ಘಟಾಂಶದ ಸಂಯೋಗದಿಂದ ಆಗುವುದು. ಈ ಅಂಶದ ಪರಂಪರೆಗೆ ವಿಶ್ರಾಂತಿಯಿಲ್ಲವೆಂದು ಅಂಗೀಕರಿಸಲಾಗಿದೆ. ಆದ್ದರಿಂದ ಅನವಸ್ಥೆಯು. ಹೀಗೆ ಪೂರ್ವಪಕ್ಷ ಬಂದರೆ ಅದನ್ನು 'ಅಂಶಾಂಶಿನೋಃ' ಎಂಬ ವಚನದಿಂದ ಪರಿಹರಿಸುತ್ತಾರೆ –

ಅಂಶಾಂಶಿನೋರಭೇದೇನ ತ್ವಂಶಸಂಯೋಗ ಏವ ಹಿ ।

ಅಂಶಿನೋ ನಾನವಸ್ಥಾSತೋ ಯದ್ಯಪ್ಯಂಶೇಷ್ವವಿಶ್ರಮಃ ।।೧೧೩।।

ಅಂಶದಿಂದಲೇ ಸಂಯೋಗ ಹಾಗೂ ಅಂಶಗಳಲ್ಲಿ ಅಂಶಪರಂಪರೆಗೆ ವಿಶ್ರಾಂತಿಯೂ ಇಲ್ಲ ಎಂಬುದೇನೋ ನಿಜವೇ. ಆದರೂ ಅಂಶ–ಅಂಶಿಗಳಿಗೆ ಅಭೇದವಿರುವುದರಿಂದ, ಅಂಶಸಂಯೋಗವೇ ಅಂಶಿಸಂಯೋಗವೆನಿಸುವುದು. ಆದಕಾರಣ ಅನವಸ್ಥೆಯಿಲ್ಲ.

ಇದನ್ನೇ 'ಏಕಸ್ಮಿನ್' ಇತ್ಯಾದಿ ವಾಕ್ಯದಿಂದ ವಿವರಿಸುತ್ತಾರೆ –

ಏಕಸ್ಮಿನ್ ಜಾತ ಏವಾನ್ಯಃ ಸಂಯೋಗೋ ಜಾಯತೇ ಯದಿ ।

ಅನವಸ್ಥಾ ತದೈವ ಸ್ಯಾತ್ಸಂಯೋಗೈಕ್ಯೇ ಭವೇತ್ಕ್ವ ಸಾ ।।೧೧೪।।

ಒಂದೊಂದು ಅವಯವ ಸಂಯೋಗವು ಉಂಟಾದಮೇಲೆಯೇ ಇನ್ನೊಂದು ಅವಯವ ಸಂಯೋಗವು ಉಂಟಾಗುವುದೆಂದು ಅಂಗೀಕರಿಸಿದಾಗ ಮಾತ್ರ ಅನವಸ್ಥೆಯು ಬಂದೀತು. ಆದರೆ ಅವಯವದಲ್ಲಿನ ಸಂಯೋಗಕ್ಕಿಂತ ಬೇರೆಯಾದ ಅವಯವಿ ಸಂಯೋಗವು ಇಲ್ಲವೆಂಬ ಪಕ್ಷದಲ್ಲಿ ಆ ಅನವಸ್ಥೆಯು ಎಲ್ಲಿಂದ ಆದೀತು?

ಹೀಗೆ ಛಲದ ರೂಪದಿಂದ ಅನವಸ್ಥಾ ಪ್ರಸಂಗವನ್ನು ನಿರಾಕರಿಸಿ, ಈಗ ಬೇರೆ ಪ್ರಕಾರದಿಂದಲೂ ಧರ್ಮ–ಧರ್ಮಿಗಳ ಅಭೇದದಲ್ಲಿ ಬರುವ ಅನವಸ್ಥೆಯನ್ನು 'ಅಂಶೇ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ. (ಒಂದು ಅರ್ಥದಿಂದ ಪ್ರಯೋಗಿಸಲ್ಪಟ್ಟ ವಾಕ್ಯಕ್ಕೆ ತಮಗೆ ಸಮ್ಮತವಲ್ಲದ ಅರ್ಥವನ್ನು ಆರೋಪಿಸಿ, ಆದನ್ನು ನಿಷೇಧಿಸುವುದು ಛಲದ ಲಕ್ಷಣ.)

ಅಂಶೇ ಸಂಯೋಗದೃಷ್ಟೇಶ್ಚ ದೃಷ್ಟೇ ಕಾ ಸಾSನವಸ್ಥಿತಿಃ ।

ಯದ್ಯಂಶಗೋ ನ ಸಂಯೋಗಃ ಕಾರ್ಯೇಷು ಪ್ರಥಿಮಾ ಕಥಮ್ ।।೧೧೫।।

ಅಂಶಿ ಸಂಯೋಗವು ಅಂಶವೃತ್ತಿ ಎಂಬುದಾಗಿ ಕಂಡಿರುವುದರಿಂದ, ಅನವಸ್ಥಾ ದೋಷವಿಲ್ಲ. ಆಪಾದಕವಾದ ಅರ್ಥವು ದೃಷ್ಟವಾಗಿರುವಾಗ ಅನವಸ್ಥೆಯು ಯಾವುದು? ಅದು ದೂಷಣವಾಗುವುದಿಲ್ಲ ಎಂದು ಭಾವ. ಕಾರಣಗಳ ಸಂಯೋಗವು ಅವುಗಳ ಅಂಶದಲ್ಲಿ ಇಲ್ಲವಾದರೆ, ಆಗ ಅವುಗಳಿಂದ ಉತ್ಪನ್ನವಾದ ಕಾರ್ಯಗಳಲ್ಲಿ ಪರಿಮಾಣದ ಉತ್ಕರ್ಷವು ಆಗಲಾರದು.

ಹಾಗಾದರೆ ಬೇರೆ ಕಡೆಯಲ್ಲಿ ಸಂಯೋಗವು ಹೇಗಾದರೂ ಆಗಿರಲಿ, ಪ್ರಸಕ್ತವಾದ ಪರಮಾಣುವಿನಲ್ಲಿ ಸಂಯೋಗವು ಅಂಶವೃತ್ತಿಯಾಗದಿದ್ದರೆ

ಅತಿಪ್ರಸಂಗವಿಲ್ಲ. ಆದ್ದರಿಂದ ಪರಮಾಣುವಿನ ಕಾರ್ಯವಾದ ದ್ವ್ಯಣುಕದಲ್ಲಿ ಪರಮಾಣುವಿಗಿಂತ ಹೆಚ್ಚಿನ ಪರಿಮಾಣವು ಇರುವದಿಲ್ಲ ಎಂದು ಆಕ್ಷೇಪಿಸಿದರೆ –

ಪರಮಾಣೋರಣೋರ್ನಾಸ್ತಿ ಮಹತ್ತ್ವೇತ್ಯದ್ಭುತಂ ವಚಃ ।

ಅಣೂನಾಂ ಪ್ರಥಿಮಾಪೇಕ್ಷಾಂ ವಿನೈವ ತ್ರ್ಯಣುಕೇಽಪಿ ಸಃ ॥೧೧೬॥

ಪರಮಾಣೋರ್ಮಹತ್ವಂ ಚ ವಿನೇತ್ಯೇತದ್ವಚಃ ಕಥಮ್ ।

ಅಂಶಿನೋಂಽಶೈರಭೇದೋಽಯಮಂಶೇನ ತು ಭಿದಾಭಿದಾ ॥೧೧೭॥

ದ್ವ್ಯಣುಕದಲ್ಲಿ ಪರಮಾಣುವಿಗಿಂತ ಹೆಚ್ಚಿನ ಪರಿಮಾಣದ ಉತ್ಕರ್ಷವಿಲ್ಲವೆಂದು ಹೇಳುವುದು ಅದ್ಭುತವಾದುದು. ಅಂದರೆ ಸ್ವವಚನವಿರುದ್ಧ ಹಾಗೂ ಪ್ರಮಾಣ ವಿರುದ್ಧ ಎಂದರ್ಥ. ಇನ್ನು ದ್ವ್ಯಣುಕಗಳ ಪರಿಮಾಣೋತ್ಕರ್ಷದ ಅಪೇಕ್ಷೆಯಿಲ್ಲದೆ ತ್ರ್ಯಣುಕಾದಿಗಳಲ್ಲಿಯೂ, ಪರಮಾಣುವಿನ ಪರಿಮಾಣೋತ್ಕರ್ಷದ ಅಪೇಕ್ಷೆಯಿಲ್ಲದೆ ದ್ವ್ಯಣುಕಾದಿಗಳಲ್ಲಿಯೂ ಪರಮಾಣೋತ್ಕರ್ಷವು ಉಂಟಾಗುತ್ತದೆ ಎನ್ನುವುದು ಹೇಗೆ ಯುಕ್ತವಾಗುತ್ತದೆ?

ಪಟಾದಿ ಅಂಶಿಗಳಿಗೆ ತನ್ನ ಎಲ್ಲ ಅಂಶಗಳಿಂದ ಅತ್ಯಂತ ಅಭೇದವು ಹಾಗೂ ಒಂದೊಂದು ಅಂಶದಿಂದಾದರೂ ಭೇದಾಭೇದವು ಎಂದು ತಿಳಿಯಬೇಕು. ಇಲ್ಲಿನ ಅಭಿಪ್ರಾಯ ಹೀಗಿದೆ – ತಂತುಗಳಿಂದ ಪಟವು ನಿರ್ಮಾಣವಾದಾಗ, ತಂತುಗಳ ಪರಸ್ಪರ ಸಂಬಂಧವಿಶೇಷದಿಂದ, ತಂತುಗಳಿಂದ ಅಭಿನ್ನವಾದ ಪಟವು ಕಂಡು ಬರುತ್ತದೆ. ಇಂಥಹ ತಂತುಗಳಿರಲು ಪಟದ ಅಭಾವ ಎಂದಿಗೂ ಉಂಟಾಗುವುದಿಲ್ಲ. ಆದ್ದರಿಂದ ಇಂಥಹ ಎಲ್ಲ ತಂತುಗಳಿಗೂ ಪಟಕ್ಕೂ ಅತ್ಯಂತಾಭೇದವೇ. ಈ ರೀತಿಯ ಸಂಬಂಧವಿವಕ್ಷೆಯು ಇಲ್ಲದಿದ್ದಾಗ, ತಂತುಗಳಿಗೂ ಪಟಕ್ಕೂ ಭೇದಾಭೇದವೇ. ತಂತುಗಳಿಗೂ ಪಟಕ್ಕೂ ಭೇದ ಹಾಗೂ ಅಭೇದಗಳೆರಡೂ ಹೇಗೆ ಕೂಡುತ್ತವೆ ಎಂದು ಕೇಳಿದರೆ ವಿಶೇಷ ಎಂಬ ವಸ್ತುವಿನ ಶಕ್ತಿಯಿಂದಲೇ ಎಂದು ಹೇಳುತ್ತೇವೆ.

ಹಾಗಾದರೆ ಸಂಬಂಧವಿಶೇಷವುಳ್ಳ ಎಲ್ಲ ತಂತುಗಳಿಂದಲೂ ಪಟಕ್ಕೆ ಭೇದವನ್ನೇ ಅಂಗೀಕರಿಸಬೇಕು. ಏಕೆಂದರೆ ತಂತುಗಳ ಸಂಬಂಧವಿಶೇಷವು ಉಂಟಾದ ಮೇಲೆ ಪಟವು ಹುಟ್ಟುತ್ತದೆ. ಇನ್ನು ಒಂದೊಂದು ತಂತುವಿನಲ್ಲಿಯೂ ಅದು ಪಟವೆಂಬ ಬುದ್ಧಿಯು ಬಂದಿಲ್ಲವಾದ್ದರಿಂದ, ಒಂದೊಂದು ತಂತುವಿಗೂ ಪಟದಿಂದ ಅಭೇದವನ್ನು ಹೇಳುವುದು ಕೂಡುವುದಿಲ್ಲ ಎಂದು ಆಶಂಕಿಸಿದರೆ –

ಸರ್ವಪ್ರತ್ಯಕ್ಷವಿಷಯಃ ಕಥಮೇವ ಹ್ಯಪೋದ್ಯತೇ ।

ಇವೆಲ್ಲ ವಿಷಯವು ಎಲ್ಲರ ಪ್ರತ್ಯಕ್ಷಕ್ಕೆ ಗೋಚರವಾದುದರಿಂದ ಹೇಗೆ ತಾನೆ

ಅದನ್ನು ಅಲ್ಲಗಳೆಯುವುದು?

ವಿವರಣೆ: ಸಂಬಂಧವಿಶೇಷವುಳ್ಳ ಎಲ್ಲ ತಂತುಗಳಿಗೂ ಪಟಕ್ಕೂ ಅಭೇದವಿದೆ ಎಂಬುದಕ್ಕೆ ಪ್ರತ್ಯಕ್ಷವೇ ಪ್ರಮಾಣ. ತಂತುಗಳಿಗೆ ಸಂಬಂಧವಿಶೇಷವಾದ ಮೇಲೆ ಪಟವು ಹುಟ್ಟುವುದೆಂಬುದು ನಿಜವಾದರೂ, ಅಭೇದರೂಪ ಅರ್ಥದಲ್ಲಿ ಹಾನಿಯಿಲ್ಲ. ಏಕೆಂದರೆ ತಂತುಗಳ ಸಂಬಂಧ ವಿಶೇಷವನ್ನು ಪಟವೆನ್ನುವುದಿಲ್ಲ. ಆದರೆ ಸಂಬಂಧವಿಶೇಷವಾದ ನಂತರ ತಂತುಗಳಿಗೆ ಯಾವ ವಿಶಿಷ್ಟವಾದ ಆಕಾರ ಬರುವುದೋ ಅದೇ ಪಟವು. ಒಂದೊಂದು ತಂತುವನ್ನು ಬಿಟ್ಟರೆ ಸರ್ವ ತಂತುಗಳು ಎಂಬುವುದು ಇರುವುದಿಲ್ಲ. ಆದ್ದರಿಂದ ಅಲ್ಲಿಯೂ ಅಭೇದ ಪ್ರತೀತಿಯು ಇದ್ದೇ ಇರುವುದು. ಒಂದೊಂದು ತಂತುವಿನಲ್ಲಿಯೂ ಪಟವೆಂಬ ಭಾವನೆಯಿಲ್ಲದಿರುವುದು ಭೇದವನ್ನು ಆಕ್ಷೇಪದಿಂದ ಹೇಳುತ್ತದೆ. ಆದರೆ ಪ್ರತ್ಯಕ್ಷ ಸಿದ್ಧವಾದ ಅಭೇದವನ್ನು ಅಲ್ಲಗಳೆಯವುದಿಲ್ಲ.

ಹಾಗಾದರೆ ಅವಯವ್ಯಾದಿಗಳಿಗೆ ಅವಯವಾದಿಗಳಿಂದ ಅಭೇದವು ಯುಕ್ತವಲ್ಲ. ಏಕೆಂದರೆ ಅವಯವಿ ಒಂದೇ ಇದ್ದರೂ ಅವಯವಗಳು ಅನೇಕವಿರುತ್ತವೆ. ಒಂದೊಂದು ಅವಯವಕ್ಕೂ ಅವಯವಿಯಿಂದ ಅಭೇದವಿದ್ದರೆ, ಅವಯವಗಳಿಗೂ ಪರಸ್ಪರ ಅಭೇದ ಅಥವಾ ಅವಯವಿಗೆ ಭೇದವು ಬರಬೇಕಾಗುತ್ತದೆ. ಮನುಷ್ಯರು ಅನೇಕರಿದ್ದರೂ ಮನುಷ್ಯತ್ವವು ಒಂದೇ. ಎಲ್ಲ ಮನುಷ್ಯರಿಗೂ ಮನುಷ್ಯತ್ವಕ್ಕೂ ಅಭೇದವಿರುವುದರಿಂದ ಎಲ್ಲ ಮನುಷ್ಯರಿಗೂ ಪರಸ್ಪರ ಅಭೇದವು ಬರಬೇಕಾಗುವುದು. ಆದಪ್ರಯುಕ್ತ ಅವಯವಿ–ಅವಯವಾದಿಗಳಿಗೆ ಅಭೇದವು ಯುಕ್ತವಲ್ಲ. ಹೀಗೆ ಆಕ್ಷೇಪಿಸಿದರೆ –

ಸಂಯೋಗಶ್ಚ ವಿಭಾಗಶ್ಚ ಭೇದಶ್ಚೈವ ಪೃಥಕ್ ಪೃಥಕ್ ।।೧೧೮।।

ಅನ್ಯೋನ್ಯಪ್ರತಿಯೋಗೇನ ಹ್ಯುಭಯೋರಪಿ ದೃಶ್ಯತೇ ।

ಸಂಯೋಗವೂ, ವಿಭಾಗವೂ ಹಾಗೂ ಪೃಥಕ್ತ್ವವೂ ಬೇರೆ ಬೇರೆಯಾದವುಗಳೇ. ಅಂದರೆ ಏಕೈಕ ದ್ರವ್ಯಾಶ್ರಿತಗಳೇ ಆಗಿವೆ. ಆದ್ದರಿಂದ ಒಂದೇ ಗುಣವು ಅಭಿನ್ನವಾಗಿ ಎರಡು ದ್ರವ್ಯಗಳಲ್ಲಿ ಸಂಯೊಗಗೊಂಡಿದ್ದರೆ, ಅವೆರಡು ದ್ರವ್ಯಗಳಲ್ಲಿ ಅಭೇದವೆಂಬ ಅತಿಪ್ರಸಂಗವು ಬರುವುದಿಲ್ಲ. ಸಂಯೋಗ ಮುಂತಾದವು ಪರಸ್ಪರ ಪ್ರತಿಯೋಗಿತ್ವ ನಿಮಿತ್ತದಿಂದಲೇ ಎರಡು ದ್ರವ್ಯಗಳ ಸಂಬಂಧಿಯಾಗಿ ತೋರುತ್ತದೆ. ಘಟಪ್ರತಿಯೋಗಿ ಸಂಯೋಗಾದಿಗಳು ಪಟದಲ್ಲಿವೆ. ಹಾಗೂ ಪಟಪ್ರತಿಯೋಗಿವುಳ್ಳ ಸಂಯೋಗಾದಿಗಳು ಪಟದಲ್ಲಿ ಇವೆ. ಆದ್ದರಿಂದ ಎರಡು ದ್ರವ್ಯಗಳ ಸಂಬಂಧಿಯಾಗಿ ತೋರುವಿಕೆಯೂ, ಅತಿಪ್ರಸಂಗದ ಅಭಾವವೂ ಯುಕ್ತವೇ ಆಗುವುದು.

ಹಾಗಾದರೆ ಸಂಯೋಗ ವಿಭಾಗಗಳಿಗೆ ಈ ಪರಿಸ್ಥಿತಿಯು ಇರಲಿ. ಪೃಥಕ್ತ್ವದಲ್ಲಿ

ಇದು ಅನ್ವಯಿಸುವುದಿಲ್ಲ ಎಂದು ಆಕ್ಷೇಪಿಸಿದರೆ –

ಭಿನ್ನಾ ಇತಿ ತು ಭೇದಾನಾಂ ಸಮುದಾಯೋ ಹಿ ದೃಶ್ಯತೇ ।।೧೧೯।।

ಯಥೈವ ಚ ಪದಾರ್ಥಾನಾಮನಯೋರ್ಭೇದ ಇತ್ಯಪಿ ।

ಇತೋಽಮುಷ್ಯಾಮುತೋಽಮುಷ್ಯ ಭೇದೋದೃಷ್ಟೋ ದ್ವಿಧರ್ಮಿಕಃ ।।೧೨೦।।

ತತ್ರೈಕವಚನಂ ಯತ್ತದ್ವಿಪ್ರಾಣಾಂ ಭೋಜನಂ ಯಥಾ ।

ಇವು ಭಿನ್ನಗಳು ಮುಂತಾದ ಪ್ರತೀತಿಗಳಲ್ಲಾದರೂ ಭೇದಗಳ ಸಮುದಾಯವು ಅಂದರೆ ಅನೇಕತ್ವವು ತೋರುತ್ತದೆ. ಹೇಗೆಂದರೆ 'ಯಥೈವ ಚ ಪದಾರ್ಥಾನಾಂ' ಇತ್ಯಾದಿ ವಚನದಿಂದ ಸ್ಪಷ್ಟಪಡಿಸುತ್ತಾರೆ – ಅನೇಕ ಪದಾರ್ಥಗಳಿಗೆ ಹೇಗೋ ಹಾಗೆ 'ಇವೆರಡು ಪದಾರ್ಥಗಳಿಗೆ ಭೇದವು' ಎನ್ನುವ ಪ್ರತೀತಿಯಲ್ಲಿಯೂ 'ಇದರಿಂದ ಅದಕ್ಕೆ, ಅದರಿಂದ ಇದಕ್ಕೆ ಭೇದವು' ಹೀಗೆ ಭೇದವು ಎರಡು ಧರ್ಮಿಯುಳ್ಳದ್ದಾಗಿ ತೋರುವುದು.

'ಅನಯೋಃ ಭೇದಃ' ಎಂಬಲ್ಲಿರುವ ಏಕವಚನವು 'ವಿಪ್ರಾಣಾಂ ಭೋಜನಂ' ಎಂಬಲ್ಲಿ ಹೇಗೋ ಹಾಗೆ, ಏಕಾರ್ಥ ವಿಷಯಕ ಅಥವಾ ಸಮುದಾಯ ವಿಷಯಕ ಎಂಬರ್ಥದಲ್ಲಿ ಕೂಡುವುದು.

ಈಗ ಸಾಮಾನ್ಯ ಅಥವಾ ಜಾತಿಯು ಒಂದೊಂದನ್ನೇ ಆಶ್ರಯಿಸಿಕೊಂಡಿದೆ, ಎಲ್ಲ ಪದಾರ್ಥಗಳಲ್ಲಿಯೂ ಅನುಗತವಲ್ಲ ಎಂಬ ಸಂಗತಿಯನ್ನು 'ನರತ್ವಾದಿಕಂ' ಇತ್ಯಾದಿ ವಚನದಿಂದ ಹೇಳುತ್ತಾರೆ –

ನರತ್ವಾದಿಕಮಪ್ಯೇವಂ ತತ್ತದ್ಧರ್ಮತಯೇಯತೇ ।।೧೨೧।।

ನ ಸರ್ವಧರ್ಮ ಏಕೋಽಸ್ತಿ ಸಮುದಾಯಸ್ತು ಭಿನ್ನಗಃ ।

ನರತ್ವ ಮುಂತಾದುದೂ ಸಂಯೋಗಾದಿಗಳ ಹಾಗೆ ಏಕೈಕವೃತ್ತಿಯು ಅಂದರೆ ಒಂದೊಂದರಲ್ಲಿಯೇ ಇರುವಂಥಹದು. ಏಕೆಂದರೆ ಅದು ಆಯಾಯ ವಸ್ತುವಿನ ನಿಯತಧರ್ಮವಾಗಿಯೇ ಕಂಡಿರುತ್ತದ. ಅಂದರೆ, ಬೇರೆ ಬೇರೆ ಮನುಷ್ಯರನ್ನು ನೋಡಿದಾಗ ಅವರ ರೂಪ ಮಂತಾದುದು ಬೇರೆ ಬೇರೆಯಾಗಿಯೇ ಹೇಗೆ ಕಾಣುತ್ತದೋ, ಹಾಗೆಯೇ ನರತ್ವ ಮುಂತಾದುದೂ ಆಯಾಯ ವ್ಯಕ್ತಿಭೇದದಿಂದ ಬೇರೆ ಬೇರೆಯಾದ ಧರ್ಮವಾಗಿಯೇ ತೋರುತ್ತದೆ ಎಂದರ್ಥ. ಒಂದೇ ಧರ್ಮವು ಅನೇಕ ವ್ಯಕ್ತಿಗಳಲ್ಲಿ ಇರುವುದಾಗಿ ಎಲ್ಲಿಯೂ ತೋರುವುದಿಲ್ಲ. ಆದರೆ ಅನೇಕತ್ವವು ಅನೇಕ ವ್ಯಕ್ತಿಗಳಲ್ಲಿ ಇರುವಂಥಹದು.

ಇನ್ನು ಸಾಮಾನ್ಯ ಅಥವಾ ಜಾತಿಯು ಪ್ರತಿಯೋಗಿ ನಿರೂಪ್ಯವಲ್ಲ. ಸಾದೃಶ್ಯವು

ಪ್ರತಿಯೋಗಿ ನಿರೂಪ್ಯವು. ಆದುದರಿಂದ ಸಾದೃಶ್ಯ ಸಾಮಾನ್ಯಗಳಿಗೆ ಭೇದವು ಸ್ಪಷ್ಟವೇ ಆಗಿದೆ. ಹೀಗೆ ಪ್ರಾಭಾಕರರು ಆಶಂಕಿಸುತ್ತಾರೆ. ಈ ಆಶಂಕೆಯನ್ನು 'ಏತಾದೃಶಂ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಏತಾದೃಶಂ ಚ ಸಾದೃಶ್ಯಂ ಪದಾರ್ಥೇಷು ಪೃಥಕ್ ಪೃಥಕ್ ।।೧೨೨।।

ಏಕಸ್ಮಿನ್ ಸ ವಿನಷ್ಟೇಽಪಿ ಯತೋಽನ್ಯತ್ರೈವ ದೃಶ್ಯತೇ ।

ಸಾದೃಶ್ಯವು ಸಾಮಾನ್ಯದಿಂದ ಬೇರೆಯಾಗಲಿ, ಆದರೂ ಅದು ಪದಾರ್ಥಗಳಲ್ಲಿ ಬೇರೆ ಬೇರೆಯೇ ಆಗಿರುತ್ತದೆ. ಒಬ್ಬ ಮನುಷ್ಯನು ನಷ್ಟನಾದರೂ ಮನುಷ್ಯತ್ವವೆಂಬ ಧರ್ಮವು ಮತ್ತೊಬ್ಬನಲ್ಲಿ ಇದ್ದೇ ಇರುವುದರಿಂದ, ಮನುಷ್ಯತ್ವಾದಿ ಸಾಮಾನ್ಯವು ವ್ಯಕ್ತಿ–ವ್ಯಕ್ತಿಗಳಲ್ಲಿ ಭಿನ್ನವೇ ಆಗಿರುತ್ತದೆ.

ಇನ್ನು ಮನುಷ್ಯತ್ವವೆಂಬ ಜಾತಿಯು ನಿತ್ಯವಾದುದರಿಂದ ಒಬ್ಬ ಮನುಷ್ಯನು ನಷ್ಟನಾದರೂ ಅವನಲ್ಲಿರುವ ಜಾತಿಯು ನಷ್ಟ ಹೊಂದುವುದಿಲ್ಲ ಎಂದು ಆಕ್ಷೇಪಿಸಿದರೆ ಅದನ್ನು 'ಕುತೋ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಕುತೋ ಭಸ್ಮತ್ವಮಾಪ್ತಸ್ಯ ನರತ್ವಂ ಪುನರಿಷ್ಯತೇ ।।೧೨೩।।

ಒಬ್ಬ ಮನುಷ್ಯನು ಸುಟ್ಟು ಭಸ್ಮವಾದಮೇಲೆ ಅವನನ್ನೇ ಆಶ್ರಯಿಸಿದ್ದ ನರತ್ವವೂ ನಾಶವಾಗಬೇಕು. ಆದ್ದರಿಂದ ಆಶ್ರಯವು ನಾಶವಾದನಂತರ ನರತ್ವವು ಇರುವುದೆಂದು ಯಾವ ಕಾರಣದಿಂದ ಅಂಗೀಕರಿಸಲ್ಪಡುತ್ತದೆ? "ವಿಮತಂ (ಸಾಮಾನ್ಯಂ) ವಿನಾಶವತ್ ವಿನಾಶವದಾಶ್ರಯ ಸಮವೇತತ್ವಾತ್ ರೂಪಾದಿವತ್" (ಸಾಮಾನ್ಯವು ವಿನಾಶವುಳ್ಳದ್ದು ರೂಪಾದಿಗಳಂತೆ ವಿನಾಶವುಳ್ಳ ಆಶ್ರಯದಲ್ಲಿ ಸಮವೇತವಾಗಿರುವುದರಿಂದ) ಇತ್ಯಾದಿ ಪ್ರಮಾಣಗಳಿಂದ ವಿರುದ್ಧವಾದುದರಿಂದ ಅಪ್ರಾಮಾಣಿಕವಾಗಿದೆ ಎಂದರ್ಥ.

ನಷ್ಟಹೊಂದಿದ ನರನನ್ನು ಆಶ್ರಯಿಸಿರುವ ನರತ್ವದ ಸತ್ವವು ಅಪ್ರಾಮಾಣಿಕವೆಂದು ಹೇಳಿದ್ದು ಯುಕ್ತವಲ್ಲ. ಏಕೆಂದರೆ ಅದೇ ನರತ್ವವು ಬೇರೆ ಕಡೆ ಪ್ರತ್ಯಕ್ಷಸಿದ್ಧವಾಗಿದೆ. ನಷ್ಟವಾದ ಹಾಗೂ ನಷ್ಟವಾಗದ ನರರಲ್ಲಿ ಇರುವ ನರತ್ವವು ಒಂದೇ ಆಗಿರುವುದರಿಂದ ಅದು ವಿನಾಶ ಹೊಂದದ ನರನಲ್ಲಿ ಪುನಃ ಕಂಡುಬರುತ್ತದೆ. ಹೀಗೆ ಆಕ್ಷೇಪಿಸಿದರೆ ಅದನ್ನು 'ಏಕತ್ವೇ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಏಕತ್ವೇ ನಾಸ್ತಿ ಮಾನಂ ಚ ಶ್ರುತಿರಪ್ಯಾಹ ಸಾದರಮ್ ।

ನಷ್ಟ ಮತ್ತು ಅನಷ್ಟರನ್ನು ಆಶ್ರಯಿಸಿದ ನರತ್ವವು ಒಂದೇ ಎಂಬಲ್ಲಿ ಪ್ರಮಾಣವಿದ್ದರೆ ಅದನ್ನು ಒಪ್ಪಬಹುದು. ಆದರೆ ಅಂಥಹ ಪ್ರಮಾಣವಿಲ್ಲ. ವ್ಯಕ್ತಿ

ವ್ಯಕ್ತಿಗಳಿಗೂ ಅವರಲ್ಲಿರುವ ಜಾತ್ಯಾದಿಗಳಿಗೂ ಭೇದವಿದೆ ಎಂಬುದಾಗಿ ಶ್ರುತಿಯೂ ಸಾದರವಾಗಿ ಹೇಳುತ್ತದೆ ಎಂಬುದನ್ನು ದೃಢಪಡಿಸಲು ಸಂಬಂಧಪಟ್ಟ ಶ್ರುತಿಯನ್ನು ಉದಾಹರಿಸುತ್ತಾರೆ –

ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥಾ ನಿಖಿಲಾ ಅಪಿ ।।೧೨೪।।

ಸ್ವೈಃ ಸ್ವೈರ್ಧರ್ಮೈರಭಿನ್ನಾಶ್ಚ ಸ್ವರೂಪೈರಪಿ ಸರ್ವಶಃ ।

ಅನಿವೃತ್ತವಿನಾಶಾಸ್ತು ಧರ್ಮಾ ಉಭಯರೂಪಕಾಃ ।।೧೨೫।।

ನ ಕೇನಚಿದಭಿನ್ನೋಽತೋ ಭಗವಾನ್ ಸ್ವೈರ್ಗುಣೈರ್ವಿನಾ ।।ಇತಿ।।

ಎಲ್ಲ ಪದಾರ್ಥಗಳೂ ಪರಸ್ಪರ ಭೇದವುಳ್ಳವು ಹಾಗೂ ಪರಸ್ಪರ ಭಿನ್ನಗಳಾದ ಧರ್ಮಗಳನ್ನು ಹೊಂದಿರುವಂಥವು. ತಮ್ಮ ತಮ್ಮ ಸ್ವರೂಪಭೂತ ಧರ್ಮಗಳಿಂದಲೂ, ಎಲ್ಲ ಸ್ವರೂಪಗಳಿಂದಲೂ ಅಭಿನ್ನವಾದಂಥವು. ಆಶ್ರಯವು ನಾಶವಾಗದೆ ಇದ್ದಾಗಲೂ ವಿನಾಶ ಹೊಂದುವ ಧರ್ಮಗಳಾದರೋ ಭಿನ್ನಾಭಿನ್ನಗಳಾಗಿರುತ್ತವೆ. ಆದ್ದರಿಂದ ಶ್ರೀಹರಿಯು ತನ್ನ ಗುಣಾದಿಗಳಿಂದ ಹೊರತು ಯಾರಿಂದಲೂ ಅಭಿನ್ನನಲ್ಲ.

ಹಾಗಾದರೆ ಒಬ್ಬ ವ್ಯಕ್ತಿಯು ನಾಶವಾದರೂ ಇನ್ನೊಬ್ಬ ವ್ಯಕ್ತಿಯಲ್ಲಿ ಆ ಜಾತಿಯು ಕಂಡುಬರುವುದು. ಅನಿತ್ಯವಾದರೆ ಇದು ಸಂಭವಿಸುವುದಿಲ್ಲ. ಆದ್ದರಿಂದ ಜಾತಿಗೆ ನಿತ್ಯತ್ವವನ್ನು ಅಂಗೀಕರಿಸುವುದು ಅನಿವಾರ್ಯವೆಂಬ ಆಕ್ಷೇಪವನ್ನು 'ವ್ಯುತ್ಪತ್ತಿರಪಿ' ಇತ್ಯಾದಿ ವಚನದಿಂದ ಪರಹರಿಸುತ್ತಾರೆ –

ವ್ಯುತ್ಪತ್ತಿರಪಿ ಹಿ ಸಾದೃಶ್ಯೇನೈವ ಗಮ್ಯತೇ ।।೧೨೬।।

ಸರ್ವೇಷು ಯುಗಪಚ್ಛಬ್ದಃ ಸದೃಶೇಷು ಪ್ರವರ್ತತೇ ।

ತಥಾಽಪಿ ಪ್ರಾಪ್ತಿತಸ್ತ್ವೇಕವಚನಾಚ್ಚ ವಿಶೇಷತಃ ।।೧೨೭।।

ಆಭೀಷ್ಟಾವಗತಿಶ್ಚ ಸ್ಯಾಚ್ಛಕ್ತಿಃ ಸಾದೃಶ್ಯಗಾ ಯತಃ ।

ತಾದೃಶೋಽಯಂ ಚ ತಚ್ಛಬ್ದ ಇತಿ ಜ್ಞಾಪಯತಿ ಸ್ಫುಟಮ್ ।।೧೨೮।।

'ಗೋಸದೃಶವು ಗವಯವು' ಇದೇ ಮೊದಲಾದದು ಪ್ರತ್ಯಕ್ಷದಿಂದ ಸಿದ್ಧವಾಗಿದೆ. ಆದ್ದರಿಂದ ಸಾದೃಶ್ಯದಿಂದಲೇ ಗವಾದಿ ವ್ಯುತ್ಪತ್ತಿಯು ಗ್ರಹಿಸಲ್ಪಡುತ್ತದೆ. ಸದೃಶಗಳಾದ ಎಲ್ಲ ಗೋವುಗಳಲ್ಲಿಯೂ ಏಕಕಾಲದಲ್ಲಿ 'ಅಯಂ ಗೌಃ' ಎಂಬಿತ್ಯಾದಿ ಶಬ್ದವು ಪ್ರವೃತ್ತವಾಗುತ್ತದೆ. ಆದರೂ ಯೋಗ್ಯತೆ ಹಾಗೂ ಏಕವಚನವಿರುವುದರಿಂದ ಮತ್ತು ಶುಕ್ಲ ಶಬಲ ಕಾಲಾಕ್ಷಿ ಮುಂತಾದ ವಿಶೇಷಣವಿರುವುದರಿಂದ, ಗೋಶಬ್ದದಿಂದ

ಅಭೀಷ್ಟವಾದ ಗೋವಿನ ಜ್ಞಾನವಾಗುತ್ತದೆ. ಏಕೆಂದರೆ ಶಬ್ದದ ವಾಚಕತ್ವ ಶಕ್ತಿಯು (ಶಾಬ್ದಬೋಧವು) ಸಾದೃಶ್ಯ ಸಂಬಂಧಿಯಾದುದು. ಆದಕಾರಣ ಈಗ ನಾನು ನೋಡುತ್ತಿರುವ ಪದಾರ್ಥವು ಉಪದೇಶಕಾಲದಲ್ಲಿ ಸನ್ನಿಹಿತವಾದ ಗೋವಿಗೆ ಸದೃಶವಾಗಿರುವುದರಿಂದ ಇದೂ ಸಹ ಗೋಶಬ್ದದಿಂದ ವಾಚ್ಯವು ಎಂಬುದಾಗಿ ಶಬ್ದವಾಚಕ ಶಕ್ತಿಯನ್ನು ಸಾದೃಶ್ಯವು ಸ್ಪಷ್ಟವಾಗಿ ತಿಳಿಸುತ್ತದೆ.

ಹೀಗೆ ಅನುಗತವಾದ ಸಾಮಾನ್ಯ ಅಥವಾ ಜಾತಿ ಮುಂತಾದುದನ್ನು ಅಂಗೀಕರಿಸದೆಯೇ ವ್ಯುತ್ಪತ್ತಿ ಮುಂತಾದವು ಸಂಭವಿಸುತ್ತದೆಂದು ಸಮರ್ಥಿಸಿದರು. ಈಗ ಅನುಗತ ಸಾಮಾನ್ಯದಿಂದಲೇ ವ್ಯುತ್ಪತ್ತಿಯನ್ನು ಹೇಳುವವನಿಗೆ ಬಾಧಕವನ್ನು ತೋರಿಸುತ್ತಾರೆ –

ಜಾತಿತಶ್ಚೇತ್ಕಥಂ ತಾಸು ತತ್ರ ಚೇದನವಸ್ಥಿತಿಃ ।

ತಥೈವ ವ್ಯಕ್ತಿವಿಜ್ಞಾನಂ ವ್ಯಕ್ತಿತ್ವಾಭಾವದೂಷಿತಮ್ ।।೧೨೯।।

ಅನುಗತವಾದ ಜಾತಿ ನಿಮಿತ್ತಕವೇ ಸರ್ವತ್ರ ವ್ಯುತ್ಪತ್ತಿಯು ಸಂಭವಿಸುವುದಾದರೆ, ಆ ಜಾತ್ಯಾದಿಗಳಲ್ಲಿ ಜಾತ್ಯಾದಿ ಶಬ್ದಗಳ ವ್ಯುತ್ಪತ್ತಿಯು ಹೇಗೆ ಆಗುವುದು? ಜಾತಿಗಳಲ್ಲಿಯೂ ಜಾತಿತ್ವವೆನ್ನುವ ಜಾತಿಯಿದೆ ಎಂದು ಹೇಳಿದರೆ, ಅದರಲ್ಲಿ ಮತ್ತೊಂದು ಜಾತಿತ್ವವು ಹೀಗೆ ಅನವಸ್ಥಿತಿಯು. ಗೋತ್ವ ಮುಂತಾದ ಜಾತಿಗಳು ಜಾತಿಶಬ್ದವಾಚ್ಯಗಳೆಂಬ ಜ್ಞಾನವು (ಜಾತಿವಿಜ್ಞಾನವು) ಜಾತಿತ್ವವೆಂಬುದು ಇಲ್ಲವಾದುದರಿಂದ ಹೇಗೆ ದೂಷಿತವಾಗುವುದೋ ಹಾಗೆಯೇ ವ್ಯಕ್ತಿವಿಜ್ಞಾನವೂ ವ್ಯಕ್ತಿತ್ವದ ಅಭಾವದಿಂದ ದೂಷಿತವಾಗುವುದು.

ಹಾಗಾದರೆ ಯಾವುದೇ ಶಬ್ದಪ್ರವೃತ್ತಿಯು ಜಾತಿನಿಮಿತ್ತಕವಾದುದರಿಂದ ವ್ಯಕ್ತಿತ್ವವು ದ್ರವ್ಯ ಗುಣ ಕರ್ಮಗಳಲ್ಲಿ ಇದ್ದೇ ಇರುವುದು. ಆದ್ದರಿಂದ ಹಿಂದೆ ಹೇಳಿದ ದೋಷವಿಲ್ಲ ಎಂದು ಆಶಂಕಿಸಿದರೆ, ಅದನ್ನು 'ಯದಿ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಯದಿ ತಚ್ಚಾಸ್ತಿ ತಸ್ಯಾಪಿ ವಿಶೇಷೇಷ್ವನವಸ್ಥಿತಿಃ ।

ಕಥಂ ಸ್ವರೂಪತ್ವಮಪಿ ಜ್ಞಾಯತೇಽನುಗತಂ ಯದಿ ।।೧೩೦।।

ಏಕವ್ಯುತ್ಪತ್ತಿಪರ್ಯಂತಮನವಸ್ಥಾದಿದೂಷಿತಮ್ ।

ಕಲ್ಪನಾಗೌರವಾತ್ತೇನ ಯುಕ್ತಾ ನಾನುಗಕಲ್ಪನಾ ।।೧೩೧।।

ಒಂದು ಪಕ್ಷದಲ್ಲಿ ವ್ಯಕ್ತಿತ್ವವೂ ಇರುವುದಾದರೆ, ಆಗ ಆ ವ್ಯಕ್ತಿತ್ವಕ್ಕೆ ಸಹ ವ್ಯಕ್ತಿ ವಿಶೇಷಗಳಲ್ಲಿ ಪ್ರವೇಶವು ಆಗಬೇಕಾಗುವುದು. ಆದುದರಿಂದ ಅನವಸ್ಥೆಯು.

ಇನ್ನು ಅನುಗತವಾದ ಜಾತಿಯಿಂದಲೇ ಸರ್ವತ್ರ ವ್ಯುತ್ಪತ್ತಿಯನ್ನು ಅಂಗೀಕರಿಸುವ ಪಕ್ಷದಲ್ಲಿ ಆಗ ಎಲ್ಲ ಪದಾರ್ಥಗಳ ಸ್ವರೂಪವು ಸ್ವರೂಪಶಬ್ದ ವಾಚ್ಯವೆಂದು ಹೇಗೆ ತಿಳಿಯಲ್ಪಡುವುದು? ಏಕೆಂದರೆ ಅನುಗತ ಸ್ವರೂಪತ್ವವೆಂಬ ಸಾಮಾನ್ಯವು ಇರುವುದಿಲ್ಲ.

ಇನ್ನು ಅನುಗತ ಸಾಮಾನ್ಯವಿಲ್ಲದಿರುವ ಕಡೆಗಳಲ್ಲಿ ವ್ಯುತ್ಪತ್ತಿಯನ್ನು ಅಂಗೀಕರಿಸುವ ತನಕ ಅನವಸ್ಥಾದಿ ದೋಷಗಳು ಬಂದೇ ಬರುತ್ತವೆ.

ಎಲ್ಲ ಕಡೆಗಳಲ್ಲಿಯೂ ಶಬ್ದಪ್ರವೃತ್ತಿಗೆ ನಿಮಿತ್ತಕವಾದುದನ್ನು ಅನುಗತವಲ್ಲವೆಂದೇ ಹೇಳಬೇಕು. ಕೆಲವು ಕಡೆಗಳಲ್ಲಿ ಅನುಗತ ಜಾತಿಯು ಶಬ್ದಪ್ರವೃತ್ತಿ ನಿಮಿತ್ತವು, ಕೆಲವು ಕಡೆಗಳಲ್ಲಿ ಉಪಾಧಿಯೂ ಸ್ವರೂಪವೂ ಪ್ರವೃತ್ತಿ ನಿಮಿತ್ತವೆಂದು ಬಹುವಿಧ ಕಲ್ಪನೆಗಳನ್ನು ಮಾಡಿದರೆ ಕಲ್ಪನಾಗೌರವವೆಂಬ ದೋಷವು ಬರುವುದು. ಆದ್ದರಿಂದ ಅನುಗತ ಜಾತಿಯ ಕಲ್ಪನೆಯು ಯುಕ್ತವಲ್ಲ.

ಹೀಗೆ ಸಮವಾಯವನ್ನು ಸ್ವರೂಪತಃ ನಿರಾಕರಿಸಿದರು. ಸಮವಾಯವು ಸರ್ವತ್ರ ಏಕವೂ ನಿತ್ಯವೂ ಎಂದು 'ತತ್ತ್ವಂ ಭಾವೇನ' ಎಂಬ ಸೂತ್ರದಿಂದ ವ್ಯಾಖ್ಯಾತವಾಗಿದೆ ಎಂದು ಹೇಳಿದ್ದನ್ನು 'ಔಪಾಧಿಕ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಾರೆ –

ಔಪಾಧಿಕವಿಶಿಷ್ಟಾದ್ಯಮಪಿ ತದ್ವಸ್ತು ಕಿಂ ತತಃ ।

ಅನ್ಯತ್ತದೇವ ಚೇದಗ್ನಿಮತ್ತ್ವಂ ಕಿಂ ತತ್ರ ಭಣ್ಯತೇ ।।೧೩೨।।

ಔಪಾಧಿಕ ವಿಶಿಷ್ಟತ್ವ ಉಪಲಕ್ಷಿತ ಮುಂತಾದುದೂ ಉಪಾಧಿ ಮುಂತಾದ ಮೂರರ ಸ್ವರೂಪವೋ ಅಥವಾ ಅವುಗಳಿಂದ ಭಿನ್ನವೋ? ಔಪಾಧಿಕಾದಿಗಳು ಉಪಾಧಿ ಮುಂತಾದವುಗಳ ಸ್ವರೂಪವೇ ಎಂದರೆ ಅಗ್ನಿಮತ್ತ್ವ ಮುಂತಾದ ವಿಶಿಷ್ಟವು ಈ ಮೂರರಲ್ಲಿ ಯಾವುದೆಂದು ಹೇಳಲ್ಪಡುತ್ತದೆ?

ಅಗ್ನಿಸಂಯೋಗಮಾತ್ರಂ ಚೇದ್ಭವೇತ್ತದ್ಸಿದ್ಧಸಾಧನಮ್ ।

ಭೂಧರಸ್ಯಾಗ್ನಿಸಂಯೋಗೋ ಯದಿ ಷಷ್ಠ್ಯರ್ಥಂ ಏವ ಕಃ ।।೧೩೩।।

ಅಗ್ನಿಸಂಯೋಗವೇ ಅಗ್ನಿಮತ್ತ್ವ ಶಬ್ದಾರ್ಥ ವಿಶಿಷ್ಟವೆಂದರೆ ಆಗ ಧೂಮಾದಿ ಅನುಮಾನಕ್ಕೆ ಸಿದ್ಧಸಾಧನವೆಂಬ ದೋಷ ಬರುವುದು. ಪರ್ವತಕ್ಕೆ ಅಗ್ನಿಸಂಯೋಗವು ಎಂಬುದು ಅಗ್ನಿಮತ್ತ್ವ ಶಬ್ದಾರ್ಥವಾದರೆ ಷಷ್ಠ್ಯರ್ಥವಾದ ಸಂಬಂಧವು ಯಾವುದೆಂದು ಪ್ರಶ್ನಿಸುತ್ತೇವೆ. ಏಕೆಂದರೆ ಷಷ್ಠ್ಯರ್ಥವಾದ ಸಂಬಂಧಗಳು ಅನೇಕವೆಂದು ವೈಯಾಕರಣರು ಹೇಳುತ್ತಾರೆ.

ಸಮವಾಯೋ ಯದಿ ಹ್ಯಸ್ಯ ಚೈಕತ್ವಾತ್ಸಿದ್ಧಸಾಧನಮ್ ।

ಯದ್ಯಸ್ಯೌಪಾಧಿಕೋ ಭೇದಃ ಕುತ ಏಕತ್ವಮಿಷ್ಯತೇ ॥೧೩೪॥

ಗುಣಗುಣಿಗಳಲ್ಲಿ ಪ್ರಸಿದ್ಧವಾದ ಸಮವಾಯ ಸಂಬಂಧವು ಷಷ್ಟ್ಯರ್ಥವೆಂದು ಹೇಳಿದರೆ, ಆಗ ಸಮವಾಯಕ್ಕೂ ಏಕತ್ವವಿರುವುದರಿಂದ ಧೂಮಾದಿ ಅನುಮಾನವು ಸಿದ್ಧಸಾಧನವಾಗುವುದು. ಈ ಸಮವಾಯಕ್ಕೆ ಔಪಾಧಿಕ ಭೇದವಿದೆಯೆಂದರೆ ಅದಕ್ಕೆ ಏಕತ್ವವನ್ನು ಅಂಗೀಕರಿಸುವುದು ಏಕೆ?

ನಾನಿರ್ವಾಚ್ಯಂ ಹಿ ತೇನೇಷ್ಟಮತ ಔಪಾಧಿಕಾನ್ಯಯೋಃ ।

ಸತ್ಯತ್ವಾತ್ಕೋ ವಿಶೇಷಃ ಸ್ಯಾನ್ಮಾಯಾವಾದ್ಯನ್ಯಥಾ ಭವೇತ್ ॥೧೩೫॥

ವೈಶೇಷಿಕಾದಿಗಳು ಅನಿರ್ವಾಚ್ಯ ವಸ್ತುವನ್ನು ಒಪ್ಪುವುದಿಲ್ಲ. ಆದ್ದರಿಂದ ಔಪಾಧಿಕ ಸ್ವಾಭಾವಿಕಗಳೆರಡಕ್ಕೂ ಸತ್ಯತ್ವವು ಬರುವುದರಿಂದ, ಔಪಾಧಿಕತ್ವಾದಿ ಯುಕ್ತಿಯಿಂದ ಅವರು ಹೇಳುವ ವಿಶೇಷವು ಯಾವುದು? ಅನಿರ್ವಾಚ್ಯವನ್ನು ಅಂಗೀಕರಿಸಿದರೆ ವೈಶೇಷಿಕನೂ ಮಾಯಾವಾದಿಯೇ ಆಗುವನು.

ಉಪಾಧಿಜನ್ಯಂ ತದ್ಗಮ್ಯಮಿತಿ ಚೌಪಾಧಿಕಂ ಭವೇತ್ ।

ಉಭಯತ್ರಾಪ್ಯನಂತಾಃ ಸ್ಯುಃ ಸಮವಾಯಾ ಇತಸ್ತತಃ ॥೧೩೬॥

ಉಪಾಧಿಯಿಂದ ಹುಟ್ಟಿದ್ದು ಅಥವಾ ತಿಳಿಯಲ್ಪಟ್ಟಿದ್ದು ಔಪಾಧಿಕವೆನಿಸುತ್ತದೆ. ಎರಡೂ ಪಕ್ಷಗಳಲ್ಲಿ, ಅವಯವ–ಅವಯವಿ ಮುಂತಾದ ಉಪಾಧಿಗಳಿಗೆ ಅನಂತತೆ ಇರುವುದರಿಂದ, ಸಮವಾಯಗಳು ಅನಂತವಾಗುವವು.

ಭಿನ್ನತ್ವಂ ಚೈವ ತೇಷ್ವಸ್ತಿ ಕೋ ವಿಶೇಷ ಉಪಾಧಿಗೇ ।

ಅವಿದ್ಯಮಾನ ಏವಾನ್ಯಃ ಸಮವಾಯೋಽಧಿಗಮ್ಯತೇ ॥೧೩೭॥

ಉಪಾಧಿನಾ ತದ್ಗಮಕಮನುಮಾನಂ ನ ಮಾ ಭವೇತ್ ।

ಆ ಸಮವಾಯಗಳಲ್ಲಿಯೇ ಭೇದವಿರುವುದರಿಂದ, ಔಪಾಧಿಕ ಭೇದದಲ್ಲಿರುವ ವಿಶೇಷವು ಯಾವುದು? ಇಲ್ಲದಿರುವ ಭಿನ್ನವಾದ ಸಮವಾಯವು ಉಪಾಧಿಯಿಂದ ತಿಳಿಯಲ್ಪಡುತ್ತದೆ ಎಂದು ಹೇಳಿದರೆ, ಅದು ಯುಕ್ತವಲ್ಲ. ಏಕೆಂದರೆ ಇಲ್ಲದಿರುವ ಸಮವಾಯವನ್ನು ಪ್ರತಿಪಾದಿಸುವ ಅನುಮಾನವು ಪ್ರಮಾಣವಾಗಲಾರದು.

ಈಗ ಸಮವಾಯದ ನಿತ್ಯತ್ವವನ್ನು ನಿರಾಕರಿಸುತ್ತಾರೆ –

ಏವಮೇವಾಸತಃ ಸತ್ತಾಸಮವಾಯೋ ಜನಿರ್ಮತಾ ॥೧೩೮॥

ತತ್ರಾಪಿ ಹ್ಯುಕ್ತದೋಷಾಣಾಂ ನೈವ ಕಿಂಚಿನ್ನಿವಾರಕಮ್ ।

ಸರ್ವತ್ರ ಸಮವಾಯದ ಏಕತ್ವವನ್ನು ಅಂಗೀಕರಿಸುವುದಾದರೆ ಎಲ್ಲ ಅನುಮಾನಗಳಿಗೂ ಸಿದ್ಧಸಾಧನಾದಿ ದೋಷಗಳು ಬರುವುವೆಂದು ಹೇಳಲಾಗಿದೆ. ಆದರಂತೆಯೇ ಸಮವಾಯದ ನಿತ್ಯತ್ವವನ್ನು ಅಂಗೀಕರಿಸುವುದಾದರೆ, ಅಸತ್ತಿಗೆ ಸತ್ತಾದೊಂದಿಗೆ ಸಮವಾಯದ ಸಂಬಂಧ ಉಂಟಾಗುವುದು ಉತ್ಪತ್ತಿಯು ಎಂಬ ವಚನವು ದೋಷಯುಕ್ತವಾದೀತು. ಅಂದರೆ ಸಮವಾಯವು ನಿತ್ಯವಾದರೆ ಯಾವುದಕ್ಕೂ ಉತ್ಪತ್ತಿ ಸಂಭವಿಸದು ಎಂದರ್ಥ. ಏಕೆಂದರೆ ಸಮವಾಯದ ನಿತ್ಯತ್ವವನ್ನು ಅಂಗೀಕರಿಸುವ ಪಕ್ಷದಲ್ಲಿಯೂ ಸಿದ್ಧಸಾಧನತ್ವಾದಿ ದೋಷಗಳಿಗೆ ನಿವಾರಕವಾವುದೂ ಇರುವುದಿಲ್ಲ.

ಹಾಗಾದರೆ ಲೌಕಿಕ ಹಾಗೂ ವೈದಿಕ ವ್ಯವಹಾರಗಳನ್ನು ನಿರ್ವಹಿಸಲು ನೀವೂ ಸಹ ವಿಶೇಷ ಮುಂತಾದವನ್ನು ಅಂಗೀಕರಿಸಬೇಕಾಗುತ್ತದೆ. ಅಲ್ಲಿಯೂ ಹಿಂದೆ ಹೇಳಿದ ದೋಷಗಳು ಬರುತ್ತವೆ ಎಂದು ಆಕ್ಷೇಪಿಸಿದರೆ –

ಅಸ್ಮತ್ಪಕ್ಷೇ ವಿಶೇಷಸ್ಯ ಸರ್ವತ್ರಾಂಗೀಕೃತತ್ವತಃ ।।೧೩೯।।

ನಾಸ್ತಿ ದೋಷಃ ಕ್ವಚಿತ್..............................।

ನಮ್ಮ ಪಕ್ಷದಲ್ಲಿ ವಿಶೇಷವನ್ನು ಸರ್ವತ್ರ ಅಂಗೀಕರಿಸುವುದರಿಂದ ಎಲ್ಲಿಯೂ, ಅಂದರೆ ಅತ್ಯಂತಾಭೇದ ಹಾಗೂ ಭೇದಾಭೇದ ಇರುವಲ್ಲಿಯೂ, ಯಾವ ದೋಷವೂ ಇರುವುದಿಲ್ಲ.

ಹಾಗಾದರೆ ಕೆಲವು ಕಡೆಗಳಲ್ಲಿ ವಿಶೇಷ್ಯವು ಭಾವರೂಪವಾಗಿದ್ದು ವಿಶೇಷವು ಅಭಾವ ರೂಪವಾಗಿರುತ್ತದೆ. ಮತ್ತೆ ಕೆಲವು ಕಡೆಗಳಲ್ಲಿ ಇದಕ್ಕೆ ವಿರುದ್ಧವಾಗಿರುತ್ತದೆ. ಇನ್ನು ವಿಧಿನಿಷೇಧ ರೂಪಗಳಾದ ಭಾವಾಭಾವಗಳಿಗೆ ಅಭೇದವು ಯುಕ್ತವಲ್ಲ. ಆದ್ದರಿಂದ ವಿಶೇಷವು ವಿಶೇಷ್ಯದಿಂದ ಅಭಿನ್ನವೆಂಬುದು ಹೇಗೆ ಎಂದರೆ –

................ಭಾವೋ ಹ್ಯಭಾವಶ್ಚ ಸ ಏವ ಹಿ ।

ಅಭಾವಸ್ಯ ಧರ್ಮಾಃ ಸ್ಯುರ್ಭಾವಾಸ್ತೇಷಾಂ ಚ ತೇಽಖಿಲಾಃ ।।೧೪೦।।

ಪ್ರತ್ಯಕ್ಷಮಾನತಃ ಸರ್ವಮೇತನ್ನೋ ವಾರಣಕ್ಷಮಮ್ ।

ಸರ್ವೇ ಭಾವಾ ಅಭಾವಾಶ್ಚ ಪದಾರ್ಥಾಸ್ತೇನ ಸರ್ವದಾ ।।೧೪೧।।

ಕೆಲವು ಕಡೆಗಳಲ್ಲಿ ಭಾವವು ಅಭಾವವಾಗುತ್ತದೆ, ಅಭಾವವೂ ಕೆಲವು ಕಡೆಗಳಲ್ಲಿ ಭಾವವಾಗುತ್ತದೆ ಎಂಬುದು ಪ್ರಸಿದ್ಧವಾಗಿದೆ. ಅಭಾವಕ್ಕೆ ಸಹ ಭಾವರೂಪ ಧರ್ಮಗಳು ಇರುತ್ತವೆ. ಭಾವಪದಾರ್ಥಗಳಿಗೂ ಅಭಾವರೂಪ ಧರ್ಮಗಳು

ಇರುತ್ತವೆ. ಇವೆಲ್ಲವೂ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾದುದರಿಂದ ನಿವಾರಿಸಲು ಶಕ್ಯವಾಗದು. ಆದಕಾರಣ ಯಾವಾಗಲೂ ಎಲ್ಲ ಭಾವಪದಾರ್ಥಗಳು ಅಭಾವಗಳೂ ಹಾಗೂ ಎಲ್ಲ ಅಭಾವ ಪದಾರ್ಥಗಳು ಭಾವಗಳೂ ಆಗುತ್ತವೆ.

ತಥಾಪಿ ಪ್ರಥಮಂ ಬುದ್ಧೇರ್ಯೋ ನಿಷೇಧಸ್ಯ ಗೋಚರಃ ।

ಸೋಽಭಾವೋ ವಿಧಿಬುದ್ಧೇಸ್ತು ಗೋಚರಃ ಪ್ರಥಮಂ ಪರಃ ॥೧೪೨॥

ಆದರೂ ಮೊದಲಿಗೇ ನಿಷೇಧರೂಪವಾಗಿ ಬುದ್ಧಿಯಲ್ಲಿ ಗೋಚರಿಸುವ ವಿಷಯವು ಅಭಾವವೆನಿಸಿದರೆ, ಮೊದಲಿಗೇ ವಿಧಿರೂಪವಾಗಿ ಬುದ್ಧಿಯಲ್ಲಿ ಗೋಚರಿಸುವ ವಿಷಯವು ಭಾವವೆನಿಸುತ್ತದೆ.

ಅಭಾವ-ಭಾವಗಳಿಗೆ ಭಾವ-ಅಭಾವರೂಪ ಧರ್ಮಗಳಿರುವುದು ಪ್ರತ್ಯಕ್ಷಾದಿ ಪ್ರಮಾಣದಿಂದ ಸಿದ್ಧವೆಂಬುದಾಗಿ ಹಿಂದೆ ಹೇಳಲಾಯಿತು. ಅದು ಹೇಗೆ ಎಂದರೆ 'ತಸ್ಮಾತ್' ಎಂಬಿತ್ಯಾದಿ ವಾಕ್ಯದಿಂದ ಸಮಾಧಾನ ಹೇಳುತ್ತಾರೆ –

ತಸ್ಮಾತ್ಪ್ರಧ್ವಸ್ತಭೇದಾದಿ ಸದಿತ್ಯೇವಾವಗಮ್ಯತೇ ।

ಅಸ್ತ್ಯಭಾವೋಽಸ್ತಿ ಚ ಧ್ವಂಸೋ ದೇಹಾಭಾವಶ್ಚ ಭಸ್ಮತಾ ॥೧೪೩॥

ಇತ್ಯಾದಿ ಯುಜ್ಯತೇ ಸರ್ವಂ ಪ್ರತ್ಯಕ್ಷಾದಿಪ್ರಮಾಣತಃ ।

ಅಭಾವಕ್ಕೆ ಭಾವರೂಪ ಧರ್ಮವಿರುವುದರಿಂದ ಪ್ರಧ್ವಂಸಾಭಾವ, ಪೃಥಕ್ತ್ವ, ಪ್ರಮೇಯತ್ವ ಮುಂತಾದುದು ಸತ್ಯವೆಂದೇ ತಿಳಿಯುತ್ತದೆ. ಆದುದರಿಂದ ಅಭಾವವು ಇದೆ, ಪ್ರಧ್ವಂಸವು ಇದೆ, ಭಸ್ಮವಾಗುವಿಕೆಯಿಂದಾಗಿ ದೇಹಾಭಾವುಂಟು, ಇತ್ಯಾದಿಗಳು ಯುಕ್ತವಾಗುತ್ತವೆ. ಇವೆಲ್ಲವೂ ಪ್ರತ್ಯಕ್ಷದಿಂದ ಪ್ರಮಾಣಿತವಾಗಿವೆ.

ಹಾಗಾದರೆ ಅನ್ಯೋನ್ಯಾಭಾವಕ್ಕೆ ಭಾವರೂಪ ಧರ್ಮವಿರುವುದಾದರೂ ಅದು ಧರ್ಮಿಸ್ವರೂಪವಲ್ಲ. ಆದುದರಿಂದ ಭಾವಕ್ಕೆ ಅಭಾವವನ್ನು ಹೇಗೆ ಹೇಳುವುದು? ಈ ಆಕ್ಷೇಪವನ್ನು 'ಅನ್ಯೋನ್ಯಾಭಾವ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಅನ್ಯೋನ್ಯಾಭಾವಭೇದೌ ಚ ಪೃಥಕ್ತ್ವಂ ಚ ಪೃಥಕ್ ಪೃಥಕ್ ॥೧೪೪॥

ಯತ್ಕಲ್ಪಯಂತಿ ತಚ್ಚೈವ ಕಲ್ಪನಾಗೌರವಾದ್ಧತಮ್ ।

ಪರ್ಯಾಯತ್ವೇನ ತೇ ಶಬ್ದಾ ಜ್ಞಾಯಂತೇ ಸರ್ವ ಏವ ಹಿ ॥೧೪೫॥

ಅನ್ಯೋನ್ಯಾಭಾವ, ಭೇದ, ಪೃಥಕ್ತ್ವ ಇವುಗಳನ್ನು ಬೇರೆ ಬೇರೆಯೆಂದು ಯಾರು ಕಲ್ಪಿಸುತ್ತಾರೋ (ವೈಶೇಷಿಕಾದಿಗಳು) ಅವರಿಗೆ ಕಲ್ಪನಾಗೌರವವೆಂಬ ದೋಷವು ಬರುವುದರಿಂದ ಅದು ನಿರಾಸೆ ಹೊಂದುವುದು. ಅನ್ಯೋನ್ಯಾಭಾವ,

ಭೇದ, ಪೃಥಕ್ತ್ವ ಎಂಬ ಸಕಲ ಲೌಕಿಕ ಹಾಗೂ ವೈದಿಕ ಶಬ್ದಗಳೂ ಪರ್ಯಾಯವೆಂದು ತಿಳಿಯಲ್ಪಡುತ್ತದೆ.

ಇನ್ನು ಭೇದಕ್ಕೆ ವಸ್ತುಸ್ವರೂಪತ್ವ ವಿಷಯದಲ್ಲಿ ಮಾಯಾವಾದಿಗಳ ಮತವನ್ನು ದೂಷಿಸುತ್ತಾರೆ.

ಭೇದದ ಸ್ವರೂಪತ್ವ ವಿಷಯದಲ್ಲಿ ಮಾಯಾವಾದಿಗಳು ಹೀಗೆ ಹೇಳುತ್ತಾರೆ – ಭೇದವು ವಸ್ತು ಸ್ವರೂಪವಾಗಲಾರದು. ಏಕೆಂದರೆ ಭೇದ ಶಬ್ದವು ವಿದಾರಣಾರ್ಥಕ ಭಿದ ಧಾತುವಿನಿಂದಾದ ರೂಪವು (ಭಿದಿರ್ವಿದಾರಣೇ). ವಿದಾರಣ ಎಂದರೆ ಭೇದನ ಅಥವಾ ವಿಭಾಗಿಸುವುದು ಎಂದರ್ಥ. ಆದ್ದರಿಂದ ವಿದಾರಣಾರ್ಥಕವಾದ ಭೇದಕ್ಕೆ ಭಾವ ಸ್ವರೂಪವು ಇರುವುದಾದರೆ, ಭೇದಕ್ಕೂ ಭಾವಸ್ವರೂಪಕ್ಕೂ ವಿದಾರಣದ ನಿಮಿತ್ತ ಭೇದವೇ ಉಂಟಾದೀತು. ಈ ವಿದಾರಣವು ವಸ್ತುವಿನ ಏಕದೇಶದಲ್ಲಿಯೂ ಸಂಭವಿಸುವುದರಿಂದ ಕೊನೆಗೆ ಶೂನ್ಯತೆಯೇ ಉಂಟಾದೀತು. ಭೇದವು ವಸ್ತುವಿನ ಸ್ವರೂಪವಾದರೆ ಅದರಲ್ಲಿ ಏಕತ್ವವು ಬರಲಾರದು. ಏಕೆಂದರೆ ಅಭೇದವನ್ನು ಹೇಳುವ ಏಕತ್ವಕ್ಕೆ ಭೇದದಿಂದ ವಿರೋಧವಿದೆ. ಏಕತ್ವಗಳ ಸಮಾಹಾರವೇ ಅನೇಕತ್ವವು. ಆದ್ದರಿಂದ ಅನೇಕತ್ವವೂ ಬರಲಾರದು. ಏಕತ್ವ ಮತ್ತು ಅನೇಕತ್ವವು ಇಲ್ಲದ್ದು ಶೂನ್ಯವೇ ಆಗಬೇಕಾಗುವುದು. ಈ ಮಾಯಾವಾದಿಗಳ ಮತವನ್ನು 'ಭೇದಸ್ಯ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಭೇದಸ್ಯ ತು ಸ್ವರೂಪತ್ವೇ ಯೇ ವದಂತಿ ಚ ಶೂನ್ಯತಾಮ್ ।

ಅದ್ಭುತಾಸ್ತೇ ಯತೋಽನ್ಯಸ್ಯ ಪ್ರತಿಯೋಗಿತ್ವಮಿಷ್ಯತೇ ॥೧೪೬॥

ಪ್ರತಿಯೋಗಿನೋ ಹಿ ಭೇದೋಽಯಂ ನ ತು ಸ್ವಸ್ಮಾತ್ಕಥಂಚನ ।

ಭೇದವು ಭೇದಹೊಂದುವ ವಸ್ತುವಿನ ಸ್ವರೂಪವಾಗಿದ್ದರೆ ಸರ್ವಕ್ಕೂ ಶೂನ್ಯತೆ ಬರುವುದೆಂದು ಯಾರು ಹೇಳುತ್ತಾರೋ ಅವರು ಅದ್ಭುತರು. ಲೋಕದಲ್ಲಿ ಅಂಥವರು ಕಂಡಿಲ್ಲ. ಏಕೆಂದರೆ ಧರ್ಮಿಯಿಂದ ಬೇರೆಯಾದುದಕ್ಕೇ ಭೇದದ ಪ್ರತಿಯೋಗಿಯೆಂದು ಅಂಗೀಕರಿಸಲಾಗಿದೆ. ಈ ಭೇದವು ತನ್ನ ಧರ್ಮಿಯನ್ನು ಪ್ರತಿಯೋಗಿಯ ಕಡೆಯಿಂದಲೇ ವಿದಾರಣ ಮಾಡುತ್ತದೆ. ತನ್ನ ಸ್ವರೂಪವಾದ ಧರ್ಮಿಯಿಂದ ವಿದಾರಣ ಮಾಡುವುದಿಲ್ಲ. ಇದು ಪ್ರಮಾಣ ಸಿದ್ಧವು. ಘಟಸ್ವರೂಪವಾದ ಭೇದಕ್ಕೆ ಘಟವೇ ಪ್ರತಿಯೋಗಿಯಲ್ಲ, ಘಟದಿಂದ ಬೇರೆಯಾದುದೇ (ಉದಾಹರಣೆಗೆ ಪಟವು) ಪ್ರತಿಯೋಗಿಯಾಗುತ್ತದೆ. ಆದ್ದರಿಂದ ಭೇದಕ್ಕೆ ಧರ್ಮಿಸ್ವರೂಪತ್ವ ಒಪ್ಪಿದರೆ ಶೂನ್ಯತೆಯು ಉಂಟಾಗದು.

ಇನ್ನು ಭೇದವು ಸ್ವರೂಪ ವಿದಾರಣವೆಂದು ಇಟ್ಟುಕೊಂಡರೂ ಶೂನ್ಯತೆಯನ್ನು ಆಪಾದಿಸುವುದು ಅಯುಕ್ತವೆಂದು ಹೇಳುತ್ತಾರೆ –

ವಿಭಾಗೇನಾಲ್ಪತೈವ ಸ್ಯಾತ್ಕುತ ಏವ ತು ಶೂನ್ಯತಾ ।।೧೪೭।।

ನ ಶೂನ್ಯಾನಾಂ ಹಿ ಸಂಯೋಗಾದ್ಭಾವೋ ವಸ್ತುನ ಇಷ್ಯತೇ ।

ವಿದಾರಣಾರ್ಥೋ ಧಾತುಶ್ಚ ವಿಭಾಗಗುಣವಾಚಕಃ ।।೧೪೮।।

ಯಾವುದೇ ವಸ್ತುವನ್ನು ಎಷ್ಟು ವಿಭಾಗ ಮಾಡಿದರೂ ಕೊನೆಯಲ್ಲಿ ಅಲ್ಪ ಪರಿಮಾಣದ ಅವಶೇಷವೇ ಉಳಿಯುವುದು. ಆದ್ದರಿಂದ ವಿಭಾಗದಿಂದ ಅಲ್ಪತೆಯು ಉಂಟಾಗುವುದೇ ಹೊರತು ಶೂನ್ಯತೆಯಲ್ಲ. ಉದಾಹರಣೆಗೆ ತಂತುಗಳ ಸಂಯೋಗದಿಂದ ಉಂಟಾದ ಪಟವು ತಂತುವಿಭಾಗದಿಂದ ನಾಶವಾದಾಗ ತಂತುಗಳು ಉಳಿಯುವುದಾಗಿ ಪ್ರತ್ಯಕ್ಷದಿಂದ ತಿಳಿದುಬರುತ್ತದೆ. ಶೂನ್ಯಗಳ ಸಂಯೋಗದಿಂದ ಪಟವು ಉತ್ಪತ್ತಿಯಾಗಿದ್ದರೆ ವಿದಾರಣದ ನಿಮಿತ್ತ ಕೊನೆಯಲ್ಲಿ ಶೂನ್ಯವೇ ಉಳಿಯಬೇಕಿತ್ತು. ಶೂನ್ಯಗಳ ಸಂಯೋಗದಿಂದ ವಸ್ತುಗಳ ಉತ್ಪತ್ತಿ ಎಂಬುದು ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುವುದಿಲ್ಲ. ಇನ್ನು 'ಭಿದ' ಧಾತುವಿಗೆ ವಿದಾರಣವೆಂಬ ಅರ್ಥದಲ್ಲಿ ಅಭಿಪ್ರಾಯವಿದ್ದರೆ, ಆಗ ಭೇದ ಶಬ್ದವು ವಿಭಾಗ ಗುಣವಾಚಕವಾಗುವುದೇ ಹೊರತು ಅನ್ಯೋನ್ಯಾಭಾವವೆಂಬ ಭೇದವಾಚಕವಾಗದು. ಉದಾಹರಣೆಗೆ 'ಘಟವು ಭಿನ್ನವಾಯಿತು' ಎಂದು ಹೇಳಿದಾಗ ಒಡೆಯಿತು ಎಂದು ಅರ್ಥವಾಗುತ್ತದೆ. ಆದರೆ 'ಘಟದಿಂದ ಗಗನವು ಭಿನ್ನ' ಎಂಬಲ್ಲಿ ಭೇದವೆಂಬ ಅರ್ಥ ತಿಳಿದುಬರುತ್ತದೆ.

ಅವಿದಾರಣೇಽಪಿ ಹ್ಯಾಸ್ಯಸ್ಯ ಭಿನ್ನಾವೋಷ್ಠೌ ಚ ತಸ್ಯ ಚ ।

ಅತ ಉನ್ಮತ್ತವಾಕ್ಯತ್ವಾನ್ಮಾಯಾವಾದೋ ಹ್ಯುಪೇಕ್ಷಿತಃ ।।೧೪೯।।

ಮಾಯಾವಾದಿಯು ನಿರುತ್ತರನಾಗಿ ಬಾಯಿಯನ್ನು ಮುಚ್ಚಿಕೊಂಡಾಗ, ತುಟಿಗಳಿಗೆ ವಿದಾರಣ ಅಂದರೆ ವಿಭಾಗ ಕಂಡುಬರದಿದ್ದರೂ, ಆ ತುಟಿಗಳು ಭೇದವುಳ್ಳವುಗಳೇ ಆಗಿರುತ್ತವೆ. ಆದ್ದರಿಂದ ಲೋಕವಿರುದ್ಧವೂ, ಸ್ವಮತ ಹಾಗೂ ಪರಮತಗಳಿಗೆ ವಿರುದ್ಧವೂ ಆದ ಮಾಯಾವಾದವು ಉನ್ಮತ್ತನ ವಾಕ್ಯದಂತೆ ಸೂತ್ರಕಾರರಿಂದ ಉಪೇಕ್ಷಿತವಾಗಿದೆ.

ಹೀಗೆ ಇಲ್ಲಿಯವರೆಗೆ ಸಮವಾಯವನ್ನು ನಿರಾಕರಿಸಿ, ಈಗ ಸಂಬಂಧ ಪ್ರಸಂಗದಿಂದ ಗುಣ ಮುಂತಾದವುಗಳ ಪ್ರಸಕ್ತಿಯು ಬಂದುದರಿಂದ, ಈಶ್ವರನ ಗುಣಗಳ ವಿಷಯದಲ್ಲಿ ಸಂಖ್ಯಾ ವಿಪ್ರತಿಪತ್ತಿಯನ್ನು 'ನ ಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಾರೆ –

ನ ಚಾಮಂದಸದಾನಂದಸ್ಯಂದ್ಯನಂತಗುಣಾರ್ಣವಃ ।

ಈಶ್ವರೋಽಷ್ಟಗುಣತ್ವೇನ ಪ್ರಮೇಯೋಽಪ್ರಮಿತತ್ವತಃ ।।೧೫೦।।

ಈಶ್ವರನಲ್ಲಿ ಎಂಟೇ ಗುಣಗಳುಂಟು ಎಂಬುದಾಗಿ ಈಶ್ವರನನ್ನು ತಿಳಿಯಬಾರದು. ಏಕೆಂದರೆ ಈಶ್ವರನಿಗೆ ಎಂಟೇ ಗುಣಗಳು ಎಂಬುದಕ್ಕೆ ಪ್ರಮಾಣವಿಲ್ಲ. ಆದರೆ ಈಶ್ವರನು ಕ್ಷೀರ ಸಮುದ್ರದಂತೆ ನಿರತಿಶಯ ನಿರ್ದುಷ್ಟ ಆನಂದವನ್ನು ಹರಿಸುವವನೂ, ಅನಂತ ಗುಣಗಳುಳ್ಳವನೂ ಎಂದು ತಿಳಿಯತಕ್ಕದ್ದು. ಕ್ಷೀರಸಮುದ್ರವು ಅಮೃತವನ್ನು ಹರಿಸುವಂತೆ ಈಶ್ವರನು ಅಮಿತವೂ ನಿರ್ದೋಷವೂ ಆದ ಆನಂದಾಮೃತವನ್ನು ಹರಿಸುವನು. ಕ್ಷೀರ ಸಮುದ್ರವು ಚಿಂತಾಮಣಿ ಮುಂತಾದ ಶುಭಕರವಾದ ಪದಾರ್ಥಗಳನ್ನು (ಗುಣಗಳನ್ನು) ಹೊಂದಿರುವಂತೆ ಈಶ್ವರನು ಅಪರಿಮಿತವಾದ ಆನಂದಾದಿ ಗುಣಗಳಿಂದ ಕೂಡಿರುವನು. ಎಂದು ತಾತ್ಪರ್ಯ.

ಮಯ್ಯನಂತಗುಣೇऽನಂತೇ ಗುಣತೋऽನಂತವಿಗ್ರಹೇ ।

ಅನಂತಗುಣಮಾಹಾತ್ಮ್ಯಶಕ್ತಿಜ್ಞಾನಮಹಾರ್ಣವಃ ॥೧೫೧॥

ನಾರಾಯಣಃ ಪರೋऽಶೇಷಚೇತನೇಭ್ಯಃ ಪರಂ ಪದಮ್ ।

"ಪ್ರತ್ಯೇಕವಾಗಿ ನಿರವಧಿಕವೂ ಅನಂತವೂ ಆದ ಅಸಂಖ್ಯಾತ ಗುಣವುಳ್ಳ ಹಾಗೂ ಅನಂತ ರೂಪವಿಶೇಷಗಳಿಂದ ಕೂಡಿದ ನನ್ನಲ್ಲಿ" ಎಂಬುದಾಗಿ ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ತನ್ನ ಬಗ್ಗೆ ಹೇಳಿದ್ದಾನೆ. ಅದರ ಮುಂದಿನದು ಶ್ರುತಿವಾಕ್ಯ. ಅಪರಿಮಿತ ಪರಿಮಾಣದ ಅಪರಿಮಿತ ಗುಣವಿಶೇಷಗಳಿಂದ ಕೂಡಿರುವ, ಶಕ್ತಿ ಜ್ಞಾನಾದಿಗಳ ಮಹಾ ಸಮುದ್ರನಾದ ಸರ್ವೋತ್ತಮನಾದ ನಾರಾಯಣನು ಎಲ್ಲ ಚೇತನರಿಗಿಂತ ಉತ್ತಮನು.

ಇತ್ಯಾದಿವೇದತದ್ವಾಕ್ಯೈರನಂತೈಶ್ಚಾವಸೀಯತೇ ॥೧೫೨॥

ಅನಂತಾಗುಣತಾ ವಿಷ್ಣೋಃ ಕಥಮೇವ ಹ್ಯಪೋದ್ಯತೇ ।

ಈ ಪ್ರಕಾರವಾಗಿ ಭಗವದ್ಗೀತೆ, ಭಾಗವತ ಹಾಗೂ ವೇದವಾಕ್ಯಗಳಿಂದ ನಾರಾಯಣನ ಅನಂತಗುಣಪೂರ್ಣತೆಯು ನಿಶ್ಚಯವಾಗುತ್ತದೆ. ಹೀಗೆ ಪ್ರಮಾಣಗಳಿಂದ ನಿರ್ಣೀತವಾದ ವಿಷ್ಣುವಿನ ಅನಂತಗುಣಪೂರ್ಣತೆಯನ್ನು ಅಲ್ಲಗಳೆಯಲು ಹೇಗೆ ಸಾಧ್ಯ?

ಯದ್ಯನಂತವಿಶೇಷಾಶ್ಚ ತಜ್ಜ್ಞಾನಾದೇವ ನಿವಾರಿತಾಃ ॥೧೫೩॥

ಕಥಂ ತತ್ತದ್ವಿಷಯತಾ ಸಾರ್ವಜ್ಞಾರ್ಥಂ ವಿಧೀಯತೇ ।

ಒಂದು ಪಕ್ಷದಲ್ಲಿ ಈಶ್ವರನ ಜ್ಞಾನಾದಿಗಳಿಗೆ ಅನಂತ ವಿಶೇಷಗಳನ್ನು ನಿರಾಕರಿಸುವುದಾದರೆ, ಆಗ ಈಶ್ವರನ ಸಾರ್ವಜ್ಞತ್ವದ ನಿರ್ಣಯಕ್ಕಾಗಿ ಘಟಪಟಾದಿ

ಸಮಸ್ತವಸ್ತುವಿಷಯಕ ಜ್ಞಾನವು ಈಶ್ವರನಲ್ಲಿ ಇರುವುದೆಂದು ಅಂಗೀಕರಿಸುವುದು ಹೇಗೆ?

ಜ್ಞಪ್ತಿರೂಪವಾದ ಈಶ್ವರನ ಜ್ಞಾನವು ನಿರ್ವಿಶೇಷವೇ. ಆದರೆ ಅದು ಆಯಾಯ ಘಟ ಮುಂತಾದ ಉಪಾಧಿಗಳಿಂದ ಆಯಾಯ ವಿಷಯಕವೆನಿಸುತ್ತದೆ. ಇದರಂತೆಯೇ ಕೃತಿರೂಪ ಪ್ರಯತ್ನವೂ ನಿರ್ವಿಶೇಷವೇ ಆಗಿದ್ದರೂ ಸೃಷ್ಟ್ಯಾದಿ ಉಪಾಧಿ ನಿಮಿತ್ತವಾಗಿ ಆಯಾಯ ವಿಷಯಕವೆನಿಸುತ್ತದೆ. ಆದುದರಿಂದ ಸ್ವತಃ ನಿರ್ವಿಶೇಷನಾಗಿದ್ದರೂ ಔಪಾಧಿಕ ವಿಶೇಷಗಳಿಂದ ಸರ್ವಜ್ಞತ್ವ ಮುಂತಾದುದು ಯುಕ್ತವಾಗುತ್ತದೆ. ಹೀಗೆ ಆಕ್ಷೇಪಿಸಿದರೆ –

ಔಪಾಧಿಕವಿಶೇಷಸ್ತು ಪೂರ್ವಮೇವ ನಿರಾಕೃತಃ ||೧೫೪||

ಔಪಾಧಿಕವಾದ ವಿಶೇಷವಾದರೂ ಇದೆಯೋ ಇಲ್ಲವೋ? ಇದ್ದರೆ ನಿರ್ವಿಶೇಷತ್ವವು ಹೇಗೆ? ಇಲ್ಲವಾದರೆ ಮತ್ತೆ ಸರ್ವಜ್ಞತ್ವಾದಿಗಳಿಲ್ಲವೆಂಬ ಪ್ರಸಂಗವು ಬರುತ್ತದೆ. ಹೀಗೆ ಹಿಂದೆ ಹೇಳಿದ ಯುಕ್ತಿಯಿಂದಲೇ ಔಪಾಧಿಕ ವಿಶೇಷವೆಂಬುದು ನಿರಾಕರಿಸಲ್ಪಟ್ಟಿದೆ.

ವೈಶೇಷಿಕಾದಿಗಳೇ ಮೊದಲಾದ ಕೆಲವರು ಈಶ್ವರನ ಜ್ಞಾನವು ಸ್ವಪ್ರಕಾಶವಲ್ಲ ಎಂದು ಹೇಳುತ್ತಾರೆ. ಅದನ್ನು ಮುಂದಿನ ವಚನದಿಂದ ನಿರಾಕರಿಸುತ್ತಾರೆ –

ಸ್ವಪ್ರಕಾಶತ್ವಮಪಿ ತು ಯೈರ್ಜ್ಞಾನಸ್ಯ ನಿವಾರಿತಮ್ ।

ಕಥಂ ಸರ್ವಜ್ಞತಾ ತಸ್ಯ ಸ್ವಜ್ಞಾನಾಧಿಗಮಂ ವಿನಾ ||೧೫೫||

ಯಾರು ಈಶ್ವರನಿಗೆ ಸ್ವಪ್ರಕಾಶತ್ವವನ್ನು ಒಪ್ಪುವುದಿಲ್ಲವೋ ಅಂಥವರ ಮತದಲ್ಲಿ, ಈಶ್ವರನಿಗೆ ತನ್ನ ಜ್ಞಾನದ ಜ್ಞಾನವು ಇಲ್ಲದಿರುವುದರಿಂದ, ಸರ್ವಜ್ಞತೆಯು ಹೇಗೆ? ಅಂದರೆ ಅವರ ಮತದ ಪ್ರಕಾರ ಈಶ್ವರನಿಗೆ ಸರ್ವಜ್ಞತೆಯು ಇಲ್ಲವೆಂದಾಗುವುದು.

ಇನ್ನು ಈಶ್ವರನಿಗೆ ಸ್ವವಿಷಯಕ ಜ್ಞಾನವಿಲ್ಲದಿದ್ದರೂ ಸರ್ವಜ್ಞತ್ವವು ಸಂಭವಿಸುವುದು ಎಂಬುದಾಗಿ 'ಜ್ಞಾನಂ' ಇತ್ಯಾದಿ ವಾಕ್ಯದಿಂದ ಅವರ ಆಶಂಕೆಯನ್ನು ತಿಳಿಸುತ್ತಾರೆ –

ಜ್ಞಾನಂ ವಿಶ್ವಾಧಿಗಂ ತ್ವೇಕಂ ತಜ್ಜ್ಞಾನವಿಷಯಂ ಪರಮ್ ।

ಇತಿ ಜ್ಞಾನದ್ವಯೇನೈವ ಸರ್ವವಿತ್ಪರಮೇಶ್ವರಃ ||೧೫೬||

ಈಶ್ವರನಲ್ಲಿ ಎರಡು ಬಗೆಯ ಜ್ಞಾನವಿರುವುದು. ತನ್ನನ್ನು ಹೊರತು ಪಡಿಸಿ ಉಳಿದ ಸಮಸ್ತ ಪ್ರಪಂಚದ ಜ್ಞಾನವು ಒಂದು. ಆ ಜ್ಞಾನವಿಷಯಕವಾದ ಜ್ಞಾನವು

ಇನ್ನೊಂದು. ಈ ರೀತಿಯ ಜ್ಞಾನದ್ವಯದಿಂದ ಪರಮೇಶ್ವರನು ಸರ್ವಜ್ಞನೆನಿಸುವನು.

ಇತಿ ಚೇದೇಷ ಏವಾರ್ಥಸ್ತಜ್ಜ್ಞಾನಾವಸಿತೋ ಯದಿ ।

ಸ್ವಪ್ರಕಾಶತ್ವಮೇವ ಸ್ಯಾಜ್ಞಾನಂ ಹ್ಯೇತದ್ವಿಶೇಷಣಮ್ ।।೧೫೭।।

ಜ್ಞಾನಾಂತರೇಣ ಚೇದತ್ರ ಭವೇದೇವಾನವಸ್ಥಿತಿಃ ।

ಸ್ವಪ್ರಕಾಶತ್ವಮೇತಸ್ಮಾದ್ದುರ್ನಿವಾರಂ ಸಮಾಪತೇತ್ ।।೧೫೮।।

ಹೀಗೆ ಆಶಂಕಿಸಿದರೆ, 'ಜ್ಞಾನದ್ವಯವುಳ್ಳವನು ನಾನು' ಮುಂತಾದ ಅರ್ಥವೇ ಇವೆರಡರಲ್ಲಿ ಒಂದು ಜ್ಞಾನದಿಂದ ವಿಷಯೀಕರಿಸಲ್ಪಡುವುದಾದರೆ, ಆಗ ಆ ಜ್ಞಾನಕ್ಕೆ ಸ್ವಪ್ರಕಾಶತ್ವವು ಬಂದೇ ಬರುತ್ತದೆ. ಹೇಗೆಂದರೆ, ಈ ಜ್ಞಾನವು ಜ್ಞಾನವಿಷಯವಾದ ಅರ್ಥಕ್ಕೆ ವಿಶೇಷಣವಾಗುವುದು. ಒಂದು ಪಕ್ಷ ಮೂರನೆಯ ಜ್ಞಾನದಿಂದ ಈ ಅರ್ಥವು ವಿಷಯೀಕರಿಸಲ್ಪಡುವುದೆಂದು ಅಂಗೀಕರಿಸಿದರೆ ಅನವಸ್ಥಾ ದೋಷವು ಬಂದೇ ಬರುತ್ತದೆ. ಈ ಕಾರಣದಿಂದ ಸ್ವಪ್ರಕಾಶತ್ವವು ಅನಿವಾರ್ಯವಾಗಿ ಬಂದೇ ಬರುತ್ತದೆ. ಇನ್ನು ಈಶ್ವರನ ಜ್ಞಾನವನ್ನು ಅನಂತಗಳೆಂದು ಒಪ್ಪುತ್ತೇನೆ, ಆದರಲ್ಲಿ ದೋಷವೇನು ಎಂಬುದು ಸರಿಯಲ್ಲ. ಏಕೆಂದರೆ ಕಲ್ಪನಾಗೌರವವು ಪ್ರಾಪ್ತವಾಗುತ್ತದೆ. ಆದ್ದರಿಂದ ಒಂದೇ ಜ್ಞಾನಕ್ಕೆ ಸ್ವಪ್ರಕಾಶತ್ವವನ್ನು ಒಪ್ಪುವುದು ಉತ್ತಮ ಎಂದು ಅಭಿಪ್ರಾಯ.

ಇನ್ನು ಈಶ್ವರನು ಅನಂತಗುಣವುಳ್ಳವನು ಎನ್ನುವುದು ಯುಕ್ತವಲ್ಲ. ಏಕೆಂದರೆ ಇಪ್ಪತ್ತನಾಲ್ಕು ಗುಣಗಳಿಗಿಂತ ಹೆಚ್ಚಿನ ಗುಣಗಳು ಅಸಂಭವ. ಅವುಗಳಲ್ಲಿಯೂ ಸುಖ ದುಃಖಾದಿ ಕೆಲವು ಗುಣಗಳು ಈಶ್ವರನಲ್ಲಿ ಸಂಭವಿಸುವುದಿಲ್ಲ. ಈಶ್ವರನು ಸುಖವುಳ್ಳವನಾದರೆ ದುಃಖವುಳ್ಳವನೂ ಆಗಬೇಕಾಗುವುದು. ಆದ್ದರಿಂದ ಈಶ್ವರನು ಸುಖರಹಿತನು, ದುಃಖರಹಿತನಾಗಿರುವುದರಿಂದ, ಘಟವು ದೃಷ್ಟಾಂತವು. ಈ ರೀತಿಯ ಅನುಮಾನವನ್ನು 'ಸುಖವಾನ್' ಇತ್ಯಾದಿ ವಚನದಿಂದ ದೂಷಿಸುತ್ತಾರೆ –

ಸುಖವಾನ್ ದುಃಖವಾಂಶ್ಚ ಸ್ಯಾದಿತಿ ವ್ಯಾಪ್ತಿಶ್ಚ ನೋ ಭವೇತ್ ।

ನಿರ್ದುಃಖತ್ವಂ ಮಹಾನಂದಃ ಶ್ರುತ್ಯೈವೇಶಸ್ಯ ಭಣ್ಯತೇ ।।೧೫೯।।

ಸುಖವುಳ್ಳವನು ದುಃಖವುಳ್ಳವನೂ ಆಗಲಿ ಎಂಬ ವ್ಯಾಪ್ತಿಯು ಇರುವುದಿಲ್ಲ. ಈಶ್ವರನಿಗೆ ನಿರ್ದುಃಖತ್ವವೂ ಪರಿಪೂರ್ಣವಾದ ಆನಂದವತ್ವವೂ ಶ್ರುತಿಯಿಂದಲೇ ವರ್ಣಿತವಾಗಿದೆ. ಆ ಶ್ರುತಿಯು ಯಾವುದೆಂದರೆ –

ಯೋಽಶನಾಯಾಪಿಪಾಸೇ ಚ ಶೋಕಾದೀಂಶ್ಚಾತಿವರ್ತತೇ ।

ಆನಂದಂ ಬ್ರಹ್ಮಣೋ ವಿದ್ವಾನ್ವಿಪಾಪ್ಮೇತ್ಯಾದಿಕಾ ಚ ಸಾ ।।೧೬೦।।

ಯೋऽಶನಾಯಾ ಎಂಬುದರಿಂದ 'ಯೋऽಶನಾಯಾ ಪಿಪಾಸೇ ಶೋಕಂ ಮೋಹಂ ಜರಾಂ ಮೃತ್ಯುಮತ್ಯೇತಿ' ಎಂಬ ಶ್ರುತಿಯನ್ನು ಸಂಗ್ರಹಿಸಿದ್ದಾರೆ. ಈಶ್ವರನು ಹಸಿವು ನೀರಡಿಕೆ ಶೋಕ ಮುಂತಾದವನ್ನು ಅತಿಕ್ರಮಿಸಿದವನು ಎಂಬುದಾಗಿ ಈ ಶ್ರುತಿಯು ಹೇಳುತ್ತದೆ. 'ಆನಂದಂ ಬ್ರಹ್ಮಣೋ ವಿದ್ವಾನ್' ಎಂಬ ಶ್ರುತಿಯು ಬ್ರಹ್ಮನಿಗೆ ಆನಂದವನ್ನು ಹೇಳುತ್ತದೆ. 'ಯ ಆತ್ಮಾ ಅಪಹತಪಾಪ್ಮಾ' ಎಂಬ ಶ್ರುತಿಯು ಬ್ರಹ್ಮನು ಪಾಪರಹಿತನಾದವನು ಎಂದು ಹೇಳುತ್ತದೆ.

ಈಶ್ವರಸ್ಯ ತಥೇಷ್ಟತ್ವಂ ದುಃಖಿತ್ವೋಪಾಧಿರಿತ್ಯಪಿ ।

ಉಕ್ತೇ ಕಿಮುತ್ತರಂ ಬ್ರೂಯಾತ್ ಶ್ರುತ್ಯನಾದರತತ್ಪರಃ ।।೧೬೧।।

ನ ಚಾತ್ಮದುಃಖಿತೇಚ್ಛಾ ಸ್ಯಾದತ ಏತನ್ನಿವಾರ್ಯತೇ ।

ದುಃಖಿತ್ವವು ಇರಲಿ ಎಂಬ ಇಷ್ಟತ್ವವು, ಅಂದರೆ ಇಚ್ಛಾ ವಿಷಯತ್ವವು, ಈಶ್ವರನಿಗೆ ದುಃಖಿತ್ವ ಪ್ರಯೋಜಕವು. (ಅಪಿ ಶಬ್ದದಿಂದ ಅಧರ್ಮಾದಿಗಳೂ ದುಃಖಿತ್ವ ಪ್ರಯೋಜಕವು ಎಂಬುದನ್ನು ಗ್ರಹಿಸಬೇಕು). ಹೀಗೆ ಹೇಳಿದರೆ ಶ್ರುತಿಯ ಅನಾದರದಲ್ಲಿ ತತ್ಪರನಾದವನು ಏನೆಂದು ಉತ್ತರವನ್ನು ಹೇಳಬೇಕು? (ಬಾಧಕವಿಲ್ಲದೇ ತೋರಿದ ಅರ್ಥವನ್ನು ಪರಿತ್ಯಜಿಸುವುದೇ ಅನಾದರವು.)

ಈಶ್ವರನ ವಿಷಯದಲ್ಲಿ 'ಆನಂದೋ ಬ್ರಹ್ಮಣೋ ವಿದ್ವಾನ್' ಇತ್ಯಾದಿ ಶ್ರುತಿಗಳಿರುವುದರಿಂದ, ಸುಖಿತ್ವವು ಇದ್ದರೂ ಉಪಾಧಿಯು ಇರುವುದಿಲ್ಲ. ಯಾವನಿಗೂ ತನಗೆ ದುಃಖಿತ್ವವು ಬರಲಿ ಎಂಬ ಇಚ್ಛೆಯು ಇಲ್ಲದಿರುವುದರಿಂದ, ದುಃಖಿತ್ವವು ಬರಲಿ ಎಂಬ ಇಚ್ಛಾವಿಷಯತ್ವರೂಪ ಉಪಾಧಿಯೂ ನಿರಾಕೃತವಾಗುತ್ತದೆ.

ಹಾಗಾದರೆ 'ಆನಂದಂ' ಇತ್ಯಾದಿ ಶ್ರುತಿಯು ಈಶ್ವರನಿಗೆ ಸುಖವನ್ನು ಹೇಳುವುದಿಲ್ಲ. ಏಕೆಂದರೆ ಅದು ದುಃಖದ ಅಭಾವರೂಪವಾಗಿದೆ. ಏಕೆಂದರೆ ಈಶ್ವರನು ಸುಖಿಯಾದರೆ ದುಃಖಿಯೂ ಆಗಬೇಕಾದೀತು. ಹೀಗೆ ಆಶಂಕಿಸಿದರೆ –

ಸಹದರ್ಶನಮಾತ್ರೇಣ ಶ್ರುತೀನಾಮಪಲಾಪಕಃ ।।೧೬೨।।

ಯಜ್ಞಾದೇರಪಿ ಪಾಪಸ್ಯ ಹೇತುತ್ವಂ ಹಿಂಸಯಾ ಯುತೇಃ ।

ನಾನುಮಾತಿ ಕಥಂ ತತ್ರ ಯದ್ಯುಪಾಧಿರ್ನಿಷಿದ್ಧತಾ ।।೧೬೩।।

ಅದುಃಖಿತ್ವೇನ ಚಾನುಕ್ತಿಃ ಕಥಂ ನೋಪಾಧಿತಾಂ ವ್ರಜೇತ್ ।

ಸಾಧ್ಯದಿಂದ ಸಾಧನಕ್ಕೆ ಸಾಮಾನಾಧಿಕರಣ್ಯ ದರ್ಶನವೇ ಸಹದರ್ಶನ ಎನಿಸುತ್ತದೆ. ಇಂಥಹ ಸಹದರ್ಶನ ಮಾತ್ರದಿಂದಲೇ ಈಶ್ವರನಿಗೆ ಆನಂದವನ್ನು

ಪ್ರತಿಪಾದಿಸುವ ಶ್ರುತಿಗಳಿಗೆ ಸ್ವಾರ್ಥವನ್ನು ಪರಿತ್ಯಾಗ ಮಾಡುವುದು ಸರಿಯಲ್ಲ. ಹೀಗೆ ಅಪಲಾಪ ಮಾಡುವವನು ಹಿಂಸಾದಿ ಪಾಪಯುಕ್ತವಾದುದೆಂಬ ಯುಕ್ತಿಯಿಂದ ಯಜ್ಞಾದಿಗಳಿಗೂ ಪಾಪಸಾಧನತ್ವವನ್ನು ಅನುಮೇಯಿಸುವುದಿಲ್ಲ ಏಕೆ? ಪಾಪಸಾಧನತ್ವದಲ್ಲಿ ನಿಷಿದ್ಧತ್ವವು ಉಪಾಧಿಯಾದರೆ, ಅದುಃಖಿಯೆಂದು ಹೇಳದಿರುವುದು ಅಂದರೆ ದುಃಖಿಯೆಂಬ ಉಕ್ತಿಯು ಕೂಡ ಇಲ್ಲಿ ಉಪಾಧಿಯು ಹೇಗೆ ಆಗಲಾರದು?

ಜೀವರಿಗೆ ದುಃಖಿತ್ವೇನ ಉಕ್ತಿಯು ಯಾವ ಶ್ರುತಿವಾಕ್ಯದಿಂದ ತಿಳಿದುಬರುತ್ತದೆ ಎಂದರೆ ಅದನ್ನು ಹೇಳುತ್ತಾರೆ –

ಅದುಃಖಮಿತರತ್ಸರ್ವಂ ಜೀವಾ ಏವ ತು ದುಃಖಿನಃ ॥೧೬೪॥

ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ ।

ಇತಿ ಶ್ರುತಿರ್ಹಿ ಪರಮಾ ಶ್ರುತ್ಯುಕ್ತಿರ್ಯದಿ ಕಾರಣಮ್ ॥೧೬೫॥

ಕಿಂ ಕಾರ್ಯಮನುಮಾನೇನ ಗಲಸ್ತನಸಮೇನ ಹಿ ।

ಜೀವವ್ಯತಿರಿಕ್ತವಾದುದೆಲ್ಲವೂ ದುಃಖರಹಿತವು. ಜೀವರೇ ದುಃಖಿಗಳು. ಅವರ ದುಃಖ ಪರಿಹಾರಕ್ಕಾಗಿ ಈ ಶ್ರುತಿಯು ದುಃಖ ಪರಿಹಾರ ಸಾಧನವಾದ ಪರಮಾತ್ಮನನ್ನು ಪ್ರತಿಪಾದಿಸುತ್ತದೆ ಎಂದು ಪರಮಶ್ರುತಿಯು ಹೇಳುತ್ತದೆ.

ಶ್ರುತಿವಚನವು ಯಥಾರ್ಥಜ್ಞಾನಕ್ಕೆ ಕಾರಣವಾದ ಪಕ್ಷದಲ್ಲಿ, ಅಜಾಗಲಸ್ತನಕ್ಕೆ ಸದೃಶವಾದ ಅನುಮಾನದಿಂದ ಪ್ರಯೋಜನವೇನು? (ಆಡಿನ ಕುತ್ತಿಗೆಯಿಂದ ಕೆಳಗೆ ಜೋತುಬಿದ್ದಿರುವ ತೊಗಲಿನಿಂದ ಏನೂ ಪ್ರಯೋಜನವಿಲ್ಲ. ಅದರಂತೆಯೇ ಈ ಅನುಮಾನವು ವ್ಯರ್ಥವೆಂದು ಭಾವ) 'ಈಶ್ವರನು ನಿರ್ದುಃಖನಾದ್ದರಿಂದ ಸುಖಿಯಲ್ಲ, ಘಟದಂತೆ' ಎಂಬ ಅನುಮಾನವು 'ಆನಂದಂ ಬ್ರಹ್ಮಣೋ ವಿದ್ವಾನ್' ಇತ್ಯಾದಿ ಶ್ರುತಿಯಿಂದ ಬಾಧಿತವಾಗುವುದು. ಆದ್ದರಿಂದ ವಿವಕ್ಷಿತಾರ್ಥಕ್ಕೆ ಸಾಧಕವಾಗದ ಅನುಮಾನವು ಉಪೇಕ್ಷಣೀಯವೆಂದು ಭಾವ.

ಇನ್ನು ಶ್ರುತಿಯು ಪ್ರಮಾಣವೇ. ಆದರೆ ಅನುಮಾನಕ್ಕೆ ವಿರುದ್ಧವಾದುದರಿಂದ ತೋರಿದ ಅರ್ಥವನ್ನು ಪರಿತ್ಯಾಗಮಾಡಿ, ದುಃಖಾಭಾವ ಪರವಾಗಿ 'ಆನಂದಂ' ಇತ್ಯಾದಿ ಶ್ರುತಿಯ ವ್ಯಾಖ್ಯಾನವನ್ನು ಮಾಡಬೇಕು ಎಂದು ಆಶಂಕಿಸಿದರೆ –

ಅನುಮಾನೇನ ಯದ್ಯರ್ಥಃ ಶ್ರುತಿದೃಷ್ಟೋಽಪ್ಯಪೋದ್ಯತೇ ॥೧೬೬॥

ಪೂರ್ವೋಕ್ತೇನ ಪ್ರಕಾರೇಣ ನೇಶ್ವರೋ ಧರ್ಮ ಏವ ಚ ।

ಸ್ಯಾತ್ತತ್ಫಲಂ ಚ ತೇನಾತ್ರ ಶ್ರುತಿರೇವ ಪ್ರಮಾ ಭವೇತ್ ॥೧೬೭॥

ಶ್ರುತಿಸಿದ್ಧವಾದ ಅರ್ಥವನ್ನು ಅನುಮಾನದಿಂದ ನಿರಾಕರಿಸುವ ಪಕ್ಷದಲ್ಲಿ, ಹಿಂದೆ ಹೇಳಿದ ಪ್ರಕಾರದಿಂದ (ಶಾಸ್ತ್ರಯೋನಿತ್ವಾಧಿಕರಣದಲ್ಲಿ 'ಪುಂಸ್ತ್ವಹೇತು ಬಲಾದೇವ' ಎಂದು ಆಚಾರ್ಯರಿಂದ ಹೇಳಲ್ಪಟ್ಟ 'ಈಶ್ವರಃ ನ ಜಗತ್ಕರ್ತಾ ಪುಂಸ್ತ್ವಾತ್ ದೇವದತ್ತವತ್' ಎಂಬ ಅನುಮಾನದಿಂದ) ಈಶ್ವರನೂ, ಧರ್ಮವೂ ಹಾಗೂ ಅದರ ಫಲವೂ ಇಲ್ಲದೇ ಹೋಗಲಿ. ಹೀಗೆ ಅನಿಷ್ಟವು ಬರುವ ಕಾರಣದಿಂದ, ಈಶ್ವರನ ಆನಂದಾದಿ ವಿಷಯದಲ್ಲಿ ಶ್ರುತಿಯೇ ಪ್ರಮಾಣವಾಗುತ್ತದೆ. ಅನುಮಾನವು ಶ್ರುತಿಗೆ ಬಾಧಕವಾದುದು ಎಲ್ಲಿಯೂ ಕಂಡಿಲ್ಲ. ಇನ್ನು ಶ್ರುತಿಯಿಂದಲೇ ಅನುಮಾನವು ಬಾಧಿತವಾಗುವುದು.

ಹಾಗಾದರೆ ಶ್ರುತಿಯು ಅಪ್ರಮಾಣವಾಗದಿರಲಿ ಮತ್ತು ಅದಕ್ಕೆ ಅನುಮಾನದ ಬಾಧದಿಂದ ಅರ್ಥಾಂತರವೂ ಬೇಡ. ಆದರೂ ಅದು ಅನುಮಾನಕ್ಕೆ ಬಾಧಕವೇಕೆ? ಸಮಬಲವಾದ್ದರಿಂದ ಪ್ರತಿರೋಧಕವಾದರೂ ಆಗಬಹುದು. ಹೀಗೆ ಆಶಂಕಿಸಿದರೆ –

ಈಶಸ್ಯಾನುಮಯಾ ಸಿದ್ಧೇಃ ಶ್ರುತಿರ್ಧರ್ಮಿಪ್ರಮಾ ಭವೇತ್ ।

ಶ್ರುತಿಯಿಂದ ಬೇರೆಯಾದ ಪ್ರಮಾಣದಿಂದ ಈಶ್ವರನಿಗೆ ಸಿದ್ಧಿಯಿಲ್ಲವು. ಆದ್ದರಿಂದ ಶ್ರುತಿಯು ಧರ್ಮಿಗ್ರಾಹಕ ಪ್ರಮಾಣವಾಗುವುದು. ಅನುಮಾನವು ಪ್ರಮಾಣಾಂತರದಿಂದ ಸಿದ್ಧವಾದ ಧರ್ಮಿಯ ಬಗ್ಗೆ ಪ್ರವೃತ್ತವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಇಲ್ಲಿ ಈಶ್ವರನು ಧರ್ಮಿಯು. ಅವನು ಅನುಮಾನ ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ಸಿದ್ಧಿಸುವುದಿಲ್ಲ. ಈಶ್ವರನ ವಿಷಯದಲ್ಲಿ ಶ್ರುತಿಯೊಂದೇ ಪ್ರಮಾಣವು.

ತಯಾ ಸರ್ವಗುಣೈಃ ಪೂರ್ಣ ಈಶ ಉಕ್ತೋ ಯತಸ್ತತಃ ॥೧೬೮॥

ಅನಾನಂದಾನುಮಾನಸ್ಯ ಧರ್ಮಿಗ್ರಾಹಿವಿರೋಧತಃ ।

ನ ಪ್ರಮಾಣಂ ಭವೇತ್ತಸ್ಮಾನ್ನಾನುಮಾತ್ರೋಪಯೋಗಿನೀ ॥೧೬೯॥

ಆ ಶ್ರುತಿಯು ಶ್ರೀಹರಿಯನ್ನು ಸಮಸ್ತಗುಣಗಳಿಂದ ಪೂರ್ಣನೆಂದು ಹೇಳುತ್ತದೆ. ಆದ್ದರಿಂದ ಈಶ್ವರನಿಗೆ ದುಃಖಿತ್ವಸಾಧಕ ಅನುಮಾನಕ್ಕೆ ಧರ್ಮಿಸ್ವರೂಪ ಗ್ರಾಹಕವಾದ ಶ್ರುತಿಯಿಂದ ವಿರೋಧವು ಬರುವುದರಿಂದ, ಅದು ಪ್ರಮಾಣವಾಗಲಾರದು. ಈಶ್ವರನ ವಿಷಯದಲ್ಲಿ ಪ್ರಯೋಜನವೂ ಆಗಲಾರದು.

ವೈಶೇಷಿಕಾದಿ ದರ್ಶನದಲ್ಲಿ ಮತ್ತೊಂದು ಯುಕ್ತಿವಿರೋಧವೆಂಬ ದೋಷವನ್ನು ತೋರಿಸುತ್ತ 'ನಿತ್ಯಮೇವ ಚ ಭಾವಾತ್' ಎಂಬ ಸೂತ್ರವನ್ನು 'ನಿತ್ಯೇಚ್ಛತ್ವಾತ್' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ನಿತ್ಯೇಚ್ಛತ್ವಾತ್ಪರೇಶಸ್ಯ ಪರಮಾಣುಸದಾತ್ವತಃ ।

ಅದೃಷ್ಟಕಾಲಯೋಶ್ಚೈವ ಭಾವಾತ್ಕಾರ್ಯಂ ಸದಾ ಭವೇತ್ ॥೧೭೦॥

ಈಶ್ವರನು ನಿತ್ಯವಾದ ಇಚ್ಛೆಯುಳ್ಳವನಾದ್ದರಿಂದ, ಪರಮಾಣುಗಳು ಯಾವಾಗಲೂ ಇರುವಂಥವಾದ್ದರಿಂದ ಹಾಗೂ ಅದೃಷ್ಟ ಕಾಲ ಇವುಗಳಿಗೆ ಪ್ರಲಯದಲ್ಲಿಯೂ ಸ್ಥಿತಿಯು ಇರುವುದರಿಂದ, ವೈಶೇಷಿಕರ ಪ್ರಕಾರ ಕಾರ್ಯವು ಯಾವಾಗಲೂ ಆಗಬೇಕಾಗುವುದು.

ಈಶ್ವರನ ಇಚ್ಛೆಯು ನಿತ್ಯವಾಗಿದ್ದರೂ ಕಾಲಾದಿಗಳು ನಿತ್ಯವೇ ಆಗಿದ್ದರೂ ನಿತ್ಯವೂ ಸೃಷ್ಟ್ಯಾದಿ ಕಾರ್ಯವು ಆಗಬೇಕಿಲ್ಲ ಎಂದು ಹೇಳುತ್ತಾರೆ –

ನ ಹಿ ಕಾಲವಿಭೇದೋಽಸ್ತಿ ತತ್ಪಕ್ಷೇ ಅಸ್ಮನ್ಮತೇ ಹರೇಃ ।

ವಿಶೇಷಕಾಲ ಏವೈತತ್ಸೃಷ್ಟ್ಯಾದೀಚ್ಛಾ ಸದಾತನಾ ॥೧೭೧॥

ವೈಶೇಷಿಕರ ಮತದಲ್ಲಿ ಕಾಲ ಆಕಾಶ ದಿಕ್ಕುಗಳು ಒಂದೊಂದೇ ಇರುವುದು. ಕಾಲವಿಶೇಷ ಇತ್ಯಾದಿ ಅವಾಂತರ ಪ್ರಭೇದಗಳನ್ನು ಅವರು ಒಪ್ಪುವುದಿಲ್ಲ. ಆದರೆ ನಮ್ಮ ಮತದಲ್ಲಿ ಹರಿಯ ಇಚ್ಛೆಯು ಯಾವಾಗಲೂ ಇರುವಂಥಹದು. ಆದರೂ ವಿಶೇಷ ಕಾಲದಲ್ಲಿಯೇ ಈ ಮಹದಾದಿಗಳು ಸೃಷ್ಟಿಯು ಆಗುವುದು ಎಂಬ ಹರಿಯ ಇಚ್ಛೆಗೆ ಅನುಸಾರವಾಗಿ ಸೃಷ್ಟ್ಯಾದಿ ಕಾರ್ಯಗಳು ಆಗುವುವು.

ವಿಶೇಷಾಶ್ಚೈವ ಕಾಲಸ್ಯ ಹರೇರಿಚ್ಛಾವಶಾಃ ಸದಾ ।

ಸರ್ವೇ ನಿಮೇಷಾ ಇತಿ ಹಿ ಶ್ರುತಿರೇವಾಹ ಸಾದರಮ್ ॥೧೭೨॥

ಕೇವಲ ಮಹದಾದಿಗಳೇ ಅಲ್ಲ, ಆದರೆ ಕಾಲದ ವಿಶೇಷಗಳಾದ ಕ್ಷಣ ಲವಾದಿಗಳೂ ಸಹ ಯಾವಾಗಲೂ ಶ್ರೀಹರಿಯ ಇಚ್ಛೆಯ ಅಧೀನವಾಗಿಯೇ ಇರುತ್ತವೆ. 'ಸರ್ವೇ ನಿಮೇಷಾ ಜಜ್ಞಿರೇ' ಎಂಬ ಶ್ರುತಿಯೇ ಕಾಲವಿಶೇಷಗಳಿಗೆ ಈಶ್ವರನಿಂದ ಉತ್ಪತ್ತಿಯನ್ನು ಸಾದರದಿಂದ ಹೇಳುತ್ತದೆ. ಈ ಶ್ರುತಿಯು ಕಾಲದ ನಿಮೇಷಾದಿ ಉಪಾಧಿಗಳಿಗೆ ಈಶ್ವರನಿಂದ ಉತ್ಪತ್ತಿಯನ್ನು ಹೇಳುತ್ತದೆಯೇ ಹೊರತು ಕಾಲಕ್ಕೆ ಉತ್ಪತ್ತಿಯನ್ನಲ್ಲ. ಸದಾ ಎನ್ನುವ ಶಬ್ದವು ಏಕಕಾಲದಲ್ಲಿ ಎಲ್ಲ ಕ್ಷಣಗಳ ಉತ್ಪತ್ತಿಯೆಂದು ಹೇಳುವುದಿಲ್ಲ, ನಿರಂತರ ಪ್ರವಾಹರೂಪದಿಂದ ಎಂಬ ಅರ್ಥವು ಹೇಳಲ್ಪಡುತ್ತದೆ.

ಇನ್ನು ನಿಮೇಷ ಮುಂತಾದ ಶಬ್ದಗಳು ಕಣ್ಣು ರೆಪ್ಪೆಗಳ ಸಂಯೋಗಾದಿ ವಾಚಕಗಳು, ಸಾಕ್ಷಾತ್ತಾಗಿ ಕಾಲವಾಚಕಗಳಲ್ಲ. ಆದ್ದರಿಂದ ಈ ಶ್ರುತಿಯು ಸ್ಪಷ್ಟವಾಗಿ ಕಾಲಕ್ಕೇ ಈಶ್ವರನಿಂದ ಜನನವನ್ನು ಪ್ರತಿಪಾದಿಸುವುದರಲ್ಲಿ ಸಮರ್ಥವಲ್ಲ ಎಂದು ಆಶಂಕಿಸಿದರೆ, ಈ ಬಗ್ಗೆ ಸ್ಪಷ್ಟವಾದ ಸ್ಮೃತಿಯನ್ನು ಹೇಳುತ್ತಾರೆ –

ಉದೀರಯತಿ ಕಾಲಾಖ್ಯಾಂ ಶಕ್ತಿಮಿತ್ಯಸ್ಯ ವಾಗಪಿ ।

ಉದೀರಯತಿ ಇತ್ಯಾದಿ ವಚನದಿಂದ 'ಸೋಽತಃ ಶರೀರೇರ್ಪಿತ ಭೂತಸೂಕ್ಷ್ಮಃ ಕಾಲಾತ್ಮಿಕಾಂ ಶಕ್ತಿಮುದೀರಯಾನಃ' ಎಂಬ ಭಾಗವತ ವಚನವನ್ನು ಸ್ಮರಿಸುತ್ತಾರೆ. ಈ ಸ್ಮೃತಿಯು ಕಾಲಕ್ಕೆ ಈಶ್ವರನಿಂದ ಉತ್ಪತ್ತಿಯನ್ನು ಹೇಳುತ್ತದೆ.

ಹಾಗಾದರೆ ಉತ್ಪತ್ತಿಯುಳ್ಳ ಎಲ್ಲ ವಸ್ತುಗಳಿಗೂ ಕಾಲವಂತೂ ನಿಮಿತ್ತವು. ಹಾಗೂ ಕಾಲದ ಉತ್ಪತ್ತಿಯಲ್ಲಿ ನಿಮಿತ್ತವಾದ ಬೇರೆ ಕಾಲವೆಂಬುದಿಲ್ಲ. ಆದ್ದರಿಂದ ಕಾಲದ ಉತ್ಪತ್ತಿಯು ಹೇಗೆ? ಎಂಬ ಆಶಂಕೆಯನ್ನು 'ಕಾಲಸ್ಯ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಕಾಲಸ್ಯ ಕಾಲಗತ್ವೇನ ನ ವಿರೋಧೋಽಸ್ತಿ ಕಶ್ಚನ ।।೧೭೩।।

ಅಸಂಖ್ಯಾತವಿಶೇಷತ್ವಾದಿಚ್ಛಾಯಾ ಅಪಿ ಸರ್ವದಾ ।

ಕಾಲಕ್ಕೆ ಕಾಲಗತತ್ವವು ಇರುವುದರಿಂದ ಯಾವುದೇ ವಿರೋಧವು ಇಲ್ಲ. ಸರ್ವದಾ ಇರುತ್ತಿದ್ದರೂ ಈಶ್ವರೇಚ್ಛೆಗೆ ಶಕ್ತಿ ವ್ಯಕ್ತಿಗಳೆಂಬ ರೂಪದಿಂದಿರುವ ಸಿಸೃಕ್ಷಾತ್ವ ಮುಂತಾದ ಅಸಂಖ್ಯ ವಿಶೇಷಗಳಿರುವುದರಿಂದ, ಸೃಷ್ಟ್ಯಾದಿ ಸಮಯ ನಿಯಮವು ಯುಕ್ತವಾಗುತ್ತದೆ.

ಇನ್ನು ಕಾಲವಿಶೇಷದಲ್ಲಿ ಸೃಜಿಸುವೆನು ಇತ್ಯಾದಿ ಪ್ರಕಾರದಲ್ಲಿರುವ ಭಗವದಿಚ್ಛೆಗೆ ವೈಯರ್ಥ್ಯವು ಬರುವುದಿಲ್ಲ. ಆದರೂ ಕಾಲವು ತನ್ನಲ್ಲಿಯೇ ಇರುವುದೋ ಅಥವಾ ಕಾಲಾಂತರದಲ್ಲಿರುವುದೋ ಎಂದು ಆಶಂಕಿಸಿದರೆ, ಇವೆರಡು ಶಂಕೆಯೂ ಸರಿಯಲ್ಲ ಎಂಬುದಾಗಿ ಹೇಳುತ್ತಾರೆ –

ಈಶೋ ದೇಶಶ್ಚ ಕಾಲಶ್ಚ ಸ್ವಗತಾ ಏವ ಸರ್ವದಾ ।।೧೭೪।।

ಈಶಾಧೀನೌ ಚ ತೌ ನಿತ್ಯಂ ತದಾಧಾರೌ ಚ ತದ್ಗತೌ ।

ಈಶ್ವರ, ದೇಶ (ಅವ್ಯಾಕೃತಾಕಾಶ) ಹಾಗೂ ಕಾಲ ಇವುಗಳು ಯಾವಾಗಲೂ ತಮ್ಮಲ್ಲಿಯೇ ತಾವು ಇರತಕ್ಕವುಗಳು. ಆದರೂ ದೇಶಕಾಲಗಳು ಸರ್ವದಾ ಈಶ್ವರನ ಅಧೀನಗಳೇ. ಅವುಗಳಿಗೆ ಶ್ರೀಹರಿಯೇ ಆಧಾರ. ಅವು ಶ್ರೀಹರಿಯಲ್ಲಿಯೇ ಇರತಕ್ಕವು.

ಇತಿ ಶ್ರುತಿರಪಿ ಪ್ರಾಹ ಕಾಲೇ ಸ್ವೋದ್ದಿಷ್ಟ ಏವ ತು ।।೧೭೫।।

ತತ್ಕಾಲಸೃಷ್ಟಿಮೇವಾತೋ ವಾಂಛತೀಶಃ ಸದೈವ ಹಿ ।

ಸ್ಯಾತ್ಕಾಲಃ ಸ ತದೈವೇತಿ ಕಾಲಸ್ಯ ಸ್ವಗತತ್ವತಃ ।।೧೭೬।।

ಹೀಗೆ ಶ್ರುತಿಯೂ ಕೂಡ ಕಾಲಕ್ಕೆ ಸ್ವಗತತ್ವನ್ನು ಹೇಳುತ್ತದೆ. ಇದು ಸಾಕ್ಷಿಸಿದ್ಧವೂ ಆಗಿದೆ. ಹೀಗೆ ಕಾಲವು ಸ್ವಗತವಾದ್ದರಿಂದ ಆ ಕಾಲವು ಆ ಕಾಲದಲ್ಲಿಯೇ ಆಗಲಿ ಎಂಬುದಾಗಿ ಶ್ರೀಹರಿಯು ಯಾವಾಗಲೂ ತನಗೆ ಇಷ್ಟವಾದ ಕಾಲದಲ್ಲಿಯೇ ಆಯಾಯ ಕಾಲದ ಸೃಷ್ಟಿಯನ್ನು ಮಾಡಲು ಇಚ್ಛಿಸುತ್ತಾನೆ.

ಸ್ವಭಾವಾದೇವ ಹೀಚ್ಛೈಷಾ ದೇವಸ್ಯೈಷ ಇತಿ ಶ್ರುತೇಃ ।

ಸ್ವಭಾವೋऽಪಿ ಪರೇಶೇಚ್ಛಾವಶ ಇತ್ಯುದಿತಃ ಪುರಾ ॥೧೭೭॥

ನಿತ್ಯಾ ಅನಿತ್ಯಾಶ್ಚ ತತಸ್ತದಧೀನಾ ಇತಿ ಶ್ರುತಿಃ ।

ಈಶ್ವರನ ವಿಚಿತ್ರವಾದ ಈ ಇಚ್ಛೆಯು ಸ್ವಭಾವದಿಂದಲೇ. ಅದು ಕಾಲಾಧೀನವಲ್ಲ. ಆದ್ದರಿಂದ ಯಾವುದೇ ದೋಷವಿಲ್ಲ. ಏಕೆಂದರೆ 'ದೇವಸ್ಯೈಷ ಸ್ವಭಾವೋऽಯಂ ಆಪ್ತಕಾಮಸ್ಯ ಕಾ ಸ್ಪೃಹಾ' ಎಂಬ ಶ್ರುತಿಯಿಂದ ಇದು ತಿಳಿದುಬರುತ್ತದೆ. ಪರಮಾತ್ಮನ ಸ್ವಭಾವವಾದರೋ ಅವನ ಇಚ್ಛಾಧೀನವಾದುದೇ ಹೊರತು ಪರಾಧೀನವಲ್ಲ ಎಂದು ಹಿಂದೆಯೇ ('ಚೇತನಾನಾಂ ವಿಶೇಷೋ ಯಃ ಸ್ವಭಾವೋऽಪೀಶ್ವರಾರ್ಪಿತಃ' ಎಂಬ ಲಿಂಗಪಾದೀಯ ಅಂತರಾಧಿಕರಣದ ಅನುವ್ಯಾಖ್ಯಾನದಲ್ಲಿ) ಹೇಳಲ್ಪಟ್ಟಿದೆ. ಹಿಂದೆ ಹೇಳಿದ ಪ್ರಮಾಣವನ್ನಷ್ಟೇ ಸ್ಮರಿಸಬೇಕೆಂದಿಲ್ಲ, ಬೇರೆ ಪ್ರಮಾಣವೂ ಉಂಟು ಎಂದು 'ನಿತ್ಯಾಃ' ಇತ್ಯಾದಿ ವಚನದಿಂದ ಹೇಳುತ್ತಾರೆ. ನಿತ್ಯ ಹಾಗೂ ಅನಿತ್ಯವಾದ ಸಮಸ್ತವೂ ಈಶ್ವರಾಧೀನವು ಎಂಬುದಾಗಿ ಶ್ರುತಿಯು ಎಲ್ಲ ವಸ್ತುಗಳಿಗೂ ಈಶಾಧೀನತ್ವವನ್ನು ಹೇಳುತ್ತದೆ.

ವೈಶೇಷಿಕರ ಮತದಲ್ಲಿ ಇನ್ನೂ ಒಂದು ಅನುಪಪತ್ತಿಯನ್ನು ತೋರಿಸುವ ಎರಡು ಸೂತ್ರಗಳು –

ಓಂ ರೂಪಾದಿಮತ್ತ್ವಾಚ್ಚ ವಿಪರ್ಯಯೋ ದರ್ಶನಾತ್ ಓಂ

ಓಂ ಉಭಯಥಾ ಚ ದೋಷಾತ್ ಓಂ

ಇವೆರಡು ಸೂತ್ರಗಳನ್ನು 'ರೂಪ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

ರೂಪಸ್ಪರ್ಶಾದಿಹೇತುಭ್ಯಃ ಪರಮಾಣೋರನಿತ್ಯತಾ ॥೧೭೮॥

ಅನುಮೇಯಾ.................................. ।

ಪಾರ್ಥಿವ ಮುಂತಾದ ನಾಲ್ಕು ವಿಧ ಪರಮಾಣುಗಳಿಗೆ ನಿತ್ಯತೆಯನ್ನು ವೈಶೇಷಿಕರು ಅಂಗೀಕರಿಸುತ್ತಾರೆ. ಅದು ಸರಿಯಲ್ಲ. ಏಕೆಂದರೆ, ಪಾರ್ಥಿವ–ಜಲೀಯ–ತೈಜಸ ಪರಮಾಣುಗಳು ಅನಿತ್ಯಗಳು, ಅನಿತ್ಯವಾದ ರೂಪ

ರಸ ಗಂಧವುಳ್ಳವಾದ್ದರಿಂದ, ಪಟವು ದೃಷ್ಟಾಂತವು ಎಂಬ ಅನುಮಾನದಿಂದ ವಿರೋಧವು ಬರುವುದು.

ಇನ್ನು 'ಓಂ ಅಪರಿಗ್ರಹಾಚ್ಚಾತ್ಯಂತಮನಪೇಕ್ಷಾ ಓಂ' ಎಂಬ ಸೂತ್ರವನ್ನು ಶ್ರುತೀನಾಂ ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

.................ಶ್ರುತೀನಾಂ ಚ ವಿರುದ್ಧತ್ವಾನ್ನ ತನ್ಮತಮ್ ।

ಉಪಾದೇಯಮತಶ್ಚಾಯಮವಿರುದ್ಧಃ ಸಮನ್ವಯಃ ॥೧೭೯॥

ಪರಮಾಣ್ವಾರಂಭವಾದಕ್ಕೆ 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಶ್ರುತಿವಿರೋಧ ಪ್ರಾಪ್ತವಾಗುವುದರಿಂದ, ವೈಶೇಷಿಕಾದಿಮತಗಳು ಸ್ವೀಕಾರಾರ್ಹವಲ್ಲ. ಆದ್ದರಿಂದ ಸಕಲಗುಣಪೂರ್ಣನಾದ ಪರಬ್ರಹ್ಮನ ವಿಷಯಕವಾದ ಈ ಸಮನ್ವಯಕ್ಕೆ ವೈಶೇಷಿಕಾದಿ ಮತಗಳಿಂದ, ಅವು ಅಸಮಂಜಸವಾದ್ದರಿಂದ, ವಿರೋಧವಿಲ್ಲ.

ಸಮುದಾಯಾಧಿಕರಣಮ್

ಓಂ ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ ಓಂ

ಯುಕ್ತಿಪ್ರಧಾನವಾದ ಹೈತುಕ ಮತಗಳ ನಿರಾಸದ ಅನಂತರ ಈಗ ಸೌಗತ (ಬೌದ್ಧ) ಮತದ ನಿರಾಸೆ ಮಾಡಲ್ಪಡುತ್ತದೆ. ಆ ಸೌಗತರಲ್ಲಿ ವೈಭಾಷಿಕರು, ಸೌತ್ರಾಂತಿಕರು, ಮಾಧ್ಯಮಿಕರು ಮತ್ತು ಯೋಗಾಚಾರರು ಎಂಬುದಾಗಿ ನಾಲ್ಕು ವಿಧ. ಈ ನಾಲ್ಕರಲ್ಲಿ ವೈಶೇಷಿಕಾದಿಗಳ ಮತಕ್ಕಿಂತ ಹೆಚ್ಚಿನ ವ್ಯತ್ಯಾಸವಿಲ್ಲದ ವೈಭಾಷಿಕ ಹಾಗೂ ಸೌತ್ರಾಂತಿಕಮತಗಳನ್ನು ಮೊದಲು ನಿರಾಕರಿಸುತ್ತಾರೆ. ಇವೆರಡು ಪ್ರಭೇದದವರೂ ಜಗತ್ತು ಸತ್ಯ ಹಾಗೂ ಪರಮಾಣುಮಯ ಎಂದು ಹೇಳುತ್ತಾರೆ.

ವೈಭಾಷಿಕಾಶ್ಚ ಸೌತ್ರಾಂತಾಃ ಸ್ವರಸಕ್ಷಣಿಕಂ ಜಗತ್ ।

ಅಣೂನಾಂ ಸಮುದಾಯಂ ಚ ಕಾಲಕರ್ಮನಿಮಿತ್ತತಃ ॥೧೮೦॥

ಉತ್ಪತ್ತಿಕಾಲೇ ಯುಕ್ತಾನಾಮಾತ್ಮಾನಂ ಚ ಕ್ಷಣಸ್ಥಿತಮ್ ।

ನಿತ್ಯಂ ಸಂತಾನಮೇತೇಷಾಂ ಪಂಚಸ್ಕಂಧಾತ್ಮನಾ ಸ್ಥಿತಂ ॥೧೮೧॥

ವೈಭಾಷಿಕರು ಹಾಗೂ ಸೌತ್ರಾಂತಿಕರು ಜಗತ್ತು ಸ್ವಭಾವದಿಂದಲೇ ಕ್ಷಣಿಕವೆಂದು ಹೇಳುತ್ತಾರೆ. ಕಾಲಕರ್ಮಗಳೆಂಬ ನಿಮಿತ್ತದಿಂದ ಉತ್ಪತ್ತಿಕಾಲದಲ್ಲಿ (ಆದಿಸೃಷ್ಟಿಯಲ್ಲಿ) ಒಟ್ಟಾಗಿ ಕೂಡಿಕೊಂಡು ಹುಟ್ಟಿದ ಅಣುಗಳ ಸಮುದಾಯವು ಜಗತ್ತೆಂದು ಹೇಳುತ್ತಾರೆ. ಆತ್ಮನನ್ನು ಕ್ಷಣಿಕನೆಂದೂ ಮತ್ತು ಈ ಅಣುಗಳ ನಿತ್ಯವಾದ ಸಂತಾನವನ್ನು ಪಂಚಸ್ಕಂಧಾತ್ಮಕವಾದ ಜಗದ್ವ್ಯಕ್ಷವೆಂದೂ ಹೇಳುತ್ತಾರೆ.

ಈ ಐದು ಸ್ಕಂಧಗಳು ಯಾವುವೆಂದರೆ –

ಸಂಸ್ಕಾರರೂಪವಿಜ್ಞಾನಸಂಜ್ಞಾದುಃಖಾತ್ಮನಾ ಸ್ಥಿತಿಃ ।

ದುಃಖಾಭಾವಂ ಸುಖಂ ಚಾಹುರರೂಪಜ್ಞಾನಸಂತತಿಮ್ ।।೧೮೨।।

ಮೋಕ್ಷಂ...।

ಸಂಸ್ಕಾರ, ರೂಪ, ವಿಜ್ಞಾನ, ಸಂಜ್ಞಾ ಹಾಗೂ ದುಃಖ – ಹೀಗೆ ಐದು ಸ್ಕಂಧಗಳ ಸ್ಥಿತಿಯು. ದುಃಖಾಭಾವವೇ ಸುಖವು. ಸುಖವು ವೇದನಾಸ್ಕಂಧದಲ್ಲಿ ಅಂತರ್ಭೂತವು. ನಿರ್ವಿಷಯಕವಾದ ಜ್ಞಾನಸಂತಾನವೇ ಮೋಕ್ಷವು. ಹೀಗೆ ಅವರು ಹೇಳುತ್ತಾರೆ.

ಹೀಗೆ ವೈಬಾಷಿಕ ಹಾಗೂ ಸೌತ್ರಾಂತಿಕರ ಮತವನ್ನು ಸಾಧಾರಣವಾಗಿ ಅನುವಾದ ಮಾಡಿ, ಅವಾಂತರ ಪ್ರಭೇದವನ್ನು ನಿರಾಕರಣ ಸಮಯದಲ್ಲಿಯೇ ಹೇಳಲು ಅಪೇಕ್ಷಿಸಿ, ಈಗ 'ಪರಮಾಣು ಸಮುದಾಯವೇ ಗೋವು ಘಟ ಮುಂತಾದ ಪ್ರಪಂಚವು' ಎಂಬ ಅವರ ಮತವನ್ನು ನಿರಾಕರಿಸಲು '**ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ**' ಎಂಬ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ –

............ಸ ಸಮುದಾಯೋ ಹಿ ನೈಕಸ್ಮಾದೇವ ಯುಜ್ಯತೇ ।

ನೋಭಯೋಶ್ಚೋಭಯತ್ವಂ ಯತ್ಸಮುದಾಯವ್ಯಪೇಕ್ಷಯಾ ।।೧೮೩।।

ಅತೋಽನ್ಯೋನ್ಯಾಶ್ರಯತ್ವೇನ ಸಮುದಾಯೋ ನ ಯುಜ್ಯತೇ ।

ಆ ಸಮುದಾಯವಾದರೋ ಒಂದರಿಂದ ಯುಕ್ತವೇ ಆಗುವುದಿಲ್ಲ. ಹಾಗೂ ಎರಡರ ಸಕಾಶದಿಂದಲೂ ಯುಕ್ತವಾಗುವುದಿಲ್ಲ. ಏಕೆಂದರೆ ಉಭಯತ್ವವು ಸಮುದಾಯದ ಅಪೇಕ್ಷೆಯಿಂದ ಹುಟ್ಟುತ್ತದೆ. ಸಮುದಾಯ ಸಾಪೇಕ್ಷದಿಂದ ಉಭಯತ್ವವು, ಉಭಯತ್ವ ಸಾಪೇಕ್ಷದಿಂದ ಸಮುದಾಯವು. ಹೀಗೆ ಅನ್ಯೋನ್ಯಾಶ್ರಯವು. ಆದುದರಿಂದ ಸಮುದಾಯವು ಕೂಡುವುದಿಲ್ಲ. ಸಮುದಾಯದ ಉತ್ಪತ್ತಿಯಾಗದಿದ್ದರೆ ಅಣುಗಳಿಗೆ 'ಮಹಾನ್, ಏಕಃ' ಎಂಬ ಪ್ರತ್ಯಕ್ಷಜ್ಞಾನ ವಿಷಯತ್ವವು ಸಂಭವಿಸುವುದಿಲ್ಲ. ಆದ್ದರಿಂದ ಅವಯವಿಯನ್ನು ಅವಶ್ಯವಾಗಿ ಅಂಗೀಕರಿಸಲೇಬೇಕು ಎಂದು ತಾತ್ಪರ್ಯ.

ಅಣುಗಳಿಗೆ ಮೇಲನವಾದಾಗ ಸಮುದಾಯವು, ಸಮುದಾಯವಾದಾಗ ಮೇಲನವು ಹೀಗೆ ಅನ್ಯೋನ್ಯಾಶ್ರಯವು ಬರುವುದರಿಂದ ಸಮುದಾಯವು ಕೂಡುವುದಿಲ್ಲ. ಹೀಗೆ ಬರುವ ಅನುಪಪತ್ತಿಯನ್ನು ತಪ್ಪಿಸಲು, ಸಮುದಾಯವು ವಿರಳವಾದ ಅನೇಕ ಪರಮಾಣುಗಳಿಂದ ಹುಟ್ಟಿದ್ದು ಎಂದು ಅಂಗೀಕರಿಸುತ್ತೇವೆ

ಎಂದರೆ – ಅಂಥಹ ವಿರಳವಾದ ಅಣುಗಳು ಯಾವಾಗಲೂ ಇರುವುದರಿಂದ ಸಮುದಾಯವೂ ಯಾವಾಗಲೂ ಇರಬೇಕಾಗುವುದು. ಇದರಿಂದ ಪ್ರಲಯವು ಕೂಡದೇ ಹೋಗುವುದು. ಇದನ್ನು ಆಕ್ಷೇಪಿಸಿ ಸಮಾಧಾನ ಹೇಳುವ ಸೂತ್ರ –

"ಓಂ ಇತರೇತರಪ್ರತ್ಯಯತ್ವಾದಿತಿ ಚೇನ್ನೋತ್ಪತ್ತಿಮಾತ್ರನಿಮಿತ್ತತ್ವಾತ್ ಓಂ"

ಅನ್ಯೋನ್ಯಾಪೇಕ್ಷಯಾ ಪುಂಸಃ ಸಮುದಾಯತ್ವವೇದನಮ್ ।।೧೮೪।।

ಸ್ಯಾತ್ತತ್ಸದಾತನತ್ವೇಽಪಿ ತಚ್ಚ ಸಾಮೀಪ್ಯಹೇತುಕಮ್ ।

ಇತಿ ಚೇತ್ ....।।

ಸಮುದಾಯವು ಯಾವಾಗಲೊಮ್ಮೆ ಆಗುವುದೆಂದಾದರೆ ಅನ್ಯೋನ್ಯಾಶ್ರಯತ್ವ ಬರುವುದು. ಆದರೆ ಹೀಗೆ ಅಲ್ಲ. ಆ ಸಮುದಾಯವನ್ನು ಸದಾತನ ಅಂದರೆ ಯಾವಾಗಲೂ ಇರುವಂಥಹದು ಎಂದು ಅಂಗೀಕರಿಸುತ್ತೇವೆ. ಹಾಗಾದರೆ ಸೃಷ್ಟಿ ಪ್ರಲಯಗಳ ವ್ಯವಸ್ಥೆಯಾಗದಿರಲಿ ಎಂದು ಹೇಳಕೂಡದು. ಏಕೆಂದರೆ, ಸಮುದಾಯಕ್ಕೆ ಸದಾತನತ್ವವಿದ್ದರೂ ಪುರುಷನಿಗೆ ಸಮುದಾಯತ್ವದ ಜ್ಞಾನವು ಯಾವಾಗಾದರೊಮ್ಮೆ ಆಗುವುದು. ಅದನ್ನು ಅಪೇಕ್ಷಿಸಿ ಸೃಷ್ಟ್ಯಾದಿ ವ್ಯವಸ್ಥೆಯು ಯುಕ್ತವಾಗುವುದು. ಆ ಸಮುದಾಯತ್ವ ಜ್ಞಾನವೂ ಪರಮಾಣು ಸಾಮೀಪ್ಯದ ಜ್ಞಾನದಿಂದ ಆಗುವುದು. ಆ ಸಾಮೀಪ್ಯವು ಯಾವಾಗಲೂ ಇರುವುದಿಲ್ಲ. ಆದಕಾರಣ ಅದರ ಜ್ಞಾನವು ಕಾದಾಚಿತ್ಕವೇ ಆದುದು. ಸಾಮೀಪ್ಯದ ಹೊರತು ಅನ್ಯೋನ್ಯಜ್ಞಾನವಾಗುವುದಿಲ್ಲ. ಹೀಗೆ ಪೂರ್ವಪಕ್ಷ ಬಂದರೆ, ಸಮಾಧಾನಾಂಶವನ್ನು ಕಾರ್ಯ ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಾರೆ –

.............ಕಾರ್ಯಸಂಭೂತಿಮಾತ್ರವ್ಯಾಪೃತಿಕಾರಣಮ್ ।।೧೮೫।।

ನ ತು ಕಾರ್ಯವಿಶೇಷೇಷು ವ್ಯಾಪೃತಂ ಕಾರಣಂ ಭವೇತ್ ।

ಅತೋಽರ್ಥೇಂದ್ರಿಯಸಂಯೋಗಿರೂಪಕಾರಣತಾತ್ಮನಃ ।।೧೮೬।।

ಸಂಯೋಗಿರೂಪರಾಹಿತ್ಯಾನ್ನೈವ ತಜ್ಜ್ಞಾನತಾಪಿ ಹಿ ।

ಕಾರ್ಯದ ಉತ್ಪತ್ತಿಮಾತ್ರದಲ್ಲಿಯೇ ವ್ಯಾಪಾರವುಳ್ಳದ್ದು ಕಾರಣವು. ಆದರೆ ವಿಶೇಷ ಕಾರ್ಯಗಳಲ್ಲಿ ಕಾರಣಗಳು ವ್ಯಾಪಾರವುಳ್ಳವುಗಳಾಗುವುದಿಲ್ಲ. ಅಂದರೆ ಕಾರಣಗಳು ತಮಗೆ ಸದೃಶವಾದ ಕಾರ್ಯವನ್ನು ಹುಟ್ಟಿಸುವುದರಲ್ಲಿ ವ್ಯಾಪಾರವುಳ್ಳವುಗಳು. ಆದರೆ ಸದೃಶವಾಗದ ಕಾರ್ಯಜನಕತ್ವವನ್ನು ಹೊಂದಿರುವುದಿಲ್ಲ. ಆದ್ದರಿಂದ ಗ್ರಾಹ್ಯ–ಗ್ರಾಹಕರೂಪಗಳಾದ ಅರ್ಥೇಂದ್ರಿಯಗಳು ಯಾವುವೋ ಅವುಗಳಿಗೆ ಆ ಕಾರ್ಯಗಳನ್ನು ಕುರಿತು ಸಂಯೋಗಿರೂಪ ಕಾರಣತ್ವವು. ಅರ್ಥೇಂದ್ರಿಯಗಳಿಗೆ ಗ್ರಾಹ್ಯ–ಗ್ರಾಹಕರೂಪವು ಇಲ್ಲದಿರುವುದರಿಂದ

ಅವುಗಳಿಗೆ ಕಾರಣತ್ವವು ಕೂಡುವುದೇ ಇಲ್ಲ. ಕಾರ್ಯಭೂತನಾದ ಆತ್ಮನಿಗೂ ಸಮುದಾಯ ವಿಷಯಕ ಜ್ಞಾನವತ್ವವು ಕೂಡುವುದೇ ಇಲ್ಲ. ಏಕೆಂದರೆ ಕಾರಣಭೂತನಾದ ಆತ್ಮನಿಗೆ ಆ ಜ್ಞಾನವತ್ವವು ಇಲ್ಲವೇ ಇಲ್ಲ.

ಇನ್ನು ಕಾರಣವು ತನಗೆ ಸದೃಶವಲ್ಲದ ಕಾರ್ಯವನ್ನು ಹುಟ್ಟಿಸುವ ಸ್ವಭಾವವುಳ್ಳದ್ದು ಎನ್ನುವ ಪಕ್ಷವನ್ನು ಆಶಂಕಿಸುತ್ತಾರೆ –

ವಿಶೇಷಕಾರ್ಯಜನಕಂ ಯದಿಕಾರಣಮಿಷ್ಯತೇ ।।೧೮೭।।

ಕುತಃ ಸಮಾನರೂಪತ್ವಂ ಕಾರ್ಯಾಣಾಮಪಿ ಸರ್ವಶಃ ।

ಅತೋಽನಿಯತ್ಯಾ ಯತ್ಕಿಂಚಿದ್ಯಸ್ಯ ಕಸ್ಯಾಪಿ ಕಾರಣಮ್ ।।೧೮೮।।

ಕಾರಣವು ತನಗೆ ಅಸದೃಶವಾದ ವಿಶೇಷಕಾರ್ಯವನ್ನು ಹುಟ್ಟಿಸುತ್ತದೆ ಎಂದು ಒಪ್ಪುವುದಾದರೆ, ಸರ್ವಕಾರ್ಯಗಳಿಗೂ ಸಮಾನರೂಪತ್ವವು ಯಾವುದರಿಂದ? ಹಾಗಾದರೆ ಕಾರ್ಯಜನಕತ್ವ ಮಾತ್ರವೇ ವಸ್ತುವಿನ ಸ್ವಭಾವವೆಂದು ಅಂಗೀಕರಿಸುತ್ತೇವೆ ಎಂದು ಹೇಳಕೂಡದು. ಏಕೆಂದರೆ ಯಾವುದೇ ನಿಯಮವಿಲ್ಲದೆಯೇ ಯಾವುದೋ ಕಾರ್ಯಕ್ಕೆ ಬೇರೆ ಯಾವುದೋ ಕಾರಣವು ಎಂದಾಗುವುದು. ಅಂದರೆ ಘಟದಿಂದ ಆಕಾಶವೂ, ಆಕಾಶದಿಂದ ಪಟವೂ, ಇತ್ಯಾದಿ ಅಸಂಬದ್ಧ ಉತ್ಪತ್ತಿಯು ಆಗುವುದು.

ಕಾರಣವು ಕಾರ್ಯವನ್ನು ಹುಟ್ಟಿಸುವ ಸ್ವಭಾವವುಳ್ಳದ್ದು. ಅದೃಷ್ಟ ಮೊದಲಾದ ಸಹಕಾರಿಗಳ ಸಂಬಂಧದಿಂದ ಕಾರಣಕ್ಕೆ ಸದೃಶವಾದ ಅಥವಾ ಸದೃಶವಲ್ಲದ ಕಾರ್ಯವು ಹುಟ್ಟಬಹುದು ಎಂದು ಆಶಂಕಿಸಿದರೆ –

ಅದಷ್ಟಮಪಿ ತಸ್ಯೈವ ವಿಶೇಷಾಪಾದಕಂ ಕುತಃ ।

ಯಸ್ಯ ಕಸ್ಯಾಪಿ ಯತ್ಕಿಂಚಿದ್ವಿಶೇಷಮುಪಪಾದಯೇತ್ ।।೧೮೯।।

ಕಾರ್ಯಂ ಚ ಕಾರಣಂ ಚೈವ ಯತ್ಕಿಂಚಿದ್ಯಸ್ಯ ಕಸ್ಯಚಿತ್ ।

ಭವೇನ್ನಿಯಾಮಕಾಭಾವಾದಿದಮಸ್ಯೈವ ಕಾರಣಮ್ ।।೧೯೦।।

ಇತಿ ನಿತ್ಯವಿನಾಶಿತ್ವೇ ಕೇನ ಮಾನೇನ ಗಮ್ಯತೇ ।

ಇದಂ ನ ಜಾಯತೇಽಮುಷ್ಮಾದಿತ್ಯತ್ರಾಪಿ ನ ಕಾರಣಮ್ ।।೧೯೧।।

ಅದೃಷ್ಟವೂ ವಿಶೇಷಾಪಾದಕವಾದುದು ಯಾವ ಕಾರಣದಿಂದ? ಆ ಕಾರಣಕ್ಕೇ ವಿಶೇಷಾಪಾದಕವಾದುದು ಯಾವ ಕಾರಣದಿಂದ? ಯಾವುದೋ ಒಂದು ಅದೃಷ್ಟವು ಯಾವುದೋ ಒಂದಕ್ಕೆ ವಿಶೇಷವನ್ನು ತಂದುಕೊಡುವುದು. ನೀಲ

ಮುಂತಾದ ಯಾವುದೋ ಒಂದು ಪೀತ ಮುಂತಾದ ಇನ್ನಾವುದೋ ಒಂದಕ್ಕೇ ಕಾರ್ಯವಾಗಲಿ. ಹಾಗೂ ಪೀತ ಮುಂತಾದುದು ಯಾವುದೋ ಒಂದು ನೀಲ ಮುಂತಾದುದಕ್ಕೇ ಕಾರಣವಾಗಲಿ. ಏಕೆಂದರೆ ನೀಲಕ್ಕೆ ನೀಲವೇ ಕಾರಣವು ಪೀತವಲ್ಲ ಎಂಬ ವಿಷಯದಲ್ಲಿ ನಿಯಾಮಕವಿಲ್ಲ.

ಸಮವಾಯ ಪರಿಣಾಮಗಳೆರಡೂ ಇಲ್ಲದಿದ್ದರೂ, ಒಂದು ವಸ್ತುವಿಗೆ ಅದರ ಪೂರ್ವಭಾವಿಯಾದ ವಸ್ತುವೇ ಕಾರಣವು. ಒಂದು ವಸ್ತುವು ಇನ್ನೊಂದರ ಅನಂತರ ಹುಟ್ಟಿದರೆ, ಅನಂತರ ಹುಟ್ಟಿದುದೇ ಪೂರ್ವಭಾವಿಯಾದುದರ ಕಾರ್ಯವು. ಹೀಗೆ ಕಾರ್ಯ–ಕಾರಣ ಭಾವವು ಸಿದ್ಧಿಸುವುದರಿಂದ, ನಿಯಾಮಕವಿಲ್ಲ ಎನ್ನುವುದು ಕೂಡುವುದಿಲ್ಲ ಎಂದು ಆಶಂಕಿಸಿದರೆ – ಅದನ್ನು 'ಇದಮಸ್ಯೈವ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ.

ಇದು ಇದಕ್ಕೇ ಕಾರಣವು, ಅದಕ್ಕೆ ಅಲ್ಲ ಎಂಬುದು, ನಿರನ್ವಯ ವಿನಾಶೋತ್ಪಾದ ಪಕ್ಷದಲ್ಲಿ (ಕಾರ್ಯ–ಕಾರಣ ಸಂಬಂಧವಿಲ್ಲದೆ ವಿನಾಶ ಮತ್ತು ಉತ್ಪತ್ತಿಗಳನ್ನು ಒಪ್ಪುವ ಪಕ್ಷದಲ್ಲಿ), ಯಾವ ಕಾರಣದಿಂದ ತಿಳಿಯಲ್ಪಡುತ್ತದೆ? ಅಂದರೆ ಯಾವುದರಿಂದಲೂ ತಿಳಿಯಲ್ಪಡುವುದಿಲ್ಲ ಎಂದರ್ಥ. ಹಾಗೂ ಇದು ಇದರಿಂದ ಹುಟ್ಟುವುದಿಲ್ಲ ಎಂಬ ನಿರ್ಣಯಕ್ಕೂ ಪ್ರಮಾಣವು ಇರುವುದಿಲ್ಲ.

ಹೀಗೆ ಸಮುದಾಯವನ್ನು ನಿರಾಕರಿಸಿ, ಈಗ ಸರ್ವವೂ ಕ್ಷಣಿಕವೆಂಬುದನ್ನು ಪ್ರಮಾಣಾಭಾವ ಹಾಗೂ ಪ್ರಮಾಣವಿರೋಧಗಳ ಕಾರಣದಿಂದ ನಿರಾಕರಿಸಲು 'ವಿನಾಶ' ಇತ್ಯಾದಿ ಮುಂದಿನ ವಚನವು –

ವಿನಾಶೋತ್ಪತ್ತಯಶ್ಚೈವ ನ ದೃಶ್ಯಂತೇ ಸದಾತನಾಃ ।

ದೃಶ್ಯತೇ ಪ್ರತ್ಯಭಿಜ್ಞಾತಃ ಸ್ಥಿರತ್ವಂ ಸರ್ವವಸ್ತುಷು ॥೧೯೨॥

ಪ್ರತಿಕ್ಷಣದಲ್ಲಿ ಉಂಟಾಗುವ ವಿನಾಶ ಉತ್ಪತ್ತಿಗಳು ಕಂಡುಬರುವುದೇ ಇಲ್ಲ. ಅದೇ ಇದು ಎಂಬ ಪ್ರತ್ಯಭಿಜ್ಞೆಯಿಂದ ಸರ್ವ ವಸ್ತುಗಳಲ್ಲಿ ಸ್ಥಿರತ್ವವು (ಒಂದಕ್ಕೇನೆ ಅನೇಕ ಕ್ಷಣ ಸಂಬಂಧಿತ್ವವು) ವಿಷಯೀಕರಿಸಲ್ಪಡುತ್ತದೆ. ಇದರಿಂದ ಕ್ಷಣಿಕತ್ವವು ಪ್ರತ್ಯಕ್ಷದಿಂದ ಸಿದ್ಧಿಸುವುದಿಲ್ಲ ಹಾಗೂ ಸ್ಥಾಯಿತ್ವವೇ ಸಿದ್ಧಿಸುತ್ತದೆ ಎಂಬುದಾಗಿ ಪರಪಕ್ಷಕ್ಕೆ ಪ್ರಮಾಣ ವಿರೋಧವೂ ನಮ್ಮ ಪಕ್ಷಕ್ಕೆ ಪ್ರಮಾಣತ್ವವೂ ಹೇಳಿದಂತಾಯಿತು.

ಹಾಗಾದರೆ ಪ್ರತ್ಯಭಿಜ್ಞೆಯು ಭ್ರಾಂತಿಯು. ಆದ್ದರಿಂದ ಕ್ಷಣಿಕತ್ವಕ್ಕೆ ವಿರೋಧವಿಲ್ಲ ಎಂದು ಹೇಳಿದರೆ ಅದು ಸರಿಯಲ್ಲ. ಏಕೆಂದರೆ ಬಾಧಕವಿರುವುದಿಲ್ಲ. ಬಾಧಕವಿಲ್ಲದೇ ಭ್ರಾಂತಿಯೆಂದು ಒಪ್ಪುವುದಾದರೆ, ನೀಲ ಮುಂತಾದ ಜ್ಞಾನಗಳೂ ಭ್ರಾಂತಿಯೇ ಆಗಬೇಕಾಗುತ್ತವೆ. ಪ್ರತ್ಯಕ್ಷವು ಬಾಧಕವಾಗುವುದಿಲ್ಲವೆಂದು ಹಿಂದೆಯೇ

ಹೇಳಲಾಗಿದೆ. ಇನ್ನು ಪ್ರತ್ಯಕ್ಷವು ಬಾಧಕವಾಗದಿದ್ದರೂ ಅನುಮಾನವು ಬಾಧಕವಾಗುವುದು ಎಂದು ಶಂಕಿಸುತ್ತಾರೆ –

ಫಲಾದೀನಾಂ ವಿಶೇಷೇಣ ಸರ್ವತ್ರಾಪ್ಯನುಮೀಯತೇ ।

ಸತ್ತ್ವೇನ ಕ್ಷಣಿಕತ್ವಂ ಚೇದಾಕಾಶಸ್ಯಾವಿಶೇಷತಃ ।।೧೯೩।।

ಅವಿಶೇಷೋಽಖಿಲಸ್ಯಾಪಿ ಸತ್ತ್ವಾತ್ಕಿಂ ನಾನುಮೀಯತೇ ।

ಫಲಾದಿಗಳಿಗೆ ಪರಿಮಾಣ ಭೇದದಿಂದ ಕ್ಷಣಿಕತ್ವವು ಅನುಮೇಯಿಸಲ್ಪಡುತ್ತದೆ. ಆದರ ದೃಷ್ಟಾಂತದಿಂದ ಫಲಾದಿಗಳನ್ನು ಬಿಟ್ಟು ಸರ್ವ ವಸ್ತುವಿನಲ್ಲಿಯೂ ಕ್ಷಣಿಕತ್ವವನ್ನು ಸತ್ವರೂಪವಾದ ಹೇತುವಿನಿಂದ ಅನುಮೇಯಿಸುವುದು ಯುಕ್ತವಲ್ಲ. ಏಕೆಂದರೆ ಆಕಾಶಕ್ಕೆ ಹಿಂದಿನ ಹಾಗೂ ಮುಂದಿನ ಕ್ಷಣಗಳಿಗೆ ಪರಿಮಾಣ-ಭೇದವಿಲ್ಲವಾದ್ದರಿಂದ ಅಕ್ಷಣಿಕತ್ವವು. ಆಕಾಶದಂತೆ ಉಳಿದೆಲ್ಲವೂ ಸತ್ವವಾಗಿರುವ ಕಾರಣ ಎಲ್ಲ ವಸ್ತುಗಳಿಗೂ ಪರಿಮಾಣಭೇದ ರಾಹಿತ್ಯ ಹಾಗೂ ಅಕ್ಷಣಿಕತ್ವಗಳು ಏಕೆ ಅನಮೇಯಿಸಲ್ಪಡುವುದಿಲ್ಲ?

ಆಕಾಶಕ್ಕೆ ಸತ್ವವಿರುವುದಾದರೆ ಪ್ರತಿಪಕ್ಷಾನುಮಾನ ಮುಂತಾದುದು ಬರಬಹುದು. ಆದರೆ ಆಕಾಶಕ್ಕೆ ಸತ್ವವೇ ಇಲ್ಲ. ಏಕೆಂದರೆ ಆಕಾಶವು ಮೂರ್ತಾಭಾವರೂಪವಾಗಿದೆ. ಇಲ್ಲಿ ಸತ್ವವೆಂದರೆ ಭಾವತ್ವವೆಂಬ ಅಭಿಪ್ರಾಯವಿದೆ. ಸತ್ವವೆಂದರೆ ಸ್ವರೂಪವತ್ವವೆಂದು ಹೇಳಿದರೂ ಅಭಾವವು ನಿಃಸ್ವರೂಪವೆಂದು ಅಂಗೀಕರಿಸುತ್ತೇವೆ. ಹೀಗೆ ಆಶಂಕಿಸಿ, ಆದರ ಮೇಲೆ ದೂಷಣವನ್ನು 'ಯದಿ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಯದ್ಯಕಾಶಸ್ಯ ಸತ್ತ್ವಂ ನ ಕುತ ಏವ ನರಾದಿಷು ।।೧೯೪।।

ಆಕಾಶಕ್ಕೆ ಸತ್ವವು ಇಲ್ಲವಾದರೆ ಮನುಷ್ಯರೇ ಮುಂತಾದವರಲ್ಲಿ ಸತ್ವವು ಹೇಗೆ ತಾನೇ ಸಿದ್ಧಿಸೀತು? ದೇಹಾದಿಗಳಲ್ಲಿ ಭಾವತ್ವವಿರುವುದರಿಂದ ಸತ್ವವು ಕಾಣುವುದು. ಆದರೆ ಆಕಾಶದಲ್ಲಿ ಅಭಾವತ್ವವಿದೆ ಆದ್ದರಿಂದ ಸತ್ವವು ಇಲ್ಲ ಎಂದು ಹೇಳಿದರೆ –

ಸಧರ್ಮಿಪ್ರತಿಯೋಗಿತ್ವಮಭಾವಸ್ಯ ನಿಯಾಮಕಮ್ ।

ತೌ ವಿನಾ ನಹ್ಯಭಾವಶ್ಚ ಕ್ವಚಿದ್ದೃಷ್ಟಃ ಕದಾಚನ ।।೧೯೫।।

ಅಧರ್ಮಿಪ್ರತಿಯೋಗಿತ್ವಮಾಕಾಶಸ್ಯಾವಗಮ್ಯತೇ ।

ಎಲ್ಲಿ ಅಭಾವ ಇದೆಯೋ ಅದು ಧರ್ಮಿಯು, ಯಾವುದರ ಅಭಾವವೋ ಅದು ಅದಕ್ಕೆ ಪ್ರತಿಯೋಗಿಯು. ಹೀಗೆ ಧರ್ಮಿ-ಪ್ರತಿಯೋಗಿತ್ವವು ಅಭಾವಕ್ಕೆ ವ್ಯಾಪಕವು. ಇವೆರಡರ ಜ್ಞಾನವಿಲ್ಲದೆ ಅಭಾವವಾದರೂ ಎಲ್ಲಿಯೂ ಯಾವಾಗಲೂ

ಕಂಡಿರುವುದಿಲ್ಲ. ಇವೆರಡಿದ್ದರೆ ಅಭಾವವು, ಇಲ್ಲದಿದ್ದರೆ ಅಭಾವವಿಲ್ಲ ಎಂಬ ಅನ್ವಯ–ವ್ಯತಿರೇಕಗಳು ಪ್ರಸಿದ್ಧವಾಗಿದೆ. ಆಕಾಶವು ಧರ್ಮಿ–ಪ್ರತಿಯೋಗಿಗಳಿಂದ ರಹಿತವಾಗಿದೆ ಎಂಬುದಾಗಿ ಪ್ರಮಾಣಗಳಿಂದ ತಿಳಿದುಬರುತ್ತದೆ. ಅಂದರೆ ಅಭಾವದ ಪ್ರತೀತಿಯಲ್ಲಿ ವ್ಯಾಪಕವಾದ ಸಧರ್ಮಪ್ರತಿಯೋಗಿತ್ವವು ಭಾವಪದಾರ್ಥವಾದ ಆಕಾಶದಲ್ಲಿ ಇಲ್ಲ. ಏಕೆಂದರೆ ಆಕಾಶವು ತೋರುವಾಗ 'ಇಲ್ಲಿ ಆಕಾಶದ ಅಭಾವವು ಇಲ್ಲ' ಎಂದು ಪ್ರತೀತಿಯು ಆಗುವುದಿಲ್ಲ, 'ಇದು ಆಕಾಶವು' ಎಂದೇ ತಿಳಿಯಲ್ಪಡುತ್ತದೆ.

ಇನ್ನು 'ಆಕಾಶೇ ಚಾವಿಶೇಷಾತ್' ಹಾಗೂ 'ಅನುಸ್ಮೃತೇಶ್ಚ' ಎಂಬ ಎರಡು ಸೂತ್ರಗಳ ಅರ್ಥವನ್ನು 'ಸ್ವೀಕಾರ' ಇತ್ಯಾದಿ ವಚನದಿಂದ ಉಪಸಂಹರಿಸುತ್ತಾರೆ –

ಸ್ವೀಕಾರತ್ಯಾಗತೋಽದೃಷ್ಟದೃಷ್ಟಯೋಃ ಸರ್ವವಸ್ತುಷು ।।೧೯೬।।

ಗುಣಾನುನ್ಮತ್ತ ಏವಾಸೌ ವಿದಧಾತ್ಯಧಿಕಂ ಪುನಃ ।

ಎಲ್ಲ ವಸ್ತುಗಳಲ್ಲಿಯೂ ಅದೃಷ್ಟವಾದ ಕ್ಷಣಿಕತ್ವಾದಿಗಳ ಸ್ವೀಕಾರದಿಂದಲೂ, ದೃಷ್ಟವಾದ ಸ್ಥಿರತ್ವಾದಿಗಳ ಪರಿತ್ಯಾಗದಿಂದಲೂ ಈ ಸೌಗತನು ಉನ್ಮತ್ತನನ್ನೂ ಸಹ ತನಗಿಂತ ಹೆಚ್ಚಿನ ವಿವೇಕವಂತನೆಂದು ಸ್ಥಾಪಿಸುತ್ತಾನೆ. ಏಕೆಂದರೆ ಉನ್ಮತ್ತನಾದರೂ ಪ್ರಮಿತವಲ್ಲದ್ದನ್ನು ಸ್ವೀಕರಿಸುವುದಿಲ್ಲ ಹಾಗೂ ಪ್ರಮಿತವಾದುದನ್ನು ಬಿಡುವುದಿಲ್ಲ.

ಇನ್ನು ಕಾರಣದ ಕ್ಷಣಗಳು ಕಾರ್ಯದ ಕ್ಷಣಗಳಲ್ಲಿ ಸಂಸ್ಕಾರಗಳನ್ನು ಅರ್ಪಿಸುತ್ತವೆ. ಆದ್ದರಿಂದ ಪೂರ್ವಪೂರ್ವ ಆತ್ಮರಿಂದ ಸಂಸ್ಕಾರವನ್ನು ಪಡೆದ ಉತ್ತರೋತ್ತರ ಆತ್ಮರಿಗೆ ಅನುಮಾನಾದಿ ವ್ಯವಹಾರವು ಯುಕ್ತವಾಗುತ್ತದೆ. ಪರ್ವತ ಮುಂತಾದವುಗಳೂ ಸಹ ಪೂರ್ವಪೂರ್ವ ಕ್ಷಣದಿಂದ ಹುಟ್ಟಿದ ಸಂಸ್ಕಾರವನ್ನು ಹೊಂದಿರುವುದರಿಂದ ಪಕ್ವಾದಿ ಭಾವವನ್ನು ಹೊಂದುತ್ತವೆ. ಹೀಗೆ ಒಂದು ಮತ. ಈ ಮತದ ನಿರಾಕರಣಕ್ಕಾಗಿ 'ಓಂ ಉತ್ತರೋತ್ಪಾದೇ ಚ ಪೂರ್ವನಿರೋಧಾತ್ ಓಂ' ಎಂಬ ಸೂತ್ರವು ಹೊರಟಿದೆ. ಈ ಸೂತ್ರವನ್ನು 'ಉತ್ತರೋತ್ಪತ್ತಿಮಾತ್ರೇಣ' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ಉತ್ತರೋತ್ಪತ್ತಿಮಾತ್ರೇಣ ವಿನಾಶಾತ್ಪೂರ್ವವಸ್ತುನಃ ।।೧೯೭।।

ನ ಸಂಸ್ಕಾರಾರ್ಪಕತ್ವಂ ಚ ಯುಜ್ಯತೇ ಕಸ್ಯಚಿತ್ಕ್ವಚಿತ್ ।

ಅತೋ ಜ್ಞಾತಂ ಮಯೇತ್ಯಾದಿ ನ ಜ್ಞೇಯಮನುಮಾ ಕುತಃ ।।೧೯೮।।

ಮುಂದಿನ ಸದೃಶಕಾರ್ಯದ ಉತ್ಪತ್ತಿಮಾತ್ರದಿಂದಲೇ ಪೂರ್ವವಸ್ತುವಿನ ವಿನಾಶವಾಗುವುದು. ಆದ್ದರಿಂದ ಯಾವುದೇ ಕಾರಣಕ್ಕೆ ಯಾವುದೇ ಕಾರ್ಯದಲ್ಲಿ ಸಂಸ್ಕಾರಾರ್ಪಣವು ಕೂಡುವುದಿಲ್ಲ. ಆತ್ಮನಿಗೆ ಕ್ಷಣಿಕತ್ವವಿರುವುದರಿಂದ ಹಾಗೂ

ಸಂಸ್ಕಾರದ ಅರ್ಪಣವೂ ಅಸಂಭವವಾದ್ದರಿಂದ, ಯಾವುದು 'ಮಯಾ ಜ್ಞಾತಂ' (ನನ್ನಿಂದ ವ್ಯಾಪ್ತಿಜ್ಞಾನದ ಮೂಲಕ ತಿಳಿಯಲ್ಪಟ್ಟಿತೋ) , ಅದು 'ಅತ್ರ ವಿದ್ಯತೇ' (ಅಲ್ಲಿ ಇದೆ) ಎಂಬುದಾಗಿ ತಿಳಿಯಲು ಶಕ್ಯವಾಗುವುದಿಲ್ಲ. ಆದ್ದರಿಂದ ಅನುಮಾನವು ಎಲ್ಲಿಂದ?

ಹಾಗಾದರೆ ಸರ್ವಲೋಕ ಸಿದ್ಧವಾದ ಸಂಗತಿಯನ್ನು ಅಪಲಾಪ ಮಾಡುವುದು ಯುಕ್ತವಲ್ಲ. ಆದ್ದರಿಂದ ಇಲ್ಲಿ ಅನುಮಾನಾದಿ ವ್ಯವಹಾರವು ಕೂಡುವುದು. ಅದರ ಬಲದಿಂದ ಲೋಕದಲ್ಲಿ ಕಂಡುಬರದಿದ್ದರೂ ಸಂಸ್ಕಾರಾರ್ಪಕತ್ವವನ್ನು ಕಲ್ಪಿಸಬಹುದು. ಹೀಗೆ ಆಶಂಕಿಸಿದರೆ –

ಏಕತ್ವಮನುಭೂತಿಸ್ಥಂ ತ್ಯಕ್ತ್ವಾ ನಿರ್ಮಾನಿಕಾ ಭಿದಾ ।

ಕುತ ಆತ್ಮಾದಿಕೇಷು ಸ್ಯಾದ್ಬಲ್ಯೇವಾನುಭವೋ ಯತಃ ॥೧೯೯॥

ಪ್ರತ್ಯಭಿಜ್ಞೆಯಿಂದ ವಿಷಯೀಕರಿಸಲ್ಪಟ್ಟ ಏಕತ್ವವನ್ನು ಬಿಟ್ಟು, ಪ್ರಮಾಣರಹಿತವೂ ಪ್ರಮಾಣಬಾಧಿತವೂ ಆದ ಭೇದವು ಆತ್ಮಾದಿಗಳಲ್ಲಿ ಯಾವ ಕಾರಣದಿಂದ ಅಂಗೀಕಾರಕ್ಕೆ ಅರ್ಹವಾದೀತು? ಪ್ರತ್ಯಭಿಜ್ಞಾರೂಪ ಅನುಭವವು ಪ್ರಬಲವಾದುದರಿಂದ ಆತ್ಮಾದಿಗಳಿಗೆ ಏಕತ್ವವು ಸಿದ್ಧಿಸುವುದು.

ಹಾಗಾದರೆ ಕಾರ್ಯದ ಉತ್ಪತ್ತಿಮಾತ್ರದಿಂದಲೇ ಕಾರಣದ ನಾಶವಾಗಲಿ. ಆದರೂ ಕಾರಣಕ್ಕೆ ಕಾರ್ಯದಲ್ಲಿ ಸಂಸ್ಕಾರಾರ್ಪಕತ್ವವು ಏಕೆ ಇರುವುದಿಲ್ಲ ಎಂದು ಆಶಂಕಿಸಿದರೆ–

ಕಾರ್ಯಕಾರಣಯೋಶ್ಚೈಕಕಾಲೀನತ್ವಂ ವಿನಾ ಕಥಮ್ ।

ಪೂರ್ವಸಂಸ್ಕಾರಯೋಗೀ ಸ್ಯಾದುತ್ತರೋ ನಿಯಮೇನ ಚ ॥೨೦೦॥

ಕಾರ್ಯಕಾರಣಗಳಿಗೆ ಏಕತ್ವವಿಲ್ಲದೆಯೇ ಮುಂದಿನದು ನಿಯಮೇನ ಪೂರ್ವ-ಸಂಸ್ಕಾರಯೋಗಿಯು ಹೇಗೆ ಆಗುವುದು? ಏಕಕಾಲೀನತ್ವವಿದ್ದರೇ ಪೂರ್ವದ ವಸ್ತುವು ಉತ್ತರವಸ್ತುವಿನಲ್ಲಿ ಸಂಸ್ಕಾರವನ್ನು ಉಂಟುಮಾಡುವುದು ಕಂಡಿದೆ. ಭಿನ್ನಕಾಲೀನತ್ವವಿದ್ದರೆ ಸಂಸ್ಕಾರವನ್ನು ಉಂಟುಮಾಡುವುದು ಕಂಡಿಲ್ಲ.

ಸಂಬದ್ಧಾ ಏವ ಸಂಸ್ಕಾರಮನ್ಯತ್ರಾದಧತೇಽಖಿಲಾಃ ।

ಅಸಂಬದ್ಧಃ ಕಥಂ ಪೂರ್ವ ಉತ್ತರೇ ವಾಸನಾಕರಃ ॥೨೦೧॥

ಏಕಕಾಲತಯಾ ಯೋಗಂ ವಿನಾ ಸಂಸ್ಕಾರತಃ ಕಥಮ್ ।

ಚಂಪಕ ಮುಂತಾದ ಸಂಸ್ಕಾರವನ್ನುಂಟುಮಾಡತಕ್ಕ ಪದಾರ್ಥಗಳು

ತೈಲಾದಿಗಳಿಂದ ಸಂಬಂಧ್ಧವಾಗಿಯೇ, ಬೇರೆಕಡೆಗಳಲ್ಲಿ ತೈಲಾದಿಗಳಲ್ಲಿ ಸಂಸ್ಕಾರವನ್ನು ಉಂಟುಮಾಡುತ್ತವೆ. ಸಂಬಂಧವಿಲ್ಲದೆ ಸಂಸ್ಕಾರವನ್ನು ಉಂಟುಮಾಡುವುದಿಲ್ಲ. ಹೀಗೆ ನಿಯಮವಿದೆ. ಏಕಕಾಲತ್ವಯೋಗವಿಲ್ಲದ ವಸ್ತುಗಳಿಗೆ ಸಂಬಂಧವು ಯುಕ್ತವಲ್ಲ. ಆದಪ್ರಯುಕ್ತ ಉತ್ತರಪದಾರ್ಥದಿಂದ ಅಸಂಬಂಧ್ಧವಾದ ಪೂರ್ವ ಪದಾರ್ಥವು ಆ ಉತ್ತರಪದಾರ್ಥದಲ್ಲಿ ಸಂಸ್ಕಾರವನ್ನು ಹೇಗೆ ಉಂಟು ಮಾಡಬಲ್ಲದು?

ಇನ್ನು ಕಾರ್ಯದ ಉತ್ಪತ್ತಿಯಾದ ಕೂಡಲೇ ಕಾರಣದ ನಾಶವಾಗುವುದಾದರೆ, ಕಾರಣಕ್ಕೆ ಕಾರ್ಯದ ಸಂಬಂಧವಿಲ್ಲವೆನ್ನುವುದು ಕೂಡಬಹುದು. ಆದರೆ ಕಾರ್ಯದ ಉತ್ಪತ್ತಿಯಾದ ಕೂಡಲೇ ಕಾರಣದ ನಾಶವೆಂಬುದಾದರೂ ಏಕೆ? ಎಂಬ ಆಶಂಕೆಯನ್ನು 'ಕ್ಷಣಮಾತ್ರಂ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಕ್ಷಣಮಾತ್ರಮವಸ್ಥಾನಂ ಸ್ವೀಕೃತಂ ಸರ್ವವಸ್ತುಷು ।।೨೦೨।।

ಪೂರ್ವಮಧ್ಯಾಪರಕಲಾವಿಕಲಃ ಕ್ಷಣ ಇಷ್ಯತೇ ।

ಪೂರ್ವಕ್ಷಣದಲ್ಲಿರುವ ಕಾರಣವು ಕಾರ್ಯಕ್ಷಣದಲ್ಲಿಯೂ ಇರುವುದೆಂದರೆ, ಸರ್ವವಸ್ತುಗಳಿಗೂ ಅಂಗೀಕರಿಸಲ್ಪಟ್ಟಿರುವ ಕ್ಷಣಮಾತ್ರ ಸ್ಥಿತಿಗೆ ಭಂಗ ಬರುತ್ತದೆ. ಹಾಗಾದರೆ ಕಾರಣವು ಕ್ಷಣದ ಪೂರ್ವಭಾಗದಲ್ಲಿ ಸ್ಥಿತಿಯನ್ನು ಹೊಂದಿದ್ದು, ಕ್ಷಣದ ಮಧ್ಯಭಾಗದಲ್ಲಿ ಕಾರ್ಯವನ್ನು ಹುಟ್ಟಿಸಿ, ಕೊನೆಯ ಭಾಗದಲ್ಲಿ ಕಾರ್ಯದಲ್ಲಿ ಸಂಸ್ಕಾರವನ್ನು ಇಟ್ಟು ನಾಶಹೊಂದುತ್ತದೆ ಎಂದು ಅಂಗೀಕರಿಸಿದರೆ ದೋಷವೇನು? ಎಂಬ ಆಶಂಕೆಯನ್ನು 'ಪೂರ್ವ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ. ಪೂರ್ವಭಾಗ, ಮತ್ತು ಅಪರಭಾಗಗಳು ಇಲ್ಲದಿರುವಾಗ ಅದರಿಂದ ನಿರೂಪಿಸಲ್ಪಡುವ ಮಧ್ಯಭಾಗದ ಅಭಾವವೂ ಸಿದ್ಧವಾಗುತ್ತದೆ. ಪೂರ್ವ, ಮಧ್ಯ ಹಾಗೂ ಅಪರ ಎಂಬ ಭಾಗಗಳಿಲ್ಲದ ಸ್ಥಿತಿಯನ್ನೇ ಕ್ಷಣವೆಂದು ಸೌಗತರು (ಬೌದ್ಧರು) ಅಂಗೀಕರಿಸುತ್ತಾರೆ. ಈ ಕಾರಣದಿಂದ ಬೌದ್ಧರ ಕ್ಷಣಿಕತ್ವ ವಾದವು ನಿರಾಕರಿಸಲ್ಪಡುತ್ತದೆ.

ಹೀಗೆ ಕ್ಷಣಿಕತ್ವ ಸಾಧಕ ಅನುಮಾನಕ್ಕೆ ಅನುಗ್ರಾಹಕವಾದ ತರ್ಕಕ್ಕೆ ಪ್ರತಿತರ್ಕದಿಂದ ಪರಾಭವಗೊಳಿಸಿ, ಈಗ ಸ್ಥಿರವಾದ ವಸ್ತುವಿಗೆ ಅರ್ಥಕ್ರಿಯಾಕಾರಿತ್ವರೂಪ ಸತ್ವವು ಹೇಗೆ ಸಂಭವಿಸುವುದಿಲ್ಲವೋ ಹಾಗೆ ಕ್ಷಣಿಕ ವಸ್ತುವಿಗೂ ಸತ್ವವು ಸಂಭವಿಸುವುದಿಲ್ಲವಾದ್ದರಿಂದ ತರ್ಕದೋಷವು ಬರುತ್ತದೆ ಎಂದು ಪ್ರತಿಪಾದಿಸಲು **'ಓಂ ಅಸತಿ ಪ್ರತಿಜ್ಞೋಪರೋಧೋ ಯೌಗಪದ್ಯಮನ್ಯಥಾ ಓಂ'** ಎಂಬ ಸೂತ್ರವು ಹೊರಟಿದೆ. ಈ ಸೂತ್ರವನ್ನು 'ಪೂರ್ವ' ಇತ್ಯಾದಿ ವಚನದಿಂದ ವ್ಯಾಖ್ಯಾನ ಮಾಡುತ್ತಾರೆ –

ಪೂರ್ವಭಾವಭವಂ ಕಾರ್ಯಮುತ ತನ್ನಾಶಸಂಭವಮ್ ।।೨೦೩।।

ಯೌಗಪದ್ಯಂ ಸತಿ ಭವೇದುತ್ಪಾದ್ಯಾನಾಮಶೇಷತಃ ।

ವಿನಾಶೇ ಚೇನ್ನ ತತ್ಕಾರ್ಯಂ ಕಾರ್ಯೋತ್ಪತ್ತೌ ಚ ಕಾ ಪ್ರಮಾ ।।೨೦೪।।

ಕಾರ್ಯವು ಕಾರಣವಿರುವಾಗ ಆಗುವುದೋ? ಅಥವಾ ಕಾರಣದ ನಾಶವಾದ ಮೇಲೆ ಆಗುವುದೋ? ಕಾರಣವಿದ್ದಾಗಲೇ ಕಾರ್ಯವು ಸಂಭವಿಸುವುದಾದರೆ ಮುಂದಿನ ಎಲ್ಲ ಕಾರ್ಯಗಳಿಗೆ ಏಕಕಾಲದಲ್ಲಿ ಉತ್ಪತ್ತಿಯು ಬರಬೇಕಾದೀತು. ಕಾರಣ ವಿನಾಶವಾದ ಮೇಲೆ ಕಾರ್ಯವು ಉಂಟಾಗುವುದೆಂದರೆ, ಆಗ ಅದು ಅದರ ಕಾರ್ಯವೆನಿಸುವುದಿಲ್ಲ. ಹಾಗೂ ಪ್ರತಿಕ್ಷಣದಲ್ಲಿಯೂ ಕಾರ್ಯೋತ್ಪತ್ತಿಯು ಎಂಬುದಕ್ಕೆ ಯಾವ ಪ್ರಮಾಣವಿದೆ? ಯಾವ ಪ್ರಮಾಣವೂ ಇಲ್ಲವೆಂದು ಅರ್ಥ.

ಹಾಗಾದರೆ ದೇಹಾದಿಗಳಿಗೆ ಪೂರ್ವೋತ್ತರ ಕ್ಷಣಗಳಲ್ಲಿ ಪರಿಮಾಣಭೇದವು ಇರುವುದರಿಂದ ಭೇದದ ಸಿದ್ಧಿಯಾಗುವುದರಿಂದ, ಕ್ಷಣಿಕತ್ವದ ಸಿದ್ಧಿಯೂ ಆಗುವುದೆಂದು ಹೇಳಲಾಗಿದೆ ಎಂದರೆ, ಅದಕ್ಕೆ ಉತ್ತರವನ್ನು 'ಅಭೇದೇಽಪಿ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಅಭೇದೇಽಪಿ ವಿಶೇಷೇಣ ದೇಹದೀಪಫಲಾದಿಷು ।

ವಿಶೇಷದರ್ಶನಂ ಯುಕ್ತಮಸ್ಮಾಕಮನುಭೂತಿತಃ ।।೨೦೫।।

ವಿಶೇಷದರ್ಶನಂ ಮಾನಂ ಯದಿ ನ ಸ್ಥೈರ್ಯದೃಕ್ಕುತಃ ।

ದಿಕ್ಸುಖೇ ಚ ಖದೃಷ್ಟಾಂತಾದ್ಭಾವೌ ಸಚ್ಚೇತ್ಕ್ವಚಿದ್ಭವೇತ್ ।।೨೦೬।।

ಪೂರ್ವೋತ್ತರಕ್ಷಣಗಳಲ್ಲಿ ವಸ್ತುಭೇದವಿಲ್ಲದಿದ್ದರೂ, 'ವಿಶೇಷೇಣ' ಅಂದರೆ ಆರಂಭ ವಾದಕ್ಕಿಂತ ವೈಲಕ್ಷಣ್ಯವಿರುವುದರಿಂದ, ದೇಹ ದೀಪ ಫಲ ಅಂಕುರ ಮುಂತಾದವುಗಳಲ್ಲಿ ಪರಿಮಾಣಭೇದದರ್ಶನವು (ಪರಿಮಾಣವ್ಯತ್ಯಾಸವು) ನಮ್ಮ ಮತದಲ್ಲಿ ಯುಕ್ತವಾಗುತ್ತದೆ. ಆದರೆ ಆರಂಭವಾದಿಗಳು ಪರಿಮಾಣವನ್ನು ದ್ರವ್ಯವಿರುವವರೆಗೂ ಇರುವಂಥಹದು ಎಂದು ಅಂಗೀಕರಿಸುತ್ತಾರೆ. ಅವರ ಮತದಲ್ಲಿ ಪರಿಮಾಣದಲ್ಲಿನ ವ್ಯತ್ಯಾಸವು ದ್ರವ್ಯದ ಭೇದವನ್ನು ತಿಳಿಸುತ್ತದೆ.

'ಇದು ಆ ಹಣ್ಣು' ಎಂಬ ಪ್ರತ್ಯಭಿಜ್ಞೆಯಿಂದ ಪೂರ್ವೋತ್ತರ ಕ್ಷಣಗಳಲ್ಲಿ ವಸ್ತುವಿಗೆ ಅಭೇದವು ಸಿದ್ಧಿಸುವುದರಿಂದ, ಪರರ ಅನುಮಾನವು ಪ್ರಮಾಣಬಾಧಿತ ವಿಷಯವುಳ್ಳದ್ದು. ವಿಶೇಷದರ್ಶನವು ಪ್ರಮಾಣವೆಂಬ ಪಕ್ಷದಲ್ಲಿ, ಸ್ಥಿರತ್ವಸಾಧಕ ಪ್ರತ್ಯಭಿಜ್ಞೆಯು ಏಕೆ ಪ್ರಮಾಣವಾಗಲಾರದು? ಆಕಾಶ ದೃಷ್ಟಾಂತದಿಂದ ಭಾವ ವಸ್ತುವು ಕೆಲವು ಕಡೆಗಳಲ್ಲಿ ಇರುವುದಾದರೆ ದಿಕ್ ಸುಖಗಳೂ ಭಾವಗಳಾಗುವವು.

ಆಕಾಶದ ಭಾಗಗಳೇ ದಿಕ್ಕುಗಳು. ಆದರೂ ಆಕಾಶಕ್ಕೆ ಭಾಗಗಳಿವೆಯೆಂದು ತಿಳಿಸಲು ದಿಕ್ಕುಗಳನ್ನು ಗ್ರಹಿಸುತ್ತೇವೆ. ಆಕಾಶದಲ್ಲಿ ಭಾವತ್ವಸಾಧಕನ್ಯಾಯವು ಸುಖದಲ್ಲಿಯೂ ಸಮಾನವಾದ್ದರಿಂದ ಭಾವತ್ವವು.

ಇನ್ನು ವೈಭಾಷಿಕರು ಪ್ರಮಾಣವು ಪ್ರತ್ಯಕ್ಷ ಅನುಮಾನವೆಂದು ಎರಡೇ ವಿಧವುಳ್ಳದ್ದು. ಇವೆರಡರಲ್ಲಿ ಜ್ಞಾನವನ್ನು ಬಿಟ್ಟು ಉಳಿದ ಪದಾರ್ಥವೆಲ್ಲವೂ ಅನುಮೇಯವು ಅಂದರೆ ಅನುಮಾನದಿಂದ ತಿಳಿಯುವಂಥಹುದು, ಅವು ಪ್ರತ್ಯಕ್ಷಕ್ಕೆ ವಿಷಯವಾಗುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ಏಕೆ ನಿರಾಕರಿಸಲಿಲ್ಲ? ಎಂದು ಕೇಳಿದರೆ, ಅದನ್ನು 'ವಿಶ್ವಂ' ಇತ್ಯಾದಿ ವಚನದಿಂದ ಉತ್ತರಿಸುತ್ತಾರೆ –

ವಿಶ್ವಂ ಪ್ರತ್ಯಕ್ಷಗಂ ತ್ಯಕ್ತ್ವಾ ತಯೋರ್ಯೋಽನುಮಿತಂ ವದೇತ್ ।

ಮಾಯಾವಾದಿವದೇವಾಸಾವುಪೇಕ್ಷ್ಯೋ ಭೂತಿಮಿಚ್ಛತಾ ॥೨೦೭॥

ಯಾವನು ವಿಶ್ವವು ಪ್ರತ್ಯಕ್ಷದಿಂದ ವೇದ್ಯವಲ್ಲ, ಅನುಮಾನದಿಂದ ವೇದ್ಯವು ಎಂದು ಹೇಳುತ್ತಾನೋ, ಅವನು ಮಾಯಾವಾದಿಯಂತೆ ಉಪೇಕ್ಷೆಗೆ ಅರ್ಹನು.

ಇನ್ನು ನೀಲ ಮುಂತಾದ ರೂಪವಾದ ವಿಶ್ವವು ಪ್ರತ್ಯಕ್ಷಕ್ಕೆ ಅವೇದ್ಯವೆಂಬ ಸಿದ್ಧಾಂತವನ್ನು ಸೂತ್ರಕಾರರು ನಿರಾಕರಿಸಿಲ್ಲವಾದ್ದರಿಂದ ಅದು ಅವರಿಗೆ ಸಮ್ಮತವು ಎಂದು ಶಂಕಿಸಬಾರದು. ಏಕೆಂದರೆ ಪ್ರಮಾಣಕ್ಕೆ ಅವಿರುದ್ಧವೂ, ಪ್ರಮಾಣಕ್ಕೆ ಅನುಸಾರಿಯಾದುದೂ ಯಾವುದೋ ಅದೇ ಸೂತ್ರಕಾರರ ಅಭಿಪ್ರಾಯವೆಂದು ತಿಳಿಯಬೇಕು. ರೂಪಾದಿ ಪ್ರಪಂಚವು ಪ್ರತ್ಯಕ್ಷಕ್ಕೆ ಅವೇದ್ಯ ಎಂಬುದು ಪ್ರಮಾಣಕ್ಕೆ ವಿರುದ್ಧವಾದ್ದರಿಂದ ಅದು ಸೂತ್ರಕಾರರಿಗೆ ಸಮ್ಮತವಲ್ಲ. ಈ ಅಭಿಪ್ರಾಯವನ್ನೇ 'ಸರ್ವ' ಇತ್ಯಾದಿ ವಚನದಿಂದ ಆಕ್ಷೇಪಪೂರ್ವಕವಾಗಿ ಹೇಳುತ್ತಾರೆ –

ಸರ್ವಪ್ರಮಾಣಸಿದ್ಧಂ ಯದ್ಬುದ್ಧೇರ್ಭೇದೇನ ಸರ್ವದಾ ।

ಕಥಂ ನು ತಸ್ಯ ಬುದ್ಧಿತ್ವಂ ವಿಶ್ವಮನ್ಯಚ್ಚ ಕಿಂ ಪ್ರಮಮ್ ॥೨೦೮॥

ಯಾವುದು ಬುದ್ಧಿಯಿಂದ ಭಿನ್ನವೆಂದು ಸರ್ವದಾ ಸರ್ವಪ್ರಮಾಣಸಿದ್ಧವೋ ಅಂಥ ಪ್ರತ್ಯಕ್ಷಕ್ಕೆ ಗೋಚರವಾಗುವ ನೀಲ ಮುಂತಾದ ಪದಾರ್ಥ ಸಮೂಹಕ್ಕೆ ಬುದ್ಧಿರೂಪತ್ವವು ಹೇಗೆ? ಜ್ಞಾನಭಿನ್ನ ಜಗತ್ತು ಪ್ರತ್ಯಕ್ಷಕ್ಕೆ ವೇದ್ಯವಲ್ಲವೆಂದರೆ ಬೇರೆ ಯಾವ ಪ್ರಮಾಣವನ್ನು ಹೊಂದಿದೆ?

ಈ ಮತದಲ್ಲಿ ಇನ್ನೂ ಅನೇಕ ಸ್ಪಷ್ಟವಾದ ಮಹಾದೋಷಗಳಿದ್ದು ಅವುಗಳನ್ನು ಶಿಷ್ಯರೇ ಗುರುತಿಸಿ, ಈ ಮತವನ್ನು ಹೇಯವೆಂದು ತಿಳಿಯಲು ಶಕ್ಯವಾದುದರಿಂದ ಅದನ್ನು ದೂಷಿಸಲಿಲ್ಲವೆಂಬುದಾಗಿ ಹೇಳುತ್ತಾರೆ –

ಸರ್ವಲೋಕೋ ಬಿಭೇತ್ಯಂಜೋ ಯಸ್ಮಾದನುಭವಾತ್ಸದಾ ।

ತಸ್ಯಾಪಲಾಪಿನಃ ಕಿಂ ನ ನಿಷ್ಪ್ರಮಾಣಕವಾದಿನಃ ॥೨೦೯॥

ಯಾವ ಅನುಭವಕ್ಕೆ ಎಲ್ಲ ಜನರೂ ಬಹಳವಾಗಿ ಹೆದರುವರೋ, ಅದನ್ನು ಅಲ್ಲಗಳೆಯುವ ಹಾಗೂ ಅಪ್ರಾಮಾಣಿಕವಾದುದನ್ನು ನುಡಿಯುವ ಸೌತ್ರಾಂತಿಕನಿಗೆ ಯಾವ ದೂಷಣವು ತಾನೆ ಬರಲಾರದು? ಅಂದರೆ ಎಲ್ಲ ದೂಷಣಗಳೂ ಬಂದೇ ಬರುತ್ತವೆ ಎಂದು ತಾತ್ಪರ್ಯ.

ಪರಪಕ್ಷದಲ್ಲಿ ಅನುಭವ ವಿರೋಧವು ಹೇಗೆ ಎಂಬುದನ್ನು ತೋರಿಸುತ್ತಾರೆ –

ಸೋಽಹಂ ತದಿದಮೇವಾಹಂ ಸುಖೀ ಸದ್ಗಗನಂ ದಿಶಃ ।

ಸತ್ಯಾ ಇತ್ಯಾದ್ಯನುಭವಾಃ ಸದಾ ತತ್ಪ್ರತಿಪಕ್ಷಗಾಃ ॥೨೧೦॥

ಅವನೇ ನಾನು, ಅದು ಇದೇ, ನಾನು ಸುಖಿ, ಆಕಾಶ ಭಾವರೂಪವಾದುದು, ದಿಕ್ಕುಗಳು ಭಾವರೂಪವಾದವುಗಳು ಮುಂತಾದ ಅನುಭವಗಳು ಯಾವಾಗಲೂ ಅವರ ಪಕ್ಷಕ್ಕೆ ಪ್ರತಿಪಕ್ಷಗಳು. ಅಂದರೆ ಅವರು ಒಪ್ಪಿದ ಅರ್ಥಗಳಿಗೆ ವಿರುದ್ಧವಾದ ಅರ್ಥಗಳನ್ನು ವಿಷಯೀಕರಿಸುತ್ತವೆ.

ಅತೋ ನಿರ್ಮಾನಮಖಿಲಪ್ರಮಾಣಪ್ರತಿಪಕ್ಷಗಮ್ ।

ದುರ್ಮತಂ ಕೋ ನು ಗೃಹ್ಣೀಯಾದ್ವಿನಾಽಸುರತತಿಂ ಕ್ವಚಿತ್ ॥೨೧೧॥

ಆದ್ದರಿಂದ ಪ್ರಮಾಣರಹಿತವಾದ ಹಾಗೂ ಎಲ್ಲ ಪ್ರಮಾಣಗಳಿಗೆ ವಿರುದ್ಧಾರ್ಥ ವಿಷಯಕವಾದ ಆ ದುಷ್ಟಮತವನ್ನು ದುರ್ಜನರ ಸಮುದಾಯವಲ್ಲದೆ ಬೇರೆ ಯಾರು ತಾನೆ ಸ್ವೀಕರಿಸಿಯಾರು?

ಶೂನ್ಯಾಧಿಕರಣಮ್

ಈ ಅಧಿಕರಣದಲ್ಲಿ ಮಾಧ್ಯಮಿಕರ ಮತವನ್ನು ನಿರಾಕರಿಸುತ್ತಾರೆ. ಮಾಧ್ಯಮಿಕ ಮತವು ಹಿಂದೆ ಹೇಳಿದ ಅರ್ಥಕ್ಕೆ ವಿರುದ್ಧವಾಗಿದೆ ಎಂಬುದನ್ನು ತೋರಿಸಲು, ಆ ಮತವನ್ನು 'ಅಪರಃ' ಇತ್ಯಾದಿ ವಚನದಿಂದ ಉಪನ್ಯಾಸ ಮಾಡುತ್ತಾರೆ –

ಅಪರಃ ಶೂನ್ಯಮಖಿಲಂ ಮನೋವಾಚಾಮಗೋಚರಮ್ ।

ನಿರ್ವಿಶೇಷಂ ಸ್ವಯಂ ಭಾತಂ ನಿರ್ಲೇಪಮಜರಾಮರಮ್ ॥೨೧೨॥

ಇನ್ನೊಬ್ಬನು (ಮಾಧ್ಯಮಿಕನು) ಪಂಚಸ್ಕಂಧಾತ್ಮಕವಾದ ಸಕಲ ಜಗತ್ತು ಶೂನ್ಯವೇ (ಶೂನ್ಯದಿಂದ ಭಿನ್ನವಲ್ಲ). ಅದು ಮನೋವಚನಗಳಿಗೆ ಅಗೋಚರವು,

ಅಂದರೆ ಅವಿಷಯವು. ನಿರ್ಧರ್ಮಕವಾದುದು. ಪರಪ್ರಕಾಶ್ಯವಲ್ಲ. ಲೇಪರಹಿತ, ಅಂದರೆ ಪುಣ್ಯ– ಪಾಪ ಧರ್ಮಾಧರ್ಮಗಳ ಲೇಪವಿಲ್ಲ. ಮುಪ್ಪು ಮರಣಗಳಿಲ್ಲದ್ದು.

ಅಶೇಷದೋಷರಹಿತಮನಂತಂ ದೇಶಕಾಲತಃ ।

ವಸ್ತುತಶ್ಚ ತದಸ್ಮೀತಿ ನಿತ್ಯೋಪಾಸಾಪರೋಕ್ಷಿತಮ್ ।।೨೧೩।।

ದುಃಖಾದಿ ಸಕಲದೋಷರಹಿತವು. ದೇಶಕಾಲಗಳಿಂದ ಅನಂತವು. ವಸ್ತುತಃ ಅನಂತವು ಅಂದರೆ ವಸ್ತುವಸ್ತುಗಳಲ್ಲಿ ಭೇದವಿಲ್ಲದಿರುವಿಕೆ. ಆ ಶೂನ್ಯನೇ ನಾನು ಆಗಿದ್ದೇನೆ ಎಂಬ ನಿತ್ಯೋಪಾಸನೆಯಿಂದ ಅಪರೋಕ್ಷೀಕರಿಸಲ್ಪಟ್ಟದ್ದು.

ರಾಗಾದಿದೋಷರಹಿತಂ ತದ್ಭಾವಂ ಯೋಗಿನಂ ನಯೇತ್ ।

ತಸ್ಯೈವಾನಾದಿಸಂವೃತ್ಯಾ ನಾನಾಭೇದಾತ್ಮಕಂ ಜಗತ್ ।।೨೧೪।।

ಸದಿವಾಭಾತಿ ಸತ್ಯತ್ವಂ ಸಾಂವೃತಂ ತಸ್ಯ ಚೇಷ್ಯತೇ ।

ಪಾರಾಮಾರ್ಥಿಕಸತ್ಯತ್ವಂ ಶೂನ್ಯಾದನ್ಯಸ್ಯ ನ ಕ್ವಚಿತ್ ।।೨೧೫।।

ಆ ಶೂನ್ಯವು ರಾಗಾದಿ ದೋಷರಹಿತನಾದ ಯೋಗಿಯನ್ನು ಶೂನ್ಯಭಾವರೂಪ ಮೋಕ್ಷಕ್ಕೆ ಒಯ್ಯುತ್ತದೆ. ಶೂನ್ಯದ ಸಂಬಂಧಿಯೇ ಆದ ಅನಾದಿಯಾದ ಅವಿದ್ಯೆಯಿಂದ ನಾನಾ ಭೇದಾತ್ಮಕವಾದ ಜಗತ್ತು ಸತ್ಯವೆಂಬುದಾಗಿ ತೋರುತ್ತದೆ. ಆರೋಪಿತವಾದ ಜಗತ್ತಿಗೆ ಅವಿದ್ಯಾಕಲ್ಪಿತ (ಸಾಂವೃತ) ಸತ್ಯತ್ವವು ಅಂಗೀಕರಿಸಲ್ಪಡುತ್ತದೆ. ಶೂನ್ಯವನ್ನು ಬಿಟ್ಟು ಬೇರೆ ಯಾವುದೂ ಪಾರಮಾರ್ಥಿಕ (ಆತ್ಯಂತಿಕ) ಸತ್ಯತ್ವವು ಇರುವುದಿಲ್ಲ.

ಸಾಂವೃತೇನೈವ ಸತ್ವೇನ ವ್ಯವಹಾರೋऽಖಿಲೋ ಭವೇತ್ ।

ಶೂನ್ಯಾತ್ಸಂವೃತಿಯೋಗೇನ ವಿಶ್ವಮೇತತ್ಪ್ರವರ್ತತೇ ।।೨೧೬।।

ಸೃಷ್ಟಿಕಾಲೇ ಪುನಶ್ಶಾಂತೇ ಸ್ತಿಮಿತಂ ಶೂನ್ಯತಾಂ ವ್ರಜೇತ್ ।

ಎಲ್ಲ ವ್ಯವಹಾರವೂ ಸಾಂವೃತ ಸತ್ಯತೆದಿಂದಲೇ ಆಗುವುದು. ಶೂನ್ಯತತ್ವದ ದೆಶೆಯಿಂದ ಅಜ್ಞಾನದ ಸಂಬಂಧದಿಂದ ಈ ಜಗತ್ತು ಸೃಷ್ಟಿಕಾಲದಲ್ಲಿ ಹುಟ್ಟುತ್ತದೆ ಮತ್ತು ಪ್ರಲಯದಲ್ಲಿ ನಿಷ್ಕ್ರಿಯವಾಗಿ ಶೂನ್ಯತ್ವವನ್ನು ಹೊಂದುತ್ತದೆ.

ಇತಿ ಬ್ರೂತೇ ತಮುದ್ದಿಶ್ಯ ಜಗಾದ ಜಗತಾಂ ಗುರುಃ ।।೨೧೭।।

ಹೀಗೆ ಹೇಳುವ ಮಾಧ್ಯಮಿಕನನ್ನು ಉದ್ದೇಶಿಸಿ ಜಗದ್ಗುರುಗಳಾದ ಬಾದರಾಯಣರು ಈ ಅಧಿಕರಣವನ್ನು ಹೇಳಿದರು.

ಸೂತ್ರ: ಓಂ ನಾಸತೋದೃಷ್ಟತ್ವಾತ್ ಓಂ

ಶೂನ್ಯದಿಂದಲೇ ಜಗತ್ತು ಹುಟ್ಟುತ್ತದೆ ಎಂದು ಯಥಾಶ್ರುತವಾಗಿ ಹೇಳಿರುವುದನ್ನು ನಿರಾಕರಿಸಲು ಈ ಸೂತ್ರವು ಹೊರಟಿದೆ. ಅದನ್ನು 'ನಾಸತೋ' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ನಾಸತೋ ಜಗತೋ ಭಾವೋ ನ ಹಿ ದೃಷ್ಟಾಸತೋ ಜನಿಃ ।

ಸತಃ ಕ್ವಚಿತ್ಪ್ರಮಾಣಂ ಚ ದೃಷ್ಟಿರೇವಾಖಿಲಾದ್ವರಮ್ ॥೨೧೮॥

ಅಸತ್ ಅಥವಾ ಶೂನ್ಯದಿಂದ ಜಗತ್ತಿನ ಉತ್ಪತ್ತಿಯು ಸಂಭವಿಸುವುದಿಲ್ಲ. ಏಕೆಂದರೆ ಯಾವುದೇ ಉಂಟಾಗತಕ್ಕ ಕಾರ್ಯಕ್ಕೆ ಅಸತ್ತಿನಿಂದ ಜನನವು ಎಲ್ಲಿಯೂ ಕಂಡಿಲ್ಲ. ಪ್ರತ್ಯಕ್ಷವೇ ಎಲ್ಲ ಆಗಮ ಹಾಗೂ ಅನುಮಾನಗಳಿಗಿಂತಲೂ ಶ್ರೇಷ್ಠವಾದ ಪ್ರಮಾಣವು.

ಹಾಗಾದರೆ ಶೂನ್ಯದಿಂದ ಜಗತ್ತಿನ ಉತ್ಪತ್ತಿಯೆಂಬ ವಿಷಯದಲ್ಲಿ ಪ್ರತ್ಯಕ್ಷ ಮತ್ತು ಆಗಮಗಳು ಪ್ರಮಾಣವಾಗದಿರಲಿ. ಆದರೆ ಅನುಮಾನವು ಪ್ರಮಾಣವಾಗುತ್ತದೆ ಎಂದು ಹೇಳಿದರೆ, ಆ ಅನುಮಾನಕ್ಕೆ ತರ್ಕದಿಂದ ಪ್ರತಿಘಾತವನ್ನು ಹೇಳಲು '**ಓಂ ಉದಾಸೀನಾ ನಾಮಪಿ ಚೈವಂ ಸಿದ್ಧಿಃ ಓಂ**' ಎಂಬ ಸೂತ್ರವು. ಅದನ್ನು 'ಯದ್ಯೇವಂ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

ಯದ್ಯೇವಂ ಸಪ್ತಮರಸಾನ್ಮಧುರಾದಿವ ಪೀನತಾ ।

ಭವೇಜ್ಜನಸ್ಯ ಮಾರ್ಜಾರಶೃಂಗಂ ಗೋರಿವ ಘಾತಕಮ್ ॥೨೧೯॥

ಹೀಗೆ ಅಸತ್ತಿನಿಂದಲೇ ಕಾರ್ಯವೊಂದು ಹುಟ್ಟುತ್ತದೆ ಎಂದರೆ, ಮಧುರ ರಸದಿಂದ ಹೇಗೋ ಹಾಗೆ ಸಪ್ತಮ ರಸದಿಂದಲೂ ಜನರ ದೇಹಪುಷ್ಟಿಯು ಆಗಲಿ, ಗೋವಿನ ಶೃಂಗದಂತೆ ಬೆಕ್ಕಿನ ಶೃಂಗವೂ ಘಾತಕವಾಗಲಿ.

ಕಾರ್ಯಾರ್ಥೀ ಕಾರಣಂ ಸಚ್ಚ ನೋಪಾದದ್ಯಾತ್ಕಥಂಚನ ।

ನ ಪ್ರವರ್ತೇತ ಚೇಷ್ಟಾಯ ಶೂನ್ಯಾದೇವೇಷ್ಟಸಂಭವಾತ್ ॥೨೨೦॥

ದೇಶಕಾಲಾದಿನಿಯಮೋ ನ ಹಿ ಶೂನ್ಯಾತ್ಸತೋ ಭವೇತ್ ।

ಪಟ ಮುಂತಾದ ಕಾರ್ಯವನ್ನು ಅಪೇಕ್ಷಿಸುವ ನೇಕಾರ ಮುಂತಾದವರು ಸತ್ಯವಾದ ತಂತು ಮುಂತಾದ ಉಪಾದಾನ ಕಾರಣಗಳನ್ನು ಸ್ವೀಕಾರಮಾಡದಿರಲಿ. ಏಕೆಂದರೆ ಅಸತ್ತಿನಿಂದಲೇ ಪಟಾದಿಗಳು ಉತ್ಪತ್ತಿಯಾಗುತ್ತವೆ. ಶೂನ್ಯದಿಂದಲೇ ಇಷ್ಟಕಾರ್ಯವು ಸಂಭವಿಸುವುದರಿಂದ ಯಾರೂ ಕೂಡ ಪಟದ ನಿರ್ಮಾಣ

ಮುಂತಾದ ಕಾರ್ಯದಲ್ಲಿ ತೊಡಗುವುದೇ ಇಲ್ಲ. ಅಸತ್ತಿನಿಂದ ಸತ್ಯ ಪದಾರ್ಥಗಳ ಸೃಷ್ಟಿಯನ್ನು ಒಪ್ಪುವುದಾದರೆ, ತಂತು ಮುಂತಾದ ಉಪಾದಾನ ಪದಾರ್ಥಗಳು ಪುರುಷನ ಇಚ್ಛಾ ಪ್ರಯತ್ನಾದಿಗಳು ಇಲ್ಲದಿದ್ದರೂ ಪಟಾದಿಗಳ ಉತ್ಪತ್ತಿಯು ಆಗಬೇಕಾಗುತ್ತದೆ. ಜೊತೆಗೆ ಶೂನ್ಯದಿಂದಾಗುವ ಕಾರ್ಯಕ್ಕೆ ಯಾವುದೇ ದೇಶಕಾಲಾದಿ ನಿಯಮವು ಇರುವುದಿಲ್ಲ.

ಹಾಗಾದರೆ ಆದಿಸೃಷ್ಟಿಯ ಸಮಯದಲ್ಲಿ ಮಾತ್ರವೇ ಶೂನ್ಯದಿಂದ ಕಾರ್ಯದ ಉತ್ಪತ್ತಿಯು, ಸರ್ವದಾ ಅಲ್ಲವೆಂದು ಹೇಳುತ್ತೇವೆ. ಆದಿಕಾಲವನ್ನು ಹೊರತು ಪಡಿಸಿದ ಕಾಲಗಳಲ್ಲಿಯಾದರೋ ಕರ್ತೃ ಮುಂತಾದ ಕಾರಣಗಳ ಸಮೂಹದಿಂದಲೇ ಕಾರ್ಯದ ಉತ್ಪತ್ತಿಯೆಂದು ಹೇಳುತ್ತೇವೆ. ಆದ್ದರಿಂದ ಅತಿಪ್ರಸಂಗವು ಬರುವುದಿಲ್ಲ. ಈ ಆಕ್ಷೇಪವನ್ನು 'ಪುರುಷೇಚ್ಛಾನುಸಾರೇಣ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಪುರುಷೇಚ್ಛಾನುಸಾರೇಣ ಯದಿ ಕಿಂಚಿತ್ಪ್ರಜಾಯತೇ ।।೨೨೧।।

ಕಿಂ ನಾನುಮೀಯತೇ ತದ್ವದ್ವಸ್ತುತ್ವಾತ್ಪುರುಷೋದ್ಭವಃ ।

ಸರ್ವಸ್ಯಾಪಿ ....।।

ಒಂದು ಪಕ್ಷದಲ್ಲಿ ಪುರುಷನ ಇಚ್ಛೆಗೆ ಅನುಸಾರವಾಗಿ ಯಾವುದೇ ಈಗಿನ ಕಾಲದ ಕಾರ್ಯವು ಹುಟ್ಟುವುದಾದರೆ, ಇದೇ ಕಾರ್ಯತ್ವ ಯುಕ್ತಿಯಿಂದ ಆದಿಕಾಲೀನ ಸರ್ವ ಕಾರ್ಯಕ್ಕೂ ಪುರುಷೇಚ್ಛಾನುಸಾರವಾದ ಉತ್ಪತ್ತಿಯನ್ನು ಏಕೆ ಅನುಮೇಯಿಸಬಾರದು?

ಹೀಗೆ ಅಸತ್ತಿಗೆ ಜಗತ್ಕಾರಣವನ್ನು ಹೇಳುವುದರ ಮೂಲಕ ವಿಶ್ವಕ್ಕೆ ಅಸತ್ವವನ್ನು ಪ್ರತಿಪಾದಿಸುವ ಮತವನ್ನು ನಿರಾಕರಿಸಲು **'ಓಂ ನಾಭಾವ ಉಪಲಬ್ಧೇಃ ಓಂ'** ಎಂಬ ಸೂತ್ರವು ಹೊರಟಿದೆ. ಈ ಸೂತ್ರವನ್ನು 'ನ ಚಾಭಾವೋ' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

................ನ ಚಾಭಾವೋ ವಿಶ್ವಂ ಸದಿತಿ ಗಮ್ಯತೇ ।।೨೨೨।।

ಯತೋಽನುಭವವಿರೋಧೇ ತು ವಚನಂ ವಾದಿನಃ ಕುತಃ ।

'ಭವತೀತಿ ಭಾವಃ। ನ ಭಾವೋಽಭಾವಃ।' ಇರುವುದು ಭಾವ, ಇಲ್ಲದಿರುವುದು ಅಭಾವ. ಹೀಗೆ ಅಭಾವ ಎಂದರೆ ಅಸತ್ ಎಂದರ್ಥ. ಪ್ರತ್ಯಕ್ಷ ಪ್ರಮಾಣದಿಂದ ವಿಶ್ವವು ಸತ್ಯವೆಂದೇ ತಿಳಿಯಲ್ಪಡುವುದರಿಂದ, ಸಮಸ್ತ ವಿಸ್ವವು ಅಸತ್ತು ಎಂಬುದು ಅಸಂಭವ. ಸತ್ಯವೆಂದು ಅನುಭವದಲ್ಲಿ ತೋರುವುದೂ ಅಸತ್ಯವೆಂದಾದರೆ, ವಿಶ್ವವು ಅಸತ್ಯ ಎಂಬ ಶೂನ್ಯವಾದಿಯ ವಚನವೂ ಅಸತ್ಯವೇ ಆಗಬೇಕಾಗುವುದು. ಅಂದರೆ

ವಿಶ್ವವು ಅಸತ್ಯ ಎಂಬ ಅವನ ವಾದವು ಸಿದ್ಧಿಸುವುದಿಲ್ಲ.

ಸ್ವಪ್ನಭ್ರಾಂತಿವದೇವೇದಂ ಸಂವೃತ್ಯೈವೋಪಲಭ್ಯತೇ ।।೨೨೩।।

ಯದಿ ಸತ್ತ್ವೇನ ....।

ಸ್ವಪ್ನ ಭ್ರಾಂತಿಗಳಲ್ಲಿ ಇಲ್ಲದ ಗಜಾದಿಗಳೇ ಸತ್ಯವೆಂಬಂತೆ ತೋರುವ ಹಾಗೆ, ಈ ಜಗತ್ತು ಅವಿದ್ಯೆಯ ಕಾರಣದಿಂದ ಸತ್ಯವೆಂದು ತೋರುತ್ತದೆ. ವಿಶ್ವಕ್ಕೆ ಶೂನ್ಯವು ಕಾರಣ ಎಂದರೆ ಹೀಗೆ ಅರ್ಥ. ಸತ್ಯವೆಂಬ ತೋರಿಕೆಯಿಂದ ವಿಶ್ವದ ಸತ್ಯತೆಯು ಹೇಗೆ ಸಿದ್ಧಿಸುತ್ತದೆ?

ಇಲ್ಲದಿರುವುದನ್ನು ಪ್ರಕಾಶಿಸುವ ಶಕ್ತಿಯುಳ್ಳ ಅವಿದ್ಯೆಯಿಂದಲೇ ಭ್ರಾಂತಿ ವೈಚಿತ್ರ್ಯ ಮುಂತಾದುವೆಲ್ಲವೂ ಸಂಭವಿಸುತ್ತಿರುವಾಗ ಅಧಿಷ್ಠಾನಾದಿಗಳ ಸತ್ಯತೆಯ ಅಂಗೀಕಾರವು ವ್ಯರ್ಥವಾಗುತ್ತದೆ. ಇದರಿಂದ ಶೂನ್ಯವಾದಿಯ ವಚನಕ್ಕೆ ಅಸಿದ್ಧಿಯೂ ಬರುವುದಿಲ್ಲ. ಏಕೆಂದರೆ ಅದು ಪ್ರತ್ಯಕ್ಷದಿಂದಲೇ ಸಿದ್ಧಿಸುತ್ತದೆ. ಹೀಗೆ ಕಲ್ಪಿತ ಸತ್ಯತೆಯ ಮಾತ್ರದಿಂದಲೇ ವ್ಯವಹಾರಗಳು ಸಂಭವವಾಗುತ್ತಿರಲು, ಪಾರಮಾರ್ಥಿಕ ಸತ್ಯತೆಯ ಪ್ರಯೋಜನವು ಇರುವುದಿಲ್ಲ. ಹೀಗೆ ಆಶಂಕೆಯು. ಅದರ ಪರಿಹಾರಕ್ಕಾಗಿ ಹೊರಟ 'ಓಂ ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್ ಓಂ' ಎಂಬ ಸೂತ್ರವನ್ನು 'ಕಿಂ ಚ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

....................ಕಿಂಚಾತ್ರ ಭ್ರಮೋ ನೈವ ನಿವರ್ತತೇ ।

ಹಗ್ಗದಲ್ಲಿ ತೋರಿದ ಹಾವಿನ ವಿಷಯದಲ್ಲಿ ಹೇಗೋ ಹಾಗೆ ಪ್ರಪಂಚದ ವಿಷಯದಲ್ಲಿ ಸತ್ಯತ್ವದ ಅನುಭವವು ಭ್ರಮರೂಪವಾದರೆ, ಹಿಂದೆ ಹೇಳಿದುದು ಸರಿಯಾಗಬಹುದು. ಆದರೆ ಪ್ರಪಂಚದ ಸತ್ಯತೆಯ ಅನುಭವವು ಭ್ರಮೆಯಲ್ಲ. ಹಾಗೆ ಅದು ಭ್ರಮೆಯಾಗಿದ್ದರೆ, ಈ ಪ್ರಪಂಚದಲ್ಲಿ ಸತ್ಯತೆಯನ್ನು ತೋರಿಸುವ ಭ್ರಮೆಯು ನಿವೃತ್ತಿಯನ್ನೇ ಹೊಂದುವುದಿಲ್ಲವೇಕೆ? ಪ್ರಪಂಚದ ಸತ್ಯತೆಯನ್ನು ತಿಳಿಸುವ ಪ್ರತ್ಯಕ್ಷಜನ್ಯ ಜ್ಞಾನಕ್ಕೆ ಬಾಧಕವನ್ನು ನಾವು ಕಾಣುತ್ತಿಲ್ಲ. ಆದ್ದರಿಂದ ಅದು ಭ್ರಮೆಯಲ್ಲ ಎಂದು ತಾತ್ಪರ್ಯ.

ಹಾಗಾದರೆ ಪ್ರಪಂಚದ ಸತ್ಯತ್ವಕ್ಕೆ ಬಾಧವು ಈಗ ಇಲ್ಲವೆಂದು ಒಪ್ಪಿದರೂ, ಮುಂದಿನ ಕಾಲದಲ್ಲಿ ಅದಕ್ಕೆ ಬಾಧವು ಬರುವುದರಿಂದ ನಿವೃತ್ತಿ ಹೊಂದುವುದು ಎಂದು ಆಶಂಕಿಸಿದರೆ –

ಅನಾದೇರಸ್ಯ ವಿಶ್ವಸ್ಯ ನಿವೃತ್ತಿರ್ಯದಿ ಚೇಷ್ಯತೇ ।।೨೨೪।।

ನಿವೃತ್ತಿಶ್ಚ ನಿವರ್ತೇತ ತಸ್ಯಾ ಭ್ರಾಂತಿತ್ವಸಂಭವಾತ್ ।

ಅನಾದಿಯಿಂದ ಬಂದಿರುವ ಈ ಜಗತ್ಸತ್ಯತ್ವ ಜ್ಞಾನಕ್ಕೆ ಬಾಧವು ಬರುವುದೆಂದು ಅಂಗೀಕರಿಸುವುದಾದರೆ, ಆ ಬಾಧ ಜ್ಞಾನಕ್ಕೂ ಬಾಧವು ಬರಬೇಕಾಗುವುದು. ಇದರಿಂದ ಪ್ರಪಂಚವು ಸತ್ಯವಲ್ಲ ಎಂಬ ಜ್ಞಾನಕ್ಕೆ ಬಾಧವಿರುವದರಿಂದ ಪ್ರಪಂಚವು ಸತ್ಯವೆಂದೇ ನಿರ್ಣಯವಾಗುವುದು.

ಹಾಗಾದರೆ ಪ್ರಪಂಚದ ನಿವೃತ್ತಿಯೆಂದರೆ ಶೂನ್ಯವೇ. ಅದು ಪಾರಮಾರ್ಥಿಕವು, ಕಲ್ಪಿತವಲ್ಲ. ಏಕೆಂದರೆ, ಅದು ಯಾರಿಂದಲೂ ಕಾಣಲ್ಪಟ್ಟಿಲ್ಲ. ಕಾಣದಿದ್ದ ವಸ್ತುವಿನ ಬಗ್ಗೆ ಸಂಸ್ಕಾರವು ಉಂಟಾಗುವುದು ಅಶಕ್ಯ. ಸಂಸ್ಕಾರವಿದ್ದರೆ ಕಲ್ಪನೆಯು ಸಂಭವ. ಆದ್ದರಿಂದ ಪ್ರಪಂಚದ ನಿವೃತ್ತಿ ಜ್ಞಾನಕ್ಕೆ ಬಾಧವು ಬರುವುದಿಲ್ಲ. ಆದರೆ ಕಣ್ಣಿಗೆ ಗೋಚರವಾಗುವ ಪ್ರಪಂಚ ಸತ್ಯತೆಯ ಜ್ಞಾನಕ್ಕೆ ಕಲ್ಪಿತತ್ವವು ಸಂಭವಿಸುವುದರಿಂದ, ಆ ಜ್ಞಾನವೇ ಬಾಧಕ್ಕೆ ಅರ್ಹವಾದುದು. ಹೀಗೆ ಆಶಂಕಿಸಿದರೆ –

ದೃಷ್ಟಸ್ಯ ಭ್ರಾಂತಿತೋ ಚೇತ್ಸ್ಯಾದದೃಷ್ಟೇ ನ ಭ್ರಮಃ ಕುತಃ ।।೨೨೫।।

ಗವಾಮಶೃಂಗಿಭಾವೇನ ನ ಹಿ ಸ್ಯಾಚ್ಛಶಶೃಂಗಿತಾ ।

ಕಾಣುವ ಪದಾರ್ಥಕ್ಕೆ ಕಲ್ಪಿತ್ವವಿರುವುದಾದರೆ ಕಾಣದಿರುವುದರಲ್ಲಿ ಕಲ್ಪಿತತ್ವವು ಏಕೆ ಸಂಭವಿಸಲಾರದು? ಇದನ್ನೇ ದೃಷ್ಟಾಂತದಿಂದ ವಿವರಿಸುತ್ತಾರೆ. ಒಬ್ಬನು ಗೋವಿಗೆ ಕೋಡು ಇದೆ ಎಂದು ಹೇಳುತ್ತಾನೆ. ಇನ್ನೊಬ್ಬನು ಮೊಲಕ್ಕೆ ಕೋಡು ಉಂಟೆಂದು ಹೇಳುತ್ತಾನೆ. ಆಗ ಪರರು ಹೇಳಿದ ರೀತಿಯಿಂದ, ಗೋವಿಗೆ ಕೋಡು ಉಂಟೆಂಬುದು ಕಲ್ಪಿತವಾದುದು, ಏಕೆಂದರೆ ಅದು ಕಣ್ಣಿಗೆ ಕಾಣಿಸುತ್ತದೆ. ಆದರೆ ಮೋಲಕ್ಕೆ ಕೋಡು ಉಂಟೆಂಬುದು ಕಲ್ಪಿತವಲ್ಲ, ಏಕೆಂದರೆ ಅದು ಕಣ್ಣಿಗೆ ಕಾಣಿಸುವುದಿಲ್ಲ. ಹೀಗೆ ಹೇಳಬೇಕಾಗುತ್ತದೆ. ಇದು ಅನುಭವಕ್ಕೆ ವಿರುದ್ಧ. ಲೋಕಾನುಭವಕ್ಕೆ ಅವಿರುದ್ಧವಾಗಿಯೇ ಪರಮಾರ್ಥ ತತ್ವವನ್ನು ತಿಳಿಯಬೇಕು.

ಈವರೆಗಿನ ಗ್ರಂಥದಿಂದ ಪ್ರತ್ಯಕ್ಷಬಲದಿಂದ ವಿಶ್ವದ ಸತ್ಯತೆಯು ಸಮರ್ಥಿಸಲ್ಪಟ್ಟಿತು. ಹಾಗೂ ಅದರ ವಿಷಯದಲ್ಲಿ ಬಾಧಕ ಶಂಕೆಯೂ ನಿವಾರಿಸಲ್ಪಟ್ಟಿತು. ಆದರೆ ಅದರಿಂದ ಏನು ಸಿದ್ಧಿಸಿದಂತಾಯಿತು? ಏಕೆಂದರೆ ಸತ್ಯಕ್ಕೂ ಕಾರಣತ್ವವಿದೆ ಎನ್ನುವುದಕ್ಕೆ ಪ್ರಮಾಣವಿಲ್ಲ ಎಂದು ಪೂರ್ವಪಕ್ಷಿಯು ಪ್ರಶ್ನಿಸಿದರೆ, ಅದಕ್ಕೆ ಉತ್ತರವನ್ನು ಹೇಳುತ್ತ ಸಿದ್ಧಾಂತವನ್ನು ತಿಳಿಸುತ್ತಾರೆ –

ಅಸ್ಮಾಕಂ ತು ಪ್ರಮಾಣೇನ ಪ್ರಸಾದಾದೀಶ್ವರಸ್ಯ ಚ ।।೨೨೬।।

ಉಕ್ತಭಂಗ್ಯಾಗಮಾನಾಂ ಚ ಪ್ರಾಮಾಣ್ಯಾದ್ಯುಜ್ಯತೇಽಖಿಲಮ್ ।

ಸತ್ಕಾರಣತ್ವವಾದಿಗಳಾದ ನಮಗಾದರೆ ಬಾಧರಹಿತ ಪ್ರಮಾಣವಿರುವುದರಿಂದ, ಈಶ್ವರನ ಸಂಕಲ್ಪವಿರುವುದರಿಂದ ಹಾಗೂ ಹಿಂದೆ ಹೇಳಿದ ರೀತಿಯಿಂದ

ಆಗಮಗಳಿಗೆ ಪ್ರಾಮಾಣ್ಯವಿರುವುದರಿಂದ ಪರರು ವಿಶ್ವಸತ್ಯತ್ವ ವಿಷಯದಲ್ಲಿ ಮಾಡಿದ ಆಕ್ಷೇಪವೆಲ್ಲವೂ ಯುಕ್ತವೇ ಆಗುತ್ತದೆ.

ಹೀಗೆ ವಿಶ್ವ ಸತ್ಯತ್ವವನ್ನು ಸಮರ್ಥಿಸಿ, ಈಗ ವಿಶ್ವಮಿಥ್ಯಾತ್ವದ ಬಗ್ಗೆ ಪರರು ಹೇಳಿದ ಅನುಮಾನವನ್ನು ದೂಷಿಸಲು, ಮೊದಲು ಪರರ ಅನುಮಾನವನ್ನು ತೋರಿಸುತ್ತಾರೆ –

ದೃಶ್ಯತ್ವಾದ್ವಿಮತಂ ಮಿಥ್ಯಾ ಸ್ವಪ್ನವಚ್ಚೇದಿಯಂ ಚ ಮಾ ।।೨೨೭।।

ಮಿಥ್ಯಾ ಚೇತ್ಸಾಧ್ಯಸಿದ್ಧಿರ್ನ ವ್ಯಭಿಚಾರೋ ನ ಚೇದ್ಭವೇತ್ ।

ವಿವಾದ ವಿಷಯವಾದ ವಿಶ್ವವು ದೃಶ್ಯತ್ವವಿದ್ದುದರಿಂದ ಸ್ವಪ್ನದಂತೆ ಸುಳ್ಳು ಎಂಬ ಈ ದೃಶ್ಯತ್ವಾನುಮಾನವೇ ಸುಳ್ಳು ಎಂದಾದರೆ ಸಾಧ್ಯವು ಸಿದ್ಧವಾಗುವುದಿಲ್ಲ. ದೃಶ್ಯತ್ವ ಹೇತುವು ಸುಳ್ಳಲ್ಲ (ಸತ್ಯವು) ಎಂದು ಒಪ್ಪಿದರೆ, ಆಗ ದೃಶ್ಯತ್ವ ಹೇತುವಿನಲ್ಲಿಯೇ ಮಿಥ್ಯಾತ್ವ ಸಾಧ್ಯ ವ್ಯಭಿಚಾರವು ದೃಶ್ಯತ್ವಕ್ಕೆ ಬರುತ್ತದೆ.

ಹಾಗಾದರೆ ಜ್ಞಾನಕ್ಕೆ ವಿಷಯವಾಗುವ ದೃಶ್ಯತ್ವವು ಸುಳ್ಳು ಎಂದೇ ಹೇಳುತ್ತೇವೆ. ಆದರೂ ಸುಳ್ಳಾದುದು ಸಾಧ್ಯದ ಸಾಧಕವಾಗಲಾರದು ಎಂದು ಹೇಳಬಾರದು. ಏಕೆಂದರೆ ವರ್ಣದಲ್ಲಿ ಆರೋಪಿತವಾದ ದೀರ್ಘತ್ವ, ಹ್ರಸ್ವತ್ವ ಮುಂತಾದವು ಮಿಥ್ಯವೇ ಆಗಿದ್ದರೂ, ಅವುಗಳಿಗೆ ಅರ್ಥಭೇದಾದಿ ಸಾಧಕತ್ವವು ಸಿದ್ಧವಾಗಿದೆ. ಹೀಗೆ ಆಶಂಕಿಸಿದರೆ –

ಸಾಧಕತ್ವಮಸತ್ಯಸ್ಯ ಸಾಧ್ಯಂ ವಿಪ್ರತಿಪತ್ತಿತಃ ।।೨೨೮।।

ತಸ್ಯ ಚೇತ್ಯನವಸ್ಥಾ ಸ್ಯಾತ್ಸತ್ತ್ವಂ ಚಾಸ್ಯಾನುಭೂತಿತಃ ।

ಅನುಭೂತಿವಿರೋಧೇನ ಮಿಥ್ಯಾತ್ವೇ ಮಾ ನ ಕಾಚನ ।।೨೨೯।।

ಸಾಧಕದ ಮಿಥ್ಯಾತ್ವವೂ ಅಸತ್ಯದ ಸಾಧಕತ್ವವೂ ವಿಪ್ರತಿಪತ್ತಿಯಿರುವುದರಿಂದ ಸಾಧ್ಯವೇ ಹೊರತು ಸಿದ್ಧವಲ್ಲ. ಅದನ್ನು ಸಾಧನ ಮಾಡುವುದಾದರೆ ಅದರಲ್ಲಿಯೂ ಹೀಗೆಯೇ ವಿಪ್ರತಿಪತ್ತಿಯಿರುವುದರಿಂದ ಅನವಸ್ಥೆಯು. ವಿಶ್ವಸತ್ಯತೆಯು ಅನುಭವಸಿದ್ಧವು. ಅನುಭವಕ್ಕೆ ವಿರುದ್ಧವಾದುದರಿಂದ ವಿಶ್ವಮಿಥ್ಯಾತ್ವದ ಬಗ್ಗೆ ಯಾವುದೇ ಪ್ರಮಾಣವಿಲ್ಲ.

ಹಾಗಾದರೆ ಅನುಮಾನಗಳಿಗೆ ಅನುಭವ ವಿರೋಧವಿದ್ದ ಪಕ್ಷದಲ್ಲಿ ಅಸತ್ವವು ಬರಬಹುದು. ಆದರೆ ಅನುಭವ ವಿರೋಧವು ಇಲ್ಲ. ಏಕೆಂದರೆ ಮಿಥ್ಯಾತ್ವವೆಂಬ ಬಾಧ್ಯತ್ವವು ಅನುಮಾನಸಾಧ್ಯವು. ಆ ಬಾಧ್ಯತ್ವದ ಅಭಾವವು ಪ್ರತ್ಯಕ್ಷದಿಂದ ವೇದ್ಯವಲ್ಲ. ಏಕೆಂದರೆ ಪ್ರತ್ಯಕ್ಷವು ಕೇವಲ ವರ್ತಮಾನವನ್ನು ಮಾತ್ರ ಗ್ರಹಿಸುತ್ತದೆ.

ಕಾಲಾಂತರದಲ್ಲಿನ ಬಾಧದ ಇರುವಿಕೆಯನ್ನು ಪ್ರತ್ಯಕ್ಷದಿಂದ ತಿಳಿಯಲು ಸಾಧ್ಯವಿಲ್ಲ. ಹೀಗೆ ಆಶಂಕಿಸಿದರೆ –

ಅತೀತಾನಾಗತೌ ಕಾಲಾವಪಿ ನಃ ಸಾಕ್ಷಿಗೋಚರೌ ।

ತತ್ಸಂಬಂಧಿತಯಾ ಸತ್ತ್ವಮಪಿ ದೃಷ್ಟಸ್ಯ ಸಾಕ್ಷಿಗಮ್ ॥೨೩೦॥

ಕೇವಲ ವರ್ತಮಾನ ಕಾಲದಲ್ಲಿನ ಅಬಾಧ್ಯತ್ವವೇ ಸಾಕ್ಷಿರೂಪ ಅನುಭವವೇದ್ಯವು ಎನ್ನುವುದು ಸರಿಯಲ್ಲ. ಕಾಲಾಂತರ ಸಂಬಂಧಿಯಾದ ಅಬಾಧ್ಯತ್ವವೂ ನಮ್ಮ ಮತದಲ್ಲಿ ಸಾಕ್ಷಿವೇದ್ಯವು. ಕಾಲಾಂತರ ಸಂಬಂಧಿಯಾದ ಸತ್ಯತೆಯೇ ಅಬಾಧ್ಯತ್ವವು ಎಂದರ್ಥ. ಪ್ರತ್ಯಕ್ಷಾದಿ ಪ್ರಾಮಾಣ್ಯವೂ ಸಾಕ್ಷಿಯಿಂದಲೇ ಸಿದ್ಧವಾಗುವುದು.

ದೃಢದೃಷ್ಟಂ ತು ಯದ್ದೃಷ್ಟಂ ದೃಷ್ಟಾಭಾಸಸ್ತತೋಽಪರಮ್ ।

ಭ್ರಾಂತೇಃ ಸಂವೃತಿಸತ್ಯಸ್ಯ ವಿಶೇಷೋಽವ್ಯಭಿಚಾರವಾನ್ ॥೨೩೧॥

ತೇನಾಪ್ಯಂಗೀಕೃತಃ ಸಮ್ಯಕ್ಸ ನಃ ಸತ್ಯತ್ವಮೇವ ಹಿ ।

ಯಾವುದು ನಿರ್ದೋಷವಾದ ಜ್ಞಾನದಿಂದ ವಿಷಯೀಕರಿಸಲ್ಪಟ್ಟಿರುವುದೋ ಅದೇ ದೃಷ್ಟವೆಂದು ಹೇಳಲ್ಪಟ್ಟಿದೆ. ಶುಕ್ತಿರಜತಾದಿ ಜ್ಞಾನವು ನಿರ್ದೋಷವೆಂದು ದೃಢವಾಗಿಲ್ಲ, ಪರಂತು ದೋಷಪೂರಿತವೆಂದೇ ತಿಳಿಯಲ್ಪಡುತ್ತದೆ. ಆದ್ದರಿಂದ ಅದು ದೃಷ್ಟಾಭಾಸವು. ದೃಷ್ಟಾಭಾಸಗಳಾದ (ಭ್ರಾಂತಿವಿಷಯಕವಾದ) ಶುಕ್ತಿರಜತಾದಿಗಳಿಗೆ ಅಬಾಧ್ಯತ್ವವು ಸಿದ್ಧಿಸಲಾರದು.

ಭ್ರಾಂತಿವಿಷಯಕವಾದ ಶುಕ್ತಿರಜತಾದಿಗಳಿಂದ ವ್ಯಾವಹಾರಿಕ ಸತ್ಯವೆನಿಸಿದ ವಿಶ್ವಕ್ಕೆ ವೈಲಕ್ಷಣ್ಯವು ಅವ್ಯಭಿಚಾರಿಯಾದುದು. ಅಂದರೆ ಎಂದಿಗಾದರೂ ಎಲ್ಲಿಯೂ ಮಿಥ್ಯಾಭಾವವನ್ನು ಹೊಂದುವುದಿಲ್ಲ. ಹೀಗೆ ಶೂನ್ಯವಾದಿಯಿಂದಲೂ ನಿಸ್ಸಂದೇಹವಾಗಿ ಅಂಗೀಕರಿಸಲ್ಪಟ್ಟಿದೆ. ಅದೇ ವೈಲಕ್ಷಣ್ಯವೇ ನಮ್ಮ ಮತದಲ್ಲಿ ವಿಶ್ವದ ಸತ್ಯತೆಯನ್ನು ಸಾಧನ ಮಾಡುತ್ತದೆ. ಆದುದರಿಂದ ಮಿಥ್ಯಾತ್ವ ಸಾಧಕವಾದ ದೃಶ್ಯತ್ವಾದಿ ಅನುಮಾನಗಳು ಪ್ರತಿಪಕ್ಷವುಳ್ಳವುಗಳು ಎಂದರ್ಥ.

ಹಾಗಾದರೆ ಶುಕ್ತಿ ರಜತಾದಿಗಳಿಗೆ ಶೂನ್ಯದ ತತ್ವಜ್ಞಾನದ ಪೂರ್ವದಲ್ಲಿಯೇ ಶುಕ್ತಿ ಮುಂತಾದುದರ ಜ್ಞಾನದಿಂದಲೇ ಬಾಧೆಯು ಬರುತ್ತದೆ. ಆದರೆ ಪ್ರಪಂಚಕ್ಕೆ ಶೂನ್ಯಜ್ಞಾನದಿಂದ ಯಾವಗಲಾದರೊಮ್ಮೆ ನಿವೃತ್ತಿಯಾಗುವುದು. ಹೀಗೆ ಪ್ರಾತಿಭಾಸಿಕ ಹಾಗೂ ವ್ಯಾವಹಾರಿಕ ಸತ್ಯತ್ವಗಳಲ್ಲಿ ವ್ಯತ್ಯಾಸವಿದೆ ಎಂದು ನಾನು ಒಪ್ಪುತ್ತೇನೆ. ಆದರೆ ಇಂಥಹ ವೈಲಕ್ಷಣ್ಯವನ್ನು ವಿಶ್ವಸತ್ಯತೆಯ ವಿಷಯದಲ್ಲಿ ಯುಕ್ತಿಯಾಗಿ ಹೇಳುವುದು ನಿಮ್ಮಿಂದ ಶಕ್ಯವಿಲ್ಲ. ಏಕೆಂದರೆ ವಿರೋಧವು ಬರುತ್ತದೆ.

ಹೀಗೆ ಆಶಂಕಿಸಿದರೆ –

ವಿಜ್ಞಾನಾದ್ವ್ಯಭಿಚಾರೋಽಸ್ಯ ಕದಾಚಿತ್ಸ್ಯಾದಿತಿ ಪ್ರಮಾ ॥೨೩೨॥

ನೈವ ದೃಷ್ಟಾ ಪ್ರಮಾ ಸಾ ಚ ನ ಭವೇತ್ಸ್ವವಿರೋಧತಃ ।

ಶೂನ್ಯದ ವಿಜ್ಞಾನದಿಂದ ಈ ವಿಶ್ವದ ನಿವೃತ್ತಿಯು ಕದಾಚಿತ್ ಸಂಭವಿಸುವುದು ಎಂಬಲ್ಲಿ ಪ್ರಮಾಣವು ಕಂಡಿರುವುದೇ ಇಲ್ಲ. ಯಾವುದನ್ನು ಪ್ರಮಾಣವೆಂದು ಭಾವಿಸುತ್ತೀರೋ ಅದು ಸ್ವವಿರೋಧ ಬರುವುದರಿಂದ ಪ್ರಮಾಣವಾಗುವುದಿಲ್ಲ. ಯಾವುದರ ವಿಷಯವು ಅಸತ್ಯವೋ ಹಾಗೂ ಯಾವುದು ಸ್ವಯಂ ಬಾಧ್ಯವೋ ಅಂತಹುದು ಪ್ರಮಾಣವಾಗುವುದು ಅಸಾಧ್ಯ ಎಂದು ಅಭಿಪ್ರಾಯ.

ಹೀಗೆ ಪ್ರಪಂಚ ಮಿಥ್ಯಾತ್ವಸಾಧಕ ಅನುಮಾನಗಳನ್ನು ನಿರಾಕರಿಸಿ, ಈಗ ಆ ಅನುಮಾನಗಳಿಗೆ ಅನುಗ್ರಾಹಕವಾಗಿಯೂ ಸತ್ಯತ್ವ ಹಾಗೂ ಪ್ರತ್ಯಕ್ಷಗಳಿಗೆ ಪ್ರತಿಕೂಲವಾಗಿಯೂ ಪರರು ಉತ್ಪ್ರೇಕ್ಷಿಸಿದ ತರ್ಕವನ್ನು ಆಶಂಕಿಸಿ ನಿರಾಕರಿಸುತ್ತಾರೆ –

ಭೇದೋ ವಿಶೇಷ್ಯಧರ್ಮ್ಯಾದಿಗ್ರಹಣಾಪೇಕ್ಷಯಾ ಯದಿ ॥೨೩೩॥

ಅನ್ಯೋನ್ಯಾಶ್ರಯತಾಹೇತೋರ್ದುರ್ಗ್ರಾಹ್ಯ ಇತಿ ಯನ್ನ ತತ್ ।

ಸ್ವರೂಪಂ ವಸ್ತುನೋ ಭೇದಃ ಯನ್ನ ತಸ್ಯ ಗ್ರಹೇಽಗ್ರಹಃ ॥೨೩೪॥

ಅನ್ಯಥಾಽಸ್ಯಾಮುನಾ ಭೇದ ಇತಿ ವಕ್ತುಂ ನ ಶಕ್ಯತೇ ।

ಅಗೃಹೀತೋ ಯದಾ ಭೇದಸ್ತದಾ ಸ್ವಸ್ಮಾದಿತಿ ಗ್ರಹಃ ॥೨೩೫॥

ಸ್ಯಾತ್ಪ್ರತೀತಿವಿರೋಧಾಚ್ಚ ನ ಹಿ ಕಶ್ಚಿತ್ತಥಾ ವದೇತ್ ।

ವಿಶೇಷ್ಯ, ಧರ್ಮಿ ಮುಂತಾದವುಗಳ ಜ್ಞಾನವನ್ನು ಅಪೇಕ್ಷಿಸಿ ಭೇದವು ತಿಳಿಯಲ್ಪಡುವುದಾದರೆ, ಅನ್ಯೋನ್ಯಾಶ್ರಯತ್ವವೆಂಬ ದೋಷವು ಬರುವ ಕಾರಣದಿಂದ ಆ ಭೇದವನ್ನು ಗ್ರಹಿಸುವದು ಸಾಧ್ಯವಿಲ್ಲ. ಹೀಗೆ ಹೇಳುವುದು ಯುಕ್ತವಲ್ಲ. ಏಕೆಂದರೆ ಭೇದವು ವಸ್ತುವಿನ ಸ್ವರೂಪವಾದುದರಿಂದ, ವಸ್ತುವಿನ ಜ್ಞಾನವಾಗುತ್ತಿದ್ದಂತೆಯೇ ಭೇದದ ಜ್ಞಾನವೂ ಆಗುತ್ತದೆ. ಮೊದಲು ವಸ್ತುವಿನ ಜ್ಞಾನ ಅನಂತರ ಭೇದದ ಜ್ಞಾನ ಎಂಬುದಿಲ್ಲ. ಆದ್ದರಿಂದ ಹಿಂದೆ ಹೇಳಿದ ಅನ್ಯೋನ್ಯಾಶ್ರಯತ್ವ ದೋಷವು ಬರುವುದಿಲ್ಲ.

ಭೇದವು ವಸ್ತುವು ತೋರುವಾಗಲೇ ತೋರದಿದ್ದರೆ, 'ಇದಕ್ಕೆ ಇದರಿಂದ ಭೇದವು' ಎಂಬುದನ್ನು ಹೇಳುವುದಕ್ಕೆ ಶಕ್ಯವಿಲ್ಲ. ಘಟವು ತೋರುವಾಗಲೇ ಅದು

ಘಟದಿಂದ ಇತರವಾದ ಪಟಾದಿಗಳಿಗಿಂತ ಭಿನ್ನವು ಎಂದು ತೋರುವುದು.

ವಸ್ತು ತೋರುವಾಗಲೇ ಭೇದವು ಗೃಹೀತವಾಗದಿದ್ದ ಪಕ್ಷದಲ್ಲಿ, ಆಗ ತನ್ನಿಂದ ತಾನು ಭಿನ್ನ ಎಂಬ ಸವಿಕಲ್ಪಕ ಭೇದಜ್ಞಾನವು ಬರಬೇಕಾಗುತ್ತದೆ. ಯಾವಾಗಾದರೂ ಯಾರಿಗೂ ತನ್ನಿಂದ ತಾನು ಭಿನ್ನನೆಂದು ಅನುಭವವು ಬರುವುದಿಲ್ಲ. ಯಾವನೂ ಹಾಗೆ ಹೇಳುವುದೂ ಇಲ್ಲ. ಆದ್ದರಿಂದ ಇಂಥ ಭೇದಗ್ರಹವು ಅಂಗೀಕಾರಾರ್ಹವಲ್ಲ.

ಹೀಗೆ ಸ್ವಮತದಿಂದ ಭೇದಪ್ರತೀತಿಯಲ್ಲಿ ಅನ್ಯೋನ್ಯಾಶ್ರಯತ್ವ ದೋಷವನ್ನು ಪರಿಹರಿಸಿ, ಭೇದವು ಧರ್ಮಿಯಿಂದ ಭಿನ್ನವೆಂದು ಹೇಳುವವರ ಮತದಲ್ಲಿಯೂ ಹಿಂದೆ ಹೇಳಿದ ದೋಷ ಪರಿಹಾರವನ್ನು 'ಧರ್ಮಿತ್ವ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಧರ್ಮಿತ್ವಪ್ರತಿಯೋಗಿತ್ವತದ್ಭೇದಾ ಯುಗಪದ್ಯದಿ ।।೨೩೬।।

ವಿಶೇಷಣಂ ವಿಶೇಷ್ಯಂ ಚ ತದ್ಭಾವಶ್ಚೈವ ಗೃಹ್ಯತೇ ।

ಧರ್ಮಿತ್ವ, ಪ್ರತಿಯೋಗಿತ್ವ ಹಾಗೂ ಅವುಗಳಿಗಿರುವ ಭೇದ, ವಿಶೇಷಣ, ವಿಶೇಷ್ಯ ಹಾಗೂ ಅವುಗಳ ಭಾವಗಳೂ ಏಕಕಾಲದಲ್ಲಿಯೇ ಗ್ರಹಿಸಲ್ಪಡುತ್ತವೆ.

ಕೋ ವಿರೋಧಃ ಸ್ವರೂಪೇಣ ಗೃಹೀತೋ ಭೇದ ಏವ ತು ।।೨೩೭।।

ಅಸ್ಯಾಮುಷ್ಮಾದಿತಿ ಪುನರ್ವಿಶೇಷೇಣೈವ ಗೃಹ್ಯತೇ ।

ಹೀಗೆ ಒಪ್ಪಿದ ಪಕ್ಷದಲ್ಲಿ ಏನು ವಿರೋಧವಿದೆ? ಏಕೆಂದರೆ, ಸ್ವರೂಪದಿಂದ ಗೃಹೀತವಾದುದೇ ಭೇದವು. ಇದಕ್ಕೆ ಇದರಿಂದ ಭೇದವು ಎಂಬುದಾಗಿ ವಿಶೇಷದಿಂದಲೇ ಗ್ರಹಿಸಲ್ಪಡುತ್ತದೆ.

ಹೀಗೆ ಅನ್ಯೋನ್ಯಾಶ್ರಯತ್ವವನ್ನು ಪರಿಹರಿಸಿ, ಈಗ ದೂಷಣಾಂತರವನ್ನು 'ಕಿಂಚ' ಇತ್ಯಾದಿ ವಾಕ್ಯದಿಂದ ಪ್ರತಿಜ್ಞಾ ರೂಪವಾಗಿ ಹೇಳುತ್ತಾರೆ –

ಕಿಂಚ ಭೇದಃ ಕಥಂ ಗ್ರಾಹ್ಯ ಇತಿ ಯಃ ಪರಿಪೃಚ್ಛತಿ ।।೨೩೮।।

ಧರ್ಮ್ಯಾದಿಭೇದಗ್ರಹಣಾತ್ತೇನೋಕ್ತೋಽನ್ಯೋನ್ಯಸಂಶ್ರಯಃ ।

ಅನ್ಯತ್ವಾಗ್ರಹಣೇ ಪ್ರೋಕ್ತಃ ಕಥಮನ್ಯೋನ್ಯಸಂಶ್ರಯಃ ।।೨೩೯।।

ಅನ್ಯತ್ವಂ ಯದಿ ಸಿದ್ಧಂ ಸ್ಯಾತ್ಕಥಮನ್ಯೋನ್ಯಸಂಶ್ರಯಃ ।

ಇನ್ನೊಂದು ದೂಷಣವು ಹೇಗೆಂದರೆ, ಭೇದವು ಹೇಗೆ ತಿಳಿಯಲ್ಪಡುವುದು ಎಂದು ಯಾವನು ಆಕ್ಷೇಪಿಸುವನೋ, ಅವನಿಂದ ಧರ್ಮ್ಯಾದಿ ಸಾಪೇಕ್ಷವಾಗಿಯೇ

ಭೇದದ ಜ್ಞಾನವಾಗುವುದರಿಂದ, ಅನ್ಯೋನ್ಯಾಶ್ರಯವು ಹೇಳಲ್ಪಟ್ಟಿದೆ. ಇದು ಪರಸ್ಪರ ವ್ಯಾಹತವು.

ಇನ್ನು ಭೇದವನ್ನು ತಿಳಿಯದೆ ಅನ್ಯೋನ್ಯಾಶ್ರಯವನ್ನು ಹೇಳುವುದು ಹೇಗೆ ಯುಕ್ತವಾಗುವುದು? ಏಕೆಂದರೆ ಎರಡು ವಸ್ತುಗಳಿಗೆ ಕಾರ್ಯ–ಕಾರಣಭಾವವನ್ನು ಆಶ್ರಯಿಸಿಯೇ ಅನ್ಯೋನ್ಯಾಶ್ರಯವನ್ನು ಆಪಾದಿಸಲು ಸಾಧ್ಯ. ಅಂತೆಯೇ ಭೇದಜ್ಞಾನವು ಸಿದ್ಧವಾಗಿದ್ದರೆ ಅನ್ಯೋನ್ಯಾಶ್ರಯವು ಹೇಗೆ ಬರುವುದು? ಏಕೆಂದರೆ ಅನ್ಯೋನ್ಯಾಶ್ರಯವು ಇದ್ದರೆ ಭೇದ ಜ್ಞಾನವೇ ಆಗುವುದಿಲ್ಲ.

ಹಾಗಾದರೆ ಈ ತರ್ಕದ ಮೇಲೆ ದೂಷಣವು ಯಾವುದೆಂದರೆ –

ಏತಾದೃಶಸ್ಯ ವಕ್ತಾರಾವುಭೌ ಜಾತ್ಯುತ್ತರಾಕರೌ ।।೨೪೦।।

ಮಾಯೀ ಮಾಧ್ಯಮಿಕಶ್ಚೈವ ತದುಪೇಕ್ಷ್ಯೌ ಬುಭೂಷುಭಿಃ ।

ಇಂಥಹುದನ್ನು ಪ್ರವಚನ ಮಾಡುವ ಮಾಯಾವಾದಿ ಮಾಧ್ಯಮಿಕರಿಬ್ಬರೂ ಸಹ ಜಾತ್ಯುತ್ತರಕ್ಕೆ ಮುಖ್ಯಾಶ್ರಯರು. ಆದ್ದರಿಂದ ಜ್ಞಾನೇಚ್ಛುಗಳಿಂದ ಉಪೇಕ್ಷಣೀಯರೇ ಆಗುವರು. ಅವರು ಪ್ರತಿವಾದಿಗಳಾಗಲು ಯೋಗ್ಯರಲ್ಲ. ಆದ್ದರಿಂದ ಈ ಅನ್ಯೋನ್ಯಾಶ್ರಯ ಮುಂತಾದುದನ್ನು ಸೂತ್ರಕಾರರೇ ನಿರಾಕರಿಸಲಿಲ್ಲ. ಸರ್ವವೂ ಸ್ವವ್ಯಾಹತಿಯಿಂದ ಕೂಡಿರುವುದರಿಂದ ಹಾಗೂ ಭೇದಕ್ಕೂ ಸತ್ತಾಜಾತಿಗೂ ಧರ್ಮಿಸ್ವರೂಪದಿಂದ ಭೇದವು ಅಯುಕ್ತವಾದುದರಿಂದ, ಅದನ್ನೇ ಅಂಗೀಕರಿಸುವುದು ಜಾತ್ಯುತ್ತರವೆಂದು ತಿಳಿಯಬೇಕು.

ಇದು ಇರಲಿ. ಶೂನ್ಯವಾದಿಯು ಶೂನ್ಯವು ಜಗತ್ಕಾರಣವೆಂದು ಹೇಳಿದರೆ, ಮಾಯಾವಾದಿಯು ಬ್ರಹ್ಮವು ಜಗತ್ಕಾರಣವೆಂದು ಹೇಳುತ್ತಾನೆ. ಆದ್ದರಿಂದ 'ನಾಸತೋಽ ದೃಷ್ಟತ್ವಾತ್' ಇತ್ಯಾದಿ ಶೂನ್ಯವಾದದ ನಿರಾಕರಣದ ಅತಿದೇಶವನ್ನು ಮಾಯಾವಾದದಲ್ಲಿ ಮಾಡಿದುದು ಅಯುಕ್ತವು. ಏಕೆಂದರೆ ಮತವೈಷಮ್ಯವಿದ್ದರೆ ಅತಿದೇಶವು ಅಯುಕ್ತವು. ಈ ಆಶಂಕೆಯ ಪರಿಹಾರಕ್ಕಾಗಿ 'ಯತ್' ಎಂಬಿತ್ಯಾದಿ ವ್ಯಾಖ್ಯಾನವು ಹೊರಟಿದೆ –

ಯಚ್ಛೂನ್ಯವಾದಿನಃ ಶೂನ್ಯಂ ತದೇವ ಬ್ರಹ್ಮ ಮಾಯಿನಃ ।।೨೪೧।।

ನ ಹಿ ಲಕ್ಷಣಭೇದೋಽಸ್ತಿ ನಿರ್ವಿಶೇಷತ್ವತಸ್ತಯೋಃ ।

ಅನೃತಾದಿವಿರೋಧಿತ್ವಮುಭಯೋಶ್ಚ ಸ್ವಲಕ್ಷಣಮ್ ।।೨೪೨।।

ಶೂನ್ಯವಾದಿಯು ಹೇಳುವ ಶೂನ್ಯವೇ ಮಾಯಾವಾದಿಯ ಬ್ರಹ್ಮವು. ಎರಡಕ್ಕೂ ನಿರ್ವಿಶೇಷತ್ವವಿರುವುದರಿಂದ ಲಕ್ಷಣಭೇದವಿಲ್ಲ. ಆದ್ದರಿಂದ ಅತಿದೇಶವು

ಯುಕ್ತವು.

ಹಾಗಾದರೆ ಬಾಹ್ಯಲಕ್ಷಣದಿಂದ ಭೇದವು ಇಲ್ಲದಿದ್ದರೂ ಸ್ವರೂಪಲಕ್ಷಣದಿಂದ ಭೇದವಿದೆ. ಏಕೆಂದರೆ ಮಾಯಾವಾದಿಯು ಬ್ರಹ್ಮನಿಗೆ ಸತ್ಯಜ್ಞಾನಾನಂದಾತ್ಮಕತ್ವ ಎಂಬ ಸ್ವರೂಪ ಲಕ್ಷಣವನ್ನು ಅಂಗೀಕರಿಸುತ್ತಾನೆ. ಆದರೆ ಶೂನ್ಯವಾದಿಯು ಅದನ್ನು ಅಂಗೀಕರಿಸಿಲ್ಲ. ಆದ್ದರಿಂದ ಅತಿದೇಶವು ಯುಕ್ತವಲ್ಲ. ಹೀಗೆ ಆಶಂಕಿಸಿದರೆ, 'ಅನೃತಾದಿ' ಇತ್ಯಾದಿ ವಚನದಿಂದ ಅದನ್ನು ಪರಿಹರಿಸುತ್ತಾರೆ –

ಬ್ರಹ್ಮನು ಸತ್ಯಜ್ಞಾನಾನಂದಸ್ವರೂಪನು ಎಂದರೆ ಅನೃತ (ಅಸತ್ಯ) ಜಡಾದಿ ವಿರೋಧಿತ್ವವೆಂಬುದೇ ಮಾಯಾವಾದಿಗೆ ಸಮ್ಮತವಾದುದು. ಏಕೆಂದರೆ ಮತ್ತೊಂದು ಸತ್ಯತ್ವಾದಿ ಧರ್ಮವಿಶಿಷ್ಟವಾದ ವಸ್ತುವನ್ನು ಒಪ್ಪಿದರೆ ಬ್ರಹ್ಮನ ಅಖಂಡತ್ವಕ್ಕೆ ವಿರೋಧ ಬರುವುದು. ಅನೃತಾದಿ ವಿರೋಧಿಯಾಗಿರುವುದೆಂಬ ಲಕ್ಷಣವನ್ನು ಶೂನ್ಯವಾದಿಯೂ ಶೂನ್ಯಕ್ಕೆ ಒಪ್ಪುತ್ತಾನೆ. ಹೀಗೆ ಉಭಯರಿಗೂ ಸಮಾನವಾದ ಸ್ವಲಕ್ಷಣವಿರುವುದರಿಂದ ಅತಿದೇಶವು ಅಯುಕ್ತವಲ್ಲ.

ಇದು ಇರಲಿ. ಇನ್ನು ಪ್ರಪಂಚಮಿಥ್ಯಾತ್ವಸಾಧಕ ಅನುಮಾನದ ನಿರಾಕರಣೆಗೋಸ್ಕರ 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' ಎಂಬ ಸೂತ್ರವು ಹೊರಟಿದೆ ಎಂಬುದಾಗಿ ವ್ಯಾಖ್ಯಾನ ಮಾಡಲಾಗಿದೆ. ಈ ವ್ಯಾಖ್ಯಾನವು ಹೇಗೆ ಕೂಡುವುದು? ಎಂದು ಆಶಂಕಿಸಿದರೆ –

ಸ್ವವಾಕ್ಯಾಭಾವಸಂವಾದಾನ್ನ ಕೃತ್ಯಂ ಪ್ರತಿವಾದಿನಃ ।

ತತ್ಪಕ್ಷ ಇತಿ ವೈಧರ್ಮ್ಯಾನ್ನ ಸ್ವಪ್ನಾದಿವದಿತ್ಯಜಃ ॥೨೪೩॥

ಅಪ್ರಯತ್ನಾನ್ನಿರಾಚಕ್ರೇ ಚೇತಿ ದೃಷ್ಟಿವಿರುದ್ಧತಾಮ್ ।

ನಿಷ್ಪ್ರಮಾಣತ್ವಮಪ್ಯಸ್ಯ ಸೂಚಯಾಮಾಸ ವಿಶ್ವಕೃತ್ ॥೨೪೪॥

ದೃಶ್ಯತ್ವಾಭಾವದ ಸಂವಾದ ದೆಶೆಯಿಂದ ದೃಶ್ಯತ್ವದ ಮಿಥ್ಯಾತ್ವಸಾಧನದ ವಿಷಯದಲ್ಲಿ ಪ್ರತಿವಾದಿಗೆ ಕೃತ್ಯವಿಲ್ಲ. ಈ ಕಾರಣದಿಂದ ವೇದವ್ಯಾಸರು ವೈಧರ್ಮ್ಯಾನ್ನ ಸ್ವಪ್ನಾದಿವತ್ ಎಂಬುದಾಗಿ ಪ್ರಯತ್ನವಿಲ್ಲದೆಯೇ ಜಗನ್ಮಿಥ್ಯಾತ್ವವನ್ನು ನಿರಾಕರಿಸಿದರು. ಚ ಶಬ್ದದಿಂದ ವಿಶ್ವಮಿಥ್ಯಾತ್ವಕ್ಕೆ ಪ್ರತ್ಯಕ್ಷವಿರೋಧವನ್ನೂ, ಪ್ರಮಾಣರಹಿತತ್ವವನ್ನೂ ವಿಶ್ವಕರ್ತೃವಾದ ಸೂತ್ರಕಾರರು ಸೂಚಿಸಿದರು.

ಅನುಪಲಬ್ಧ್ಯಧಿಕರಣಮ್

ಓಂ ಭಾವೋಽನುಪಲಬ್ಧೇಃ ಓಂ

ಈ ಅಧಿಕರಣದಲ್ಲಿ ಯೋಗಾಚಾರಗಳ ಮತವು ನಿರಾಕರಿಸಲ್ಪಡುತ್ತದೆ. ಆದರ

ಸಲುವಾಗಿ 'ಜ್ಞಾನಮೇವ' ಇತ್ಯಾದಿ ವಚನದಿಂದ ಅವರ ಮತವನ್ನು ಉಪನ್ಯಾಸ ಮಾಡುತ್ತಾರೆ –

ಜ್ಞಾನಮೇವೈಕಮಖಿಲಜ್ಞೇಯಾಕಾರಂ ಪ್ರಭಾಸತೇ ।

ರೂಪ, ವೇದನ, ಸಂಜ್ಞಾ, ಸಂಸ್ಕಾರಗಳೆಂಬ ನಾಲ್ಕು ಸ್ಕಂಧಗಳು ತತ್ವಗಳಲ್ಲ. ವಿಜ್ಞಾನವೇ ತತ್ವವು. ಹೀಗೆ ಯೋಗಾಚಾರರು ತಿಳಿಯುತ್ತಾರೆ. ಆ ವಿಜ್ಞಾನವೊಂದೇ ತತ್ವವು. ಅದಕ್ಕಿಂತ ಬೇರೆ ಎರಡನೆಯ ತತ್ವವಿಲ್ಲ ಎಂದರ್ಥ. ಅದು ಅಖಿಲ ಜ್ಞೇಯಾತ್ಮಕವು. ಏಕೆಂದರೆ ಜ್ಞಾನವೇ ಜ್ಞೇಯವಸ್ತುವಿನ ಆಕಾರವಾಗಿದೆ. ಜ್ಞಾನದಿಂದ ಭಿನ್ನವಾದ ಜ್ಞೇಯವೆಂಬುದು ಇಲ್ಲ. ಹಾಗೂ ಆ ಜ್ಞಾನವೇ ಪ್ರಕಾಶಿಸುತ್ತದೆ.

ಇನ್ನು ಜ್ಞಾನ-ಜ್ಞೇಯಗಳಲ್ಲಿ ಅಭೇದವು ಅಯುಕ್ತವು. ಏಕೆಂದರೆ ಭೇದವು ಬಾಹ್ಯ, ಜ್ಞಾನವು ಆಂತರಿಕ. ಏಕತ್ವವೂ ಯುಕ್ತವಲ್ಲ. ಹೀಗೆ ಆಶಂಕಿಸಿದರೆ ಅದಕ್ಕೆ ಯೋಗಾಚಾರರು ಹೇಳುವ ಪರಿಹಾರವನ್ನು 'ತತ್ರ' ಇತ್ಯಾದಿ ವಚನದಿಂದ ತಿಳಿಸುತ್ತಾರೆ –

ತತ್ರ ಸಂತತಿಭೇದಶ್ಚ ಸ್ವಭೇದೋ ಭೇದ ಏವ ಚ ।।೨೪೫।।

ಕಲ್ಪಿತಾಃ ಪ್ರತಿಭಾಸಂತೇ ನಾನಾಸಂವೃತಿಭೂಮಿಷು ।

ಜ್ಞಾನ-ಜ್ಞೇಯಗಳಿಗೆ ಭೇದವಿದ್ದರೆ, ಸಂತತಿಗಳಿಗೆ ಪರಸ್ಪರ ಭೇದ, ಒಂದೊಂದು ಸಂತತಿಯಲ್ಲಿಯೂ ಪೂರ್ವೋತ್ತರ ಜ್ಞಾನಗಳಲ್ಲಿ ಭೇದವು ಕಲ್ಪಿತಗಳೇ ಆಗಿ ಅನೇಕ ಅಜ್ಞಾನಗಳ ಆಶ್ರಯವಾದ ಅಂತಃಕರಣಗಳಲ್ಲಿ ತೋರುತ್ತವೆ.

ಹೀಗೆ ಯೋಗಾಚಾರರ ಮತವನ್ನು ಅನುವಾದ ಮಾಡಿ, ಅದನ್ನು 'ಇತ್ಯೇತದಪಿ' ಇತ್ಯಾದಿ ವಚನದಿಂದ ನಿರಕಾರಿಸುತ್ತಾರೆ –

ಇತ್ಯೇತದಪಿ ನೋ ಯುಕ್ತಂ ನ ಹಿ ಜ್ಞಾನತಯಾ ಜಗತ್ ।।೨೪೬।।

ಭಾಸತೇಽನುಭವಸ್ಯೈವ ವಿರುದ್ಧತ್ವಾದಪೇಶಲಮ್ ।

ಈ ಪ್ರಕಾರವಾಗಿ ಪ್ರತಿಪಾದಿಸುವ ಮತವು ಯುಕ್ತವಲ್ಲ. ಏಕೆಂದರೆ ಜಗತ್ತು ಜ್ಞಾನರೂಪವಾಗಿ ತೋರುವುದಿಲ್ಲ. ಇದು ಅನುಭವಕ್ಕೆ ವಿರುದ್ಧವು. ಆದುದರಿಂದಲೇ ಯೋಗಾಚರರಿಗೆ ಅಭಿಮತವಾದ ಅನುಮಾನವು ಅಸಂಮಜಸವಾದುದು.

ಈ ಮತದ ಅನುಮಾನವು ಅನುಭವಕ್ಕೆ ವಿರುದ್ಧವೆಂಬುದು ಹೇಗೆ ಎಂದರೆ, ಅದಕ್ಕೆ ಉತ್ತರವಾಗಿ ಹೊರಟ 'ಓಂ ಕ್ಷಣಿಕತ್ವಾಚ್ಚ ಓಂ' 'ಓಂ ಸರ್ವಥಾಽನುಪಪತ್ತೇಶ್ಚ ಓಂ' ಎಂಬೆರಡು ಸೂತ್ರಗಳನ್ನು ವ್ಯಾಖ್ಯಾನಿಸುತ್ತಾರೆ –

ತನ್ಮತಂ ಕ್ಷಣಿಕತ್ವಾಚ್ಚ ಜ್ಞಾನಸ್ಯ ಸ್ಥಿರರೂಪತಃ ।।೨೪೭।।

ಜ್ಞೇಯಸ್ಯೋಕ್ತಪ್ರಕಾರೇಣ ಸರ್ವಶ್ರುತಿವಿರೋಧತಃ ।

ಅನುಭೂತಿವಿರುದ್ಧತ್ವಾದಪಿ ಪಕ್ಷಾ ಇಮೇಽಶಿವಾಃ ।।೨೪೮।।

ಜ್ಞಾನಕ್ಕೆ ಕ್ಷಣಿಕತ್ವ ಹಾಗೂ ಜ್ಞೇಯಕ್ಕೆ ಸ್ಥಿರರೂಪತ್ವ ಇರುವುದರಿಂದಲೂ ಹಿಂದೆ ಹೇಳಿದ ಯೋಗಾಚಾರರ ಮತವು ಅಯುಕ್ತವು. ಈ ಮತವು ಸಮಸ್ತ ಶ್ರುತಿಗಳಿಗೆ ವಿರುದ್ಧವಾಗಿದೆ. ಅಲ್ಲದೆ ಅನುಭವಕ್ಕೂ ವಿರುದ್ಧವಾಗಿದೆ. ಆದ್ದರಿಂದ ಈ ಬೌದ್ಧರ ಎಲ್ಲ ಪಕ್ಷಗಳೂ ಅಶುಭಕರವಾದ್ದರಿಂದ ಅಗ್ರಾಹ್ಯವು.

ನೈಕಸ್ಮಿನ್ನಧಿಕರಣಮ್

ಓಂ ನೈಕಸ್ಮಿನ್ನಸಂಭವಾತ್ ಓಂ

ಈ ಅಧಿಕರಣದಲ್ಲಿ ಜೈನಮತವು ನಿರಾಕರಿಸಲ್ಪಡುತ್ತದೆ. ಈ ಮತದಲ್ಲಿನ ನಿರಾಕರಣೀಯ ಅಂಶವನ್ನು ಜ್ಞಾಪಿಸುವುದಕ್ಕೋಸ್ಕರ, ಈ ಮತವನ್ನು 'ಆಹ' ಇತ್ಯಾದಿ ವಚನದಿಂದ ಅನುವಾದ ಮಾಡುತ್ತಾರೆ –

ಆಹ ಕ್ಷಪಣಕೋ ವಿಶ್ವಂ ಸದಸದ್ದ್ವಯಮದ್ವಯಮ್ ।

ದ್ವಯಾದ್ವಯಮತತ್ಸರ್ವಂ ಸಪ್ತಭಂಗಿ ಸದಾತನಮ್ ।।೨೪೯।।

ಈ ವಿಶ್ವವು ಸದ್ರೂಪ, ಅಸದ್ರೂಪ, ಸದಸದ್ರೂಪ, ಸದಸದ್ವಿಲಕ್ಷಣ, ಸತ್ವವಿದ್ದು ಸದ್ವಿಲಕ್ಷಣ, ಅಸತ್ವವಿದ್ದು ಅಸದ್ವಿಲಕ್ಷಣ, ಸದಸದಾತ್ಮಕವಿದ್ದು ಸದಸದ್ವಿಲಕ್ಷಣ – ಹೀಗೆ ಪ್ರತ್ಯೇಕವಾಗಿ ಸದಾಕಾಲವೂ ಸಪ್ತ ಪ್ರಕಾರವುಳ್ಳದ್ದು ಎಂಬುದಾಗಿ ಜೈನರು ಹೇಳುತ್ತಾರೆ.

ಜೈನರ ಈ ಸಪ್ತಭಂಗಿ ವಾದವನ್ನು ನಿರಾಕರಿಸಲು, **'ನೈಕಸ್ಮಿನ್ನಸಂಭವಾತ್'** ಎಂಬ ಸೂತ್ರವನ್ನು 'ನೈತತ್' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ನೈತತ್ಪದಾರ್ಥ ಏಕಸ್ಮಿನ್ಯುಕ್ತಂ ದೃಷ್ಟಿವಿರೋಧತಃ ।

ಭಾವಾಭಾವತಯಾ ವಿಶ್ವಂ ಯೇನ ರೂಪೇಣ ಮೀಯತೇ ।।೨೫೦।।

ತದ್ರೂಪಮೇವ ತದಿತಿ ನಿಯಮಃ ಕೇನ ವಾರ್ಯತೇ ।

ಒಂದೇ ವಸ್ತುವಿನಲ್ಲಿ ಈ ಸಪ್ತ ಪ್ರಕಾರಗಳು ಇರುವುದೆಂಬುದು ಪ್ರತ್ಯಕ್ಷಕ್ಕೆ ವಿರುದ್ಧವು. ಆದುದರಿಂದ ಅಯುಕ್ತವು. ಹೇಗೆಂದರೆ, ಎಲ್ಲವೂ ತನ್ನ ಆಶ್ರಯದಲ್ಲಿ ಇರುವುದು ಇನ್ನೊಂದರ ಅಶ್ರಯದಲ್ಲಿ ಇಲ್ಲದಿರುವುದು, ತನ್ನ ಸ್ವರೂಪದಿಂದ

ಇರುವುದು ಇನ್ನೊಂದರ ಸ್ವರೂಪದಿಂದ ಇಲ್ಲದಿರುವುದು, ದ್ರವ್ಯಸ್ವರೂಪದಿಂದ ನಿತ್ಯವು ಕಾರ್ಯ ರೂಪದಿಂದ ಅನಿತ್ಯವು, ಸ್ವರೂಪಾದಿಗಳಿಂದ ಅಭಿನ್ನವು ತನ್ನ ಗುಣಾದಿಗಳಿಂದ ಭಿನ್ನಾಭಿನ್ನವು – ಹೀಗೆಯೇ ತೋರುತ್ತದೆ. ಇದಕ್ಕೆ ಬೇರೆಯಾದ ಪ್ರಕಾರದಿಂದ ವಸ್ತುವು ತೋರುವುದಿಲ್ಲ. ಹೀಗೆ ಈ ಜಗತ್ತು ವ್ಯವಸ್ಥಿತವಾದ ಸ್ವರೂಪವುಳ್ಳದ್ದೇ ಆಗಿರುವುದು ಎಂಬ ನಿಯಮವು ಯಾವ ಪ್ರಮಾಣದಿಂದ ನಿವಾರಿಸಲ್ಪಡುತ್ತದೆ?

ತತ್ತದ್ದೋಷನಿವೃತ್ತ್ಯರ್ಥಂ ಸ್ವೀಕೃತಾ ತತ್ತದಾತ್ಮತಾ ॥೨೫೧॥

ಯದಿ ತೈರಖಿಲೈರ್ದೋಷೈರ್ಲಿಪ್ಯತೇ ಚಲದರ್ಶನಃ ।

ಆಯಾಯ ಭಂಗಿಯನ್ನು ಅಂಗೀಕರಿಸಿದರೆ ಬರುವ ದೋಷಗಳನ್ನು ಪರಿಹರಿಸಲು ಆಯಾಯ ಪ್ರಕಾರವುಳ್ಳದ್ದೆಂದು ಸ್ವೀಕರಿಸುವುದಾದರೆ, ಚಲದರ್ಶನವುಳ್ಳ ಆ ಜೈನನು ಆ ಎಲ್ಲ ದೋಷಗಳಿಂದ ಲಿಪ್ತನಾಗುತ್ತಾನೆ.

ಇನ್ನು ಇಂಥಹ ಸಪ್ತಭಂಗಿಯನ್ನು ಅಂಗೀಕರಿಸಿದರೆ ಅತಿಪ್ರಸಂಗವೂ ಬರುವುದೆಂದು 'ಅತಿಹಾಯ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಅತಿಹಾಯ ಪ್ರಮಾಣಾಪ್ತನಿಯಮಂ ಸದಸತ್ತಯಾ ॥೨೫೨॥

ಅಶೇಷಮಾವಿರುದ್ಧಂ ಚ ನಿರ್ಮಾನಂ ವ್ಯಾಹತಂ ಸದಾ ।

ಸರ್ವಪ್ರಕಾರಂ ವದತೋ ದೃಷ್ಟಹಾನಿರಮಗ್ರಹಃ ॥೨೫೩॥

ಸ್ವವ್ಯಾಹತತ್ವಮಿತ್ಯಾದ್ಯಾ ದೋಷಾಃ ಸರ್ವೇ ಭವಂತಿ ಹಿ ।

ವ್ಯವಸ್ಥಿತವಾದ ಸತ್ವ ಅಸತ್ವ ಮುಂತಾದ ರೀತಿಯಿಂದ ಪ್ರಮಾಣಪ್ರಮಿತವಾದ ನಿಯಮವನ್ನು ಅತಿಕ್ರಮಿಸಿ, ಎಲ್ಲವೂ ಪರಸ್ಪರ ವಿರುದ್ಧವಾದ ಪ್ರಮಾಣರಹಿತವಾದ ಸರ್ವಪ್ರಕಾರಗಳಿಂದ ಯುಕ್ತವಾಗಿದೆ ಎಂಬುದಾಗಿ ವಾದಿಸುವವನಿಗೆ ದೃಷ್ಟಹಾನಿ, ಅಪ್ರಮಾಣಿಕ ಸ್ವೀಕಾರ, ಸ್ವವಚನವಿರೋಧ ಮುಂತಾದ ಸಮಸ್ತ ದೋಷಗಳೂ ಬರುತ್ತವೆ.

ಹೀಗೆ ಜೈನನು ಹೇಳಿದ ಸರ್ವಪ್ರಕಾರವತ್ವವನ್ನು ನಿರಾಕರಿಸಿ, ಈಗ ಅವನು ಹೇಳಿದ ಇನ್ನೂ ಒಂದು ಸಂಗತಿಯನ್ನು ನಿರಾಕರಿಸಲು 'ವಕ್ತಿ' ಇತ್ಯಾದಿ ವಚನದಿಂದ ಅನುವಾದ ಮಾಡುತ್ತಾರೆ –

ವಕ್ತಿ ಸ್ವಪ್ರಭಮಾತ್ಮಾನಂ ದೇಹಮಾನಂ..............॥

ಆತ್ಮನನ್ನು ಸ್ವಪ್ರಕಾಶನು ಹಾಗೂ ದೇಹಪರಿಮಾಣಕ್ಕೆ ಸದೃಶವಾದ

ಪರಿಮಾಣವನ್ನು ಹೊಂದಿರುವನು ಎಂಬುದಾಗಿ ಜೈನನು ಹೇಳುತ್ತಾನೆ.

ಆತ್ಮನಿಗೆ ಶರೀರಪರಿಮಾಣಕ್ಕೆ ಸಮಾನವಾದ ಪರಿಮಾಣವನ್ನು ನಿರಾಕರಿಸಲು ಹೊರಟ **'ಓಂ ಏವಂಚಾತ್ಮಾಕಾರ್ತ್ಸ್ನ್ಯಂ ಓಂ'** ಎಂಬ ಸೂತ್ರದ ಅರ್ಥವನ್ನು 'ತದಪಿ' ಇತ್ಯಾದಿ ವಚನದಿಂದ ಸಂಗ್ರಹಿಸುತ್ತಾರೆ –

...ತದಪ್ಯಲಮ್ ॥೨೫೪॥

ದುಷ್ಟಂ ನಾನಾಶರೀರೇಷು ಪ್ರವೇಶಾದನ್ಯಥಾಭವಾತ್ ।

ಆ ಮತವೂ ಅತ್ಯಂತ ಅಯುಕ್ತವು. ಆತ್ಮನಿಗೆ ದೇಹ ಪರಿಮಾಣವೇಕೆ ಇಲ್ಲ ಎಂದರೆ 'ಅಕಾರ್ತ್ಸ್ನ್ಯಾದಿ ಪ್ರಸಂಗಾತ್' ಎಂದು ಉತ್ತರ. ಇದರ ಅಭಿಪ್ರಾಯ ಹೀಗಿದೆ – ಇರುವೆಯ ದೇಹದಲ್ಲಿರುವ ಆತ್ಮನಿಗೆ ಇರುವೆಯ ಶರೀರದ ಪರಮಾಣವಿರುತ್ತದೆ. ಕರ್ಮವಿಪಾಕದಿಂದ ಅದೇ ಆತ್ಮನಿಗೆ ಆನೆಯ ದೇಹವು ಪ್ರಾಪ್ತಿಯಾದಾಗ ಆ ದೇಹದಲ್ಲಿ ಆಕಾರದ ನ್ಯೂನತೆಯು ಬಂದೀತು. ಆನೆಯ ದೇಹದ ಪರಿಮಾಣವನ್ನು ಹೊಂದಿದ ಆತ್ಮನಿಗೆ ಇರುವೆಯ ದೇಹ ಪ್ರಾಪ್ತಿಯಾದಾಗ ಆ ದೇಹದಲ್ಲಿ ಆಕಾರದ ಅತಿರೇಕವು ಬಂದೀತು. ಹೀಗೆ ಎರಡು ರೀತಿಗಳಿಂದ ದೇಹಪರಿಮಾಣತ್ವವು ಸಂಭವಿಸುವುದೇ ಇಲ್ಲ.

ಹಾಗಾದರೆ ಆತ್ಮನು ಯಾವಾವ ದೇಹವನ್ನು ಹೊಂದುತ್ತಾನೋ ಆವಾವ ದೇಹದ ಪರಿಮಾಣವನ್ನು ಹೊಂದುತ್ತಾನೆ ಎಂದು ಹೇಳುತ್ತೇವೆ. ಆದ್ದರಿಂದ ಆಕಾರ ನ್ಯೂನತೆ ಆಧಿಕ್ಯಾದಿ ದೋಷಗಳು ಬರುವುದಿಲ್ಲ ಎಂದು ಆಶಂಕಿಸಿದರೆ, ಅದನ್ನು ನಿರಾಕರಿಸಲು ಹೊರಟ ಸೂತ್ರ – **'ಓಂ ನ ಚ ಪರ್ಯಾಯಾದಪ್ಯವಿರೋಧೋ ವಿಕಾರಾದಿಭ್ಯಃ ಓಂ'**. ಈ ಸೂತ್ರದ ತಾತ್ಪರ್ಯವನ್ನು 'ತದಪ್ಯಲಂ' ಎಂಬ ಈ ವಾಕ್ಯದಿಂದಲೇ ಹೇಳುತ್ತಾರೆ.

ಪರಿಮಾಣ ಹಾಗೂ ಪರಿಮಾಣವುಳ್ಳದ್ದು ಇವೆರಡಕ್ಕೂ ಅತ್ಯಂತ ಭೇದವನ್ನು ಅಂಗೀಕರಿಸಿಲ್ಲವಾದ್ದರಿಂದ, ಸ್ಥೂಲ ಹಾಗೂ ಸೂಕ್ಷ್ಮ ಶರೀರಗಳಲ್ಲಿ ಪ್ರವೇಶದಿಂದ ಸ್ಥೂಲ ಹಾಗೂ ಸೂಕ್ಷ್ಮ ಪರಿಮಾಣವು ಉಂಟಾದರೆ ಆತ್ಮನಿಗೇ ಅನ್ಯಥಾಭಾವ ಅಂದರೆ ವಿಕಾರವು ಬರಬೇಕಾಗಿರುವುದರಿಂದ ಈ ಪಕ್ಷವೂ ಅಯುಕ್ತವು.

ಆತ್ಮನಿಗೇ ಅನ್ಯಥಾಭಾವವು ಇರಲಿ, ದೋಷವೇನು? ಎಂಬ ಪ್ರಶ್ನೆಯನ್ನು 'ಅನ್ಯಥಾಭಾವಿ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಅನ್ಯಥಾಭಾವಿ ಯದ್ವಸ್ತು ತದನಿತ್ಯಮಿತಿ ಸ್ಥಿತಿಃ ॥೨೫೫॥

ತನ್ಮತೇ ತದನಿತ್ಯತ್ವಂ ಪುದ್ಗಲಸ್ಯಾನಿವಾರಿತಮ್ ।

ಯಾವ ವಸ್ತುವು ಅನ್ಯಥಾಭಾವವುಳ್ಳದ್ದೋ ಅದು ಅನಿತ್ಯವೆಂಬ ವ್ಯಾಪ್ತಿಯು ಜೈನಮತದಲ್ಲಿ ಅಂಗೀಕರಿಸಲ್ಪಟ್ಟಿದೆ. ಆದುದರಿಂದ ದೇಹಕ್ಕೆ ಇದ್ದಂತೆಯೇ ಆತ್ಮನಿಗೂ ಅನ್ಯಥಾಭಾವವನ್ನು ಒಪ್ಪುವುದರಿಂದ ಅವರ ಮತದ ಪ್ರಕಾರ ಆತ್ಮನಿಗೆ ಅನಿತ್ಯತ್ವವು ಅನಿವಾರ್ಯವು.

ಹಾಗಾದರೆ ನಮ್ಮ ಮತದಂತೆ ನಿಮ್ಮ ಮತದಲ್ಲಿಯೂ ಸುಖ ದುಃಖಾದಿಗಳ ಮೂಲಕ ಉಚ್ಚತ್ವ ನೀಚತ್ವರೂಪ ವಿಕಾರವನ್ನು ಒಪ್ಪಿರುತ್ತದೆ. ಆದ್ದರಿಂದ ನಿಮ್ಮ ಮತದಲ್ಲಿಯೂ ಆತ್ಮನಿಗೆ ಅನಿತ್ಯತ್ವವು ತಪ್ಪಿದ್ದಲ್ಲ ಎಂದು ಆಶಂಕಿಸಿದರೆ –

ನಾನಿತ್ಯತಾಸ್ಮತ್ಪಕ್ಷೇ ತು ಚೈತನ್ಯಾದೇರ್ವಿಶೇಷಿಣಃ ।।೨೫೬।।

ಲಕ್ಷಣಸ್ಯ ನಿವೃತ್ತೌ ತು ಸ್ಯಾನ್ನ ತಚ್ಚೇತನೇ ಕ್ವಚಿತ್ ।

ನಮ್ಮ ಪಕ್ಷದಲ್ಲಿಯಾದರೂ ಚೇತನಾದಿಗಳಿಗೆ ಅನಿತ್ಯತ್ವವು ಪ್ರಾಪ್ತವಾಗುವುದೇ ಇಲ್ಲ. ಏಕೆಂದರೆ ಚೇತನತ್ವ ಮೊದಲಾದ ಲಕ್ಷಣಕ್ಕೆ ನಿವೃತ್ತಿಯು ಸಂಭವಿಸಿದರೆ ಮಾತ್ರ ಅಂಥ ಲಕ್ಷಣವುಳ್ಳ ಚೇತನಕ್ಕೆ ನಿವೃತ್ತಿಯು ಪ್ರಸಕ್ತವಾಗುವುದು. ಚೇತನತ್ವವು ಯಾವದ್ ದ್ರವ್ಯಭಾವಿಯಾದ ಲಕ್ಷಣವಾದ್ದರಿಂದ ಅದು ಆತ್ಮನಲ್ಲಿ ಎಂದಿಗೂ ನಿವೃತ್ತಿಯಾಗುವುದಿಲ್ಲ.

ಅದು ಹೇಗೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ –

ಓತಪ್ರೋತಾತ್ಮಕತ್ವಂ ತು ಪಟೇ ದೇಹೇಽಗಸಂಸ್ಥಿತಿಃ ।।೨೫೭।।

ಇತ್ಯಾದಿಲಕ್ಷಣಸ್ಯೈವ ನಿವೃತ್ತೌ ಸ್ಯಾದನಿತ್ಯತಾ ।

ತಂತುಗಳ ಓತಪ್ರೋತವಾಗಿ ಕೂಡಿಕೊಂಡಿರುವುದೆಂಬುದೇ ಪಟದಲ್ಲಿ ಲಕ್ಷಣವು. ಹಾಗೆಯೇ ದೇಹದಲ್ಲಿ ಕರಚರಣಾದಿ ಅಂಗಗಳ ಸನ್ನಿವೇಶವು ಲಕ್ಷಣವು. ಈ ಪ್ರಕಾರವಾದ ಲಕ್ಷಣಗಳ ನಿವೃತ್ತಿಯಾದಾಗ ಮಾತ್ರ ಲಕ್ಷ್ಯಕ್ಕೆ ಅನಿತ್ಯತೆಯು ಬರುವುದು. ಆದರೆ ಆತ್ಮನಲ್ಲಿರತಕ್ಕ ಚೇತನತ್ವಾದಿ ವಿಶೇಷವು ಲಕ್ಷ್ಯವಾದ ಆತ್ಮನು ಇರುವವರೆಗೆ ಇರತಕ್ಕ ಲಕ್ಷಣವು. ಆದ್ದರಿಂದ ಆತ್ಮನಿಗೆ ಅನಿತ್ಯತ್ವವು ಹೇಗೆ ತಾನೆ ಬಂದೀತು?

ಹಾಗಾದರೆ ಆತ್ಮನು ಸ್ವಪ್ರಕಾಶನೆಂಬುದು ಅಯುಕ್ತವು. ಪ್ರಕಾಶವುಳ್ಳ ಪ್ರದೀಪಾದಿಗಳ ಹಾಗೆಯೇ ಆತ್ಮನಿಗೆ ರೂಪ ಸ್ಪರ್ಶ ಮುಂತಾದವು ಬರಬೇಕಾಗುವುದು. ಯಾವುದು ರೂಪಾದಿಗಳನ್ನು ಹೊಂದಿದೆಯೋ ಅದು ಅನಿತ್ಯವು ಎಂದು ವ್ಯಾಪ್ತಿಯಿದೆ. ಆದ್ದರಿಂದ ಆತ್ಮನಿಗೆ ಅನಿತ್ಯತೆಯ ಪರಿಹಾರವು ಹೇಗೆ? ಎಂದು ಆಶಂಕಿಸಿದರೆ –

ಭೌತಿಕಂ ತ್ವೇವ ರೂಪಾದಿ ವ್ಯಾಪ್ತಂ ನಾಶೇನ ನೋ ಮತೇ ॥೨೫೮॥

ನೈವಂ ತಸ್ಯಾನ್ಯಥಾಭಾವೋ ಯಸ್ಯಾನಿತ್ಯತ್ವಮೀರಿತಮ್ ।

ರೂಪಾದಿಯುಕ್ತಸ್ಯ ತಥಾ ಜಗನ್ನಾಶಿತ್ವಸಿದ್ಧಯೇ ॥೨೫೯॥

ವ್ಯಾಪ್ತ್ಯಾ ತಯಾನ್ಯಥಾಭಾವಾದಾತ್ಮನೋಽನಿತ್ಯತಾ ಭವೇತ್ ।

ನಮ್ಮ ಮತದಲ್ಲಿ ಭೌತಿಕವಾದ ರೂಪಾದಿಗಳೇ ನಾಶವನ್ನು ಹೊಂದತಕ್ಕದ್ದು ಎಂಬ ವ್ಯಾಪ್ತಿಯಿದೆ. ಆತ್ಮನಲ್ಲಿ ಭೌತಿಕವಾದ ರೂಪಾದಿಗಳು ಇಲ್ಲವಾದ್ದರಿಂದ ಅನಿತ್ಯತ್ವವು ಬರುವುದಿಲ್ಲ ಎಂದು ತಾತ್ಪರ್ಯ. ಜೈನರ ಮತದಲ್ಲಿ ಅನ್ಯಥಾಭಾವವೂ ಹಾಗೂ ರೂಪಾದಿಮತ್ವವೂ ನಮ್ಮ ಮತದಂತೆ ವಿಶೇಷಣ ವಿಶಿಷ್ಟವಾಗಿ ಹೇಳಲ್ಪಟ್ಟಿಲ್ಲ. ಆದ್ದರಿಂದ ಹಿಂದೆ ಹೇಳಿದ ಆತ್ಮ ಅನಿತ್ಯತ್ವರೂಪ ದೋಷವು ಪರಿಹಾರವಾಗುವುದಿಲ್ಲ. ಯಾವುದಕ್ಕೆ ವಿಕಾರವೋ ಅದಕ್ಕೆ ಅನಿತ್ಯತ್ವವು ಎಂಬ ವ್ಯಾಪ್ತಿಯು ಜಗನ್ನಾಶತ್ವದ ಸಿದ್ಧಿಗಾಗಿ ಜೈನನಿಂದ ಹೇಳಲ್ಪಟ್ಟಿದೆ. ಹಾಗೂ ರೂಪಾದಿಗಳಿಂದ ಕೂಡಿರುವ ವಸ್ತುವಿಗೂ ಅನಿತ್ಯತ್ವವು ಹೇಳಲ್ಪಟ್ಟಿದೆ. ಹೀಗೆ ವಿಕಾರವುಳ್ಳದ್ದು ಹಾಗೂ ರೂಪಾದಿವುಳ್ಳದ್ದು ಅನಿತ್ಯವೆಂಬ ವ್ಯಾಪ್ತಿಯ ನಿಮಿತ್ತವಾಗಿ ಜೈನರ ಮತದ ಪ್ರಕಾರ ಆತ್ಮನಿಗೆ ಅನಿತ್ಯತೆಯು ಬರಬೇಕಾಗುವುದು.

ಇನ್ನು ಜೈನನು ಹೇಳಿದ ಸಂತತೋರ್ಧ್ವಗತಿಯೇ ಮೋಕ್ಷ ಎಂಬ ಪ್ರಮೇಯವನ್ನು ನಿರಾಕರಿಸಲು ಹೊರಟಿರುವ ಸೂತ್ರ –

ಓಂ ಅಂತ್ಯಾವಸ್ಥಿತೇಶ್ಚೋಭಯನಿತ್ಯತ್ವಾದವಿಶೇಷಾತ್ ಓಂ

ಇದರಲ್ಲಿ 'ಅಂತ್ಯಾವಸ್ಥಿತೇಶ್ಚ' ಎಂಬ ಸೂತ್ರಾಂಶವನ್ನು 'ನಿತ್ಯ' ಇತ್ಯಾದಿ ವಚನದಿಂದ ಮೊದಲು ವ್ಯಾಖ್ಯಾನಿಸುತ್ತಾರೆ–

ನಿತ್ಯೋರ್ಧ್ವಗತಿರಪ್ಯೇಷಾ ಯಾ ಮುಕ್ತಿರಿತಿ ಕಥ್ಯತೇ ॥೨೬೦॥

ಅಲೋಕಾಕಾಶಮಾಪ್ತಸ್ಯ ಕಥಂ ನ ವಿಕೃತಿಶ್ಚ ಸಾ ।

ಯಾವ ನಿತ್ಯ ಊರ್ಧ್ವಗತಿಯೇ ಮೋಕ್ಷವೆಂದು ಜೈನರಿಂದ ಹೇಳಲ್ಪಟ್ಟಿದೆಯೋ ಅದಾದರೂ ಅಲೋಕಾಕಾಶವನ್ನು ಹೊಂದಿದ ಆತ್ಮನಿಗೆ ಹೇಗೆ ವಿಕಾರವು ಆಗಲಾರದು? ಮೊದಲು ಲೋಕಾಕಾಶದಲ್ಲಿದ್ದ ಆತ್ಮನು ನಿರಂತರವಾದ ಊರ್ಧ್ವಗಮನದಿಂದ ಲೋಕಾಕಾಶವನ್ನು ದಾಟಿ ಅಲೋಕಾಕಾಶವನ್ನು ಹೊಂದುತ್ತಾನೆ. ಇಂಥಹ ವಿಕಾರದ ಕಾರಣ ಆತ್ಮನಿಗೆ ಅನಿತ್ಯತ್ವವು ಬರಬೇಕಾಗುವುದು ಎಂದು ತಾತ್ಪರ್ಯ.

ಕೀದೃಶಶ್ಚಾನ್ಯಥಾಭಾವೋ ನಾಶಹೇತುತಯೇಷ್ಯತೇ ॥೨೬೧॥

ಸಂಸ್ಥಾನಾಪಗಮಶ್ಚೇತ್ಸ ನ ಹಿ ಭೂಸಾಗರಾದಿಷು ।

ಯಃ ಕಶ್ಚಿದನ್ಯಥಾಭಾವೋ ಯದಿ ಮುಕ್ತಿಶ್ಚ ತಾದೃಶೀ ॥೨೬೨॥

ಯಾವರೀತಿಯ ಅನ್ಯಥಾಭಾವವು ನಾಶಕ್ಕೆ ಕಾರಣವೆಂದು ಹೇಳಲ್ಪಡುತ್ತದೆ? ಲಕ್ಷಣದ ಅಪಗಮ ರೂಪವಾದ ಅನ್ಯಥಾಭಾವವು ನಾಶಕ್ಕೆ ಕಾರಣವೆಂದು ಹೇಳಿದರೆ ಅದು ಶಕ್ಯವಲ್ಲ. ಏಕೆಂದರೆ ಭೂಮಿ ಸಮುದ್ರ ಮುಂತಾದ ಪಕ್ಷೈಕ ದೇಶದಲ್ಲಿ ಅದು ಪ್ರಮಿತವಾಗಿಲ್ಲ. ಇನ್ನು ವಿಶೇಷಣರಹಿತವಾದ ಅನ್ಯಥಾಭಾವವು ನಾಶಕ್ಕೆ ಕಾರಣವೆಂದು ಹೇಳಿದರೆ ಮುಕ್ತಿಯೂ ಅಂಥಹ ಅನ್ಯಥಾಭಾವರೂಪವೇ ಆಗಿದೆ. ಇಂಥಹ ಅನ್ಯಥಾ ಭಾವವಿದ್ದರೂ ಆತ್ಮನಿಗೆ ನಿತ್ಯತ್ವವಿದ್ದರೆ ಭೂಮಿ ಸಮುದ್ರಗಳಿಗೂ ನಿತ್ಯತ್ವವು ಬರಲಿ.

ಜೈನನು ಹೇಳಿದ ಪ್ರಮೇಯಾಂತರವನ್ನು ದೂಷಿಸಲು 'ದೇಹಮಾನೇ' ಇತ್ಯಾದಿ ವಾಕ್ಯದಿಂದ ಅನುವಾದ ಮಾಡುತ್ತಾರೆ –

ದೇಹಮಾನೇ ವಿಕಾರಃ ಸ್ಯಾದಿತಿ ಸ್ಥಾಸ್ನೂನನಾತ್ಮನಃ ।

ಆಹ ಹಸ್ತ್ಯಾದಿದೇಹೇಷು ಹ್ಯಪಿ ಸ್ಯಾದನ್ಯಥಾಭವಃ ॥೨೬೩॥

ದೇಹಪರಿಮಾಣಕ್ಕೆ ಸಮನಾದ ಪರಿಮಾಣವನ್ನು ಒಪ್ಪಿದರೆ ಆತ್ಮನಿಗೆ ವಿಕಾರವು ಬರಬೇಕಾಗುವುದು. ಹೀಗೆ ಆಗಬಾರದು ಎನ್ನುವ ಕಾರಣಕ್ಕಾಗಿ ಜೈನನು ವೃಕ್ಷಾದಿ ಸ್ಥಾವರಗಳನ್ನು ಆತ್ಮರಹಿತಗಳೆಂದು ಹೇಳುತ್ತಾನೆ. ಇರುವೆ ಮುಂತಾದ ದೇಹದಲ್ಲಿ ಆಯಾಯ ಪರಿಮಾಣದಲ್ಲಿರುವ ಜೀವರಿಗೆ ಆನೆ ಮುಂತಾದ ದೊಡ್ಡ ಗಾತ್ರದ ದೇಹದಲ್ಲಿ ಪ್ರವೇಶಿಸಿದಾಗ ವಿಕಾರವು ಬರುತ್ತದೆ. ಆದ್ದರಿಂದ ಗಜಾದಿ ಶರೀರವೂ ಆತ್ಮರಹಿತವಾಗಲಿ.

ಅಣುದೇಹಸ್ಯ ಜೀವಸ್ಯ ಗಜತ್ವೇ ವಿಕೃತಿರ್ಹಿ ಯಾ ।

ದೇಹವ್ಯಾಪ್ತೌ ವಿಶೇಷಃ ಕಸ್ತಸ್ಯಾಃ ಸ್ಥಾಸ್ನುತನೌ ಚ ನುಃ ॥೨೬೪॥

ಇರುವೆ ಮುಂತಾದ ಚಿಕ್ಕ ದೇಹವುಳ್ಳ ಜೀವನಿಗೆ ಆನೆಯ ಶರೀರ ಬರಲು ಎಂಥ ವಿಕಾರವೋ, ಸ್ಥಾವರ ಶರೀರವು ಬರಲು ಪುರುಷನಿಗೆ ಎಂಥ ವಿಕಾರವೋ, ಇವೆರಡು ಬಗೆಯ ವಿಕಾರಗಳಿಗೂ ಪರಸ್ಪರವಾಗಿ ಏನು ವ್ಯತ್ಯಾಸವಿದೆ?

ಹಾಗಾದರೆ ನಾವು ವಿಕಾರವು ಬರುವುದೆಂಬ ಭಯದಿಂದ ವೃಕ್ಷಾದಿಗಳಿಗೆ ಆತ್ಮನಿಲ್ಲವೆಂದು ಹೇಳುವುದಿಲ್ಲ. ಆದರೆ ವೃಕ್ಷಾದಿಗಳಿಗೆ ಆತ್ಮವಿದೆ ಎನ್ನುವ ವಿಷಯದಲ್ಲಿ ಸಾಧಕ ಪ್ರಮಾಣವಿಲ್ಲದುದರಿಂದ ಹಾಗೂ ಬಾಧಕ ಪ್ರಮಾಣವಿರುವುದರಿಂದ ಹಾಗೆ ಹೇಳುತ್ತೇವೆ. ಏಕೆಂದರೆ ಆತ್ಮನಿಗೆ ಆಶ್ರಯವಾದ

ದೇಹದಲ್ಲಿರುವಂತೆ ವೃಕ್ಷಾದಿಗಳಿಗೆ ಇಂದ್ರಿಯಾದಿಗಳು ಇರುವುದಿಲ್ಲ. ಏಕೆಂದರೆ ಇಂದ್ರಿಯಗಳ ಕಾರ್ಯವಾದ ಶ್ರವಣಾದಿಗಳು ಇರುವುದಿಲ್ಲ. ಹೀಗೆ ಆಕ್ಷೇಪ ಬಂದರೆ ಅದನ್ನು 'ಗೀತಾತ್' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಗೀತಾತ್ಪುಷ್ಪಫಲಾವಾಪ್ತಿಃ ಸ್ಪರ್ಶಾತ್ಕಾರ್ಶ್ಯಂ ರಸಾತ್ಸ್ಥಿತಿಃ ।

ಅಪಿ ವೃಕ್ಷಸ್ಯ ದೃಶ್ಯಂತ ಇತಿ ನಾನಾತ್ಮತಾ ಭವೇತ್ ।।೨೬೫।।

ಏವಂ ಚಾತ್ಮಾಕಾರ್ತ್ಸ್ನ್ಯಮಿತಿ ತತ ಏವಾಹ ವೇದವಿತ್ ।

ಸಂಗೀತದಿಂದ ವೃಕ್ಷಾದಿಗಳಿಗೆ ಪುಷ್ಪ ಫಲಾದಿಗಳು ಉಂಟಾಗುವುದು ಕಂಡಿದೆ (ಶ್ರವಣೇಂದ್ರಿಯಕ್ಕೆ ಪ್ರಮಾಣ). ಹಾಗೆಯೇ ಶೀತೋಷ್ಣ ಸ್ಪರ್ಶ ವಿಶೇಷದಿಂದ ಕೃಶತ್ವವು (ಸ್ಪರ್ಶೇಂದ್ರಿಯಕ್ಕೆ ಪ್ರಮಾಣ), ನೀರು ಮುಂತಾದ ರಸವಿಶೇಷದಿಂದ ಸ್ಥಿತಿಯು (ರಸನೇಂದ್ರಿಯಕ್ಕೆ ಪ್ರಮಾಣ) ಕಂಡುಬರುತ್ತದೆ. ಅಪಿ ಶಬ್ದದಿಂದ ಇತರ ಇಂದ್ರಿಯಗಳ ಕಾರ್ಯವನ್ನೂ ತೆಗೆದುಕೊಳ್ಳಬೇಕು. ಹೇಗೆಂದರೆ, ಸುಂದರ ಕಾಂತೆಯ ದರ್ಶನದಿಂದ ತಿಲಕ ಎಂಬ ವೃಕ್ಷಕ್ಕೆ ಮೊಗ್ಗುಗಳು ಅರಳುವುದು ಕಂಡಿದೆ. ಇದರಿಂದ ಕಣ್ಣು ಮತ್ತು ಮನಸ್ಸುಗಳು ಸಿದ್ಧಿಸುತ್ತವೆ. ಧೂಪ ಹಾಕುವುದರಿಂದ ಅತಿಶಯವು ಕಂಡುಬರುವುದರಿಂದ ಘ್ರಾಣೇಂದ್ರಿಯವು ಸಿದ್ಧಿಸುತ್ತದೆ. ಈ ಪ್ರಕಾರವಾಗಿ ಇಂದ್ರಿಯಗಳಿಗೆ ಸಂಬಂಧಿಸಿದ ನಾನಾ ಕಾರ್ಯಗಳು ವೃಕ್ಷಗಳಲ್ಲೂ ಕಂಡುಬರುತ್ತವೆ. ಆದ್ದರಿಂದ ವೃಕ್ಷಾದಿಗಳಿಗೆ ಅನಾತ್ಮತೆಯು ಸಿದ್ಧಿಸಲಾರದು. ಇದರಿಂದ 'ಅವಿಶೇಷಾತ್' ಎಂಬ ಸೂತ್ರದ ಖಂಡವನ್ನು ಇನ್ನೊಂದು ರೀತಿಯಿಂದ ವ್ಯಾಖ್ಯಾನಿಸಿದಂತಾಗುವುದು.

ಮೇಲೆ ಹೇಳಿದ ಅರ್ಥಗಳನ್ನು ಪ್ರತಿಪಾದಿಸುವುದಕ್ಕಾಗಿಯೇ ವೇದವ್ಯಾಸರು 'ಏವಂ ಚ' ಇತ್ಯಾದಿ ಮೂರು ಸೂತ್ರಗಳನ್ನು ಹೇಳಿದರು. ಆ ಸೂತ್ರಗಳು ಯಾವುವೆಂದರೆ –

'ಓಂ ಏವಂ ಚಾತ್ಮಾಕಾರ್ತ್ಸ್ನ್ಯಂ ಓಂ

ಓಂ ನ ಚ ಪರ್ಯಾಯಾದಪ್ಯವಿರೋಧೋ ವಿಕಾರಾದಿಭ್ಯಃ ಓಂ

ಓಂ ಅಂತ್ಯಾವಸ್ಥಿತೇಶ್ಚೋಭಯನಿತ್ಯತ್ವಾದವಿಶೇಷಾತ್ ಓಂ

ಪತ್ಯುರಧಿಕರಣಮ್

ಓಂ ಪತ್ಯುರಸಾಮಂಜಸ್ಯಾತ್ ಓಂ

ಈ ಅಧಿಕರಣದಲ್ಲಿ ಪಶುಪತಿಯನ್ನು(ಮಹಾದೇವನನ್ನು) ಸರ್ವೋತ್ತಮನೆಂದು ಪುರಸ್ಕರಿಸಿ ಹೊರಟವರ ಮತವು ನಿರಾಕರಿಸಲ್ಪಡುತ್ತದೆ. ಅವರಲ್ಲಿ ಶೈವರು,

ಪಾಶುಪತರು, ಕಾಲಾಮುಖರು ಹಾಗೂ ಮಹಾವ್ರತರು ಎಂಬುದಾಗಿ ನಾಲ್ಕುವಿಧ. ಅವರ ಮತಗಳಿಗೆ ಅವಾಂತರ ಭೇದವಿದ್ದರೂ, ಅವೆಲ್ಲವೂ ವೇದವಾದಕ್ಕೆ ಅತ್ಯಂತ ವಿರುದ್ಧವಾದುದರಿಂದ, ಸಾಧಾರಣವೇ ಆದ ಪ್ರಮೇಯವನ್ನು ನಿರಾಕರಿಸಲು 'ಸರ್ವಜ್ಞತ್ವಾದಿಕೈಃ' ಇತ್ಯಾದಿ ವಾಕ್ಯದಿಂದ ಅನುವಾದ ಮಾಡುತ್ತಾರೆ –

ಸರ್ವಜ್ಞತ್ವಾದಿಕೈಃ ಸರ್ವೈರ್ಗುಣೈರುಕ್ತಂ ಸದಾಶಿವಮ್ ॥೨೬೬॥

ಜಗದ್ವಿಚಿತ್ರರಚನಾಕರ್ತಾರಂ ದೋಷವರ್ಜಿತಮ್ ।

ಆಹುಃ ಪಾಶುಪತಾಃ ತಚ್ಚ ಬಹುಶ್ರುತಿವಿರೋಧತಃ ॥೨೬೭॥

ನೋಪಾದೇಯಂ ಮತಂ ಹಿ ....

ಪಶುಪತಿಯನ್ನೇ ಸರ್ವೋತ್ತಮನೆಂದು ವಾದಿಸುವ ಆ ನಾಲ್ಕು ಮತದವರೂ ಸದಾಶಿವನು ಸರ್ವಜ್ಞತ್ವಾದಿ ಸರ್ವಗುಣಗಳಿಂದ ಯುಕ್ತನು, ಪ್ರಪಂಚದ ವಿಚಿತ್ರವಾದ ನಿರ್ಮಾಣವನ್ನು ಮಾಡತಕ್ಕವನು ಹಾಗೂ ದೋಷವಿಲ್ಲದವನು ಎಂದು ಹೇಳುತ್ತಾರೆ. ಅವರ ಮತವು, ಬಹುಶ್ರುತಿಗಳಿಗೆ ವಿರುದ್ಧವಾದುದರಿಂದ, ನಿಶ್ಚಯವಾಗಿಯೂ ಸ್ವೀಕಾರಕ್ಕೆ ಅರ್ಹವಲ್ಲ.

ಆ ಶ್ರುತಿಗಳು ಯಾವವು ಎಂದರೆ ಅವುಗಳನ್ನು ಉದಾಹರಿಸುತ್ತಾರೆ –

................................ಅಸ್ಯ ದೇವಸ್ಯ ಸ್ತುಹಿಗರ್ತಗಮ್ ।

ಉತ್ಪಿಪೇಷ ಶಿರಸ್ತಸ್ಯ ಗೃಣೀಷೇ ಸತ್ಪತಿಂ ಪದಮ್ ॥೨೬೮॥

ಯದ್ವಿಷ್ಣೋರುಪಮಂ ಹಂತುಂ ರುದ್ರಮಾಕೃಷ್ಯತೇ ಮಯಾ ।

ಧನುರ್ಯಂ ಕಾಮಯೇ ತಂ ತಮುಗ್ರಂ ಮಾ ಶಿಶ್ನದೇವತಾಃ ॥೨೬೯॥

'ಅಸ್ಯ ದೇವಸ್ಯ' (ಅಸ್ಯ ದೇವಸ್ಯ ಮೀಳ್ಹುಷೋ ವಯಾ ವಿಷ್ಣೋರೇಷಸ್ಯ ಪ್ರಭೃತೇ ಹವಿರ್ಭಿಃ। ವಿದೇ ಹಿ ರುದ್ರೋ ರುದ್ರಿಯಂ ಮಹಿತ್ವಂ ಯಾಸಿಷ್ಟಂ ವರ್ತಿರಾಶ್ವಿನಾ ವಿರಾವತ್), 'ಸ್ತುಹಿ ಗರ್ತಗಂ' (ಸ್ತುಹಿ ಶ್ರುತಂ ಗರ್ತಸದಂ ಯುವಾನಂ ಮೃಗಂ ನ ಭೀಮಮುಪಹಂತುಮುಗ್ರಂ। ಮೃಳಾ ಚರಿತ್ರೇ ರುದ್ರ ಸ್ತವಾನೋಽನ್ಯಂ ತೇ ಅಸ್ಮನ್ನಿವಪಂತು ಸೇನಾ), 'ಉತ್ಪಿಪೇಷ ಶಿರಸ್ತಸ್ಯ' (ರುದ್ರಸ್ಯ ತ್ವೇವ ಧನು ರಾತ್ನಿಃ ಶಿರಃ ಉತ್ಪಿಪೇಷ), 'ಗೃಣೀಷೇ ಸತ್ಪತಿಂ' (ಕುಮಾರಶ್ಚಿತ್ಪಿತರಂ ವಂದಮಾನಂ ಪ್ರತಿ ನಾನಾಮ ರುದ್ರೋ ಪಯಂತಂ। ಭೂರೇರ್ದಾತಾರಂ ಸತ್ಪತಿಂ ಗೃಣೀಷೇ ಸ್ತುತಸ್ತ್ವಂ ಭೇಷಜಾರಾಸ್ಯಸ್ಮ), 'ಪದಂ ಯದ್ವಿಷ್ಣೋರುಪಮಂ' (ತವ ಶ್ರಿಯೇ ಮರುತೋಽಮರ್ಜ ಯಂತ ರುದ್ರ ಯತ್ತೇ ಜನಿಮ ಚಾರುಚಿತ್ರಂ। ಪದಂ ಯದ್ವಿಷ್ಣೋರುಪಮಂ ನಿಧಾಯಿ ತೇನ ಪಾಸಿ ಗುಹ್ಯಂ ನಾಮ ಗೋನಾಂ), 'ಹಂತುಂ

ರುದ್ರಮಾಕೃಷ್ಯತೇ ಮಯಾ ಧನುಃ' (ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇ ಹಂತ ವಾ ಉ), 'ಯಂ ಕಾಮಯೇ ತಂ ತಮುಗ್ರಂ' (ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ), 'ಮಾ ಶಿಶ್ನದೇವತಾಃ' (ಮಾ ಶಿಶ್ನ ದೇವಾ ಅಪಿ ಗುಃ ಋತಂ ನಃ)

ಘ್ನಚ್ಛಿಶ್ನದೇವಾನೇಕೋಽಸಾವಾಸೀನ್ನಾರಾಯಣಃ ಪರಃ ।

ತಸ್ಮಾದ್ರುದ್ರಃ ಸಂಪ್ರಸಾದಶ್ಚಾಭೂತಾಂ ವೈಷ್ಣವಂ ಮಖಮ್ ॥೨೭೦॥

ಯಜ್ಞೇನ ಯಜ್ಞಮಯಜಂತಾಬಧ್ನನ್ ಪುರುಷಂ ಪಶುಮ್ ।

ಯೋ ಭೂತಾನಾಮಧಿಪತೀ ರುದ್ರಸ್ತಂತಿಚರೋ ವೃಷಾ ॥೨೭೧॥

ಇತ್ಯಾದಿ ಶ್ರುತಿಸಾಮರ್ಥ್ಯಾತ್ಪಾರತಂತ್ರ್ಯಂ ಜನಿರ್ಮೃತಿಃ ।

ಪರಾಧೀನಪದಪ್ರಾಪ್ತಿರಜ್ಞತ್ವಂ ಪ್ರಲಯೇಽಭವಃ ॥೨೭೨॥

ಪ್ರತೀಯಂತೇ ಸದೋಷತ್ವಾನ್ನೇಶಃ ಪಶುಪತಿಸ್ತತಃ ।

'ಘ್ನನ್ ಶಿಶ್ನದೇವಾನ್' (ಘ್ನನ್ ಶಿಶ್ನದೇವಾನ್ ಅಭಿವರ್ಪಸಾಭೂತ್), 'ಏಕೋ ಽಸಾವಾಸೀನ್ನಾರಾಯಣಃ ಪರಃ' (ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ), 'ತಸ್ಮಾದ್ರುದ್ರಃ ಸಂಪ್ರಸಾದಶ್ಚಾಭೂತಾಂ ವೈಷ್ಣವಂ ಮಖಂ' (ಸ ರುಷ್ಟಃ ಸ ಪ್ರಸನ್ನೋ ಯದ್ರುಷ್ಟೋ ಯತ್ಪ್ರಸನ್ನಃ ತಸ್ಮಾದ್ರುದ್ರ ಸಂಪ್ರಸಾದಾವ ಭೂತಾಂ ತೇಷಾಂ ಮಖಂ ವೈಷ್ಣವಂ ಯಶ ಆರ್ಧತ್), 'ಯಜ್ಞೇನ ಯಜ್ಞಮ ಯಜಂತ' (ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾ ನ್ಯಾಸನ್), 'ಅಬಧ್ನನ್ ಪುರುಷಂ ಪಶುಂ' (ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಂ), 'ಯೋ ಭೂತಾನಾಮಧಿಪತೀ ರುದ್ರಸ್ತಂತಿಚರೋ ವೃಷಾ' ಇತ್ಯಾದಿ ಶ್ರುತಿಗಳ ಬಲದಿಂದ ಪಾರತಂತ್ರ್ಯ, ಜನನ, ಮರಣ, ಪರಾಧೀನ ಪದದ ಪ್ರಾಪ್ತಿ, ಅಜ್ಞತೆ, ಪ್ರಲಯದಲ್ಲಿ ಇಲ್ಲದಿರುವಿಕೆ – ಇವುಗಳು ರುದ್ರನಲ್ಲಿ ಕಂಡುಬರುತ್ತವೆ. ಆದ್ದರಿಂದ ಪಶುಪತಿಯು ಸರ್ವೋತ್ತಮನಲ್ಲ ಎಂದು ತಾತ್ಪರ್ಯ.

ಇನ್ನೊಂದು ಯುಕ್ತಿಯಿಂದ ಶಿವನಿಗೆ ಜಗತ್ಕರ್ತೃತ್ವವನ್ನು ನಿರಾಕರಿಸಲು ಹೊರಟ ಸೂತ್ರ – **ಓಂ ಸಂಬಂಧಾನುಪಪತ್ತೇಶ್ಚ ಓಂ.** ಈ ಸೂತ್ರದ ಅರ್ಥವನ್ನು 'ಅಶರೀರತ್ವತಃ' ಎಂಬ ವಾಕ್ಯದಿಂದ ಹೇಳುತ್ತಾರೆ –

ಅಶರೀರತ್ವತಸ್ತಸ್ಯ ಸಂಬಂಧೋ ಜಗತಾ ಕ್ವಚಿತ್ ॥೨೭೩॥

ಕರ್ತೃತ್ವೇನ ನ ಯುಜ್ಯೇತ ದೇಹಿನೋ ಜ್ಞಾನದೃಷ್ಟಿತಃ ।

ರುದ್ರನಿಗೆ ದೇಹವಿಲ್ಲದಿರುವುದರಿಂದ ಜಗತ್ತಿನೊಡನೆ ಯಾವ ಕಾರ್ಯದಲ್ಲಿಯೂ ಕರ್ತೃತ್ವರೂಪ ಸಂಬಂಧವು ಯುಕ್ತವಾಗುವುದಿಲ್ಲ. ಏಕೆಂದರೆ ದೇಹವುಳ್ಳವನಿಗೇ ಜ್ಞಾನವು ಕಂಡಿರುತ್ತದೆ. ಕರ್ತೃತ್ವಕ್ಕೆ ಪ್ರಯತ್ನವು ಬೇಕು. ಪ್ರಯತ್ನವು ಇಚ್ಛೆಯಿಲ್ಲದೆ ಕೂಡಲಾರದು. ಇಚ್ಛೆಯು ಜ್ಞಾನವಿಲ್ಲದೆ ಕೂಡಲಾರದು. ಜ್ಞಾನವು ಶರೀರವಿಲ್ಲದೆ ಕೂಡಲಾರದು. ಆದ್ದರಿಂದ ದೇಹವಿಲ್ಲದವನಿಗೆ ಕರ್ತೃತ್ವವು ಕೂಡಲಾರದು.

ಹಿಂದೆ ಹೇಳಿದ, ಶರೀರೇಂದ್ರಿಯ ಸಂಬಂಧವಿಲ್ಲವಾದ್ದರಿಂದ ಕರ್ತೃತ್ವವಿಲ್ಲ, ಎಂಬ ದೋಷದ ಪರಿಹಾರವನ್ನು ಆಶಂಕಿಸಿ, ಅದರ ನಿರಾಕರಣಕ್ಕಾಗಿ ಹೊರಟ ಸೂತ್ರ – **ಓಂ ಕರಣವಚ್ಚೇನ್ನ ಭೋಗಾದಿಭ್ಯಃ ಓಂ**

'ನ ಚ' ಇತ್ಯಾದಿ ವಾಕ್ಯದಿಂದ ಈ ಸೂತ್ರಾರ್ಥವನ್ನು ಹೇಳುತ್ತಾರೆ –

ನ ಚ ದೇಹಾದಿವದ್ವಿಶ್ವಮಸ್ಯ ಸ್ಯಾದ್ಭೋಗಮಸಂಭವಾತ್ ।।೨೭೪।।

ರುದ್ರನಿಗೆ ವಿಶ್ವವು ದೇಹೇಂದ್ರಿಯಾದಿಗಳಂತೆ ಅಧಿಷ್ಠೇಯವಾಗಲಾರದು, ಭೋಗವು ಬರಬೇಕಾಗುವುದರಿಂದ.

ಇನ್ನೊಂದು ಯುಕ್ತಿಯಿಂದ ಶಿವನ ಜಗತ್ಕರ್ತೃತ್ವವನ್ನು ನಿರಾಕರಿಸುವ 'ಓಂ ಅಧಿಷ್ಠಾನಾನುಪಪತ್ತೇಶ್ಚ ಓಂ' ಎಂಬ ಸೂತ್ರವನ್ನು 'ಅಧಿಷ್ಠಾನೇ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

ಅಧಿಷ್ಠಾನೇ ಸ್ಥಿತಃ ಕರ್ತಾ ಕಾರ್ಯಂ ಕುರ್ವನ್ಪ್ರತೀಯತೇ ।

ನಾಸ್ಯಾಧಿಷ್ಠಾನಯೋಗೋಽಸ್ತಿ ಭೂತಾನಾಂ ಪ್ರಲಯೇ ತದಾ ।।೨೭೫।।

ಕುಂಬಾರ ಮುಂತಾದ ಕರ್ತನು ಪೃಥಿವಿ ಮುಂತಾದ ಅಧಿಷ್ಠಾನದಲ್ಲಿ ಸ್ಥಿತನಾಗಿಯೇ ಘಟಾದಿ ಕಾರ್ಯವನ್ನು ಮಾಡುವವನಾಗಿ ಕಂಡಿರುತ್ತಾನೆ. ಪ್ರಲಯದಲ್ಲಿ ಪಂಚ ಮಹಾಭೂತಗಳ ನಾಶವಾಗಿರಲು, ಆದಿ ಸೃಷ್ಟಿಕಾಲದಲ್ಲಿ ಈ ಶಿವನಿಗೆ ಅಧಿಷ್ಠಾನ ಸಂಬಂಧವು ಇರುವುದಿಲ್ಲ.

ಹಾಗಾದರೆ ಕುಂಬಾರಾದಿಗಳಿಗೆ ಶರೀರವಿರುವುದರಿಂದ ಅಧಿಷ್ಠಾನ ಸಾಪೇಕ್ಷತೆಯು ಯುಕ್ತವೆನಿಸುತ್ತದೆ. ಆದರೆ ಶರೀರವಿಲ್ಲದ ಶಿವನಿಗೆ ಅಧಿಷ್ಠಾನದ ಅಪೇಕ್ಷೆಯಿರುವುದಿಲ್ಲ. 'ಇಹ ಇದಂ ಜಾತಂ' 'ಇಲ್ಲಿ ಇದು ಉಂಟಾಯಿತು' ಇತ್ಯಾದಿ ವ್ಯವಹಾರವಾದರೋ ಆಕಾಶ ಮುಂತಾದವನ್ನು ಆಶ್ರಯಿಸಿ ಯುಕ್ತವಾಗುತ್ತದೆ. ಆದ್ದರಿಂದ ಶಿವನಿಗೆ ಭೂಮಿ ಮುಂತಾದ ಅಧಿಷ್ಠಾನವು ಬೇಕಿಲ್ಲ. ಹೀಗೆ ಆಕ್ಷೇಪ ಬಂದರೆ –

ಅದೇಹಶ್ಚೇದಸರ್ವಜ್ಞಃ ಶಿಲಾಕಾಷ್ಠಾದಿವತ್ಸದಾ ।

ದೇಹೀ ಚೇದಂತವಾನೇವ ಯಜ್ಞದತ್ತನಿದರ್ಶನಾತ್ ॥೨೭೬॥

ಶರೀರವಿಲ್ಲದವನಾದರೆ ಈ ಶಿವನು ಕಲ್ಲುಕಟ್ಟಿಗೆಗಳಂತೆ ಯಾವಾಗಲೂ ಎಲ್ಲವನ್ನೂ ತಿಳಿದವನಲ್ಲ. ದೇಹವುಳ್ಳವನಾದರೆ ಯಜ್ಞದತ್ತನ ದೃಷ್ಟಾಂತದಿಂದ ಮರಣವುಳ್ಳವನೂ ಆಗುವನು.

ಹಾಗಾದರೆ ವಿಷ್ಣುವು ಜಗತ್ಕರ್ತೃ ಎಂದು ಅಂಗೀಕರಿಸಿದರೆ, ಅವನಲ್ಲಿಯೂ ಈ ದೋಷಗಳು ಸಮಾನವಾಗುವುದರಿಂದ ಸ್ವವ್ಯಾಹತಿ ಬರುತ್ತದೆಂದು ಆಶಂಕಿಸಿದರೆ –

ನ ಚೈತದಖಿಲಂ ವಿಷ್ಣೌ ಶ್ರುತಿಪ್ರಾಮಾಣ್ಯಗೌರವಾತ್ ।

ಈ ದೋಷಗಳೆಲ್ಲವೂ ವಿಷ್ಣುವಿನಲ್ಲಿಯೂ ಬರುತ್ತವೆ ಎಂದು ಹೇಳಬಾರದು. ಏಕೆಂದರೆ ಪಾಶುಪತಾದಿ ಆಗಮಗಳಿಗಿಂತಲೂ ಶ್ರುತಿಗಳ ಪ್ರಾಮಾಣ್ಯವು ಶ್ರೇಷ್ಠವಾದುದು.

ಹಾಗಾದರೆ ಆ ಶ್ರುತಿಗಳು ಯಾವುವೆಂದರೆ, ಸೂಚ್ಯವಾಗಿ ತಿಳಿಸುತ್ತಾರೆ –

ಮನೋಬುದ್ಧ್ಯಂಗಿತಾಂ ವಿಷ್ಣೋರ್ಲಕ್ಷ್ಯಯಾಮೋ ಯ ಏವ ಸಃ ॥೨೭೭॥

ಸ ಏವ ದೇಹೋ ವಿಜ್ಞಾನಮೈಶ್ವರ್ಯಂ ಶಕ್ತಿರೂರ್ಜಿತಾ ।

ದೇಹೋ ವಿಷ್ಣೋರ್ನತೇ ವಿಷ್ಣೋ ವಾಸುದೇವೋಽಗ್ರತೋ ಭವೇತ್॥೨೭೮॥

ವಿಷ್ಣುವಿಗೆ ಬುದ್ಧಿ ಮನಸ್ಸು ಅಂಗ ಪ್ರತ್ಯಂಗಗಳಿವೆಯೆಂದು ಶ್ರುತಿಯು ತಿಳಿಸುತ್ತದೆ. ಶ್ರೀಹರಿಯು ಯಾವ ರೂಪನೋ ಅವನ ದೇಹವೂ ಅದೇ ರೂಪವೇ. ಶ್ರೀಹರಿಯ ದೇಹವು ವಿಜ್ಞಾನ, ಐಶ್ವರ್ಯ, ಸರ್ವತ್ರ ತಡೆಯಿಲ್ಲದ ಶಕ್ತಿಯಿಂದ ಕೂಡಿದುದು. ಹೇ ವಿಷ್ಣುವೇ, ನಿನ್ನ ಮಹಿಮೆಯ ಕೊನೆಯನ್ನು ಹಿಂದೆ ಹುಟ್ಟಿದವನು, ಮುಂದೆ ಹುಟ್ಟುವವನು, ಈಗ ಹುಟ್ಟಿದವನು ಯಾವನೂ ಸಹ ಹೊಂದುವುದಿಲ್ಲ. ವಾಸುದೇವನೇ ಸೃಷ್ಟಿಯ ಪೂರ್ವದಲ್ಲಿ (ಪ್ರಲಯದಲ್ಲಿ) ಇದ್ದನು.

ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ ।

ಅಜಸ್ಯ ನಾಭಾವಧ್ಯೇಕಮರ್ಪಿತಂ ಮಾತ್ರಯಾ ಪರಃ ॥೨೭೯॥

ನಾರಾಯಣನೊಬ್ಬನೇ ಸ್ವತಂತ್ರವಾಗಿ ಇದ್ದನು. ಬ್ರಹ್ಮನೂ ಇರಲಿಲ್ಲ, ಶಂಕರನೂ ಇರಲಿಲ್ಲ. ಜನನರಹಿತನಾದ ಶ್ರೀಹರಿಯ ನಾಭಿಯಲ್ಲಿ ಶ್ರೇಷ್ಠವಾದ ಒಂದು ಕಮಲವು ಅರ್ಪಿತವಾಗಿದೆ (ಹುಟ್ಟಿದೆ). ನೀನು ಅಳತೆಗೆ ದೂರನಾಗಿ (ನಿಲುಕದವನಾಗಿ) ಇದ್ದೀಯೆ.

ಸದ್ದೇಹಃ ಸುಖಗಂಧಶ್ಚ ಜ್ಞಾನಭಾಃ ಸತ್ಪರಾಕ್ರಮಃ ।

ಜ್ಞಾನಜ್ಞಾನಃ ಸುಖಸುಖಃ ಸ ವಿಷ್ಣುಃ ಪರಮೋಽಕ್ಷರಃ ।।೨೮೦।।

ಶ್ರೀಹರಿಯು ಜನ್ಮಾದಿ ದೋಷರಹಿತ ದೇಹವುಳ್ಳವನು. ಸುಗಂಧ ಸ್ವರೂಪನು. ಜ್ಞಾನರೂಪ ಪ್ರಕಾಶನು. ಸತ್ಪರಾಕ್ರಮನು. ಅತಿಶಯ ಜ್ಞಾನಸ್ವರೂಪನು, ಅತಿಶಯ ಸುಖಸ್ವರೂಪನು. ಆ ವಿಷ್ಣುವು ಸರ್ವೋತ್ತಮನು. ನಾಶರಹಿತನು.

ಆನಂದ ಏಕ ಏವಾಗ್ರ ಆಸೀನ್ನಾರಾಯಣಃ ಪ್ರಭುಃ ।

ಪ್ರಿಯಂ ತಸ್ಯ ಶಿರೋ ಮೋದಪ್ರಮೋದೌ ಚ ಭುಜೌ ಹರೇಃ ।।೨೮೧।।

ಆನಂದಸ್ವರೂಪನು. ಸರ್ವಸ್ವಾಮಿಯಾದ ನಾರಾಯಣನೊಬ್ಬನೇ ಪ್ರಲಯಕಾಲದಲ್ಲಿ ಇದ್ದನು. ಆ ನಾರಾಯಣನ ಶಿರಸ್ಸು ಪ್ರಿಯನಾಮಕವು. ಮೋದ ಪ್ರಮೋದಗಳು ಅವನ ಭುಜಗಳು. (ಶ್ರವಣಜನಿತ ಸುಖವು ಪ್ರಿಯ, ದರ್ಶನಜನಿತ ಆನಂದವು ಮೋದ, ಭೋಗಜನಿತ ಸುಖವು ಪ್ರಮೋದ).

ಆನಂದೋ ಮಧ್ಯತೋ ಬ್ರಹ್ಮ ಪುಚ್ಛಂ ನಾನ್ಯದಭೂತ್ಕ್ವಚಿತ್ ।

ಮನಸೋಽಸ್ಯಾಭವಬ್ರಹ್ಮಾ ಲಲಾಟಾದಪಿ ಶಂಕರಃ ।।೨೮೨।।

ಪಕ್ಷಯೋರ್ಗರುಡಃ ಶೇಷೋ ಮುಖಾದಾಸೀತ್ಸರಸ್ವತೀ ।

ಮಧ್ಯದೇಹವು ಸ್ವರೂಪಭೂತ ಆನಂದವು. ಬ್ರಹ್ಮನ ಪಾದಾದಿ ಯಾವ ಅಂಗಗಳೂ ಪ್ರಾಕೃತವಲ್ಲ. ಈ ವಿಷ್ಣುವಿನ ಮನಸ್ಸಿನಿಂದ ಚತುರ್ಮುಖ ಬ್ರಹ್ಮನೂ, ಹಣೆಯಿಂದ ಶಂಕರನೂ, ಭುಜಗಳಿಂದ ಗರುಡ ಶೇಷರೂ, ಮುಖದಿಂದ ಸರಸ್ವತಿಯೂ ಹುಟ್ಟಿದರು.

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।।೨೮೩।।

ಇತ್ಯಾದಿಶ್ರುತಿಸಂದರ್ಭಬಲಾನ್ನಿತ್ಯಗುಣಾತ್ಮನಃ ।

ವಿಷ್ಣೋರ್ದೇಹಾಜ್ಜಗತ್ಸರ್ವಮಾವಿರಾಸೀದಿತೀಯತೇ ।।೨೮೪।।

ಪುರುಷರೂಪೀ ಶ್ರೀಹರಿಯು ಅನಂತ ತಲೆಗಳು, ಅನಂತ ಕಣ್ಣುಗಳು ಹಾಗೂ ಅನಂತ ಪಾದಗಳನ್ನು ಹೊಂದಿರುವನು.

ಇವೇ ಮುಂತಾದ ಶ್ರುತಿಗಳ ಬಲದಿಂದ, ಈ ಸಮಸ್ತ ಪ್ರಪಂಚವೂ ನಿತ್ಯಗುಣ ಸ್ವರೂಪನಾದ ಶ್ರೀಹರಿಯ ದೇಹದಿಂದ ಉತ್ಪನ್ನವಾಯಿತು ಎಂದು ತಿಳಿದುಬರುತ್ತದೆ.

ಹಾಗಾದರೆ ವಿಷ್ಣುವಿನ ದೇಹವು ಜ್ಞಾನಾಂದಾತ್ಮಕ ಹಾಗೂ ಅನಾದಿ ನಿತ್ಯವೆಂಬ ವಚನವು ಮೊಲವು ಕೋಡುಳ್ಳದ್ದು ಎಂಬಂತೆ ವಿರುದ್ಧವಾಗುವುದು. ಏಕೆಂದರೆ ದೇಹವು ಯಾವುದೋ ಅದು ಭೌತಿಕವಾದದ್ದು ಹಾಗೂ ಜನನಾದಿಗಳುಳ್ಳದ್ದು ಎಂಬ ನಿಯಮವು ಕಂಡಿರುತ್ತದೆ. ಆದ್ದರಿಂದ ವಿಷ್ಣುವಿಗೆ ದೇಹವಿದೆಯೆಂದು ಅಂಗೀಕರಿಸಿ, ಅದು ಅಭೌತಿಕವಾದ ಜ್ಞಾನಾನಂದ ಸ್ವರೂಪವು ಎಂದು ಅಂಗೀಕರಿಸಿದರೆ, ಮೊಲಕ್ಕೆ ಕೋಡುಗಳಿವೆಯೆಂಬುದನ್ನೂ ಅಂಗೀಕರಿಸಬೇಕಾಗುತ್ತದೆ. ಹೀಗೆ ಆಶಂಕೆ ಬಂದರೆ ಅದನ್ನು 'ಮಾನವತ್ತ್ವಾತ್' ಎಂಬಿತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಮಾನವತ್ತ್ವಾದ್ವಿರೋಧಃ ಕೋ ನಾಮಾನಂ ಕ್ವಚಿದಿಷ್ಯತೇ ।

ಅವಿರೋಧೋ ವಿರೋಧಶ್ಚ ಮಾನೇನೈವ ಹಿ ಗಮ್ಯತೇ ॥೨೮೫॥

ಅತ ಉಕ್ತಂ ಸಮಸ್ತಂ ಚ ವಾಸುದೇವಸ್ಯ ಯುಜ್ಯತೇ ।

ಪರಮೇಶ್ವರನ ದೇಹವು ಜ್ಞಾನಾನಂದಾತ್ಮಕವೆಂಬುದು ಪ್ರಮಾಣಗಳಿಗೆ ವಿರುದ್ಧವಲ್ಲ. ಆದ್ದರಿಂದ ಅದನ್ನು ಅಂಗೀಕರಿಸುತ್ತೇವೆ. ಆದರೆ ಮೊಲದ ಕೋಡು ಪ್ರಮಾಣಕ್ಕೆ ವಿರುದ್ಧವು. ಆದ್ದರಿಂದ ಅದನ್ನು ಅಂಗೀಕರಿಸುವುದಿಲ್ಲ. ಅವಿರೋಧ ವಿರೋಧಗಳೆರಡೂ ಪ್ರಮಾಣಗಳಿಂದಲೇ ತಿಳಿಯಲ್ಪಡುತ್ತವೆ. ಆದ್ದರಿಂದ ಮೇಲೆ ಉದಾಹರಿಸಿದ ಶ್ರುತಿಗಳಲ್ಲಿ ಹೇಳಿದ ಸಮಸ್ತವೂ ಶ್ರೀಹರಿಯ ವಿಷಯದಲ್ಲಿ ಯುಕ್ತವಾಗುತ್ತವೆ.

ಹಾಗಾದರೆ ಇದು ನಮಗೂ ಸಮಾನವು. 'ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ' 'ಏಕೋ ರುದ್ರೋ ನ ದ್ವಿತೀಯಾಯ ತಸ್ಥೇ' 'ಸ ಇಮಾನ್ ಲೋಕಾನೀಶತ ಈಶನೀಭಿಃ' ಇತ್ಯಾದಿ ಶ್ರುತಿಗಳು ಶಿವನಿಗೆ ಜಗಜ್ಜನ್ಮಾದಿ ಕಾರಣತ್ವವನ್ನು ಹೇಳುತ್ತವೆ. ಆದ್ದರಿಂದ ಶಿವನಿಗೆ ಜಗತ್ಕಾರಣತ್ವವನ್ನು ಹೇಳುವುದು ಅಸಮಂಜಸವಲ್ಲ. ಹೀಗೆ ಆಶಂಕಿಸಿದರೆ –

ಶಿವಾದಿನಾಮಯುಕ್ತಾಶ್ಚ ಶ್ರುತಯೋ ವಿಷ್ಣುವಾಚಕಾಃ ॥೨೮೬॥

ನಾಮಾನಿ ಸರ್ವಾಣಿ ಚ ಯಮೇಕೋ ಯೋ ದೇವನಾಮಧಾಃ ।

ವಿಷ್ಣುನಾಮಾನಿ ನಾನ್ಯಸ್ಯ ಸರ್ವನಾಮಾ ಹರಿಃ ಸ್ವಯಮ್ ॥೨೮೭॥

ನ ನಾರಾಯಣನಾಮಾನಿ ತದನ್ಯೇಷ್ವಪರೇ ಹರೌ ।

ಇತ್ಯಾದಿಶ್ರುತಯಸ್ತತ್ರ ಮಾನಂ ಚೋಕ್ತೋ ಸಮನ್ವಯಃ ॥೨೮೮॥

ಶಿವ ಮುಂತಾದ ನಾಮಗಳಿಂದ ಕೂಡಿದ ಶ್ರುತಿಗಳೂ ವಿಷ್ಣುವಾಚಕಗಳೇ ಆಗಿವೆ. ಏಕೆಂದರೆ ಎಲ್ಲ ನಾಮಗಳೂ ಮುಖ್ಯವೃತ್ತಿಯಿಂದ ವಿಷ್ಣುವನ್ನೇ ಹೇಳುತ್ತವೆ

ವಿಷ್ಣುವಿನ ನಾಮಗಳು ಅನ್ಯ ದೇವತೆಗಳ ವಾಚಕಗಳಲ್ಲ. ಆದರೆ ವಿಷ್ಣುವು ಸ್ವತಂತ್ರವಾಗಿ ಎಲ್ಲ ನಾಮಗಳಿಂದ ವಾಚ್ಯನು. ನಾರಾಯಣನ ನಾಮಗಳು ರುದ್ರಾದಿಗಳಲ್ಲಿ ವಾಚಕವಾಗಿರುವುದಿಲ್ಲ. ಶಿವಾದಿ ಇತರ ಶಬ್ದಗಳೆಲ್ಲವೂ ನಾರಾಯಣನಲ್ಲಿ ಇರುತ್ತವೆ. 'ನಾಮಾಣಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಮುದಾಹರಂತಿ' 'ನಾಮಾನಿ ವಿಶ್ವಾಭಿ ನ ಸಂತಿ ಲೋಕೇ ಯೋ ದೇವಾನಾಂ ನಾಮಧಾ ಏಕ ಏವ' ಇವೇ ಮುಂತಾದ ಶ್ರುತಿಗಳು ಮೇಲೆ ಹೇಳಿದ ವಿಷಯದಲ್ಲಿ ಪ್ರಮಾಣಗಳಾಗಿವೆ. ಇದರೊಂದಿಗೆ ಹಿಂದೆ ಹೇಳಿದ ಸಮನ್ವಯವೂ ಈ ವಿಷಯದಲ್ಲಿ ಪ್ರಮಾಣವಾಗುವುದು.

ಇನ್ನು ಶಿವನಿಗೆ ಜಗತ್ಕಾರಣತ್ವದ ವಿಷಯದಲ್ಲಿ ಶ್ರುತಿಗಳು ಪ್ರಮಾಣವಾಗದಿರಲಿ. ಆದರೆ ಶೈವಾದಿ ಪುರಾಣಗಳು ಪ್ರಮಾಣವಾಗುವುದು. ಅಲ್ಲದೆ ಆ ಶೈವಾದಿ ಪುರಾಣಗಳು ವಿಷ್ಣುಪರವಾಗುವುದಿಲ್ಲ. ಈ ಆಶಂಕೆಯನ್ನು 'ಪುರಾಣಾನಿ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಪುರಾಣಾನಿ ಪುರಾಣಾದ್ಯೈರ್ವಿರುದ್ಧತ್ವಾನ್ನ ತತ್ಪ್ರಮಾ ।

ತದ್ವಿರುದ್ಧೇಷು ನೋ ಮಾನಂ ಪೂರ್ವಾಪರವಿರೋಧತಃ ॥೨೮೯॥

ಸಮಬ್ರಾಹ್ಮವಿರೋಧಾಚ್ಚ ನಿಯಮಾದ್ವೈಷ್ಣವೇಷ್ವಪಿ ।

ವೈಷ್ಣವಪುರಾಣಗಳಿಂದ ವಿರುದ್ಧವಾದುದರಿಂದ ಶೈವಪುರಾಣವು ಶಿವನ ಜಗತ್ಕಾರಣತ್ವ ವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಕೇವಲ ವೈಷ್ಣವ ಪುರಾಣಗಳಿಂದ ವಿರುದ್ಧವೆಂದಷ್ಟೇ ಅಲ್ಲ, ಶೈವ ಪುರಾಣಗಳಲ್ಲಿ ಪೂರ್ವಾಪರ ವಿರೋಧವಿರುವುದರಿಂದಲೂ ಶಿವನಿಗೆ ಜಗತ್ಕಾರಣತ್ವವನ್ನು ಹೇಳುವ ವಿಷಯದಲ್ಲಿ ಶೈವಪುರಾಣವು ಅಪ್ರಮಾಣವು. ನಿಷ್ಪಕ್ಷಪಾತವಾದ ಬ್ರಹ್ಮಪುರಾಣದ ವಿರೋಧವು ಇರುವುದರಿಂದಲೂ ಅಪ್ರಮಾಣವು. ಹಾಗಾದರೆ ವೈಷ್ಣವಪುರಾಣಗಳಿಗೂ ಅಪ್ರಾಮಾಣ್ಯವ ಬರಲಿ. ಏಕೆಂದರೆ ಅವುಗಳಿಗೂ ಶೈವಪುರಾಣಗಳಿಂದ ವಿರೋಧವು ಹಾಗೂ ಪೂರ್ವಾಪರ ವಿರೋಧವು ಬರುವುದು ಎಂದು ಹೇಳುವುದು ಸರಿಯಲ್ಲ. ಏಕೆಂದರೆ ವಿಷ್ಣುಪುರಾಣಗಳಲ್ಲಿ ಏಕರೂಪತ್ವವು ಇರುವುದರಿಂದ ಪೂರ್ವಾಪರ ವಿರೋಧವಿಲ್ಲ. ಜೊತೆಗೆ ವೈಷ್ಣವಪುರಾಣಗಳಿಗೆ ವಿರೋಧವನ್ನು ಉಂಟುಮಾಡುವ ಸಾಮರ್ಥ್ಯ ಶೈವಪುರಾಣಗಳಿಗಿಲ್ಲ.

ಮೋಹಾರ್ಥಮುಕ್ತಿತಶ್ಚೈವ ವಿಷ್ಣುರೇಕೋ ಗುಣಾರ್ಣವಃ ॥೨೯೦॥

ಸ್ಕಂದಸೂರ್ಯಗಣೇಶಾದಿಮತಾನಿ ನ್ಯಾಯತೋಽಮುತಃ ।

ನಿರಾಕೃತಾನ್ಯಶೇಷೇಣ ಸಿದ್ಧಾಂತಸ್ಯಾವಿಶೇಷತಃ ॥೨೯೧॥

ಶಿವಾದಿಗಳ ಜಗತ್ಕಾರಣತ್ವ ವಿಷಯದ ಬಗ್ಗೆ ಅಯೋಗ್ಯ ಜನರ ಮೋಹನಕ್ಕಾಗಿಯೇ ಶಿವಾದಿಗಳಿಗೆ ಜಗತ್ಕಾರಣತ್ವವು ಹೇಳಲ್ಪಟ್ಟಿದೆ. ಈ ಕಾರಣದಿಂದಲೂ ಶಿವಾದಿಗಳಿಗೆ ಜಗತ್ಕಾರಣತ್ವವನ್ನು ಹೇಳುವುದು ಅಪ್ರಮಾಣವು. ಆದ್ದರಿಂದ ಶ್ರೀಹರಿಯೊಬ್ಬನೇ ಗುಣಸಮುದ್ರನು. ಇನ್ನು ಸ್ಕಂದ, ಸೂರ್ಯ, ಗಣೇಶ ಮುಂತಾದವರು ಸರ್ವೋತ್ತಮರು ಎಂದು ಪ್ರತಿಪಾದಿಸುವ ಮತಗಳೆಲ್ಲವೂ, ಸಿದ್ಧಾಂತದಲ್ಲಿ ವಿಶೇಷವಿಲ್ಲದುದರಿಂದ, ಇದೇ ನ್ಯಾಯದಿಂದ ನಿರಾಕೃತವಾಗುತ್ತವೆ.

ಉತ್ಪತ್ತ್ಯಧಿಕರಣಮ್

ಓಂ ಉತ್ಪತ್ತ್ಯಸಂಭವಾತ್ ಓಂ

ಈ ಅಧಿಕರಣದಲ್ಲಿ ಶಾಕ್ತಮತವು ನಿರಾಕರಿಸಲ್ಪಡುತ್ತದೆ.

ಹಾಗಾದರೆ ಈ ಅಧಿಕರಣವು ಯುಕ್ತವಲ್ಲ. ಏಕೆಂದರೆ ಸ್ಕಂದಾದಿ ಮತದ ಹಾಗೆ ಈ ಮತವೂ ಹಿಂದಿನ ನ್ಯಾಯದಿಂದಲೇ ನಿರಾಕರಣೆಗೆ ಯೋಗ್ಯವಾಗಿದೆ. ಸ್ಕಂದಾದಿ ಮತಗಳಿಗೆ ಹೇಳಿದ ದೂಷಣಗಳೇ ಇದಕ್ಕೂ ಅನ್ವಯಿಸುತ್ತವೆ. ಹೀಗೆ ಪೂರ್ವಪಕ್ಷವು ಬಂದರೆ, ಈ ಅಧಿಕರಣದ ಯುಕ್ತತೆಯನ್ನು ತೋರಿಸಲು 'ನಿರಾಕೃತೌ' ಇತ್ಯಾದಿ ವಾಕ್ಯವನ್ನು ಯೋಜಿಸುತ್ತಾರೆ –

ನಿರಾಕೃತೌ ವಿಶೇಷಸ್ಯ ಭಾವಾಚ್ಛಕ್ತಿಮತಂ ಪೃಥಕ್ ।

ದೂಷ್ಯತೇ..॥

ನಿರಾಕರಣದಲ್ಲಿ ವಿಶೇಷವಿರುವುದರಿಂದ, ಶಾಕ್ತಮತವು ಪ್ರತ್ಯೇಕವಾಗಿ ದೂಷಿಸಲ್ಪಡುತ್ತದೆ. ಆದ್ದರಿಂದ ಅಧಿಕರಣದ ಆರಂಭವು ಯುಕ್ತವೇ ಆಗಿದೆ. ಹೀಗೆ ಸಮಾಧಾನ ಹೇಳಿ, ಈಗ ಶಾಕ್ತಮತವನ್ನು 'ಮಹತೀಂ' ಇತ್ಯಾದಿ ವಾಕ್ಯದಿಂದ ಉಪನ್ಯಾಸ ಮಾಡುತ್ತಾರೆ.

...........ಮಹತೀಂ ದೇವೀ ಹ್ರೀಂಕಾರೀ ಸರ್ವಕಾರಣಮ್ ॥೨೯೨॥

ತ್ರಿಪುರಾ ಭೈರವೀತ್ಯಾದಿನಾಮಭಿಃ ಸಾಭಿಧೀಯತೇ ।

ಶಕ್ತಿಯು ಸರ್ವೋತ್ಕೃಷ್ಟಳು, ಸರ್ವಕಾರಣಳಾದ್ದರಿಂದ ಎಂಬುದು ಶಾಕ್ತಮತವು. ಹ್ರೀಂಕಾರೀ, ತ್ರಿಪುರಾ, ಭೈರವೀ ಇತ್ಯಾದಿ ನಾಮಗಳಿಂದ ಆ ಶಕ್ತಿ ದೇವಿಯೊಬ್ಬಳೇ ಹೇಳಲ್ಪಡುತ್ತಾಳೆ.

ಇನ್ನು ಶಾಕ್ತರಾದರೂ ಮಹಾವಾಮ, ಮಧ್ಯವಾಮ ಹಾಗೂ ಅಣುವಾಮ ಎಂದು ಮೂರು ತರಹದವರಿದ್ದಾರೆ. ಅವರೇ ಕೆಲವೆಡೆಗಳಲ್ಲಿ ಶಾಕ್ತ, ಶಾಂಭವ, ಅಣವ ಎಂಬ ಶಬ್ದಗಳಿಂದ ಹೇಳಲ್ಪಡುತ್ತಾರೆ. ಇವರುಗಳಲ್ಲಿ ಮೊದಲನೆಯ

ಮಹಾವಾಮ ಮತದ ವಿಶೇಷವನ್ನು 'ತಸ್ಯಾಃ' ಇತ್ಯಾದಿ ವಾಕ್ಯದಿಂದ ಹೇಳಿ ಅದು ಅಯುಕ್ತವೆಂದು ಹೇಳುತ್ತಾರೆ–

ತಸ್ಯಾಃ ಸದಾಶಿವಾದ್ಯಾಶ್ಚ ಜಾಯಂತೇ ದೇವಮಾನವಾಃ ।।೨೯೩।।

ಭೂತಭೌತಿಕಮಪ್ಯೇತದಿತಿ ತನ್ನೋಪಪದ್ಯತೇ ।

ಆ ಕೇವಲ ಶಕ್ತಿದೇವಿಯಿಂದಲೇ ಸದಾಶಿವ ಮುಂತಾದ ದೇವತೆಗಳೂ, ಮಾನವರೂ, ಪಂಚಮಹಾಭೂತಗಳೂ, ಭೌತಿಕ ವಸ್ತುಗಳೂ ಹುಟ್ಟುತ್ತವೆಯೆಂದು ಹೇಳುವ ಮಹಾವಾಮ ಮತವು ಅಯುಕ್ತವು.

ಈ ಮತವು ಅಯುಕ್ತವು ಏಕೆ ಎಂಬ ಆಶಂಕೆ ಬರಲು ಅದನ್ನು ಪರಿಹರಿಸಲು ಹೊರಟಿರುವ ಸೂತ್ರ – **ಓಂ ಉತ್ಪತ್ತ್ಯಸಂಭವಾತ್ ಓಂ.** ಈ ಸೂತ್ರವನ್ನು ವ್ಯಾಖ್ಯಾನಿಸುವುದಕ್ಕೆ ಮೊದಲು ಅದರ ವ್ಯಾಪ್ತಿಯನ್ನು 'ದೃಷ್ಟಾ' ಎಂಬಿತ್ಯಾದಿ ವಚನದಿಂದ ಉಪಪಾದಿಸುತ್ತಾರೆ –

ದೃಷ್ಟಾ ಪುಂಭ್ಯಃ ಸದಾ ಸೃಷ್ಟಿಃ ಸ್ತ್ರೀಪುಂಭ್ಯೋ ವಾ ವಿಶೇಷತಃ ।।೨೯೪।।

ಕೇವಲಾಭ್ಯೋ ನ ಹಿ ಸ್ತ್ರೀಭ್ಯಸ್ತತ ಉತ್ಪತ್ತ್ಯಸಂಭವಾತ್ ।

ನಾರ್ಚ್ಯಂ ಮಹಾವಾಮಮತಂ ವಾಮೈರನ್ಯೈರುದೀರ್ಯತೇ ।।೨೯೫।।

ಪುರುಷರಿಂದ ಸಂತಾನೋತ್ಪತ್ತಿಯು ಕೆಲವೆಡೆಗಳಲ್ಲಿ ಕಂಡಿದೆ. ಪ್ರಚುರವಾಗಿ ಸ್ತ್ರೀಪುರುಷರಿಂದ ಕೂಡಿ ಸಂತಾನೋತ್ಪತ್ತಿಯು ಯಾವಾಗಲೂ ಕಂಡಿದೆ. ಪುರುಷಾನುಗ್ರಹವಿಲ್ಲದೆ ಕೇವಲ ಸ್ತ್ರೀಯಿಂದ ಸಂತಾನೋತ್ಪತ್ತಿಯು ಕಂಡು ಬಂದೇ ಇಲ್ಲ. ಈ ರೀತಿಯಾಗಿ ವ್ಯಾಪ್ತಿಯಿರುವುದರಿಂದ, ಕೇವಲ ಶಕ್ತಿದೇವಿಯಿಂದ ಉತ್ಪತ್ತಿಯು ಅಸಂಭವ. ಆದ್ದರಿಂದ ಮಹಾವಾಮವೆಂಬ ಶಾಕ್ತಮತವು ಅಂಗೀಕಾರಕ್ಕೆ ಯೋಗ್ಯವಲ್ಲ. ಶಾಕ್ತಮತದ ಇನ್ನೊಂದು ಪ್ರಭೇದಕ್ಕೆ ಸೇರಿದ ಮಧ್ಯಮವಾಮರು, ಮಹಾವಾಮರಿಗಿಂತ ವಿಭಿನ್ನವಾದ ಸಿದ್ಧಾಂತವನ್ನು ಹೇಳುತ್ತಾರೆ.

ಶಿವೋಪಸರ್ಜನಾ ಶಕ್ತಿಃ ಸಸರ್ಜೇದಂ ಸಮಂತತಃ ।

ಇತಿ ತಚ್ಚೋಪಪನ್ನಂ ನ ಶಿವಸ್ಯಾಕರಣತ್ವತಃ ।।೨೯೬।।

ಅದೇಹತ್ವಾತ್ ಅಪಿ ಹ್ಯನ್ಯೇ ಬ್ರೂಯುಃ ಸರ್ವಜ್ಞಮೀಶ್ವರಮ್ ।

ಅಣುವಾಮಾಃ ನ ತದ್ಯುಕ್ತಮೀಶವಾದಪ್ರವೇಶನಾತ್ ।।೨೯೭।।

ಶಿವನನ್ನು ಅಪ್ರಧಾನವಾಗಿ ಹೊಂದಿರುವ ಶಕ್ತಿಯು ಸರ್ವದೇಶಕಾಲಗತವಾದ ಕಾರ್ಯವನ್ನೆಲ್ಲ ಸೃಷ್ಟಿಸಿತು. ಹೀಗೆ ಹೇಳುವ ಮಹಾವಾಮ ಮತವು ಅಯುಕ್ತವು.

ಅದು ಹೇಗೆ ಎಂದರೆ ಅದಕ್ಕೆ ಉತ್ತರವಾಗಿ '**ಓಂ ನ ಚ ಕರ್ತುಃ ಕರಣಮ್ ಓಂ**' ಎಂಬ ಸೂತ್ರವು ಹೊರಟಿದೆ. ಅದನ್ನು 'ಶಿವಸ್ಯ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾರೆ –

ಏಕೆಂದರೆ ಶಿವನಿಗೆ ಕರಣಗಳಿಲ್ಲ, ದೇಹವೂ ಇಲ್ಲ. ಇನ್ನು ಇತರರಾದ ಅಣುವಾಮರೆಂಬ ಶಾಕ್ತರು ರುದ್ರನನ್ನು ಸರ್ವಜ್ಞನನ್ನಾಗಿಯೂ, ಜಗತ್ಸೃಷ್ಟಿಗೆ ಅಗತ್ಯವಾದ ಸಕಲ ಸಲಕರಣೆಗಳನ್ನೂ ಉಳ್ಳವನೆಂದೂ ಹೇಳುತ್ತಾರೆ. ಅದೂ ಯುಕ್ತವಲ್ಲ.

ಅವರ ಮತವು ಅಯುಕ್ತವೇಕೆ ಎಂಬ ಪ್ರಶ್ನೆ ಬಂದರೆ ಅದಕ್ಕೆ ಹೊರಟ ಸೂತ್ರ – **ಓಂ ವಿಜ್ಞಾನಾದಿಭಾವೇ ವಾ ತದಪ್ರತಿಷೇಧಃ ಓಂ** – ಶಿವನಿಗೆ ವಿಜ್ಞಾನಾದಿಗಳು ಇರುವುದೆಂದು ಅಂಗೀಕರಿಸಲ್ಪಟ್ಟಮೇಲೆ ಆ ಮತವು ನಿರಾಕರಿಸಲ್ಪಡುವುದಿಲ್ಲ ಎಂದರ್ಥ. 'ಈಶವಾದಪ್ರವೇಶನಾತ್' ಎಂಬ ವಾಕ್ಯವೇ ಈ ಸೂತ್ರಕ್ಕೆ ವ್ಯಾಖ್ಯಾನ. ಏಕೆಂದರೆ 'ಹಾಗೆ ಹೇಳುವುದು ಶೈವಮತದಲ್ಲಿ ಪ್ರವೇಶವಾದಂತಾಗುವುದರಿಂದ' ಎಂದು ತಾತ್ಪರ್ಯ.

ಇನ್ನು ಶೈವರು ಸರ್ವಜ್ಞತ್ವ ಮುಂತಾದ ಗುಣವುಳ್ಳ ಶಿವನೊಬ್ಬನನ್ನೇ ಅಂಗೀಕರಿಸುತ್ತಾರೆ. ಶಾಕ್ತರಾದರೂ ಶಿವನ ಜೊತೆಗೆ ಶಕ್ತಿಯನ್ನೂ ಅಂಗೀಕರಿಸುತ್ತಾರೆ. ಹೀಗೆ ಇವರಿಬ್ಬರಲ್ಲಿ ಸಿದ್ಧಾಂತ ವ್ಯತ್ಯಾಸವಿದೆ. ಆದ್ದರಿಂದ ಶೈವಮತದಲ್ಲಿ ಪ್ರವೇಶ ಹೇಗೆ ಎಂಬ ಆಶಂಕೆ ಬಂದರೆ –

ಸಾರ್ವಜ್ಞಾದಿಗುಣೈರ್ಯುಕ್ತಂ ಗುರುಕಲ್ಪನಯಾ ದ್ವಯಮ್ ।

ನ ಯುಜ್ಯತೇ ತತಸ್ತ್ವೀಶ ಏಕ ಏವ ಪ್ರಯೋಜಕಃ ॥೨೯೮॥

ಉಕ್ತದೋಷಶ್ಚ ತತ್ಪಕ್ಷ ಇತಿ ನೈವಾತ್ರ ದೂಷ್ಯತೇ ।

ಸರ್ವಜ್ಞತ್ವಾದಿ ಗುಣಗಳಿಂದ ಕೂಡಿರುವ ಶಿವ ಶಕ್ತಿಗಳೆಂಬ ಎರಡು ತತ್ವಗಳು ಕಲ್ಪನಾಗೌರವ ದೋಷದಿಂದಾಗಿ ಅಯುಕ್ತವೆನಿಸುವುದು. ಆದ್ದರಿಂದ ಸಾರ್ವಜ್ಞಾದಿ ಗುಣಯುಕ್ತನಾದ ಶಿವನೊಬ್ಬನನ್ನೇ ಪ್ರಪಂಚ ರಚನೆಯಲ್ಲಿ ಪ್ರಯೋಜಕನೆಂದು ಶಾಕ್ತರೂ ಅಂಗೀಕರಿಸಬೇಕಾಗುತ್ತದೆ. ಆ ಶೈವಮತವಾದರೂ ಹಿಂದೆ ಹೇಳಿದ ದೋಷಗಳಿಂದ ಯುಕ್ತವಾಗಿರುವುದರಿಂದ ಇಲ್ಲಿ ಪುನಃ ಅದು ದೂಷಿಸಲ್ಪಡುವುದಿಲ್ಲ.

ಈ ಪ್ರಕಾರವಾಗಿ ನಿರಾಕರಿಸಲ್ಪಟ್ಟ ಈ ಮೂರೂ ಮತಗಳನ್ನು ಸಾಧಾರಣ ದೂಷಣದಿಂದ ನಿರಾಕರಿಸಲು 'ಓಂ ವಿಪ್ರತಿಷೇಧಾಚ್ಚ ಓಂ' ಎಂಬ ಸೂತ್ರವು ಹೊರಟಿದೆ. ಅದನ್ನು 'ಶ್ರುತಿ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಾರೆ –

ಶ್ರುತಿಸ್ಮೃತೀತಿಹಾಸಾನಾಂ ಸಾಮಸ್ತ್ಯೇನ ವಿರೋಧತಃ ॥೨೯೯॥

ಸತಾಂ ಜುಗುಪ್ಸಿತತ್ವಾಚ್ಚ ನಾಂಗೀಕಾರ್ಯಂ ಹಿ ತನ್ಮತಮ್ ।

ಸಮಸ್ತವಾದ ಶ್ರುತಿ ಸ್ಮೃತಿ ಇತಿಹಾಸಗಳ ವಿರೋಧ ಬರುವುದರಿಂದಲೂ, ಸಜ್ಜನರಿಗೆ ಜುಗುಪ್ಸಿತವಾದುದರಿಂದಲೂ ಶಾಕ್ತಮತವು ಅಂಗೀಕಾರಕ್ಕೆ ಯೋಗ್ಯವಲ್ಲ. ಆ ಶ್ರುತ್ಯಾದಿಗಳು ಪ್ರಸಿದ್ಧವಾದುದೂ ಆಗಿವೆ.

ಇನ್ನು ಮಾಯಾವಾದಿಗಳು ನಾಲ್ಕು ಸೂತ್ರಗಳುಳ್ಳ ಈ ಅಧಿಕರಣವನ್ನು ಭಾಗವತ ಅಥವಾ ಪಾಂಚರಾತ್ರ ಮತದ ನಿರಾಕರಣಪರವಾಗಿ ವ್ಯಾಖ್ಯಾನಿಸುತ್ತಾರೆ. ಹೇಗೆ ಎಂಬುದನ್ನು ಶ್ರೀಮನ್ನ್ಯಾಯಸುಧಾ ಅವಲೋಕನದಿಂದ ತಿಳಿಯಬಹುದು. ಅವರ ಈ ಅಪವ್ಯಾಖ್ಯಾನವನ್ನು 'ಪಂಚರಾತ್ರ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಾರೆ –

ಪಂಚರಾತ್ರನಿಷೇಧಾರ್ಥಮೇತಾನ್ಯಾಚಕ್ಷತೇ ಯದಿ ।।೩೦೦।।

ಸೂತ್ರಾಣ್ಯತಿವಿರುದ್ಧಂ ತದ್ಯತ ಆಹ ಸ ಭಾರತೇ ।

ಪಂಚರಾತ್ರಾಗಮಗಳ ನಿರಾಕರಣಕ್ಕಾಗಿ ಈ ಸೂತ್ರಗಳನ್ನು ಸೂತ್ರಕಾರರು ರಚಿಸಿದ್ದಾರೆಂದು ಹೇಳುವುದು ಸೂತ್ರಕಾರರ ಮತಕ್ಕೆ ಅತಿವಿರುದ್ಧವು. ಏಕೆಂದರೆ ಆ ಸೂತ್ರಕಾರರೇ ಭಾರತದಲ್ಲಿ ಪಂಚರಾತ್ರದ ಪ್ರಾಮಾಣ್ಯವನ್ನು ಹೇಳಿದ್ದಾರೆ.

ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।।೩೦೧।।

ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ವಿಶಿಷ್ಯತೇ ।

ಪಂಚರಾತ್ರವಿದೋ ಯೇ ತು ಯಥಾಕ್ರಮಪರಾ ನೃಪ ।।೩೦೨।।

ಏಕಾಂತಭಾವೋಪಗತಾ ವಾಸುದೇವಂ ವಿಶಂತಿ ತೇ ।

ಇತಿ ಗೀತಾ ಚ ತಚ್ಛಾಸ್ತ್ರಸಂಕ್ಷೇಪ ಇತಿ ಹೀರಿತಮ್ ।।೩೦೩।।

ಸಮಗ್ರವಾದ ಪಂಚರಾತ್ರದ ವಕ್ತೃವು ನಾರಾಯಣನೇ. ಎಲೈ ರಾಜ ಶ್ರೇಷ್ಠನೇ, ಈ ಎಲ್ಲ ಶಾಸ್ತ್ರಗಳಲ್ಲಿ ಈ ಪಂಚರಾತ್ರವು ಶ್ರೇಷ್ಠವಾಗಿದೆ. ಯಾರು ಪಂಚರಾತ್ರವನ್ನು ತಿಳಿದಿರುವರೋ, ದೇವತಾ ತಾರತಮ್ಯವನ್ನು ತಿಳಿದಿರುವರೋ ಹಾಗೂ ಏಕಾಂತ ಭಕ್ತಿಯನ್ನು ಹೊಂದಿರುವರೋ ಅವರು ವಾಸುದೇವನನ್ನು ಪ್ರವೇಶಿಸುತ್ತಾರೆ. ಹೀಗೆ ಮಹಾಭಾರತದಲ್ಲಿ ಹೇಳಿದೆ. ಭಗವದ್ಗೀತೆಯೂ ಪಂಚರಾತ್ರದ ಸಂಕ್ಷೇಪವೇ ಆಗಿದೆ. 'ಬ್ರಹ್ಮ, ರುದ್ರ, ಇಂದ್ರ, ಸೂರ್ಯರುಗಳಿಗೆ ಪೂರ್ವದಲ್ಲಿ ವಿಷ್ಣುವು ಯಾವ ಪಂಚರಾತ್ರವನ್ನು ಉಪದೇಶಿಸಿದ್ದನೋ ಅದನ್ನೇ ಅವರ ಅವತಾರರಾದ ಪಾಂಡವರುಗಳಿಗೆ ಶ್ರೀ ವೇದವ್ಯಾಸರು ಪ್ರದಾನ ಮಾಡಿದರು. ಸೇನಾ ಮಧ್ಯದಲ್ಲಿದ್ದ ಯುದ್ಧ ಬಯಸದ ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಿಸಿದನು. ಅದೇ

ಗೀತೆಯೆಂದು ವಿಖ್ಯಾತವಾಯಿತು'. (ಬ್ರಹ್ಮರುದ್ರೇಂದ್ರಸೂರ್ಯಾಣಾಂ ಯದ್ದತ್ತಂ ವಿಷ್ಣುನಾ ಪುರಾ। ಪಂಚರಾತ್ರಾತ್ಮಕಂ ಜ್ಞಾನಂ ವ್ಯಾಸೋऽದಾತ್ಪಾಂಡವೇಷು ತತ್। ತೇಷಾಮೇವಾವತಾರೇಷು ಸೇನಾಮಧ್ಯೇऽ ರ್ಜುನಾಯ ಚ। ಪ್ರಾದಾದ್ಗೀತೇತಿ ವಿನಿರ್ದಿಷ್ಟಂ ಸಂಕ್ಷೇಪೇಣಾಯುಯುತ್ಸವೇ।) ಇತ್ಯಾದಿ ಪುರಾಣ ವಾಕ್ಯವು ಇದಕ್ಕೆ ಪ್ರಮಾಣವಾಗಿದೆ. ಆದಕಾರಣ ಸೂತ್ರಕಾರರಿಗೆ ಪಂಚರಾತ್ರದ ಪ್ರಾಮಾಣ್ಯವು ಅಂಗೀಕೃತವೇ ಆಗಿದೆ.

ವೇದೇನ ಪಂಚರಾತ್ರೇಣ ಭಕ್ತ್ಯಾ ಯಜ್ಞೇನ ಚೈವ ಹಿ ।

ದೃಶ್ಯೋऽಹಂ ನಾನ್ಯಥಾ ದೃಶ್ಯೋ ವರ್ಷಕೋಟಿಶತೈರಪಿ ।।೩೦೪।।

ಇತಿ ವಾರಾಹವಚನಂ ಶ್ಲೋಕಾ ಇತಿ ವಚಃ ಶ್ರುತೌ ।

ವೇದದಿಂದ, ಪಂಚರಾತ್ರದಿಂದ, ಭಕ್ತಿಯಿಂದ, ಯಜ್ಞದಿಂದಲೇ ನನ್ನನ್ನು ಕಾಣಲು ಸಾಧ್ಯ. ಬೇರೆ ರೀತಿಯಿಂದ ನೂರಾರು ಕೋಟಿ ವರ್ಷ ಪ್ರಯತ್ನ ಮಾಡಿದರೂ ನಾನು ಗೋಚರನಾಗುವುದಿಲ್ಲ. ಹೀಗೆ ವರಾಹಪುರಾಣ ವಚನವಿದೆ.

'ಋಗ್ವೇದೋ ಯಜುರ್ವೇದಃ ಸಾಮವೇದೋऽಥರ್ವಾಂಗಿರಸ ಇತಿಹಾಸ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನಿ' ಇತ್ಯಾದಿ ಶ್ರುತಿವಾಕ್ಯದಲ್ಲಿ ಋಗ್ವೇದಾದಿ ಪ್ರಮಾಣಗಳನ್ನು ಪ್ರಶಂಸಿಸುವ ಪ್ರಸಂಗದಲ್ಲಿ ಶ್ಲೋಕಾಃ ಎಂಬುದಾಗಿ ಪಂಚರಾತ್ರವನ್ನು ಸಂಗ್ರಹಿಸಲಾಗಿದೆ.

ವೇದೈಶ್ಚ ಪಂಚರಾತ್ರೈಶ್ಚ ಧ್ಯೇಯೋ ನಾರಾಯಣಃ ಪರಃ ।।೩೦೫।।

ಪಂಚರಾತ್ರಂ ಚ ವೇದಾಶ್ಚ ವಿದ್ಯೈಕೈವ ದ್ವಿಧೇಯತೇ ।

ಇತ್ಯಾದಿವೇದವಚನೈಃ ಪಂಚರಾತ್ರಮಪೋದ್ಯತೇ ।।೩೦೬।।

ಕಥಮೇವ ಅತ್ರ ದೋಷಃ ಕ ಉತ್ಪತ್ತಿರ್ಜ್ಞೋऽತ ಇತ್ಯಪಿ ।

ಇಹೈವೋಕ್ತಾ ನ ಚಾಭೂತಭಾವಸ್ತತ್ರಾಪಿ ಕಥ್ಯತೇ ।।೩೦೭।।

'ವೇದಗಳಿಂದಲೂ, ಪಂಚರಾತ್ರಗಳಿಂದಲೂ ಸರ್ವೋತ್ತಮನಾದ ನಾರಾಯಣನು ಧ್ಯೇಯನು. ಒಂದೇ ವಿದ್ಯೆಯೇ ಪಂಚರಾತ್ರವೆಂದೂ ವೇದಗಳೆಂದೂ ಎರಡು ವಿಧವಾಗಿ ಹೇಳಲ್ಪಡುತ್ತದೆ' ಇತ್ಯಾದಿ ವೇದವಚನಗಳಿರುವದರಿಂದ ಪಂಚರಾತ್ರವು ಅಪ್ರಮಾಣವೆಂಬ ಹೇಳಿಕೆಯು ತದ್ವಿರುದ್ಧವಾಗಿದೆ. ಆದುದರಿಂದ ಈ ಅಧಿಕರಣದಲ್ಲಿ ಪಂಚರಾತ್ರವು ದೂಷಿಸಲ್ಪಡುತ್ತದೆ ಎಂದು ಹೇಳುವುದು ಹೇಗೆ ಶಕ್ಯವಾಗುತ್ತದೆ? ಈ

ಪಂಚರಾತ್ರದಲ್ಲಿ ದೋಷವು ಯಾವುದು? 'ಜ್ಞೋऽತ ಏವ' ಎಂಬ ಸೂತ್ರದಿಂದ ಈ ಶಾಸ್ತ್ರದಲ್ಲಿಯೇ ಜೀವನಿಗೆ ಕೇವಲ ಉತ್ಪತ್ತಿಯಷ್ಟೇ ಹೇಳಲ್ಪಟ್ಟಿದೆ. ಹಿಂದೆ ಇಲ್ಲದೇ ಇದ್ದ ಜೀವನಿಗೆ ಉತ್ಪತ್ತಿಯು ಶ್ರುತಿ ಸೂತ್ರಗಳಲ್ಲಿ ಹೇಳಲ್ಪಟ್ಟಿಲ್ಲ. ಹಿಂದೆ ಇದ್ದೇ ಇರುವ ಜೀವನಿಗೆ ದೇಹಾದಿ ಉಪಾಧಿ ವಿವಕ್ಷೆಯಿಂದಲೇ ಉತ್ಪತ್ತಿಯು ಉಕ್ತವಾಗಿದೆ. ಹಿಂದೆ ಇಲ್ಲದೇ ಇರುವ ಜೀವನಿಗೆ ಉತ್ಪತ್ತಿಯೆಂಬುದು ಆ ಪಂಚರಾತ್ರದಲ್ಲಿಯೂ ಹೇಳಲ್ಪಟ್ಟಿಲ್ಲ.

ಅನಾದಿಕರ್ಮಣಾ ಬದ್ಧೋ ಜೀವಃ ಸಂಸಾರಮಂಡಲೇ ।

ವಾಸುದೇವೇಚ್ಛಯಾ ನಿತ್ಯಂ ಭ್ರಮತೀತಿ ಹಿ ತದ್ವಚಃ ॥೩೦೮॥

ನ ಹಿ ಸಂಸಾರಸಾದಿತ್ವಂ ಪಂಚರಾತ್ರೋದಿತಂ ಕ್ವಚಿತ್ ।

'ಅನಾದಿ ಕರ್ಮದಿಂದ ಬದ್ಧನಾದ ಜೀವನು ವಾಸುದೇವನ ಇಚ್ಛೆಯಿಂದ ಸಂಸಾರ ಚಕ್ರದಲ್ಲಿ ನಿರಂತರವಾಗಿ ತಿರುಗುತ್ತಾನೆ' ಹೀಗೆ ಆ ಪಂಚರಾತ್ರದ ವಚನವು. ಸಂಸಾರದ ಸಾದಿತ್ವವು ಪಂಚರಾತ್ರದಲ್ಲಿ ಎಲ್ಲಿಯೂ ಹೇಳಲ್ಪಟ್ಟಿಲ್ಲ.

ಹೀಗೆ ಜೀವಾದಿ ಪದಗಳಿಗೆ ಯಥಾಶ್ರುತವಾದ ಅರ್ಥವನ್ನು ಒಪ್ಪಿ, ಎರಡು ಸೂತ್ರಗಳಿಂದ ಪಂಚರಾತ್ರ್ಯಾದಿಗಳಿಗೆ ಪರನು ಆರೋಪಿಸಿದ ಅಪ್ರಾಮಾಣ್ಯವೆಂಬ ದೋಷವನ್ನು ಪರಿಹರಿಸಿಲಾಯಿತು. ಈಗ 'ವಾಸುದೇವನಿಂದ ಸಂಕರ್ಷಣ ನಾಮಕ ಜೀವನು ಜನಿಸುತ್ತಾನೆ' ಮುಂತಾದ ವಾಕ್ಯಕ್ಕೆ ಪರರು ಕಲ್ಪಿಸಿದ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನು 'ಜೀವಾಭಿಮಾನಿ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಜೀವಾಭಿಮಾನಿಶೇಷಸ್ಯ ನಾಮ್ನಾ ಸಂಕರ್ಷಣಸ್ಯ ತು ॥೩೦೯॥

ವಾಸುದೇವಾಜ್ಜನಿಃ ಪ್ರೋಕ್ತಾ ಪ್ರದ್ಯುಮ್ನಸ್ಯ ತತಸ್ತಥಾ ।

ಮನೋऽಭಿಮಾನಿನಃ ಕಾಮಸ್ಯೈವಂ ಸಾಕ್ಷಾದ್ಧರೇಃ ಕ್ವಚಿತ್ ॥೩೧೦॥

ಸಂಕರ್ಷಣಾದಿನಾಮ್ನೈವ ನಿತ್ಯಾಚಿಂತ್ಯೋರುಶಕ್ತಿತಃ ।

ವ್ಯೂಹಯುಕ್ತೋऽನ್ಯಥಾನೂದ್ಯ ಕಥಂ ದುಷ್ಟತ್ವಮುಚ್ಯತೇ ॥೩೧೧॥

ಜೀವಶಬ್ದದ ಪ್ರವೃತ್ತಿ ನಿಮಿತ್ತವನ್ನು ಉಪಪಾದನ ಮಾಡಲು ಜೀವಾಭಿಮಾನಿ ಎಂದು ಹೇಳಿದ್ದಾರೆ. ಸಂಕರ್ಷಣ ನಾಮಕ ಭಗವಂತನಿಗೆ ಜನನವಿಲ್ಲವಾದ್ದರಿಂದ, ಜೀವಾಭಿಮಾನಿ ಶೇಷನೇ ಇಲ್ಲಿ ಸಂಕರ್ಷಣ ಎಂಬ ಹೆಸರಿನಿಂದ ಹೇಳಲ್ಪಟ್ಟಿದ್ದಾನೆ. ವಾಸುದೇವ ನಾಮಕ ಭಗವಂತನಿಂದ ಸಂಕರ್ಷಣ ನಾಮಕನಾದ ಜೀವಾಭಿಮಾನಿ ಶೇಷನ ಉತ್ಪತ್ತಿಯು. ಹಾಗೂ ಆ ಸಂಕರ್ಷಣನಿಂದ ಮನೋಭಿಮಾನಿ ಪ್ರದ್ಯುಮ್ನ ನಾಮಕ ಕಾಮನ ಜನನವು. ಇದರಂತೆಯೇ ಪ್ರದ್ಯುಮ್ನನಿಂದ ಅಹಂಕಾರಕ್ಕೆ

ಅಭಿಮಾನಿಯಾದ ಕಾಮಪುತ್ರ ಅನಿರುದ್ಧನ ಉತ್ಪತ್ತಿಯು ಎಂದು ತಿಳಿಯಬೇಕು.

ಕೆಲವು ಕಾಲವಿಶೇಷಗಳಲ್ಲಿ ಸಾಕ್ಷಾತ್ತಾಗಿ ಶ್ರೀಹರಿಗೇ ಸಂಕರ್ಷಣ ಮುಂತಾದ ನಾಮದಿಂದ ವ್ಯೂಹ ಅಥವಾ ವಿಭಾಗ ಹೇಳಲ್ಪಟ್ಟಿದೆ. ನಿತ್ಯವೂ ಅಚಿಂತ್ಯವೂ ಉತ್ಕೃಷ್ಟವೂ ಆದ ಶಕ್ತಿಯನ್ನು ಹೊಂದಿರುವ ಕಾರಣ ಶ್ರೀಹರಿಗೆ ತನ್ನಿಂದಲೇ ತನಗೆ ವಿಭಾಗವೆಂಬುದು ಯುಕ್ತವಾಗುತ್ತದೆ. ಹೀಗೆ ಶ್ರುತಿಸಿದ್ಧವಾದ ಅರ್ಥವುಳ್ಳ ವಾಕ್ಯಕ್ಕೆ ಬೇರೆ ಅರ್ಥವನ್ನು ಅನುವಾದ ಮಾಡಿ ದೂಷಣವನ್ನು ಹೇಳುವುದು ಸರಿಯಲ್ಲ.

ಇನ್ನು ಶಾಂಡಿಲ್ಯನ ವೃತ್ತಾಂತದ ಕಥನದಲ್ಲಿ ಪಂಚರಾತ್ರಕ್ಕೆ ವೇದ ವಿದ್ವೇಷವು ಕಂಡುಬರುತ್ತದೆ ಎಂದು ಹೇಳಿದ್ದನ್ನು 'ಯದಿ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಯದಿ ವಿದ್ಯಾಚ್ಚತುರ್ವೇದಾನಿತಿವದ್ವೇದಪೂರಣಮ್ ।

ಪಂಚರಾತ್ರಾದಿತಿ ಕುತೋ ದ್ವೇಷಃ ಶಾಂಡಿಲ್ಯವರ್ತನೇ ॥೩೧೨॥

ಯದಿ ವಿದ್ಯಾತ್ ಇತ್ಯಾದಿ ವಾಕ್ಯದಲ್ಲಿ ಇತಿಹಾಸ ಪುರಾಣಗಳಿಂದ ವೇದ ಮಹಾತಾತ್ಪರ್ಯ ವಿಷಯವಾದ ಪರಬ್ರಹ್ಮ ತತ್ವದ ನಿರ್ಣಯವು ಅಭಿಪ್ರೇತವಾಗಿದೆ. ಅದರಂತೆ ಶಾಂಡಿಲ್ಯ ವೃತ್ತಾಂತ ಕಥನದಲ್ಲಿಯೂ ಪಂಚರಾತ್ರದಿಂದ ಆ ವೇದಪೂರಣವು ಅಭಿಪ್ರೇತವಾಗಿದೆ ಎಂದು ವ್ಯಾಖ್ಯಾನ ಮಾಡಲಾಗಿದೆ. ಅಂದಮೇಲೆ ಪಂಚರಾತ್ರದಲ್ಲಿ ವೇದವಿದ್ವೇಷವು ತೋರುವುದೇಕೆ?

ಅತಃ ಪರಮಶಾಸ್ತ್ರೋರುದ್ವೇಷಾದುದಿತಮಾಸುರೈಃ ।

ದೂಷಣಂ ಪಂಚರಾತ್ರಸ್ಯ ವೀಕ್ಷ್ಯಾಯಾಮಪಿ ನ ಕ್ಷಮಮ್ ॥೩೧೩॥

ಆದ್ದರಿಂದ ಪರಮಶಾಸ್ತ್ರವಾದ ಪಂಚರಾತ್ರದ ಮೇಲಿನ ಅತ್ಯಂತ ದ್ವೇಷದಿಂದ ಅಸುರರಿಂದ ಹೇಳಲ್ಪಟ್ಟ ಪಂಚರಾತ್ರದ ದೂಷಣವು ನೋಡಲಿಕ್ಕೂ ಅರ್ಹವಲ್ಲ. ಹೀಗೆ ಪಂಚರಾತ್ರದ ಪ್ರಾಮಾಣ್ಯದ ನಿರಾಕರಣೆಯನ್ನು ಹೇಳಿದವರು ಅಸುರರಾದ್ದರಿಂದ ಅದು ಸೂತ್ರಾರ್ಥವಾಗಲು ಸಾಧ್ಯವಿಲ್ಲ. ಶಾಕ್ತಮತದ ನಿರಾಕರಣೆಯೇ ಈ ಸೂತ್ರದ ಅರ್ಥವು ಎಂದು ತಾತ್ಪರ್ಯ.

ಈ ಪಾದದ ಅರ್ಥವನ್ನು 'ಅತೋಽಶೇಷ' ಇತ್ಯಾದಿ ವಾಕ್ಯದಿಂದ ಉಪಸಂಹಾರ ಮಾಡುತ್ತಾರೆ –

ಅತೋಽಶೇಷಜಗದ್ಧಾತಾ ನಿರ್ದೋಷೋರುಗುಣಾರ್ಣವಃ ।

ನಾರಾಯಣಃ ಶ್ರುತಿಗಣತಾತ್ಪರ್ಯಾದವಸೀಯತೇ ॥೩೧೪॥

ಆದ್ದರಿಂದ ನಾರಾಯಣನು ಅಶೇಷ ಜಗತ್ಕರ್ತನು, ಅಶೇಷ ದೋಷರಹಿತನು, ಉತ್ಕೃಷ್ಟಗುಣಸಮುದ್ರನು ಎಂದು ಶ್ರುತಿಗಣತಾತ್ಪರ್ಯದಿಂದ ನಿರ್ಣೀತವಾಗುತ್ತದೆ.

ಹಾಗಾದರೆ ಪರರನ್ನು ನಿಗ್ರಹಿಸಿ ವಾದಕಥೆಯನ್ನು ನಡೆಸಬಾರದು ಎಂಬುದಾಗಿ ಸ್ಮೃತಿಗಳು ಹೇಳಿರುವುದರಿಂದ ಪರಮತ ನಿರಾಕರಣೆಯನ್ನು ಮಾಡತಕ್ಕದ್ದಲ್ಲ ಎಂದು ಆಕ್ಷೇಪಿಸಿದರೆ, ಅವಿದ್ಯಾಗ್ರಸ್ತ ಪರಮತವನ್ನು ನಿರಾಕರಣೆಮಾಡದಿದ್ದರೆ ಅನರ್ಥವು ಎಂಬುದಾಗಿ 'ಅಂಧಂತಮಃ' ಇತ್ಯಾದಿ ಶ್ರುತಿವಾಕ್ಯಗಳ ಮೂಲಕ ತಿಳಿಸುತ್ತಾರೆ –

ಅಂಧಂತಮಃ ಪ್ರವಿಶಂತಿ ಯೇ ತ್ವವಿದ್ಯಾಮುಪಾಸತೇ ।

ತತೋ ಭೂಯ ಇವಾಯಾಂತಿ ಏತಸ್ಯಾ ನೈವ ನಿಂದಕಾಃ ॥೩೧೫॥

ತತೋ ವಿದ್ಯಾಮವಿದ್ಯಾಂ ಚ ಯೋ ಜಾನತ್ಯುಭಯಂ ಸಹ ।

ದೋಷಜ್ಞಾನಾದತೀತ್ಯೈತಾಂ ವಿದ್ಯಯಾಮೃತಮಶ್ನುತೇ ॥೩೧೬॥

ಶ್ರುತಿಗೆ ಅಭಿಪ್ರೇತವಲ್ಲದ ಅರ್ಥವನ್ನು ಉಪಾಸಿಸುವರು ಅಂಧಂತಮಸ್ಸನ್ನು ಸೇರುತ್ತಾರೆ. ಈ ಅವಿದ್ಯೆಯನ್ನು ನಿಂದಿಸದೇ ಇದ್ದವರು ಅದಕ್ಕೂ ಸ್ವಲ್ಪ ಹೆಚ್ಚಿನದೇ ಆದ ತಮಸ್ಸನ್ನು ಹೊಂದುತ್ತಾರೆ. ವಿದ್ಯೆ ಮತ್ತು ಅವಿದ್ಯೆ ಇವೆರಡನ್ನೂ ತಿಳಿದವನಿಗೆ ಅವಿದ್ಯೆಯ ದೋಷಗಳ ಜ್ಞಾನವಿರುವುದು. ಇದನ್ನು ಅರಿತವನು ಅನರ್ಥಕರವಾದ ಅವಿದ್ಯೆಯ ಉಪಾಸನೆಯನ್ನು ತ್ಯಜಿಸಿ, ಎಲ್ಲ ದುಃಖಗಳನ್ನೂ ದಾಟಿ, ತತ್ತ್ವಜ್ಞಾನದಿಂದ ಮುಕ್ತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ

ಶ್ರೀಮದನುವ್ಯಾಖ್ಯಾನೇ ದ್ವಿತೀಯಾಧ್ಯಾಯಸ್ಯ ದ್ವಿತೀಯಃ ಪಾದಃ ॥

॥ ಇಲ್ಲಿಗೆ ಶ್ರೀಮದನಾಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಎರಡನೆಯ ಪಾದದ ಕನ್ನಡ ಅನುವಾದವು ಮುಗಿದುದು ॥

* * *

ಎರಡನೆಯ ಅಧ್ಯಾಯ
ಮೂರನೆಯ ಪಾದ

ಸೂತ್ರಕಾರರು 'ನ ವಿಯದಶ್ರುತೇಃ' ಇತ್ಯಾದಿಯಾಗಿರುವ ಈ ಮೂರನೆಯ ಪಾದದಿಂದ ವೈದಿಕವಚನಗಳಿಗೆ ಒಂದಕ್ಕೊಂದಕ್ಕೆ ವಿರೋಧವಿಲ್ಲವೆಂಬುದನ್ನು ನಿರ್ಣಯಿಸುತ್ತಾರೆ. ಅನುವ್ಯಾಖ್ಯಾನಕಾರರು ಈ ಪಾದದಲ್ಲಿ ಪ್ರತಿಪಾದಿತವಾಗಿರುವ ಪ್ರಮೇಯವನ್ನು ಹಿಂದಿನ ಪಾದದೊಡನೆ ಸಂಗತಿ ಸಹಿತವಾಗಿ 'ಅಥ' ಇತ್ಯಾದಿ ವಾಕ್ಯದಿಂದ ತೋರಿಸುತ್ತಾರೆ –

ಅಥಾಶೇಷಸಮಾಮ್ನಾಯವಿರೋಧಾಪಕೃತಿಂ ಪ್ರಭುಃ ।

ಕರಿಷ್ಯನ್ ಅಧಿದೈವಾಧಿಭೂತಜೀವಪರಮಾತ್ಮನಾಮ್ ।।೧।।

ಸ್ವರೂಪನಿರ್ಣಯಾಯೈವ ವಚನಾನಾಂ ಪರಸ್ಪರಮ್ ।

ಪಾದೇನಾನೇನಾವಿರೋಧಂ ದರ್ಶಯತ್ಯಮಿತದ್ಯುತಿಃ ।।೨।।

ಹಿಂದಿನ ಪಾದದಿಂದ ಸಮಯಗಳ ವಿರೋಧ ಪರಿಹಾರವನ್ನು ಸಾಧಿಸಿದ ಅನಂತರ, ಸರ್ವಜ್ಞರಾದ ಸೂತ್ರಕಾರರು ಸಮಗ್ರವಾಗಿ ವೇದವಿರೋಧಗಳ ನಿರಾಕರಣೆಯನ್ನು ಮಾಡುತ್ತ, ಅಧಿದೈವ, ಅಧಿಭೂತ, ಜೀವ, ಪರಮಾತ್ಮ ಇವುಗಳ ಸ್ವರೂಪದ ನಿರ್ಣಯಕ್ಕಾಗಿಯೇ, ಈ ಪಾದದಿಂದ ವೈದಿಕವಚನಗಳಲ್ಲಿ ಪರಸ್ಪರ ಅವಿರೋಧವನ್ನು ತೋರಿಸುತ್ತಾರೆ.

'ಅನುಭೂತಿ' ಇತ್ಯಾದಿ ವಚನದಿಂದ ಈ ಪಾದದಲ್ಲಿನ ಅಧಿಕರಣಗಳ ಪೂರ್ವಪಕ್ಷ ಯುಕ್ತಿಗಳನ್ನು ಸಂಕ್ಷೇಪವಾಗಿ ಹೇಳುತ್ತಾರೆ –

ಅನುಭೂತಿಯುಕ್ತಿಬಹುವಾಗ್ವೈಲೋಮ್ಯಂ ಚ ತತೋಽಧಿಕಮ್ ।

ಏತತ್ಸರ್ವಂ ಸತಃ ಸಾಮ್ಯಂ ದ್ವಾರವೈಯರ್ಥ್ಯಮೇವ ಚ ।।೩।।

ದೃಷ್ಟಿಯುಕ್ತ್ಯನುಸಾರಿತ್ವಮುಕ್ತಾನ್ಯಾರ್ಥಾವಿರೋಧತಃ ।

ಪ್ರಸಿದ್ಧನಾಮಸ್ವೀಕಾರೋ ಬಹುವಾಕ್ಯಾನುವರ್ತಿತಾ ।।೪।।

ಲೋಕದೃಷ್ಟಾನುಸಾರಿತ್ವಂ ಜೀವಸಾಮ್ಯಮನಾದಿತಾ ।

ತತ್ರ ತತ್ರ ಪರಿಜ್ಞಾನಂ ಗುಣಸಾಮ್ಯಶ್ರುತೀ ತಥಾ ।।೫।।

ಉತ್ಪತ್ತಿಮತ್ತ್ವಂ ಸ್ವಗುಣಾನನುಭೂತ್ಯಲ್ಪಕಲ್ಪನೇ ।

ನಾನಾಶ್ರುತಿಶ್ಚ ವೈಚಿತ್ರ್ಯಂ ಯುಕ್ತಯಃ ಪೂರ್ವಪಕ್ಷಗಾಃ ।।೬।।

ಅನುಭವ-ಯುಕ್ತಿ-ಬಹುವಚನವಿರೋಧ, ಅದಕ್ಕಿಂತಲೂ ಹೆಚ್ಚಿನ ವಿರೋಧ, ಸತ್ ಶಬ್ದವಾಚ್ಯನಾದ ಬ್ರಹ್ಮನಿಗೆ ಆಕಾಶಾದಿ ಸಾಮ್ಯ, ದ್ವಾರವೈಯರ್ಥ್ಯ, ದೃಷ್ಟಿಯುಕ್ತಿ ಅನುಸಾರಿತ್ವ, ಉಕ್ತವಾದ ಅನ್ಯಾರ್ಥ ವಿರೋಧತ್ವ, ಪ್ರಸಿದ್ಧನಾಮ ಸ್ವೀಕಾರದಲ್ಲಿ ಬಹುವಾಕ್ಯದ ಅನುಸಾರಿತ್ವ, ಲೋಕದೃಷ್ಟಾನುಸಾರಿತ್ವ, ಜೀವನಿಂದ ಸಾಮ್ಯ, ಜೀವನ ಅನಾದಿತ್ವ, ಅಲ್ಲಲ್ಲಿ ಸ್ಪರ್ಶಾದಿ ಪರಿಜ್ಞಾನ, ಗುಣಸಾಮ್ಯ ಶ್ರುತಿಗಳು ಹಾಗೆಯೇ ಉತ್ಪತ್ತಿಮತ್ತ್ವ, ಸ್ವಗುಣಗಳ ಅನನುಭೂತಿ, ಅಲ್ಪವಾದುದರ ಕಲ್ಪನೆ, ಅನೇಕ ಪ್ರಕಾರ ಶ್ರುತಿ, ವೈಚಿತ್ರ್ಯ – ಇವುಗಳು ಪೂರ್ವಪಕ್ಷದಲ್ಲಿರುವ ಯುಕ್ತಿಗಳು.

ಈಗ 'ವ್ಯವಸ್ಥಾ' ಇತ್ಯಾದಿ ವಚನದಿಂದ ಸಿದ್ಧಾಂತಯುಕ್ತಿಗಳನ್ನು ಹೇಳುತ್ತಾರೆ –

ವ್ಯವಸ್ಥಾನುಪಪತ್ತಿಶ್ಚ ಸ್ವಾತಂತ್ರ್ಯಮನುಸಾರಿತಾ ।

ಮುಖ್ಯತಾ ಶಕ್ತಿಮತ್ತ್ವಂ ಚ ವೈರೂಪ್ಯಂ ಸರ್ವಸಂಗ್ರಹಃ ।।೭।।

ಗತ್ಯಾದಿರೀಶಶಕ್ತಿಶ್ಚ ಸರ್ವಮಾನವಿರೋಧಿತಾ ।

ಅಭೀಷ್ಟಾಸಿದ್ಧಿಸುವ್ಯಕ್ತೀ ಶಾಸ್ತ್ರಸಿದ್ಧಿರ್ವಿಪರ್ಯಯಃ ।।೮।।

ವಿಶೇಷಕಾರಣಂ ಚೇತಿ ಸಿದ್ಧಾಂತಸ್ಯೈವ ಸಾಧಿಕಾಃ ।

ವ್ಯವಸ್ಥೆ, ಅನುಪಪತ್ತಿ, ಸ್ವಾತಂತ್ರ್ಯ, ಅನುಸಾರಿತ್ವ, ಮುಖ್ಯತ್ವ, ಶಕ್ತಿಮತ್ತ್ವ, ವೈರೂಪ್ಯ, ಸರ್ವಸಂಗ್ರಹ, ಗತ್ಯಾದಿಗಳು, ಈಶಶಕ್ತಿಯು, ಸರ್ವಪ್ರಮಾಣವಿರೋಧ, ಅಭೀಷ್ಟದ ಅಸಿದ್ಧಿ, ಚೆನ್ನಾಗಿ ಅಭಿವ್ಯಕ್ತಿ, ಶಾಸ್ತ್ರಾರ್ಥಸಿದ್ಧಿ, ವಿಪರ್ಯಯ ಹಾಗೂ ವಿಶೇಷ ಕಾರಣ – ಇವುಗಳೇ ಸಿದ್ಧಾಂತಸಾಧಕ ಯುಕ್ತಿಗಳು.

ಶ್ರೀಮದಾಚಾರ್ಯರು ಸೂತ್ರರೂಪವಾಗಿ ಮೇಲೆ ಸೂಚಿಸಿರುವ ಈ ಪಾದದ ಎಲ್ಲ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ನ್ಯಾಯವಿವರಣ ಟೀಕೆಯ ಆಧಾರದ ಮೇಲೆ ಈ ಕೆಳಗೆ ವಿವರಣೆ ನೀಡಲಾಗಿದೆ –

೧. ವಿಯದಧಿಕರಣ

ಪೂರ್ವಪಕ್ಷಯುಕ್ತಿ (ಅನುಭೂತಿಯುಕ್ತಿಬಹುವಾಗ್ವೈಲೋಮ್ಯಂ) – ಆತ್ಮನಃ ಆಕಾಶಃ ಸಂಭೂತಃ ಎಂದು ಆತ್ಮನಿಂದ ಆಕಾಶಕ್ಕೆ ಉತ್ಪತ್ತಿಯನ್ನು ಹೇಳುವ ಶ್ರುತಿಯು ಅಪ್ರಮಾಣ. ಏಕೆಂದರೆ ಆಕಾಶವು ಸರ್ವತ್ರ ವ್ಯಾಪ್ತವಾದ್ದರಿಂದ

ಉತ್ಪತ್ತಿಯುಳ್ಳದ್ದಲ್ಲ ಎಂಬ ಅನುಮಾನದಿಂದಲೂ, ಆಕಾಶಕ್ಕೆ ಅನಾದಿತ್ವವನ್ನು ಗ್ರಹಿಸುವ ಸಾಕ್ಷಿಯಿಂದಲೂ ಹಾಗೂ ಅನಾದಿರ್ವಾಽಯಮಾಕಾಶಃ ಎಂಬ ಶ್ರುತಿಯಿಂದಲೂ ಆಕಾಶಕ್ಕೆ ಅನಾದಿತ್ವ ಸಿದ್ಧವಾಗುವುದು. ಈ ದೃಷ್ಟಾಂತದಿಂದ ವೇದವಾಕ್ಯವು ಅಪ್ರಮಾಣವೆಂದು ಸಿದ್ಧವಾಗುವುದರಿಂದ ವೇದವಾಕ್ಯಗಳಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ. ಸಾಕ್ಷ್ಯನುಭವ ಅನುಮಾನ ಹಾಗೂ ಶ್ರುತಿಗಳ ವಿರೋಧವೆಂಬುದು ಇಲ್ಲಿನ ಯುಕ್ತಿ.

ಸಿದ್ಧಾಂತಯುಕ್ತಿ (ವ್ಯವಸ್ಥಾ) – ಆಕಾಶಕ್ಕೆ ಉತ್ಪತ್ತಿ ಮತ್ತು ಅನುತ್ಪತ್ತಿಗಳನ್ನು ಹೇಳುವ ಶ್ರುತಿಗಳಿಗೆ ಭೂತಾಕಾಶ, ತದಭಿಮಾನಿ ವಿನಾಯಕ, ಅವ್ಯಾಕೃತಾಕಾಶ ಹಾಗೂ ತದಭಿಮಾನಿ ರಮಾದೇವಿ ಹೀಗೆ ನಾಲ್ಕು ಬೇರೆ ಬೇರೆ ವಿಷಯಗಳಿರುವುದರಿಂದ, ಯುಕ್ತಿ ವ್ಯವಸ್ಥೆಯಿಂದ ಎರಡೂ ರೀತಿಯ ಶ್ರುತಿಗಳಿಗೆ ಪ್ರಾಮಾಣ್ಯವು. ಹೀಗೆ ವೇದವಾಕ್ಯಕ್ಕೆ ಅಪ್ರಾಮಾಣ್ಯ ಬರುವುದಿಲ್ಲವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುತ್ತದೆ.

೨. ಮಾತರಿಶ್ವಾಧಿಕರಣ

ಪೂರ್ವಪಕ್ಷಯುಕ್ತಿ (ತತೋಽಧಿಕಂ ಏತತ್ಸರ್ವಂ) – ಅನಾದಿರ್ಯೋಽಯಂ ಪವತೇ ಎಂಬ ಶ್ರುತಿಯಿಂದ ವಾಯುವಿಗೆ ಅನಾದಿತ್ವವಿದೆಯೆಂದು ತಿಳಿಯುತ್ತದೆ. ಹಿಂದಿನ ಅಧಿಕರಣದ ನ್ಯಾಯದಂತೆ ಮುಖ್ಯವಾಯುವಿಗೂ ಉತ್ಪತ್ತಿ ಹಾಗೂ ಅನುತ್ಪತ್ತಿಗಳಿವೆಯೆಂದು ಕೂಡಿಸಲು ಬರುವುದಿಲ್ಲ. ಏಕೆಂದರೆ ಬೇರೊಂದು ಶ್ರುತಿಯಲ್ಲಿ ಪೃಥಿವಿ ಅಪ್ ತೇಜಸ್ಸುಗಳು ಅನಿತ್ಯವೆಂದೂ ವಾಯುವು ನಿತ್ಯವೆಂದೂ ಹೇಳಲಾಗಿದೆ. ಅನುಭವ ಹಾಗೂ ಯುಕ್ತಿಗಳಿಂದಲೂ ವಾಯುವಿಗೆ ನಿತ್ಯತ್ವವು ಸಿದ್ಧವಾಗುವುದು. ಹೀಗೆ ಅಧಿಕಾಶಂಕಾಸಹಿತವಾದ ಅನುಭವ ಯುಕ್ತಿ ಶ್ರುತಿಗಳ ವಿರೋಧ ಬರುವುದರಿಂದ ವಾಯುವಿಗೆ ಉತ್ಪತ್ತಿ ಹೇಳುವ ಶ್ರುತಿಯು ಅಪ್ರಮಾಣವು. ಅದರಂತೆಯೇ ವಿಷ್ಣುವಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಯೂ ಅಪ್ರಮಾಣವಾಗುವುದು.

ಸಿದ್ಧಾಂತಯುಕ್ತಿ (ಸ್ವಾತಂತ್ರ್ಯಾನುಪಪತ್ತಿ) – ವಾಯುವಿಗೆ ಉತ್ಪತ್ತಿಯೇ ಇದೆ, ಅನುತ್ಪತ್ತಿಯಿಲ್ಲ. ಉತ್ಪತ್ತಿಯು ಪಾರತಂತ್ರ್ಯದ್ಯೋತಕ. ಉತ್ಪತ್ತಿಯಿಲ್ಲದಿರುವುದು ಸ್ವಾತಂತ್ರ್ಯದ್ಯೋತಕ. ಈಶ್ವರನೇ ಸ್ವತಂತ್ರನೆಂದು ಶ್ರುತಿಗಳು ಹೇಳುತ್ತಿವೆ. ಇಬ್ಬರು ಸ್ವತಂತ್ರರು ಇರಲಾರರು. ವಾಯುವು ಅಸ್ವತಂತ್ರನೇ. ಆದ್ದರಿಂದ ವಾಯುವಿಗೆ ಉತ್ಪತ್ತಿಯು ಕೂಡುತ್ತದೆ. ಸ್ವಾತಂತ್ರ್ಯಾನುಪಪತ್ತಿ ಎಂಬುದೇ ಇಲ್ಲಿ ಸಿದ್ಧಾಂತದ ಯುಕ್ತಿ. ಆದ್ದರಿಂದ ಶ್ರುತಿಗಳಿಂದ ಸಿದ್ಧನಾದ ಸ್ವತಂತ್ರನಾದ ವಿಷ್ಣುವೇ ಜಗತ್ಕಾರಣನು.

೩. ಅಸಂಭವಾಧಿಕರಣ

ಪೂರ್ವಪಕ್ಷಯುಕ್ತಿ (ಸತಃ ಸಾಮ್ಯಂ) – ಅಸತಃ ಸದಜಾಯತ ಎಂಬ

ಶ್ರುತಿಯಿಂದ ಬ್ರಹ್ಮನಿಗೂ ಉತ್ಪತ್ತಿಯಿದೆ ಎಂದು ತಿಳಿದುಬರುತ್ತದೆ. ಆದ್ದರಿಂದ ಬ್ರಹ್ಮನಿಗೂ ಆಕಾಶಾದಿಗಳಂತೆ ಪರಾಧೀನವಿಶೇಷಾವಾಪ್ತಿರೂಪ ಉತ್ಪತ್ತಿಯನ್ನು ಅಂಗೀಕರಿಸಬಹುದು. ಆದ್ದರಿಂದ ಬ್ರಹ್ಮನು ಜಗತ್ಕಾರಣನಲ್ಲ. ಉತ್ಪತ್ತಿಸಾಮ್ಯ ಎಂಬುದು ಇಲ್ಲಿನ ಯುಕ್ತಿ.

ಸಿದ್ಧಾಂತಯುಕ್ತಿ (ಸ್ವಾತಂತ್ರ್ಯ) – ಬ್ರಹ್ಮನು ಸ್ವತಂತ್ರನಾದ್ದರಿಂದ ಅವನಿಗೆ ಉತ್ಪತ್ತಿಯು ಇರುವುದಿಲ್ಲ. ಆಕಾಶಾದಿಗಳಿಗೆ ಬ್ರಹ್ಮನೊಂದಿಗೆ ಸ್ವಾತಂತ್ರ್ಯ ಸಾಮ್ಯವಿಲ್ಲ. ಆದ್ದರಿಂದ ಅವುಗಳಿಗೆ ಉತ್ಪತ್ತಿಯುಂಟು. ಸ್ವತಂತ್ರನೂ ಯಾವುದೇ ವಿಧವಾದ ಜನ್ಮವಿಲ್ಲದವನೂ ಆದ ಬ್ರಹ್ಮನೇ ಜಗತ್ಕಾರಣವೆಂಬುದು ಸಿದ್ಧವಾಗುತ್ತದೆ. ಬ್ರಹ್ಮನ ಸ್ವಾತಂತ್ರ್ಯವೆಂಬುದು ಇಲ್ಲಿನ ಯುಕ್ತಿ.

೪. ತೇಜೋಽಧಿಕರಣ

ಪೂರ್ವಪಕ್ಷ ಯುಕ್ತಿ (ದ್ವಾರ ವೈಯರ್ಥ್ಯ) – ವಾಯುವಿನಿಂದ ಅಗ್ನಿ ಹುಟ್ಟಿತು ಎಂದು ಹೇಳುವ ವಾಯೋರಗ್ನಿಃ ಎಂಬ ಶ್ರುತಿಯಿಂದ ವಿಷ್ಣುವಿಗೆ ಸರ್ವಕಾರಣತ್ವವಿಲ್ಲವೆಂದು ತಿಳಿದುಬರುತ್ತದೆ. ವಾಯುದ್ವಾರಾ ಈಶ್ವರನಿಂದ ಅಗ್ನಿಯು ಹುಟ್ಟಿತು ಎಂದು ಹೇಳಿದರೆ, ಸ್ವತಂತ್ರವಾಗಿ ಈಶ್ವರನಿಗೆ ಅಗ್ನಿಯನ್ನು ಹುಟ್ಟಿಸುವುದು ಸಾಧ್ಯವಿಲ್ಲವೆಂದಾಗುವುದು. ಆದ್ದರಿಂದ ವಾಯುವನ್ನೂ ಸ್ವತಂತ್ರ ಕಾರಣವೆಂದು ಅಂಗೀಕರಿಸಲು ಅಡ್ಡಿಯಿಲ್ಲ. ಅಂದಮೇಲೆ ವಾಯುವನ್ನು ದ್ವಾರವನ್ನಾಗಿ ಇಟ್ಟುಕೊಳ್ಳುವುದು ವ್ಯರ್ಥವೆಂದಾಗುವುದು.

ಸಿದ್ಧಾಂತಯುಕ್ತಿ (ಅನುಸಾರಿತಾ) – ವಾಯುವಿನ ಸಹಾಯವಿಲ್ಲದೇ ಅಗ್ನಿಯನ್ನು ಸೃಷ್ಟಿಸುವ ಸಾಮರ್ಥ್ಯವು ವಿಷ್ಣುವಿಗೆ ಉಂಟು ಎಂಬುದಾಗಿ ತತ್ತೇಜೋಽಸೃಜತ ಎಂಬ ಶ್ರುತಿಯಿಂದ ತಿಳಿದು ಬರುತ್ತದೆ. ಆದರೂ ಲೀಲೆಯಿಂದ ವಾಯುವನ್ನು ಉಪಯೋಗಿಸಿಕೊಳ್ಳುತ್ತಾನೆ ಎಂದು ತಿಳಿಯಬೇಕು. ಆದ್ದರಿಂದ ವಿಷ್ಣುವೇ ಜಗತ್ಕಾರಣನು. ಅನುಸಾರಿತಾ (ಶ್ರುತಿ ಸ್ಮೃತಿಗಳಿಗೆ ಅನುಸಾರವಾಗಿ) ಎಂಬುದು ಇಲ್ಲಿನ ಯುಕ್ತಿ.

೫. ಅಬಧಿಕರಣ

ಪೂರ್ವಪಕ್ಷಯುಕ್ತಿ (ದೃಷ್ಟಿಯುಕ್ತ್ಯನುಸಾರಿತ್ವ) – ಅಗ್ನೇರಾಪಃ (ಅಗ್ನಿಯಿಂದ ನೀರು ಹುಟ್ಟಿತು) ಎಂಬ ಶ್ರುತಿಯು ಲೋಕದೃಷ್ಟಿಯ ಅನುಸಾರವಾಗಿಯೇ ಇದೆ. ಹೇಗೆಂದರೆ ಸೆಖೆಯಾದಾಗ ಬೆವರು ಬರುವುದು ಲೋಕದಲ್ಲಿ ಕಂಡಿದೆ. ಇದೇ ಆದಾರದ ಮೇಲೆ ಬೇರೆ ನೀರಿನ ಉತ್ಪತ್ತಿಯೂ ಅಗ್ನಿಯಿಂದಲೇ ಎಂದು ಅನುಮಾನ ಮಾಡಬಹುದು. ಇದೇ ದೃಷ್ಟಿಯುಕ್ತಿಗಳ ಬಲದಿಂದ ನೀರಿನ ಉತ್ಪತ್ತಿಗೆ ಈಶ್ವರನ ಅನುಗ್ರಹ ಬೇಕಿಲ್ಲವೆಂದು ಸಿದ್ಧವಾಗುತ್ತದೆ. ಆದ್ದರಿಂದ ಈಶ್ವರನು ಜಗತ್ಕಾರಣನಲ್ಲ.

ಸಿದ್ಧಾಂತಯುಕ್ತಿ (ಮುಖ್ಯತಾ) – ತದಪೋಽಸೃಜತ ಎಂಬ ಶ್ರುತಿಯಿಂದ ಆ ಬ್ರಹ್ಮನಿಂದಲೇ ನೀರಿನ ಸೃಷ್ಟಿಯೂ ಸಿದ್ಧವಾಗುತ್ತದೆ. ಆದ್ದರಿಂದ ಅಗ್ನೇರಾಪಃ ಎಂಬುದಕ್ಕೆ ಅಗ್ನಿಯ ದ್ವಾರಾ ಬ್ರಹ್ಮನಿಂದ ನೀರಿನ ಸೃಷ್ಟಿ ಎಂದು ಅರ್ಥವಾಗುತ್ತದೆ. ವಿಷ್ಣುವಿಗೇ ಮುಖ್ಯ ಕರ್ತೃತ್ವವು. ಆದ್ದರಿಂದ ವಿಷ್ಣುವೇ ಜಗತ್ಕರ್ತನು.

೬. ಪೃಥಿವ್ಯಧಿಕರಣ

ಪೂರ್ವಪಕ್ಷಯುಕ್ತಿ (ಉಕ್ತಾನ್ಯಾರ್ಥಾವಿರೋಧತಃ) – ತಾ ಅನ್ನಮಸೃಜಂತ ಎಂಬ ಶ್ರುತಿಯು ನೀರಿನಿಂದ ಅನ್ನ ಹುಟ್ಟಿತು ಎಂದೂ, ಅದ್ಭ್ಯಃ ಪೃಥಿವೀ ಎಂಬ ಶ್ರುತಿಯು ನೀರಿನಿಂದ ಪೃಥಿವೀ ಹುಟ್ಟಿತು ಎಂದು ಹೇಳುತ್ತದೆ. ಅನ್ನ ಮತ್ತು ಪೃಥಿವೀ ಶಬ್ದಗಳು ಲೋಕದಲ್ಲಿ ಪ್ರಸಿದ್ಧವಾದ ಅನ್ನ ಪೃಥಿವೀಗಳನ್ನೇ ಹೇಳುತ್ತವೆ. ಅವೆರಡೂ ಒಂದೇ ಅಲ್ಲವು. ಪರಸ್ಪರ ವಿರುದ್ಧವಾದ ಈ ಶ್ರುತಿಗಳು ಹೇಗೆ ಪ್ರಮಾಣವಾಗಬಲ್ಲವು? ಆದ್ದರಿಂದ ಬ್ರಹ್ಮನಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳೂ ಅಪ್ರಮಾಣವಾಗುತ್ತವೆ.

ಸಿದ್ಧಾಂತಯುಕ್ತಿ (ಶಕ್ತಿಮತ್ವ) – ಇಲ್ಲಿ ಅನ್ನ ಶಬ್ದವು ಪೃಥಿವೀಯನ್ನೇ ಹೇಳುತ್ತದೆ. ಪೃಥಿವೀಯಲ್ಲಿಯೇ ಅನ್ನ ಶಬ್ದವು ಅನೇಕ ಸಲ ಬಳಸಿರುವುದರಿಂದ ಅನ್ನ ಶಬ್ದಕ್ಕೆ ಪೃಥಿವೀ ವಾಚಕತ್ವರೂಪ ಶಕ್ತಿಯಿದೆ. ಆದ್ದರಿಂದ ಮೇಲ್ನೋಟಕ್ಕೆ ಪರಸ್ಪರ ವಿರುದ್ಧವೆಂದು ತೋರುವ ಶ್ರುತಿಗಳಿಗೆ ನಿಜವಾಗಿಯೂ ಯಾವುದೇ ವಿರೋಧವಿಲ್ಲ. ಶ್ರುತಿಪ್ರಾಮಾಣ್ಯಕ್ಕೆ ಯಾವುದೇ ಬಾಧವಿಲ್ಲವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಕೂಡುತ್ತದೆ.

೭. ತದಭಿಧ್ಯಾನಾಧಿಕರಣ

ಪೂರ್ವಪಕ್ಷಯುಕ್ತಿ (ಲೋಕದೃಷ್ಟ್ಯನುಸಾರಿತ್ವಂ) – ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾವಿಶಾಂತಕಃ ತೇನಾನ್ನೇನಾಪ್ಯಾಯಸ್ವ ಎಂಬ ಶ್ರುತಿಯಿಂದ ರುದ್ರನು ಜಗತ್ಸಂಹಾರಕನೆಂದು ತಿಳಿಯುತ್ತದೆ. ಲೋಕದಲ್ಲಿ ಹುಟ್ಟಿಸಿದವನೇ ಕೊಲ್ಲುವುದಿಲ್ಲ. ಅದರಂತೆ ವಿಷ್ಣುವು ಜಗತ್ಕಾರಣನಾದರೂ ಸಂಹಾರಕನಾಗಿರಲು ಸಾಧ್ಯವಿಲ್ಲ. ಆದ್ದರಿಂದ ವಿಷ್ಣುವಿಗೆ ಸರ್ವಕಾರಣತ್ವವು ಯುಕ್ತವಾಗುವುದಿಲ್ಲ.

ಸಿದ್ಧಾಂತ ಯುಕ್ತಿ (ವೈರೂಪ್ಯಂ) – ಇದಂ ಸರ್ವಂ ವಿಲಾಪಯತಿ ನವಿಷ್ಣೋರನ್ಯೋ ವಿಮುಕ್ತಿದಃ ಮುಂತಾದ ಶ್ರುತಿಗಳಿಂದ ವಿಷ್ಣುವೇ ಜಗತ್ಸಂಹಾರಕ, ರುದ್ರನಲ್ಲ ಎಂದು ತಿಳಿಯುತ್ತದೆ. ವಿಷ್ಣುವು ಲೋಕವಿಲಕ್ಷಣವಾದ ಜನಕನಾದ್ದರಿಂದ ಸಂಹಾರಕತ್ವವೂ ಅವನಲ್ಲಿ ಕೂಡುತ್ತದೆ.

೮. ವಿಪರ್ಯಯಾಧಿಕರಣ

ಪೂರ್ವಪಕ್ಷಯುಕ್ತಿ (ಲೋಕದೃಷ್ಟ್ಯನುಸಾರಿತ್ವಂ) – ಪರಮಾತ್ಮನ ಈ ಜಗತ್ತು

ಯಾವ ಕ್ರಮದಲ್ಲಿ ಉತ್ಪತ್ತಿಯಾಗುತ್ತದೋ ಅದೇ ಕ್ರಮದಲ್ಲಿ ಲಯಹೊಂದುತ್ತದೆ ಎಂಬುದಾಗಿ ಒಂದು ಶ್ರುತಿಯು ಕ್ರಮವಾದ ಲಯವನ್ನು ಹೇಳಿದರೆ, ಮತ್ತೊಂದು ಶ್ರುತಿಯು ವಿಪರೀತ ಕ್ರಮದಿಂದ ಲಯವನ್ನು ಹೇಳುತ್ತದೆ. ಉತ್ಪತ್ತಿ ಕ್ರಮದಲ್ಲಿಯೇ ಲಯವು ಲೋಕದಲ್ಲಿ ಕಂಡಿದೆ. ಆದ್ದರಿಂದ ವ್ಯುತ್ಕ್ರಮದಲ್ಲಿ ಲಯವನ್ನು ಹೇಳುವ ಶ್ರುತಿಯು ಅಪ್ರಮಾಣ. ಹೀಗೆ ಉಳಿದ ಶ್ರುತಿಗಳೂ ಅಪ್ರಮಾಣವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ.

ಸಿದ್ಧಾಂತಯುಕ್ತಿ (ವೈರೂಪ್ಯ) – ವಿಪರೀತ ಕ್ರಮದಿಂದಲೇ ಲಯ ಎಂಬುದೇ ಸಿದ್ಧಾಂತ. ಕ್ರಮವಾಗಿ ಲಯವನ್ನು ಹೇಳುವ ಶ್ರುತಿಗೂ ವಿಪರೀತಕ್ರಮದಿಂದ ಎಂದೇ ಅರ್ಥ ಮಾಡಬೇಕು. ಏಕೆಂದರೆ ದ್ವಿವಿಧಃ ಕ್ರಮ ಉದ್ದಿಷ್ಟೋ ವ್ಯುತ್ಕ್ರಮೋಽನುಕ್ರಮಸ್ತಥಾ ಸೃಷ್ಟಾವನ್ಯೋ ಲಯೇ ಚಾನ್ಯಃ ಎಂಬುದಾಗಿ ಶ್ರುತಿಯು ಸೃಷ್ಟಿ ಮತ್ತು ಲಯಗಳಿಗೆ ವಿಭಿನ್ನ ರೀತಿಯ ಕ್ರಮವನ್ನು ಹೇಳುತ್ತದೆ. ಹೀಗೆ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಕೂಡುತ್ತದೆ.

೯. ಅಂತರಾಧಿಕರಣ

ಪೂರ್ವಪಕ್ಷಯುಕ್ತಿ (ಲೋಕದೃಷ್ಟ್ಯನುಸಾರಿತ್ವಂ) – ಲೋಕದಲ್ಲಿ ಕೆಲವು ಕಡೆಗಳಲ್ಲಿ ಕ್ರಮವಾಗಿ ಲಯವೂ, ಮತ್ತೆ ಕೆಲವೆಡೆಗಳಲ್ಲಿ ವ್ಯುತ್ಕ್ರಮದಿಂದ ಲಯವೂ ಕಂಡಿದೆ. ಆದ್ದರಿಂದ ಎಲ್ಲಕ್ಕೂ ವ್ಯುತ್ಕ್ರಮದಿಂದ ಲಯವೆಂದು ಅಂಗೀಕರಿಸಬಾರದು.

ಸಿದ್ಧಾಂತಯುಕ್ತಿ(ಸರ್ವಸಂಗ್ರಹಃ)– ಎಲ್ಲ ಪದಾರ್ಥಗಳಿಗೂ ವ್ಯುತ್ಕ್ರಮದಲ್ಲಿಯೇ ಲಯ ಎಂಬುದಾಗಿ ಸರ್ವಂ ವಾ ಎಂಬ ಶ್ರುತಿಯಿಂದ (ಸರ್ವಂ ವಾ ಏತತ್ ಕ್ರಮಾದುತ್ಪದ್ಯತೇ ವ್ಯುತ್ಕ್ರಮಾಲ್ಲೀಯತೇ) ತಿಳಿದುಬರುತ್ತದೆ. ಆದರೆ ಪ್ರಾಣಾನ್ಮನೋ ಮನಸಶ್ಚ ವಿಜ್ಞಾನಂ ಎಂಬ ಶ್ರುತಿಯು ಮನಸ್ತತ್ವದಿಂದ ವಿಜ್ಞಾನತತ್ವದ ಉತ್ಪತ್ತಿಯನ್ನು ಹೇಳುತ್ತಿಲ್ಲ, ಕೇವಲ ಮನಸ್ಸಿನಿಂದ ವೃತ್ತಿರೂಪ ಜ್ಞಾನವು ಹುಟ್ಟುತ್ತದೆಯೆಂದು ಮಾತ್ರ ಹೇಳುತ್ತಿದೆ. ಆದ್ದರಿಂದ ವಿಜ್ಞಾನತತ್ವದಿಂದ ಮನಸ್ತತ್ವದ ಉತ್ಪತ್ತಿ, ವಿಜ್ಞಾನತತ್ವದಲ್ಲಿಯೇ ಮನಸ್ತತ್ವಕ್ಕೆ ಲಯ ಎಂದು ಹೇಳುವ ಶ್ರುತಿಗೆ ವಿರೋಧವಿಲ್ಲ. ಹೀಗೆ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಶ್ರುತಿಗಳಿಂದ ಸಿದ್ಧವಾಗುತ್ತದೆ.

೧೦. ನಾತ್ಮಾಧಿಕರಣ

ಪೂರ್ವಪಕ್ಷಯುಕ್ತಿ (ಜೀವಸಾಮ್ಯಂ) – ಎಲ್ಲ ಚೇತನರಿಗೂ ಶರೀರತ್ಯಾಗರೂಪ ಲಯವು ಕಂಡಿದೆ. ಆದರಂತೆಯೇ ಪರಮಾತ್ಮನೂ ಚೇತನನಾದ್ದರಿಂದ ಅವನಿಗೂ ಲಯವಿರಬೇಕು. ಆದ್ದರಿಂದ ಪರಮಾತ್ಮನು ನಿತ್ಯ ಎಂದು ಹೇಳುವ ನಿತ್ಯೋ

ನಿತ್ಯಾನಾಂ ಮುಂತಾದ ಶ್ರುತಿಗಳು ಅಪ್ರಮಾಣವಾಗುತ್ತವೆ. ಉಳಿದ ಶ್ರುತಿಗಳಿಗೂ ಅಪ್ರಾಮಾಣ್ಯ ಶಂಕೆ ಬರುವುದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತಯುಕ್ತಿ (ಸರ್ವಸಂಗ್ರಹಃ) – ಸರ್ವೇ ವಾ ಏತೆ ಚಿದಾತ್ಮನೋ ಬ್ರಹ್ಮನ್ ಲ್ಲಯಮನುಪ್ರಾಪ್ಯ ವಿಷ್ಣೋರುದರೇ ಸಂವಿಶಂತಿ ಎಂಬ ಶ್ರುತಿಯು ಪ್ರಲಯಕಾಲದಲ್ಲಿ ಎಲ್ಲ ಜೀವರೂ ಲಯವನ್ನು ಹೊಂದಿ ಪರಮಾತ್ಮನ ಹೊಟ್ಟೆಯಲ್ಲಿ ಪ್ರವೇಶಿಸುತ್ತಾರೆ ಎಂದು ಹೇಳುವುದರಿಂದ ಪರಮಾತ್ಮನ ದೇಹವು ನಿತ್ಯವೆಂದು ತಿಳಿಯುತ್ತದೆ. ಆದ್ದರಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ಅಪ್ರಮಾಣ್ಯಶಂಕೆಗೆ ಅವಕಾಶವಿಲ್ಲ.

೧೧. ಜ್ಞಾಧಿಕರಣ

ಪೂರ್ವಪಕ್ಷಯುಕ್ತಿ (ಅನಾದಿತಾ) – ನಿತ್ಯೋನಿತ್ಯಾನಾಂ ಎಂದು ವೇದವು ಪರಮಾತ್ಮನನ್ನು ನಿತ್ಯರಲ್ಲಿ ನಿತ್ಯ ಎಂದು ಹೇಳಬೇಕಾದರೆ ಉಳಿದ ಚೇತನರೆಲ್ಲರೂ ನಿತ್ಯರೇ ಆಗಿರಬೇಕು. ಹೀಗೆ ಜೀವನಿಗೆ ಅನಾದಿತ್ವದ ಕಾರಣ ಉತ್ಪತ್ತಿಯು ಕೂಡುವುದಿಲ್ಲ. ಆದ್ದರಿಂದ ವಿಷ್ಣುವು ಸರ್ವಕರ್ತನಲ್ಲ.

ಸಿದ್ಧಾಂತಯುಕ್ತಿ (ಸರ್ವಸಂಗ್ರಹಃ) – ಇದಂ ಸರ್ವಮಸೃಜತ ಎಂಬ ಶ್ರುತಿಯು ಎಲ್ಲವೂ ಪರಮಾತ್ಮನಿಂದಲೇ ಹುಟ್ಟಿದೆಯೆಂದು ಹೇಳುತ್ತಿದೆ. ಜೀವನು ಸ್ವರೂಪತಃ ಅನಾದಿಯಾದರೂ, ಪರಾಧೀನವಿಶೇಷಾವಾಪ್ತಿರೂಪ ಉತ್ಪತ್ತಿಯು ಅವನಿಗೆ ಕೂಡುತ್ತದೆ. ಆದ್ದರಿಂದ ಜೀವನಿಗೆ ಉತ್ಪತ್ತಿಯನ್ನು ಹೇಳುವ ಶ್ರುತಿಗೆ ಅಪ್ರಮಾಣ್ಯವಿಲ್ಲ. ಹೀಗೆ ವಿಷ್ಣುವು ಸರ್ವಕ್ಕೂ ಕಾರಣನೆಂಬುದು ಸಿದ್ಧವಾಗುತ್ತದೆ.

೧೨. ಉತ್ಕ್ರಾಂತ್ಯಧಿಕರಣ

ಪೂರ್ವಪಕ್ಷಯುಕ್ತಿ (ತತ್ರ ತತ್ರ ಪರಿಜ್ಞಾನಂ) – ಎಲ್ಲ ಆತ್ಮರು ಸರ್ವತ್ರ ವ್ಯಾಪ್ತರಾಗಿದ್ದಾರೆ ಮತ್ತು ಚೇತನರೂ ಆಗಿದ್ದಾರೆ ಎಂಬುದಾಗಿ ಶ್ರುತಿಯು ಹೇಳುತ್ತದೆ. ಆದರೆ ಅಣುರ್ಹ್ಯೇಷ ಆತ್ಮಾ ಎಂಬ ಶ್ರುತಿಯು ಜೀವನು ಅಣುವೆಂದು ಹೇಳುತ್ತದೆ. ಜೀವರು ಅಣುಗಳಾಗಿದ್ದರೆ ತಮ್ಮ ತಮ್ಮ ಸಮಗ್ರ ಶರೀರದಲ್ಲಿನ ಸುಖದುಃಖಾದಿಗಳನ್ನು ಆಯಾಯ ಇಂದ್ರಿಯದಲ್ಲಿದ್ದು ಅನುಭವಿಸುವ ಸಾಮರ್ಥ್ಯ ಅವರಿಗಿಲ್ಲದೇ ಹೋಗುವುದು. ಆದ್ದರಿಂದ ಜೀವನು ಅಣುವೆಂದು ಹೇಳುವ ಶ್ರುತಿಯು ಅಪ್ರಮಾಣವು. ಹೀಗೆ ಉಳಿದ ಶ್ರುತಿಗಳೂ ಅಪ್ರಮಾಣವಾಗುವುದರಿಂದ ಈಶ್ವರನಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತಯುಕ್ತಿ(ಗತ್ಯಾದಿಃ)– ಸೋಽಸ್ಮಾಚ್ಛರೀರಾದುತ್ಕ್ರಮ್ಯಾಮುಂ ಲೋಕಮ್ ಅಭಿಗಚ್ಛತಿ ಇತ್ಯಾದಿ ಶ್ರುತಿಗಳು ಜೀವರಿಗೆ ಗಮನಾಗಮನಗಳು ಇವೆಯೆಂದು ಹೇಳುತ್ತವೆ. ಆದ್ದರಿಂದ ಜೀವನು ವ್ಯಾಪ್ತನಲ್ಲ, ಅಣುವೇ. ಜೀವನು ಅಣುವಾಗಿದ್ದರೂ,

ಸುಗಂಧವು ಸುತ್ತೆಲ್ಲ ಪಸರಿಸುವಂತೆ, ದೀಪದ ಬೆಳಕು ಸುತ್ತೆಲ್ಲ ವ್ಯಾಪಿಸುವಂತೆ, ಜೀವನಲ್ಲಿ ಸುಖ ದುಃಖಾದಿ ಅನುಭವವು ಕೂಡುತ್ತದೆ. ಈ ದೃಷ್ಟಿಯಿಂದಲೇ ಜೀವನಿಗೆ ವ್ಯಾಪ್ತತ್ವವನ್ನು ಶ್ರುತಿಯು ಹೇಳಿದೆ. ಆದ್ದರಿಂದ ಶ್ರುತಿಗೆ ಅಪ್ರಾಮಾಣ್ಯ ಬರುವುದಿಲ್ಲ.

೧೩. ವ್ಯತಿರೇಕಾಧಿಕರಣ

ಪೂರ್ವಪಕ್ಷಯುಕ್ತಿ (ಗುಣಸಾಮ್ಯ) – ಕೆಲವು ಶ್ರುತಿಗಳು ಜೀವನಿಗೆ ಏಕರೂಪತ್ವವನ್ನು ಹೇಳಿದರೆ, ಮತ್ತೆ ಕೆಲವು ಶ್ರುತಿಗಳು ಜೀವನು ಬಹುರೂಪನು ಎಂದು ಹೇಳುತ್ತವೆ. ಪರಮಾತ್ಮನಂತೆ ಜೀವನೂ ಬಹುರೂಪನಾದರೆ, ಪರಮಾತ್ಮನಿಗೂ ಜೀವನಿಗೂ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ಜೀವನಿಗೆ ಅನೇಕ ರೂಪಗಳನ್ನು ಪ್ರತಿಪಾದಿಸುವ ಶ್ರುತಿಗಳು ಅಪ್ರಮಾಣ. ಹೀಗೆ ಅಪ್ರಮಾಣವಾದ ವೇದದಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತಯುಕ್ತಿ (ಈಶಶಕ್ತಿ) – ಜೀವನು ಏಕರೂಪನೇ ಆದರೂ ವಿಷ್ಣುವಿನ ಅಚಿಂತ್ಯಶಕ್ತಿಯಿಂದಲೇ ಜೀವನಿಗೆ ನಾನಾರೂಪತ್ವವು ಯುಕ್ತವಾಗುತ್ತದೆ. ಅಥೈಕ ಏವ, ತಂ ಯಥಾ ಯಥಾ ಈಶ್ವರಃ ಪ್ರಕುರುತೇ ತಥಾ ತಥಾ ಭವತಿ ಎಂಬ ಶ್ರುತಿಯೇ ಇದಕ್ಕೆ ಪ್ರಮಾಣ. ಆದ್ದರಿಂದ ಏಕರೂಪತ್ವ ಹೇಳುವ ಶ್ರುತಿಗಳಿಗೂ ಬಹುರೂಪತ್ವ ಹೇಳುವ ಶ್ರುತಿಗಳಿಗೂ ಪರಸ್ಪರ ವಿರೋಧವಿಲ್ಲ. ಹೀಗೆ ವೇದವು ಪ್ರಮಾಣವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುತ್ತದೆ.

೧೪. ಪೃಥಗಧಿಕರಣ

ಪೂರ್ವಪಕ್ಷಯುಕ್ತಿ (ಶ್ರುತಿ) – ತತ್ತ್ವಮಸಿ ಮುಂತಾದ ಶ್ರುತಿಗಳು ಜೀವ ಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸುತ್ತವೆ. ತದ್ವಿರುದ್ಧವಾಗಿ ಭೇದವನ್ನು ಬೋಧಿಸುವ ವೇದವಾಕ್ಯಗಳು ಅಪ್ರಮಾಣವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವ ಸಿದ್ಧಿಸುವುದಿಲ್ಲ.

ಸಿದ್ಧಾಂತಯುಕ್ತಿ (ಸರ್ವಮಾನವಿರೋಧ) – ಜೀವಬ್ರಹ್ಮರಿಗೆ ಅಭೇದವನ್ನು ಅಂಗೀಕರಿಸಿದರೆ ಸರ್ವಪ್ರಮಾಣಗಳ ವಿರೋಧ ಬರುವುದು. ಭೇದವನ್ನು ಪ್ರತಿಪಾದಿಸುವ ಶ್ರುತಿಗಳು ಬಹಳವಿವೆ. ಆದ್ದರಿಂದ ಅಭೇದವನ್ನು ಹೇಳುವಂತೆ ತೋರುವ ಕೆಲವೇ ಶ್ರುತಿಗಳಿಗೆ ಭೇದಪರವಾದ ಅರ್ಥವನ್ನೇ ಮಾಡಬೇಕು. ಆದ್ದರಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ವಿಷ್ಣುವಿಗೆ ಜಗತ್ಕಾರಣತ್ವವು ಶ್ರುತಿಗಳಿಂದ ಸಿದ್ಧವಾಗುತ್ತದೆ.

೧೫. ಯಾವದಧಿಕರಣ

ಪೂರ್ವಪಕ್ಷಯುಕ್ತಿ (ಉತ್ಪತ್ತಿಮತ್ತ್ವಂ) – ಬ್ರಹ್ಮತಲ್ಲಯಮಭ್ಯುಪೈತಿ ಎಂಬ

ಶ್ರುತಿಯ ಪ್ರಕಾರ ಜೀವನಿಗೆ ಬ್ರಹ್ಮನಲ್ಲಿ ಲಯವಿದೆಯೆಂದು ತಿಳಿಯುತ್ತದೆ. ಜ್ಞೋತ ಏವ ಎನ್ನುವ ಅಧಿಕರಣದಲ್ಲಿ ಜೀವನು ಉತ್ಪತ್ತಿಯುತನೆಂದು ನಿರ್ಣಯಿಸಲಾಗಿದೆ. ಉತ್ಪತ್ತಿಯನ್ನು ಹೊಂದಿರುವನಿಗೆ ನಾಶವೂ ಇರಲೇಬೇಕು. ಆದ್ದರಿಂದ ಜೀವನು ನಿತ್ಯನು ಎಂದು ಹೇಳುವ ಶ್ರುತಿಗಳು ಅಪ್ರಮಾಣ. ಆದ್ದರಿಂದ ಬ್ರಹ್ಮನಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳೂ ಅಪ್ರಮಾಣವಾಗುತ್ತವೆ.

ಸಿದ್ಧಾಂತಯುಕ್ತಿ (ಅಭೀಷ್ಟಾಸಿದ್ಧಿ) – ಜೀವನು ಅನಿತ್ಯನಾದರೆ ಅವನಿಗೆ ಇಷ್ಟವಾದ ಮೋಕ್ಷವೇ ಸಿದ್ಧಿಸುವುದಿಲ್ಲ. ಉತ್ಪತ್ತಿಯಾದದ್ದು ನಾಶವಾಗಲೇಬೇಕೆಂಬ ವ್ಯಾಪ್ತಿಯಿದ್ದರೂ, ಜೀವನಿಗೆ ಘಟಪಟಾದಿಗಳಂತೆ ಸ್ವರೂಪತಃ ಉತ್ಪತ್ತಿಯೇ ಇಲ್ಲ. ಆದ್ದರಿಂದ ನಾಶವೂ ಇರಬೇಕಿಲ್ಲ. ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲವಾದ್ದರಿಂದ ವಿಷ್ಣುವೇ ಜಗತ್ಕಾರಣನೆಂದು ಹೇಳುವ ಶ್ರುತಿಗಳ ಪ್ರಾಮಾಣ್ಯಕ್ಕೆ ಚ್ಯುತಿಯಿಲ್ಲ.

೧೬. ಪುಂಸ್ತ್ವಾಧಿಕರಣ

ಪೂರ್ವಪಕ್ಷಯುಕ್ತಿ (ಸ್ವಗುಣಾನನುಭೂತಿಃ) – ಜೀವನು ದುಃಖಾದಿಗಳಿಂದ ಬಿಡುಗಡೆ ಹೊಂದಿ ಆನಂದರೂಪನಾಗುತ್ತಾನೆ ಎಂಬುದಾಗಿ ಸ ದುಃಖಾದ್ವಿಮುಕ್ತಃ ಆನಂದೀಭವತಿ ಇತ್ಯಾದಿ ಶ್ರುತಿಗಳಿಂದ ತಿಳಿದುಬರುತ್ತದೆ. ಆದ್ದರಿಂದ ಜೀವನು ಕೇವಲ ಜ್ಞಾನಾನಂದಸ್ವರೂಪನಲ್ಲ. ಹಾಗೆ ಇದ್ದಿದ್ದರೆ ಸಂಸಾರದಲ್ಲಿ ಅವನಿಗೆ ತನ್ನ ಸ್ವರೂಪಭೂತ ಜ್ಞಾನಾನಂದಾದಿಗಳ ಅನುಭವವಾಗಬೇಕಿತ್ತು. ಆದ್ದರಿಂದ ಜೀವನು ಜ್ಞಾನಾನಂದ ರೂಪನೆಂದು ಪ್ರತಿಪಾದಿಸುವ ಶ್ರುತಿಗಳು ಪ್ರಮಾಣವಲ್ಲ. ಇಂಥಹ ಶ್ರುತಿಗಳಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ.

ಸಿದ್ಧಾಂತಯುಕ್ತಿ (ಸುವ್ಯಕ್ತಿ) – ಜೀವನು ಜ್ಞಾನಾನಂದ ಸ್ವರೂಪನೇ. ಆದರೆ ಸಂಸಾರಾವಸ್ಥೆದಲ್ಲಿ ಅಜ್ಞಾನ ಕರ್ಮಾದಿಗಳ ಆವರಣವಿರುವುದರಿಂದ ಅವನಿಗೆ ತನ್ನ ಸ್ವರೂಪಭೂತ ಆನಂದಾದಿಗಳ ಅನುಭವವಾಗುವುದಿಲ್ಲ. ಅಂದರೆ ಸಂಸಾರದಲ್ಲಿ ಪ್ರತಿಬಂಧಕದ ಕಾರಣ ಸ್ವರೂಪದ ಅಭಿವ್ಯಕ್ತಿ ಆಗುವುದಿಲ್ಲ. ಮೋಕ್ಷದಲ್ಲಿ ಯಾವುದೇ ಪ್ರತಿಬಂಧವಿಲ್ಲದಿರುವುದರಿಂದ ಸ್ವರೂಪಭೂತ ಆನಂದಾದಿಗಳು ಅಭಿವ್ಯಕ್ತವಾಗುತ್ತವೆ. ಆದ್ದರಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ಆದ್ದರಿಂದ ವಿಷ್ಣುವೇ ಜಗತ್ಕಾರಣನೆಂದು ಹೇಳುವ ಶ್ರುತಿಗಳು ಪ್ರಮಾಣವೇ ಆಗಿವೆ.

೧೭. ಕರ್ತೃತ್ವಾಧಿಕರಣ

ಪೂರ್ವಪಕ್ಷಯುಕ್ತಿ (ಅಲ್ಪಕಲ್ಪನಾ) – ನಾನ್ಯತೋಽಸ್ತಿ ಕರ್ತಾ ಇತ್ಯಾದಿ ಶ್ರುತಿಗಳಿಂದ ಈಶ್ವರನನ್ನು ಬಿಟ್ಟು ಬೇರೆ ಕರ್ತನು ಯಾರೂ ಇಲ್ಲ ಎಂದು ತಿಳಿದುಬರುತ್ತದೆ. ಆದ್ದರಿಂದ ಜೀವನು ಕರ್ತೃವಲ್ಲ. ಈಶ್ವರನೊಬ್ಬನೇ ಕರ್ತಾ ಎಂದು ಅಂಗೀಕರಿಸಿದರೆ ಕಲ್ಪನಾ ಲಾಘವವಿದೆ. ಆದ್ದರಿಂದ ಜೀವನಿಗೆ ಕರ್ತೃತ್ವವನ್ನು

ಹೇಳುವ ಶ್ರುತಿಗಳು ಅಪ್ರಮಾಣ. ಇಂಥಹ ಅಪ್ರಮಾಣವಾದ ವೇದಗಳಿಂದ ಈಶ್ವರನು ಜಗತ್ಕಾರಣನೆಂಬುದು ಸಿದ್ಧವಾಗುವುದಿಲ್ಲ.

ಸಿದ್ಧಾಂತಯುಕ್ತಿ (ಶಾಸ್ತ್ರಸಿದ್ಧಿ) – ಯತ್ಕರ್ಮ ಕುರುತೇ ತದಭಿಸಂಪದ್ಯತೇ ಇತ್ಯಾದಿ ಶ್ರುತಿಗಳಿಂದ ಜೀವನೂ ಕರ್ತೃವೆಂದು ಸಿದ್ಧಿಸುತ್ತದೆ. ಜೀವನಿಗೆ ಕರ್ತೃತ್ವವಿಲ್ಲದಿದ್ದರೆ ಅವನಿಗೆ ಇಂಥದನ್ನು ಮಾಡು ಇಂಥದನ್ನು ಮಾಡಬೇಡ ಎಂದು ವಿಧಿನಿಷೇಧಗಳನ್ನು ಹೇಳುವ ಶಾಸ್ತ್ರವಾಕ್ಯಗಳಿಗೆ ಅರ್ಥವಿರುವುದಿಲ್ಲ. ಈಶ್ವರನೇ ಸ್ವತಂತ್ರ ಕರ್ತೃ. ಜೀವನಿಗೆ ಈಶ್ವರಾಧೀನ ಕರ್ತೃತ್ವವಿದೆ. ಹೀಗೆ ಶ್ರುತಿಗಳಿಗೆ ಪರಸ್ಪರ ವಿರೋಧ ಬರದಂತೆ ಅರ್ಥಮಾಡುವುದರಿಂದ ಶಾಸ್ತ್ರಕ್ಕೆ ವೈಯರ್ಥ್ಯ ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಜಗತ್ಕರ್ತೃತ್ವವನ್ನು ಹೇಳುವ ಶ್ರುತಿಗಳು ಪ್ರಮಾಣವಾಗಿವೆ.

೧೮. ಅಂಶಾಧಿಕರಣ

ಪೂರ್ವಪಕ್ಷಯುಕ್ತಿ (ನಾನಾಶ್ರುತಿಃ) – ಕೆಲವು ಶ್ರುತಿಗಳು ಜೀವರೆಲ್ಲರೂ ಈಶ್ವರನ ಅಂಶರು ಎಂದು ಹೇಳಿದರೆ, ಮತ್ತೆ ಕೆಲವು ಶ್ರುತಿಗಳು ಜೀವರು ಈಶ್ವರನ ಅಂಶರಲ್ಲ ಎಂದು ಹೇಳುತ್ತವೆ. ಹೀಗೆ ಪರಸ್ಪರ ವಿರುದ್ಧವಾದ ಶ್ರುತಿಗಳಿಂದ ಜೀವನು ಪರಮಾತ್ಮನ ಅಂಶನೋ ಅನಂಶನೋ ಎಂದು ನಿರ್ಣಯವಾಗುವುದಿಲ್ಲ. ಹೀಗೆ ಶ್ರುತಿಗೆ ಅಪ್ರಮಾಣ್ಯ ಬರುವುದರಿಂದ ವಿಷ್ಣುವೇ ಜಗತ್ಕಾರಣನೆಂದು ಶ್ರುತಿಗಳಿಂದ ಸಿದ್ಧವಾಗುವುದಿಲ್ಲ.

ಸಿದ್ಧಾಂತಯುಕ್ತಿ (ವಿಪರ್ಯಯ) – ವಾಕ್ಯದ ಅಪ್ರಾಮಾಣ್ಯವು ವಕ್ತೃವಿನ ಭ್ರಮೆ ಮೂಲಕವಾದದ್ದು. ವೇದಗಳಿಗೆ ವಕ್ತೃವೇ ಇಲ್ಲವಾದ್ದರಿಂದ ಅವುಗಳಿಗೆ ವಿಪರ್ಯಯ ಅಥವಾ ಭ್ರಾಂತಿಮೂಲತ್ವವಿಲ್ಲ. ಆದ್ದರಿಂದ ಅಪ್ರಮಾಣವಲ್ಲ. ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಜೀವೇಶ್ವರರಿಗೆ ಬೇಧವು ಪ್ರತ್ಯಕ್ಷಸಿದ್ಧ. ಆದ್ದರಿಂದ ಜೀವನು ಪರಮಾತ್ಮನ ಅಂಶನೆಂದು ಹೇಳಿದರೆ ಅಭೇದವೆಂದು ಅರ್ಥಮಾಡಬಾರದು. ಪರಮಾತ್ಮನ ಸಂಬಂಧವಿದೆಯೆಂದಷ್ಟೇ ಅರ್ಥ. ಆದ್ದರಿಂದ ಶ್ರುತಿಗಳಿಗೆ ಅಪ್ರಾಮಾಣ್ಯವೂ ಪರಸ್ಪರ ವಿರೋಧವೂ ಇರುವುದಿಲ್ಲ. ಆದ್ದರಿಂದ ವಿಷ್ಣುವೇ ಜಗತ್ಕಾರಣ.

೧೯. ಅದೃಷ್ಟಾಧಿಕರಣ

ಪೂರ್ವಪಕ್ಷಯುಕ್ತಿ (ವೈಚಿತ್ರ್ಯಂ) – ಜೀವರೆಲ್ಲರೂ ಈಶ್ವರನ ಪ್ರತಿಬಿಂಬರೆಂದು ಹಿಂದಿನ ಅಧಿಕರಣದಲ್ಲಿ ಆಭಾಸ ಏವ ಚ ಎಂಬ ಸೂತ್ರದಲ್ಲಿ ಹೇಳಲಾಗಿದೆ. ಹೀಗೆ ಎಲ್ಲ ಜೀವರು ಪರಮಾತ್ಮನ ಪ್ರತಿಬಿಂಬರಾದರೆ ಎಲ್ಲರೂ ಒಂದೇ ರೀತಿಯಿರಬೇಕು. ಅವರಲ್ಲಿ ಸುರ ಅಸುರ ತಿರ್ಯಕ್ ಹೀಗೆ ವೈಚಿತ್ರ್ಯವು ಇರಲು ಸಾಧ್ಯವಿಲ್ಲ. ಆದ್ದರಿಂದ ಜೀವರು ಪರಮಾತ್ಮನ ಪ್ರತಿಬಿಂಬರು ಎಂದು ಹೇಳುವ ಶ್ರುತಿಯು

ಅಪ್ರಮಾಣ. ಆದ್ದರಿಂದ ವಿಷ್ಣುವು ಜಗತ್ಕಾರಣವೆಂಬುದು ಶ್ರುತಿಯಿಂದ ಸಿದ್ಧವಾಗುವುದಿಲ್ಲ.

ಸಿದ್ಧಾಂತಯುಕ್ತಿ (ವಿಶೇಷಕಾರಣ) – ಎಲ್ಲ ಜೀವರು ಪರಮಾತ್ಮನ ಪ್ರತಿಬಿಂಬರು ಎಂಬುದು ನಿಜವೇ. ಆದರೂ ಅವರವರ ಅದೃಷ್ಟ ಕರ್ಮಗಳ ಅನುಸಾರವಾಗಿ ಬೇರೆ ಬೇರೆ ರೀತಿಯಿದ್ದಾರೆ. ಆದ್ದರಿಂದ ಶ್ರುತಿಗಳು ಅಪ್ರಮಾಣವಲ್ಲ. ವಿಷ್ಣುವೇ ಜಗತ್ಕಾರಣನು ಎಂಬುದೇ ಸಿದ್ಧಾಂತ.

ಹೀಗೆ ಬೇರೆ ಬೇರೆ ಸಿದ್ಧಾಂತ ನ್ಯಾಯಗಳಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲವೆಂದು ಈ ಮೂರನೆಯ ಪಾದದಲ್ಲಿ ನಿರೂಪಿಸಲಾಗಿದೆ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಶ್ರುತಿಗಳಿಂದ ಸಿದ್ಧವಾಗುತ್ತದೆ.

ವಿಯದಧಿಕರಣಮ್

ಓಂ ನ ವಿಯದಶ್ರುತೇಃ ಓಂ

ಈ ಅಧಿಕರಣದಲ್ಲಿ 'ಅನಾದಿರ್ವಾಯಮಾಕಾಶಃ' ಇತ್ಯಾದಿ ಶ್ರುತಿಗಳಿಗೆ ಗೌಣಾರ್ಥತ್ವವನ್ನೂ, 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಶ್ರುತಿಗಳಿಗೆ ಮುಖ್ಯಾರ್ಥತ್ವವನ್ನೂ ಸ್ವೀಕರಿಸಿ, ಆಕಾಶಕ್ಕೆ ಉತ್ಪತ್ತಿಯು ಸಮರ್ಥಿಸಲ್ಪಟ್ಟಿದೆ. ಅಲ್ಲಿ ಬಂದಿರುವ 'ವಿಯತ್' ಪದವು ಕೇವಲ ಆಕಾಶಪರವಲ್ಲ, ಪ್ರಕೃತಿ ಇತ್ಯಾದಿಗಳಿಗೂ ಸಂಗ್ರಾಹಕವಾಗಿ ತಿಳಿಯಬೇಕೆಂದು 'ಪ್ರಕೃತಿಃ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಪ್ರಕೃತಿಃ ಪುರುಷಃ ಕಾಲೋ ವೇದಾಸ್ತದಭಿಮಾನಿನಃ ||೯||

ಮಹದಾದ್ಯಾಶ್ಚ ಜಾಯಂತೇ ಪರಾಧೀನವಿಶೇಷಿತಾ |

ಇದಂ ಸರ್ವಂ ಸಸರ್ಜೇತಿ ಜನಿಮತ್ತ್ವಮಿಹೋದಿತಮ್ ||೧೦||

ಜಡಪ್ರಕೃತಿ, ಜೀವ, ಕಾಲ, ವೇದ ಹಾಗೂ ತದಭಿಮಾನಿಗಳು, ಮಹದಾದಿಗಳು ಹುಟ್ಟುತ್ತವೆ. 'ಆತ್ಮನಃ ಆಕಾಶಃ ಸಂಭೂತಃ' ಇತ್ಯಾದಿ ಶ್ರುತಿಗಳಲ್ಲಿ ಆಕಾಶಕ್ಕೆ ಹೇಳಲ್ಪಟ್ಟಿರುವ ಉತ್ಪತ್ತಿಯು ಪರಾಧೀನವಿಶೇಷಾವಾಪ್ತಿರೂಪವಾದುದು. ಇದನ್ನೆಲ್ಲ ಸೃಜಿಸಿದನು ಎಂದು ಉತ್ಪತ್ತಿಯು ಈ ಶ್ರುತಿಯಲ್ಲಿ ಹೇಳಲ್ಪಟ್ಟಿದೆ.

ಇನ್ನು ಪರರು ಹೇಳಿದ ರೀತಿಯಿಂದ ಘಟಾದಿಗಳ ಹಾಗೆ, ಅಭೂತ್ವಾಭವನ (ಹಿಂದೆ ಇಲ್ಲದ್ದು ಅನಂತರ ಉಂಟಾಗುವುದು) ಎಂಬ ಅರ್ಥದಲ್ಲಿಯೇ ಶ್ರುತಿಗಳು ಹಾಗೂ ಸೂತ್ರಗಳು ಆಕಾಶಕ್ಕೆ ಉತ್ಪತ್ತಿಯನ್ನು ಏಕೆ ಹೇಳಿರಬಾರದು ಎಂದು ಆಶಂಕಿಸಿದರೆ –

ಅವಕಾಶಮಾತ್ರಮಾಕಾಶಃ ಕಥಮುತ್ಪದ್ಯತೇಽನ್ಯಥಾ |

ಯದ್ಯನಾಕಾಶತಾ ಪೂರ್ವಂ ಕಿಂ ಮೂರ್ತನಿಬಿಡಂ ಜಗತ್ ॥೧೧॥

ಅವಕಾಶಮಾತ್ರವೇ ಆಕಾಶ ಎಂದಿರುವಾಗ, ಪರಾಧೀನವಿಶೇಷಾವಾಪ್ತಿಯನ್ನು ಬಿಟ್ಟರೆ, ಬೇರೆ ರೀತಿಯಿಂದ ಈ ಆಕಾಶಕ್ಕೆ ಉತ್ಪತ್ತಿಯು ಹೇಗೆ ಕೂಡುವುದು? ಸೃಷ್ಟಿಯ ಪೂರ್ವದಲ್ಲಿ ಮೂರ್ತದ್ರವ್ಯಗಳ ಅಭಾವರೂಪ ಆಕಾಶವು ಇಲ್ಲವೆಂದು ಹೇಳುವುದಾದರೆ, ಆಗ ಪ್ರಲಯದಲ್ಲಿ ಜಗತ್ತು ಮೂರ್ತದ್ರವ್ಯಗಳಿಂದ ನಿಬಿಡವೆಂದು ಅಂಗೀಕರಿಸಲ್ಪಡುವುದೇನು?

ಇದನ್ನೇ 'ಮೂರ್ತ' ಇತ್ಯಾದಿ ವಚನದಿಂದ ವಿವರಿಸುತ್ತಾರೆ –

ಮೂರ್ತಸಂಪೂರ್ಣತಾ ಚೈವ ಯದ್ಯನಾಕಾಶತಾ ಭವೇತ್ ।

ಮೂರ್ತದ್ರವ್ಯಾಣಿ ಚಾಕಾಶೇ ಸ್ಥಿತಾನ್ಯೇವ ಹಿ ಸರ್ವದಾ ॥೧೨॥

ಎಲ್ಲ ಮೂರ್ತದ್ರವ್ಯಗಳ ಅಭಾವರೂಪ ಆಕಾಶದ ಅಭಾವವು ಪ್ರಲಯದಲ್ಲಿ ಇರುವುದಾದರೆ, ಆಗ ಮೂರ್ತದ್ರವ್ಯಗಳಿಂದ ಪರಿಪೂರ್ಣವಾಗಿರುವಿಕೆ ಎಂಬುದು ಆಗಿಯೇ ಆಗುವುದು. ಇದರಿಂದ ಸ್ಥಿತಿಕಾಲದಲ್ಲಿ ಮೂರ್ತದ್ರವ್ಯಗಳ ಅಭಾವವು ಉಂಟಾಗುವುದು. ಹೀಗಾಗಿ ಸೃಷ್ಟಿಪ್ರಲಯಗಳಲ್ಲಿ ಸೃಷ್ಟಿಯು ಪ್ರಲಯವಾಗಲಿ, ಪ್ರಲಯವು ಸೃಷ್ಟಿಯಾಗಲಿ ಎಂಬ ವ್ಯತ್ಯಾಸವು ಉಂಟಾಗುವುದು. ಯಾವನು ಮೂರ್ತದ್ರವ್ಯಗಳನ್ನೂ ಅವುಗಳ ಅಭಾವವನ್ನೂ ಅಂಗೀಕರಿಸುತ್ತಾನೋ ಅವನು ಮೂರ್ತದ್ರವ್ಯಕ್ಕಿಂತ ಬೇರೆಯಾದ ಆಕಾಶವನ್ನು ಅವಶ್ಯವಾಗಿ ಅಂಗೀಕರಿಸಲೇಬೇಕು. ಏಕೆಂದರೆ ಅವುಗಳು ಯಾವಾಗಲೂ ಆಕಾಶದಲ್ಲಿ ಇರುವವುಗಳೇ ಆಗಿವೆ.

ಹೀಗೆ ಆಕಾಶಕ್ಕೆ ಅಭೂತ್ವಾಭವನ ರೂಪ ಉತ್ಪತ್ತಿಯು ಅಯುಕ್ತವೆಂದು ಸಿದ್ಧವಾಯಿತು. ಹಾಗಾದರೆ ಆಕಾಶ ಶಬ್ದದ ಅರ್ಥವೇನು? ಅದಕ್ಕೆ ಹೇಳುವ ಪರಾಧೀನಾವಾಪ್ತಿರೂಪ ಉತ್ಪತ್ತಿ ಎಂದರೇನು? ಎಂಬ ಪ್ರಶ್ನೆಗಳು ಬಂದರೆ, ಅದಕ್ಕೆ ಪರಿಹಾರವನ್ನು 'ಅತಃ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ಅತ ಆಕಾಶಶಬ್ದೋಕ್ತಸ್ತದ್ದೇವೋಽತ್ರ ವಿನಾಯಕಃ ।

ದೇಹೋತ್ಪತ್ತ್ಯಾ ಸಮುತ್ಪನ್ನ ಇತಿ ಶ್ರುತ್ಯಾಭಿಧೀಯತೇ ॥೧೩॥

ಪರಕೀಯರ ವ್ಯಾಖ್ಯಾನವು ಅಯುಕ್ತವಾದುದರಿಂದ, ಭೂತಾಕಾಶದ ಅಭಿಮಾನಿ ದೇವತೆಯಾದ ವಿನಾಯಕನು ದೇಹೋತ್ಪತ್ತಿಯನ್ನು ಹೊಂದುವುದರ ಮೂಲಕ ಉತ್ಪನ್ನನಾದನೆಂದು 'ಆಕಾಶಃ ಸಂಭೂತಃ' ಎಂಬ ಶ್ರುತಿಯು ಹೇಳುತ್ತದೆ.

ಭೂತಮಪ್ಯಸಿತಂ ದಿವ್ಯದೃಷ್ಟಿಗೋಚರಮೇವ ತು ।

ಉತ್ಪದ್ಯತೇಽವ್ಯಾಕೃತಂ ಹಿ ಗಗನಂ ಸಾಕ್ಷಿಗೋಚರಮ್ ॥೧೪॥

ಪ್ರದೇಶ ಇತಿ ವಿಜ್ಞೇಯಂ ನಿತ್ಯಂ ನೋತ್ಪದ್ಯತೇ ಹಿ ತತ್ ।

ನೀಲವಾದ ಭೂತಾಕಾಶವೂ ದಿವ್ಯ ದೃಷ್ಟಿಗೆ ಗೋಚರವಾಗಿಯೇ ಹುಟ್ಟುತ್ತದೆ ಎಂಬುದಾಗಿ 'ಆಕಾಶೋ ನೀಲಿಮೋದೇತಿ' ಎಂಬ ಶ್ರುತಿಯಿಂದ ಹೇಳಲ್ಪಡುತ್ತದೆ. ಅವ್ಯಾಕೃತ ಆಕಾಶವು ನಿತ್ಯವು, ಆದ್ದರಿಂದ ಅದು ಹುಟ್ಟುವುದಿಲ್ಲ. ಅದು ಸಾಕ್ಷಿಗೆ ಗೋಚರವಾಗುವ ಪ್ರದೇಶರೂಪವು ಎಂದು ತಿಳಿಯತಕ್ಕದ್ದು.

ಹಾಗಾದರೆ ಅವ್ಯಾಕೃತಾಕಾಶಕ್ಕೆ ಉತ್ಪತ್ತಿಯಿಲ್ಲವೆಂದು ಒಪ್ಪಿದರೂ, 'ಇದಂ ಸರ್ವಮಸೃಜತ' ಇತ್ಯಾದಿ ಶ್ರುತಿ ವಿರೋಧವು ಬರುವುದು ಎಂದು ಆಶಂಕಿಸಿದರೆ – ಅವ್ಯಾಕೃತಾಕಾಶಕ್ಕೆ ಅಭೂತ್ವಾಭವನವೆಂಬ ಉತ್ಪತ್ತಿಯು ಸಂಭವಿಸದಿದ್ದರೂ, ಪರಾಧೀನವಿಶೇಷಾವಾಪ್ತಿಯೆಂಬ ಉತ್ಪತ್ತಿ ಇರುವುದೆಂಬುದಾಗಿ 'ತಥಾಪಿ' ಇತ್ಯಾದಿ ವಾಕ್ಯದಿಂದ ಹೇಳುತ್ತಾರೆ –

ತಥಾಽಪಿ ಮೂರ್ತಸಂಬಂಧಪರತಂತ್ರವಿಶೇಷಯುಕ್ ॥೧೫॥

ಖಮೇವೋತ್ಪತ್ತಿಮನ್ನಾಮ ಶ್ರುತಿಶಬ್ದವಿವಕ್ಷಿತಮ್ ।

ಹಾಗಿದ್ದರೂ ಮೂರ್ತಸಂಬಂಧರೂಪವಾದ ಪರಾಧೀನವೆಂಬ ವಿಶೇಷದಿಂದ ಕೂಡಿದ, ಅನಾದಿಯೆಂದು ಹೇಳಲ್ಪಟ್ಟ, ಆಕಾಶವೇ ಉತ್ಪತ್ತಿಯುಳ್ಳದ್ದೆಂದು 'ಇದಂ ಸರ್ವಮಸೃಜತ' ಎಂಬ ಶ್ರುತಿಯ ಅಭಿಪ್ರಾಯವು.

ಹೀಗೆ ಶ್ರುತಿಯಲ್ಲಿ ಹೇಳಲ್ಪಟ್ಟ ಆಕಾಶದ ಉತ್ಪತ್ತಿಯನ್ನು ವ್ಯಾಖ್ಯಾನಿಸಿ, ಆಕಾಶ ಪದದಿಂದ ಉಪಲಕ್ಷಿತವಾದ ಪ್ರಕತ್ಯಾದಿಗಳ ಉತ್ಪತ್ತಿಯನ್ನು 'ಪ್ರಕೃತಿಃ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಾರೆ –

ಪ್ರಕೃತಿಃ ಪುರುಷಃ ಕಾಲ ಇತ್ಯೇತೇ ಚ ಸಮಸ್ತಶಃ ॥೧೬॥

ಈಶಾಧೀನವಿಶೇಷೇಣ ಜನ್ಯಾ ಇತ್ಯೇವ ಶಬ್ದಿತಾಃ ।

ಕಾಲಪ್ರವಾಹ ಏವೈಕೋ ನಿತ್ಯೋ ನ ತು ವಿಶೇಷವಾನ್ ॥೧೭॥

ಪ್ರಕೃತಿ ಪುರುಷ ಕಾಲ ಇವೇ ಮುಂತಾದವುಗಳು ಸಮಸ್ತವಾಗಿ ಈಶ್ವರಾಧೀನ ವಿಶೇಷದಿಂದಲೇ ಹುಟ್ಟಿದವುಗಳೆಂದು ಹೇಳಲ್ಪಟ್ಟಿವೆ. ಕಾಲಪ್ರವಾಹವೊಂದೇ ನಿತ್ಯ ಕ್ಷಣಲವಾದಿ ರೂಪ ಕಾಲವಿಶೇಷವು ನಿತ್ಯವಲ್ಲ.

ಪುರುಷಾವ್ಯಕ್ತಕಾಲಾನಾಂ ರಮ್ಯೈವೈಕಾಭಿಮಾನಿನೀ ।

ಸಿಸೃಕ್ಷುತ್ವವಿಶೇಷಂ ತತ್ಸಾಕ್ಷಾದ್ಭಗವದಿಚ್ಛಯಾ ॥೧೮॥

ಪ್ರಾಪ್ಯೈವ ಸೃಷ್ಟೇತ್ಯುದಿತಾ ಪ್ರಧಾನಂ ವಿಕೃತೇರಪಿ ।

ಪುಮಾಂಸೋ ದೇಹಸಂಬಂಧಾತ್ಸೃಷ್ಟಿಮಂತ ಇತೀರಿತಾಃ ॥೧೯॥

ಪುರುಷ ಪ್ರಕೃತಿ ಕಾಲಗಳಿಗೆ ರಮಾದೇವಿಯೊಬ್ಬಳೇ ಅಭಿಮಾನಿನಿಯು. ಆದ್ದರಿಂದ ಸಾಕ್ಷಾತ್ತಾಗಿ ಭಗವದಿಚ್ಛೆಯಿಂದ ಸಿಸೃಕ್ಷುತ್ವ (ಸೃಷ್ಟಿ ಮಾಡಬೇಕೆಂಬ ಇಚ್ಛೆ) ಎಂಬ ವಿಶೇಷವನ್ನು ಹೊಂದಿದವಳಾಗಿಯೇ ಸೃಷ್ಟಳು ಎಂದು ಹೇಳಲ್ಪಟ್ಟಿರುತ್ತಾಳೆ. ಹೊರತಾಗಿ ವಿನಾಯಕ ಮುಂತಾದವರ ಹಾಗೆ ದೇಹೋತ್ಪತ್ತಿ ರೂಪ ಉತ್ಪತ್ತಿಯು ಅವಳಿಗಿಲ್ಲ ಎಂದರ್ಥ. ಪ್ರಕೃತಿಗೆ ಈಶ್ವರಾಧೀನವಾದ ವಿಕಾರವನ್ನು ಹೊಂದುವುದೇ ಉತ್ಪತ್ತಿ ಎಂದು ಹೇಳಲ್ಪಡುತ್ತದೆ. ಚೇತನರಿಗೆ ದೇಹಸಂಬಂಧವನ್ನು ಪಡೆಯುವುದೇ ಉತ್ಪತ್ತಿ ಎಂದು ಹೇಳಲ್ಪಡುತ್ತದೆ.

ಮಾತರಿಶ್ವಾಧಿಕರಣಮ್

ಓಂ ಏತೇನ ಮಾತರಿಶ್ವಾ ವ್ಯಾಖ್ಯಾತಃ ಓಂ

ಹಿಂದಿನ ಅಧಿಕರಣದಲ್ಲಿ ಆಕಾಶಾದಿಗಳ ಉತ್ಪತ್ತಿ ಹಾಗೂ ಅನುತ್ಪತ್ತಿಗಳನ್ನು ಪ್ರತಿಪಾದಿಸುವ ಶ್ರುತಿಗಳಿಗೆ ಬಂದ ವಿರೋಧವು ಪರಿಹರಿಸಲ್ಪಟ್ಟಿತು. ಈಗ 'ತೇಜೋಽಬನ್ನಾನ್ಯಾಕಾಶ ಇತಿ ತಾನ್ಯನಿತ್ಯಾನಿ ವಾಯುರ್ವಾವ ನಿತ್ಯಃ' ಎಂಬ ಶ್ರುತಿಯಲ್ಲಿ, ವ್ಯವಸ್ಥಿತವಾದ ನಿತ್ಯತೆ ಹಾಗೂ ಅನಿತ್ಯತೆಯುಳ್ಳ ಆಕಾಶವನ್ನು ಅನಿತ್ಯ ವರ್ಗದಲ್ಲಿ ಸೇರಿಸಿ, ವಾಯುವಿನ ನಿತ್ಯತೆಯನ್ನು ಹೇಳಲಾಗಿದೆ. ಈ ವ್ಯವಸ್ಥೆಯು ಯುಕ್ತವಾಗುವುದಿಲ್ಲ ಎಂದು ಆಶಂಕೆ ಬಂದರೆ ಅದಕ್ಕೆ ಪರಿಹಾರವನ್ನು ಈ ಅಧಿಕರಣದಲ್ಲಿ ನೀಡಲಾಗಿದೆ.

ಏವಂ ಪ್ರಲಯಕಾಲೇಪಿ ಪ್ರತಿಭಾತಪರಾವರಃ ।

ಮುಖ್ಯವಾಯುರ್ನಿತ್ಯಸಮಃ ಶರೀರೋತ್ಪತ್ತಿಕಾರಣಾತ್ ॥೨೦॥

ಪರಾಧೀನವಿಶೇಷೇಣ ಜನಿಮಾನೇವ ಶಬ್ದಿತಃ ।

ನೈವ ಕಿಂಚಿತ್ತತೋ ಜನ್ಮವರ್ಜಿತಂ ಪರಮಾದೃತೇ ॥೨೧॥

ಆಕಾಶವು ಅನಾದಿಯೂ ಜನ್ಮವುಳ್ಳದ್ದೂ ಹೇಗೋ ಹಾಗೆ, ಪ್ರಲಯದಲ್ಲಿಯೂ ಪ್ರತಿಭಾತಪರಾವರನಾದ ಮುಖ್ಯಪ್ರಾಣನು ನಿತ್ಯಸಮನೆಂದೆನಿಸಿದ್ದಾನೆ. ಶರೀರದ ಉತ್ಪತ್ತಿಯಾಗುವ ಕಾರಣದಿಂದ ಪರಾಧೀನ ವಿಶೇಷ ಪ್ರಾಪ್ತಿರೂಪ ಜನನವುಳ್ಳವನು ಎಂದು ಹೇಳಲ್ಪಟ್ಟಿದ್ದಾನೆ. ಆದ್ದರಿಂದ ಪರಮಾತ್ಮನನ್ನು ಬಿಟ್ಟು ಬೇರೆ ಯಾವುದೂ ಸಹ ಜನ್ಮರಹಿತವೆಂಬುದು ಇಲ್ಲವೇ ಇಲ್ಲ.

ಪರಾಧೀನವಿಶೇಷತ್ವೇ ಜನ್ಮನಃ ಸ್ಥೂಲತಾಭವಃ ।

ಪೂರ್ವಶಬ್ದವಿಲೋಪಶ್ಚ ಯದಿ ಜನ್ಮೇತಿ ಕೀರ್ತ್ಯತೇ ॥೨೨॥

ರಮಾಯಾ ನೈವ ಜನ್ಮಾಸ್ತಿ ಚೈತನ್ಯಸ್ಯಾಪಿ ಕೇವಲಮ್ ।

ಪ್ರಧಾನಸ್ಯ ಚ ವೇದಸ್ಯ ವೇದಸ್ಯಾಪೀಶ್ವರೇಚ್ಛಯಾ ॥೨೩॥

ವ್ಯಕ್ತಿರ್ನಾಮ ವಿಶೇಷೋಽಸ್ತಿ ತಸ್ಮಾತ್ತದ್ವಶತೈವ ಹಿ ।

ಉತ್ಪತ್ತಿರತ್ರ ಕಥಿತಾ.............................॥

ಉತ್ಪತ್ತಿಗೆ ಪರಾಧೀನ ವಿಶೇಷಪ್ರಾಪ್ತಿರೂಪತ್ವವನ್ನು ಒಪ್ಪಿದರೆ ಇದು ಸಿದ್ಧಿಸುತ್ತದೆ. ಸ್ಥೂಲತ್ವ ಭಾವ, ಪೂರ್ವಶಬ್ದವಿಲೋಪ ಇವುಗಳಿಗೆ ಜನ್ಮವೆಂದು ಕರೆಯುವುದಾದರೆ ಆಗ ರಮಾದೇವಿಗೂ ಜೀವರಿಗೂ ಪ್ರಕೃತಿಗೂ ವೇದಕ್ಕೂ ಇಂಥಹ ಜನ್ಮವು ಇರುವುದೇ ಇಲ್ಲ. ವೇದಕ್ಕೂ ಈಶ್ವರನ ಇಚ್ಛೆಯಿಂದ ಅಭಿವ್ಯಕ್ತಿ ಎಂಬ ವಿಶೇಷವು ಇರುತ್ತದೆ. ಆದ್ದರಿಂದ ಭಗವದಧೀನತ್ವವೆಂಬ ವಿಶೇಷಪ್ರಾಪ್ತಿಯೇ ಉತ್ಪತ್ತಿಯೆಂದು ಶ್ರುತಿ ಹಾಗೂ ಸೂತ್ರಗಳಲ್ಲಿ ಹೇಳಲ್ಪಟ್ಟಿದೆ.

ಉಪಾದಾನವಾದ ಧರ್ಮಿಯು ತನಗಿಂತ ಬೇರೆಯಾದ ರೂಪದಿಂದ ಪರಿಣಾಮ ಹೊಂದುವುದೇ ಸ್ಥೂಲತ್ವ ಭಾವವು. ಹೀಗೆ ಪರಿವರ್ತನೆ ಹೊಂದುವುದರಿಂದಲೇ, ಆ ವಸ್ತುವು ಪರಿವರ್ತನೆಯಾಗುವ ಮುಂಚೆ ಬಳಸುತ್ತಿದ್ದ ಶಬ್ದವನ್ನು ತ್ಯಜಿಸುವುದು ಹಾಗೂ ಶಬ್ದಾಂತರವನ್ನು ಉಪಯೋಗಿಸುವುದು. ಇದೇ ಪೂರ್ವಶಬ್ದವಿಲೋಪ.

ಅಸಂಭವಾಧಿಕರಣಮ್

ಓಂ ಅಸಂಭವಸ್ತು ಸತೋಽನುಪಪತ್ತೇಃ ಓಂ

ಜನ್ಮಸಂಭಾವನಾರಹಿತವಾದ ಆಕಾಶವಾಯುಗಳಿಗೆ ಜನ್ಮವನ್ನು ಹೇಳಿದ ಮೇಲೆ ಪರರು ಹೀಗೆ ಆಶಂಕಿಸುತ್ತಾರೆ. 'ಸದಜಾಯತ' ಇತ್ಯಾದಿ ಶ್ರುತಿಗಳಿರುವುದರಿಂದ ಸತ್ ಶಬ್ದವಾಚ್ಯನಾದ ಬ್ರಹ್ಮನಿಗೂ ಜನ್ಮವಿರುತ್ತದೆ. ಇನ್ನು 'ಸದೇವ ಸೌಮ್ಯೇದಮಗ್ರ ಆಸೀತ್' ಇತ್ಯಾದಿ ಶ್ರುತಿವಿರೋಧ ಬರುವುದು ಎಂದು ಹೇಳಬಾರದು. ಏಕೆಂದರೆ ಆಕಾಶ ವಾಯುಗಳಂತೆ ಬ್ರಹ್ಮನಿಗೂ ಪರಾಧೀನವಿಶೇಷಾವಾಪ್ತಿ ರೂಪ ಉತ್ಪತ್ತಿಯು ಸಂಭವಿಸುವುದು. ಹೀಗೆ ಆಶಂಕಿಸಿದರೆ ಅದರ ನಿವಾರಣೆಗಾಗಿ ಈ ಅಧಿಕರಣವು ಹೊರಟಿದೆ. ಅದನ್ನೇ 'ಸ್ವತಂತ್ರತ್ವಾತ್' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

......................ಸ್ವತಂತ್ರತ್ವಾತ್ಪರಮಾತ್ಮನಃ ॥೨೪॥

ನೈವೋತ್ಪತ್ತಿಃ ಕಥಮಪಿ ನ ಸ್ವತಂತ್ರಂ ತತೋಽಪರಮ್ ।

ಪರಮಾತ್ಮನಿಗೆ ಸ್ವತಂತ್ರತ್ವವಿರುವುದರಿಂದ, ಸ್ವರೂಪದಿಂದಾಗಲೀ ಪರಾಧೀನ ವಿಶೇಷಾವಾಪ್ತಿಯಿಂದಾಗಲೀ ಉತ್ಪತ್ತಿಯು ಇಲ್ಲವೇ ಇಲ್ಲ. ಏಕೆಂದರೆ ಆ ಹರಿಯನ್ನು ಬಿಟ್ಟು ಬೇರೆ ಯಾವುದೂ ಸ್ವತಂತ್ರವಲ್ಲ.

ವ್ಯತಿರೇಕಾಧಿಕರಣಮ್

ಓಂ ವ್ಯತಿರೇಕೋ ಗಂಧವತ್ತಥಾ ಚ ದರ್ಶಯತಿ ಓಂ

ಈ ಅಧಿಕರಣದಲ್ಲಿ ಸೌಭರಿ ಮುಂತಾದ ಯೋಗಿಗಳಿಗೆ ಸ್ವರೂಪದಿಂದಲೇ (ಔಪಾಧಿಕ ಭೇದದಿಂದಲ್ಲ) ಅನೇಕತ್ವವು ಉಪಪಾದಿಸಲ್ಪಡುತ್ತದೆ.

ಅಚ್ಛೇದ್ಯಸ್ಯಾಪಿ ಜೀವಸ್ಯ ವಿಭಾಗಂ ಬಹುಧಾ ಹರಿಃ ।।೨೫।।

ಕೃತ್ವಾ ಭೋಗಾನ್ ಪ್ರದಾಯ್ಯೈವ ಚೈಕ್ಯಮಾಪಾದಯೇತ್ಪುನಃ ।

ಶ್ರೀಹರಿಯು ಜೀವನಿಗೆ, ಅಚ್ಛೇದ್ಯನಾಗಿದ್ದರೂ ಅನೇಕ ವಿಧವಾಗಿ ವಿಭಾಗವನ್ನು ಮಾಡಿ ಭೋಗಗಳನ್ನು ಕೊಟ್ಟು, ಪುನಃ ಏಕರೂಪತ್ವವನ್ನೇ ಹೊಂದಿಸಿಕೊಡುತ್ತಾನೆ.

ಅತ ಈಶವಶಂ ಸರ್ವಂ ಚೇತನಾಚೇತನಂ ಜಗತ್ ।।೨೬।।

ಅವಿಭಾಗಂ ವಿಭಾಗಾಯ ಯದಾ ನಯತಿ ಕೇಶವಃ ।

ಕಿಮಶಕ್ಯಂ ಪರೇಶಸ್ಯ ತದೇತಿ ಹ್ಯಭಿಧೀಯತೇ ।।೨೭।।

ಆದ್ದರಿಂದ ಚೇತನಾಚೇತನಾತ್ಮಕವಾದ ಸಮಸ್ತ ವಿಶ್ವವೂ ಈಶಾಧೀನವಾಗಿದೆ. ಅವಿಭಾಗವಾದುದನ್ನೂ ವಿಭಾಗಕ್ಕಾಗಿ ಕೇಶವನು ಒಯ್ಯುತ್ತಾನೆ ಎಂದಮೇಲೆ, ಪರೇಶನಾದ ಆ ಶ್ರೀಹರಿಗೆ ಯಾವುದು ಅಶಕ್ಯವು? ಎಂಬುದಾಗಿ ಶ್ರುತಿಸ್ಮೃತಿಗಳಿಂದ ಹೇಳಲ್ಪಡುತ್ತದೆ. ಆದ್ದರಿಂದ ಸೂತ್ರದಿಂದಲೂ ಇದೇ ಹೇಳಲ್ಪಡುತ್ತದೆ.

ಇಲ್ಲಿ ಉದಾಹರಿಸಿದ ಶ್ರುತಿ ಯಾವುದೆಂದರೆ –

"ತಂ ಯಥಾ ಯಥೇಶ್ವರಃ ಪ್ರಕುರುತೇ ತಥಾ ತಥಾ ಭವತಿ। ಸೋಽಚಿಂತ್ಯಃ ಪರಮೋ ಗರೀಯಾನಚಿಂತ್ಯಯೇಶಶಕ್ತ್ಯೈವ ಹ್ಯೇಕೋಽವಯವವಿವರ್ಜಿತಃ ಆತ್ಮಾನಂ ಬಹುಧಾ ಕೃತ್ವಾ ಕ್ರೀಡತೇ ಯೋಗಸಂಪದಾ।।"

ಈ ಶ್ರುತಿಯ ಅರ್ಥ ಹೀಗಿದೆ –

"ಆ ಜೀವನನ್ನು ಏಕಧಾ ಅನೇಕಧಾ ಎಂಬುದಾಗಿ ಈಶ್ವರನು ಹೇಗೆ ಹೇಗೆ ಮಾಡುತ್ತಾನೋ ಆ ಜೀವನು ಹಾಗೆ ಹಾಗೆ ಏಕರೂಪನೋ ಅನೇಕರೂಪನೋ ಆಗುತ್ತಾನೆ. ಈಶ್ವರನು ಅಚಿಂತ್ಯಶಕ್ತಿಯುಳ್ಳವನು, ಲೋಕೋತ್ತರನು, ಮಹತ್ತಮನು. ಅಚಿಂತ್ಯವಾದ ಈಶ್ವರನ ಶಕ್ತಿಯಿಂದ ಪ್ರಾಪ್ತವಾದ ಯೋಗರೂಪ ಸಂಪತ್ತಿಯಿಂದ, ಸ್ವರೂಪತಃ ಏಕನೇ ಆದ ಹಾಗೂ ಭಿನ್ನಾಂಶರಹಿತನಾದ ಜೀವನು ತಾನು ಬಹುರೂಪವನ್ನು ಹೊಂದಿ ಕ್ರೀಡಿಸುತ್ತಾನೆ."

ಪೃಥಗಧಿಕರಣಮ್

ಓಂ ಪೃಥಗುಪದೇಶಾತ್ ಓಂ

ಈ ಅಧಿಕರಣದಲ್ಲಿ ಜೀವಾತ್ಮನಿಗೆ ಪರಮಾತ್ಮನಿಂದ ಆತ್ಯಂತಿಕ ಭೇದವು ಅಂದರೆ ಮುಕ್ತಿಯಲ್ಲಿಯೂ ಭೇದವು ಸಮರ್ಥಿಸಲ್ಪಡುತ್ತದೆ.

ಈ ಅಧಿಕರಣದ ಆರಂಭಣೀಯತ್ವದ ವಿಷಯದಲ್ಲಿ ಮುಂದೆ ತೋರಿಸಿರುವಂತೆ ಅಭ್ಯಂಧಿಕಾಶಂಕೆಯು ಪ್ರಾಪ್ತವಾಗುತ್ತದೆ. ಹೇಗೆಂದರೆ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿಂಹನಿಗೂ ದೇವದತ್ತನಿಗೂ ಭೇದದ ನಿರ್ಣಯವಿದ್ದವನಿಗೆ 'ಸಿಂಹೋ ದೇವದತ್ತಃ' ಎಂಬ ವಾಕ್ಯವನ್ನು ಶ್ರವಣ ಮಾಡಿದಾಗ, ಸಿಂಹನಿಗೂ ದೇವದತ್ತನಿಗೂ ಐಕ್ಯವೆಂಬ ಪರಿಜ್ಞಾನವಾಗುವುದಿಲ್ಲ. ಅದು ಗೌಣಾರ್ಥದಲ್ಲಿಯೇ ತಿಳಿಯಲ್ಪಡುತ್ತದೆ. ಇದು ಹೇಗೋ ಹಾಗೆಯೇ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಿಂದ ಆರಂಭಿಸಿ 'ವ್ಯತಿರೇಕೋ ಗಂಧವತ್' ಇತ್ಯಂತವಾದ ಸೂತ್ರಗಳಿಂದ, ಜೀವ ಪರಮಾತ್ಮರಲ್ಲಿನ ಭೇದವು ಪ್ರತ್ಯಕ್ಷಾದಿ ಪ್ರಮಾಣಗಳ ಬಲದಿಂದ ದೃಢವಾಗಿ ನಿಶ್ಚಿತವಾದುದುರಿಂದ, 'ತತ್ವಮಸಿ' ಇತ್ಯಾದಿ ನೂರಾರು ಅಭೇದ ಪ್ರತಿಪಾದಕ ಶ್ರುತಿಗಳಿಂದಲೂ ಅಭೇದ ಜ್ಞಾನವು ಹುಟ್ಟುವುದಿಲ್ಲ. ಬದಲಾಗಿ ಈ ಶ್ರುತಿಗಳು ಗೌಣಾರ್ಥವುಳ್ಳದ್ದೆಂದೇ ಅವನಿಗೆ ನಿಶ್ಚಯವಾಗುತ್ತದೆ. ಆದ್ದರಿಂದ ಪೂರ್ವಪಕ್ಷಪ್ರಾಪಕ ಯುಕ್ತಿಗಳಿಲ್ಲದುದರಿಂದ ಈ ಅಧಿಕರಣವು ಆರಂಭಣೀಯವಲ್ಲ ಎಂಬ ಆಶಂಕೆಯು ಬರುವುದರಿಂದ, ಅಭ್ಯಧಿಕ ಆಶಂಕೆಯನ್ನು ತೋರಿಸುತ್ತ ಪೂರ್ವಪಕ್ಷವನ್ನು 'ಏವಂ ಸ್ಥಿತೇಪಿ' ಇತ್ಯಾದಿ ವಾಕ್ಯದಿಂದ ಅನುವಾದ ಮಾಡುತ್ತಾರೆ –

ಏವಂ ಸ್ಥಿತೇऽಪಿ ಜೀವೈಕ್ಯಂ ಕೇಚಿದಾಹುಃ ಪರಾತ್ಮನಾ ।

ತದ್ಯೋऽಹಮಿತಿ ಪೂರ್ವಾಭಿಃ ಶ್ರುತಿಭಿಶ್ಚಾನುಮಾಬಲಾತ್ ।।೨೮।।

ಹಿಂದೆ ಹೇಳಿದ ನ್ಯಾಯದಿಂದ ಜೀವ ಈಶ್ವರರಲ್ಲಿ ಭೇದವು ನಿಶ್ಚಿತವಿದ್ದರೂ, ಕೆಲವರು 'ತದ್ಯೋಹಂ' ಇತ್ಯಾದಿ ಶ್ರುತಿಸ್ಮೃತಿಗಳಿಂದಲೂ, ಅನುಮಾನದ ಬಲದಿಂದಲೂ ಪರಮಾತ್ಮನಿಗೆ ಜೀವರೊಂದಿಗೆ ಐಕ್ಯವನ್ನು ಹೇಳುತ್ತಾರೆ.

ನ ತದ್ಯುಕ್ತಂ ಯತೋ ವಿಷ್ಣುಃ ಪೃಥಗೇವಾಭಿಧೀಯತೇ ।

ಪ್ರಜ್ಞಾನೇತ್ರೋऽಲೋಕ ಇತಿ ಮುಕ್ತೌ ಭೇದೋऽಭಿಧೀಯತೇ ।।೨೯।।

ಅದು ಯುಕ್ತವಲ್ಲ. ಏಕೆಂದರೆ 'ಭಿನ್ನೋऽಚಿಂತ್ಯಃ ಪರಮೋ ಜೀವಸಂಘಾತ್' ಮುಂತಾದ ಶ್ರುತಿಗಳಿಂದ ವಿಷ್ಣುವು ಜೀವಸಮುದಾಯದಿಂದ ಭಿನ್ನನೇ ಎಂಬುದಾಗಿ ಹೇಳಲ್ಪಡುತ್ತಾನೆ. 'ಪ್ರಜ್ಞಾನೇತ್ರೋऽಲೋಕಃ' ಎಂಬ ಶ್ರುತಿವಾಕ್ಯವು 'ಮುಕ್ತನಿಗೂ

ಬ್ರಹ್ಮನೇ ಪ್ರೇರಕನು' ಎಂಬುದಾಗಿ ಮುಕ್ತಿಯಲ್ಲಿಯೂ ಜೀವನಿಗೆ ಬ್ರಹ್ಮನಿಂದ ಭೇದವನ್ನು ಹೇಳುತ್ತದೆ.

ಹಾಗಾದರೆ ಮುಕ್ತಿಯಲ್ಲಿ ಜೀವ–ಬ್ರಹ್ಮರಿಗೆ ಅಭೇದವನ್ನು ಪ್ರತಿಪಾದಿಸುವ ಅನೇಕ ಶ್ರುತಿಸ್ಮೃತಿಗಳು ಇರುತ್ತವೆ. ಆದ್ದರಿಂದ ಒಂದೇ ಆದ ಈ ಶ್ರುತಿಯ ವಾಕ್ಯದಿಂದ ಮುಕ್ತಿಯಲ್ಲಿನ ಅಭೇದವನ್ನು ಅಲ್ಲಗಳೆಯುವುದು ಯುಕ್ತವಲ್ಲ ಎಂಬ ಆಕ್ಷೇಪವನ್ನು ಪರಿಹರಿಸಲು ಮತ್ತು ಭೇದವನ್ನು ಸಮರ್ಥಿಸಲು 'ಏತಂ' ಇತ್ಯಾದಿ ಅನೇಕ ಶ್ರುತಿಸ್ಮೃತಿಗಳನ್ನು ಉದಾಹರಿಸುತ್ತಾರೆ –

ಏತಮಾನಂದಮಿತ್ಯನ್ಯಾ ಪರಮಂ ಸಾಮ್ಯಮಿತ್ಯಪಿ ।

'ಏತಮಾನಂದಮಯಮಾತ್ಮಾನಮುಪಸಂಕ್ರಮ್ಯ' (ಈ ಪೂರ್ಣಾನಂದನಾದ ಪರಮಾತ್ಮನನ್ನು ಸಮೀಪದಿಂದ ಹೊಂದಿ) ಎಂಬ ಬೇರೊಂದು ಶ್ರುತಿಯು ಮುಕ್ತನಿಗೆ ಪರಮಾತ್ಮನಿಂದ ಭೇದವನ್ನು ಹೇಳುತ್ತದೆ. 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' (ಅಪರೋಕ್ಷಜ್ಞಾನಿಯು ಎಲ್ಲ ಪುಣ್ಯಪಾಪಗಳನ್ನು ಕಳೆದುಕೊಂಡು ದೋಷರಹಿತನಾಗಿ ಪರಮಾತ್ಮನೊಂದಿಗೆ ಸಾಮ್ಯವನ್ನು ಹೊಂದುತ್ತಾನೆ) ಎಂಬ ಶ್ರುತಿಯು ಮುಕ್ತನಿಗೆ ಪರಮಾತ್ಮನೊಂದಿಗೆ ಸಾಮ್ಯವನ್ನು ಹೇಳುತ್ತದೆ. ಭೇದವಿದ್ದರೆ ಮಾತ್ರ ಸಾಮ್ಯವು ಕೂಡುತ್ತದೆ.

ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ॥೩೦॥

ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ ।

'ಈ ಜ್ಞಾನವನ್ನು ಆಶ್ರಯಿಸಿ ನನ್ನ ಸಾಧರ್ಮ್ಯವನ್ನು ಹೊಂದುತ್ತಾರೆ. ಸೃಷ್ಟಿಕಾಲದಲ್ಲಿ ಜನಿಸುವುದಿಲ್ಲ. ಪ್ರಲಯದಲ್ಲಿ ವ್ಯಥೆ ಹೊಂದುವುದಿಲ್ಲ' ಎಂಬ ಗೀತಾ ವಾಕ್ಯದಿಂದಲೂ ಭೇದವು ತಿಳಿದುಬರುತ್ತದೆ.

ಉಪಸಂಪದ್ಯತೇ ಜ್ಯೋತಿಃ ಸ್ವರೂಪೇಣಾಭಿಪದ್ಯತೇ ॥೩೧॥

ತತ್ರ ಪರ್ಯೇತಿ ಜಕ್ಷಂಶ್ಚ ಕ್ರೀಡನ್ನಪಿ ಸದಾ ಸುಖೀ ।

'ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ' ಎಂಬ ಶ್ರುತಿಯು 'ಮುಕ್ತನು ಪರಂಜ್ಯೋತಿಯಾದ ಆ ಹರಿಯನ್ನು ಹೊಂದಿ ತನ್ನ ಚಿದಾನಂದಾತ್ಮಕಸ್ವರೂಪದಿಂದ ಅಭಿವ್ಯಕ್ತನಾಗುತ್ತಾನೆ. ಹಾಗೂ ಮುಕ್ತಿಯಲ್ಲಿ ಭಕ್ಷಿಸುತ್ತ ಕ್ರೀಡಿಸುತ್ತ ಸರ್ವದಾ ಸುಖಿಯಾಗಿರುತ್ತಾನೆ' ಎಂದು ಹೇಳುವುದರ ಮೂಲಕ ಮುಕ್ತಿಯಲ್ಲಿಯೂ ಭೇದವನ್ನೇ ಸಮರ್ಥಿಸುತ್ತದೆ.

ಆಚಕ್ಷ್ವ ಮೇ ಪರಂ ಮೋಕ್ಷಂ ಧೀರಾ ಯಂ ಪ್ರವದಂತಿ ತಮ್ ॥೩೨॥

ಇತ್ಯುಕ್ತ ಆಹ ವಾಗ್ದೇವೀ ಪರಂ ಮೋಕ್ಷಂ ಪ್ರಜಾಪತೇಃ ।

ಜ್ಞಾನಿಗಳು ಯಾವುದನ್ನು ಹೇಳುತ್ತಾರೋ ಅಂಥಹ ಪರಮ ಮೋಕ್ಷವನ್ನು ನನಗೆ ಹೇಳು ಎಂಬುದಾಗಿ ಪ್ರಜಾಪತಿಯು ಪ್ರಾರ್ಥಿಸಿದಾಗ ಲಕ್ಷ್ಮೀದೇವಿಯು ಆ ಪ್ರಜಾಪತಿಗೆ 'ಶಾಖಾಂ ಶಾಖಾಂ' ಇತ್ಯಾದಿಯಾಗಿ ಪರಮಮೋಕ್ಷದ ಸ್ವರೂಪವನ್ನು ಹೇಳಿದಳು ಎಂದು ಮಹಾಭಾರತದಲ್ಲಿ ಹೇಳಲ್ಪಟ್ಟ ಸಂಗತಿಯನ್ನು ಸಂಗ್ರಹಿಸುತ್ತಾರೆ.

ಶಾಖಾಂ ಶಾಖಾಂ ಮಹಾನದ್ಯಃ ಸಂಯಾಂತಿ ಪರಿತಃ ಸ್ರವಾಃ ॥೩೩॥

ಧಾನಾಪೂಪಾ ಮಾಂಸಕಾಮಾಃ ಸದಾ ಪಾಯಸಕರ್ದಮಾಃ ।

ಆ ಭಗವಲ್ಲೋಕದ ಮಧ್ಯೆ ವೇತಸವೆಂಬ ಹೆಸರಿನ ಜಂಬೂವೃಕ್ಷವು ಪುಣ್ಯಗಂಧವುಳ್ಳದ್ದು ವಿಮಲವಾದುದು ಪ್ರಕಾಶಿಸುತ್ತದೆ. ಇಂಥಹ ವೃಕ್ಷದ ಪ್ರತಿಯೊಂದು ಶಾಖೆಯನ್ನೂ ಆಶ್ರಯಿಸಿ ಧಾನ್ಯ ವಿಶೇಷದ ಅಪೂಪಗಳುಳ್ಳ, ಕಾಮ್ಯಮಾನ ಮಾಂಸವುಳ್ಳ, ಕರ್ದಮಸ್ಥಾನೀಯ ಪಾಯಸವುಳ್ಳ ಸುತ್ತಮುತ್ತಲೂ ಸುರಿಸತಕ್ಕ ಮಹಾನದಿಗಳು ಹರಿಯುತ್ತವೆ.

ಯಸ್ಮಿನ್ನಗ್ನಿಮುಖಾ ದೇವಾಃ ಸೇಂದ್ರಾಃ ಸಹಮರುದ್ಗಣಾಃ ॥೩೪॥

ಈಜಿರೇ ಋತುಭಿಃ ಶ್ರೇಷ್ಠೈಸ್ತದಕ್ಷರಮುಪಾಸತೇ ।

ಯಾವ ಲೋಕದಲ್ಲಿ ಇಂದ್ರ ಹಾಗೂ ಮರುದ್ಗಣರಿಂದ ಕೂಡಿದ ಅಗ್ನಿ ಮುಂತಾದ ದೇವತೆಗಳು ಶ್ರೇಷ್ಠವಾದ ಯಾಗಗಳಿಂದ ಯಜ್ಞಮಾಡಿದರೋ, ಅದೇ ಅಕ್ಷರನಾದ ಪರಬ್ರಹ್ಮನ ಸ್ಥಾನ. ಅಲ್ಲಿ ಆ ದೇವತೆಗಳು ಪರಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ.

ಪ್ರವಿಶಂತಿ ಪರಂ ದೇವಂ ಮುಕ್ತಾಸ್ತತ್ರೈವ ಭೋಗಿನಃ ॥೩೫॥

ನಿರ್ಗಚ್ಛಂತಿ ಯಥಾಕಾಮಂ ಪರೇಶೇನೈವ ಚೋದಿತಾಃ ।

ಮುಕ್ತರು ಪರಮೇಶ್ವರನ ಅಂತರದಲ್ಲಿಯೇ ಭೋಗವುಳ್ಳವರಾಗಿ ಅವನನ್ನೇ ಪ್ರವೇಶಿಸುತ್ತಾರೆ. ಆ ಪರಮೇಶ್ವರನಿಂದಲೇ ಪ್ರೇರಿತರಾಗಿ ಇಚ್ಛಾನುಸಾರವಾಗಿ ಹೊರಗೆ ಬರುತ್ತಾರೆ. ಇಲ್ಲಿಯೂ ಭೇದವೇ ಉಕ್ತವಾಗಿದೆ.

ಭೇದದೃಷ್ಟ್ಯಾಭಿಮಾನೇನ ನಿಃಸಂಗೇನಾಪಿ ಕರ್ಮಣಾ ॥೩೬॥

ಕರ್ತೃತ್ವಾತ್ಸಗುಣಂ ಬ್ರಹ್ಮ ಪುರುಷಂ ಪುರುಷರ್ಷಭಮ್ ।

ಸ ಸಂಗತ್ಯ ಪುನಃಕಾಲೇ ಕಾಲೇನೇಶ್ವರಮೂರ್ತಿನಾ ॥೩೭॥

ಜಾತೇ ಗುಣವ್ಯತಿಕರೇ ಯಥಾಪೂರ್ವಂ ಪ್ರಜಾಯತೇ ।

'ಭೇದದೃಷ್ಟ್ಯಾಭಿಮಾನೇನ' ಇತ್ಯಾದಿ ವಚನವು ಭಾಗವತ ವಾಕ್ಯದ ಸಂಗ್ರಹವು. ಇದರ ಅರ್ಥ ಹೀಗಿದೆ. ಚತುರ್ಮುಖ ಬ್ರಹ್ಮನು ಜೀವೇಶ್ವರಾದಿ ಭೇದಜ್ಞಾನದಿಂದ, ಭಕ್ತಿಯಿಂದಲೂ, ನಿವೃತ್ತಕರ್ಮದಿಂದಲೂ ಹಾಗೂ ಜಗತ್ಕರ್ತೃವಾದುದರಿಂದಲೂ ಸಗುಣನಾದ ಪರಮಪುರುಷನೂ ಸರ್ವೋತ್ಕೃಷ್ಟನೂ ಆದ ಶ್ರೀಹರಿಯನ್ನು ಮುಕ್ತನಾಗಿ ಪ್ರವೇಶಿಸಿ, ಕಾಲನಾಮಕ ಪರಮೇಶ್ವರಮೂರ್ತಿಯಿಂದ ಸೃಷ್ಟಿಕಾಲವು ಪುನಃ ಪ್ರಾಪ್ತವಾಗಲು, ಗುಣವಿಕಾರವಿಲ್ಲದ ವಿಷ್ಣುಲೋಕದಲ್ಲಿ ಹಿಂದಿನಂತೆಯೇ ಮುಕ್ತಾಧಿಪತಿಯಾಗುತ್ತಾನೆ. ಇಲ್ಲಿಯೂ ಭೇದವು ಸ್ಪಷ್ಟವಾಗಿಯೇ ಹೇಳಿದೆ.

ಋಚಾಂ ತ್ವಃ ಪೋಷಮಾಸ್ತೇ ಚ ಪರೇಣ ಪ್ರೇರಿತಾಃ ಸದಾ ॥೩೮॥

ಯತ್ಕಾಮಸ್ತತ್ಸೃಜತ್ಯದ್ಧ್ಯೈವಾತ್ಮನಾ ತತ್ಸೃಜತ್ಯಪಿ ।

ಸಹೈವ ಬ್ರಹ್ಮಣಾ ಕಾಮಾನ್ ಭುಂಕ್ತೇ ನಿಸ್ತೀರ್ಣತದ್ಗುಣಃ ॥೩೯॥

'ಋಚಾಂ ತ್ವಃ ಪೋಷಮಾಸ್ತೇ' ಎಂಬ ವಚನದಿಂದ 'ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು। ಬ್ರಹ್ಮ ತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿಮಮೀತ ಉತ್ವ॥' ಎಂಬ ಮಂತ್ರವನ್ನು ಉದಾಹರಿಸುತ್ತಾರೆ. ಈ ಮಂತ್ರದ ಅರ್ಥ ಹೀಗಿದೆ "ಮುಕ್ತಿಸ್ಥಾನದಲ್ಲಿ ಒಬ್ಬ ಬ್ರಹ್ಮನು ಋಕ್ಕುಗಳನ್ನು ಪೋಷಣ ಮಾಡುತ್ತ ಇರುತ್ತಾನೆ. ಇನ್ನೊಬ್ಬ ಬ್ರಹ್ಮನು ಶಕ್ವರೀಛಂದಸ್ಸಿನ ಋಕ್ಕುಗಳಲ್ಲಿ ಆರೂಢವಾದ ಗಾಯತ್ರ ಸಾಮವನ್ನು ಗಾನ ಮಾಡುತ್ತಾನೆ. ಮತ್ತೊಬ್ಬ ಬ್ರಹ್ಮನು ಪೌರುಷೇಯ ವಿದ್ಯೆಯನ್ನು ಹೇಳುತ್ತಿರುತ್ತಾನೆ. ಇನ್ನೊಬ್ಬ ಬ್ರಹ್ಮನು ವಿಷ್ಣುವಿನ ಅಂಶರೂಪವನ್ನೇ ಧ್ಯಾನ ಮಾಡುತ್ತಾನೆ." ಹೀಗೆ ಅನೇಕ ಬ್ರಹ್ಮರುಗಳ ಬಗ್ಗೆ ಶ್ರುತಿಯಿರುವುದರಿಂದ ಇಲ್ಲಿಯೂ ಭೇದವು ಸ್ಪಷ್ಟವಾಗಿಯೇ ತೋರುತ್ತದೆ.

'ಪರೇಣ ಪ್ರೇರಿತಾಃ ಸದಾ' (ಪರಮಾತ್ಮನಿಂದ ಸದಾ ಪ್ರೇರಿತರಾಗುತ್ತಾರೆ) ಎಂಬ ವಾಕ್ಯದಿಂದ, "ಸ ವಾ ಏಷ ಬ್ರಹ್ಮನಿಷ್ಠ ಇದಂ ಶರೀರಂ ಮರ್ತ್ಯಮತಿಸೃಜ್ಯ ಬ್ರಹ್ಮಾಭಿಸಂಪದ್ಯ ಬ್ರಹ್ಮಣಾ ಪಶ್ಯತಿ" (ಬ್ರಹ್ಮನಿಷ್ಠನಾದ ಉಪಾಸಕನು ಈ ಮರ್ತ್ಯಶರೀರವನ್ನು ತ್ಯಜಿಸಿ ಬ್ರಹ್ಮನನ್ನು ಅಂದರೆ ವಿಷ್ಣುವನ್ನು ಹೊಂದಿ ಅವನೊಡನೆ ನೋಡುತ್ತಾನೆ), "ಯಥೇಷ್ಟಂ ಪರಿವರ್ತಂತೇ ತಸ್ಯೈವಾನುಗ್ರಹೇರಿತಾಃ" (ಅವನ ಅನುಗ್ರಹದಿಂದ ಪ್ರೇರಿತರಾಗಿ ಯಥೇಷ್ಟವಾಗಿ ಸಂಚರಿಸುತ್ತಾರೆ) ಮುಂತಾದ ಶ್ರುತಿಗಳು ಉಲ್ಲೇಖಿಸಲ್ಪಟ್ಟಿವೆ.

'ಯತ್ಕಾಮ' ಎಂಬ ವಾಕ್ಯದಿಂದ "ನ ಹಾಸ್ಯ ಕರ್ಮ ಕ್ಷೀಯತೇಽಸ್ಮಾದ್ಧ್ಯೇವಾತ್ಮನೋ ಯದ್ಯತ್ಕಾಮಯತೇ ತತ್ತತ್ಸೃಜತೇ" ಎಂಬ ಶ್ರುತಿಯನ್ನು ಸಂಗ್ರಹಿಸಿದ್ದಾರೆ.

"ಈ ಮುಕ್ತನ ಕರ್ಮವು ಕ್ಷಯಹೊಂದುವುದಿಲ್ಲ. ಅವನು ಯಾವ ಯಾವುದನ್ನು ಅಪೇಕ್ಷಿಸುತ್ತಾನೋ ಆಯಾಯ ವಸ್ತುವನ್ನೂ ಕರ್ಮವನ್ನೂ ಆ ಪರಬ್ರಹ್ಮನ ಅನುಗ್ರಹದ ಮೂಲಕವೇ ಸೃಜಿಸುತ್ತಾನೆ" ಎಂಬುದು ಈ ಶ್ರುತಿಯ ಅರ್ಥ.

'ಸಹೈವ' ಎಂಬೀ ವಾಕ್ಯದಿಂದ "ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ" ಎಂಬ ಶ್ರುತಿಯನ್ನು ಸಂಗ್ರಹಿಸಿದ್ದಾರೆ. "ಆ ಮುಕ್ತನು ಬ್ರಹ್ಮನ ಸಹಿತನಾಗಿಯೇ ಸರ್ವಕಾಮಗಳನ್ನೂ ಬ್ರಹ್ಮನ ಅನುಗ್ರಹದಿಂದಲೇ ಭುಂಜಿಸುತ್ತಾನೆ" ಎಂದು ಈ ಶ್ರುತಿಯ ಅರ್ಥ.

'ನಿಸ್ತೀರ್ಣ ತದ್ಗುಣಃ' ಎಂಬುದರಿಂದ "ನಿಸ್ತೀರ್ಣೋಽಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ ಭವತಿ" (ಆಗ ಸಕಲ ಶೋಕಗಳನ್ನು ದಾಟಿದವನಾಗಿ ಅಂದರೆ ಮುಕ್ತನಾಗಿ ಹೃದಯನಾಮಕನಾದ ಪರಬ್ರಹ್ಮನ ದಾಸನಾಗುತ್ತಾನೆ) ಎಂಬ ಶ್ರುತಿಯನ್ನು ಸಂಗ್ರಹಿಸಲಾಗಿದೆ. 'ತದ್ಗುಣಃ' ಎಂದರೆ ಹೃದಯದ ಗುಣಗಳಾದ ದುಃಖ ಮುಂತಾದವುಗಳು.

ದುಃಖಾದೀಂಶ್ಚ ಪರಿತಜ್ಯ ಜಗದ್ವ್ಯಾಪಾರವರ್ಜಿತಃ ।

ಭುಂಕ್ತೇ ಭೋಗಾನ್ಸದೈವೋಚ್ಚಾನಿತ್ಯಾದ್ಯಾಗಮಮಾನತಃ ॥೪೦॥

ಮುಕ್ತಸ್ಯ ಭೇದಾವಗತೇಃ ಕಥಮೇವ ಹ್ಯಭಿನ್ನತಾ ।

'ದುಃಖಾದೀಂಶ್ಚ ಪರಿತ್ಯಜ್ಯ' ಎನ್ನುವ ವಚನದಿಂದ "ಜ್ಯೋತಿರ್ಮಯೇಷು ದೇಹೇಷು ಸ್ವೇಚ್ಛಯಾ ವಿಶ್ವಮೋಕ್ಷಿಣಃ। ಭುಂಜತೇ ಸುಸುಖಾನ್ಯೇವ ನ ದುಃಖಾದೀನ್ ಕದಾಚನ॥" (ಮುಕ್ತರು ಜ್ಯೋತಿರ್ಮಯ ದೇಹಗಳಲ್ಲಿ ಸ್ವೇಚ್ಛೆಯಿಂದ ಸುಖಗಳನ್ನೇ ಭೋಗಿಸುತ್ತಾರೆ, ದುಃಖಾದಿಗಳನ್ನು ಎಂದಿಗೂ ಭೋಗಿಸುವುದಿಲ್ಲ) ಎಂಬ ಬ್ರಹ್ಮವೈವರ್ತಪುರಾಣದ ವಾಕ್ಯವು ಸಂಗ್ರಹಿಸಲ್ಪಟ್ಟಿದೆ.

ಸ್ವಾಧಿಕ ಆನಂದದ ಪ್ರಾಪ್ತಿಯ ಬಗ್ಗೆಯೂ ಸೃಷ್ಟ್ಯಾದಿ ವ್ಯಾಪಾರದಲ್ಲಿಯೂ ಮುಕ್ತರಿಗೆ ಕಾಮನೆಯು ಇರುವುದೇ ಇಲ್ಲ. ಯಾವಾಗಲೂ ಉತ್ತಮವಾದ ಭೋಗಗಳನ್ನೇ ಅನುಭವಿಸುತ್ತಾರೆ. ಇವೇ ಮುಂತಾದ ಆಗಮ ಪ್ರಮಾಣಗಳಿಂದ ಮುಕ್ತನಿಗೆ ಈಶನಿಂದ ಭೇದವು ತಿಳಿದುಬರುತ್ತಿರಲು, ಜೀವೇಶ್ವರರಲ್ಲಿ ಅಭೇದವು ಹೇಗೆ ತಾನೆ ಸಾಧ್ಯ?

ಜೀವೇಶಯೋಃ ನಾನುಮಾ ಚ ತದಭೇದಂ ಪ್ರಮಾಪಯೇತ್ ॥೪೧॥

ಮಿಥ್ಯೈವ ಭೇದೋ ವಿಮತೋ ಭೇದತ್ವಾಚ್ಚಂದ್ರಭೇದವತ್ ।

ಇತಿ ಚೇತ್ಸಾಧ್ಯಧರ್ಮೋಽಯಂ ಸನ್ನಸನ್ವಾ ನ ವೋಭಯಮ್ ॥೪೨॥

ಅನುಮಾನವೂ ಜೀವೇಶ್ವರರ ಅಭೇದವನ್ನು ಯಥಾರ್ಥವಾಗಿ ತಿಳಿಸಲಾರದು. ಜೀವಬ್ರಹ್ಮರ ಭೇದವು ಮಿಥ್ಯೆಯು ಚಂದ್ರಭೇದದಂತೆ ಎಂದು ಹೇಳಿದರೆ, ಸಾಧ್ಯ ಧರ್ಮವಾದ ಈ ಭೇದಮಿಥ್ಯಾತ್ವವು ಸತ್ಯವೋ? ಅಸತ್ಯವೋ? ಅಥವಾ ಸದಸದ್ವಿಲಕ್ಷಣವೋ?

ಯದಿ ಸನ್ನಪಸಿದ್ಧಾಂತಃ ಸ ಏವಾಸನ್ನಿತೀರಿತೇ ।

ನೋಭಯಂ ಚೇನ್ನ ಸಿದ್ಧಂ ತತ್ ಇತಿ ಮಾನಸ್ಯ ದೂಷಣಮ್ ॥೪೩॥

ಸತ್ಯವೆಂಬ ಪಕ್ಷದಲ್ಲಿ ಅಪಸಿದ್ಧಾಂತವು. ಅಸತ್ಯವೆಂದು ಹೇಳಿದರೂ ಅದೇ ಅಪಸಿದ್ಧಾಂತವೇ. ಸತ್ಯವೂ ಅಲ್ಲ ಅಸತ್ಯವೂ ಅಲ್ಲ, ಸದಸದ್ವಿಲಕ್ಷಣ ಎಂಬ ಪಕ್ಷದಲ್ಲಿ ಆ ಸದಸದ್ವಿಲಕ್ಷಣವೆಂಬುದು ಸಿದ್ಧವೇ ಆಗಿಲ್ಲ. ಹೀಗೆ ಮಿಥ್ಯಾ ಶಬ್ದಾರ್ಥವನ್ನು ವಿಕಲ್ಪಿಸಿ ದೂಷಣವನ್ನು ಹೇಳತಕ್ಕದ್ದು.

ಹಾಗಾದರೆ 'ನ ಸಿದ್ಧಂ ತತ್' ಎಂದು ಹೇಳಿದ್ದು ಅಯುಕ್ತವು. ಏಕೆಂದರೆ ಪಕ್ಷೀಕರಿಸಲ್ಪಟ್ಟ ಭೇದದಲ್ಲಿಯೋ ಪ್ರಪಂಚದಲ್ಲಿಯೋ ಇಲ್ಲವೇ ಅವಿದ್ಯೆಯಲ್ಲಿಯೋ ಅಥವಾ ಶುಕ್ತಿರಜತಾದಿಗಳಲ್ಲಿಯೋ ಅನಿರ್ವಚನೀಯತ್ವವನ್ನು ಪ್ರಮಾಣದಿಂದ ಸಾಧನ ಮಾಡುವುದು ಶಕ್ಯವಾಗುವುದು ಎಂದು ಆಶಂಕಿಸಿದರೆ, ಅದನ್ನು 'ನ ಚ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ನ ಚ ಮಾನಾಂತರೇಣೈತಚ್ಛಕ್ಯಂ ಸಾಧಯಿತುಂ ಕ್ವಚಿತ್ ।

ಅನುಮಾನ್ಯೈವ ಚೇತ್ಸ್ಯೈವ ಹ್ಯನವಸ್ಥಾ ಭವಿಷ್ಯತಿ ॥೪೪॥

ಬೇರೆ ಪ್ರಮಾಣದಿಂದ ಈ ಅನಿರ್ವಚನೀಯತ್ವವನ್ನು ಎಲ್ಲಿಯೂ ಸಾಧಿಸುವುದು ಶಕ್ಯವಲ್ಲ. ಅನುಮಾನದಿಂದ ಸಾಧಿಸುವುದಾದರೆ ಅದೇ ಅನವಸ್ಥೆಯು ಆಗುವುದು.

ನ ಚಾಗಮಸ್ತದರ್ಥೋಽಸ್ತಿ ನಾಸದಾಸೀನ್ನ ತದ್ವದೇತ್ ।

ಪರಿಶೇಷಾದನಿರ್ವಾಚ್ಯಂ ಯದಿ ಸಿಧ್ಯೇತ್ಪರಾತ್ಮನಃ ॥೪೫॥

ಅನಿರ್ವಾಚ್ಯತ್ವಮೇವ ಸ್ಯಾತ್ಪರಿಶಿಷ್ಟೋ ಹ್ಯಸೌ ಸದಾ ।

ಅನಿರ್ವಾಚ್ಯಾರ್ಥಕವಾದ ಆಗಮವೂ ಇರುವುದಿಲ್ಲ. 'ನಾಸದಾಸೀತ್' ಇತ್ಯಾದಿ ಆಗಮವು ಅದನ್ನು ಹೇಳುವುದಿಲ್ಲ. ಪರಿಶೇಷದಿಂದ ಅನಿರ್ವಾಚ್ಯವು ಸಿದ್ಧಿಸುವುದು ಎಂದು ಹೇಳಿದರೆ, ಪರಮಾತ್ಮನಿಗೇ ಅನಿರ್ವಾಚ್ಯವು ಬರುತ್ತದೆ. ಏಕೆಂದರೆ ಪ್ರಲಯದಲ್ಲಿ ಅವನು ಅವಶಿಷ್ಟನಾಗಿರುತ್ತಾನೆ.

ನ ಚಾನ್ಯ ಆಗಮಸ್ತತ್ರ ಸದಸತ್ಪ್ರತಿಯೋಗಿನಿ ॥೪೬॥

ನ ಚ ಪ್ರತ್ಯಕ್ಷಮತ್ರಾಸ್ತಿ ನ ಚಾರ್ಥಾಪತ್ತಿರಿಷ್ಯತೇ ।

ಸತ್ಯ ಅಸತ್ಯ ಪ್ರತಿಯೋಗಿಯುಳ್ಳ ಅನಿರ್ವಾಚ್ಯತ್ವದ ಬಗ್ಗೆ ಬೇರೆ ಆಗಮ ಪ್ರಮಾಣವೂ ಇಲ್ಲ. ಈ ವಿಷಯದಲ್ಲಿ ಪ್ರತ್ಯಕ್ಷವೂ ಪ್ರಮಾಣವಾಗುವುದಿಲ್ಲ. ಹಾಗೂ ಅರ್ಥಾಪತ್ತಿಯು ಅನುಮಾನದಿಂದ ಬೇರೆಯಾದ ಪ್ರಮಾಣವೆಂದು ಅಂಗೀಕೃತವಲ್ಲ.

ಬಾಧಾಯೋಗಾತ್ಸತ ಇತಿ ಬಾಧಾಭಾವತ ಏವ ಹಿ ॥೪೭॥

ಇಷ್ಟಾಪತ್ತಿರ್ನ ಹಿ ಭ್ರಾಂತಾವಪಿ ಬಾಧೋವಗಮ್ಯತೇ ।

ವಿಷಯಸ್ಯ ಕುತೋ ಬಾಧೋ ವಿದ್ಯಮಾನಂ ಹಿ ಬಾಧ್ಯತೇ ॥೪೮॥

ನ ಹಿ ವಂಧ್ಯಾಸುತೋ ಬಾಧ್ಯೋ ಯಜ್ಞದತ್ತೋ ಹಿ ಬಾಧ್ಯತೇ ।

ಸತ್ಯಕ್ಕೆ ಬಾಧವಿಲ್ಲವಾದ್ದರಿಂದ ಇತ್ಯಾದಿಯಾಗಿ ಹೇಳಿದ ಅರ್ಥಾಪತ್ತಿಯು ಅನಿರ್ವಾಚ್ಯವನ್ನು ತಿಳಿಸಲು ಶಕ್ತವಲ್ಲ. ಏಕೆಂದರೆ ವಿಯದಾದಿ ಪ್ರಪಂಚಕ್ಕೆ ಬಾಧವು ಸಂಭವಿಸದು. ಆದ್ದರಿಂದಲೇ ಸತ್ಯಕ್ಕೆ ಬಾಧವಿಲ್ಲದಾಗಲೆಂಬುದು ಇಷ್ಟಾಪತ್ತಿಯು. ಭ್ರಾಂತಿಯಲ್ಲಿಯೂ ಬಾಧವು ಯಾವುದರಿಂದ ತಿಳಿಯಲ್ಪಡುವುದು? ಪೂರ್ವದಲ್ಲಿ ಇರುವಂಥಹುದೇ ಬಾಧ ಹೊಂದಲು ಅರ್ಹವು. ಬಂಜೆಯ ಮಗನು ಬಾಧಿಸಲ್ಪಡುವುದಿಲ್ಲ. ಏಕೆಂದರೆ ಅವನು ಇರುವುದೇ ಇಲ್ಲ. ಆದರೆ ಯಜ್ಞದತ್ತನೆಂಬ ಮನುಷ್ಯನು ಬಾಧ್ಯನು.

ಬಾಧಾಯೋಗಾತ್ಸತ ಇತಿ ವ್ಯಾಪ್ತಿರೇಷಾ ಕ್ವ ದೃಶ್ಯತೇ ॥೪೯॥

ಸತ್ತಿಗೆ ಬಾಧವು ಕೂಡದಿರುವುದರಿಂದ ಬಾಧ್ಯಮಾನವಾದ ಈ ಜಗತ್ತು ಸತ್ತಲ್ಲ ಎನ್ನುವ ಅನುಮಾನದಲ್ಲಿ 'ಯತ್ಸತ್ತನ್ನ ಬಾಧ್ಯತೇ' (ಯಾವುದು ಸತ್ತೋ ಅದು ಬಾಧಿಸಲ್ಪಡುವುದಿಲ್ಲ) ಎಂಬ ವ್ಯಾಪ್ತಿಯು ಎಲ್ಲಿ ಕಂಡುಬರುತ್ತದೆ?

ಹೀಗೆ ವಿನಾಶರೂಪ ಬಾಧವನ್ನು ಸಿದ್ಧೀಕರಿಸಿ, ಶುಕ್ತಿರಜತಾದಿಗಳಲ್ಲಿಯೂ ವಿಯದಾದಿಗಳಲ್ಲಿಯೂ ಬಾಧಕ್ಕೆ ಅಸಿದ್ಧಿಯನ್ನು ಹೇಳಲಾಯಿತು. ಈಗ ಆ ಅಸಿದ್ಧಿಯನ್ನೇ ವಿವರಿಸಲು ಬಾಧಸ್ವರೂಪವನ್ನು ಕುರಿತು ಪರನನ್ನು ಪ್ರಶ್ನಿಸುತ್ತಾರೆ –

ಕಶ್ಚಾಯಂ ಬಾಧ ಉದ್ದಿಷ್ಟೋ ನ ಹಿ ನಾಶೋ ಸತೋ ಭವೇತ್ ।

ನಿವೃತ್ತಿಶ್ಚಾಪ್ರವೃತ್ತಸ್ಯ ಕಥಮೇವೋಪಪದ್ಯತೇ ॥೫೦॥

ವಿಯದಾದಿಗಳಿಗೂ ಶುಕ್ತಿರಜತಾದಿಗಳಿಗೂ ಸತ್ತ್ವಾಭಾವದ ಸಿದ್ಧಿಗೋಸ್ಕರ ನೀನು ಹೇಳುವ ಈ ಬಾಧವು ಯಾವುದು? ಅದು ಜ್ಞಾನದಿಂದ ನಾಶವೋ, ನಿವೃತ್ತಿಯೋ ಅಥವಾ ಕಾಲತ್ರಯದಲ್ಲಿಯೂ ಸತ್ತಿನ ನಿಷೇಧವೋ? ಅಸತ್ತಿಗೆ ನಾಶವು ಆಗುವುದೇ

ಇಲ್ಲ. ಏಕೆಂದರೆ ಸ್ವರೂಪದ ಇಲ್ಲದಿರುವಿಕೆಯಾಗುವುದೇ ವಿನಾಶ. ಆದರೆ ಅಸತ್ತಿಗೆ ಸ್ವರೂಪವೇ ಇರುವುದಿಲ್ಲ. ಇಲ್ಲದಿರುವುದಕ್ಕೆ ವಿನಾಶವೆಂಬುದರಲ್ಲಿ ಅರ್ಥವೇ ಇಲ್ಲ. ಇನ್ನು ಪ್ರವೃತ್ತಿ ಇರುವುದಕ್ಕೆ ಮಾತ್ರ ನಿವೃತ್ತಿ ಎಂಬುದು ಕೂಡುವುದು. ಪ್ರವೃತ್ತಿಯೇ ಇಲ್ಲದಿರುವ ಅಸತ್ತಿಗೆ ನಿವೃತ್ತಿಯಾದರೂ ಹೇಗೆ ಕೂಡುವುದು?

ನಾಸೀದಸ್ತಿ ಭವಿಷ್ಯಚ್ಚ ತದಿತಿ ಜ್ಞಾನಮೇಯತಾ ।

ಯದಿ ಬಾಧಸ್ತದಾ ಸತ್ತ್ವಂ ತೇನೈವಾಂಗೀಕೃತಂ ಪುನಃ ॥೫೧॥

ಇಷ್ಟು ಹೊತ್ತಿನವರೆಗೆ ಯಾವುದು ತೋರಿತೋ ಅದು ಈ ಹಿಂದೆ ಇದ್ದಿರಲಿಲ್ಲ, ಈಗ ಇಲ್ಲ, ಮುಂದೆಯೂ ಇರುವುದಿಲ್ಲ ಎಂಬ ತ್ರೈಕಾಲಿಕ ಸತ್ವನಿಷೇಧರೂಪ ಜ್ಞಾನಕ್ಕೆ ವಿಷಯವಾಗುವುದು ಬಾಧವೆಂಬ ಪಕ್ಷದಲ್ಲಿ, ಆಗ ಅಸದ್ವೈಲಕ್ಷಣ್ಯವನ್ನು ಅಂಗೀಕರಿಸುವ ಅವನಿಂದಲೇ ಅಸತ್ಯವು ಪುನಃ ಅಂಗೀಕರಿಸಿದಂತಾಗುವುದು. ಅಲ್ಲದೆ ಸತ್ತಾಭಾವವನ್ನು ಬಿಟ್ಟು ಬೇರೆಯಾದ ಅಸತ್ವವೆಂಬುದು ಸಿದ್ಧವಾಗಿಲ್ಲ.

ಪ್ರತೀತಿರ್ನಾಸತ ಇತಿ ವದನ್ನಂಗೀಕರೋತಿ ತಾಮ್ ।

ನಿಷೇಧೋ ಹ್ಯಪ್ರತೀತಸ್ಯ ಕಥಂಚಿನ್ನೋಪಪದ್ಯತೇ ॥೫೨॥

ಅಸತ್ತಿಗೆ ಪ್ರತೀತಿಯಿಲ್ಲವೆಂದು ಹೇಳುವವನೇ ಅಸತ್ಯಕ್ಕೆ ಪ್ರತೀತಿಯನ್ನು ಅಂಗೀಕರಿಸಿರುತ್ತಾನೆ. ಏಕೆಂದರೆ ಭೂತಲವಾಗಲೀ ಘಟವಾಗಲೀ ಪ್ರತೀತವೇ ಆಗದಿದ್ದರೆ, ಭೂತಲದಲ್ಲಿ ಘಟವು ಇಲ್ಲ ಎಂಬುದಾಗಿ ನಿಷೇಧವು ಎಲ್ಲಿಯೂ ಕಂಡುಬರುವುದಿಲ್ಲ. ಹೀಗೆ ಮನಸ್ಸಿನಲ್ಲಿ ಅಸತ್ತಿಗೆ ಪ್ರತೀತಿಯನ್ನು ಒಪ್ಪುವುದು, ವಚನದಲ್ಲಿ ಅಸತ್ಪ್ರತೀತಿಯ ನಿಷೇಧವು, 'ಮೂಕೋऽಹಂ' ಎಂಬಂತೆ ಸ್ವಕ್ರಿಯಾ ವಿರೋಧವೆನಿಸುವುದು.

ಹೀಗೆ ಅರ್ಥಾಪತ್ತಿಯನ್ನು ನಿರಾಕರಿಸಿ ಉಪಮಾನವನ್ನೂ ನಿರಾಕರಿಸುತ್ತಾರೆ –

ನ ಚೋಪಮಾ ಭವೇದತ್ರ ಪ್ರತ್ಯಕ್ಷಾತ್ಸತ್ತ್ವಮೇವ ಚ ।

ಶಾಸ್ತ್ರಗಮ್ಯಪರೇಶಾನಾದ್ಭೇದಃ ಸ್ವಾತ್ಮನ ಈಯತೇ ॥೫೩॥

ಈ ವಿಷಯದಲ್ಲಿ ಉಪಮಾನವೂ ಪ್ರಮಾಣವಾಗಲಾರದು. ವಿಯದಾದಿಗಳಿಗೆ ಸತ್ವವೇ ಹಾಗೂ ಶುಕ್ತಿರಜತಾದಿಗಳಿಗೆ ಅಸತ್ವವೇ ಪ್ರತ್ಯಕ್ಷದಿಂದ ನಿಶ್ಚಿತವಾಗುತ್ತದೆ. ಶಾಸ್ತ್ರದಿಂದಲೇ ಗಮ್ಯನಾದ ಪರಮೇಶ್ವರನಿಂದ ತನಗೆ ಭೇದವೆಂಬುದು ಪ್ರತ್ಯಕ್ಷದಿಂದ ತಿಳಿಯಲ್ಪಡುತ್ತದೆ.

ಆದರೂ ಭೇದಮಿಥ್ಯಾತ್ವಾನುಮಾನಕ್ಕೆ ಬಾಧವು ಹೇಗೆ? ಏಕೆಂದರೆ ಭೇದವನ್ನು ಗ್ರಹಿಸುವ ಪ್ರತ್ಯಕ್ಷಕ್ಕೆ ಪ್ರಾಬಲ್ಯವನ್ನು ನಿರೂಪಿಸಿಲ್ಲವೆಂದು ಆಕ್ಷೇಪಿಸಿದರೆ –

ಅನುಭೂತಿವಿರೋಧೇನ ಕಥಮೇಕತ್ವಮುಚ್ಯತೇ ।

ಕಿಂಚಿತ್ಕರ್ತಾ ಚ ದುಃಖೀತಿ ಸರ್ವೈರೇವಾನುಭೂಯತೇ ।।೫೪।।

ಸರ್ವಜ್ಞೋ ಭಗವಾನ್ವಿಷ್ಣುಃ ಸರ್ವಶಕ್ತಿರಿತಿ ಶ್ರುತಃ ।

ಅನುಭೂತಾದ್ಧಿ ಭೇದೇನ ಶ್ರುತಿರೇಷಾ ವದತ್ಯಮುಮ್ ।।೫೫।।

ಸಾಕ್ಷಿರೂಪ ಅನುಭವ ವಿರೋಧವಿರುವುದರಿಂದ ಜೀವೇಶ್ವರ ಐಕ್ಯವು ಹೇಗೆ ಹೇಳಲ್ಪಡುತ್ತದೆ? ನಾನು ಕಿಂಚಿತ್ ಕರ್ತನು, ದುಃಖಿಯು, ಅಲ್ಪಜ್ಞನು ಹಾಗೂ ಅಲ್ಪಶಕ್ತನು ಹೀಗೆ ಎಲ್ಲರಿಗೂ ಅನುಭವಕ್ಕೆ ಗೋಚರವಾಗಿದೆ. ಭಗವಾನ್ ವಿಷ್ಣುವು ಸರ್ವಜ್ಞನು, ಸರ್ವಶಕ್ತನು ಎಂಬುದಾಗಿ 'ಯಃ ಸರ್ವಜ್ಞಃ, ಪರಾಸ್ಯ ಶಕ್ತಿಃ, ಸ ಹಿ ಸರ್ವಸ್ಯ ಕರ್ತಾ, ನಿರವಿಷ್ಟಃ' ಇತ್ಯಾದಿ ಶ್ರುತಿಗಳಲ್ಲಿ ಹೇಳಲ್ಪಟ್ಟಿದ್ದಾನೆ. ಹೀಗೆ ಶ್ರುತಿಯು ಈ ಪರಮಾತ್ಮನನ್ನು ಅಲ್ಪಜ್ಞತ್ವಾದಿ ಅನುಭೂತಿಯುಳ್ಳ ಜೀವನಿಂದ ಭಿನ್ನವಾಗಿಯೇ ಪ್ರತಿಪಾದಿಸುತ್ತದೆ.

ಹೀಗೆ ಅನುಮಾನವನ್ನು ನಿರಾಕರಿಸಿ, ಈಗ 'ತದ್ಯೋಹಂ' ಇತ್ಯಾದಿ ಶ್ರುತಿಯನ್ನು 'ಉಪಜೀವ್ಯ' ಎಂಬ ವಾಕ್ಯದಿಂದ ನಿರಾಕರಿಸುತ್ತಾರೆ –

ಉಪಜೀವ್ಯವಿರುದ್ಧಂ ತು ಕಥಮೈಕ್ಯಂ ಶ್ರುತಿರ್ವದೇತ್ ।

ಅಪ್ರಾಮಾಣ್ಯಂ ಯದಾ ಭೇದವಾಚಕಸ್ಯ ಭವಿಷ್ಯತಿ ।।೫೬।।

ಸ ಏವ ಧರ್ಮಿಣೋ ಗ್ರಾಹೀ ತದಭೇದಃ ಕಥಂ ಭವೇತ್ ।

ಉಪಜೀವ್ಯ ಪ್ರಮಾಣ ವಿರುದ್ಧವಾದ ಜೀವಬ್ರಹ್ಮರ ಐಕ್ಯವನ್ನು ಶ್ರುತಿಯು ಹೇಗೆ ಹೇಳೀತು? ಭೇದಪ್ರತಿಪಾದಕ ಆಗಮ ಪ್ರತ್ಯಕ್ಷಗಳಿಗೆ ಯಾವಾಗ ಅಪ್ರಾಮಾಣ್ಯವು ಬರುವುದೋ ಆಗ ಭೇದವನ್ನು ಬೋಧಿಸುವ ಆ ಆಗಮವಾಗಲೀ ಪ್ರತ್ಯಕ್ಷವಾಗಲೀ ಧರ್ಮಿಸ್ವರೂಪರಾದ ಜೀವನನ್ನೂ ಈಶ್ವರನನ್ನೂ ಗ್ರಹಿಸಬೇಕಾಗುವುದು. ಆದ್ದರಿಂದ ಜೀವೇಶ್ವರ ಐಕ್ಯವನ್ನು ಹೇಗೆ ತಾನೆ ಬೋಧಿಸಲು ಅರ್ಹವಾಗುವುದು?

ಯತ್ಸ್ವರೂಪಗ್ರಹೇ ಮಾನಂ ತದ್ಧರ್ಮೇ ನ ಕಥಂ ಭವೇತ್ ।।೫೭।।

ಯಾವ ಶ್ರುತಿವಾಕ್ಯವು ಧರ್ಮಿಸ್ವರೂಪವನ್ನು ಗ್ರಹಿಸುವುದರಲ್ಲಿ ಪ್ರಮಾಣವಾಗಿ ಅಂಗೀಕರಿಸಲ್ಪಡುವುದೋ ಅದು ಆ ಧರ್ಮಿಯ(ಬ್ರಹ್ಮನ) ಸಾರ್ವಜ್ಞಾದಿ ಧರ್ಮದ ಬಗ್ಗೆ ಹೇಗೆ ಪ್ರಮಾಣವಾಗಲಾರದು?

ಏಕವಿಜ್ಞಾನವಿಜ್ಞಪ್ತ್ಯಾ ದ್ವಯಂ ಮಾನಂ ಭವಿಷ್ಯತಿ ।

ನ ಚೇದೇಕಂ ಪ್ರಮಾಣಂ ತದ್ದ್ವಯಮಪ್ಯತ್ರ ನೋ ಭವೇತ್ ।।೫೮।।

'ಯಃ ಸರ್ವಜ್ಞಃ' ಇತ್ಯಾದಿ ಶ್ರುತಿಗಳಿಂದುಂಟಾದ ವಿಜ್ಞಾನವು ಏಕವಿಧವೇ ಆಗಿದೆ. ಶುಕ್ತಿರಜತಜ್ಞಾನದಂತೆ ಸ್ವರೂಪಮಾತ್ರದಲ್ಲಿ ಪ್ರಮಾಣವೂ ವಿಶಿಷ್ಟಾಕಾರದಲ್ಲಿ ಅಪ್ರಮಾಣವೂ ಎಂದು ಅನೇಕ ವಿಧವಲ್ಲ. ಸಾಕ್ಷಿಸಹಕೃತವಾದ ಈ ಜ್ಞಾನವು ಧರ್ಮ-ಧರ್ಮಿರೂಪವಾದ ವಿಶಿಷ್ಟಾಕಾರದ ಬಗ್ಗೆಯೂ ಪ್ರಮಾಣವಾಗುವುದು. ಆ ಶ್ರುತಿಜನ್ಯ ಜ್ಞಾನವು ವಿಶಿಷ್ಟಾಕಾರವನ್ನು ಕುರಿತು ಪ್ರಮಾಣವಾಗದಿದ್ದರೆ ಸ್ವರೂಪದ ಬಗ್ಗೆಯೂ ಪ್ರಮಾಣವಾಗಲಾರದು.

ಧರ್ಮಿಗ್ರಾಹಿವಿರೋಧಸ್ತು ತಸ್ಮಾನ್ಮಾನಸ್ಯ ದೂಷಣಮ್ ।

ನೋಪಜೀವ್ಯೋ ಹ್ಯಭೇದೋಽತ್ರ ಕ್ವಚಿದ್ಭೇದಶ್ರುತೇರ್ಬಲಾತ್ ।।೫೯।।

ಆದ್ದರಿಂದ ಅಭೇದಗ್ರಾಹಕ ಅನುಮಾನ ಆಗಮಗಳಿಗೆ ಧರ್ಮಿಗ್ರಾಹಕ ಶ್ರುತಿ ವಿರೋಧವು ಬಂದೇ ಬರುತ್ತದೆ. ಅಭೇದಗ್ರಾಹಕ ಆಗಮವು ಧರ್ಮಿತ್ವಾದಿ ವಿಷಯದಲ್ಲಿ ಯಾವ ವಿಧದಿಂದಲೂ ಭೇದಶ್ರುತಿಗೆ ಉಪಜೀವ್ಯವಾಗುವುದಿಲ್ಲ. ಭೇದಗ್ರಾಹಕ ಶ್ರುತಿಗೆ ನಿರಪೇಕ್ಷತ್ವರೂಪ ಬಲದಿಂದಲೇ ಅಭೇದ ಪ್ರಮಾಣ ಬಾಧಕತ್ವವು ಕೂಡುತ್ತದೆ.

ಆದರೂ 'ಯಃ ಸರ್ವಜ್ಞಃ' ಇತ್ಯಾದಿ ಶ್ರುತಿಯು ಜೀವಭೇದಕ ಧರ್ಮದಿಂದ ವಿಶಿಷ್ಟನಾದ ಈಶ್ವರನನ್ನು ಪ್ರತಿಪಾದಿಸುವುದಿಲ್ಲ. ಕೇವಲ ಅನುವಾದ ಮಾಡುತ್ತದೆ. ಆದ್ದರಿಂದ ಅಭೇದಸಾಧಕ ಅನುಮಾನಗಳಿಗೆ ಬಾಧವಿಲ್ಲವೆಂಬ ಆಕ್ಷೇಪ ಬಂದರೆ ಅದನ್ನು 'ನ ಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಾರೆ –

ನ ಚ ಮಾನಾಂತರೋಪೇಯಂ ಬ್ರಹ್ಮ ತದ್ಭವತಿ ಕ್ವಚಿತ್ ।

ಯೇನ ಮಾನೇನ ಚೋಪೇಯಂ ಭೇದಸ್ತೇನಾವಗಮ್ಯತೇ ।।೬೦।।

ಸರ್ವಜ್ಞಾನುಮಯೈವೇಶೋ ಯದ್ಯುಪೇಯಃ ಕಥಂಚನ ।

ಸರ್ವಜ್ಞತ್ವಗುಣೇನೈವ ತಯಾ ಭೇದೋಽವಗಮ್ಯತೇ ।।೬೧।।

ಸರ್ವಜ್ಞತ್ವಾದಿಗಳಿಂದ ಕೂಡಿದ ಬ್ರಹ್ಮನು ಎಲ್ಲಿಯೂ ಪ್ರಮಾಣಾಂತರದಿಂದ ವೇದ್ಯನಾಗುವುದಿಲ್ಲ. ಬ್ರಹ್ಮನು ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತಾನೋ ಅದೇ ಪ್ರಮಾಣದಿಂದ ಭೇದವೂ ತಿಳಿದುಬರುತ್ತದೆ. ಸರ್ವಜ್ಞತ್ವ ಸಾಧಕ ಅನುಮಾನದಿಂದಲೇ ಈಶ್ವರನು ಕಥಂಚಿತ್ತಾಗಿ ವೇದ್ಯನೆಂದು ಹೇಳುವ ಪಕ್ಷದಲ್ಲಿ, ಅದೇ ಅನುಮಾನದಿಂದಲೇ ಸರ್ವಜ್ಞತ್ವಾದಿ ಗುಣಗಳಿಂದ ಭೇದವು ತಿಳಿದು ಬರುತ್ತದೆ.

ಹೀಗೆ ಈಶ್ವರನನ್ನು ಪ್ರತಿಪಾದಿಸುವ ಶ್ರುತಿಗೆ ಸರ್ವಜ್ಞತ್ವಾದಿ ಭೇದಕ ಧರ್ಮ

ಸಹಿತವಾದ ಈಶ್ವರನ ಬಗ್ಗೆ ಪ್ರಾಮಾಣ್ಯವನ್ನು ಉಪಪಾದಿಸಲಾಯಿತು. ಈಗ ಜೀವನನ್ನು ಗ್ರಹಿಸುವ ಪ್ರತ್ಯಕ್ಷಕ್ಕೆ ಈಶ್ವರನಿಂದ ಭೇದವನ್ನು ತಿಳಿಸುವ ಅಲ್ಪಜ್ಞತ್ವಾದಿ ಧರ್ಮವುಳ್ಳ ಜೀವನ ವಿಷಯದಲ್ಲಿ ಪ್ರಾಮಾಣ್ಯವನ್ನು ಸಮರ್ಥಿಸುತ್ತಾರೆ.

ನ ದುಃಖಾನುಭವಃ ಕ್ವಾಪಿ ಮಿಥ್ಯಾನುಭವತಾಂ ವ್ರಜೇತ್ ।

ನ ಹಿ ಬಾಧಃ ಕ್ವಚಿದ್ದೃಷ್ಟೋ ದುಃಖಾದ್ಯನುಭವಸ್ಯ ತು ॥೬೨॥

ಯದಿ ದುಃಖಾನುಭೂತಿಶ್ಚ ಭ್ರಾಂತಿರಿತ್ಯವಸೀಯತೇ ।

ಅದುಃಖಿತಾಶ್ರುತಿಃ ಕೇನ ನ ಭ್ರಾಂತಿರಿತಿ ಗಮ್ಯತೇ ॥೬೩॥

ಜೀವನ ದುಃಖಾನುಭವಾದಿಗಳು ಎಂದಿಗೂ ಮಿಥ್ಯಾನುಭವರೂಪತ್ವವನ್ನು ಹೊಂದುವುದೇ ಇಲ್ಲ. ಏಕೆಂದರೆ ಅದಕ್ಕೆ ಎಲ್ಲಿಯೂ ಯಾವುದೇ ರೀತಿಯಿಂದಲೂ ಬಾಧವು ಕಂಡಿರುವುದೇ ಇಲ್ಲ. ಒಂದು ಪಕ್ಷ ದುಃಖಾದ್ಯನುಭವವು ಭ್ರಾಂತಿಯೆಂದು ಶ್ರುತಿಬಲದಿಂದ ನಿಶ್ಚಯವಾಗುವುದಾದರೆ, ದುಃಖಾಭಾವವನ್ನು ಹೇಳುವ ಶ್ರುತಿಯು ಕೂಡ ಭ್ರಾಂತಿಯಲ್ಲವೆಂದು ಹೇಗೆ ನಿರ್ಣಯಿಸಲ್ಪಡುತ್ತದೆ?

ಶ್ರುತಿಸ್ವರೂಪಮರ್ಥಶ್ಚ ಮಾನೇನೈವಾವಸೀಯತೇ ।

ತಚ್ಚೇನ್ಮಾನಂ ಗೃಹೀತಂ ತೇ ಕಿಂ ದುಃಖಾನುಭವೇ ಭ್ರಮಃ ॥೬೪॥

ಶ್ರುತಿಯ ಸ್ವರೂಪವೂ ಅರ್ಥವೂ ಸಾಕ್ಷಿರೂಪ ಪ್ರಮಾಣದಿಂದಲೇ ನಿರ್ಣಯ ಮಾಡಲ್ಪಡುತ್ತದೆ. ಆ ಪ್ರಮಾಣವು ನಿನ್ನಿಂದ ಅಂಗೀಕರಿಸಲ್ಪಡುವುದಾದರೆ, ದುಃಖಾನುಭವವು ಸಾಕ್ಷಿಯಿಂದಲೇ ತಿಳಿದುಬರುವುದರಿಂದ ಅದು ಭ್ರಮೆಯಾಗಲು ಹೇಗೆ ಸಾಧ್ಯ?

ನ ಚ ಬಾಧವಿಶೇಷೋಽಸ್ತಿ ಯದಬಾಧಿತಮೇವ ತತ್ ।

ಬಾಧೋ ಯದ್ಯನುಭೂತೇಽರ್ಥೇ ಕಥಂ ನಿರ್ಣಯ ಈಯತೇ ॥೬೫॥

ದುಃಖಾನುಭವಕ್ಕೆ ಬಾಧರೂಪ ವಿಶೇಷವಿಲ್ಲ. ಯಾವುದು ಅಬಾಧಿತವೋ ಅದು ಸತ್ಯವೇ ಎಂದು ಅಂಗೀಕರಿಸತಕ್ಕದ್ದು. ಸಾಕ್ಷಿಪ್ರತೀತ ಅರ್ಥದಲ್ಲಿ ಬಾಧವು ಬರುವುದಾದರೆ, ಆಗ ಪದಾರ್ಥಗಳ ನಿರ್ಣಯವು ಹೇಗೆ ಅಂಗೀಕರಿಸಲ್ಪಡುತ್ತದೆ?

ಕೋಽಪಿ ಹ್ಯರ್ಥೋ ನ ನಿಶ್ಚೇತುಂ ಶಕ್ಯತೇ ಭ್ರಮವಾದಿನಾ ।

ಭ್ರಮತ್ವಮಭ್ರಮತ್ವಂ ಚ ಯದ್ವೈವಾನುಭವೋಪಗಮ್ ॥೬೬॥

ಏಕಸ್ಯ ಭ್ರಮತಾ ತತ್ರ ಪರಸ್ಯಾಭ್ರಮತಾ ಕುತಃ ।

ಭ್ರಮತ್ವಮಭ್ರಮತ್ವಂ ಚ ಸರ್ವಂ ವೇದ್ಯಂ ಹಿ ಸಾಕ್ಷಿಣಾ ।।೬೭।।

ಕೆಲವು ಸಂದರ್ಭದಲ್ಲಿ ಸಾಕ್ಷಿಗೂ ಭ್ರಾಂತಿ ಸ್ವರೂಪತ್ವವನ್ನು ಹೇಳುವ ಪಕ್ಷದಲ್ಲಿ ಯಾವುದೇ ಪದಾರ್ಥವೂ ನಿರ್ಣಯಿಸಲಿಕ್ಕೆ ಶಕ್ಯವಾಗುವುದಿಲ್ಲ. ವಸ್ತುನಿರ್ಣಯವು ಜ್ಞಾನಗಳಲ್ಲಿನ ಭ್ರಮತ್ವ ಅಭ್ರಮತ್ವಗಳ ನಿರ್ಣಯದ ಅಧೀನವು. ಈ ಭ್ರಮತ್ವ ಅಭ್ರಮತ್ವಗಳ ನಿರ್ಣಯವು ಸಾಕ್ಷಿರೂಪ ಅನುಭವದ ಅಧೀನವು. ಆದ್ದರಿಂದ ಆ ಜ್ಞಾನಗಳಲ್ಲಿ ಒಂದು ಜ್ಞಾನಕ್ಕೆ ಭ್ರಮತ್ವವು, ಇನ್ನೊಂದು ಜ್ಞಾನಕ್ಕೆ ಅಭ್ರಮತ್ವವು ಯಾವುದರಿಂದ ನಿರ್ಣಯಿಸಲ್ಪಡತಕ್ಕದ್ದು? ಏಕೆಂದರೆ ಜ್ಞಾನಗಳ ಭ್ರಮತ್ವ ಅಭ್ರಮತ್ವಗಳು ಹಾಗೂ ಅವುಗಳ ನಿಶ್ಚಯಕ್ಕೆ ಉಪಯುಕ್ತವಾದ ಕರಣದೋಷ ಮುಂತಾದವವೂ ಕೂಡ ಸಾಕ್ಷಿಯಿಂದಲೇ ನಿಶ್ಚಯವಾಗತಕ್ಕವು.

ಸ ಚೇತ್ಸಾಕ್ಷೀ ಕ್ವಚಿದ್ದುಷ್ಟಃ ಕಥಂ ನಿರ್ಣಯ ಈಯತೇ ।

ವಿಶೇಷಾಃ ಸರ್ವ ಏವೈತೇ ಸಾಕ್ಷಿಪ್ರತ್ಯಕ್ಷಗೋಚರಾಃ ।।೬೮।।

ಆ ಸಾಕ್ಷಿಯು ಕೆಲವು ದುಃಖಾದಿ ವಿಷಯಗಳಲ್ಲಿ ಅಯಥಾರ್ಥವಾದರೆ, ಹೇಗೆ ತಾನೆ ವಸ್ತುನಿರ್ಣಯವು ಅಂಗೀಕರಿಸಲ್ಪಡುತ್ತದೆ? ಏಕೆಂದರೆ ಭ್ರಮತ್ವ ಅಭ್ರಮತ್ವ ಅಥವಾ ಕರಣದೋಷಾದಿ ವಿಶೇಷಗಳೆಲ್ಲವೂ ಸಾಕ್ಷಿಪ್ರತ್ಯಕ್ಷಕ್ಕೆ ಗೋಚರವಾಗುವ ವಿಷಯಗಳು.

ಊರೀಕೃತ್ಯ ಚ ತಾನ್ಸರ್ವಾನ್ ವ್ಯವಹಾರಃ ಪ್ರವರ್ತತೇ ।

ಸಾಕ್ಷಿಣೋ ವ್ಯವಸಾಯೀ ತು ವ್ಯವಹಾರೋಽಭಿಧೀಯತೇ ।।೬೯।।

ಕರಣದೋಷ ಮುಂತಾದ ಎಲ್ಲ ವಿಶೇಷಗಳನ್ನು ನಿಶ್ಚಯಿಸಿಯೇ ಎಲ್ಲ ವ್ಯವಹಾರವೂ ನಡೆಯುತ್ತದೆ. ಯಾವ ಸಂಶಯ ವಿಸಂವಾದಗಳಿಗೂ ಕಾರಣವಾಗದ ವ್ಯವಹಾರವು ಸಾಕ್ಷಿಯ ಕಾರ್ಯವೆಂದೇ ಹೇಳಲ್ಪಡುತ್ತದೆ.

ತಸ್ಮಾತ್ಸರ್ವಪ್ರಸಿದ್ಧಸ್ಯ ವ್ಯವಹಾರಸ್ಯ ಸಿದ್ಧಯೇ ।

ಸಾಕ್ಷೀ ನಿರ್ದೋಷ ಏವೈಕಃ ಸದಾಽಂಗೀಕಾರ್ಯ ಏವ ನಃ ।।೭೦।।

ಆದ್ದರಿಂದ ಸರ್ವಪ್ರಸಿದ್ಧವಾದ ವ್ಯವಹಾರದ ಸಿದ್ಧಿಗಾಗಿ ಸಾಕ್ಷಿಯೊಂದೇ ಸದಾ ನಿರ್ದೋಷವೆಂದು ನಾವು ಅಂಗೀಕರಿಸಲೇ ಬೇಕು.

ಶುದ್ಧಃ ಸಾಕ್ಷೀ ಯದಾ ಸಿದ್ಧೋ ದುಃಖಿತ್ವಂ ವಾರ್ಯತೇ ಕಥಮ್ ।

ಉಪಜೀವ್ಯಪ್ರಮಾಣಂ ತದ್ಭೇದಗ್ರಾಹಕಮೇವ ಹಿ ।।೭೧।।

ಅತೋ ಜೀವೇಶಯೋರ್ಭೇದಃ ಶ್ರುತಿಸಾಮರ್ಥ್ಯಸುಸ್ಥಿರಃ ।

ನಿರ್ದುಷ್ಟವಾದ ಸಾಕ್ಷಿಯು ಸಿದ್ಧವಾದ ಮೇಲೆ ಸಾಕ್ಷಿಪ್ರತೀತ ದುಃಖಿತ್ವವು ಹೇಗೆ ನಿವಾರಿಸಲ್ಪಡುವುದು? ಶ್ರುತ್ಯನುಮಾನಗಳ ಉಪಜೀವ್ಯ ಪ್ರಮಾಣವಾದ ಸಾಕ್ಷಿಯು ಭೇದಗ್ರಾಹಕ ಪ್ರಮಾಣವೇ ಆಗಿದೆ. ಆದ್ದರಿಂದ ಶ್ರುತಿಸಾಮರ್ಥ್ಯದಿಂದ (ಭೇದಶ್ರುತಿಗೆ ವಿರುದ್ಧಾರ್ಥವನ್ನು ಪ್ರತಿಪಾದಿಸುವ ಪ್ರಮಾಣಗಳ ಅಭಾವದಿಂದ ಪಡೆದ ಸಾಮರ್ಥ್ಯದಿಂದ) ಜೀವೇಶ್ವರರ ಭೇದವು ಸುದೃಢವಾದುದು.

ಹೀಗೆ ಜೀವೇಶ್ವರರಲ್ಲಿ ಭೇದವೇ ಪಾರಮಾರ್ಥಿಕವೆಂದು ವ್ಯವಸ್ಥಿತವಾದರೆ 'ತತ್ವಮಸಿ' ಇತ್ಯಾದಿ ಅಭೇದ ಶ್ರುತಿಗಳಿಗೂ, 'ಅಹಂ ಹರಿಃ' ಇತ್ಯಾದಿ ಸ್ಮೃತಿಗಳಿಗೂ ಗತಿ ಯಾವುದು? ಆ ಶ್ರುತಿಸ್ಮೃತಿಗಳಿಗೆ ಸರ್ವಥಾ ಅಪ್ರಾಮಾಣ್ಯವು ಯುಕ್ತವಾಗದು. ಏಕೆಂದರೆ ಶ್ರುತಿಯು ಅಪೌರುಷೇಯವು, ಸ್ಮೃತಿಯು ಆಪ್ತೋಕ್ತವು. ಹೀಗಿರುವಾಗ ಅವುಗಳಿಗೆ ಅಪ್ರಾಮಾಣ್ಯಕ್ಕೆ ಕಾರಣವಾಗುವ ಪುರುಷದೋಷಗಳು ಇರುವುದಿಲ್ಲ. ಈ ಆಶಂಕೆಯನ್ನು ಪರಿಹರಿಸಲು ಹೊರಟ ಸೂತ್ರ 'ಓಂ ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್ ಓಂ' – ಈ ಸೂತ್ರವನ್ನು 'ತಥಾऽಪಿ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಾರೆ –

ತಥಾऽಪಿ ತು ಚಿದಾನಂದಪೂರ್ವಾಸ್ತತ್ಸದೃಶಾ ಗುಣಾಃ ।।೭೨।।

ಸಾರಃ ಸ್ವರೂಪಮಸ್ಯಾಪಿ ಮುಕ್ತಾವಪ್ಯವಶಿಷ್ಯತೇ ।

ಜೀವಬ್ರಹ್ಮರಲ್ಲಿ ಭೇದವೇ ವಿವಕ್ಷಿತವಾಗಿದ್ದರೂ, ಜ್ಞಾನ ಆನಂದ ಮುಂತಾದ ಪರಮಾತ್ಮನ ಗುಣಗಳಿಗೆ ಸದೃಶವಾದ ಗುಣಗಳು, ಜೀವನ ಸ್ವರೂಪವೂ ಕೂಡ ಮುಕ್ತಿಯಲ್ಲಿಯೂ ಉಳಿಯುತ್ತವೆ.

ಅತೋऽಭೇದವದೇವೈತಾಃ ಶ್ರುತಯಃ ಪ್ರವದಂತಿ ಹಿ ।।೭೩।।

ಪೌರಾಣಾನಿ ಚ ವಾಕ್ಯಾನಿ ಸಾದೃಶ್ಯಾಭೇದಸಂಶ್ರಯಾತ್ ।

ಆದುದರಿಂದಲೇ ಮೇಲ್ನೋಟಕ್ಕೆ ಅಭೇದವನ್ನು ಹೇಳುವಂತೆ ತೋರುವ ಈ ಶ್ರುತಿಗಳೂ ಪುರಾಣವಾಕ್ಯಗಳೂ ಸಾದೃಶ್ಯರೂಪ ಅಭೇದವನ್ನು ಆಶ್ರಯಿಸಿ ಹೇಳುತ್ತವೆ.

ಸಾದೃಶ್ಯಾಚ್ಚ ಪ್ರಧಾನತ್ವಾತ್ಸ್ವಾತಂತ್ರ್ಯಾದಪಿ ಚಾಭಿದಾಮ್ ।।೭೪।।

ಆಹುರೀಶೇನ ಜೀವಸ್ಯ ನ ಸ್ವರೂಪಾಭಿದಾಂ ಕ್ವಚಿತ್ ।

ಸಾದೃಶ್ಯ, ಪ್ರಾಧಾನ್ಯ ಹಾಗೂ ಸ್ವಾತಂತ್ರ್ಯಗಳ ನಿಮತ್ತದಿಂದ ಶ್ರುತಿ ಪುರಾಣ ವಾಕ್ಯಗಳು ಈಶ್ವರನಿಂದ ಜೀವನಿಗೆ ಗೌಣವಾದ ಅಭೇದವನ್ನು ಹೇಳುತ್ತವೆ. ಆದರೆ ಸ್ವರೂಪಾಭೇದವನ್ನು ಎಲ್ಲಿಯೂ ಹೇಳುವುದಿಲ್ಲ.

ಹಾಗಾದರೆ ಹಿಂದೆ ಹೇಳಿದ ರೀತಿಯಿಂದ ಜೀವನಿಗೆ ಬ್ರಹ್ಮನೊಂದಿಗೆ ಐಕ್ಯವನ್ನು ಹೇಳುವ ವಾಕ್ಯವು ಸಾದೃಶ್ಯಾದಿ ಅರ್ಥದಲ್ಲಿರಲಿ, ಆದರೆ ಮುಕ್ತನಿಗೆ ಅದನ್ನು ಹೇಗೆ ವ್ಯಾಖ್ಯಾನಿಸುವುದು? ಅದನ್ನೂ ಹಿಂದೆ ಹೇಳಿದ ನ್ಯಾಯದಿಂದ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಏಕೆಂದರೆ 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್' ಇತ್ಯಾದಿ ವಾಕ್ಯಗಳಿಂದ ವಿಶೇಷವಾಗಿ ಮುಕ್ತನಿಂದ ಈಶ್ವರನಿಗೆ ಅಭೇದವನ್ನು ಹೇಳುವುದು ಯುಕ್ತವೆನಿಸಲಾರದು. ಈ ಆಶಂಕೆಯನ್ನು 'ಸ್ಥಾನೈಕ್ಯಂ' ಇತ್ಯಾದಿ ವಾಕ್ಯದಿಂದ ಪರಿಹರಿಸುತ್ತಾರೆ –

ಸ್ಥಾನೈಕ್ಯಮೈಕ್ಯಮತ್ಯಂ ಚ ಮುಕ್ತಸ್ಯ ತು ವಿಶಿಷ್ಯತೇ ।।೮೫।।

ಸಾದೃಶ್ಯಂ ಚ ವಿಶೇಷೇಣ ಜಡಾನಾಂ ದ್ವಯಮೇವ ತು ।

ಭವೇತ್ಸಾದೃಶ್ಯಮತ್ಯಲ್ಪಂ ತೃತೀಯಂ ಪರಮಾತ್ಮನಾ ।।೮೬।।

ಮುಕ್ತನಿಗೆ ಈಶ್ವರನೊಂದಿಗೆ ಸ್ಥಾನೈಕ್ಯವೂ ಮತ್ಯೈಕ್ಯವೂ ವಿಶೇಷವಾಗಿದೆ. ಮುಕ್ತನಿಗೆ ಈಶನಿಂದ ಅಭಿವ್ಯಕ್ತವಾದ ಸಾದೃಶ್ಯವಿದೆ. ಈ ವಿಶೇಷದಿಂದ ಅಭೇದೋಕ್ತಿಯು ಕೂಡುತ್ತದೆ. ಆದರೆ ಜಡಗಳಿಗೆ ಈಶಪ್ರಧಾನಕತ್ವ ಹಾಗೂ ಈಶಾಧೀನತ್ವ ಇವೆರಡೇ ಧರ್ಮಗಳು. ಮೂರನೆಯದಾದ ಈಶನಿಂದ ಸಾದೃಶ್ಯವು ಜಡಗಳಿಗೆ ಅತ್ಯಲ್ಪವೇ ಇರುವುದು.

ಈಶರೂಪಕ್ರಿಯಾಣಾಂ ಚ ಗುಣಾನಾಮಪಿ ಸರ್ವಶಃ ।

ತಥೈವಾವಯವಾನಾಂ ತತ್ಸ್ವರೂಪೈಕ್ಯಂ ತು ಮುಖ್ಯತಃ ।।೮೮।।

ಈಶ್ವರನ ಮತ್ಸ್ಯಾದಿ ರೂಪಗಳಿಗೂ, ಸೃಷ್ಟ್ಯಾದಿ ಕ್ರಿಯೆಗಳಿಗೂ ಎಲ್ಲ ಜ್ಞಾನಾನಂದಾದಿ ಗುಣಗಳಿಗೂ, ಹಸ್ತಾದಿ ಅವಯವಗಳಿಗೂ ಈಶಸ್ವರೂಪದಿಂದ ಐಕ್ಯವನ್ನು ಪ್ರತಿಪಾದಿಸುವ 'ವಿಜ್ಞಾನಮಾನಂದಂ ಬ್ರಹ್ಮ' ಇತ್ಯಾದಿ ವಾಕ್ಯಗಳು ಮುಖ್ಯಾಭೇದಪರವೆಂದೇ ವ್ಯಾಖ್ಯಾನ ಮಾಡತಕ್ಕವು. ಜಡಜಗತ್ತಿನಿಂದ ಈಶ್ವರನಿಗೆ ಅಭೇದವನ್ನು ಪ್ರತಿಪಾದಿಸುವ 'ಸರ್ವಂ ಖಲ್ವಿದಂ ಬ್ರಹ್ಮ' ಇತ್ಯಾದಿ ವಾಕ್ಯಗಳಂತೆ ಅಮುಖ್ಯವಾದ ಅಭೇದಪರವಲ್ಲ ಎಂದು ತಾತ್ಪರ್ಯ.

ಇನ್ನು ಈಶ್ವರನ ಗುಣರೂಪಾದಿಗಳಲ್ಲಿ ಭೇದವನ್ನು ತಿಳಿದರೆ ಪ್ರತ್ಯವಾಯವಿದೆ ಎಂದು ಹೇಳುತ್ತಾರೆ –

ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ।

ಏವಂ ಧರ್ಮಾನ್ಪೃಥಕ್ಪಶ್ಯಂಸ್ತಾನೇವಾನುವಿಧಾವತಿ ।।೮೯।।

ಪರ್ವತಗಳ ಶಿಖರಗಳಲ್ಲಿ ಸುರಿಸಲ್ಪಟ್ಟ ನೀರು ಹೇಗೆ ಕೆಳಕ್ಕೆ ಧಾವಿಸುತ್ತದೋ

ಹಾಗೆ ಪರಮೇಶ್ವರನ ಧರ್ಮಗಳನ್ನು ಅವನಿಂದ ಭಿನ್ನವಾಗಿಯೇ ನೋಡತಕ್ಕವನು, ದರ್ಶನಾನಂತರದಲ್ಲಿಯೇ ನರಕವನ್ನು ಕುರಿತು ಧಾವಿಸುತ್ತಾನೆ.

ಇತಿ ಶ್ರುತೇಃ ನೋಭಯಂ ಚ ಭೇದಾಭೇದಾಖ್ಯಮಿಷ್ಯತೇ ।

ಏಕಮೇವಾದ್ವಿತೀಯಂ ತನ್ನೇಹ ನಾನಾಸ್ತಿ ಕಿಂಚನ ।।೭೯।।

ಹೀಗೆ ಶ್ರುತಿಯಿರುವುದರಿಂದ ಭೇದಾಭೇದಗಳೆರಡೂ ಸೂತ್ರಕಾರರಿಂದ ಅಂಗೀಕರಿಸಲ್ಪಡುವುದಿಲ್ಲ. ಏಕೆಂದರೆ, ಬ್ರಹ್ಮವು ಅಭಿನ್ನವೂ, ಸಮಾಧಿಕರಹಿತವೂ ಆದುದು. ಬ್ರಹ್ಮನಲ್ಲಿರುವ ಗುಣಾದಿಗಳೂ ಕೂಡ ಅವನಿಂದ ಭಿನ್ನವಾದವುಗಳಲ್ಲ.

ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ।

ಇತಿ ಶ್ರುತಾವಿವೇತ್ಯಸ್ಮಾದ್ಭೇದಾಭೇದನಿರಾಕೃತಿಃ ।।೮೦।।

ಇವೋಭಯೇ ಚ ಸಾದೃಶ್ಯ ಇತಿ ವಾಕ್ ಶಬ್ದನಿರ್ಣಯೇ ।

ಯಾವನು ಬ್ರಹ್ಮನಲ್ಲಿರುವ ಗುಣಗಳನ್ನು ಬ್ರಹ್ಮನಿಂದ ಭಿನ್ನ ಅಥವಾ ಭಿನ್ನಾಭಿನ್ನವೆಂದು ಕಾಣುತ್ತಾನೋ, ಅವನು ಮರಣಾನಂತರದಲ್ಲಿ ನರಕವನ್ನು ಹೊಂದುತ್ತಾನೆ. ಈ ಶ್ರುತಿಯಲ್ಲಿ 'ಇವ' ಎಂಬ ಶಬ್ದದಿಂದ ಭೇದಾಭೇದವು ನಿರಾಕರಿಸಲ್ಪಡುತ್ತದೆ. 'ಇವ' ಶಬ್ದವು ಭೇದಾಭೇದಗಳಲ್ಲಿಯೂ ಸಾದೃಶ್ಯದಲ್ಲಿಯೂ ಇದೆ. ಹೀಗೆ ಶಬ್ದನಿರ್ಣಯವೆಂಬ ಗ್ರಂಥದಲ್ಲಿ ವಚನವಿದೆ.

ಅಂಶಾಧಿಕರಣಮ್

ಓಂ ಅಂಶೋ ನಾನಾವ್ಯಪದೇಶಾದನ್ಯಥಾ ಚಾಪಿ
ದಾಶಕಿತವಾದಿತ್ವಮಧೀಯತ ಏಕೇ ಓಂ

ಈ ಸೂತ್ರವನ್ನು ಕೆಲವರು ಹೀಗೆ ವ್ಯಾಖ್ಯಾನಿಸುತ್ತಾರೆ – ಜೀವನು ಪರಮಾತ್ಮನ ಅಂಶನು. ಅಂಶವೆಂದರೆ ಈಶ್ವರನಿಂದ ಭಿನ್ನಾಭಿನ್ನವಾಗಿರುವುದು. ಇವೆರಡರಲ್ಲಿ ಭೇದವು ಔಪಾಧಿಕ, ಅಭೇದವು ಸ್ವಾಭಾವಿಕ ಹಾಗೂ ಅನಾದಿ ಅನಿರ್ವಾಚ್ಯವಾದ ಅವಿದ್ಯೆಯೇ ಉಪಾಧಿ. ಇನ್ನಿತರರು, ಭಾಸ್ಕರಾದಿಗಳು, ಸತ್ಯವೇ ಆದ ಅಂತಃಕರಣಾದಿಗಳೇ ಉಪಾಧಿಯೆಂದು ಹೇಳುತ್ತಾರೆ. ಜೀವನಿಗೆ ಪರಮಾತ್ಮನಿಂದ ಈ ಭೇದಾಭೇದ ಕಲ್ಪನೆ ಏಕೆಂದರೆ, 'ದ್ವಾಸುಪರ್ಣಾ' 'ನಿತ್ಯೋ ನಿತ್ಯಾನಾಂ' ಇತ್ಯಾದಿ ಶ್ರುತಿಗಳಲ್ಲಿ ಭೇದವ್ಯಪದೇಶವಿದೆ. ಹಾಗೂ 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಇತ್ಯಾದಿಗಳಲ್ಲಿ ಅಭೇದ ವ್ಯಪದೇಶವಿದೆಯೆಂದು ಹೇಳುತ್ತಾರೆ. ಅಯುಕ್ತವಾದ ಈ ವ್ಯಾಖ್ಯಾನವನ್ನು 'ಭೇದಸ್ಯ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಾರೆ –

ಭೇದಸ್ಯ ಮುಕ್ತೌ ವಚನಾದಪಿ ತತ್ಪಕ್ಷನಿಗ್ರಹಃ ।।೮೧।।

ಚೇತನತ್ವಾದಿ ಸಾದೃಶ್ಯಂ ಯದ್ಯಭೇದ ಇತೀಷ್ಯತೇ ।

ಅಂಗೀಕೃತಂ ತದಸ್ಮಾಭಿರ್ನ ಸ್ವರೂಪೈಕತಾ ಕ್ವಚಿತ್ ।।೮೨।।

ಮುಕ್ತಿಯಲ್ಲಿಯೂ ಭೇದವಿದೆ ಎಂದು ಹೇಳುವ ವಚನವಿರುವುದರಿಂದ ಮುಖ್ಯ ಅಭೇದವೆಂಬುದು ನಿರಾಕೃತವಾಗುತ್ತದೆ. ಚೇತನತ್ವಾದಿ ಧರ್ಮಗಳಿಂದ ಸಾದೃಶ್ಯವು ಅಭೇದವೆಂದು ಅಂಗೀಕರಿಸುವುದಾದರೆ, ಅದು ನಮ್ಮಿಂದಲೂ ಅಂಗೀಕರಿಸಲ್ಪಟ್ಟಿದೆ. ಎಲ್ಲಿಯೂ ಜೀವೇಶ್ವರರಿಗೆ ಸ್ವರೂಪಾಭೇದವು, ಅಂದರೆ ಮುಖ್ಯವಾದ ಅಭೇದವು, ಇಲ್ಲವೇ ಇಲ್ಲ.

ನ ಕೇನಚಿದಭೇದೋಽಸ್ತಿ ಭೇದಾಭೇದೋಽಪಿ ವಾ ಕ್ವಚಿತ್ ।

ಸಮುದಾಯಮೃತೇ ವಿಷ್ಣೋಃ ಸ್ವಗುಣಾದೀನ್ವಿನಾಪಿ ವಾ ।।೮೩।।

ಇತಿ ಶ್ರುತೇರ್ನ ತಸ್ಯಾಸ್ತಿ ಭೇದಾಭೇದೋಽಪಿ ಕೇನಚಿತ್ ।

ದ್ವಿತ್ವಾದಿ ಸಮುದಾಯ ಧರ್ಮವನ್ನು ಹೊರತುಪಡಿಸಿ ಯಾವುದರಿಂದಲೂ ಶ್ರೀಹರಿಗೆ ಅಭೇದವಾಗಲೀ, ಭೇದಾಭೇದವಾಗಲೀ ಎಲ್ಲಿಯೂ ಇಲ್ಲ. ಹಾಗೂ ತನ್ನ ಗುಣಾದಿಗಳನ್ನು ಹೊರತುಪಡಿಸಿ ಯಾವುದರಿಂದಲೂ ಅಭೇದವೂ ಇಲ್ಲ.

ಹೀಗೆ ಜೀವಬ್ರಹ್ಮರಲ್ಲಿ ಭೇದಾಭೇದಗಳಿಲ್ಲದಿದ್ದರೆ ಸೂತ್ರದಲ್ಲಿ ಭೇದಾಭೇದ ಶ್ರುತ್ಯುದಾಹರಣವು ಹೇಗೆ ಎಂದರೆ –

ಅಭೇದಶ್ರುತಯೋಽಂಶತ್ವಾತ್ಸಾದೃಶ್ಯಂ ಚಾಂಶತಾಸ್ಯ ತು ।।೮೪।।

ಅಭೇದಶ್ರುತಿಗಳೂ ಹಾಗೂ ಭೇದಶ್ರುತಿಗಳೂ ಜೀವರು ಪರಮಾತ್ಮನ ಅಂಶರಾದುದರಿಂದಲೇ ಯುಕ್ತವಾಗುತ್ತವೆ. ಈ ಅಂಶತ್ವವಾದರೂ ಜೀವನಿಗೆ ಪರಮಾತ್ಮನಿಂದ ಸಾದೃಶ್ಯವನ್ನೇ ಹೇಳುತ್ತದೆ.

ಅಂಶ ಶಬ್ದಕ್ಕೆ ಅನೇಕಾರ್ಥಗಳಿರುವಾಗ, ಮತ್ಸ್ಯಾದಿಗಳಿಗೆ ಸ್ವರೂಪಾಂಶತೆಯೂ, ಜೀವರಿಗೆ ಬೇರೆಯದಾದ ಅಂಶತೆಯೂ ಎನ್ನುವುದು ಹೇಗೆ ಸಿದ್ಧವಾಗುತ್ತದೆ ಎಂದು ಕೇಳಿದರೆ, ಈ ವಿಷಯದಲ್ಲಿ ಆಗಮ ವಾಕ್ಯವನ್ನು ಪ್ರಮಾಣವನ್ನಾಗಿ ಹೇಳುತ್ತಾರೆ –

ಅಂಶಸ್ತು ದ್ವಿವಿಧೋ ಜ್ಞೇಯಃ ಸ್ವರೂಪಾಂಶೋಽನ್ಯ ಏವ ಚ ।

ವಿಭಿನ್ನಾಂಶೋಽಲ್ಪಶಕ್ತಿಃ ಸ್ಯಾತ್ಕಿಂಚಿತ್ಸಾದೃಶ್ಯಮಾತ್ರಯುಕ್ ।।೮೫।।

ಅಂಶವಾದರೂ ಸ್ವರೂಪಾಂಶ ಹಾಗೂ ವಿಭಿನ್ನಾಂಶ ಎಂಬುದಾಗಿ ಎರಡೇ ವಿಧವೆಂದು ತಿಳಿಯತಕ್ಕದ್ದು. ವಿಭಿನ್ನಾಂಶವು ಅಲ್ಪಶಕ್ತಿಯುಳ್ಳದ್ದು. ಅದು ಸ್ವಲ್ಪ ಸಾದೃಶ್ಯದಿಂದ ಮಾತ್ರ ಯುಕ್ತವಾದುದು.

ಅಂಶಿನೋ ಯತ್ತು ಸಾಮರ್ಥ್ಯಂ ಯತ್ಸ್ವರೂಪಂ ಯಥಾ ಸ್ಥಿತಿಃ ।

ಸ ಏವ ಚೇತ್ಸ್ವರೂಪಾಂಶಃ ಪ್ರಾದುರ್ಭಾವೋ ಹರೇರ್ಯಥಾ ॥೮೬॥

ಅಂಶಿಗೆ ಯಾವ ಸಾಮರ್ಥ್ಯವೋ ಯಾವ ಸ್ವರೂಪವೋ ಎಂಥಹ ಸ್ಥಿತಿಯೋ ಅಂಥಹುದೇ ಸಾಮರ್ಥ್ಯ, ಸ್ವರೂಪ ಹಾಗೂ ಸ್ಥಿತಿಗಳನ್ನು ಅಂಶವು ಹೊಂದಿದ್ದರೆ, ಅದು ಸ್ವರೂಪಾಂಶವೆಂದು ತಿಳಿಯಬೇಕು. ಶ್ರೀಹರಿಯ ಮತ್ಸ್ಯಾದಿರೂಪಗಳು ಹೇಗೋ ಹಾಗೆ.

ಮತ್ಸ್ಯಾದಿಗಳು ಸ್ವರೂಪಾಂಶಗಳೇ, ಜೀವರು ಭಿನ್ನಾಂಶಗಳೇ ಎಂಬುದನ್ನು ದೃಢಪಡಿಸಲು 'ಪ್ರಕಾಶಾದಿವತ್' ಎಂಬುದಾಗಿ ಸೂತ್ರಕಾರರು ದೃಷ್ಟಾಂತಗಳನ್ನು ಹೇಳಿದ್ದಾರೆ. ಅನುವ್ಯಾಖ್ಯಾನಕಾರರು ಆ ದೃಷ್ಟಾಂತಗಳನ್ನು ಇಲ್ಲಿ ಸ್ಪಷ್ಟಪಡಿಸುತ್ತಾರೆ –

ಸೂರ್ಯಮಂಡಲಮಾನ್ಯೇಕಸ್ತತ್ಪ್ರಕಾಶಾಭಿಮಾನವಾನ್ ।

ಸೂರ್ಯೋಽಥ ಸಪ್ತಮಾಬ್ಧೇಶ್ಚ ಬಾಹ್ಯೋದಸ್ಯ ಚ ವಾರಿಪಃ ॥೮೭॥

ಕಠಿನತ್ವೇನ ಮೇರ್ವಾದೇಃ ಪೃಥಿವ್ಯಾ ಅಪಿ ದೇವತಾ ।

ಧರಾದೇವ್ಯೇವಮೇವೈಕೋ ಭಗವಾನ್ವಿಷ್ಣುರವ್ಯಯಃ ॥೮೮॥

ನಾನಾವತಾರರೂಪೇಣ ಸ್ಥಿತಃ ಪೂರ್ಣಗುಣಃ ಸದಾ ।

ವಿಣ್ಮೂತ್ರಾದ್ಯಭಿಮಾನಿನ್ಯೋ ಯಥಾಪಭ್ರಷ್ಟದೇವತಾಃ ॥೮೯॥

ಸೂರ್ಯಾದಿಭ್ಯಸ್ತಥೈವಾಯಂ ಸಂಸಾರೀ ಪರಮಾತ್ಪೃಥಕ್ ।

ಹೇಗೆ ಸೂರ್ಯಮಂಡಲದ ಅಭಿಮಾನಿಯಾದ ಅಂಶಿಯಾದ ಸೂರ್ಯನು ಸೂರ್ಯಪ್ರಕಾಶಕ್ಕೆ ಅಭಿಮಾನಿಯಾದ ಸೂರ್ಯನ ಅಂಶನೂ ಅಭಿನ್ನರೋ, ಬಾಹ್ಯ ಜಲಾಭಿಮಾನಿಯಾದ ಅಂಶಿ ವರುಣನೂ ಸಪ್ತಮ ಸಮುದ್ರಕ್ಕೆ ಅಭಿಮಾನಿಯಾದ ವರುಣನ ಅಂಶನೂ ಹೇಗೆ ಅಭಿನ್ನರೋ ಮತ್ತು ಕಠಿಣತೆಯಿರುವುದರಿಂದ ಹೇಗೆ ಮೇರುಪರ್ವತವೇ ಮೊದಲಾದುದಕ್ಕೆ ಅಭಿಮಾನಿಯಾದ ಧರಾದೇವಿಯ ಅಂಶವೂ ಐವತ್ತು ಕೋಟಿ ವಿಸ್ತೀರ್ಣದ ಪೃಥಿವಿಗೆ ಅಭಿಮಾನಿಯಾದ ಅಂಶಿಯಾದ ಧರಾದೇವಿಯೂ ಅಭಿನ್ನರೋ, ಹಾಗೆಯೇ ನಾಶರಹಿತನೂ ಪೂರ್ಣಗುಣನೂ ಆದ ಅಂಶಿಯಾದ ಭಗವಾನ್ ನಾರಾಯಣನು ಅನೇಕ ಅವತಾರರೂಪಗಳಿಂದ ಇರುವ ಅವನ ಅಂಶವೂ ಯಾವಾಗಲೂ ಅಭಿನ್ನವೇ ಆದುದು. ಮಲಮೂತ್ರಾದಿ ಅಭಿಮಾನಿಗಳಾದ ಅಪಭ್ರಷ್ಟ ದೇವತೆಗಳೆಂಬ ಅಂಶಗಳು ಸೂರ್ಯ ಪೃಥಿವಿ ವರುಣ ಇತ್ಯಾದಿಗಳಿಂದ ಹೇಗೆ ಭಿನ್ನರೋ, ಅದರಂತೆಯೇ ಈ ಸಂಸಾರಿರೂಪ ಜೀವನು ಪರಮಾತ್ಮನಿಂದ ಭಿನ್ನನು.

ಇನ್ನು ಅಂಶಗಳಾದ ಜೀವರಿಗೆ ಅಂಶಿಯಾದ ಪರಮಾತ್ಮನಿಂದ ಭೇದವನ್ನು ಯುಕ್ತಿಯಿಂದ ಸಮರ್ಥನ ಮಾಡಲು 'ಅನುಜ್ಞಾಪರಿಹಾರೌ ದೇಹಸಂಬಂಧಾತ್ ಜ್ಯೋತಿರಾದಿವತ್' ಎಂಬ ಸೂತ್ರವು ಹೊರಟಿದೆ. ಇಲ್ಲಿಯೂ ದೃಷ್ಟಾಂತಗಳ ಅಸಂಗತಿಯನ್ನು ಆಶಂಕಿಸಿ, ಅಭಿಮಾನಿ ವಿಷಯಕವಾದ ಅವುಗಳನ್ನು 'ದೇಹ' ಇತ್ಯಾದಿ ವಚನದಿಂದ ವ್ಯಾಖ್ಯಾನಿಸುತ್ತಾರೆ –

ದೇಹದೋಷೈಶ್ಚ ದುಷ್ಟತ್ವಾದಪಭ್ರಷ್ಟಾಖ್ಯದೇವತಾಃ ।।೯೦।।

ಅನ್ಯಾಃ ಸೂರ್ಯಾದಿದೇವೇಭ್ಯೋ ಹ್ಯನುಗ್ರಾಹ್ಯಾಶ್ಚ ತೈಃ ಸದಾ ।

ಏವಮೇವ ಪರಾದ್ವಿಷ್ಣೋಃ ಪೃಥಕ್ಸಂಸಾರಿಣೋ ಮತಾಃ ।।೯೧।।

ಅನುಗ್ರಾಹ್ಯಾಶ್ಚ ತೇನೈವ ತತ್ಪ್ರಸಾದಾಚ್ಚ ಮೋಕ್ಷಿಣಃ ।

ನ ತು ಮತ್ಸ್ಯಾದಿರೂಪಾಣಾಮನುಗ್ರಾಹ್ಯತ್ವಮಿಷ್ಯತೇ ।।೯೨।।

ಪರದೇಹಗತ ದೋಷಗಳಿಂದ ದುಷ್ಟತ್ವವಿರುವುದರಿಂದ ಅಪಭ್ರಷ್ಟನಾಮಕ ದೇವತೆಗಳು ಸೂರ್ಯ ಮೊದಲಾದ ದೇವತೆಗಳಿಂದ ಭಿನ್ನರು. ಅವರು ಸೂರ್ಯಾದಿಗಳಿಂದ ಯಾವಾಗಲೂ ಅನುಗ್ರಾಹ್ಯರೇ. ಇದರಂತೆಯೇ ಸಂಸಾರಿ ಜೀವರು ಸರ್ವೋತ್ತಮನಾದ ಶ್ರೀಹರಿಯಿಂದ ಭಿನ್ನರೂ, ಅವನಿಂದಲೇ ಸದಾ ಅನುಗ್ರಹ ಪಡೆಯತಕ್ಕವರೂ ಹಾಗೂ ಅವನ ಪ್ರಸಾದದಿಂದಲೇ ಮೋಕ್ಷವುಳ್ಳವರು ಎಂದು ಸಂಮತವು. ಮತ್ಸ್ಯಾದಿ ರೂಪಗಳಿಗೆ ಶ್ರೀಹರಿಯಿಂದ ಅನುಗ್ರಾಹ್ಯತ್ವವು, 'ನೈವ ತೇ ಜಾಯಂತೇ' ಇತ್ಯಾದಿ ಶ್ರುತಿಬಲದಿಂದ, ಅಂಗೀಕರಿಸಲ್ಪಡುವುದೇ ಇಲ್ಲ.

ಇನ್ನು 'ಓಂ ಅಸಂತತೇಶ್ಚಾವ್ಯತಿಕರಃ ಓಂ' ಎಂಬ ಸೂತ್ರವು ಜೀವರಿಗೆ ಪರಮಾತ್ಮನಿಂದ ಭೇದವನ್ನಷ್ಟೇ ಸಾಧನ ಮಾಡುವುದಾಗಿ ತೋರುತ್ತದೆ. ಆದರೆ ಮತ್ಸ್ಯಾದಿಗಳಿಗೆ ಪರಮಾತ್ಮನಿಂದ ಅಭೇದವನ್ನೂ ಸಾಧನ ಮಾಡುವುದಾಗಿ ತೋರುವುದಿಲ್ಲ ಎಂದು ಆಶಂಕಿಸಿದರೆ – ಈ ಸೂತ್ರವು ಉಪಲಕ್ಷಣದಿಂದ ಸ್ವರೂಪಾಂಶದೊಂದಿಗೆ ಅಭೇದವನ್ನೂ ಹೇಳುವುದೆಂದು 'ಗುಣೈಃ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಾರೆ –

ಗುಣೈರಶೇಷೈಃ ಪೂರ್ಣತ್ವಾನ್ಮುಖ್ಯಾಭೇದೋ ಪರೈರ್ನ ಚ ।

ಮತ್ಸ್ಯಾದಿ ಅಂಶರೂಪಗಳಿಗೆ ಎಲ್ಲ ಗುಣಗಳಿಂದ ಪರಿಪೂರ್ಣತ್ವವಿರುವುದರಿಂದ ಅಂಶಿಯಿಂದ ಅವುಗಳಿಗೆ ಮುಖ್ಯವಾದ ಅಭೇದವೇ ಇರುವುದು. ಆದರೆ ಇನ್ನುಳಿದ ಜೀವರು ಅಪೂರ್ಣಗುಣರಾದ್ದರಿಂದ ಅವರಿಗೆ ಪರಮಾತ್ಮನೊಂದಿಗೆ ಅಭೇದವಿಲ್ಲ.

ಹೀಗೆ ಅಂಶನಾದರೂ ಜೀವನಿಗೆ ಈಶ್ವರನಿಂದ ಭೇದವು ಸಮರ್ಥಿಸಲ್ಪಟ್ಟಿತು.

ಜೀವನಿಗೆ ಪರಮಾತ್ಮನ ಮುಖ್ಯಾಂಶತ್ವವಿಲ್ಲ ಎಂಬುದನ್ನು ಪ್ರತಿಪಾದಿಸುವ ಸೂತ್ರ –

ಓಂ ಆಭಾಸ ಏವ ಚ ಓಂ

ಜೀವನು ಈಶ್ವರನ ಪ್ರತಿಬಿಂಬನೇ, ಮತ್ಸ್ಯಾದಿಗಳು ಈಶನ ಪ್ರತಿಬಿಂಬರಲ್ಲ.

'ಅಂಶ' ಇತ್ಯಾದಿ ವಾಕ್ಯದಿಂದ ಈ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ –

ಅಂಶಾಭಾಸಾಶ್ಚ ಸರ್ವೇಽಪಿ ಪರಸ್ಯಾಂಶಾ ನ ಮುಖ್ಯತಃ ।।೯೩।।

ಯಥೈಷಾ ಪುರುಷೇ ಛಾಯಾ ಏತಸ್ಮಿನ್ನೇತದಾತತಮ್ ।

ಸರ್ವಜೀವರೂ ಅಂಶಾಭಾಸರು. ಪರಮಾತ್ಮನ ಮುಖ್ಯವಾದ ಅಂಶರಲ್ಲ. ಜೀವರಿಗೆ ಅಂಶಾಭಾಸತ್ವವನ್ನು ಶ್ರುತ್ಯಂತರದಿಂದ 'ಯಥಾ' ಇತ್ಯಾದಿ ವಾಕ್ಯದಿಂದ ದೃಢಪಡಿಸುತ್ತಾರೆ – ಹೇಗೆ ಈ ನೆರಳು ಪುರುಷನಲ್ಲಿ ಅಧೀನವೋ ಹಾಗೆಯೇ ಈ ಜೀವ ಸಮುದಾಯವು ಈ ಪರಮಾತ್ಮನಲ್ಲಿ ಅಧೀನವು. ಇದೇ ಅಂಶತ್ವವು.

ಹಾಗಾದರೆ ಜೀವರಿಗೆ ಮುಖ್ಯಾಂಶತ್ವವಿಲ್ಲವೆಂಬುದು ಶ್ರುತಿವಿರುದ್ಧವು. ಏಕೆಂದರೆ 'ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಎನ್ನುವ ಮಂತ್ರವರ್ಣದಲ್ಲಿ ಅನಂತಾಸನ ಶ್ವೇತದ್ವೀಪ ವೈಕುಂಠಗಳೆಂಬ ದ್ಯು ಎಂಬ ಮೂರು ಲೋಕಗಳಲ್ಲಿ ಇರುವ ಪರಮಾತ್ಮನ ರೂಪತ್ರಯದಂತೆ, ಭೂತ ಶಬ್ದವಾಚ್ಯರಾದ ಜೀವರಿಗೂ ಪರಮಪುರುಷನ ಪಾದರೂಪತ್ವವು (ಅಂಶತ್ವವು) ಹೇಳಲ್ಪಟ್ಟಿರುತ್ತದೆ. ಹೀಗೆ ಆಶಂಕಿಸಿದರೆ, ವಿಶೇಷಶ್ರುತಿಬಲದಿಂದ ಪಾದ ಎಂಬ ಶಬ್ದಕ್ಕೆ ಅನೇಕಾರ್ಥವನ್ನು ಕಲ್ಪಿಸುವುದು ಯುಕ್ತಿಯುಕ್ತವು ಎನ್ನುತ್ತಾರೆ –

ನ ತು ಪುಂಪಾದತ್ವಾತ್ಪಾದಾ ಜೀವಾ ಏತೇ ಪರಮಾತ್ಮನಃ ।।೯೪।।

ಪೂರ್ಣಾಸ್ತಸ್ಯ ಗುಣಾ ಏವ ಪ್ರಾದುರ್ಭಾವತಯಾ ಸ್ಥಿತಾಃ ।

ಏವಂ ಜಗಾದ ಪರಮಾ ಶ್ರುತಿರ್ನಾರಾಯಣಂ ಪರಮ್ ।।೯೫।।

ಈ ಜೀವರು ಪರಮಪುರುಷನ ಅಮೃತಾಖ್ಯ ಪಾದತ್ರಯದಂತೆ ಪರಮಾತ್ಮನ ಸ್ವರೂಪಾಂಶರಲ್ಲ. ಏಕೆಂದರೆ, ಪರಮಪುರುಷನ ಪೂರ್ಣವಾದ ಗುಣಗಳೇ ಪ್ರಾದುರ್ಭಾವ ರೂಪದಿಂದ ಇರತಕ್ಕ ಮತ್ಸ್ಯಾದಿರೂಪಗಳು. ಹೀಗೆ ಪರಮ ಶ್ರುತಿಯು ನಾರಾಯಣನನ್ನು ಜೀವಾಂಶಗಳಿಂದ ಭಿನ್ನನೆಂದು ಹೇಳಿದೆ.

ಅಧಿದೈವಾದಿ ಸ್ವರೂಪಗಳ ನಿರ್ಣಯಕ್ಕೋಸ್ಕರ ಈ ಪಾದದ ಆರಂಭವು ಎಂಬುದಾಗಿ ಈ ಪಾದದ ಆರಂಭಣೀಯತ್ವ ಸಮರ್ಥನೆಯ ಪ್ರಸಂಗದಲ್ಲಿ ಉಕ್ತವಾಗಿದೆ. ಹೀಗಿರುವಾಗ ಎಂಥಹ ನಿರ್ಣಯವು ಉಂಟಾಯಿತು ಎಂಬ ಆಶಂಕೆ

ಬಂದರೆ, ಆ ನಿರ್ಣಯವನ್ನು ಬುದ್ಧಿಯಲ್ಲಿ ಆರೂಢ ಮಾಡುವುದಕ್ಕಾಗಿ ಸಂಗ್ರಹಿಸಿ, 'ಅಕ್ಷಯೋ' ಇತ್ಯಾದಿ ವಚನದಿಂದ ಹೇಳುತ್ತಾರೆ –

ಅಕ್ಷಯೋ ಭಗವಾನ್ವಿಷ್ಣುರ್ಲಕ್ಷ್ಮ್ಯಾವಾಸೋ ಲಯೇ ಸ್ಥಿತಃ ।

ಮುಕ್ತೈಃ ಸದಾ ಚಿಂತ್ಯಮಾನೋ ಬ್ರಹ್ಮಾದ್ಯೈಸ್ತಾರತಮ್ಯಗೈಃ ॥೯೬॥

ಲಕ್ಷ್ಮಿಯ ಆವಾಸನಾದ ಭಗವಾನ್ ವಿಷ್ಣುವು ನಾಶರಹಿತನಾಗಿಯೇ ಪ್ರಲಯ ಕಾಲದಲ್ಲಿ ಇರುವನು. ತರತಮಭಾವವನ್ನು ಹೊಂದಿರುವ ಬ್ರಹ್ಮಾದಿ ಮುಕ್ತರಿಂದ ಸದಾ ಧ್ಯಾನಿಸಲ್ಪಡುತ್ತಾನೆ.

ಪ್ರಕೃತಿಃ ಪುರುಷಃ ಕಾಲೋ ವೇದಾಶ್ಚೇತಿ ಚತುಷ್ಟಯಮ್ ।

ನಿತ್ಯಂ ಸ್ವರೂಪತೋ ವಿಷ್ಣೋರ್ವಿಶೇಷಾವಾಪ್ತಿಮಾತ್ರತಃ ॥೯೭॥

ಉತ್ಪತ್ತಿಮದಿತಿ ಪ್ರೋಕ್ತಂ ಲಕ್ಷ್ಮೀಸ್ತದಭಿಮಾನಿನೀ ।

ತತೋ ಜಾತಃ ಪುಮಾನ್ನಾಮ ಬ್ರಹ್ಮಾಸ್ಯಾಂ ವಾಸುದೇವತಃ ॥೯೮॥

ಪ್ರಕೃತಿ, ಜೀವ, ಕಾಲ, ವೇದ ಈ ನಾಲ್ಕು ಸ್ವರೂಪದಿಂದ ನಿತ್ಯವು. ವಿಷ್ಣುವಿನಿಂದ ಪರಾಧೀನವಿಶೇಷಾವಾಪ್ತಿಯಿಂದಲೇ ಇವುಗಳು ಉತ್ಪತ್ತಿಯುಳ್ಳವೆಂದು ಹೇಳಲ್ಪಡುತ್ತವೆ. ಪ್ರಕೃತ್ಯಭಿಮಾನಿಯಾದ ಮಹಾಲಕ್ಷ್ಮಿಯೂ ಕೂಡ ಇಂಥಹ ಉತ್ಪತ್ತಿಯುಳ್ಳವಳೇ. ಅನಂತರ ಇವಳಲ್ಲಿ ವಾಸುದೇವರೂಪದಿಂದ ಪುರುಷನಾಮಕ ಚತುರ್ಮುಖನು ಹುಟ್ಟಿದನು.

ಸೂತ್ರಾತ್ಮಾ ಪ್ರಾಣನಾಮಾ ಚ ದೇವ್ಯೌ ಪ್ರಕೃತಿಮಾನಿನೀ ।

ತತೋ ರೂಪಂ ಮಹನ್ನಾಮ ಬ್ರಹ್ಮಣೋಽಹಂಕೃತಿಃ ಶಿವಃ ॥೯೯॥

ಸೂತ್ರರೂಪನಾದ ಪ್ರಾಣನಾಮಕ ವಾಯುವು ಸಂಕರ್ಷಣನಿಂದ ಜಯಾ ನಾಮಕ ಲಕ್ಷ್ಮಿಯಲ್ಲಿ ಹುಟ್ಟಿದನು. ಜಡಪ್ರಕೃತಿಗೆ ಅವಾಂತರ ಅಭಿಮಾನಿಗಳಾದ ಸರಸ್ವತೀ ಭಾರತೀದೇವಿಯರು ಪ್ರದ್ಯುಮ್ನನ ದೆಶೆಯಿಂದ ಕೃತಿನಾಮಕಳಾದ ಮಹಾಲಕ್ಷ್ಮಿಯಲ್ಲಿ ಹುಟ್ಟಿದರು. ಅನಂತರ ವಾಸುದೇವನ ದೆಶೆಯಿಂದಲೇ ಮಹತ್ ತತ್ವಾಭಿಮಾನಿಯಾದ ಚತುರ್ಮುಖ ರೂಪವು ಹುಟ್ಟಿತು. ಈ ಮಹತ್ತತ್ವಾಭಿಮಾನಿ ಚತುರ್ಮುಖನಿಂದ ಅಹಂಕಾರ ತತ್ವಾಭಿಮಾನಿ ರುದ್ರನು ಹುಟ್ಟಿದನು.

ಬ್ರಹ್ಮಣೋ ಬುದ್ಧಿನಾಮ್ನೋಮಾ ತತ ಇಂದ್ರೋ ಮನೋಽಭಿಧಃ ।

ಸ್ಕಂದಶ್ಚ ತತ ಏವಾನ್ಯೇ ಸರ್ವೇ ದೇವಾಃ ಪ್ರಜಜ್ಞಿರೇ ॥೧೦೦॥

ಆ ಮಹತ್ತತ್ವಾಭಿಮಾನಿಯಿಂದಲೇ ಬುದ್ಧಿತತ್ವಾಭಿಮಾನಿ ಉಮಾದೇವಿಯು ಹುಟ್ಟಿದಳು. ಅಹಂಕಾರಾಭಿಮಾನಿ ರುದ್ರನಿಂದ ಉಮೆಯಲ್ಲಿ ಮನಸ್ತತ್ವಾಭಿಮಾನಿ ಇಂದ್ರ ಸ್ಕಂದರು ಹುಟ್ಟಿದರು. ಆ ಇಂದ್ರಾದಿ ದೇವತೆಗಳಿಂದಲೇ ಇತರರಾದ ಎಲ್ಲ ತತ್ವಾಭಿಮಾನಿ ದೇವತೆಗಳು ಹುಟ್ಟಿದರು.

ತತ್ರ ಪೂರ್ವತನಃ ಶ್ರೇಯಾನ್ ಗುಣೈಃ ಸರ್ವೈಃ ಸಮಸ್ತಶಃ ।

ತೇಭ್ಯಶ್ಚ ಭಗವಾನ್ವಿಷ್ಣುಸ್ತದಧೀನಾ ಇಮೇ ಸದಾ ॥೧೦೧॥

ಅವರೆಲ್ಲರಲ್ಲಿ ಎಲ್ಲಕ್ಕೂ ಮೊದಲಿನವನು ಎಲ್ಲರಿಗಿಂತ ಶ್ರೇಷ್ಠನು. ಇವರೆಲ್ಲರಿಗಿಂತ ಭಗವಾನ್ ವಿಷ್ಣುವು ಶ್ರೇಷ್ಠನು. ಎಲ್ಲ ದೇವತೆಗಳೂ ಸದಾ ಅವನ ಅಧೀನರು.

ಜನ್ಮಸ್ಥಿತಿಲಯಾಜ್ಞಾನನಿಯತಿಜ್ಞಾನಸಂಸೃತಿಃ ।

ಮೋಕ್ಷಶ್ಚ ತದಧೀನತ್ವಮೇತೇಷಾಂ ನೈವ ಹೀಯತೇ ॥೧೦೨॥

ಸೃಷ್ಟಿ, ಸ್ಥಿತಿ, ಲಯ, ಅಜ್ಞಾನ, ನಿಯಮನ, ಜ್ಞಾನ, ಸಂಸಾರ ಹಾಗೂ ಮುಕ್ತಿಯೂ ಕೂಡ ಸದಾ ಆ ಶ್ರೀಹರಿಯ ಅಧೀನಗಳು. ಈ ಬ್ರಹ್ಮಾದಿಗಳಿಗೆ ಅವನ ಅಧೀನತ್ವವು ಎಂದಿಗೂ ಅಳಿಯುವುದಿಲ್ಲ.

ಮುಕ್ತಾವಪಿ ಸ ಏವೈಕಃ ಸ್ವತಂತ್ರಃ ಪೂರ್ಣಸದ್ಗುಣಃ ।
ಇತಿ ಶ್ರುತ್ಯುಪಪತ್ತಿಭ್ಯಾಂ ಪಾದೇಽಸ್ಮಿನ್ಪ್ರಭುಣೋದಿತಮ್ ॥೧೦೩॥

ಮೋಕ್ಷದಲ್ಲಿಯೂ ಅವನೊಬ್ಬನೇ ಸ್ವತಂತ್ರನು, ನಿರ್ದೋಷ ಅಶೇಷ ಗುಣಪೂರ್ಣನು. ಹೀಗೆ ಶ್ರುತಿಯುಕ್ತಿಗಳಿಂದ ಈ ಪಾದದಲ್ಲಿ ಪ್ರಭುವಾದ ಶ್ರೀಹರಿಯಿಂದ ವೇದವ್ಯಾಸರೂಪದಿಂದ ಹೇಳಲ್ಪಟ್ಟಿದೆ.

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ

ಶ್ರೀಮದನುವ್ಯಾಖ್ಯಾನೇ ದ್ವಿತೀಯಾಧ್ಯಾಯಸ್ಯ ತೃತೀಯಃ ಪಾದಃ ॥

॥ ಇಲ್ಲಿಗೆ ಶ್ರೀಮದನಾಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಮೂರನೆಯ ಪಾದದ ಕನ್ನಡ ಅನುವಾದವು ಮುಗಿದುದು ॥

* * *

ಎರಡನೆಯ ಅಧ್ಯಾಯ
ನಾಲ್ಕನೆಯ ಪಾದ

ನಾಲ್ಕನೆಯ ಪಾದದಲ್ಲಿಯೂ ಶ್ರುತಿವಚನಗಳಲ್ಲಿನ ಪರಸ್ಪರ ವಿರೋಧವೇ ಪರಿಹರಿಸಲ್ಪಡುವುದಾದರೂ, ಅಧ್ಯಾತ್ಮ ವಿಷಯತ್ವವಿರುವುದರಿಂದ ಈ ಪಾದಕ್ಕೆ ಭೇದವು ಸಿದ್ಧಿಸುತ್ತದೆಯೆಂದು ಮೂರನೆಯ ಪಾದದ ಉಪಕ್ರಮದಲ್ಲಿಯೇ ಸೂಚಿಸಲಾಗಿದೆ. ಹಾಗಿದ್ದರೂ ಪ್ರಕಾರಾಂತರದಿಂದ ಪಾದಭೇದವನ್ನು ತೋರಿಸಲು 'ಶ್ರುತ್ಯರ್ಥಃ' ಇತ್ಯಾದಿ ವಾಕ್ಯವನ್ನು ಇಲ್ಲಿ ಹೇಳುತ್ತಾರೆ –

ಶ್ರುತ್ಯರ್ಥಃ ಶ್ರುತಿಯುಕ್ತಿಭ್ಯಾಂ ವಿರುದ್ಧ ಇವ ದೃಶ್ಯತೇ ।

ಯತ್ರ ತನ್ನಿರ್ಣಯಂ ದೇವಃ ಸುವಿಶಿಷ್ಟೋಪಪತ್ತಿಭಿಃ ।।೧।।

ಕರೋತ್ಯನೇನ ಪಾದೇನ .... ।

ಯಾವ ಪ್ರಾಣಾದಿಗಳ ವಿಷಯದಲ್ಲಿ ಜನ್ಮ ಮುಂತಾದ ಶ್ರುತಿಯ ಅರ್ಥವು ಯುಕ್ತಿ ಸಹಿತವಾದ ಶ್ರುತಿಗಳಿಂದ ವಿರುದ್ಧವಾದಂತೆ ತೋರುವುದೋ, ಅಂಥಹ ಶ್ರುತಿಯ ಅರ್ಥನಿರ್ಣಯವನ್ನು ಸುವಿಶಿಷ್ಟವಾದ ಯುಕ್ತಿಗಳಿಂದ ಶ್ರೀವೇದವ್ಯಾಸರು ಈ ಪಾದದಿಂದ ಮಾಡುತ್ತಾರೆ.

'ತಥಾ ಪ್ರಾಣಾಃ' ಇತ್ಯಾದಿ ಸೂತ್ರಗಳ ಅರ್ಥವು ಭಾಷ್ಯದಲ್ಲಿಯೇ ಸ್ಪಷ್ಟವಾಗಿ ಹೇಳಿರುವುದರಿಂದ, ಪೂರ್ವಪಕ್ಷ–ಉತ್ತರಪಕ್ಷಗಳ ಯುಕ್ತಿಗಳನ್ನು 'ತತ್ರ' ಇತ್ಯಾದಿ ವಾಕ್ಯದಿಂದ ಇಲ್ಲಿ ಸಂಗ್ರಹಿಸುತ್ತಾರೆ –

.... ತತ್ರ ಸ್ಪಷ್ಟಾರ್ಥವಚ್ಛ್ರುತಿಃ ।

ವಿಶೇಷಶ್ರುತಿವೈರೂಪ್ಯಂ ಮಾಹಾತ್ಮ್ಯಂ ವ್ಯಕ್ತಸದ್ಗುಣಃ ।।೨।।

ದೃಷ್ಟಾಯುಕ್ತಿಃ ಸಮಾನತ್ವಂ ಕರ್ತೃಶಕ್ತಿರ್ವಿಮಿಶ್ರಿತಾ ।

ಯುಕ್ತಯಃ ಪೂರ್ವಪಕ್ಷೇಷು ಸುನಿರ್ಣೀತಾಸ್ತು ತಾದೃಶಾಃ ।।

ಯುಕ್ತಯೋ ನಿರ್ಣಯಸ್ಯೈವ ಸ್ವಯಂ ಭಗವತೋದಿತಾಃ ।।೩।।

ಈ ನಾಲ್ಕನೆಯ ಪಾದದಲ್ಲಿ ಸ್ಪಷ್ಟಾರ್ಥವುಳ್ಳ ಶ್ರುತಿ, ವಿಶೇಷ ಶ್ರುತಿವಿರೋಧ, ಪ್ರಾಣನಿಗಿಂತ ಅಧಿಕವಾದ ವಿಷ್ಣುವಿನ ಮಹಿಮೆ, ಅಭಿವ್ಯಕ್ತಸದ್ಗುಣತ್ವ, ದೃಷ್ಟ

ಶ್ರುತ್ಯುಕ್ತಾರ್ಥದ ಅಯುಕ್ತತೆ, ಸಮಾನತೆ, ವಿಷ್ಣುವಿನ ಕರ್ತೃತ್ವ ಶಕ್ತಿ, ವಿಮಿಶ್ರಿತಾ – ಇವು ಪೂರ್ವಪಕ್ಷಗಳ ಯುಕ್ತಿಗಳು. ಚೆನ್ನಾಗಿ ನಿರ್ಣಯಿಸಲ್ಪಟ್ಟ ಹಿಂದೆ ಹೇಳಿದಂತೆ ಹೆಸರುಳ್ಳ ಯುಕ್ತಿಗಳೇ ಸಿದ್ಧಾಂತ ಯುಕ್ತಿಗಳು. ಹೀಗೆ ಸಿದ್ಧಾಂತ ನಿರ್ಣಯಕ್ಕಾಗಿ ಸ್ವಯಂ ಶ್ರೀವೇದವ್ಯಾಸರಿಂದಲೇ ಹೇಳಲ್ಪಟ್ಟಿವೆ.

ಶ್ರೀಮದಾಚಾರ್ಯರು ಸೂತ್ರರೂಪವಾಗಿ ಮೇಲೆ ಸೂಚಿಸಿರುವ ಈ ಪಾದದ ಎಲ್ಲ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ನ್ಯಾಯವಿವರಣ ಟೀಕೆಯ ಆದಾರದ ಮೇಲೆ ಈ ಕೆಳಗೆ ವಿವರಣೆ ನೀಡಲಾಗಿದೆ –

೧. ಪ್ರಾಣೋತ್ಪತ್ತಿ ಅಧಿಕರಣ (ಸ್ಪಷ್ಟಾರ್ಥವತ್ ಶ್ರುತಿಃ ಎಂಬ ಯುಕ್ತಿ)

ಪೂರ್ವಪಕ್ಷ–'ಅಥ ಪ್ರಾಣಾ ಏವಾನಾದಯಃ' (ಪ್ರಾಣಗಳು ಅನಾದಿಯಾಗಿವೆ) ಮುಂತಾದ ಶ್ರುತಿಗಳು ಸ್ಪಷ್ಟವಾಗಿ ಪ್ರಾಣಗಳಿಗೆ ಉತ್ಪತ್ತಿಯ ಅಭಾವವನ್ನು ಬೋಧಿಸುತ್ತವೆ. 'ಏತಸ್ಮಾಜ್ಜಾಯತೇ ಪ್ರಾಣಃ' ಇತ್ಯಾದಿ ಶ್ರುತಿಗಳು ಪ್ರಾಣಗಳಿಗೆ ಉತ್ಪತ್ತಿಯನ್ನು ಹೇಳುತ್ತವೆ. ಹೀಗೆ ಸ್ಪಷ್ಟಾರ್ಥವಾದ ಶ್ರುತಿಗಳಿಗೆ (ಪ್ರಾಣಗಳಿಗೆ ಅನಾದಿತ್ವವನ್ನು ಹೇಳುವ ಶ್ರುತಿಗಳಿಗೆ) ವಿರುದ್ಧವಾದುದರಿಂದ ಪ್ರಾಣನಿಗೆ ಉತ್ಪತ್ತಿಯನ್ನು ಹೇಳುವ ಶ್ರುತಿಗಳು ಅಪ್ರಮಾಣ. ಆದ್ದರಿಂದ ಪರಮಾತ್ಮನಿಗೆ ಸರ್ವಕರ್ತೃತ್ವವು ಕೂಡುವುದಿಲ್ಲ.

ಸಿದ್ಧಾಂತ – 'ಆತ್ಮೈವೇದಮಗ್ರ ಆಸೀತ್', 'ಸ ಪ್ರಾಣಮಸೃಜತ ಸ ಪ್ರಾಣಾನ್' ಇತ್ಯಾದಿ ಶ್ರುತಿಗಳು ಸ್ಪಷ್ಟವಾಗಿ ಪ್ರಾಣನಿಗೆ ಉತ್ಪತ್ತಿಯನ್ನು ಹೇಳುವುದರಿಂದ, ಪ್ರಾಣಗಳು ಅನಾದಿಯಲ್ಲ. ಪ್ರಾಣಗಳಿಗೆ ಅನಾದಿತ್ವವನ್ನು ಹೇಳುವ ಶ್ರುತಿಗಳು ಸೂಕ್ಷ್ಮರೂಪದಿಂದ ಅನಾದಿತ್ವವನ್ನು ಹೇಳುತ್ತವೆ. 'ಇದಂ ಸರ್ವಮಸೃಜತ' (ಕಣ್ಣಿಗೆ ಕಾಣುವ ಇವೆಲ್ಲವನ್ನೂ ಪರಮಾತ್ಮನು ಸೃಷ್ಟಿಸಿದನು) ಎಂದು ಶ್ರುತಿಯು ಎಲ್ಲ ಪದಾರ್ಥಗಳಿಗೂ ಪರಮಾತ್ಮನಿಂದ ಉತ್ಪತ್ತಿಯನ್ನು ಹೇಳುವುದರಿಂದ, ಪ್ರಾಣಗಳಿಗೆ ಪರಮಾತ್ಮನಿಂದ ಉತ್ಪತ್ತಿಯನ್ನು ಅಂಗೀಕರಿಸಲೇಬೇಕು. ಆದ್ದರಿಂದ ವಿಷ್ಣುವೇ ಸರ್ವಜಗತ್ಕಾರಣನು.

೨. ತತ್ಪ್ರಾಗಧಿಕರಣ (ವಿಶೇಷ ಶ್ರುತಿ ವೈರೂಪ್ಯಂ ಎಂಬ ಯುಕ್ತಿ)

ಪೂರ್ವಪಕ್ಷ – 'ನಿತ್ಯಂ ಮನೋಽನಾದಿತ್ವಾತ್' ಎಂಬ ಶ್ರುತಿಯು ಮನಸ್ಸು ಅನಾದಿಯಾದ್ದರಿಂದ ಅದಕ್ಕೆ ಉತ್ಪತ್ತಿಯಾಗಲೀ ನಾಶವಾಗಲೀ ಇಲ್ಲವೆಂದು ಹೇಳುತ್ತದೆ. ಆದ್ದರಿಂದ ಪರಮಾತ್ಮನಿಗೆ ಸರ್ವಕರ್ತೃತ್ವವು ಕೂಡುವುದಿಲ್ಲ.

ಸಿದ್ಧಾಂತ – 'ಏತಸ್ಮಾಜ್ಜಾಯತೇ ಪ್ರಾಣೋ ಮನಸ್ಸರ್ವೇಂದ್ರಿಯಾಣಿ ಚ' ಇತ್ಯಾದಿ ಶ್ರುತಿಯು ಮನಸ್ಸು ಮತ್ತು ಎಲ್ಲ ಇಂದ್ರಿಯಗಳೂ ಪರಮಾತ್ಮನಿಂದಲೇ ಹುಟ್ಟುತ್ತವೆ ಎಂದು ಹೇಳುತ್ತವೆ. ಮನಸ್ಸಿಗೆ ಸೃಷ್ಟಿಕಾಲದಲ್ಲಿ ಭೂತೋಪಚಯರೂಪ

ಉತ್ಪತ್ತಿಯು ಆಗುವುದು. ಭೂತೋಪಚಯವು ಬಹಳ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಮನಸ್ಸು ಅನಾದಿಯೆಂದು ಶ್ರುತಿಗಳು ಹೇಳುತ್ತವೆಯೇ ಹೊರತು ಸಂಪೂರ್ಣವಾಗಿ ಅನಾದಿತ್ವವನ್ನಲ್ಲ. ಆದ್ದರಿಂದ ವಿಷ್ಣುವಿಗೆ ಸರ್ವಜಗತ್ಕಾರಣತ್ವವು ಕೂಡುತ್ತದೆ.

೩. ವಾಗಧಿಕರಣ (ವಿಶೇಷ ಶ್ರುತಿ ವೈರೂಪ್ಯಂ ಎಂಬ ಯುಕ್ತಿ)

ಪೂರ್ವಪಕ್ಷ – ವಾಕ್ ನಿತ್ಯವೇ ಎಂದು 'ವಾಗ್ವಾವ ನಿತ್ಯಾ' ಎಂಬ ಶ್ರುತಿಯು ಹೇಳುತ್ತದೆ. ಇಲ್ಲಿ ವಾಕ್ ಎಂದರೆ ವಾಗಿಂದ್ರಿಯ ಎಂದರ್ಥ. ಶ್ರುತಿಯೆಂದು ಅರ್ಥ ಮಾಡಿದರೆ 'ಅಸ್ಯಾಂ ಹಿ ಶ್ರುತಿರವತಿಷ್ಠತೇ' ಎಂದು ಹೇಳುವ ಶ್ರುತಿಗೆ ವಿರೋಧ ಬರುತ್ತದೆ (ಏಕೆಂದರೆ ಶ್ರುತಿಯಲ್ಲಿ ಶ್ರುತಿಯಿರುವುದು ಸಾಧ್ಯವಿಲ್ಲ). ಹೀಗೆ ವಾಗಿಂದ್ರಿಯವು ಅನಾದಿಯಾದ್ದರಿಂದ ಪರಮಾತ್ಮನು ಸರ್ವಕರ್ತನಲ್ಲ.

ಸಿದ್ಧಾಂತ – 'ಮನಸೋ ವಾವ ವಾಕ್' ಎಂಬ ಶ್ರುತಿಯು ಮನಸ್ಸಿನಿಂದ ವಾಗಿಂದ್ರಿಯಕ್ಕೆ ಉತ್ಪತ್ತಿಯನ್ನು ಹೇಳುತ್ತದೆ. ಆದ್ದರಿಂದ ಮನಸ್ಸು ಅನಾದಿಯಲ್ಲ. ಅನಾದಿ ನಿತ್ಯವಾದ ವೇದದ ಸನ್ನಿಧಿಯು ವಾಗಿಂದ್ರಿಯದಲ್ಲಿರುವುದರಿಂದ ವಾಕ್ಕನ್ನು ಅನಾದಿಯೆಂದು ಶ್ರುತಿಯು ಹೇಳುತ್ತದೆ. ಹೀಗೆ ವಾಗಿಂದ್ರಿಯಕ್ಕೆ ಉತ್ಪತ್ತಿಯು ಶ್ರುತವಾಗಿರುವುದರಿಂದ ಪರಮಾತ್ಮನಿಗೆ ಸರ್ವಕರ್ತೃತ್ವವು ಕೂಡುತ್ತದೆ.

೪. ಸಪ್ತಗತ್ಯಧಿಕರಣ (ವಿಶೇಷ ಶ್ರುತಿ ವೈರೂಪ್ಯಂ ಎಂಬ ಯುಕ್ತಿ)

ಪೂರ್ವಪಕ್ಷ– ಪುರುಷನಲ್ಲಿ ಹತ್ತು ಪ್ರಾಣಗಳಿವೆ, ಹನ್ನೊಂದನೆಯವನು ಆತ್ಮ (ದಶಮೇ ಪುರುಷೇ ಪ್ರಾಣಾಃ ಆತ್ಮೈಕಾದಶಃ) ಎಂದು ಒಂದು ಶ್ರುತಿಯೂ, ಏಳು ಪ್ರಾಣಗಳು ಈ ಪರಮಾತ್ಮನಿಂದ ಉತ್ಪತ್ತಿಯಾಗುತ್ತವೆ (ಸಪ್ತಪ್ರಾಣಾಃ ಪ್ರಭವಂತಿ ತಸ್ಮಾತ್) ಎಂಬುದಾಗಿ ಇನ್ನೊಂದು ಶ್ರುತಿಯೂ ಹೇಳುತ್ತದೆ. ಹೀಗೆ ಶ್ರುತಿಗಳಿಗೆ ಪರಸ್ಪರ ವಿರೋಧವಿರುವುದರಿಂದ ಇದಮಿತ್ಥಂ ಎಂದು ನಿರ್ಣಯಿಸಲು ಆಗುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತ – ಐದು ಜ್ಞಾನೇಂದ್ರಿಯಗಳು ಹಾಗೂ ಐದು ಕರ್ಮೇಂದ್ರಿಯಗಳು ಸೇರಿ ಒಟ್ಟು ಪ್ರಾಣಗಳು ಹತ್ತೇ. ಆದರೆ ಐದು ಕರ್ಮೇಂದ್ರಿಯಗಳೊಂದಿಗೆ ಮನಸ್ಸು ಮತ್ತು ಬುದ್ಧಿಗಳು ಸೇರಿ ಏಳು ಇಂದ್ರಿಯಗಳಾಗುತ್ತವೆ. ಈ ವಿವಕ್ಷೆಯಿಂದ ಇಂದ್ರಿಯಗಳು ಏಳು ಎಂದು ಇನ್ನೊಂದು ಶ್ರುತಿ ಹೇಳುತ್ತದೆ. ಇದೇ ವಿಷಯವನ್ನು ಸ್ಪಷ್ಟೀಕರಿಸುವ ಇನ್ನೂ ಕೆಲವು ವಿಶೇಷ ಶ್ರುತಿಗಳಿವೆ. ಶ್ರುತಿಗಳು ವಿವಕ್ಷಾ ಭೇದದಿಂದ ಬೇರೆ ಬೇರೆಯಾಗಿ ಹೇಳುವುದರಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ಆದ್ದರಿಂದ ವಿಷ್ಣುವಿಗೆ ಸರ್ವಜಗತ್ಕಾರಣತ್ವವು ಕೂಡುತ್ತದೆ.

೫. ಅಣ್ವಧಿಕರಣ (ವಿಶೇಷ ಶ್ರುತಿ ವೈರೂಪ್ಯಂ ಎಂಬ ಯುಕ್ತಿ)

ಪೂರ್ವಪಕ್ಷ – 'ದಿವೀವ ಚಕ್ಷುರಾತತಂ' ಇತ್ಯಾದಿ ಶ್ರುತಿಗಳು ಚಕ್ಷುಸ್ಸು

ಮುಂತಾದ ಇಂದ್ರಿಯಗಳು ವ್ಯಾಪ್ತವೆಂದು ಹೇಳುತ್ತವೆ. ಆದ್ದರಿಂದ ಇಂದ್ರಿಯಗಳು ಅಣುವೆಂದು ಹೇಳುವ ಶ್ರುತಿಗಳು ಅಪ್ರಮಾಣ. ಅಪ್ರಮಾಣವಾದ ವೇದ ವಾಕ್ಯಗಳಿಂದ ವಿಷ್ಣುವಿನ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ.

ಸಿದ್ಧಾಂತ – 'ಅಣೂನಿ ವಾ ಇಂದ್ರಿಯಾಣಿ, ತೇಷಾಂ ಪ್ರಕಾಶೋ ವ್ಯಾತತಃ' ಎಂಬ ಶ್ರುತಿಯು ಇಂದ್ರಿಯಗಳು ಅಣುವಾಗಿವೆ, ಅವುಗಳ ಪ್ರಕಾಶವು ಸರ್ವತ್ರ ವ್ಯಾಪ್ತವಾಗಿದೆ ಎಂದು ಇಂದ್ರಿಯಗಳಿಗೆ ಅಣುತ್ವವನ್ನು ಪ್ರತಿಪಾದಿಸುತ್ತವೆ. ಹೀಗೆ ವಿಶೇಷ ಶ್ರುತಿ ಇರುವುದರಿಂದ, ಇಂದ್ರಿಯಗಳು ಅಣುವೆಂದು ಹೇಳುವ ಶ್ರುತಿಗೂ, ವ್ಯಾಪ್ತವೆಂದು ಹೇಳುವ ಶ್ರುತಿಗೂ ಪರಸ್ಪರ ವಿರೋಧವಿರುವುದಿಲ್ಲ. ಆದ್ದರಿಂದ ವೇದಗಳಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುತ್ತದೆ.

೬. ಮುಖ್ಯಪ್ರಾಣಾಧಿಕರಣ (ಮಾಹಾತ್ಮ್ಯಂ ಎಂಬ ಯುಕ್ತಿ)

ಪೂರ್ವಪಕ್ಷ – 'ನೈಷ ಪ್ರಾಣ ಉದೇತಿ' ಎಂಬ ಶ್ರುತಿಯು ಮುಖ್ಯಪ್ರಾಣನಿಗೆ ಉತ್ಪತ್ತಿಯಿಲ್ಲವೆಂದು ಹೇಳುತ್ತದೆ. 'ಯತ್ ಪ್ರಾಪ್ತಿರ್ಯತ್ಪರಿತ್ಯಾಗ ಉತ್ಪತ್ತಿರ್ಮರಣಂ ತಥಾ। ತಸ್ಯೋತ್ಪತ್ತಿರ್ಮೃತಿಶ್ಚೈವ ಕಥಂ ಪ್ರಾಣಸ್ಯ ಯುಜ್ಯತೇ' ಎಂಬುದಾಗಿ ಸಕಲ ಜಗತ್ತಿಗೆ ಮುಖ್ಯಪ್ರಾಣನಿಂದ ಜೀವನಪ್ರದತ್ವವೆಂಬ ಮಹಿಮೆಯನ್ನು ಹೇಳುವ ಶ್ರುತಿಯಿಂದಲೂ ಪ್ರಾಣನಿಗೆ ಉತ್ಪತ್ತಿಯಿಲ್ಲವೆಂದು ತಿಳಿಯುತ್ತದೆ. ಆದ್ದರಿಂದ ಮುಖ್ಯ ಪ್ರಾಣನಿಗೆ ಉತ್ಪತ್ತಿಯಿದೆಯೆಂದು ಹೇಳುವ ಶ್ರುತಿಗಳು ಅಪ್ರಮಾಣ. ಆದ್ದರಿಂದ ವಿಷ್ಣುವಿನ ಜಗತ್ಕಾರಣತ್ವವು ಶ್ರುತಿಗಳಿಂದ ಸಿದ್ಧವಾಗುವುದಿಲ್ಲ.

ಸಿದ್ಧಾಂತ – 'ಮಹತ್ವಾನ್ಮಹತಾಂ ವಿಷ್ಣುಃ ಕರ್ತಾ ಪ್ರಾಣಸ್ಯ ಚೈಕರಾಟ್। ಕಿಂ ನಾಮ ನ ಸೃಜೇದೇಷಃ ಯೇನ ಶಕ್ತ್ಯೇದಮಾವೃತಂ' (ವಿಷ್ಣುವು ಮಹಾತ್ಮರಿಗಿಂತ ಮಹಾತ್ಮನು, ಪ್ರಾಣನಿಗೂ ಸೃಷ್ಟಿಕರ್ತ, ಇಡೀ ಜಗತ್ತು ಅವನ ಶಕ್ತಿಯಿಂದ ಆವೃತವಾಗಿದೆ, ಇಂಥಹ ವಿಷ್ಣುವು ಏನನ್ನು ತಾನೇ ಸೃಷ್ಟಿಸಲಾರನು?) ಎಂಬ ಶ್ರುತಿಯು ಮುಖ್ಯಪ್ರಾಣನಿಗೆ ಪರಮಾತ್ಮನಿಂದ ಉತ್ಪತ್ತಿಯನ್ನು ಹೇಳುತ್ತದೆ. ಆದ್ದರಿಂದ ಪ್ರಾಣನ ಮಹಾತ್ಮೆಗಿಂತ ಅಧಿಕವಾದ ಮಹಾತ್ಮೆವುಳ್ಳ ವಿಷ್ಣುವಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳಿಗೆ ಯಾವುದೇ ವಿರೋಧವಿಲ್ಲ.

೭. ಚಕ್ಷುರಧಿಕರಣ (ಮಾಹಾತ್ಮ್ಯಂ ಎಂಬ ಯುಕ್ತಿ)

ಪೂರ್ವಪಕ್ಷ – ಮುಖ್ಯಪ್ರಾಣನು ಸ್ವತಂತ್ರನು. ಏಕೆಂದರೆ 'ನ ಪ್ರಾಣಃ ಕಿಂಚಿದ್ ಆಶ್ರಿತಃ' 'ಯದಾಶ್ರಯಾದಸ್ಯ ಚೇಷ್ಟಾ ಸೋಽನ್ಯಂ ಕಥಮುಪಾಶ್ರಯೇತ್' ಮುಂತಾದ ಶ್ರುತಿಗಳು ಮುಖ್ಯಪ್ರಾಣನು ಯಾರನ್ನೂ ಆಶ್ರಯಿಸಿಲ್ಲ, ಈ ಜಗತ್ತಿನ ಎಲ್ಲ ವ್ಯಾಪಾರಗಳು ಮುಖ್ಯಪ್ರಾಣನನ್ನೇ ಆಶ್ರಯಿಸಿ ನಡೆಯುತ್ತವೆ ಇತ್ಯಾದಿಯಾಗಿ ಮುಖ್ಯಪ್ರಾಣನ ಮಹಾತ್ಮೆಯನ್ನು ಹೇಳುತ್ತವೆ. ಆದ್ದರಿಂದ ಮುಖ್ಯಪ್ರಾಣನು

ಪರಮಾತ್ಮನನ್ನು ಆಶ್ರಯಿಸಿದ್ದಾನೆ ಎಂದು ಹೇಳುವ ಶ್ರುತಿಗಳು ಅಪ್ರಮಾಣ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಕೂಡುವುದಿಲ್ಲ.

ಸಿದ್ಧಾಂತ – 'ಸರ್ವಕರ್ತಾಽಪಿ ಸನ್ ಪ್ರಾಣಃ ಪರಮಾಧಾರತಃ ಸ್ಥಿತಃ' ಇತ್ಯಾದಿ ಶ್ರುತಿಗಳು ಸರ್ವಕರ್ತನೇ ಆಗಿದ್ದರೂ ಪ್ರಾಣನು ಪರಮಾತ್ಮನನ್ನೇ ಆಶ್ರಯಿಸಿದ್ದಾನೆ ಎಂದು ಹೇಳುವುದರಿಂದ ವಿಷ್ಣುವಿಗೆ ಪ್ರಾಣನಿಗಿಂತ ಅಧಿಕವಾದ ಮಹಾತ್ಮೆಯನ್ನು ಹೇಳುವ ಶ್ರುತಿಗಳು ಅಪ್ರಮಾಣವಲ್ಲ. ಆದ್ದರಿಂದ ವಿಷ್ಣುವೇ ಸರ್ವಜಗತ್ಕಾರಣನು.

೮. ಪಂಚವೃತ್ತ್ಯಧಿಕರಣ (ವ್ಯಕ್ತ ಸದ್ಗುಣತ್ವ ಎಂಬ ಯುಕ್ತಿ)

ಪೂರ್ವಪಕ್ಷ – ಪ್ರಾಣ ಅಪಾನ ವ್ಯಾನ ಉದಾನ ಮತ್ತು ಸಮಾನ ಎಂಬ ಐದು ಪ್ರಾಣಗಳು ಮುಖ್ಯಪ್ರಾಣನ ದಾಸರು ಎಂದು ಒಂದು ಶ್ರುತಿ ಹೇಳಿದರೆ, ಗುದ ಶಿಶ್ನಗಳಲ್ಲಿ ಅಪಾನ, ಮುಖ ಕಣ್ಣು ಮೂಗುಗಳಲ್ಲಿ ಪ್ರಾಣ, ನಾಭಿಯಲ್ಲಿ ಸಮಾನ, ನಾಡಿಗಳಲ್ಲಿ ವ್ಯಾನ, ಗಂಟಲಲ್ಲಿ ಮೇಲೆ ಉದಾನ ಹೀಗೆ ಬೇರೆ ಬೇರೆ ಪ್ರಾಣಗಳು ತಮ್ಮ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತವೆ ಎಂಬುದಾಗಿ ಇನ್ನೊಂದು ಶ್ರುತಿಯು ಪ್ರಾಣಾದಿಗಳಿಗೆ ವ್ಯಕ್ತಸದ್ಗುಣತ್ವವನ್ನು ಹೇಳುತ್ತದೆ. ಮುಖ್ಯಪ್ರಾಣನ ದಾಸರಿಗೆ ವ್ಯಕ್ತ ಸದ್ಗುಣತ್ವವು ಹೇಳಲ್ಪಟ್ಟಿರುವುದರಿಂದ ಸ್ವಾಮಿಯಾದ ಮುಖ್ಯಪ್ರಾಣನಿಗೆ ಈ ರೀತಿಯ ವಕ್ತಸದ್ಗುಣತ್ವವಿಲ್ಲವೆಂದಾಗುವುದು. ಇದು ಅಯುಕ್ತವು. ಆದ್ದರಿಂದ ಮುಖ್ಯಪ್ರಾಣನೇ ಇತರ ಪ್ರಾಣಾದಿಗಳು ಎಂದು ಅರ್ಥಮಾಡಬೇಕಾಗುತ್ತದೆ. ಹೀಗೆ ಶ್ರುತಿಗಳಿಗೆ ಪರಸ್ಪರ ವಿರೋಧವು. ಆದ್ದರಿಂದ ವಿಷ್ಣುವಿನ ಜಗತ್ಕರ್ತೃತ್ವವನ್ನು ಶ್ರುತಿಗಳಿಂದ ನಿರ್ಣಯಿಸಲು ಶಕ್ಯವಿಲ್ಲ. ಆದ್ದರಿಂದ ವಿಷ್ಣುವು ಸರ್ವಜಗತ್ಕಾರಣನಲ್ಲ.

ಸಿದ್ಧಾಂತ – 'ಅಶೇಷ ಗುಣಪೂರ್ಣಾನಿ ಮುಖ್ಯಪ್ರಾಣಾನಿ ಪಂಚ ಚ। ತದ್ದಾಸಾಃ ಪಂಚ ಚಾನ್ಯೇಪಿ ಪ್ರಾಣಾದ್ಯಾಃ ಸದ್ಗುಣೈರ್ಯುತಾಃ' ಎಂಬ ಶ್ರುತಿಯು ಮುಖ್ಯಪ್ರಾಣ ಸ್ವರೂಪರಾದ ಐದು ಪ್ರಾಣಗಳಿಗೆ ಅಶೇಷ ಸದ್ಗುಣತ್ವವಿದೆ. ಮುಖ್ಯಪ್ರಾಣನ ದಾಸರಾದ ಬೇರೆ ಐದು ವ್ಯಕ್ತಸದ್ಗುಣ ಪ್ರಾಣಾದಿಗಳೂ ಇವೆ ಎಂದು ಹೇಳುತ್ತದೆ. ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲವಾದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳು ಪ್ರಮಾಣವೇ ಆಗಿವೆ.

೯. ಪ್ರಾಣಾಣುತ್ವಾಧಿಕರಣ (ದೃಷ್ಟಾಯುಕ್ತಿ ಎಂಬ ಯುಕ್ತಿ)

ಪೂರ್ವಪಕ್ಷ – 'ಪ್ರಾಣ ಏವಾಧಸ್ತಾತ್ ಪ್ರಾಣ ಉಪರಿಷ್ಟಾತ್' 'ಮಹಾನ್ವೈ ಮುಖ್ಯಪ್ರಾಣೋ ಯೇನ ವ್ಯಾಪ್ತಂ ಚರಾಚರಂ' ಇತ್ಯಾದಿ ಶ್ರುತಿಗಳು ಪ್ರಾಣನು ವ್ಯಾಪ್ತನೆಂದು ಹೇಳುತ್ತವೆ. 'ಅಣುರ್ವೈ ಮುಖ್ಯಪ್ರಾಣೋ' ಎಂಬಿತ್ಯಾದಿ ಶ್ರುತಿಯು ಪ್ರಾಣನನ್ನು ಅಣುವೆಂದು ಹೇಳುತ್ತದೆ. ಆದ್ದರಿಂದ ಪ್ರಾಣನ್ನು ಅಣುವೆಂದು ಅಂಗೀಕರಿಸಿದರೆ ದೃಷ್ಟವಾದ ವ್ಯಾಪ್ತತ್ವವನ್ನು ಹೇಳುವ ಶ್ರುತಿಗಳಿಗೆ ವಿರೋಧ

ಬರುತ್ತದೆ. ಆದ್ದರಿಂದ ಶ್ರುತಿಗಳಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತ – ಮುಖ್ಯಪ್ರಾಣನು ಅಣುವೆಂದು ಹೇಳುವ 'ಅಣುರ್ವೈ ಮುಖ್ಯ ಪ್ರಾಣೋ ಯ ಉತ್ಕ್ರಾಮತಿ ನಾಡೀಭಿಃ' ಇತ್ಯಾದಿ ಶ್ರುತಿಗಳು ಪ್ರಮಾಣವೇ. ಮುಖ್ಯಪ್ರಾಣನು ಸ್ವರೂಪತಃ ಅಣುವಾಗಿದ್ದರೂ, ತನ್ನ ದೇಹದ ಹೊರಗಿರುವ ಮತ್ತೊಂದು ರೂಪದಿಂದ ಸರ್ವತ್ರ ವ್ಯಾಪ್ತನಾಗಿದ್ದಾನೆ ಎಂದು ಅರ್ಥ. ಹಾಗಿಲ್ಲದಿದ್ದರೆ ದೃಷ್ಟವಾದ ಪ್ರಾಣನ ನಾಡೀ ಸಂಚಾರಾದಿಗಳು ಅಯುಕ್ತವಾಗುತ್ತವೆ. ಆದ್ದರಿಂದ ಅಣುತ್ವ ಹಾಗೂ ವ್ಯಾಪ್ತತ್ವ ಪ್ರತಿಪಾದಕ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ಆದ್ದರಿಂದ ವಿಷ್ಣುವಿಗೆ ಸರ್ವಜಗತ್ಕಾರಣತ್ವವು ಕೂಡುತ್ತದೆ.

೧೦. ಜ್ಯೋತಿರಧಿಕರಣ (ದೃಷ್ಟಾಯುಕ್ತಿ ಎಂಬ ಯುಕ್ತಿ)

ಪೂರ್ವಪಕ್ಷ – ಪ್ರಾಣಗಳು ಜೀವನಿಗೆ ಕರಣಗಳು (ಜೀವಸ್ಯ ಕರಣಾನ್ಯಾಹುಃ ಪ್ರಾಣಾನ್) ಎಂದು ಒಂದು ಶ್ರುತಿಯೂ, ಈ ಪ್ರಾಣಗಳು ಬ್ರಹ್ಮನಿಗೆ ಕರಣಗಳು (ಬ್ರಹ್ಮಣೋ ವಾ ಏತಾನಿ ಕರಣಾನಿ) ಎಂದು ಇನ್ನೊಂದು ಶ್ರುತಿಯೂ ಹೇಳುತ್ತದೆ. ಪ್ರಾಣಗಳು ಬ್ರಹ್ಮನ ಕರಣಗಳೆಂದು ಒಪ್ಪಿದರೆ, ದೃಷ್ಟವಾದ ಜೀವಕರಣತ್ವವು ಅಯುಕ್ತವಾಗುತ್ತದೆ. ಬ್ರಹ್ಮನ ಕರಣತ್ವವನ್ನು ಹೇಳುವ ಶ್ರುತಿಯು ಅಪ್ರಮಾಣವು. ಅಪ್ರಮಾಣವಾದ ಶ್ರುತಿಯಿಂದ ವಿಷ್ಣುವಿನ ಜಗತ್ಕಾರಣತ್ವವು ಸಿದ್ಧಿಸುವುದಿಲ್ಲ.

ಸಿದ್ಧಾಂತ–'ಯಶ್ಚಕ್ಷುಷಿ ತಿಷ್ಠನ್' (ಯಾವನು ಕಣ್ಣಿನಲ್ಲಿದ್ದು ಅದನ್ನು ನಿಯಮನ ಮಾಡುತ್ತಾನೋ ಅವನು ಬ್ರಹ್ಮ) ಇತ್ಯಾದಿ ಶ್ರುತಿಗಳು ಚಕ್ಷುರಾದಿ ಪ್ರಾಣಗಳು (ಇಂದ್ರಿಯಗಳು) ಪರಮಾತ್ಮನ ಅಧೀನವೆಂದು ಹೇಳುತ್ತವೆ. ದೃಷ್ಟವಾದ ಜೀವವ ಅಧೀನವೆಂಬುದು ಅಯುಕ್ತವು. ಕೆಲವು ಸಲ ಜೀವನ ಅಧೀನವೆಂಬುದಾಗಿ ಕಂಡರೂ ಅದೂ ಈಶ್ವರನ ಇಚ್ಛೆಯಿಂದಲೇ. ಆದ್ದರಿಂದ ಕೆಲವು ಶ್ರುತಿಗಳು ಪ್ರಾಣಗಳು ಜೀವನ ಕರಣಗಳೆಂದು ಹೇಳುತ್ತವೆ. ಇದರಿಂದ ಪ್ರಾಣಗಳು ಈಶ್ವರನ ಕರಣಗಳೆಂದು ಹೇಳುವ ಶ್ರುತಿಗಳಿಗೆ ವಿರೋಧ ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಕೂಡುವುದು.

೧೧. ಇಂದ್ರಿಯಾಧಿಕರಣ (ಸಮಾನತ್ವಂ ಎಂಬ ಯುಕ್ತಿ)

ಪೂರ್ವಪಕ್ಷ – 'ಪ್ರಾಣಾ ವಾ ಇಂದ್ರಿಯಾಣಿ' (ಪ್ರಾಣಗಳೆಲ್ಲ ಇಂದ್ರಿಯಗಳು) ಎಂಬ ಶ್ರುತಿಯಿಂದ ಮುಖ್ಯಪ್ರಾಣನೂ ಕೂಡಿ ಎಲ್ಲ ಪ್ರಾಣಗಳೂ ಇಂದ್ರಿಯಗಳೇ ಎಂದು ತಿಳಿಯುತ್ತದೆ. ಆದ್ದರಿಂದ ಚಕ್ಷುರಾದಿ ಇಂದ್ರಿಯಗಳಂತೆ ಮುಖ್ಯಪ್ರಾಣನೂ ಈಶ್ವರನ ಅಧೀನನು. ಹೀಗೆ ಯುಕ್ತಿ ಮತ್ತು ಶ್ರುತಿಗಳಿಂದ ಮುಖ್ಯಪ್ರಾಣ ಹಾಗೂ ಇಂದ್ರಿಯಗಳಿಗೆ ಸಮಾನತ್ವವು. ಆದ್ದರಿಂದ ಮುಖ್ಯಪ್ರಾಣನು ಇಂದ್ರಿಯನಲ್ಲ ಎಂದು ಹೇಳುವ ಶ್ರುತಿಗಳು ಅಪ್ರಮಾಣವಾಗುತ್ತವೆ. ಆದ್ದರಿಂದ ವಿಷ್ಣುವು ಜಗತ್ಕಾರಣನಲ್ಲ.

ಸಿದ್ಧಾಂತ – ಮನಸ್ಸು ಮತ್ತು ಬುದ್ಧಿಗಳು ಕೂಡಿ ಒಟ್ಟು ಹನ್ನೆರಡೇ ಇಂದ್ರಿಯಗಳು ಎಂಬುದಾಗಿ ಶ್ರುತಿಗಳು ಹೇಳುತ್ತಿವೆ. ಹಾಗೂ 'ಪ್ರಾಣಸ್ಯೈತದ್ವಶೇ ಸರ್ವಂ' ಎಂಬ ಶ್ರುತಿಯಿಂದ ಮುಖ್ಯಪ್ರಾಣನಲ್ಲಿ ವಿಷ್ಣುವಿನಲ್ಲಿರುವಂತೆ ಸರ್ವಾಧಿಪತ್ಯವಿದೆಯೆಂದು ತಿಳಿಯುತ್ತದೆ. ಮುಖ್ಯಪ್ರಾಣನಿಗೆ ಇಂದ್ರಿಯತ್ವವನ್ನು ಅಂಗೀಕರಿಸಿದರೆ, ಅವನಿಗೆ ಸರ್ವಾಧಿಪತ್ಯವನ್ನು ಹೇಳುವ ಶ್ರುತಿಗೆ ಅಪ್ರಮಾಣ ಬರುವುದು. ಆದ್ದರಿಂದ ಶ್ರುತಿಯು ಮುಖ್ಯಪ್ರಾಣನನ್ನು ಬಿಟ್ಟು ಉಳಿದವುಗಳಿಗೆ ಮಾತ್ರ ಇಂದ್ರಿಯತ್ವವನ್ನು ಹೇಳುತ್ತದೆ. ಮುಖ್ಯಪ್ರಾಣನ ಸರ್ವಾಧಿಪತ್ಯವೂ ಪರಮಾತ್ಮನ ಅಧೀನವೇ ಆದುದು. ಆದ್ದರಿಂದ ಶ್ರುತಿಗಳಿಗೆ ಪರಸ್ಪರ ವಿರೋಧವಿಲ್ಲ. ಆದ್ದರಿಂದ ವಿಷ್ಣುವೇ ಜಗತ್ಕಾರಣ.

೧೨. ಸಂಜ್ಞಾಧಿಕರಣ (ಕರ್ತೃಶಕ್ತಿ ಎಂಬ ಯುಕ್ತಿ)

ಪೂರ್ವಪಕ್ಷ – 'ವಿರಿಂಚೋ ವಾ ಇದಂ ಸರ್ವಂ ವಿರೇಚಯತಿ ವಿದಧಾತಿ' ಎಂಬ ಶ್ರುತಿಯಿಂದ ಚತುರ್ಮುಖ ಬ್ರಹ್ಮನೇ ಈ ಎಲ್ಲ ಜಗತ್ತನ್ನೂ ಸೃಷ್ಟಿಸುತ್ತಾನೆ ಎಂದು ತಿಳಿಯುತ್ತದೆ. ಆದ್ದರಿಂದ ಪರಬ್ರಹ್ಮನೇ ಸರ್ವಕರ್ತೃವೆಂದು ಹೇಳುವ ಶ್ರುತಿಗಳು ಅಪ್ರಮಾಣ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ.

ಸಿದ್ಧಾಂತ – 'ಅಥ ಕಸ್ಮಾದುಚ್ಯತೇ ಪರಮ ಇತಿ, ಪರಮಾದ್ಧ್ಯೇತೇ ನಾಮ ರೂಪೇ ವ್ಯಾಕ್ರಿಯತೇ' (ಈ ವಿಷ್ಣುವಿನಿಂದಲೇ ನಾಮರೂಪಾತ್ಮಕವಾದ ಪ್ರಪಂಚದ ಸೃಷ್ಟಿ) ಎಂಬ ಶ್ರುತಿಯು ಪರಬ್ರಹ್ಮನಿಗೇ ಸರ್ವಕರ್ತೃತ್ವವನ್ನು ಹೇಳುತ್ತದೆ. ವಿರಿಂಚಾದಿಗಳು ಅವಾಂತರ ಸೃಷ್ಟಿಕರ್ತರಷ್ಟೆ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವನ್ನು ಹೇಳುವ ಶ್ರುತಿಗಳು ಅಪ್ರಮಾಣವಲ್ಲ.

೧೩. ಮಾಂಸಾಧಿಕರಣ (ವಿಮಿಶ್ರಿತಾ ಎಂಬ ಯುಕ್ತಿ)

ಪೂರ್ವಪಕ್ಷ – 'ನೀರಿನಿಂದಲೇ ಈ ದೇಹ ಹುಟ್ಟುತ್ತದೆ, ನೀರಿನಿಂದಲೇ ಈ ಮಾಂಸ ಹುಟ್ಟುತ್ತದೆ' (ಅದ್ಭ್ಯೋ ಹೀದಮುತ್ಪದ್ಯತೇ, ಆಪೋ ವಾ ಮಾಂಸಂ) ಎಂದು ಒಂದು ಶ್ರುತಿಯು ಹೇಳಿದರೆ, 'ಪೃಥಿವೀಮಯವಾದುದು ಶರೀರ' (ಪೃಥಿವೀ ಶರೀರಂ) ಎಂದು ಇನ್ನೊಂದು ಶ್ರುತಿಯ ಹೇಳುತ್ತದೆ. 'ಅಗ್ನಿಗೆ ಹಾಕಿದ ಆಹುತಿಗಳಿಂದ ಹುಟ್ಟಿದ ಹಿರಣ್ಯಮಯವಾದ ಶರೀರ' (ಸೋಽಗ್ನೇರ್ದೇವ ಯೋಽನ್ಯಾ ಆಹುತಿಭ್ಯಃ ಸಂಭೂಯ ಹಿರಣ್ಯಶರೀರ) ಎಂದು ಮತ್ತೊಂದು ಶ್ರುತಿಯು ಹೇಳುತ್ತದೆ. 'ಪೃಥಿವೀ ಅಪ್ ತೇಜಸ್ಸು ಎಂಬ ಮೂರು ದೇವತೆಗಳು ಈ ಪುರುಷನನ್ನು ಆಶ್ರಯಿಸಿದ್ದಾರೆ' (ಇಮಾಸ್ತಿಸ್ರೋ ದೇವತಾಃ ಪುರುಷಂ ಪ್ರಾಪ್ಯ) ಎಂದು ಮತ್ತೊಂದು ಶ್ರುತಿಯು ಹೇಳುತ್ತದೆ. ಹೀಗೆ ಮೂರು ಭೂತಗಳ ಮಿಶ್ರಣದಿಂದ ಶರೀರದ ಉತ್ಪತ್ತಿಯನ್ನು ಹೇಳುವ ಶ್ರುತಿಗಳು ಪರಸ್ಪರ ವಿರೋಧವಾದುದರಿಂದ ಅಪ್ರಾಮಾಣ್ಯವು. ಆದ್ದರಿಂದ ವಿಷ್ಣುವು ಜದಗತ್ಕಾರಣನಲ್ಲ.

ಸಿದ್ಧಾಂತ – ಈ ದೇಹವು ಪೃಥಿವೀ ಮುಂತಾದ ಭೂತಗಳ ಮಿಶ್ರಣದಿಂದ ಉತ್ಪತ್ತಿಯಾಗಿದ್ದರೂ, ಅದರಲ್ಲಿ ವಿಶೇಷವಿರುವುದರಿಂದ, 'ಇದು ಪೃಥಿವೀಮಯ' ಇತ್ಯಾದಿ ವಿಭಿನ್ನವಾಗಿ ಪ್ರತಿಪಾದಿಸುವ ಶ್ರುತಿಗಳಿಗೆ ವಿರೋಧ ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೆ ಜಗತ್ಕಾರಣತ್ವವನ್ನು ಪ್ರತಿಪಾದಿಸುವ ಶ್ರುತಿಗಳು ಪ್ರಮಾಣವೇ.

• ಈ ಪ್ರಕಾರವಾಗಿ ಎರಡನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಶ್ರುತಿಗಳಿಗೆ ನ್ಯಾಯೋಪೇತ ಶ್ರುತಿಗಳ ವಿರೋಧವಿಲ್ಲವೆಂದು ಸಮರ್ಥನೆ ಮಾಡಲಾಗಿದೆ. ಆದ್ದರಿಂದ ವೇದಗಳಲ್ಲಿ ಉಕ್ತವಾಗಿರುವ ವಿಷ್ಣುವಿನ ಸಕಲಗುಣಪೂರ್ಣತ್ವ ಹಾಗೂ ಅಶೇಷದೋಷರಾಹಿತ್ಯಗಳಿಗೆ ಯಾವುದೇ ರೀತಿಯಲ್ಲಿ ವಿರೋಧವಿಲ್ಲವಾದ್ದರಿಂದ ಪರಮಪುರುಷಾರ್ಥವಾದ ಮೋಕ್ಷವನ್ನು ಅನುಗ್ರಹಿಸುವ ಭಗವಾನ್ ವಿಷ್ಣುವನ್ನು ಎಲ್ಲ ಅಧಿಕಾರಿಗಳೂ ಅವಶ್ಯವಾಗಿ ಜಿಜ್ಞಾಸೆ ಮಾಡತಕ್ಕದ್ದು ಎಂಬುದಾಗಿ ಈ ಅನುವ್ಯಾಖ್ಯಾನದ ಎರಡನೆಯ ಅಧ್ಯಾಯದಿಂದ ನಿರ್ಣೀತವಾಗುವುದು.

।। ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ

ಶ್ರೀಮದನುವ್ಯಾಖ್ಯಾನೇ ದ್ವಿತೀಯಾಧ್ಯಾಯಸ್ಯ ಚತುರ್ಥಃ ಪಾದಃ ಸಂಪೂರ್ಣಃ ।।

।। ಸಮಾಪ್ತೋಽಯಮಧ್ಯಾಯಃ ।।

*

।। ಇಲ್ಲಿಗೆ ಶ್ರೀಮದನಾಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ನಾಲ್ಕನೆಯ ಪಾದದ ಕನ್ನಡ ಅನುವಾದವು ಮುಗಿದುದು ।।

*

।। ಇಲ್ಲಿಗೆ ಅಂಗಾರಕುಲೋತ್ಪನ್ನ ಶ್ರೀನಿವಾಸಮೂರ್ತಿಯ ಸುಪುತ್ರ ವೆಂಕಟೇಶಮೂರ್ತಿಯಿಂದ ಶ್ರೀಮನ್ನ್ಯಾಯಸುಧಾ ಟೀಕಾನುಸಾರಿ ವಿವರಣೆ ಸಹಿತ ರಚಿತವಾದ ಶ್ರೀಮದನುವ್ಯಾಖ್ಯಾನದ ಎರಡನೆಯ ಅಧ್ಯಾಯದ ಕನ್ನಡಾನುವಾದವು ಮುಕ್ತಾಯವಾಯಿತು ।।

।। ಶ್ರೀಕೃಷ್ಣಾರ್ಪಣಮಸ್ತು ।।

* * *

ನಮ್ಮ ಇತ್ತೀಚಿನ ಪ್ರಕಟಣೆಗಳು

೧. ಶ್ರೀಮದನುವ್ಯಾಖ್ಯಾನಮ್ : ಸಂಪುಟ ೧

ಮೊದಲನೆಯ ಅಧ್ಯಾಯ

ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾನುಸಾರಿ

ಕನ್ನಡಾನುವಾದ ವಿವರಣೆ ಸಹಿತ ಮೊದಲನೆಯ ಅಧ್ಯಾಯದ ಪೂರ್ಣಪಾಠ

ಪ್ರಥಮ ಮುದ್ರಣ: ೨೦೦೨ ಬೆಲೆ: ರೂ. ೬೦/-

೨. ಗಾಯತ್ರೀ ಸಾರಸರ್ವಸ್ವ

ಗಾಯತ್ರೀ ಮಹಿಮೆ, ಸ್ವರೂಪ, ಮಂತ್ರಾರ್ಥ, ಜಪಕ್ರಮ
ಹಾಗೂ ಗಾಯತ್ರೀ ವಿಸ್ತಾರಗಳ ಬಗ್ಗೆ ಸುಂದರ ಸುಲಲಿತ ನಿರೂಪಣೆ

ಮೂರನೆಯ ಪರಿಷ್ಕೃತ ಮುದ್ರಣ ಬೆಲೆ: ರೂ. ೨೫/-

೩. ವೈಷ್ಣವ ದೇವಪೂಜಾ ಪದ್ಧತಿಃ

ತಂತ್ರಸಾರ ಹಾಗೂ ಪದ್ಯಮಲಾ ಆಧಾರಿತ ಸಂಪೂರ್ಣ ಪೂಜಾ ವಿಧಾನ

ಪೂಜೆಗೆ ಪೂರ್ವದಲ್ಲಿ ಸಾಧಕನು ತಿಳಿದಿರಲೇಬೇಕಾದ ಅಗತ್ಯ ವಿಷಯಗಳು ಪೂಜೆಗೆ ಪೂರ್ವ ಸಿದ್ಧತೆ, ಅವಶ್ಯ ಪೂಜಾ ಸಾಮಗ್ರಿಗಳ ಮಾಹಿತಿ, ಪೂಜಾ ಸಮಯದಲ್ಲಿ ಹೇಳಲೇಬೇಕಾದ ಎಲ್ಲ ಮಂತ್ರಗಳ ಹಾಗೂ ಸೂಕ್ತಗಳ ಪೂರ್ಣಪಾಠ, ವೈಶ್ವದೇವ ಬಲಿಹರಣ ಹಾಗೂ ಬ್ರಹ್ಮಯಜ್ಞಗಳ ವಿಧಾನ ಇತ್ಯಾದಿ ಅನೇಕ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿರುವ ಅಪೂರ್ವ ಗ್ರಂಥ

ಸಂಪೂರ್ಣ ಪರಿಷ್ಕೃತ ದ್ವಿತೀಯ ಮುದ್ರಣ ಬೆಲೆ: ರೂ. ೨೫/-

ಮೇಲಿನ ಎಲ್ಲ ಪುಸ್ತಕಗಳ ಲೇಖಕರು ಹಾಗೂ ಸಂಪಾದಕರು


ಪ್ರೊ || ಎಸ್. ವೆಂಕಟೇಶ ಮೂರ್ತಿ

ಪುಸ್ತಕಗಳ ಪ್ರಾಪ್ತಿ ಸ್ಥಾನ

೧. ಪವನಜ ಪ್ರಕಾಶನ, ನಂ. ೧೬೨೫, ೫ನೇ ಬಿ ಕ್ರಾಸ್, ಎರಡನೆಯ ಬ್ಲಾಕ್, ಬನಶಂಕರಿ ಮೊದಲನೆಯ ಸ್ಟೇಜ್, ಬೆಂಗಳೂರು – ೫೬೦೦೫೦

೨. ಪುಸ್ತಕ ಮಾರಾಟ ಮಳಿಗೆ, ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪೆ ರಸ್ತೆ, ಬೆಂಗಳೂರು – ೫೬೦೦೨೮

ಮಿಥ್ಯಾಸಿದ್ಧಾಂತದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ।
ಜಯತೀರ್ಥಾಖ್ಯ ತರಣಿರ್ಭಾಸತಾಂ ನೋ ಹೃದಂಬರೇ ॥



ಶ್ರೀ ಜಯತೀರ್ಥರು

ಪ್ರಕಾಶಕರು :

ಪವನಜ ಪ್ರಕಾಶನ

ನಂ. 1625, 5ನೇ 'ಬಿ' ಕ್ರಾಸ್, ಎರಡನೆಯ ಬ್ಲಾಕ್
ಬನಶಂಕರಿ 1ನೇ ಸ್ಟೇಜ್, ಬೆಂಗಳೂರು-560 050
ದೂರವಾಣಿ : 6600932